ಶ್ರೀಮದ್ವಾಲ್ಮೀಕಿರಾಮಾಯಣ

ಭಾರತ ದರ್ಶನ ಪ್ರಕಾಶನ

ಶ್ರೀರಾಮಃ ಶ್ರೀರಾಮಃ ಶ್ರೀರಾಮಃ ಶ್ರೀರಾಮಃ ಶ್ರೀರಾಮಃ ಶ್ರೀರಾಮಃ ಶ್ರೀರಾಮಃ ಶ್ರೀರಾಮಃ ಶ್ರೀರಾಮಃ ಶ್ರೀರಾಮಃ ಶ್ರೀರಾಮಃ ಶ್ರೀರಾಮಃ

ಶ್ರೀ ರಾ ಮಃ ಶ ರ ಣಂ ಮ ಮ

ಶ್ರೀ ರಾ ಮಃ ಶ ರ ಣಂ ಮ ಮ

ಯುದ್ಧ ಕಾಂಡ

ತಪಃಸ್ವಾಧ್ಯಾಯನಿರತಂ ತಪಸ್ವೀ ವಾಗ್ವಿದಾಂ ವರಮ್।
ನಾರದಂ ಪರಿಪಪ್ರಚ್ಛ ವಾಲ್ಮೀಕಿರ್ಮುನಿಪುಙ್ಗವಮ್॥

ಸಂಪುಟ ೮

ಭಾರತ ದರ್ಶನ ಪ್ರಕಾಶನ

ಶ್ರೀಮದ್ವಾಲ್ಮೀಕಿರಾಮಾಯಣ

ವಾಲ್ಮೀಕಿಗಿರಿಸಂಭೂತಾ
ರಾಮಸಾಗರಗಾಮಿನೀ ।
ಪುನಾತು ಭುವನಂ ಪುಣ್ಯಾ
ರಾಮಾಯಣಮಹಾನದೀ ॥

ಸಂಪುಟ 9

ಮುದ್ರಕರು:
ಭಾರತ ದರ್ಶನ ಮುದ್ರಣಾಲಯ
163, ಮಂಜುನಾಥ ರಸ್ತೆ, 2ನೇ ಬ್ಲಾಕ್, ತ್ಯಾಗರಾಜನಗರ,
ಬೆಂಗಳೂರು - 560 028
ದೂರವಾಣಿ: **080-26765381**

ಪ್ರಥಮ ಇ-ಮುದ್ರಣ ಜನವರಿ ೨೦೧೪

ಆದಿ ಅಧ್ಯಕ್ಷರು:

ಪರಮಪೂಜ್ಯ ಶ್ರೀ ಶ್ರೀ
ರಂಗಪ್ರಿಯಮಹಾದೇಶಿಕಸ್ವಾಮಿಗಳವರು

ಆದಿ ವ್ಯವಸ್ಥಾಪಕ ಸಂಪಾದಕರು:

ದಿ|| ಕೆ.ಎಸ್. ಕೌಶಿಕ್ ('ವಿಶ್ವಾಮಿತ್ರ')

ಆದಿ ಸಂಪಾದಕರು:

ದಿ|| ವಿದ್ವಾನ್ ಹೆಚ್.ಎನ್. ರಂಗಸ್ವಾಮೀ

ಆದಿ ಸಂಪಾದಕರು:

ದಿ|| ವಿದ್ವಾನ್ ರಾಮೇಶ್ವರಾವಧಾನೀ

ಸಂಪಾದಕ ಮಂಡಲಿ:

ಶ್ರೀ ಶ್ರೀಹರಿ
ಶ್ರೀ ನೆ.ವೆಂ. ಶ್ರೀನಿವಾಸರಾಯ

ಶ್ರೀ ವಿ. ಸೂರ್ಯನಾರಾಯಣ್,M.A. B.Com., B.L.,
ಕೋಶಾಧ್ಯಕ್ಷರು

ವಿನಮ್ರವಚನಗಳು

ದಯಾಮಯನಾದ ಪರಮಾತ್ಮನ ಕೃಪಾವಿಶೇಷದಿಂದಲೂ, ಗುರು ಭಗವಂತನ ದಿವ್ಯಾಶೀರ್ವಾದಗಳಿಂದಲೂ, ಸತ್ಪುರುಷರ ಸಹಕಾರ-ಸದಾ ಶಯಗಳಿಂದಲೂ ಹೊರಬಂದಿರುವ ಶ್ರೀಮದ್ವಾಲ್ಮೀಕಿರಾಮಾಯಣದ ಒಂಬತ್ತನೆಯ ಪುಷ್ಪವನ್ನು ಸೀತಾ-ರಾಮರ ದಿವ್ಯಪಾದಾರವಿಂದಗಳಲ್ಲಿ ಸಮರ್ಪಿಸಿ ಪ್ರಸಾದರೂಪವಾದ ಈ ದಿವ್ಯಕುಸುಮವನ್ನು ತಮ್ಮೆಲ್ಲರ ಅಂಜಲಿ ಪುಟಗಳಲ್ಲಿಡುತ್ತಿದ್ದೇವೆ.

ಇಂದಿನ ಹಣದ ಬಿಕ್ಕಟ್ಟಿನಲ್ಲಿ ಶ್ರೀರಾಮಪಟ್ಟಾಭಿಷೇಕದ ಈ ಒಂಬತ್ತ ನೆಯ ಸಂಪುಟವು ಹೊರಬರುತ್ತದೆಂಬ ವಿಶ್ವಾಸವೇ ನಮಗಿರಲಿಲ್ಲ. ಏಕೆಂದರೆ : ಹತ್ತು ಸಾವಿರ ಪ್ರತಿಗಳ ಒಂದು ರಾಮಾಯಣಸಂಪುಟವನ್ನು ಹೊರತರಬೇಕಾದರೆ ಇಂದಿನ ಅನಿರೀಕ್ಷಿತವಾದ ಕಾಗದ ಮತ್ತು ಇತರ ವಸ್ತು ಗಳ ಬೆಲೆಯಲ್ಲಿ ಕಡೆಯ ಪಕ್ಷ ಒಂದೂವರೆ ಲಕ್ಷ ರೂಪಾಯಿಗಳಾದರೂ ಸಂಗ್ರಹವಾಗಬೇಕು. ಅದೂ ವೇಳಾಪಟ್ಟಿಯಂತೆ ಎರಡು ಭಾರತಸಂಪುಟಗಳ ಪುನರ್ಮುದ್ರಣವನ್ನು ಮುಗಿಸಿ ರಾಮಾಯಣದ ಮುದ್ರಣವನ್ನು ಪ್ರಾರಂಭಿಸ ಲಾಯಿತು. ಆದರೆ ಕಾಣದ ಕೈ ಸಾಲದ ಮೂಲಕವಾಗಿ 9ನೆಯ ಸಂಪುಟಕ್ಕೆ ಬೇಕಾದ ಹಣವನ್ನು ಒದಗಿಸಿಕೊಟ್ಟಿತು. ಎಲ್ಲವೂ ಅನಿರೀಕ್ಷಿತ. ಅಸಂಭಾವ್ಯ. ಹೀಗೆ ದಯಾಮಯನಾದ ಪರಮಾತ್ಮನು ತನ್ನ ಪವಾಡವನ್ನು ಅಡಿಗಡಿಗೂ ತೋರಿಸುತ್ತಾ ಅವನಿಗೆ ಸಮರ್ಪಿತವಾಗುವ ಈ ಮಹಾಕಾರ್ಯವನ್ನು ಆಗು ಮಾಡಿಸುತ್ತಿದ್ದಾನೆ. ನಿರ್ಭರವಾದ ವಿಶ್ವಾಸವಿಡಬೇಕು. ಶ್ರದ್ಧಾ-ಭಕ್ತಿ-ವಿಶ್ವಾಸ ಗಳಿಂದ ಅವನ ಪಾದಾರವಿಂದಗಳನ್ನು ಭದ್ರವಾಗಿ ಹಿಡಿದರೆ ಅಪಾರವಾದ ಕಷ್ಟ-ಕೋಟಲೆಗಳಿಂದಲೂ ಪಾರುಮಾಡುತ್ತಾನೆ. ಇದು ಇತ್ತೀಚಿನ ನಮ್ಮ ಅನುಭವವಾಗಿದೆ. ಭಗವಂತನ ದಿವ್ಯಲೀಲೆಗಳನ್ನು ಪ್ರಚುರಗೊಳಿಸಲು ಒಂಬತ್ತು ದಿವಸಗಳ ಶ್ರೀಮದ್ವಾಲ್ಮೀಕಿರಾಮಾಯಣದ ಪ್ರವಚನವನ್ನು ಏರ್ಪ ಡಿಸಲಾಗಿದೆ. ನಮ್ಮ ಪ್ರಕಾಶನದ ಅಧ್ಯಕ್ಷರಾದ ಪರಮಪೂಜ್ಯ ಶ್ರೀ ಶ್ರೀ ರಂಗ ಪ್ರಿಯಸ್ವಾಮಿಗಳವರೇ ಪ್ರವಚನಕಾರರು. ಅಂತೆಯೇ ಪಟ್ಟಾಭಿಷೇಕವನ್ನೂ ವಿಧ್ಯುಕ್ತವಾಗಿ ಆಚರಿಸಲು ಏರ್ಪಡಿಸಲಾಗಿದೆ. ವಿನಮ್ರವಚನಗಳನ್ನು ಕಾರ್ಯಕ್ರಮಕ್ಕೆ ಮೊದಲು ಬರೆಯುತ್ತಿರುವುದರಿಂದ ಇದರ ಪೂರ್ಣ ವಿವರಣೆಯನ್ನು ಮುಂದಿನ ಸಂಪುಟದಲ್ಲಿ ಕೊಡಲಾಗುವುದು.

ಮಹಾಭಾರತದ 13 ಮತ್ತು 14ನೇ ಸಂಪುಟಗಳನ್ನು ಪುನರ್ಮುದ್ರಣ

ಮಾಡಲಾಗಿದೆ. ಆದರೆ ಈಗಲೂ ಗ್ರಾಹಕರಿಗೆ ಲಭಿಸುವುದು ಹದಿನೈದೇ ಸಂಪುಟಗಳು : 4ರಿಂದ 14ರ ವರೆಗೆ ; 21ರಿಂದ 24ರ ವರೆಗೆ. ಮುಂದಿನ ಒಂದು ವರ್ಷದವರೆಗೆ ಈಗಿರುವ ಸಂಪುಟಗಳಲ್ಲಿ ಯಾವುದೂ ಮುಗಿದು ಹೋಗದೇ ಇರುವುದರಿಂದ ಗ್ರಾಹಕರಿಗೆ ಸಿಕ್ಕುವ ಸಂಪುಟಗಳು ದಿನಕಳೆದಂತೆ ಹೆಚ್ಚುತ್ತಾ ಹೋಗುವ ನಿರೀಕ್ಷೆಯಿದೆ. ಈಗಿನ ಬೆಲೆ ಪೂರ್ಣಮಾಲೆ ಸಾಧಾರಣ ಪ್ರತಿ 420/- ರೂ.ಗಳು. ಕ್ಯಾಲಿಕೋ ಪ್ರತಿ 520/- ರೂ.ಗಳು. ಸದಸ್ಯ ಚಂದಾ ಸೇರಿ ಇರುತ್ತದೆ ; ಎಂದರೆ ಸಾಧಾರಣ ಪ್ರತಿ 12-50 ರೂ. ಗಳು. ಕ್ಯಾಲಿಕೋ ಪ್ರತಿ 15-75 ರೂ.ಗಳು. ಉತ್ಪಾದನಾಬೆಲೆಗಿಂತಲೂ ಬಹಳ ಕಡಿಮೆ. ಆದುದರಿಂದ ಈ ಬೆಲೆಯನ್ನು ಹೆಚ್ಚಿಸುವುದು ಅನಿವಾರ್ಯವಾಗಿದೆ. 1-1-1990ರಿಂದ ಸ್ವಲ್ಪ ಹೆಚ್ಚಿಸಬೇಕೆಂದು ನಿಶ್ಚಯಿಸಲಾಗಿದೆ. ನಮ್ಮ ಗೌ|| ಪ್ರತಿನಿಧಿಗಳು ಸಹಕರಿಸಬೇಕಾಗಿ ವಿನಂತಿಸುತ್ತೇವೆ.

ರಾಮಾಯಣವಿಭಾಗದಲ್ಲಿ 3ನೇ ಸಂಪುಟವು ಮುಗಿದಿದ್ದು 4-5-6ನೇ ಸಂಪುಟಗಳೂ ಮುಗಿಯುವುದರಲ್ಲಿವೆ. ಈ ನಾಲ್ಕು ಸಂಪುಟಗಳನ್ನೂ 8 ಸಾವಿರ ಪ್ರತಿಗಳಂತೆ ಛಾಪಿಸಲಾಗಿತ್ತು. ಒಟ್ಟಾಗಿ ಮುಗಿಯುವುದಕ್ಕೆ ಇದೇ ಕಾರಣ. ಮಹಾಭಾರತದ ಸಂಪುಟಗಳನ್ನು ಅನುಕ್ರಮವಾಗಿ ಪುನರ್ಮುದ್ರಣ ಮಾಡುತ್ತಿರುವಂತೆ ರಾಮಾಯಣದ ಸಂಪುಟಗಳನ್ನೂ ಪುನರ್ಮುದ್ರಣ ಮಾಡಲಾಗುವುದು. ಗ್ರಾಹಕರು ಸಹಕರಿಸಬೇಕಾಗಿ ಪ್ರಾರ್ಥಿಸುತ್ತೇವೆ.

ನಮ್ಮ ಪ್ರಾರ್ಥನೆಯನ್ನು ಮನ್ನಿಸಿ ಅನೇಕರು ಶ್ರೀರಾಮಪಟ್ಟಾಭಿಷೇಕ ಸಮಾರಂಭಕ್ಕೂ ಮತ್ತು ಮುದ್ರಣಕ್ಕೂ ಕಾಣಿಕೆಗಳನ್ನು ಕಳುಹಿಸಿರು ವರು. ಕಾಣಿಕೆಯ ಸಂಗ್ರಹದಲ್ಲಿಯೂ ಹಲವಾರು ಮಂದಿ ಸಹಕರಿಸು ತ್ತಿದ್ದಾರೆ. ಇವರೆಲ್ಲರಿಗೂ ನಮ್ಮ ಹೃತ್ಪೂರ್ವಕವಂದನೆಗಳು.

ದಿನಾಂಕ 1-7-1989 ಶನಿವಾರದಂದು ನಗರದ ಶ್ರೀ ಶಂಕರಮಠ ದಲ್ಲಿ ಶ್ರೀಮದ್ವಾಲ್ಮೀಕಿರಾಮಾಯಣದ ಎಂಟನೆಯ ಸಂಪುಟದ ಪ್ರಕಾಶನ ಮಹೋತ್ಸವವು ಜರುಗಿತು. ವೇದಘೋಷದ ಬಳಿಕ ಕು|| ಉಮಾರವರು ಸ್ವಾಗತಪದ್ಯಮಾಲಿಕೆಯನ್ನು ವಾಚಿಸಿದರು. ಬಳಿಕ ತುಮಕೂರಿನ ಶ್ರೀ ಟಿ. ಎನ್. ಪ್ರಭಾಕರ್‌ರವರು ಎಲ್ಲರನ್ನೂ ಸ್ವಾಗತಿಸಿ ಭಾರತ ದರ್ಶನ

ಪ್ರಕಾಶನದ ಕನ್ನಡಭಾಷಾಸೇವೆಯನ್ನು ಪರಿಚಯಿಸಿದರು. ನ್ಯಾಯಮೂರ್ತಿ ಶ್ರೀ ಎಂ. ರಾಮಾಜೋಯಿಸ್‌ರವರು ಶ್ರೀ ರಾಮಾಯಣಸಂಪುಟದ ಕರಂಡಕಕ್ಕೆ ಪೂಜೆ ಸಲ್ಲಿಸಿ ಸಂಪುಟವನ್ನು ಪ್ರಕಾಶನಗೊಳಿಸಿದರು. ಸಂಪುಟದಿಂದ ಆಯ್ದ ಶ್ಲೋಕಗಳನ್ನು ಶ್ರೀಮತೀ ವತ್ಸಲಾ ಮತ್ತು ಶ್ರೀಮತೀ ಶಾಂತಾರವರು ವಾಚಿಸಿದರು. ಅನಂತರ ವಿದ್ವಾನ್ ಹೆಚ್. ಎಸ್. ವರದದೇಶಿಕಾಚಾರ್ಯ ರಂಗಪ್ರಿಯರವರು ಸಂಪುಟವನ್ನು ಪರಿಚಯಿಸುತ್ತಾ “ಯುದ್ಧಕಾಂಡದಲ್ಲಿ ಸಾಮ, ದಾನ, ಭೇದ ಮತ್ತು ದಂಡ–ಎಂಬ ನಾಲ್ಕು ಉಪಾಯಗಳನ್ನೂ ಕ್ರಮವಾಗಿ ಶತ್ರುವಿನ ಮೇಲೆ ಶ್ರೀರಾಮನು ಬಳಸಿದ್ದಾನೆ. ವಿಭೀಷಣನು ರಾಕ್ಷಸವಂಶದಲ್ಲಿ ಹುಟ್ಟಿದ್ದರೂ ಸತ್ತ್ವಗುಣಪ್ರಧಾನನಾಗಿ ಶ್ರೀರಾಮನನ್ನು ಆಶ್ರಯಿಸುತ್ತಾನೆ. ಆಶ್ರಯಪಡೆದವರನ್ನು ರಕ್ಷಿಸುವುದು ಶ್ರೀರಾಮನ ದೃಢವಾದ ಪ್ರತಿಜ್ಞೆಯಾಗಿದ್ದುದರಿಂದ ವಿಭೀಷಣನನ್ನು ಅವನು ರಕ್ಷಿಸುತ್ತಾನೆ. ಈ ಹಿನ್ನೆಲೆಯಲ್ಲಿ ವಿಭೀಷಣನ ಶರಣಾಗತಿಯು ಈ ಸಂಪುಟದಲ್ಲಿ ನಿರೂಪಿತವಾಗಿದೆ”–ಎಂದು ತಿಳಿಸಿದರು.

ಅಧಿಕಾರಪ್ರಾಪ್ತಿ: ಅಂದು, ಇಂದು

ಅನಂತರ ಮಾತನಾಡಿದ ನ್ಯಾಯಮೂರ್ತಿ ಶ್ರೀ ಎಂ. ರಾಮಾಜೋಯಿಸರು–‘ಇಂದು ಅಧಿಕಾರವನ್ನು ಪಡೆಯಲು ನಾಯಕರು ರಾಗ-ದ್ವೇಷಗಳನ್ನು ಆವಾಹಿಸುತ್ತಿರುವಾಗ ಅಂದು ನ್ಯಾಯಯುತವಾಗಿ ಬಂದ ಅಧಿಕಾರವನ್ನು ಬಿಡುವುದಕ್ಕಾಗಿ ಶ್ರೀರಾಮನು ರಾಗ-ದ್ವೇಷಗಳನ್ನು ದೂರವಿರಿಸಿದನು. ಅಧಿಕಾರಾರೂಢರು ಸ್ವಲ್ಪಮಟ್ಟಿಗೆ ಧರ್ಮದಿಂದ ಚ್ಯುತರಾದರೂ ಜನಸಾಮಾನ್ಯರು ಅದೇ ರೀತಿಯಲ್ಲಿ ಧರ್ಮಭ್ರಷ್ಟರಾಗುತ್ತಾರೆ. ಶ್ರೀರಾಮನು ಯಾವುದೇ ಸಂದರ್ಭದಲ್ಲೂ ಧರ್ಮಭ್ರಷ್ಟನಾಗಲಿಲ್ಲ. ಆದ್ದರಿಂದಲೇ ಪುಟ್ಟ ಅಯೋಧ್ಯೆಯ ಅಧಿಪತಿಯಾಗಿದ್ದರೂ ಅವನಿಂದು ೮೦ಕೋಟಿ ಜನರ ಆರಾಧ್ಯದೈವವಾಗಿದ್ದಾನೆ. ಸ್ವಾತಂತ್ರ್ಯೋತ್ತರ ಭಾರತದಲ್ಲೂ ಶಾಲಾಮಕ್ಕಳಿಗೆ ಇಂತಹ ನಿತ್ಯಸಂದೇಶವನ್ನು ಶಿಕ್ಷಣದಲ್ಲಿ ಅಳವಡಿಸದೇ ಇರುವುದು ಈ ದೇಶದ ದುರ್ದೈವ. ಇಪ್ಪತ್ತು ವರ್ಷಗಳ ಹಿಂದೆ ಚಿಕ್ಕಮಗಳೂರಿನಲ್ಲಿ ಕವಿ ಕುವೆಂಪುರವರ ರಾಮಾಯಣದರ್ಶನಕ್ಕೆ ಆನೆ ಅಂಬಾರಿಯ ಮೆರವಣಿಗೆ ಮಾಡಿಸಲಾಯಿತು. ಮೂಲವನ್ನು ಆಧರಿಸಿ ಹೊರಬಂದ ಕನ್ನಡದ ಕೃತಿಗೇ

ಈ ಮಾನ್ಯತೆಯಾದರೆ ಮೂಲರಾಮಾಯಣಕ್ಕೆ ಇನ್ನೆಂತಹ ವೈಭವದ ಮೆರವಣಿಗೆ ಮಾಡಬೇಕಾದೀತು?'–ಎಂದು ತಿಳಿಸಿದರಲ್ಲದೇ ಭಾರತ ದರ್ಶನವು ತನ್ನ ಹೆಸರಿಗೆ ತಕ್ಕಂತೆ ಭಾರತೀಯಪರಂಪರೆಯ ಪರಿಚಯವನ್ನು ಮಾಡಿಸುತ್ತಿರುವುದರ ಬಗೆಗೆ ಮೆಚ್ಚುಗೆ ಸೂಚಿಸಿದರು.

ಭಾಗವತವೂ ಪ್ರಕಟವಾಗಲಿ

ಅಧ್ಯಕ್ಷತೆ ವಹಿಸಿದ್ದ ಶ್ರೀ ಶೃಂಗೇರಿ ಹಿರಿಯ ಜಗದ್ಗುರುಗಳಾದ ಶ್ರೀ ಶ್ರೀ ಶ್ರೀಮದಭಿನವವಿದ್ಯಾತೀರ್ಥಮಹಾಸ್ವಾಮಿಗಳವರು–'ಭಾರತ ದರ್ಶನ ಮತ್ತು ಅದರ ಕಾರ್ಯಕರ್ತರು ಅಘಟಿತಘಟಕರು. ಹಿಡಿದಿದ್ದನ್ನು ಎಂತಹ ದುಃಸ್ಥಿತಿಯಲ್ಲೂ ಬಿಡದ ಸಾಹಸಿಗರು. ಆದ್ದರಿಂದಲೇ ಅವರು ಮಹಾಭಾರತವನ್ನು ಸಮಸ್ಯೆಗಳ ಮಧ್ಯೆಯೇ 32 ಸುಂದರಸಂಪುಟಗಳಲ್ಲಿ ಪ್ರಕಟಪಡಿಸಿ ಹೊಸ ಇತಿಹಾಸವನ್ನೇ ಸೃಷ್ಟಿಸಿದ್ದಾರೆ. ಈಗ ರಾಮಾಯಣವು ಓದುಗರ ಕೈಸೇರುತ್ತಿದೆ. ಮುಂದೆ ಇದೇ ಸಂಸ್ಥೆಯು ಶ್ರೀಮದ್ಭಾಗವತವನ್ನೂ ಪ್ರಕಟಪಡಿಸಬೇಕು. ಅದಕ್ಕೆ ತಮ್ಮ ಪೂರ್ಣ ಅನುಗ್ರಹವಿದೆ'–ಎಂದೂ ತಿಳಿಸಿದರು.

ಧರ್ಮದ ದರ್ಶನ

'ಧರ್ಮವನ್ನು ಕಣ್ಣಿನಿಂದ ನೋಡಲಾಗುವುದಿಲ್ಲ. ಆದರೆ ರಾಮಾಯಣವನ್ನು ಓದಿದಾಗ ಕಣ್ಣಿನಿಂದ ನೋಡಿದಷ್ಟೇ ತೃಪ್ತಿಯಾಗುತ್ತದೆ. ಶ್ರೀರಾಮನ ಜೀವನವನ್ನು ನಾವು ಪ್ರತಿನಿತ್ಯ ಆಸ್ವಾದಿಸಬೇಕು. ಸಂಸ್ಕೃತ ಭಾಷೆಯ ಪ್ರಾಥಮಿಕ ಕಲಿಕೆಗೆ ರಾಮಾಯಣವೇ ಉತ್ತಮಸಾಧನ. ಇದರ ಅಧ್ಯಯನದಿಂದ ಉತ್ತಮಸಂಸ್ಕಾರವೂ ಮೂಡುತ್ತದೆ. ಸಂಸ್ಕೃತಾಭ್ಯಾಸವೂ ಆಗುತ್ತದೆ'–ಎಂದೂ ತಿಳಿಸಿದರು.

ತೀರ್ಥಹಳ್ಳಿಯ ಶ್ರೀರಾಮಚಂದ್ರಾಪುರಮಠದ ಶ್ರೀ ಶ್ರೀ ರಾಘವೇಂದ್ರ ಭಾರತೀಸ್ವಾಮಿಗಳವರು ಕಳುಹಿಸಿದ್ದ ಸುವರ್ಣಮಂತ್ರಾಕ್ಷತೆಯನ್ನು ಪೂಜ್ಯ ಗುರುಗಳಾದ ಶ್ರೀ ಶ್ರೀಮದಭಿನವ ವಿದ್ಯಾತೀರ್ಥಸ್ವಾಮಿಗಳವರು ಸಂಪಾದಕ ಮಂಡಲಿಯ ವಿದ್ವಾಂಸರಿಗೆ ಅನುಗ್ರಹಿಸಿದರು.

ಶಾಂತಿಪಾಠದೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.

ಎಂದಿನಂತೆ ಸಂಪಾದಕಮಂಡಲಿಯ ವಿದ್ವಾಂಸರು ಶ್ರದ್ಧೆಯಿಂದ ಮಹಾ ಗ್ರಂಥವನ್ನು ಸಕಾಲಕ್ಕೆ ಸಂಪಾದಿಸಿಕೊಡುತ್ತಿದ್ದಾರೆ. ಪ್ರಕಾಶನದ ಅಧ್ಯಕ್ಷರಾದ

ಪರಮಪೂಜ್ಯ ಶ್ರೀ ಶ್ರೀರಂಗಪ್ರಿಯಸ್ವಾಮಿಪಾದಂಗಳವರ ಸೂಕ್ತ ಸಲಹೆ ಗಳನ್ನು ನೀಡುತ್ತಿದ್ದಾರೆ. ಇವರೆಲ್ಲರಿಗೂ ನಮ್ಮ ಹೃತ್ಪೂರ್ವಕವಂದನೆಗಳು.

ಈಗ ಏರ್ಪಡಿಸಿರುವಂತೆ ನವಾಹರಾಮಾಯಣಪ್ರವಚನಕಾರ್ಯ ಕ್ರಮಗಳನ್ನು ನಗರದ ಬೇರೆ ಬೇರೆ ವಿಭಾಗಗಳಲ್ಲಿ ತಿಂಗಳಿಗೆ ಒಂದರಂತೆ ಇಟ್ಟುಕೊಳ್ಳುವ ಯೋಚನೆಯಿದೆ. ಈಗಾಗಲೇ ಹಲವಾರು ಸಂಘ-ಸಂಸ್ಥೆಯ ವರು ಪ್ರವಚನವನ್ನು ವ್ಯವಸ್ಥೆಗೊಳಿಸಲು ಮುಂದೆ ಬಂದಿರುವುದು ಆಶಾ ದಾಯಕವಾಗಿದೆ. ಪರಮಾತ್ಮನ ದಯೆಯಿಂದ ಇದೂ ಕಾರ್ಯಗತವಾಗ ಬಹುದೆಂಬ ಭರವಸೆಯಿದೆ.

ಮುಂದಿನ ಪ್ರಕಟಣೆ ಯಾವುದೆಂದು ನೂರಾರು ಮಂದಿ ಹಿತೈಷಿಗಳು ಪತ್ರಗಳನ್ನು ಬರೆಯುತ್ತಿದ್ದಾರೆ ಮತ್ತು ಕೇಳುತ್ತಿದ್ದಾರೆ. ಚಿತ್ರಪಾಡಿಯ ವೇ॥ ಬ್ರ॥ ಶ್ರೀ ದೀಕ್ಷಿತಯಜ್ಞನಾರಾಯಣ ಸೋಮಯಾಜಿಗಳು ಭಾಗವತದ ಪ್ರಕಟಣೆಗೆಂದು 3 ಸಾವಿರ ರೂ.ಗಳನ್ನೂ ರಾಮಾಯಣ-ಮಹಾಭಾರತ ಪ್ರಕಟಣೆಗೆಂದು 2 ಸಾವಿರ ರೂ.ಗಳನ್ನೂ ಆಶೀರ್ವಾದಪೂರ್ವಕವಾಗಿ ಕಳುಹಿ ಸಿದ್ದಾರೆ. ಸಾವಿರಾರು ಗ್ರಾಹಕರ ಅಪೇಕ್ಷೆಯೂ ಮುಂದೆ ಭಾಗವತವನ್ನು ಪ್ರಕಟಿಸಬೇಕೆಂಬುದೇ ಆಗಿದೆ. ವೇದಪುರುಷರ ಆಶೀರ್ವಾದ, ಗ್ರಾಹಕರ ಬಯಕೆ ಫಲಿಸಲಿ. ದಯಾಮಯನಾದ ಪರಮಾತ್ಮನು ಸಾಮರ್ಥ್ಯವನ್ನು ದಯಪಾಲಿಸಲಿ. ಗುರುದೇವನ ಅನುಗ್ರಹ ಮತ್ತು ದಯಾಮಯನಾದ ಪರಮಾತ್ಮನ ಇಚ್ಛೆಯಿದ್ದಲ್ಲಿ ಶ್ರೀಮದ್ವಾಲ್ಮೀಕಿರಾಮಾಯಣದಲ್ಲಿ ಉಳಿದಿರುವ ಎರಡು ಸಂಪುಟಗಳ ಪ್ರಕಟಣೆಯು ಮುಗಿದನಂತರ ಶ್ರೀಮದ್ಭಾಗವತದ ಪ್ರಕಟಣೆಯನ್ನು ಪ್ರಾರಂಭಿಸಲಾಗುವುದು.

ಈ ಸಂಪುಟಕ್ಕೆ ನಮ್ಮ ಹಿತೈಷಿಗಳಾದ ಡಾ॥ ಎನ್. ಎಸ್. ಅನಂತ ರಂಗಾಚಾರ್ಯರು ಮುನ್ನುಡಿಯನ್ನು ಬರೆದುಕೊಟ್ಟು ಉಪಕರಿಸಿರುತ್ತಾರೆ. ಇವರಿಗೆ ನಮ್ಮ ಹೃತ್ಪೂರ್ವಕವಂದನೆಗಳು.

ಅಂತರಂಗದಲ್ಲಿ ಮತ್ತು ಬಹಿರಂಗದಲ್ಲಿ ಈ ಸಂಸ್ಥೆಯ ಪಾಲನೆ-ಪೋಷಣೆಗಳಿಗಾಗಿ ಶ್ರಮಿಸುತ್ತಿರುವ ಸಮಸ್ತಸಜ್ಜನರಿಗೂ ದಯಾಮಯನಾದ ಪರಮಾತ್ಮನು ಆಯುರಾರೋಗ್ಯ-ಐಶ್ವರ್ಯಾದಿಗಳನ್ನೂ ಮತ್ತು ದಿವ್ಯಜ್ಞಾನ ವನ್ನೂ ಅನುಗ್ರಹಿಸಿ ಕಾಪಾಡಲೆಂಬ ಅಂತರಂಗದ ಪ್ರಾರ್ಥನೆಯೊಡನೆ ವಿರಮಿಸುವೆವು.

– ಪ್ರಕಾಶಕರು.

ಮುನ್ನುಡಿ

'ಆದಿಕಾವ್ಯಮಿದಂ ಪ್ರೋಕ್ತಂ ಪುರಾ ವಾಲ್ಮೀಕಿನಾ ಕೃತಂ' ಎಂದು ವಿಶ್ವವಿಖ್ಯಾತವಾಗಿರುವ ಶ್ರೀಮದ್ರಾಮಾಯಣ ತನ್ನದೇ ಆದ ಮಹತ್ತ್ವವನ್ನು ಹೊಂದಿ ಭಾರತೀಯರ ಜೀವನಧ್ಯೇಯಗಳನ್ನು ಬೆಳಗಿಸುವ ಚಿರಂತನವಾದ ದಿವ್ಯಜ್ಯೋತಿ ಆಗಿದೆ. ಪುರಾತನವಾದಂತೆ ಇದು ನಿತ್ಯ ನೂತನವೂ ಆಗಿ ತ್ರಿಕಾಲಾಬಾಧಿತವಾದ ಸತ್ಯವನ್ನು ಉಜ್ವಲವಾಗಿ ಪ್ರತಿಪಾದಿಸುವುದಾಗಿದೆ. ಒಂದು ಮಹತ್ಕೃತಿಗೆ ಇರುವ ಕರ್ತೃವೈಲಕ್ಷಣ್ಯ, ವಿಷಯವೈಲಕ್ಷಣ್ಯ ಮತ್ತು ಪ್ರಬಂಧವೈಲಕ್ಷಣ್ಯವನ್ನು ಇದು ಹೊಂದಿ ಶೋಭಿಸುತ್ತಿದೆ.

ಈ ಕಾವ್ಯವನ್ನು ಹಾಡಿದ ಕವಿ ವಾಲ್ಮೀಕಿಮಹರ್ಷಿಗಳು. ಮುನಿಪುಂಗವರು. ತಪಸ್ಸಿನಿಂದಲೂ ಅಧ್ಯಯನಾದಿಗಳಿಂದಲೂ ಸುಶೋಭಿತರು. ನಾರದ ಮಹರ್ಷಿಗಳ ಮತ್ತು ಬ್ರಹ್ಮದೇವರ ಅನುಗ್ರಹಕ್ಕೆ ಪಾತ್ರರಾದವರು. ಯಥಾರ್ಥದರ್ಶಿಗಳೂ, ಯಥಾರ್ಥವಕ್ತೃಗಳೂ ಆದ ಮಹಾನುಭಾವರು. **'ನ ತೇ ವಾಗನೃತಾ ಕಾವ್ಯೇ ಕಾಚಿದತ್ರ ಭವಿಷ್ಯತಿ'**–ಎಂಬ ಹಿರಿಮೆಯನ್ನುಳ್ಳವರು.

ಈ ಕಾವ್ಯಕ್ಕೆ ವಸ್ತುವೈಲಕ್ಷಣ್ಯವೂ ಇದೆ. ಲೋಕದ ಜನರನ್ನು ಉದ್ಧಾರಮಾಡಲು ತನ್ನ ಸಂಕಲ್ಪಕ್ಕನುಗುಣವಾಗಿ ಅವತರಿಸಿದ ಶ್ರೀರಾಮಚಂದ್ರನ ದಿವ್ಯವಾದ ಚರಿತೆ ಇದು. ನಾರಾಯಣನು ನರನಾಗಿ ಅವತರಿಸಿ ತನ್ನ ದಿವ್ಯಲೀಲೆಗಳನ್ನು ತೋರಿ ಈ ಲೋಕದಲ್ಲಿರುವ ನರರನ್ನು ನಾರಾಯಣ ಸದೃಶರನ್ನಾಗಿ ಮಾಡಲು ನಡೆಸಿದ ಪ್ರಯತ್ನವನ್ನು ವರ್ಣಿಸುವ ಕೃತಿ ಇದು. ಇನ್ನೂ–**'ಸೀತಾಯಾಶ್ಚರಿತಂ ಮಹತ್'**–ಎಂದು ಹೇಳಿದಂತೆ ಲೋಕಮಾತೆಯ ದಿವ್ಯಚರಿತೆಯಾಗಿ ಪರಮಪಾವನವೂ ಮಂಗಲಮಯವೂ ಆದುದಿದು.

ಈ ಪ್ರಬಂಧದ ವೈಲಕ್ಷಣ್ಯವೂ ಅನುಪಮವಾದುದು.

'ವೇದವೇದ್ಯೇ ಪರೇ ಪುಂಸಿ ಜಾತೇ ದಶರಥಾತ್ಮಜೇ ।
ವೇದಃ ಪ್ರಾಚೇತಸಾದಾಸೀತ್ ಸಾಕ್ಷಾದ್ರಾಮಾಯಣಾತ್ಮನಾ ॥'

ಎಂದು ಹೇಳಿರುವಂತೆ ವೇದವೇ ಕಾವ್ಯರೂಪದಲ್ಲಿ ಮೈದೋರಿರುವ ದಿವ್ಯಕೃತಿ ಇದು. ಅತ್ಯಂತ ಲಲಿತವೂ ಮಂಜುಳವೂ ಆದ ಶಬ್ದಸಂದರ್ಭ

ದಿಂದ ಕೂಡಿ ಕೇಳುವಾಗಲೇ ಮನಸ್ಸಿಗೆ ಅನಿರ್ವಚನೀಯವಾದ ಆನಂದವನ್ನೂ ಶಾಂತಿಯನ್ನೂ ಅನುಗ್ರಹಿಸುವ ದಿವ್ಯಕಾವ್ಯ. ಶ್ರೀಮನ್ನಿಗಮಾಂತ ಮಹಾದೇಶಿಕರವರು ಈ ಕಾವ್ಯದ ಮನೋಹರವಾದ ಸೌಂದರ್ಯವನ್ನು– 'ಶ್ರೀಮದ್ರಾಮಾಯಣದ ಪದಬಂಧದ ನುಡಿಗಳು ಎಷ್ಟು ಮಂಜುಳವಾಗಿ ಮತ್ತು ಮನೋಹರವಾಗಿವೆ ಎಂದರೆ ಕಮಲಸಂಭವನಾದ ಬ್ರಹ್ಮದೇವನ ಪತ್ನಿಯಾದ ಸರಸ್ವತೀದೇವಿಯ ಕಾಲುಗೆಜ್ಜೆಗಳ ಶಿಂಜಾರವದ ಇಂಪನ್ನು ಸ್ಪರ್ಧೆಯಲ್ಲಿ ಗೆಲ್ಲುವಂತಿವೆ'–

"ಯಸ್ಯಾಸೀದರವಿಂದಸಂಭವವಧೂಮಂಜೀರಶಿಂಜಾರವ–
ಸ್ಪರ್ಧಾದುರ್ಧರಪಾದಬದ್ಧಫಣಿತಿಃ ವಲ್ಮೀಕಜನ್ಮಾ ಕವಿಃ I"

ಎಂದು ವರ್ಣಿಸುತ್ತಾರೆ. ಎಷ್ಟು ಲಲಿತವಾದ ಪದಗಳಿಂದ ರಚಿತವಾಗಿದೆಯೋ ಅಷ್ಟೂ ಗಾಢವಾದ ಭಾವಗಳನ್ನು ಧ್ವನಿಸುತ್ತವೆ. ಶ್ರೀಮದ್ರಾಮಾಯಣದಲ್ಲಿ ಧ್ವನಿತವಾಗಿರುವ ಗೂಢಾರ್ಥಗಳನ್ನು ನಮ್ಮ ಪೂರ್ವಾಚಾರ್ಯರುಗಳು ಅನುಸಂಧಾನ ಮಾಡಿದ್ದಾರೆ. ವಾಚ್ಯಾತಿಶಾಯಿಯಾದ ವ್ಯಂಗ್ಯಾರ್ಥಗಳನ್ನುಳ್ಳ ಈ ಆದಿಕಾವ್ಯ 'ಪಾಠ್ಯೇ ಗೇಯೇ ಚ ಮಧುರಂ' ಆದುದಾಗಿದೆ. ಮುಂದಿನ ಕಾಲದಲ್ಲಿ ಬಂದ ಎಲ್ಲ ಕವಿಗಳಿಗೆ ಸ್ಫೂರ್ತಿಯನ್ನಿತ್ತಿರುವ ಉಪಜೀವ್ಯಗ್ರಂಥ ಇದು. ಇದರ ಮಹಿಮೆಯನ್ನು

'ಇದಂ ಪವಿತ್ರಂ ಪಾಪಘ್ನಂ ಪುಣ್ಯಂ ವೇದೈಶ್ಚ ಸಮ್ಮಿತಮ್ I
ಯಃ ಪಠೇದ್ರಾಮಚರಿತಂ ಸರ್ವಪಾಪೈಃ ಪ್ರಮುಚ್ಯತೇ II'

ಎಂದು ಹೇಳಿ ಈ ಆದಿಕಾವ್ಯ ವೇದಸದೃಶವೆಂದೂ, ವೇದಪ್ರತಿಪಾದ್ಯವಾದ ವಿಷಯವನ್ನು ವರ್ಣಿಸುವುದೆಂದೂ ತಿಳಿಸಿಕೊಟ್ಟಿದ್ದಾರೆ.

ಇಂಥ ವೈಶಿಷ್ಟ್ಯವನ್ನು ಹೊಂದಿರುವ ಶ್ರೀಮದ್ವಾಲ್ಮೀಕಿರಾಮಾಯಣದ ಕನ್ನಡಾನುವಾದದ ಪ್ರಕಟಣೆಯ ಯೋಜನೆಯನ್ನು ಭಾರತ ದರ್ಶನ ಪ್ರಕಾಶನ ಕೈಗೆತ್ತಿಕೊಂಡುದು ಕನ್ನಡಿಗರೆಲ್ಲರ ಸೌಭಾಗ್ಯ. ಶ್ರೀಮನ್ಮಹಾಭಾರತವನ್ನು ಸಮಗ್ರವಾಗಿ ಕನ್ನಡದಲ್ಲಿ ಪ್ರಕಟಿಸಿ ಕನ್ನಡ ಜನತೆಯ ಕೃತಜ್ಞತೆಗೆ ಪಾತ್ರವಾದ ಈ ಮಹಾಸಂಸ್ಥೆ ರಾಮಾಯಣದ ಪ್ರಕಾಶನವನ್ನು ಅದೇ ರೀತಿಯಲ್ಲಿ ನಿಯತವಾದ ಕಾಲದಲ್ಲಿ ಹೊರತರುತ್ತಿರುವುದು ಬಹಳ ಸಂತೋಷಕರವಾದ ಸಂಗತಿ. ಶ್ರೀಮದ್ರಾಮಾಯಣದ ಮೂಲಪಾಠವನ್ನು ಮೊದಲು

ಕೊಟ್ಟು ಅನಂತರ ಕನ್ನಡಾನುವಾದವನ್ನು ಮುಖ್ಯವಾದ ಶ್ಲೋಕಗಳೊಡನೆ ಕೊಡುತ್ತಿರುವುದು ಶ್ರೀಮದ್ರಾಮಾಯಣದ ಪಾರಾಯಣಕ್ಕೂ ಮತ್ತು ಅದರ ಅರ್ಥಾನುಸಂಧಾನಕ್ಕೂ ಬಹಳ ಉಪಕಾರವಾಗಿದೆ. ಅನುವಾದ ಸರಳ ವಾಗಿಯೂ, ಮೂಲದ ಅಭಿಪ್ರಾಯವನ್ನು ಸುಸ್ಪಷ್ಟವಾಗಿ ನಿರೂಪಿಸುವು ದಾಗಿಯೂ ಇದೆ. ಪರಿಶಿಷ್ಟದಲ್ಲಿ ರಾಮಾಯಣದಲ್ಲಿ ಬರುವ ಕೆಲವು ಸಂದಿಗ್ಧ ವಿಚಾರಗಳ ವಿವೇಚನೆ ಹಾಗೂ ಸಮಂಜಸವಾದ ಸಮನ್ವಯ ಇದೆ. ಸರ್ವಾಂಗಸುಂದರವಾಗಿ ಪ್ರಕಟವಾಗುತ್ತಿರುವ ಈ ಸಂಪುಟಗಳು ಸಂಪಾದಕ ಮಂಡಲಿಯ ವೈದುಷ್ಯ, ಶ್ರದ್ಧೆ ಮತ್ತು ಪರಿಶ್ರಮಗಳನ್ನು ತೋರಿಸುತ್ತವೆ.

ಪ್ರಕೃತಸಂಪುಟ ಈ ಮಾಲೆಯಲ್ಲಿ ಒಂಬತ್ತನೆಯ ಸಂಪುಟವಾಗಿ ಯುದ್ಧಕಾಂಡದ ಎಪ್ಪತ್ತಮೂರನೆಯ ಸರ್ಗದಿಂದ ಆರಂಭವಾಗಿ ಶ್ರೀರಾಮ ಪಟ್ಟಾಭಿಷೇಕದ ಸರ್ಗದೊಡನೆ ಪೂರ್ಣವಾಗುತ್ತದೆ. ಇಲ್ಲಿ ಬರುವ ಯುದ್ಧದ ವರ್ಣನೆಗಳು ನಮ್ಮನ್ನು ಬೆರಗುಗೊಳಿಸುತ್ತವೆ. ಇಂದ್ರಜಿತುವು ಮಾಯಾ ಸೀತೆಯನ್ನು ವಧಿಸಿದಾಗ ಲಕ್ಷ್ಮಣ ನಿರಾಶೆಯನ್ನೇ ತೋರಿ ಉದ್ವೇಗಗೊಂಡು ಧರ್ಮವನ್ನೇ ನಿಂದಿಸುವ ಮಾತನಾಡುತ್ತಾನೆ. ಸಾಮಾನ್ಯವಾಗಿ ಬಹಳ ದುಃಖ ಬಂದಾಗ ಅದನ್ನು ತಡೆದುಕೊಳ್ಳುವುದಕ್ಕಾಗದೇ ಇದ್ದಾಗ ಮನುಷ್ಯನು ಹೇಗೆ ನಡೆದುಕೊಳ್ಳುವನೆಂಬುದನ್ನು ಕವಿ ಇಲ್ಲಿ ತೋರಿಸಿದ್ದಾರೆ. ಇಂದ್ರಜಿತುವನ್ನು ವಧಿಸುವಾಗ ಲಕ್ಷ್ಮಣ :

ಧರ್ಮಾತ್ಮಾ ಸತ್ಯಸಂಧಶ್ಚ ರಾಮೋ ದಾಶರಥಿರ್ಯದಿ ।
ಪೌರುಷೇಚಾಪ್ರತಿದ್ವಂದ್ವಃ ಶರೈನಂ ಜಹಿ ರಾವಣಿಮ್ ॥

ಎಂಬ ಮಂತ್ರದಿಂದಲೇ ಅಭಿಮಂತ್ರಿಸಿ ಬಾಣಪ್ರಯೋಗಮಾಡಿದ. ಮುಂದೆ ರಾಮ-ರಾವಣರ ಯುದ್ಧದ ವರ್ಣನೆ ರೋಮಾಂಚಕಾರಕವಾಗಿದೆ. ಅಗಸ್ತ್ಯರು ಶ್ರೀರಾಮನಿಗೆ ಉಪದೇಶಿಸುವ ಮಹಿಮಾನ್ವಿತವಾದ ಮಂತ್ರ ಶ್ರೀ ಆದಿತ್ಯಹೃದಯದ ವೈಭವ ಇಲ್ಲಿ ಪ್ರತಿಪಾದಿತವಾಗಿದೆ. ಅಪ್ರತಿಮವಾದ ಶ್ರೀರಾಮ-ರಾವಣರ ಯುದ್ಧ, ರಾವಣನವಧೆ, ವಿಭೀಷಣನ ವಿಲಾಪ, ರಾಮನ ಸಮಾಧಾನ–ಇವೆಲ್ಲಾ ಇಲ್ಲಿವೆ.

ವಿಭೀಷಣನು ಪರದಾರಾಭಿಮರ್ಶನ ಮಾಡಿದ ರಾವಣನ ಸಂಸ್ಕಾರ

ವನ್ನು ತಾನು ಮಾಡುವುದಿಲ್ಲವೆಂದು ಹೇಳಿದಾಗ ಶ್ರೀರಾಮ ಹೇಳುವ ಮಾತುಗಳು ಅವನ ಮಹಾಮಹಿತ್ವವನ್ನೂ ದೊಡ್ಡತನವನ್ನೂ ತೋರುತ್ತವೆ.

ಅಧರ್ಮಾನೃತಸಂಯುಕ್ತಃ ಕಾಮಂ ತ್ವೇಷ ನಿಶಾಚರಃ ।
ತೇಜಸ್ವೀ ಬಲವಾನ್ ಶೂರಃ ಸಂಯುಗೇಷು ಚ ನಿತ್ಯಶಃ ।
ಶತಕ್ರತುಮುಖೈರ್ದೇವೈಃ ಶ್ರೂಯತೇ ನ ಪರಾಜಿತಃ ॥

ಮಹಾತ್ಮಾ ಬಲಸಂಪನ್ನೋ ರಾವಣೋ ಲೋಕರಾವಣಃ ।
ಮರಣಾಂತಾನಿ ವೈರಾಣಿ ನಿರ್ವೃತ್ತಂ ನಃ ಪ್ರಯೋಜನಮ್ ॥

ಕ್ರಿಯತಾಮಸ್ಯ ಸಂಸ್ಕಾರಃ ಮಮಾಪ್ಯೇಷ ಯಥಾ ತವ ।"

ಎಂಥ ಮಾತುಗಳು ಇವು! ಶ್ರೀರಾಮನಂತಹ ಮಹೋನ್ನತನಿಗೆ ತಕ್ಕ ಮಾತುಗಳು!

ಹನುಮಂತ ಸೀತೆಗೆ ರಾಮನ ವಿಜಯವಾರ್ತೆಯನ್ನು ತಿಳಿಸಿ–'ದೇವಿ! ನೀನು ಅನುಮತಿಸಿದರೆ ನಿನ್ನನ್ನು ಹಿಂಸಿಸಿದ ಈ ರಾಕ್ಷಸಿಯರನ್ನು ಕೊಂದು ಬಿಡಲಿಚ್ಛಿಸುತ್ತೇನೆ'–ಎಂದು ಹೇಳಿದಾಗ ಯಶಸ್ವಿನಿಯಾದ ಸೀತಾಮಾತೆ ಧರ್ಮಸಂಹಿತವಾದ ಮಾತನ್ನು ಹೇಳುತ್ತಾಳೆ–'ರಾಜನಿಗೆ ವಿಧೇಯರಾಗಿದ್ದ ಆ ದಾಸಿಯರ ಮೇಲೆ ಯಾರು ತಾನೇ ಕೋಪಿಸಬಹುದು? ಇವೆಲ್ಲ ಭಾಗ್ಯ ವೈಷಮ್ಯದಿಂದ ಪ್ರಾಪ್ತವಾದುದು?'–ಎಂದು ಮತ್ತೆ ಮಾತೆ ಹೇಳುತ್ತಾಳೆ–

ಪಾಪಾನಾಂ ವಾ ಶುಭಾನಾಂ ವಾ ವಧಾರ್ಹಾಣಾಂ ಪ್ಲವಂಗಮ ।
ಕಾರ್ಯಂ ಕರುಣಮಾರ್ಯೇಣ ನ ಕಶ್ಚಿನ್ನಾಪರಾಧ್ಯತಿ ॥'

ಎಂಥ ಮಾತುಗಳು ಇವು! ಆ ಮಹಾಸತ್ತ್ವನಿಗೆ ತಕ್ಕ ದೇವಿಯಲ್ಲವೇ ಇವಳು? 'ತಪ್ಪುಮಾಡದವರಾರು?' ಎಂದು ಹೇಳಿರುವುದಂತೂ ಭಾವ ಗರ್ಭಿತವಾಗಿಯೇ ಇದೆ.

ಲೋಕಮಾತೆಯ ಈ ಕಾರುಣ್ಯವನ್ನು ಅನುಸಂಧಾನಮಾಡುತ್ತಾ ಆಚಾರ್ಯ ಪರಾಶರಭಟ್ಟರವರು ತಮ್ಮ ಶ್ರೀಗುಣರತ್ನಕೋಶದಲ್ಲಿ–'ಎಲೌ ತಾಯಿಯೇ! ನಿನ್ನ ವಿಷಯದಲ್ಲಿ ಆಗ ತಾನೇ ತೀವ್ರವಾಗಿ ಅಪರಾಧಮಾಡಿದ ಏಕಾಕ್ಷಿ ಮೊದಲಾದ ರಾಕ್ಷಸಿಯರನ್ನು ಅವರು ನಿನ್ನಲ್ಲಿ ಶರಣಾಗತರಾಗ ದಿದ್ದರೂ ಹನುಮಂತನಿಂದ ಕಾಪಾಡಿದೆ ನೀನು. ಆ ರಾಮನಾದರೋ ತನ್ನಲ್ಲಿ

ಶರಣಾಗತಿಮಾಡಿದ ವಿಭೀಷಣ ಮೊದಲಾದವರನ್ನು ರಕ್ಷಿಸಿದ. ನೀನು ರಾಮನ ಗೋಷ್ಠಿಯನ್ನು ಲಘುತರವನ್ನಾಗಿ ಮಾಡಿಬಿಟ್ಟೆ. ಎಂತಹ ನಿರ್ಹೇತುಕವಾದ ಕ್ಷಮೆ ನಿನ್ನದು!'–ಎಂದು ಸ್ತುತಿಸಿದ್ದಾರೆ.

ಮಾತರ್ಮೈಥಿಲಿ ರಾಕ್ಷಸೀಸ್ತ್ವಯಿ ತದೈವಾರ್ದ್ರಾಪರಾಧಾಸ್ತ್ವಯಾ
ರಕ್ಷಂತ್ಯಾ ಪವನಾತ್ಮಜಾಲ್ಲಘುತರಾ ರಾಮಸ್ಯ ಗೋಷ್ಠೀ ಕೃತಾ ।
ಕಾಕಂ ತಂ ಚ ವಿಭೀಷಣಂ ಚ ಶರಣೇತ್ಯುಕ್ತಿಕ್ಷಮೌ ರಕ್ಷತಃ
ಸಾ ನಸ್ಸಾಂದ್ರಮಹಾಗಸಸ್ಸುಖಯತು ಕ್ಷಾಂತಿಸ್ತವಾಕಸ್ಮಿಕೀ ॥

ಭರತನನ್ನು ಕಾಣುವುದಕ್ಕಾಗಿ ತ್ವರಿತವಾಗಿ ಶ್ರೀರಾಮ ಪುಷ್ಪಕದಲ್ಲಿ ಕುಳಿತು ವಾನರವೀರರೊಡನೆಯೂ ವಿಭೀಷಣಾದಿಗಳೊಡನೆಯೂ ಅಯೋಧ್ಯೆಗೆ ಪ್ರಯಾಣಮಾಡುತ್ತಾನೆ. ಅಯೋಧ್ಯೆಯನ್ನು ಕಂಡಾಗ ಭಾವ ಪರವಶನಾದ ರಾಮ ಸೀತೆಗೆ ಹೇಳುತ್ತಾನೆ–'**ಅಯೋಧ್ಯಾಂ ಕುರು ವೈದೇಹಿ ಪ್ರಣಾಮಂ ಪುನರಾಗತಾ**'–ಎಂದು. ಮುಂದೆ ಬರುವ ರಾಮ-ಭರತರ ಪುನಸ್ಸಮಾಗಮ ಒಂದು ರಸಘಟ್ಟ. '**ನ ಸರ್ವೇ ಭ್ರಾತರಸ್ತಾತ ಭವನ್ತಿ ಭರತೋಪಮಾಃ**' ಎಂದು ರಾಮನಿಂದಲೇ ಹೇಳಿಸಿಕೊಂಡವನೂ, ಭ್ರಾತೃ ಪ್ರೇಮವೇ ಮೂರ್ತಿವೆತ್ತಂತಿದ್ದವನೂ ಆದ ಭರತ ಶ್ರೀರಾಮನ ಪಾದುಕೆ ಗಳನ್ನು ಶಿರಸ್ಸಿನಲ್ಲಿ ಧರಿಸಿದವನಾಗಿ, ರಾಮಸಂದರ್ಶನೋತ್ಸುಕನಾಗಿ ಪೌರ ರೊಡನೆ ರಾಮನನ್ನು ಎದುರ್ಗೊಂಡು ಬರುತ್ತಾನೆ. ನಂದಿಗ್ರಾಮದಲ್ಲಿ ಯಾವ ಶ್ರೀಪಾದುಕೆಗಳಿಗೆ ಪಟ್ಟಾಭಿಷೇಕವಾಗಿತ್ತೋ ಆ ದಿವ್ಯವಾದ ಪಾದುಕೆ ಗಳನ್ನು ಶಿರಸ್ಸಿನಲ್ಲಿ ಧರಿಸಿಬಂದ ಭರತ. ನಿಗಮಾಂತದೇಶಿಕರವರು ತಮ್ಮ ಪಾದುಕಾಸಹಸ್ರದಲ್ಲಿ ಈ ಸನ್ನಿವೇಶವನ್ನು ಅದ್ಭುತವಾಗಿ ಚಿತ್ರಿಸಿದ್ದಾರೆ. 'ಆ ಶ್ರೀಪಾದುಕೆಗಳನ್ನು ಕಂಡೊಡನೆ ಸೀತೆ ಎದ್ದುಬಂದು ಅವುಗಳಿಗೆ ನಮಸ್ಕರಿಸಿ ದಳು. ಅಲ್ಲದೇ ತಾರೆ ಮೊದಲಾದವರೂ ನಮಿಸುವಂತೆ ಮಾಡಿದಳು. ಇದನ್ನು ಕಂಡು ಸುಗ್ರೀವ-ವಿಭೀಷಣಾದಿಗಳು ಬಂದು ಪಾದುಕೆಯನ್ನು ತಮ್ಮ ತಲೆಯ ಮೇಲಿಟ್ಟುಕೊಂಡರು. ಪಾದುಕೆಗಳಿಗೆ ಪಟ್ಟಾಭಿಷೇಕ ಆಗಿದ್ದುದ ರಿಂದಲೂ ಸೀತಾದೇವಿಗೆ ಇನ್ನೂ ಪಟ್ಟಾಭಿಷೇಕ ಆಗಿಲ್ಲದೇ ಇದ್ದುದರಿಂದಲೂ ಹಾಗೆ ಅವಳು ನಮಸ್ಕರಿಸುವುದು ಕರ್ತವ್ಯವಾಯಿತು. ಸುಗ್ರೀವ, ವಿಭೀಷಣ ಹಾಗೂ ಅವರ ಪತ್ನಿಯರಿಗೆ ಪಟ್ಟಾಭಿಷೇಕವಾಗಿದ್ದರೂ ಅವರಿಗಿಂತ

ಮೊದಲೇ ಶ್ರೀಪಾದುಕೆಗಳಿಗೆ ಪಟ್ಟಾಭಿಷೇಕವಾಗಿದ್ದುದರಿಂದ ಹಾಗೆ ನಮಸ್ಕರಿಸುವುದು ನ್ಯಾಯವೇ ಆಯಿತು.'

ಭರತ ನಿಷ್ಕಳಂಕವಾದ ಭ್ರಾತೃಪ್ರೇಮವನ್ನು ಮೆರೆದ.

ಪಾದುಕೇ ತೇ ತು ರಾಮಸ್ಯ ಗೃಹೀತ್ವಾ ಭರತಃ ಸ್ವಯಮ್ ।
ಚರಣಾಭ್ಯಾಂ ನರೇನ್ದ್ರಸ್ಯ ಯೋಜಯಾಮಾಸ ಧರ್ಮವಿತ್ ॥

ಅವನ ಆ ಪರಿಶುದ್ಧಭಾವವನ್ನು ಕಂಡು,

ಮುಮುಚುಃ ವಾನರಾ ಬಾಷ್ಪಂ ರಾಕ್ಷಸಶ್ಚ ವಿಭೀಷಣಃ ।

ಮುಂದೆ ಶ್ರೀರಾಮಪಟ್ಟಾಭಿಷೇಕದ ವೈಭವ ಅನುಪಮವಾಗಿ ಬೆಳೆಯುತ್ತದೆ. ಎಲ್ಲೆಲ್ಲಿಯೂ ಸಂತಸ, ಸಂಭ್ರಮ, ಸಡಗರ. ಭರತ ತಾನೇ ನಿಂತು ಎಲ್ಲ ಮಂಗಲಕಾರ್ಯಗಳನ್ನೂ ತನ್ನ ಮನಮೆಚ್ಚುವಂತೆ ನಡೆಸಿ ಧನ್ಯನಾದ. ಹದಿನಾಲ್ಕು ವರ್ಷಗಳ ಹಿಂದೆ ಶ್ರೀರಾಮನನ್ನು ಕರೆದುಕೊಂಡು ಬರಬೇಕೆಂದು ಅವನು ಮಾಡಿದ್ದ ಸಂಕಲ್ಪ ಪೂರ್ಣವಾಯಿತು. ಸತ್ಯಸಂಕಲ್ಪನಾದ ಶ್ರೀರಾಮ ತನ್ನ ಪ್ರತಿಜ್ಞೆಯನ್ನು ಪೂರ್ಣಗೊಳಿಸಿ ಭರತನಿಗೆ ಮಾತುಕೊಟ್ಟಂತೆ ಅಯೋಧ್ಯೆಯಲ್ಲಿ ಪಟ್ಟಾಭಿಷಿಕ್ತನಾದ. ಭರತನು ಶ್ರೀರಾಮನಿಗೆ ರಾಜ್ಯವನ್ನ ರ್ಪಿಸಿ ಅವನಿಗೆ ದಾಸನಾಗಿರುವೆನೆಂದು ಮಾಡಿದ ಪ್ರತಿಜ್ಞೆಯು ಪೂರ್ಣವಾಯಿತು. ಹೀಗೆ ಮಂಗಲಮಯವಾಗಿ ಈ ಆಖ್ಯಾನ ಪೂರ್ಣವಾಗುತ್ತದೆ.

ಇಂತಹ ಪವಿತ್ರವಾದ ಶ್ರೀಮದ್ರಾಮಾಯಣದ ಪ್ರಚಾರ ಬಹಳ ಶ್ರೇಯಸ್ಕರವೂ ಪುಣ್ಯಪ್ರದವೂ ಆದ ಕಾರ್ಯ. ಭಾರತ ದರ್ಶನ ಪ್ರಕಾಶನ ಅದರಲ್ಲಿಯೂ ಶ್ರೀಮಾನ್ ಕೌಶಿಕ್‌ರವರು ಈ ಕಾರ್ಯವನ್ನು ಕೈಗೊಂಡು ಯಶಸ್ವಿಯಾಗಿ ಇದನ್ನು ನಿರ್ವಹಿಸಿದ್ದಾರೆ. ಕನ್ನಡ ಕುಲಕೋಟಿಯ ಪರವಾಗಿ ಇವರಿಗೆ ಅನಂತಪ್ರಣಾಮಗಳು. ಶ್ರೀಮದ್ರಾಮಾಯಣದ ಮತ್ತು ಶ್ರೀಮನ್ಮಹಾಭಾರತದ ಪ್ರತಿಗಳು ಪ್ರತಿಯೊಂದು ಮನೆಯನ್ನೂ ಬೆಳಗಲೆಂದೂ, ಈ ಪವಿತ್ರವಾದ ಕಾರ್ಯಕ್ಕೆ ಎಲ್ಲರ ಬೆಂಬಲವೂ ಲಭಿಸಲೆಂದೂ, ಶ್ರೀರಾಮಚಂದ್ರಪ್ರಭು ಈ ಕಾರ್ಯದಲ್ಲಿ ಪ್ರವೃತ್ತರಾದವರಿಗೆಲ್ಲ ಸಕಲ ವಿಧವಾದ ಸನ್ಮಂಗಳಗಳನ್ನೂ ಕರುಣಿಸಲೆಂದೂ ಅನನ್ಯಭಕ್ತಿಯಿಂದ ಬೇಡುತ್ತೇನೆ.

ಬೆಂಗಳೂರು — ಎನ್. ಎಸ್. ಅನಂತರಂಗಾಚಾರ್ಯ.

೧-೧೧-೧೯೮೯

ಶ್ರೀಮದ್ವಾಲ್ಮೀಕಿರಾಮಾಯಣ-ಒಂಬತ್ತನೆಯ ಸಂಪುಟ
ಯುದ್ಧಕಾಂಡ ಸರ್ಗಾನುಕ್ರಮಣಿಕೆ ಮತ್ತು
ವಿಷಯಾನುಕ್ರಮಣಿಕೆ

(ವಿ.ಸೂ. ಮೊದಲನೆಯದು : ಮೂಲಶ್ಲೋಕಗಳ ಸರ್ಗಗಳ ಪುಟಸಂಖ್ಯೆ-
ಎರಡನೆಯದು : ವಿಷಯಗಳ ಪುಟಸಂಖ್ಯೆ)

ಸರ್ಗ	ವಿಷಯಗಳು	ಪುಟಸಂಖ್ಯೆ	ಪುಟಸಂಖ್ಯೆ
೭೩	ಇಂದ್ರಜಿತುವು ಬ್ರಹ್ಮಾಸ್ತ್ರದಿಂದ ವಾನರ ಸೈನಿಕರನ್ನೂ ರಾಮ-ಲಕ್ಷ್ಮಣರನ್ನೂ ಮೂರ್ಛೆಗೊಳಿಸಿದುದು	...೧೭೭೫	2909
೭೪	ಜಾಂಬವಂತನ ನಿರ್ದೇಶದಂತೆ ಹನುಮಂತನು ಹಿಮವತ್ಪರ್ವತಕ್ಕೆ ಹೋಗಿ ಓಷಧಿಲತೆಗಳಿದ್ದ ಪರ್ವತವನ್ನೇ ತಂದುದು : ಓಷಧಿಲತೆಯ ವಾಸನೆಯಿಂದಲೇ ರಾಮ-ಲಕ್ಷ್ಮಣರೂ ವಾನರರೂ ಎಚ್ಚರಗೊಂಡುದು	...೧೭೮೪	2918
೭೫	ಲಂಕಾದಹನ : ವಾನರ-ರಾಕ್ಷಸರ ಭಯಂಕರ ಯುದ್ಧ	...೧೭೯೩	2930
೭೬	ಅಂಗದನಿಂದ ಕಂಪನ-ಪ್ರಜಂಘರ ಸಂಹಾರ : ದ್ವಿವಿದನಿಂದ ಶೋಣಿತಾಕ್ಷನ, ಮೈಂದನಿಂದ ಯೂಪಾಕ್ಷನ ಮತ್ತು ಸುಗ್ರೀವನಿಂದ ಕುಂಭನ ಸಂಹಾರ	...೧೭೯೯	2939
೭೭	ಹನುಮಂತನಿಂದ ನಿಕುಂಭನ ಸಂಹಾರ	...೧೮೦೮	2949
೭೮	ರಾವಣನ ಆಜ್ಞೆಯಂತೆ ಮಕರಾಕ್ಷನು ಯುದ್ಧಕ್ಕೆ ಹೊರಟುದು	...೧೮೧೦	2953
೭೯	ಶ್ರೀರಾಮನಿಂದ ಮಕರಾಕ್ಷನ ಸಂಹಾರ	...೧೮೧೨	2955
೮೦	ರಾವಣನ ಆಜ್ಞೆಯಂತೆ ಇಂದ್ರಜಿತುವು ಯುದ್ಧಕ್ಕೆ ಬಂದುದು : ಅವನ ಸಂಹಾರದ		

ಸರ್ಗ	ವಿಷಯಗಳು	ಪುಟಸಂಖ್ಯೆ	ಪುಟಸಂಖ್ಯೆ
	ವಿಷಯವಾಗಿ ರಾಮ-ಲಕ್ಷ್ಮಣರ ಸಮಾಲೋಚನೆ	...೧೮೧೬	2959
೮೧	ಇಂದ್ರಜಿತುವಿನಿಂದ ಮಾಯಾಸೀತೆಯ ಸಂಹಾರ	೧೮೨೧	2965
೮೨	ಹನುಮಂತನ ಮುಂದಾಳುತನದಲ್ಲಿ ವಾನರ-ರಾಕ್ಷಸರ ಯುದ್ಧ : ಹನುಮಂತನು ಶ್ರೀರಾಮನ ಬಳಿಗೆ ಹೋದುದು : ಇಂದ್ರಜಿತುವು ನಿಕುಂಭಿಲಾ ಮಂದಿರಕ್ಕೆ ಹೋಗಿ ಹೋಮಮಾಡಿದುದು	...೧೮೨೪	2970
೮೩	ಸೀತೆಯು ಮೃತಳಾದಳೆಂಬ ಮಾತನ್ನು ಕೇಳಿ ಶ್ರೀರಾಮನ ಮೂರ್ಛೆ : ಲಕ್ಷ್ಮಣನ ಸಮಾಧಾನ	...೧೮೨೭	2973
೮೪	ವಿಭೀಷಣನು ಇಂದ್ರಜಿತುವಿನ ಮಾಯಾ ರಹಸ್ಯವನ್ನು ಹೇಳಿ ಸೀತೆಯು ಜೀವಿಸಿರುವ ಳೆಂಬ ವಿಶ್ವಾಸವನ್ನು ಹುಟ್ಟಿಸಿದುದು : ಲಕ್ಷ್ಮಣನನ್ನು ಕಪಿಸೇನೆಯೊಡನೆ ನಿಕುಂಭಿಲಾ ಮಂದಿರಕ್ಕೆ ಕಳುಹಿಸಲು ಪ್ರಾರ್ಥಿಸಿದುದು	...೧೮೩೧	2986
೮೫	ವಿಭೀಷಣನ ಪ್ರಾರ್ಥನೆಯಂತೆ ಶ್ರೀರಾಮನು ಇಂದ್ರಜಿತುವಿನೊಡನೆ ಯುದ್ಧಮಾಡಲು ಲಕ್ಷ್ಮಣ ನಿಗೆ ಅನುಮತಿಸಿದುದು : ಸೇನಾಸಹಿತನಾದ ಲಕ್ಷ್ಮಣನು ನಿಕುಂಭಿಲಾಮಂದಿರದ ಬಳಿಗೆ ಹೋದುದು	...೧೮೩೩	2989
೮೬	ವಾನರ-ರಾಕ್ಷಸರ ಭಯಂಕರಸಮರ : ಹನುಮಂತನಿಂದ ರಾಕ್ಷಸಸೈನಿಕರ ಸಂಹಾರ : ಹನುಮಂತನು ದ್ವಂದ್ವಯುದ್ಧಕ್ಕೆ ಇಂದ್ರ ಜಿತುವನ್ನು ಆಹ್ವಾನಿಸಿದುದು	...೧೮೩೭	2994
೮೭	ಇಂದ್ರಜಿತು ಮತ್ತು ವಿಭೀಷಣರ ರೋಷ ಪೂರ್ಣವಾದ ಉದ್ಗಾರ	...೧೮೪೦	2998

ಸರ್ಗ	ವಿಷಯಗಳು	ಪುಟಸಂಖ್ಯೆ	ಪುಟಸಂಖ್ಯೆ
೮೮	ಲಕ್ಷ್ಮಣ ಮತ್ತು ಇಂದ್ರಜಿತುಗಳ ಸಂಭಾಷಣೆ : ಘೋರವಾದ ಯುದ್ಧ	...೧೮೪೩	3003
೮೯	ರಾಕ್ಷಸರೊಡನೆ ವಿಭೀಷಣನ ಯುದ್ಧ : ವಿಭೀಷಣನಿಗೆ ವಾನರಯೂಥಪತಿಗಳ ಪ್ರೋತ್ಸಾಹ : ಲಕ್ಷ್ಮಣನಿಂದ ಇಂದ್ರಜಿತುವಿನ ಸಾರಥಿಯ ಸಂಹಾರ : ವಾನರರಿಂದ ಇಂದ್ರ ಜಿತುವಿನ ಕುದುರೆಗಳ ಸಂಹಾರ	...೧೮೫೧	3014
೯೦	ನರ-ರಾಕ್ಷಸಶ್ರೇಷ್ಠರ ಭಯಂಕರಯುದ್ಧ : ಇಂದ್ರಜಿತುವಿನ ವಧೆ	...೧೮೫೬	3020
೯೧	ಲಕ್ಷ್ಮಣ-ವಿಭೀಷಣರು ಶ್ರೀರಾಮಚಂದ್ರನಿಗೆ ಇಂದ್ರಜಿತುವಿನ ವಧೆಯ ವಾರ್ತೆಯನ್ನು ತಿಳಿಸಿ ದುದು : ಪ್ರಸನ್ನಚಿತ್ತನಾದ ಶ್ರೀರಾಮನು ಲಕ್ಷ್ಮಣನನ್ನು ಆಲಿಂಗಿಸಿಕೊಂಡು ಪ್ರಶಂಸಿ ದುದು : ಸುಷೇಣನು ಲಕ್ಷ್ಮಣನೇ ಮೊದ ಲಾದವರಿಗೆ ಚಿಕಿತ್ಸೆಮಾಡಿದುದು	...೧೮೬೫	3029
೯೨	ರಾವಣನ ಶೋಕ : ಸೀತೆಯನ್ನು ಸಂಹರಿ ಸಲು ಹೊರಟುದು : ಸುಪಾರ್ಶ್ವನಿಂದ ಆಶ್ವಾಸನೆ	...೧೮೬೭	3033
೯೩	ಶ್ರೀರಾಮನಿಂದ ರಾಕ್ಷಸಸೈನ್ಯದ ಸಂಹಾರ	...೧೮೭೪	3042
೯೪	ರಾಕ್ಷಸಿಯರ ವಿಲಾಪ	...೧೮೭೮	3047
೯೫	ರಾವಣನು ಮಂತ್ರಿಗಳನ್ನು ಕರೆಯಿಸಿ ಶತ್ರು ವಧೆಯಲ್ಲಿ ಉತ್ಸಾಹವನ್ನು ಪ್ರಕಟಿಸಿದುದು : ಸಮಸ್ತರಾಕ್ಷಸರೊಡನೆ ರಣಭೂಮಿಗೆ ಹೋಗಿ ತನ್ನ ಪರಾಕ್ರಮವನ್ನು ಪ್ರದರ್ಶಿಸಿದುದು	...೧೮೮೨	3053
೯೬	ಸುಗ್ರೀವನಿಂದ ರಾಕ್ಷಸಸೈನ್ಯದ ಸಂಹಾರ : ವಿರೂಪಾಕ್ಷನ ವಧೆ	...೧೮೮೭	3059

ಸರ್ಗ	ವಿಷಯಗಳು	ಪುಟಸಂಖ್ಯೆ	ಪುಟಸಂಖ್ಯೆ
೯೭	ಸುಗ್ರೀವನೊಡನೆ ಮಹೋದರನ ಯುದ್ಧ ಮತ್ತು ಅವನ ವಧೆ	...೧೮೯೦	3062
೯೮	ಅಂಗದನಿಂದ ಮಹಾಪಾರ್ಶ್ವನ ವಧೆ	...೧೮೯೪	3066
೯೯	ರಾಮ-ರಾವಣರ ಯುದ್ಧ	...೧೮೯೭	3069
೧೦೦	ರಾಮ-ರಾವಣರ ಯುದ್ಧ : ಶಕ್ತ್ಯಾಯುಧ ದಿಂದ ರಾವಣನು ಲಕ್ಷ್ಮಣನನ್ನು ಮೂರ್ಛೆಗೊಳಿಸಿದುದು : ಯುದ್ಧದಿಂದ ರಾವಣನ ಪಲಾಯನ	...೧೯೦೨	3074
೧೦೧	ಲಕ್ಷ್ಮಣನ ಮೂರ್ಛೆ : ಶ್ರೀರಾಮನ ವಿಲಾಪ: ಹನುಮಂತನು ತಂದ ಓಷಧಿಲತೆ ಗಳಿಂದ ಸುಷೇಣನು ಲಕ್ಷ್ಮಣನಿಗೆ ಚಿಕಿತ್ಸೆ ಮಾಡಿದುದು : ಲಕ್ಷ್ಮಣನು ಎಚ್ಚರಗೊಂಡುದು	...೧೯೦೮	3081
೧೦೨	ಶ್ರೀರಾಮನು ಇಂದ್ರನು ಕಳುಹಿಸಿದ ರಥದಲ್ಲಿ ಕುಳಿತು ರಾವಣನೊಡನೆ ಯುದ್ಧಮಾಡಿದುದು	...೧೯೧೩	3090
೧೦೩	ಶ್ರೀರಾಮನಿಂದ ರಾವಣನ ನಿಂದೆ : ಗಾಯ ಗೊಂಡಿದ್ದ ರಾವಣನನ್ನು ಸಾರಥಿಯು ರಣ ರಂಗದಿಂದ ಹೊರಕ್ಕೆ ಒಯ್ದುದು	...೧೯೨೦	3098
೧೦೪	ರಣರಂಗದಿಂದ ಹಿಂದಿರುಗಿದುದಕ್ಕಾಗಿ ರಾವಣನು ಸಾರಥಿಯನ್ನು ನಿಂದಿಸಿದುದು : ಸಾರಥಿಯು ರಾವಣನನ್ನು ಸಮಾಧಾನಗೊಳಿಸಿ ರಥವನ್ನು ಪುನಃರಣಭೂಮಿಗೊಯ್ದುದು	...೧೯೨೩	3103
೧೦೫	ವಿಜಯಪ್ರಾಪ್ತಿಗಾಗಿ ಅಗಸ್ತ್ಯರಿಂದ ಶ್ರೀರಾಮ ನಿಗೆ ಆದಿತ್ಯಹೃದಯದ ಉಪದೇಶ	...೧೯೨೭	3107
೧೦೬	ಶ್ರೀರಾಮನು ಮಾತಲಿಗೆ ಎಚ್ಚರವಾಗಿರುವಂತೆ ಹೇಳಿದುದು : ರಾವಣನಿಗೆ ಪರಾಜಯಸೂಚಕ ವಾಗಿ ಮತ್ತು ಶ್ರೀರಾಮನಿಗೆ ವಿಜಯಸೂಚಕ ವಾಗಿ ಸಂಭವಿಸಿದ ಶಕುನಗಳು	...೧೯೩೦	3119

ಸರ್ಗ	ವಿಷಯಗಳು	ಪುಟಸಂಖ್ಯೆ	ಪುಟಸಂಖ್ಯೆ
೧೦೭	ರಾಮ-ರಾವಣರ ಘೋರಯುದ್ಧ	...೯೩೪	3124
೧೦೮	ಶ್ರೀರಾಮನಿಂದ ರಾವಣನ ವಧೆ	...೧೦೪೦	3132
೧೦೯	ವಿಭೀಷಣನ ದುಃಖ : ಶ್ರೀರಾಮನಿಂದ ಸಮಾಧಾನ : ರಾವಣನ ಸಂಸ್ಕಾರವನ್ನು ಮಾಡುವಂತೆ ಶ್ರೀರಾಮನು ವಿಭೀಷಣನಿಗೆ ಆದೇಶವನ್ನಿತ್ತುದು	...೯೪೩	3136
೧೧೦	ರಾವಣನ ಅಂತಃಪುರಸ್ತ್ರೀಯರ ವಿಲಾಪ	...೯೪೬	3141
೧೧೧	ಮಂದೋದರಿಯ ವಿಲಾಪ : ರಾವಣನ ದಹನಸಂಸ್ಕಾರ	...೯೪೯	3145
೧೧೨	ವಿಭೀಷಣನ ರಾಜ್ಯಾಭಿಷೇಕ : ಹನುಮಂತನ ಮೂಲಕ ಸೀತಾದೇವಿಗೆ ಸಂದೇಶ	...೯೬೦	3163
೧೧೩	ಹನುಮಂತನು ಶ್ರೀರಾಮನಿಗೆ ಸೀತಾ ದೇವಿಯ ಸಂದೇಶವನ್ನು ತಿಳಿಸಿದುದು	...೯೬೩	3166
೧೧೪	ಶ್ರೀರಾಮನ ಆಜ್ಞೆಯಂತೆ ವಿಭೀಷಣನು ಸೀತೆ ಯನ್ನು ಶ್ರೀರಾಮನ ಬಳಿಗೆ ಕರೆತಂದುದು : ಸೀತೆಯು ಪತಿದೇವನ ಮುಖವನ್ನು ಅವಲೋಕಿಸಿದುದು	....೯೬೮	3176
೧೧೫	ಶ್ರೀರಾಮನು ಸೀತೆಯನ್ನು ಪರಿಗ್ರಹಿಸಲು ನಿರಾಕರಿಸಿದುದು	...೯೭೧	3183
೧೧೬	ಸೀತೆಯಿಂದ ಶ್ರೀರಾಮನಿಗೆ ನಿಂದಾಪೂರ್ವಕವಾದ ಉತ್ತರ : ತನ್ನ ಸತೀತ್ವವನ್ನು ಸಿದ್ಧಪಡಿಸಲು ಸೀತೆಯ ಅಗ್ನಿಪ್ರವೇಶ	...೯೭೪	3188
೧೧೭	ದೇವತೆಗಳೆಲ್ಲರೂ ಶ್ರೀರಾಮನ ಬಳಿಗೆ ಬಂದು ಶ್ರೀರಾಮನು ಭಗವಂತನೆಂಬುದನ್ನು ಪ್ರತಿಪಾದಿಸಿ ಸ್ತುತಿಸಿದುದು	...೯೭೭	3195

ಸರ್ಗ	ವಿಷಯಗಳು	ಪುಟಸಂಖ್ಯೆ	ಪುಟಸಂಖ್ಯೆ
೧೧೮	ಅಗ್ನಿಯು ಸೀತಾದೇವಿಯನ್ನೆತ್ತಿಕೊಂಡು ಚಿತೆಯಿಂದ ಹೊರಬಂದು ಶ್ರೀರಾಮನಿಗೆ ಒಪ್ಪಿಸುತ್ತಾ ಸೀತೆಯು ಮಹಾಪತಿವ್ರತೆಯೆಂಬುದನ್ನು ಪ್ರತಿಪಾದಿಸಿದುದು : ಹರ್ಷದೊಡನೆ ಶ್ರೀರಾಮನು ಸೀತೆಯನ್ನು ಪರಿಗ್ರಹಿಸಿದುದು	...೯೮೧	3202
೧೧೯	ಮಹಾದೇವನ ಆಜ್ಞೆಯಂತೆ ವಿಮಾನದಲ್ಲಿ ಬಂದ ದಶರಥನನ್ನು ರಾಮ-ಲಕ್ಷ್ಮಣರು ಸಂದರ್ಶಿಸಿದುದು : ದಶರಥನು ರಾಮ-ಲಕ್ಷ್ಮಣರಿಗೂ ಸೀತೆಗೂ ಸಂದೇಶವನ್ನಿತ್ತು ಸ್ವರ್ಗಕ್ಕೆ ತೆರಳಿದುದು	...೯೮೩	3207
೧೨೦	ಶ್ರೀರಾಮನ ಕೋರಿಕೆಯಂತೆ ಇಂದ್ರನು ಸತ್ತು ಹೋಗಿದ್ದ ವಾನರರನ್ನು ಬದುಕಿಸಿದುದು : ದೇವತೆಗಳ ಪ್ರಯಾಣ	...೯೮೭	3212
೧೨೧	ಅಯೋಧ್ಯೆಗೆ ಹೊರಡಲು ಶ್ರೀರಾಮನ ಸಿದ್ಧತೆ : ವಿಭೀಷಣನು ಪುಷ್ಪಕವಿಮಾನದಲ್ಲಿ ಹೋಗುವಂತೆ ಶ್ರೀರಾಮನನ್ನು ಪ್ರಾರ್ಥಿಸಿದುದು	...೯೮೯	3216
೧೨೨	ಶ್ರೀರಾಮನ ಆಜ್ಞೆಯಂತೆ ವಿಭೀಷಣನಿಂದ ವಾನರಸೈನಿಕರಿಗೆ ಸತ್ಕಾರ : ಸುಗ್ರೀವ-ವಿಭೀಷಣರೊಡನೆಯೂ ವಾನರರೊಡನೆಯೂ ಪುಷ್ಪಕವಿಮಾನದಲ್ಲಿ ಅಯೋಧ್ಯೆಗೆ ಶ್ರೀರಾಮನ ಪ್ರಯಾಣ	...೯೯೨	3220
೧೨೩	ಅಯೋಧ್ಯೆಗೆ ಹೋಗುತ್ತಿದ್ದಾಗ ಸೀತಾದೇವಿಗೆ ಶ್ರೀರಾಮನು ಮಾರ್ಗವನ್ನು ಪರಿಚಯಿಸಿದುದು	....೯೯೫	3224
೧೨೪	ಶ್ರೀರಾಮನು ಭರದ್ವಾಜರ ಆಶ್ರಮದ ಸಮೀಪದಲ್ಲಿ ವಿಮಾನದಿಂದಿಳಿದು ಮಹರ್ಷಿಗಳನ್ನು ಸಂದರ್ಶಿಸಿ ಅವರಿಂದ ವರವನ್ನು ಪಡೆದುದು	....೨೦೦೦	3231

ಸರ್ಗ	ವಿಷಯಗಳು	ಪುಟಸಂಖ್ಯೆ	ಪುಟಸಂಖ್ಯೆ
೧೨೫	ಹನುಮಂತನು ಗುಹನಿಗೂ ಮತ್ತು ಭರತನಿಗೂ ಶ್ರೀರಾಮನು ಅಯೋಧ್ಯೆಗೆ ಬರುತ್ತಿರುವ ಶುಭ ಸಮಾಚಾರವನ್ನು ತಿಳಿಸಿದುದು : ಪ್ರಸನ್ನನಾದ ಭರತನು ಹನುಮಂತನಿಗೆ ಪಾರಿತೋಷಿಕ ವನ್ನೀಯಲು ಘೋಷಿಸಿದುದು	...೨೦೦೨	3235
೧೨೬	ಹನುಮಂತನು ಭರತನಿಗೆ ರಾಮ-ಲಕ್ಷ್ಮಣ-ಸೀತೆಯರ ವನವಾಸದ ವೃತ್ತಾಂತವನ್ನು ಸಮಗ್ರವಾಗಿ ಹೇಳಿದುದು	...೨೦೦೭	3241
೧೨೭	ಅಯೋಧ್ಯೆಯಲ್ಲಿ ಶ್ರೀರಾಮನ ಸ್ವಾಗತಕ್ಕಾಗಿ ಸಿದ್ಧತೆ : ಅಯೋಧ್ಯೆಯಿಂದ ಎಲ್ಲರೂ ನಂದಿ ಗ್ರಾಮಕ್ಕೆ ತೆರಳಿದುದು : ಶ್ರೀರಾಮನ ಆಗಮನ : ಭರತನೊಡನೆ ಸಮಾಗಮ : ಪುಷ್ಪಕವಿಮಾನ ವನ್ನು ಕುಬೇರನಿಗೆ ಹಿಂದಿರುಗಿಸಿದುದು	...೨೦೧೨	3247
೧೨೮	ಭರತನು ಶ್ರೀರಾಮನಿಗೆ ರಾಜ್ಯವನ್ನು ವಹಿಸಿ ಕೊಟ್ಟುದು : ಶ್ರೀರಾಮನ ನಗರಯಾತ್ರೆ : ಶ್ರೀರಾಮನ ರಾಜ್ಯಾಭಿಷೇಕ : ವಾನರರ ಬೀಳ್ಕೊಡಿಗೆ : ರಾಮಾಯಣಗ್ರಂಥದ ಮಹಿಮೆ	:೨೦೧೮	3257

ಪರಿಶಿಷ್ಟ

ಶ್ರೀರಾಮನು ಹೇಳಿದ ಮಹಾದೇವನು ಯಾರು?

ಅತ್ರ ಪೂರ್ವಂ ಮಹಾದೇವಃ ಪ್ರಸಾದಮಕರೋತ್ಪ್ರಭುಃ ।

ಶ್ರೀರಾಮನು ಸಮುದ್ರದ ತೀರಕ್ಕೆ ಬಂದಾಗ ಈ ಮಾತನ್ನು ಹೇಳು ತ್ತಾನೆ:

“ಸೀತೆ! ಇಲ್ಲಿಯೇ ಹಿಂದೆ ಮಹಾದೇವನು ಪ್ರಸನ್ನನಾಗಿ ಕಾರ್ಯದ ಸಿದ್ಧಿಯಾಗುವಂತೆ ಅನುಗ್ರಹಿಸಿದನು.” ಆದರೆ ಈ ಪ್ರಸಂಗವು ಶ್ರೀರಾಮನು ಸೇತುಬಂಧನ ಮಾಡಿದ ಸಮಯದಲ್ಲಿ ಹೇಳಲ್ಪಟ್ಟಿಲ್ಲ. ಹಾಗೆ ಹೇಳದಿದ್ದರೂ ಈಗ ಹೇಳಿರುವುದರಿಂದ ಆಗ ಅದು ನಡೆಯಿತೆಂದೇ ಭಾವಿಸಿಕೊಳ್ಳಬೇಕು. ಇದೇ ಸರ್ಗದಲ್ಲಿಯೇ–‘ಅಙ್ಗದೇನಾತ್ರ ನಿಹತೋ ವಿಕಟೋ ನಾಮ ರಾಕ್ಷಸಃ’–ಎಂದು ಶ್ರೀರಾಮನು ಹೇಳುತ್ತಾನೆ. ಆದರೆ ವಿಕಟನನ್ನು ಅಂಗದನು ಸಂಹರಿಸಿದ ಪ್ರಸಂಗವು ಹಿಂದೆ ಬರುವುದಿಲ್ಲ. ಆದರೂ ಶ್ರೀರಾಮನು ಈಗ ಹೇಳಿರುವುದರಿಂದ ಅಂಗದನು ವಿಕಟನನ್ನು ಸಂಹರಿಸಿದನೆಂದು ತಿಳಿಯ ಬೇಕು. ಶ್ರೀರಾಮನು ಸಮುದ್ರತೀರದಲ್ಲಿ ಈಶ್ವರನನ್ನು ಆರಾಧಿಸಿದನೆಂಬುದಕ್ಕೆ ಪುರಾಣಗಳಲ್ಲಿಯೂ ಉಲ್ಲೇಖವಿದೆ.

ಸೇತುಮಧ್ಯೇ ಮಹಾದೇವಮೀಶಾನಂ ಕೃತ್ತಿವಾಸಸಮ್ ।
ಸ್ಥಾಪಯಾಮಾಸ ವೈ ಲಿಙ್ಗಂ ಪೂಜಯಾಮಾಸ ರಾಘವಃ ॥
ತಸ್ಯ ದೇವೋ ಮಹಾದೇವಃ ಪಾರ್ವತ್ಯಾ ಸಹ ಶಂಕರಃ ।
ಪ್ರತ್ಯಕ್ಷಮೇವ ಭಗವಾನ್ದತ್ತವಾನ್ವರಮುತ್ತಮಮ್ ॥

ಯೇ ತ್ವಯಾ ಸ್ಥಾಪಿತಂ ಲಿಙ್ಗಂ ದ್ರಕ್ಷ್ಯನ್ತೀಹ ದ್ವಿಜಾತಯಃ ।
ಮಹಾಪಾತಕಸಂಯುಕ್ತಾಸ್ತೇಷಾಂ ಪಾಪಂ ವಿನಶ್ಯತಿ ।
ಅನ್ಯಾನಿ ಚೈವ ಪಾಪಾನಿ ತೀರೇ ತತ್ರ ಮಹೋದಧೇಃ ।
ದರ್ಶನಾದೇವ ಲಿಙ್ಗಸ್ಯ ನಾಶಂ ಯಾನ್ತಿ ನ ಸಂಶಯಃ ॥
ಯಾವತ್ ಸ್ಥಾಸ್ಯನ್ತಿ ಗಿರಯಃ ಯಾವದೇವ ಚ ಮೇದಿನೀ ।
ಯಾವತ್ಸೇತುಶ್ಚ ತಾವಚ್ಚ ಸ್ಥಾಸ್ಯಾಮ್ಯತ್ರ ತಿರೋಹಿತಃ ॥
ಸ್ನಾನಂ ದಾನಂ ಜಪಃ ಶ್ರಾದ್ಧಂ ಭವಿಷ್ಯತ್ಯಕ್ಷಯಂ ತತಃ ।
ಸ್ಮರಣಾದೇವ ಲಿಙ್ಗಸ್ಯ ದಿನಪಾಪಂ ಪ್ರಣಶ್ಯತಿ ॥

ಇತ್ಯುಕ್ತ್ವಾ ಭಗವಾನ್ರಾಮಂ ಪರಿಷ್ವಜ್ಯ ಚ ರಾಘವಮ್ ।
ಸನನ್ದೀ ಸಗಣೋ ರುದ್ರಸ್ತತ್ರೈವಾನ್ತರಧೀಯತ ॥

ಸೇತುವಿನ ಮಧ್ಯದಲ್ಲಿ ಚರ್ಮಾಂಬರನಾದ ಮಹಾದೇವನನ್ನು ಶ್ರೀರಾಮನು ಲಿಂಗದ ರೂಪದಲ್ಲಿ ಪ್ರತಿಷ್ಠಿಸಿ ಪೂಜಿಸಿದನು. ಒಡನೆಯೇ ಮಹಾದೇವನು ಪಾರ್ವತಿಯೊಡನೆ ಶ್ರೀರಾಮನಿಗೆ ಪ್ರತ್ಯಕ್ಷನಾಗಿ ಹೇಳಿದನು :

"ರಾಘವ! ನಿನ್ನಿಂದ ಸ್ಥಾಪಿಸಲ್ಪಟ್ಟಿರುವ ಈ ಲಿಂಗವನ್ನು ಸಂದರ್ಶಿಸುವ ದ್ವಿಜರು ಮಹಾಪಾತಕಗಳಿಂದಲೂ ವಿಮುಕ್ತರಾಗುತ್ತಾರೆ. ಇತರ ಅನೇಕ ಪಾಪಗಳೂ ಮಹೋದಧಿಯ ತೀರದಲ್ಲಿರುವ ಈ ಲಿಂಗವನ್ನು ಸಂದರ್ಶಿಸುವುದರಿಂದ ಪರಿಹಾರವಾಗುತ್ತವೆ. ಎಂದಿನವರೆಗೆ ಪರ್ವತಗಳಿರು ತ್ತವೆಯೋ, ಭೂಮಂಡಲವಿರುವುದೋ, ಈ ಸೇತುವು ಇರುವುದೋ ಅಲ್ಲಿಯವರೆಗೂ ನಾನು ತಿರೋಹಿತನಾಗಿ ಲಿಂಗದ ರೂಪದಲ್ಲಿ ಇಲ್ಲಿಯೇ ಇರುತ್ತೇನೆ. ಈ ನನ್ನ ಸಾನ್ನಿಧ್ಯದಲ್ಲಿರುವ ಸಮುದ್ರದಲ್ಲಿ ಸ್ನಾನಮಾಡಿದರೆ, ಶ್ರಾದ್ಧಮಾಡಿದರೆ, ದಾನಮಾಡಿದರೆ, ಜಪಮಾಡಿದರೆ, ಅಕ್ಷಯವಾದ ಪುಣ್ಯವು ಲಭಿಸುತ್ತದೆ. ಲಿಂಗವನ್ನು ಸ್ಮರಣೆಮಾಡಿಕೊಳ್ಳುವುದರಿಂದಲೇ ದೈನಂದಿನಪಾಪವು ಪರಿಹಾರವಾಗುತ್ತದೆ." ಹೀಗೆ ಹೇಳಿ ಮಹಾದೇವನು ಪರಿ ವಾರ ಸಹಿತನಾಗಿ ಅಂತರ್ಹಿತನಾದನು.

–ಕೂರ್ಮಪುರಾಣ.

ರಾಮಃ ಪುಷ್ಪಕಾದವರುಹ್ಯ ಮಹಾದೇವಂ ಪ್ರತಿಷ್ಠಾವಾನ್ ।
ಸೋऽಸ್ಮೈ ಪ್ರಸನ್ನೋऽಭೂತ್

ಶ್ರೀರಾಮನು ಹಿಂದಿರುಗುವಾಗ ಸಮುದ್ರತೀರದಲ್ಲಿ ವಿಮಾನದಿಂದಿ ಳಿದು ಮಹಾದೇವನನ್ನು ಪ್ರತಿಷ್ಠಾಪಿಸಿದನೆಂದು ಪದ್ಮಪುರಾಣದಲ್ಲಿ ಹೇಳಿದೆ. ಅಧ್ಯಾತ್ಮರಾಮಾಯಣದಲ್ಲಿ ಈ ವಿಷಯವು ಮತ್ತೂ ಸ್ಪಷ್ಟವಾಗಿದೆ.

ಸೇತುಮಾರಭಮಾಣಸ್ತು ತತ್ರ ರಾಮೇಶ್ವರಂ ಶಿವಮ್ ।
ಸಂಸ್ಥಾಪ್ಯ ಪೂಜಯಿತ್ವಾಹ ರಾಮೋ ಲೋಕಹಿತಾಯ ಚ ॥೧॥

ಸೇತುವನ್ನು ಕಟ್ಟಲು ಪ್ರಾರಂಭಿಸಲಿದ್ದಾಗ ಶ್ರೀರಾಮನು ಪ್ರಾರಂಭಿಸಿದ ಕಾರ್ಯವು ನಿರ್ವಿಘ್ನವಾಗಿ ಮುಗಿಯುವುದಕ್ಕಾಗಿಯೂ, ಲೋಕಹಿತ ಕ್ಕಾಗಿಯೂ ರಾಮೇಶ್ವರನಾಮಕನಾದ ಈಶ್ವರನನ್ನು ಸಮುದ್ರತೀರದಲ್ಲಿ ಪ್ರತಿಷ್ಠಾಪಿಸಿ ಸಂಪೂಜಿಸಿ ಹೇಳಿದನು :

ಪುಣಮೇತ್ಸೇತುಬನ್ಧಂ ಯೋ ದೃಷ್ಟ್ವಾ ರಾಮೇಶ್ವರಂ ಶಿವಮ್ ।
ಬ್ರಹ್ಮಹತ್ಯಾದಿ ಪಾಪೇಭ್ಯೋ ಮುಚ್ಯತೇ ಮದನುಗ್ರಹಾತ್ ॥೨॥

"ಈ ನಲಸೇತುವೆಯನ್ನು ಮತ್ತು ಈ ಕ್ಷೇತ್ರದಲ್ಲಿರುವ ರಾಮೇಶ್ವರನನ್ನು ನಮಸ್ಕರಿಸುವವನು ನನ್ನ ಅನುಗ್ರಹದಿಂದ ಬ್ರಹ್ಮಹತ್ಯವೇ ಮೊದಲಾದ ಸಮಸ್ತಪಾಪಗಳಿಂದಲೂ ಮುಕ್ತನಾಗುತ್ತಾನೆ.

ಸೇತುಬನ್ಧೇ ನರಃ ಸ್ನಾತ್ವಾ ದೃಷ್ಟ್ವಾ ರಾಮೇಶ್ವರಂ ಹರಮ್ ।
ಸಙ್ಕಲ್ಪನಿಯತೋ ಭೂತ್ವಾ ಗತ್ವಾ ವಾರಾಣಸಿಂ ನರಃ ॥೩॥
ಆನೀಯ ಗಙ್ಗಾಸಲಿಲಂ ರಾಮೇಶಮಭಿಷಿಚ್ಯ ಚ ।
ಸಮುದ್ರೇ ಕ್ಷಿಪ್ತ ತದ್ಭಾರೋ ಬ್ರಹ್ಮಪ್ರಾಪ್ನೋತ್ಯಸಂಶಯಮ್ ॥೪॥

ಸೇತುತೀರ್ಥದಲ್ಲಿ ಸ್ನಾನಮಾಡಿ ರಾಮೇಶ್ವರನನ್ನು ಸಂಪೂಜಿಸಿ, ಜಿತೇಂದ್ರಿಯನಾಗಿ ಸಾಧಕನು ಕಾಶಿಗೆ ಹೋಗಬೇಕು. ಅಲ್ಲಿರುವ ಗಂಗಾನದಿ ಯಿಂದ ಬಿಂದಿಗೆಯಲ್ಲಿ ನೀರು ತಂದು ರಾಮೇಶ್ವರನಿಗೆ ಅಭಿಷೇಕ ಮಾಡ ಬೇಕು. ಅನಂತರ ಬಿಂದಿಗೆಯನ್ನು ಸಮುದ್ರಕ್ಕೆ ಹಾಕಬೇಕು. ಹೀಗೆ ಮಾಡುವ ಸಾಧಕನು ಬಹುಬೇಗ ಬ್ರಹ್ಮಭಾವವನ್ನು ಹೊಂದುತ್ತಾನೆ."

ತುಲಸೀರಾಮಾಯಣದಲ್ಲಿ ಸೇತುವೆಯನ್ನು ಕಟ್ಟಿದ ನಂತರ ಶ್ರೀರಾಮನೇ ಶಿವಲಿಂಗದ ಪ್ರತಿಷ್ಠೆಯನ್ನು ಮಾಡಿದನೆಂದು ಹೇಳಿದೆ.

ಪರಮ ರಮ್ಯ ಉತ್ತಮ ಯಹ ಧರನೀ। ಮಹಿಮಾ ಅಮಿತಜ್ಞಾ ನ ಹಿಂ ಚರನೀ॥ ಕರಿಹ ಉ ಇಹಾಂ ಸಂಭು ಥಾಪನಾ। ಮೋರೇ ಹೃದಯ್ ಪರಮ್ ಕಲಪನಾ॥

"ಇದು ಅತಿಸುಂದರವಾದ ಮತ್ತು ರಮ್ಯವಾದ ಸ್ಥಳವಾಗಿದೆ. ಇದರ ರಮ್ಯತೆಯನ್ನು ವರ್ಣಿಸಲು ಸಾಧ್ಯವೇ ಇಲ್ಲ. ಇಲ್ಲಿಯೇ ನಾನು ಶಿವಲಿಂಗ ವನ್ನು ಪ್ರತಿಷ್ಠಾಪಿಸುತ್ತೇನೆ. ಇದು ನನ್ನ ಹೃದಯದ ಆಶಯವಾಗಿದೆ." ಎಂದು ಹೇಳಿ ಅನೇಕ ಋಷಿ-ಮುನಿಗಳನ್ನು ಕರೆಯಿಸಿ ಶಿವಲಿಂಗವನ್ನು ಪ್ರತಿಷ್ಠಾಪಿಸುತ್ತಾನೆ.

ಆದರೆ ಒಬ್ಬ ವ್ಯಾಖ್ಯಾನಕಾರರು ಹಿಂದೆ ಸೇತುಬಂಧನದ ಪ್ರಕರಣದಲ್ಲಿ ಮಹಾದೇವನ ಪ್ರಸ್ತಾಪವಿಲ್ಲದೇ ಇರುವುದರಿಂದ ಇಲ್ಲಿ ಮಹಾದೇವ ಎಂಬ ಶಬ್ದಕ್ಕೆ ಸಂದರ್ಭಾನುಸಾರವಾಗಿ ಮಹಾಸಮುದ್ರದೇವ ಎಂದು ಅರ್ಥಮಾಡ

ಬೇಕು. ಹಿಂದೆ ಸಮುದ್ರರಾಜನೇ ಶ್ರೀರಾಮನಿಗೆ ಪ್ರಸನ್ನನಾಗಿ ಸೇತು ಬಂಧನದ ಉಪಾಯವನ್ನು ಸೂಚಿಸಿದ್ದನು. ಒಂದು ವೇಳೆ ಮಹಾದೇವ ಎಂಬ ಪದಕ್ಕೆ ರುದ್ರನೆಂದೇ ಅರ್ಥಮಾಡಬೇಕಾಗಿದ್ದರೆ–**ಅತ್ರ ಮನ್ದೋದರೀ ನಾಮ ಭಾರ್ಯಾ ತಂ ಪರ್ಯದೇವಯತ್ ॥**–ಎಂಬ ಶ್ಲೋಕವಾದ ನಂತರ ಈ ಶ್ಲೋಕವು ಬರಬೇಕು. ಸೀತೆಯ ಅಗ್ನಿಪ್ರವೇಶಾನಂತರದಲ್ಲಿ ದೇವತೆಗಳೊಡನೆ ಪರಮೇಶ್ವರನೂ ಬಂದು ಶ್ರೀರಾಮನನ್ನು ಆಶ್ವಾಸಿಸುತ್ತಾನೆ. (ಸರ್ಗ ೧೧೯)–ಎಂಬುದು ಈ ವ್ಯಾಖ್ಯಾನಕಾರರ ಅಭಿಪ್ರಾಯವಾಗಿದೆ.

ಮಹಾದೇವ ಶಬ್ದವು ಸಮುದ್ರಪರ್ಯಾಯದಲ್ಲಿ ಎಲ್ಲಿಯೂ ಕಂಡು ಬರದೇ ಇರುವುದರಿಂದಲೂ ರಾಮೇಶ್ವರದಲ್ಲಿ ಶ್ರೀರಾಮನು ಈಶ್ವರನನ್ನು ಪೂಜಿಸಿದ ಕಥೆಯು ಪ್ರಸಿದ್ಧವಾಗಿದ್ದು ರಾಮೇಶ್ವರ ಎಂಬ ಹೆಸರು ಬರಲೂ ಕೂಡ ಇದೇ ಕಾರಣವಾಗಿರುವುದರಿಂದಲೂ ಶ್ರೀರಾಮನು ಈ ಪ್ರಸಂಗದಲ್ಲಿ ಹಿಂದೆ ನಡೆದಿದ್ದನ್ನು ಹೇಳಿದನೆಂದು ಅರ್ಥಮಾಡುವುದೇ ಉಚಿತವಾಗಿದೆ.

ಶ್ರೀರಾಮನ ಅರಣ್ಯಪ್ರವಾಸದ ವೇಳಾಪಟ್ಟಿ

ವ್ಯಾಖ್ಯಾನಕಾರರು ಶ್ರೀರಾಮನ ಹದಿನಾಲ್ಕು ವರ್ಷಗಳ ಪ್ರವಾಸದ ವೇಳಾಪಟ್ಟಿಯನ್ನು ಹೀಗೆ ವಿವರಿಸಿದ್ದಾರೆ :

ಚೈತ್ರ ಶುದ್ಧ ಪಂಚಮಿಯಂದು ಅಯೋಧ್ಯೆಯಿಂದ ನಿರ್ಗಮನ ; ಅಂದು ರಾತ್ರಿ ತಮಸಾನದಿಯ ತೀರದಲ್ಲಿ ನಿವಾಸ ; ಷಷ್ಠಿಯ ದಿನ ಶೃಂಗ ವೇರಪುರ ; ಸಪ್ತಮಿಯ ದಿವಸ ವೃಕ್ಷದ ಕೆಳಗೆ ಮಲಗಿದ್ದು ಅಷ್ಟಮಿಯಂದು ಭರದ್ವಾಜಾಶ್ರಮ ; ನವಮೀ ಯಮುನಾತೀರ ; ದಶಮಿಯಂದು ರಾಮನು ಚಿತ್ರಕೂಟಕ್ಕೆ ಹೋಗುವನೆಂದು ಗುಹನ ಚಾರರ ಮೂಲಕ ತಿಳಿದ ಸುಮಂತ್ರನು ಸಾಯಂಕಾಲದ ವೇಳೆಗೆ ಅಯೋಧ್ಯಾನಗರಕ್ಕೆ ಹಿಂದಿರುಗಿದುದು ; ದಶಮಿಯ ರಾತ್ರಿಯೇ ದಶರಥನ ನಿರ್ಯಾಣ ; ಏಕಾದಶಿಯಂದು ರಾಜನ ಕಳೇವರವನ್ನು ತೈಲಪಾತ್ರೆಯಲ್ಲಿಟ್ಟುದು ; ದ್ವಾದಶಿಯ ದಿನ ಭರತನನ್ನು ಕರೆತರಲು ದೂತರನ್ನು ಕಳುಹಿಸಿದ್ದು ; ತ್ರಯೋದಶೀ ಮತ್ತು ಚತುರ್ದಶೀ ಈ ಎರಡು ದಿವಸಗಳ ಪ್ರಯಾಣಾನಂತರ ಹುಣ್ಣಿಮೆಯ ರಾತ್ರಿ ಕೇಕಯನಗರವನ್ನು ಸೇರಿದ್ದು ; ಚೈತ್ರ ಬಹುಳ ಪಾಡ್ಯಮಿ ಭರತನು

ಅಯೋಧ್ಯೆಗೆ ಹಿಂದಿರುಗಿದುದು ; ಮಾರ್ಗದಲ್ಲಿ ಏಳು ರಾತ್ರಿಗಳನ್ನು ಕಳೆದು ಎಂಟನೆಯ ದಿವಸದ ರಾತ್ರಿಯಲ್ಲಿಯೂ ಪ್ರಯಾಣಮಾಡಿ ನವಮಿಯು ದಿವಸ ಪ್ರಾತಃಕಾಲ ಅಯೋಧ್ಯೆಯ ಪ್ರವೇಶಮಾಡಿದುದು ; ನವಮಿಯಂದೇ ದಶ ರಥನ ದಹನಸಂಸ್ಕಾರ ; ಅಲ್ಲಿಂದ ಮುಂದೆ ಹದಿಮೂರು ದಿವಸಗಳವರೆಗೆ ಅಂದರೆ ವೈಶಾಖ ಶುದ್ಧ ಪಂಚಮೀ ಮತ್ತು ಅದರ ಹಿಂದಿನ ದಿನ ಚತುರ್ಥಿಯ ದಿವಸಗಳಲ್ಲಿ ಭರತನು ರಾಜನ ಅಂತ್ಯಕ್ರಿಯೆಗಳನ್ನು ನೆರವೇರಿಸಿದುದು ; ಷಷ್ಠಿಯ ದಿನ ದೇಶೀಯಾಚಾರದಂತೆ ದಹನದೇಶ ಶೋಧನೆ ; ಸಪ್ತಮಿಯಂದು ಮಾರ್ಗಶೋಧನಕ್ಕಾಗಿ ಕರ್ಮಾಂತಿಕರ ಪ್ರೇಷಣೆ; ಕರ್ಮಾಂತಿಕರಿಂದ ದಶಮಿಯವರೆಗೆ ನಾಲ್ಕು ದಿವಸಗಳು ; ಏಕಾದಶಿಯ ದಿವಸ ಭರತನು ಶ್ರೀರಾಮನ ಬಳಿಗೆ ಹೊರಟುದು ; ಆ ರಾತ್ರಿಯಲ್ಲಿ ಗಂಗಾ ತೀರ ನಿವಾಸ ; ದ್ವಾದಶಿಯ ದಿವಸ ಭರದ್ವಾಜಾಶ್ರಮ ; ತ್ರಯೋದಶೀ ದಿವಸ ಶ್ರೀರಾಮನೊಡನೆ ಭರತನ ಸಮಾಗಮ ; ಚತುರ್ದಶೀ, ಪೌರ್ಣಿಮಾ ಮತ್ತು ಪ್ರತಿಪತ್ತುಗಳಲ್ಲಿ ಚಿತ್ರಕೂಟದಲ್ಲಿಯೇ ಭರತನ ನಿವಾಸ; ವೈಶಾಖ ಬಹುಳ ದ್ವಿತೀಯೆಯಂದು ಭರತನು ಅಯೋಧ್ಯೆಗೆ ಹಿಂದಿರುಗಿದ್ದು ; ಚತುರ್ಥಿ ಯಂದು ಅಯೋಧ್ಯಾಪ್ರವೇಶ ; ಹೀಗೆ ಅರ್ಧಮಾಸವು ಕಳೆಯಲು ವೈಶಾಖ ಬಹುಳ ಪಂಚಮಿಯಂದು ಶ್ರೀರಾಮನು ಚಿತ್ರಕೂಟದಿಂದ ನಿರ್ಗಮಿಸಿದುದು ಮತ್ತು ಅತ್ರ್ಯಾಶ್ರಮ ಪ್ರವೇಶ ; ಆಶ್ರಮಮಂಡಲವಾಸ ದೊಡನೆ ಹತ್ತೂವರೆ ವರ್ಷಗಳು ಕಳೆದನಂತರ ಉಳಿದ ಕಾಲವನ್ನು ಪಂಚವಟಿಯಲ್ಲಿ ಕಳೆದುದು ; ಒಟ್ಟು ಹದಿಮೂರು ವರ್ಷಗಳು ಕಳೆಯಲು ಹದಿನಾಲ್ಕನೆಯ ವರ್ಷ ಚೈತ್ರ ಮಾಸದಲ್ಲಿ ಸೀತಾಪಹರಣ ; ವೈಶಾಖದಲ್ಲಿ ಸುಗ್ರೀವದರ್ಶನ ; ಆಷಾಢದಲ್ಲಿ ವಾಲಿವಧೆ ; ಆಶ್ವಯುಜದಲ್ಲಿ ಸೈನ್ಯೋದ್ಯೋಗ ; ಫಾಲ್ಗುಣದಲ್ಲಿ ಪ್ರಾಯೋಪ ವೇಶ ; ಫಾಲ್ಗುನ ಶುದ್ಧ ಚತುರ್ದಶಿಯಲ್ಲಿ ಲಂಕಾದಹನ ; ಫಾಲ್ಗುನ ಬಹುಳ ಅಮಾವಾಸ್ಯೆಯಲ್ಲಿ ರಾವಣನವಧೆ ; ಚೈತ್ರ ಶುದ್ಧ ಪಾಡ್ಯದ ದಿವಸ ರಾವಣನ ದೇಹಸಂಸ್ಕಾರ ; ದ್ವಿತೀಯೆಯ ದಿವಸ ವಿಭೀಷಣಾಭಿಷೇಕ, ಸೀತಾಪ್ರಾಪ್ತಿ, ದೇವತಾಪ್ರಸ್ಥಾನ ; ತೃತೀಯೆಯ ದಿನ ಲಂಕೆಯಿಂದ ನಿರ್ಗಮನ ; ಚತುರ್ಥೀ ದಿವಸ ಕಿಷ್ಕಿಂಧೆಯಲ್ಲಿ ವಾಸ ; ಪಂಚಮಿಯ ದಿನ ಭರದ್ವಾಜಋಷಿಗಳ ಆಶ್ರಮದಲ್ಲಿ ವಾಸ ; ಷಷ್ಠೀ ಪುಷ್ಯನಕ್ಷತ್ರದಂದು ಶ್ರೀರಾಮನು ಸೀತಾ-ಲಕ್ಷ್ಮಣ ಸಹಿತನಾಗಿ ಅಯೋಧ್ಯೆಯನ್ನು ಪ್ರವೇಶಿಸುತ್ತಾನೆ.

ಪೂರ್ಣೇ ಚತುರ್ದಶೇ ವರ್ಷೇ ಪಞ್ಚಮ್ಯಾಂ ಲಕ್ಷ್ಮಣಾಗ್ರಜಃ ।
ಭರದ್ವಾಜಾಶ್ರಮಂ ಪ್ರಾಪ್ಯ ವವನ್ದೇ ನಿಯತೋ ಮುನಿಮ್ ॥

ಎಂಬುದರಿಂದ ಪಂಚಮಿಯಂದು ಶ್ರೀರಾಮನು ಭರದ್ವಾಜಾಶ್ರಮಕ್ಕೆ ಬಂದನೆಂಬುದು ಸ್ಪಷ್ಟವಾಗಿದೆ.

ಅವಿಘ್ನಂ ಪುಷ್ಯಯೋಗೇನ ಶ್ವೋ ರಾಮಂ ದ್ರಷ್ಟುಮರ್ಹಸಿ (೧೨೬-೫೪) ಎಂಬ ಹನುಮಂತನ ವಾಕ್ಯದಿಂದ ಪುಷ್ಯನಕ್ಷತ್ರದಲ್ಲಿ ಶ್ರೀರಾಮನು ಅಯೋಧ್ಯೆಗೆ ಹಿಂದಿರುಗಿದನೆಂಬುದೂ ಸ್ಪಷ್ಟವಾಗುತ್ತದೆ. ಆದರೆ ಈ ಪ್ರಕರಣದಲ್ಲಿ ಯಾವ ತಿಥಿ ಎಂಬುದನ್ನೂ ತಿಂಗಳು ಯಾವು ದೆಂಬುದನ್ನೂ ಹೇಳಿಲ್ಲ. ಶ್ರೀರಾಮನು ಚೈತ್ರಮಾಸದಲ್ಲಿ ಹೊರಟಿದ್ದರಿಂದ ಚೈತ್ರಮಾಸದಲ್ಲೇ ಹಿಂದಿರುಗಬೇಕು. ಆದರೆ ಚೈತ್ರ ಶುದ್ಧ ಪಂಚಮಿಯ ದಿವಸ ಯಾವುದೇ ಕಾರಣದಿಂದಲೂ ಪುಷ್ಯನಕ್ಷತ್ರವು ಬರುವುದಿಲ್ಲ. ವೈಶಾಖ ಮಾಸದ ಶುಕ್ಲಪಕ್ಷದಲ್ಲಿ ಮಾತ್ರವೇ ಪಂಚಮಿಯ ದಿವಸ ಪುಷ್ಯನಕ್ಷತ್ರವು ಬರುತ್ತದೆ.

ಶ್ರೀರಾಮನು ಕಾಡಿಗೆ ಹೊರಟ ಪ್ರಕರಣದಲ್ಲಿ–**ಚೈತ್ರಃ ಶ್ರೀಮಾನಯಂ ಮಾಸಃ** (ಅಯೋಧ್ಯಾ-ಸರ್ಗ ೩ ಶ್ಲೋಕ-೪) ಎಂದು ಹೇಳಿರುವುದರಿಂದಲೂ ನಾಲ್ಕನೆಯ ಸರ್ಗದಲ್ಲಿ–**ಶ್ವ ಏವ ಪುಷ್ಯೋ ಭವಿತಾ** ಎಂದು ದಶರಥನು ಹೇಳಿರುವುದರಿಂದಲೂ ಈ ಪ್ರಕರಣದಲ್ಲಿ ತಿಥಿಯನ್ನು ಹೇಳದಿದ್ದರೂ ಚೈತ್ರ ಮಾಸದಲ್ಲಿ ಪುಷ್ಯನಕ್ಷತ್ರವು ಸಾಮಾನ್ಯವಾಗಿ ಶುದ್ಧದಶಮಿಯ ದಿವಸ ಬರುವುದರಿಂದ ಅಭಿಷೇಕಕ್ಕೆ ದಿನವನ್ನು ಗೊತ್ತುಪಡಿಸಿದ್ದ ಚೈತ್ರ ಶುದ್ಧ ದಶಮಿಯ ದಿವಸ ಶ್ರೀರಾಮನು ಅಯೋಧ್ಯೆಯಿಂದ ಹೊರಟನೆಂದು ಹೇಳಬಹುದಾಗಿದೆ.

ಆದರೆ ದಶಮಿಯ ದಿವಸ ಹೊರಟು ಪಂಚಮಿಯಂದು ಹೇಗೆ ಹಿಂದಿ ರುಗಿದನು?–ಎಂಬುದಕ್ಕೆ ಹೀಗೆ ಸಮಾಧಾನ ಹೇಳಬಹುದಾಗಿದೆ : ಶ್ರೀರಾಮನು ಪಂಚಮಿಯಂದು ಭರದ್ವಾಜರ ಆಶ್ರಮಕ್ಕೆ ಬರುತ್ತಾನೆ. ವನ ವಾಸದ ಅವಧಿಯು ಇನ್ನೂ ನಾಲ್ಕು ದಿವಸಗಳು ಉಳಿದಿದ್ದುದರಿಂದ ಚೈತ್ರ ಶುದ್ಧ ದಶಮೀ ಪುಷ್ಯನಕ್ಷತ್ರದಂದು ಅಯೋಧ್ಯೆಗೆ ಹಿಂದಿರುಗುತ್ತಾನೆ.

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯ ಶ್ರೀಮಜ್ಜಗದ್ಗುರು ಶಂಕರಾಚಾರ್ಯ
ಶ್ರೀಮದ್ರಾಮಚಂದ್ರಾಪುರಮಠಸ್ಥ

ಶ್ರೀಮದ್ರಾಘವೇಂದ್ರಭಾರತೀ ಶ್ರೀಸ್ವಾಮಿಭಿಃ

ಅಸ್ಮದತ್ಯಂತ ಪ್ರಿಯಶಿಷ್ಯ ಭಾರತ ದರ್ಶನ ಸಂಪಾದಕ–ಶ್ರೀಯುತ ಕೇಶವ ಸುಬ್ರಹ್ಮಣ್ಯ ಕೌಶಿಕರು, ತ್ಯಾಗರಾಜನಗರ ಬೆಂಗಳೂರು–ಇವರಿಗೆ

॥ ಶ್ರೀಮನ್ನಾರಾಯಣಸ್ಮರಣಪುರಸ್ಸರಂ ಸಂದಿಷ್ಟೋಽಯಂ ಸಂದೇಶಃ ॥

ಅದಾಗಿ-ಶ್ರೀ ಸವಾರಿಯು ಆರಾಧ್ಯ ಶ್ರೀ ಸೀತಾ-ರಾಮಚಂದ್ರಾದಿ, ದೇವತಾ ದಿವ್ಯಸನ್ನಿಧಿಯಲ್ಲಿ ಸಮಸ್ತ ಜನತೆಯ ಯೋಗ-ಕ್ಷೇಮಗಳನ್ನು ಸಂಪ್ರಾರ್ಥಿಸುತ್ತಾ ಸದ್ಯ ಈ ಮುಕ್ಕಾಮಿನಲ್ಲಿ ಕ್ಷೇಮದಿಂದ ವಸತಿ ಮಾಡಿದೆ.

ಶ್ರೀಮದ್ರಾಮಾಯಣದ ಮೂಲಶ್ಲೋಕಗಳನ್ನೂ ಇದರ ಕನ್ನಡಾನು ವಾದಗಳನ್ನೂ ಸಂಪುಟ-ಸಂಪುಟವಾಗಿ ಪ್ರಕಟಿಸಲು ತೊಡಗಿ, ಒಂಬತ್ತನೇ

ಸಂಪುಟವನ್ನು ಸದ್ಯವೇ ಪ್ರಕಾಶಿಸಲು ನಿಶ್ಚೈಸಿ, ಆಶೀರ್ವಾದ ಬಯಸಿದ್ದನ್ನು ತಿಳಿದು ಸಂತೋಷವಾಯಿತು.

ಈ ಒಂಬತ್ತನೇ ಸಂಪುಟದಲ್ಲಿಯೂ ಅನೇಕ ವಿಶೇಷ ವಿಷಯಗಳಿದ್ದು ಆದಿತ್ಯಹೃದಯವು ಮಹತ್ತ್ವಪೂರ್ಣ ಸ್ತೋತ್ರವಾಗಿದೆ. ಇದನ್ನು ಪಠಿಸಿ ಕಷ್ಟನಿವಾರಣೆ, ಇಷ್ಟಾರ್ಥಸಿದ್ಧಿ ಹೊಂದಬಹುದು. ಶ್ರೀರಾಮನು ಸೀತಾದೇವಿಯ ವಿಷಯದಲ್ಲಿ ಅನುಪಮವಾದ ಪ್ರೀತಿ, ಕರುಣೆಗಳುಳ್ಳವನಾಗಿದ್ದರೂ ನಿಷ್ಠುರವಾಗಿ ಮಾತನಾಡಿ, ಅಗ್ನಿಪ್ರವೇಶಕ್ಕೆ ಅವಕಾಶ ಮಾಡಿಕೊಟ್ಟನೆಂಬುದು ಸುಲಭವಾಗಿ ತಿಳಿಯಲಾರದ ಸಮಸ್ಯೆ. ಕೇವಲ ಲೋಕಾಪವಾದಕ್ಕೆ ಹೀಗೆ ಮಾಡಿದನೇ? ಹಿಂದೆ ಲಕ್ಷ್ಮಣನನ್ನು ಸೀತಾದೇವಿ ನಿಂದಿಸಿದುದಕ್ಕೆ ಕೊಟ್ಟ ಶಿಕ್ಷೆಯೇ?—ಇಂತಹ ಹಲವು ಜಿಜ್ಞಾಸೆಗಳೂ ಈ ಸಂಪುಟದಲ್ಲಿ ಅಡಕವಾಗಿವೆ.

ಶ್ರೀರಾಮಪಟ್ಟಾಭಿಷೇಕದ ವರ್ಣನೆಯಿಂದ ಕೂಡಿದ ಈ ಸಂಪುಟದ ಬಿಡುಗಡೆಯ ಸಂದರ್ಭದಲ್ಲಿ ನವಾಹ ಶ್ರೀಮದ್ರಾಮಾಯಣಪ್ರವಚನ ಮತ್ತು ಶ್ರೀರಾಮಪಟ್ಟಾಭಿಷೇಕ ವಿನಿಯೋಗಗಳನ್ನು ವಿಧ್ಯುಕ್ತವಾಗಿ ನಡೆಸಲು ಉದ್ಯುಕ್ತರಾದುದು ಸಮಯೋಚಿತವೂ ಶ್ರೀರಾಮಾನುಗ್ರಹಕ್ಕೆ ಕಾರಣವೂ ಎಂದು ಭಾವಿಸಿದೆ.

ಈ ಕಾರ್ಯಕಲಾಪಗಳೆಲ್ಲಾ ಸರಾಗವಾಗಿ ಸಾಗಲೆಂದೂ ಮುಂದಿನ ಸಂಪುಟಗಳೂ ಇದರಂತೆ ಉತ್ತಮ ರೀತಿ ಶೀಘ್ರ ಮುದ್ರಣಗೊಂಡು ಎಲ್ಲರೂ ಪ್ರಯೋಜನ ಪಡೆಯುವಂತಾಗಲೆಂದೂ ಆಶಿಸಿ, ಸುವರ್ಣ ಮಂತ್ರಾಕ್ಷತೆಯಿತ್ತು ನಿಮಗೆಲ್ಲ ಪುರೋಭಿವೃದ್ಧಿ ಹಾರೈಸುತ್ತೇವೆ.

ಇತಿ ಶ್ರೀಮನ್ನಾರಾಯಣಸ್ಮೃತಯಃ

ಮಿತಿ :- ಶ್ರೀ ಶುಕ್ಲ ಸಂವತ್ಸರ, ಕಾರ್ತೀಕ ಶುಕ್ಲ ಚತುರ್ಥಿಯು
ಗುರುವಾರ ತಾ॥ 2.11.1989.

ಮುಕ್ಕಾಂ : ಶ್ರೀ ವಿದ್ಯಾಮಂದಿರ, ೨-ಎ, ಮೊದಲನೆ ಹಂತ, ಜೆ.ಪಿ. ರಸ್ತೆ,
ಗಿರಿನಗರ, ಬೆಂಗಳೂರು - 560 085.

ಶ್ರೀಮಹಾಗಣಪತಯೇ ನಮಃ   ಶ್ರೀಮಹಾಸರಸ್ವತ್ಯೈ ನಮಃ   ಶ್ರೀಸದ್ಗುರವೇ ನಮಃ

ನವಮಃ ಸಂಪುಟಃ

ಶ್ರೀಮದ್ವಾಲ್ಮೀಕಿರಾಮಾಯಣೇ ಯುದ್ಧಕಾಣ್ಡೇ

ತ್ರಿಸಪ್ತತಿತಮಃ ಸರ್ಗಃ

ತಪಃಸ್ವಾಧ್ಯಾಯನಿರತಂ ತಪಸ್ವೀ ವಾಗ್ವಿದಾಂ ವರಮ್ ।
ನಾರದಂ ಪರಿಪಪ್ರಚ್ಛ ವಾಲ್ಮೀಕಿರ್ಮುನಿಪುಙ್ಗವಮ್ ॥

ತತೋ ಹತಾನ್ರಾಕ್ಷಸಪುಂಗವಾಂಸ್ತಾ-
ನ್ದೇವಾನ್ತಕಾದಿತ್ರಿಶಿರೋಽತಿಕಾಯಾನ್ ।
ರಕ್ಷೋಗಣಾಸ್ತತ್ರ ಹತಾವಶಿಷ್ಟಾ-
ಸ್ತೇ ರಾವಣಾಯ ತ್ವರಿತಂ ಶಶಂಸುಃ ॥೧॥

ತತೋ ಹತಾಂಸ್ತಾನ್ಸಹಸಾ ನಿಶಮ್ಯ
ರಾಜಾ ಮಹಾಬಾಷ್ಪಪರಿಪ್ಲುತಾಕ್ಷಃ ।
ಪುತ್ರಕ್ಷಯಂ ಭ್ರಾತೃವಧಂ ಚ ಘೋರಂ
ವಿಚಿನ್ತ್ಯ ರಾಜಾ ವಿಪುಲಂ ಪ್ರದಧ್ಯೌ ॥೨॥

ತತಸ್ತು ರಾಜಾನಮುದೀಕ್ಷ್ಯ ದೀನಂ
ಶೋಕಾರ್ಣವೇ ಸಂಪರಿಪುಪ್ಲುವಾನಮ್ ।
ರಥರ್ಷಭೋ ರಾಕ್ಷಸರಾಜಸೂನು-
ಸ್ತಮಿನ್ದ್ರಜಿದ್ವಾಕ್ಯಮಿದಂ ಬಭಾಷೇ ॥೩॥

ನ ತಾತ ಮೋಹಂ ಪ್ರತಿಗನ್ತುಮರ್ಹಸಿ
ಯತ್ರೇನ್ದ್ರಜಿಜ್ಜೀವತಿ ರಾಕ್ಷಸೇನ್ದ್ರ ।
ನೇನ್ದ್ರಾರಿಬಾಣಾಭಿಹತೋ ಹಿ ಕಶ್ಚಿ-
ತ್ಪ್ರಾಣಾನ್ಸಮರ್ಥಃ ಸಮರೇಽಭಿಪಾತುಮ್ ॥೪॥

ಪಶ್ಯಾದ್ಯ ರಾಮಂ ಸಹ ಲಕ್ಷ್ಮಣೇನ
ಮದ್ಬಾಣನಿರ್ಭಿನ್ನವಿಕೀರ್ಣದೇಹಮ್ ।
ಗತಾಯುಷಂ ಭೂಮಿತಲೇ ಶಯಾನಂ
ಶಿತೈಃ ಶರೈರಾಚಿತಸರ್ವಗಾತ್ರಮ್ ॥೫॥

ಇಮಾಂ ಪ್ರತಿಜ್ಞಾಂ ಶೃಣು ಶಕ್ರಶತ್ರೋಃ
ಸುನಿಶ್ಚಿತಾಂ ಪೌರುಷದೈವಯುಕ್ತಾಮ್ ।
ಅದ್ಯೈವ ರಾಮಂ ಸಹ ಲಕ್ಷ್ಮಣೇನ
ಸಂತರ್ಪಯಿಷ್ಯಾಮಿ ಶರೈರಮೋಘೈಃ ॥೬॥

ಅದ್ಯೇನ್ದ್ರವೈವಸ್ವತವಿಷ್ಣುರುದ್ರ-
ಸಾಧ್ಯಾಶ್ವಿವೈಶ್ವಾನರಚನ್ದ್ರಸೂರ್ಯಾಃ ।
ದ್ರಕ್ಷ್ಯನ್ತು ಮೇ ವಿಕ್ರಮಮಪ್ರಮೇಯಂ
ವಿಷ್ಣೋರಿವೋಗ್ರಂ ಬಲಿಯಜ್ಞವಾಟೇ ॥೭॥

ಸ ಏವಮುಕ್ತ್ವಾ ತ್ರಿದಶೇನ್ದ್ರಶತ್ರು-
ರಾಪೃಚ್ಛ್ಯ ರಾಜಾನಮದೀನಸತ್ತ್ವಃ ।
ಸಮಾರುರೋಹಾನಿಲತುಲ್ಯವೇಗಂ
ರಥಂ ಖರಶ್ರೇಷ್ಠಸಮಾಧಿಯುಕ್ತಮ್ ॥೮॥

ತಮಾಸ್ಥಾಯ ಮಹಾತೇಜಾ ರಥಂ ಹರಿರಥೋಪಮಮ್ ।
ಜಗಾಮ ಸಹಸಾ ತತ್ರ ಯತ್ರ ಯುದ್ಧಮರಿಂದಮಃ ॥೯॥

ತಂ ಪ್ರಸ್ಥಿತಂ ಮಹಾತ್ಮಾನಮನುಜಗ್ಮುರ್ಮಹಾಬಲಾಃ ।
ಸಂಹರ್ಷಮಾಣಾ ಬಹವೋ ಧನುಷ್ಪ್ರವರಪಾಣಯಃ ॥೧೦॥

ಗಜಸ್ಕನ್ಧಗತಾಃ ಕೇಚಿತ್ಕೇಚಿತ್ಪ್ರವರವಾಜಿಭಿಃ ।
ವ್ಯಾಘ್ರವೃಶ್ಚಿಕಮಾರ್ಜಾರೈಃ ಖರೋಷ್ಟ್ರೈಶ್ಚ ಭುಜಂಗಮೈಃ ॥೧೧॥

ವರಾಹಶ್ವಾಪದೈಃ ಸಿಂಹೈರ್ಜಮ್ಬುಕೈಃ ಪರ್ವತೋಪಮೈಃ ।
ಶಶಹಂಸಮಯೂರೈಶ್ಚ ರಾಕ್ಷಸಾ ಭೀಮವಿಕ್ರಮಾಃ ॥೧೨॥

ಪ್ರಾಸಮುದ್ಗರನಿಸ್ತ್ರಿಂಶಪರಶ್ವಧಗದಾಧರಾಃ ।
ಭುಶುಣ್ಡೀಮುದ್ಗರಾಯಷ್ಟಿಶತಘ್ನೀಪರಿಘಾಯುಧಾಃ ॥೧೩॥

ಸಶಙ್ಖನಿನದೈಃ ಪೂರ್ಣೈರ್ಭೇರೀಣಾಂ ಚಾಪಿ ನಿಃಸ್ವನೈಃ ।
ಜಗಾಮ ತ್ರಿದಶೇನ್ದ್ರಾರಿಸ್ತೂಯಮಾನೋ ನಿಶಾಚರೈಃ ॥೧೪॥

ಸಶಙ್ಖಶಶಿವರ್ಣೇನ ಛತ್ರೇಣ ರಿಪುಸೂದನಃ ।
ರರಾಜ ಪ್ರತಿಪೂರ್ಣೇನ ನಭಶ್ಚನ್ದ್ರಮಸಾ ಯಥಾ ॥೧೫॥

ಅವೀಜ್ಯತ ತತೋ ವೀರೋ ಹೈಮೈರ್ಹೇಮವಿಭೂಷಿತೈಃ ।
ಚಾರುಚಾಮರಮುಖ್ಯೈಶ್ಚ ಮುಖ್ಯಃ ಸರ್ವಧನುಷ್ಮತಾಮ್ ॥೧೬॥

ಸ ತು ದೃಷ್ಟ್ವಾ ವಿನಿರ್ಯಾನ್ತಂ ಬಲೇನ ಮಹತಾ ವೃತಮ್ ।
ರಾಕ್ಷಸಾಧಿಪತಿಃ ಶ್ರೀಮನ್ರಾವಣಃ ಪುತ್ರಮಬ್ರವೀತ್ ॥೧೭॥

ತ್ವಮಪ್ರತಿರಥಃ ಪುತ್ರ ತ್ವಯಾ ವೈ ವಾಸವೋ ಜಿತಃ ।
ಕಿಂ ಪುನರ್ಮಾನುಷಂ ಧೃಷ್ಯಂ ನಿಹನಿಷ್ಯಸಿ ರಾಘವಮ್ ॥೧೮॥

ತಥೋಕ್ತೋ ರಾಕ್ಷಸೇನ್ದ್ರೇಣ ಪ್ರತ್ಯಗೃಹ್ಣಾನ್ಮಹಾಶಿಷಃ ।
ತತಸ್ತ್ವಿನ್ದ್ರಜಿತಾ ಲಙ್ಕಾ ಸೂರ್ಯಪ್ರತಿಮತೇಜಸಾ ।
ರರಾಜಾಪ್ರತಿವೀರೇಣ ದ್ಯೌರಿವಾರ್ಕೇಣ ಭಾಸ್ವತಾ ॥೧೯॥

ಸ ಸಂಪ್ರಾಪ್ಯ ಮಹಾತೇಜಾ ಯುದ್ಧಭೂಮಿಮರಿಂದಮಃ ।
ಸ್ಥಾಪಯಾಮಾಸ ರಕ್ಷಾಂಸಿ ರಥಂ ಪ್ರತಿ ಸಮನ್ತತಃ ॥೨೦॥

ತತಸ್ತು ಹುತಭೋಕ್ತಾರಂ ಹುತಭುಕ್ಸದೃಶಪ್ರಭಃ ।
ಜುಹಾವ ರಾಕ್ಷಸಶ್ರೇಷ್ಠೋ ಮನ್ತ್ರವದ್ವಿಧಿವತ್ತದಾ ॥೨೧॥

ಸ ಹವಿರ್ಲಾಜಸಂಸ್ಕಾರೈಃ ಮಾಲ್ಯಗನ್ಧಪುರಸ್ಕೃತೈಃ ।
ಜುಹುವೇ ಪಾವಕಂ ದೀಪ್ತಂ ರಾಕ್ಷಸೇನ್ದ್ರಃ ಪ್ರತಾಪವಾನ್ ॥೨೨॥

ಶಸ್ತ್ರಾಣಿ ಶರಪತ್ರಾಣಿ ಸಮಿಧೋಽಥ ವಿಭೀತಕಾಃ ।
ಲೋಹಿತಾನಿ ಚ ವಾಸಾಂಸಿ ಸ್ರುವಂ ಕಾರ್ಷ್ಣಾಯಸಂ ತಥಾ ॥೨೩॥

ಸ ತತ್ರಾಗ್ನಿಂ ಸಮಾಸ್ತೀರ್ಯ ಶರಪತ್ರೈಃ ಸತೋಮರೈಃ ।
ಛಾಗಸ್ಯ ಕೃಷ್ಣವರ್ಣಸ್ಯ ಗಲಂ ಜಗ್ರಾಹ ಜೀವತಃ ॥೨೪॥

ಸಕೃದೇವ ಸಮಿದ್ಧಸ್ಯ ವಿಧೂಮಸ್ಯ ಮಹಾರ್ಚಿಷಃ ।
ಬಭೂವುಸ್ತಾನಿ ಲಿಙ್ಗಾನಿ ವಿಜಯಂ ಯಾನ್ಯದರ್ಶಯನ್ ॥೨೫॥

ಪ್ರದಕ್ಷಿಣಾವರ್ತಶಿಖಸ್ತಪ್ತಕಾಞ್ಚನಸಂನಿಭಃ ।
ಹವಿಸ್ತತ್ಪ್ರತಿಜಗ್ರಾಹ ಪಾವಕಃ ಸ್ವಯಮುತ್ಥಿತಃ ॥೨೬॥

ಸೋऽಸ್ತ್ರಮಾಹಾರಯಾಮಾಸ ಬ್ರಾಹ್ಮಮಿನ್ದ್ರರಿಪುಸ್ತದಾ ।
ಧನುಶ್ಚಾತ್ಮರಥಂ ಚೈವ ಸರ್ವಂ ತತ್ರಾಭ್ಯಮನ್ತ್ರಯತ್ ॥೨೭॥

ತಸ್ಮಿನ್ನಾಹೂಯಮಾನೇऽಸ್ತ್ರೇ ಹೂಯಮಾನೇ ಚ ಪಾವಕೇ ।
ಸಾರ್ಕಗ್ರಹೇನ್ದುನಕ್ಷತ್ರಂ ವಿತತ್ರಾಸ ನಭಃಸ್ಥಲಮ್ ॥೨೮॥

ಸ ಪಾವಕಂ ಪಾವಕದೀಪ್ತತೇಜಾ
ಹುತ್ವಾ ಮಹೇನ್ದ್ರಪ್ರತಿಮಪ್ರಭಾವಃ ।
ಸಚಾಪಬಾಣಾಸಿರಥಾಶ್ವಸೂತಃ
ಖೇऽನ್ತರ್ದಧೇऽತ್ಮಾನಮಚಿನ್ತ್ಯರೂಪಃ ॥೨೯॥

ತತೋ ಹಯಾರಥಾಕೀರ್ಣಂ ಪತಾಕಾಧ್ವಜಶೋಭಿತಮ್ ।
ನಿರ್ಯಯೌ ರಾಕ್ಷಸಬಲಂ ನರ್ದಮಾನಂ ಯುಯುತ್ಸಯಾ ॥೩೦॥

ತೇ ಶರೈರ್ಬಹುಭಿಶ್ಚಿತ್ರೈಸ್ತೀಕ್ಷ್ಣವೇಗೈರಲಂಕೃತೈಃ ।
ತೋಮರೈರಂಕುಶೈಶ್ಚಾಪಿ ವಾನರಾಞ್ಜಘ್ನುರಾಹವೇ ॥೩೧॥

ರಾವಣಿಸ್ತು ತತಃ ಕ್ರುದ್ಧಸ್ತಾನ್ನಿರೀಕ್ಷ್ಯ ನಿಶಾಚರಾನ್ ।
ಹೃಷ್ಟಾ ಭವನ್ತೋ ಯುಧ್ಯನ್ತು ವಾನರಾಣಾಂ ಜಿಘಾಂಸಯಾ ॥೩೨॥

ತತಸ್ತೇ ರಾಕ್ಷಸಾಃ ಸರ್ವೇ ನರ್ದನ್ತೋ ಜಯಕಾಂಕ್ಷಿಣಃ ।
ಅಭ್ಯವರ್ಷಂಸ್ತತೋ ಘೋರಾನ್ವಾನರಾನ್ ಶರವೃಷ್ಟಿಭಿಃ ॥೩೩॥

ಸ ತು ನಾಲೀಕನಾರಾಚೈರ್ಗದಾಭಿರ್ಮುಸಲೈರಪಿ ।
ರಕ್ಷೋಭಿಃ ಸಂವೃತಃ ಸಂಖ್ಯೇ ವಾನರಾನ್ವಿಚಕರ್ತ ಹ ॥೩೪॥

ತೇ ವಧ್ಯಮಾನಾಃ ಸಮರೇ ವಾನರಾಃ ಪಾದಪಾಯುಧಾಃ ।
ಅಭ್ಯವರ್ಷನ್ತ ಸಹಸಾ ರಾವಣಿಂ ಶೈಲಪಾದಪೈಃ ॥೩೫॥

ಇನ್ದ್ರಜಿತ್ತು ತತಃ ಕ್ರುದ್ಧೋ ಮಹಾತೇಜಾ ಮಹಾಬಲಃ ।
ವಾನರಾಣಾಂ ಶರೀರಾಣಿ ವ್ಯಧಮದ್ರಾವಣಾತ್ಮಜಃ ॥೩೬॥

ಶರೇಣೈಕೇನ ಚ ಹರೀನ್ನವ ಪಂಚ ಚ ಸಪ್ತ ಚ ।
ಚಿಚ್ಛೇದ ಸಮರೇ ಕ್ರುದ್ಧೋ ರಾಕ್ಷಸಾನ್ಸಂಪ್ರಹರ್ಷಯನ್ ॥೩೭॥

ಸ ಶರೈಃ ಸೂರ್ಯಸಂಕಾಶೈಃ ಶಾತಕುಮ್ಭವಿಭೂಷಿತೈಃ ।
ವಾನರಾನ್ಸಮರೇ ವೀರಃ ಪ್ರಮಮಾಥ ಸುದುರ್ಜಯಃ ॥೩೮॥

ತೇ ಭಿನ್ನಗಾತ್ರಾಃ ಸಮರೇ ವಾನರಾಃ ಶರಪೀಡಿತಾಃ ।
ಪೇತುರ್ಮಥಿತಸಂಕಲ್ಪಾಃ ಸುರೈರಿವ ಮಹಾಸುರಾಃ ॥೩೯॥

ತಂ ತಪನ್ತಮಿವಾದಿತ್ಯಂ ಘೋರೈರ್ಬಾಣಗಭಸ್ತಿಭಿಃ ।
ಅಭ್ಯಧಾವನ್ತ ಸಂಕ್ರುದ್ಧಾಃ ಸಂಯುಗೇ ವಾನರರ್ಷಭಾಃ ॥೪೦॥

ತತಸ್ತು ವಾನರಾಃ ಸರ್ವೇ ಭಿನ್ನದೇಹಾ ವಿಚೇತಸಃ ।
ವ್ಯಥಿತಾ ವಿದ್ರವನ್ತಿ ಸ್ಮ ರುಧಿರೇಣ ಸಮುಕ್ಷಿತಾಃ ॥೪೧॥

ರಾಮಸ್ಯಾರ್ಥೇ ಪರಾಕ್ರಮ್ಯ ವಾನರಾಸ್ತ್ಯಕ್ತಜೀವಿತಾಃ ।
ನರ್ದನ್ತಸ್ತೇಽನಿವೃತ್ತಾಸ್ತು ಸಮರೇ ಸಶಿಲಾಯುಧಾಃ ॥೪೨॥

ತೇ ದ್ರುಮೈಃ ಪರ್ವತಾಗ್ರೈಶ್ಚ ಶಿಲಾಭಿಶ್ಚ ಪ್ಲವಂಗಮಾಃ ।
ಅಭ್ಯವರ್ಷನ್ತ ಸಮರೇ ರಾವಣಿಂ ಪರ್ಯವಸ್ಥಿತಾಃ ॥೪೩॥

ತದ್ದ್ರುಮಾಣಾಂ ಶಿಲಾನಾಂ ಚ ವರ್ಷಂ ಪ್ರಾಣಹರಂ ಮಹತ್ ।
ವ್ಯಪೋಹತ ಮಹಾತೇಜಾ ರಾವಣಿಃ ಸಮಿತಿಂಜಯಃ ॥೪೪॥

ತತಃ ಪಾವಕಸಂಕಾಶೈಃ ಶರೈರಾಶೀವಿಷೋಪಮೈಃ ।
ವಾನರಾಣಾಮನೀಕಾನಿ ಬಿಭೇದ ಸಮರೇ ಪ್ರಭುಃ ॥೪೫॥

ಅಷ್ಟಾದಶಶರೈಸ್ತೀಕ್ಷ್ಣೈಃ ಸ ವಿಧ್ವಾ ಗನ್ಧಮಾದನಮ್ ।
ವಿವ್ಯಾಧ ನವಭಿಶ್ಚೈವ ನಲಂ ದೂರಾದವಸ್ಥಿತಮ್ ॥೪೬॥

ಸಪ್ತಭಿಸ್ತು ಮಹಾವೀರ್ಯಃ ಮೈನ್ದಂ ಮರ್ಮವಿದಾರಣೈಃ ।
ಪಞ್ಚಭಿರ್ವಿಶಿಖೈಶ್ಚೈವ ಗಜಂ ವಿವ್ಯಾಧ ಸಂಯುಗೇ ॥೪೭॥

ಜಾಮ್ಬವನ್ತಂ ತು ದಶಭಿಃ ನೀಲಂ ತ್ರಿಂಶದ್ಭಿರೇವ ಚ ।
ಸುಗ್ರೀವಮೃಷಭಂ ಚೈವ ಸೋಽಙ್ಗದಂ ದ್ವಿವಿದಂ ತಥಾ ।
ಘೋರೈರ್ದತ್ತವರೈಸ್ತೀಕ್ಷ್ಣೈಃ ನಿಷ್ಪ್ರಾಣಾನಕರೋತ್ತದಾ ॥೪೮॥

ಅನ್ಯಾನಪಿ ತಥಾ ಮುಖ್ಯಾನ್ವಾನರಾನ್ಬಹುಭಿಃ ಶರೈಃ ।
ಅರ್ದಯಾಮಾಸ ಸಂಕ್ರುದ್ಧಃ ಕಾಲಾಗ್ನಿರಿವ ಮೂರ್ಛಿತಃ ॥೪೯॥

ಸ ಶರೈಃ ಸೂರ್ಯಸಂಕಾಶೈಃ ಸುಮುಕ್ತೈಃ ಶೀಘ್ರಗಾಮಿಭಿಃ ।
ವಾನರಾಣಾಮನೀಕಾನಿ ನಿರ್ಮಮನ್ಥ ಮಹಾರಣೇ ॥೫೦॥

ಆಕುಲಾಂ ವಾನರೀಂ ಸೇನಾಂ ಶರಜಾಲೇನ ಪೀಡಿತಾಮ್ ।
ಹೃಷ್ಟಃ ಸ ಪರಯಾ ಪ್ರೀತ್ಯಾ ದದರ್ಶ ಕ್ಷತಜೋಕ್ಷಿತಾಮ್ ॥೫೧॥

ಪುನರೇವ ಮಹಾತೇಜಾ ರಾಕ್ಷಸೇನ್ದ್ರಾತ್ಮಜೋ ಬಲೀ ।
ಸಂಸೃಜ್ಯ ಬಾಣವರ್ಷಂ ಚ ಶಸ್ತ್ರವರ್ಷಂ ಚ ದಾರುಣಮ್ ॥೫೨॥

ಮಮರ್ದ ವಾನರಾನೀಕಂ ಇನ್ದ್ರಜಿತ್ತ್ವರಿತೋ ಬಲೀ ॥೫೩॥

ಸ್ವಸೈನ್ಯಮುತ್ಸೃಜ್ಯ ಸಮೇತ್ಯ ತೂರ್ಣಂ
ಮಹಾರಣೇ ವಾನರವಾಹಿನೀಷು ।
ಅದೃಶ್ಯಮಾನಃ ಶರಜಾಲಮುಗ್ರಂ
ವವರ್ಷ ನೀಲಾಮ್ಬುಧರೋ ಯಥಾಮ್ಬು ॥೫೪॥

ತೇ ಶಕ್ರಜಿದ್ಬಾಣವಿಶೀರ್ಣದೇಹಾ
ಮಾಯಾಹತಾ ವಿಸ್ವರಮುನ್ನದನ್ತಃ ।
ರಣೇ ನಿಪೇತುರ್ಹರಯೋಽದ್ರಿಕಲ್ಪಾ
ಯಥೇನ್ದ್ರವಜ್ರಾಭಿಹತಾ ನಗೇನ್ದ್ರಾಃ ॥೫೫॥

ತೇ ಕೇವಲಂ ಸಂದದೃಶುಃ ಶಿತಾಗ್ರಾ-
ನ್ಬಾಣಾನ್ರಣೇ ವಾನರವಾಹಿನೀಷು ।
ಮಾಯಾನಿಗೂಢಂ ತು ಸುರೇನ್ದ್ರಶತ್ರುಂ
ನ ಚಾವೃತಂ ರಾಕ್ಷಸಮಭ್ಯಪಶ್ಯನ್ ॥೫೬॥

ತತಃ ಸ ರಕ್ಷೋಧಿಪತಿರ್ಮಹಾತ್ಮಾ
ಸರ್ವಾ ದಿಶೋ ಬಾಣಗಣೈಃ ಶಿತಾಗ್ರೈಃ ।
ಪ್ರಚ್ಛಾದಯಾಮಾಸ ರವಿಪ್ರಕಾಶೈ-
ರ್ವಿದಾರಯಾಮಾಸ ಚ ವಾನರೇನ್ದ್ರಾನ್ ॥೫೭॥

ಸ ಶೂಲನಿಸ್ತ್ರಿಂಶಪರಶ್ವಧಾನಿ
ವ್ಯಾವಿಧ್ಯ ದೀಪ್ತಾನಲಸಂನಿಭಾನಿ ।
ಸುವಿಸ್ಫುಲಿಂಗೋಜ್ಜ್ವಲಪಾವಕಾನಿ
ವವರ್ಷ ತೀವ್ರಂ ಪ್ಲವಗೇನ್ದ್ರಸೈನ್ಯೇ ॥೫೮॥

ತತೋ ಜ್ವಲಸಂಕಾಶೈಃ ಶಿತೈರ್ವಾನರಯೂಥಪಾಃ ।
ತಾಡಿತಾಃ ಶಕ್ರಜಿದ್ಬಾಣೈಃ ಪ್ರಫುಲ್ಲಾ ಇವ ಕಿಂಶುಕಾಃ ॥೫೯॥

ತೇಽನ್ಯೋನ್ಯಮಭಿಸರ್ಪನ್ತೋ ವಿನದನ್ತಶ್ಚ ವಿಸ್ವರಮ್ ।
ರಾಕ್ಷಸೇನ್ದ್ರಾಸ್ತ್ರನಿರ್ಭಿನ್ನಾ ನಿಪೇತುರ್ವಾನರರ್ಷಭಾಃ ॥೬೦॥

ಉದೀಕ್ಷಮಾಣಾ ಗಗನಂ ಕೇಚಿನ್ನೇತ್ರೇಷು ತಾಡಿತಾಃ ।
ಶರೈರ್ವಿವಿಶುರನ್ಯೋನ್ಯಂ ಪೇತುಶ್ಚ ಜಗತೀತಲೇ ॥೬೧॥

ಹನೂಮನ್ತಂ ಚ ಸುಗ್ರೀವಮಙ್ಗದಂ ಗನ್ಧಮಾದನಮ್ ।
ಜಾಮ್ಬವನ್ತಂ ಸುಷೇಣಂ ಚ ವೇಗದರ್ಶಿನಮೇವ ಚ ॥೬೨॥

ಮೈನ್ದಂ ಚ ದ್ವಿವಿದಂ ನೀಲಂ ಗವಾಕ್ಷಂ ಗಜಗೋಮುಖೌ ।
ಕೇಸರಿಂ ಹರಿಲೋಮಾನಂ ವಿದ್ಯುದ್ದಂಷ್ಟ್ರಂ ಚ ವಾನರಮ್ ॥೬೩॥

ಸೂರ್ಯಾನನಂ ಜ್ಯೋತಿಮುಖಂ ತಥಾ ದಧಿಮುಖಂ ಹರಿಮ್ ।
ಪಾವಕಾಕ್ಷಂ ನಲಂ ಚೈವ ಕುಮುದಂ ಚೈವ ವಾನರಮ್ ॥೬೪॥

ಪ್ರಾಸೈಃ ಶೂಲೈಃ ಶಿತೈರ್ಬಾಣೈರಿನ್ದ್ರಜಿನ್ಮನ್ತ್ರಸಂಹಿತೈಃ ।
ವಿವ್ಯಾಧ ಹರಿಶಾರ್ದೂಲಾನ್ಸರ್ವಾಂಸ್ತಾನ್ರಾಕ್ಷಸೋತ್ತಮಃ ॥೬೫॥

ಸ ವೈ ಗದಾಭಿರ್ಹರಿಯೂಥಮುಖ್ಯಾ-
ನ್ನಿರ್ಭಿದ್ಯ ಬಾಣೈಸ್ತಪನೀಯಪುಙ್ಖೈಃ ।
ವವರ್ಷ ರಾಮಂ ಶರವೃಷ್ಟಿಜಾಲೈಃ
ಸಲಕ್ಷ್ಮಣಂ ಭಾಸ್ಕರರಶ್ಮಿಕಲ್ಪೈಃ ॥೬೬॥

ಸ ಬಾಣವರ್ಷೈರಭಿವರ್ಷ್ಯಮಾಣೋ
ಧಾರಾನಿಪಾತಾನಿವ ತಾನಚಿನ್ತ್ಯ ।
ಸಮೀಕ್ಷಮಾಣಃ ಪರಮಾದ್ಭುತಶ್ರೀ
ರಾಮಸ್ತದಾ ಲಕ್ಷ್ಮಣಮಿತ್ಯುವಾಚ ॥೬೭॥

ಅಸೌ ಪುನರ್ಲಕ್ಷ್ಮಣ ರಾಕ್ಷಸೇನ್ದ್ರೋ
ಬ್ರಹ್ಮಾಸ್ತ್ರಮಾಶ್ರಿತ್ಯ ಸುರೇನ್ದ್ರಶತ್ರುಃ ।
ನಿಪಾತಯಿತ್ವಾ ಹರಿಸೈನ್ಯಮುಗ್ರ-
ಮಸ್ಮಾನ್ ಶರೈರರ್ದಯತಿ ಪ್ರಸಕ್ತಮ್ ॥೬೮॥

ಸ್ವಯಂಭುವಾ ದತ್ತವರೋ ಮಹಾತ್ಮಾ
ಖಮಾಸ್ಥಿತೋಽನ್ತರ್ಹಿತಭೀಮಕಾಯಃ ।
ಕಥಂ ನು ಶಕ್ಯೋ ಯುಧಿ ನಷ್ಟದೇಹೋ
ನಿಹನ್ತುಮದ್ಯೇನ್ದ್ರಜಿದುದ್ಯತಾಸ್ತ್ರಃ ॥೬೯॥

ಮನ್ಯೇ ಸ್ವಯಂಭೂರ್ಭಗವಾನಚಿನ್ತ್ಯೋ
ಯಸ್ಯೈತದಸ್ತ್ರಂ ಪ್ರಭವಶ್ಚ ಯೋಽಸ್ಯ ।

ಬಾಣಾವಪಾತಾಂಸ್ತ್ವಮಿಹಾದ್ಯ ಧೀಮ-
ನ್ಮಯಾ ಸಹಾವ್ಯಗ್ರಮನಾಃ ಸಹಸ್ವ ॥೨೦॥

ಪ್ರಚ್ಛಾದಯತ್ಯೇಷ ಹಿ ರಾಕ್ಷಸೇನ್ದ್ರಃ
ಸರ್ವಾ ದಿಶಃ ಸಾಯಕವೃಷ್ಟಿಜಾಲೈಃ ।
ಏತಚ್ಚ ಸರ್ವಂ ಪತಿತಾಗ್ರ್ಯಶೂರಂ
ನ ಭ್ರಾಜತೇ ವಾನರರಾಜಸೈನ್ಯಮ್ ॥೨೧॥

ಆವಾಂ ತು ದೃಷ್ಟ್ವಾ ಪತಿತೌ ವಿಸಂಜ್ಞೌ
ನಿವೃತ್ತಯುದ್ಧೌ ಗತರೋಷಹರ್ಷೌ ।
ಧ್ರುವಂ ಪ್ರವೇಕ್ಷ್ಯತ್ಯಮರಾರಿವಾಸ-
ಮಸೌ ಸಮಾದಾಯ ರಣಾಗ್ರ್ಯಲಕ್ಷ್ಮೀಮ್ ॥೨೨॥

ತತಸ್ತು ತಾವಿನ್ದ್ರಜಿದಸ್ತ್ರಜಾಲೈ-
ರ್ಬಭೂವತುಸ್ತತ್ರ ತಥಾ ವಿಶಸ್ತೌ ।
ಸ ಚಾಪಿ ತೌ ತತ್ರ ವಿಷಾದಯಿತ್ವಾ
ನನಾದ ಹರ್ಷಾದ್ಯುಧಿ ರಾಕ್ಷಸೇನ್ದ್ರಃ ॥೨೩॥

ಸ ತತ್ತದಾ ವಾನರಸೈನ್ಯಮೇವಂ
ರಾಮಂ ಚ ಸಂಖ್ಯೇ ಸಹ ಲಕ್ಷ್ಮಣೇನ ।
ವಿಷಾದಯಿತ್ವಾ ಸಹಸಾ ವಿವೇಶ
ಪುರೀಂ ದಶಗ್ರೀವಭುಜಾಭಿಗುಪ್ತಾಮ್ ।
ಸಂಸ್ತೂಯಮಾನಃ ಸ ತು ಯಾತುಧಾನೈಃ
ಪಿತ್ರೇ ಚ ಸರ್ವಂ ಹೃಷಿತೋಽಭ್ಯುವಾಚ ॥೨೪॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಯುದ್ಧಕಾಣ್ಡೇ ತ್ರಿಸಪ್ತತಿತಮಃ ಸರ್ಗಃ

ಚತುಃಸಪ್ತತಿತಮಃ ಸರ್ಗಃ

ತಯೋಸ್ತದಾಸಾದಿತಯೋ ರಣಾಗ್ರೇ
ಮುಮೋಹ ಸೈನ್ಯಂ ಹರಿಯೂಥಪಾನಾಮ್ ।
ಸುಗ್ರೀವನೀಲಾಙ್ಗದಜಾಮ್ಬವನ್ತೋ
ನ ಚಾಪಿ ಕಿಂಚಿತ್ಪ್ರತಿಪೇದಿರೇ ತೇ ॥೧॥

ತತೋ ವಿಷಣ್ಣಂ ಸಮವೇಕ್ಷ್ಯ ಸೈನ್ಯಂ
ವಿಭೀಷಣೋ ಬುದ್ಧಿಮತಾಂ ವರಿಷ್ಠಃ ।
ಉವಾಚ ಶಾಖಾಮೃಗರಾಜವೀರಾ-
ನಾಶ್ವಾಸಯನ್ನಪ್ರತಿಮೈರ್ವಚೋಭಿಃ ॥೨॥

ಮಾ ಭೈಷ್ಟ ನಾಸ್ತ್ಯತ್ರ ವಿಷಾದಕಾಲೋ
ಯದಾರ್ಯಪುತ್ರೌ ಹ್ಯವಶೌ ವಿಷಣ್ಣೌ ।
ಸ್ವಯಂಭುವೋ ವಾಕ್ಯಮಥೋದ್ವಹನ್ತೌ
ಯತ್ಸಾದಿತಾವಿನ್ದ್ರಜಿದಸ್ತ್ರಜಾಲೈಃ ॥೩॥

ತಸ್ಮೈ ತು ದತ್ತಂ ಪರಮಾಸ್ತ್ರಮೇತ-
ತ್ಸ್ವಯಂಭುವಾ ಬ್ರಾಹ್ಮಮಮೋಘವೇಗಮ್ ।
ತನ್ಮಾನಯನ್ತೌ ಯುಧಿ ರಾಜಪುತ್ರೌ
ನಿಪಾತಿತೌ ಕೋಽತ್ರ ವಿಷಾದಕಾಲಃ ॥೪॥

ಬ್ರಾಹ್ಮಮಸ್ತ್ರಂ ತತೋ ಧೀಮಾನ್ಮಾನಯಿತ್ವಾ ತು ಮಾರುತಿಃ ।
ವಿಭೀಷಣವಚಃ ಶ್ರುತ್ವಾ ಹನೂಮಾಂಸ್ತಮಥಾಬ್ರವೀತ್ ॥೫॥

ಏತಸ್ಮಿನ್ನಿಹತೇ ಸೈನ್ಯೇ ವಾನರಾಣಾಂ ತರಸ್ವಿನಾಮ್ ।
ಯೋ ಯೋ ಧಾರಯತೇ ಪ್ರಾಣಾಂಸ್ತಂ ತಮಾಶ್ವಾಸಯಾವಹೈ ॥೬॥

ತಾವುಭೌ ಯುಗಪದ್ವೀರೌ ಹನುಮದ್ರಾಕ್ಷಸೋತ್ತಮೌ ।
ಉಲ್ಕಾಹಸ್ತೌ ತದಾ ರಾತ್ರೌ ರಣಶೀರ್ಷೇ ವಿಚೇರತುಃ ॥೭॥

ಭಿನ್ನಲಾಙ್ಗೂಲಹಸ್ತೋರುಪಾದಾಙ್ಗುಲಿಶಿರೋಧರೈಃ ।
ಸ್ರವದ್ಭಿಃ ಕ್ಷತಜಂ ಗಾತ್ರೈಃ ಪ್ರಸ್ರವದ್ಭಿಸ್ತತಸ್ತತಃ ॥೮॥

ಪತಿತೈಃ ಪರ್ವತಾಕಾರೈರ್ವಾನರೈರಭಿಸಂಕುಲಾಮ್ ।
ಶಸ್ತ್ರೈಶ್ಚ ಪತಿತೈರ್ದೀಪ್ತೈರ್ದದೃಶಾತೇ ವಸುಂಧರಾಮ್ ॥೯॥

ಸುಗ್ರೀವಮಙ್ಗದಂ ನೀಲಂ ಶರಭಂ ಗನ್ಧಮಾದನಮ್ ।
ಗವಾಕ್ಷಂ ಚ ಸುಷೇಣಂ ಚ ವೇಗದರ್ಶಿನಮಾಹುಕಮ್ ॥೧೦॥

ಮೈನ್ದಂ ನಲಂ ಜ್ಯೋತಿಮುಖಂ ದ್ವಿವಿದಂ ಪನಸಂ ತಥಾ ।
ವಿಭೀಷಣೋ ಹನೂಮಾಂಶ್ಚ ದದೃಶಾತೇ ಹತಾನ್ರಣೇ ॥೧೧॥

ಸಪ್ತಷಷ್ಟಿರ್ಹತಾಃ ಕೋಟ್ಯೋ ವಾನರಾಣಾಂ ತರಸ್ವಿನಾಮ್ ।
ಅಹ್ನಃ ಪಞ್ಚಮಶೇಷೇಣ ವಲ್ಲಭೇನ ಸ್ವಯಂಭುವಃ ॥೧೨॥

ಸಾಗರೌಘನಿಭಂ ಭೀಮಂ ದೃಷ್ಟ್ವಾ ಬಾಣಾರ್ದಿತಂ ಬಲಮ್ ।
ಮಾರ್ಗತೇ ಜಾಮ್ಬವನ್ತಂ ಸ್ಮ ಹನುಮಾನ್ಸವಿಭೀಷಣಃ ॥೧೩॥

ಸ್ವಭಾವಜರಯಾ ಯುಕ್ತಂ ವೃದ್ಧಂ ಶರಶತೈಶ್ಚಿತಮ್ ।
ಪ್ರಜಾಪತಿಸುತಂ ವೀರಂ ಶಾಮ್ಯನ್ತಮಿವ ಪಾವಕಮ್ ॥೧೪॥

ದೃಷ್ಟ್ವಾ ತಮುಪಸಂಗಮ್ಯ ಪೌಲಸ್ತ್ಯೋ ವಾಕ್ಯಮಬ್ರವೀತ್ ।
ಕಚ್ಚಿದಾರ್ಯ ಶರೈಸ್ತೀಕ್ಷ್ಣೈಃ ಪ್ರಾಣಾ ನ ಧ್ವಂಸಿತಾಸ್ತವ ॥೧೫॥

ವಿಭೀಷಣವಚಃ ಶ್ರುತ್ವಾ ಜಾಮ್ಬವಾನೃಕ್ಷಪುಂಗವಃ ।
ಕೃಚ್ಛ್ರಾದಭ್ಯುದ್ಗಿರನ್ವಾಕ್ಯಮಿದಂ ವಚನಮಬ್ರವೀತ್ ॥೧೬॥

ನೈರ್ಋತೇನ್ದ್ರ ಮಹಾವೀರ್ಯ ಸ್ವರೇಣ ತ್ವಾಭಿಲಕ್ಷಯೇ ।
ಪೀಡ್ಯಮಾನಃ ಶಿತೈರ್ಬಾಣೈರ್ನ ತ್ವಾಂ ಪಶ್ಯಾಮಿ ಚಕ್ಷುಷಾ ॥೧೭॥

ಅಞ್ಜನಾ ಸುಪ್ರಜಾ ಯೇನ ಮಾತರಿಶ್ವಾ ಚ ನೈರ್ಋತ ।
ಹನುಮಾನ್ವಾನರಶ್ರೇಷ್ಠಃ ಪ್ರಾಣಾನ್ಧಾರಯತೇ ಕ್ವಚಿತ್ ॥೧೮॥

ಶ್ರುತ್ವಾ ಜಾಮ್ಬವತೋ ವಾಕ್ಯಮುವಾಚೇದಂ ವಿಭೀಷಣಃ ।
ಆರ್ಯಪುತ್ರಾವತಿಕ್ರಮ್ಯ ಕಸ್ಮಾತ್ಪೃಚ್ಛಸಿ ಮಾರುತಿಮ್ ॥೧೯॥

ನೈವ ರಾಜನಿ ಸುಗ್ರೀವೇ ನಾಙ್ಗದೇ ನಾಪಿ ರಾಘವೇ ।
ಆರ್ಯ ಸಂದರ್ಶಿತಃ ಸ್ನೇಹೋ ಯಥಾ ವಾಯುಸುತೇ ಪರಃ ॥೨೦॥

ವಿಭೀಷಣವಚಃ ಶ್ರುತ್ವಾ ಜಾಮ್ಬವಾನ್ವಾಕ್ಯಮಬ್ರವೀತ್ ।
ಶೃಣು ನೈರ್ಋತಶಾರ್ದೂಲ ಯಸ್ಮಾತ್ಪೃಚ್ಛಾಮಿ ಮಾರುತಿಮ್ ॥೨೧॥

ತಸ್ಮಿನ್ ಜೀವತಿ ವೀರೇ ತು ಹತಮಪ್ಯಹತಂ ಬಲಮ್ ।
ಹನುಮತ್ಯುಜ್ಝಿತಪ್ರಾಣೇ ಜೀವನ್ತೋಽಪಿ ವಯಂ ಹತಾಃ ॥೨೨॥

ಧರತೇ ಮಾರುತಿಸ್ತಾತ ಮಾರುತಪ್ರತಿಮೋ ಯದಿ ।
ವೈಶ್ವಾನರಸಮೋ ವೀರ್ಯೇ ಜೀವಿತಾಶಾ ತತೋ ಭವೇತ್ ॥೨೩॥

ತತೋ ವೃದ್ಧಮುಪಾಗಮ್ಯ ನಿಯಮೇನಾಭ್ಯವಾದಯತ್ ।
ಗೃಹ್ಯ ಜಾಮ್ಬವತಃ ಪಾದೌ ಹನುಮಾನ್ಮಾರುತಾತ್ಮಜಃ ॥೨೪॥

ಶ್ರುತ್ವಾ ಹನುಮತೋ ವಾಕ್ಯಂ ತಥಾಪಿ ವ್ಯಥಿತೇನ್ದ್ರಿಯಃ ।
ಪುನರ್ಜಾತಮಿವಾತ್ಮಾನಂ ಮನ್ಯತೇ ಸ್ಮರ್ಕ್ಷಪುಂಗವಃ ॥೨೫॥

ತತೋಽಬ್ರವೀನ್ಮಹಾತೇಜಾ ಹನುಮನ್ತಂ ಸ ಜಾಮ್ಬವಾನ್ ।
ಆಗಚ್ಛ ಹರಿಶಾರ್ದೂಲ ವಾನರಾಂಸ್ತ್ರಾತುಮರ್ಹಸಿ ॥೨೬॥

ನಾನ್ಯೋ ವಿಕ್ರಮಪರ್ಯಾಪ್ತಸ್ತ್ವಮೇಷಾಂ ಪರಮಃ ಸಖಾ ।
ತ್ವತ್ಪರಾಕ್ರಮಕಾಲೋಽಯಂ ನಾನ್ಯಂ ಪಶ್ಯಾಮಿ ಕಂಚನ ॥೨೭॥

ಋಕ್ಷವಾನರವೀರಾಣಾಮನೀಕಾನಿ ಪ್ರಹರ್ಷಯ ।
ವಿಶಲ್ಯೌ ಕುರು ಚಾಪ್ಯೇತೌ ಸಾದಿತೌ ರಾಮಲಕ್ಷ್ಮಣೌ ॥೨೮॥

ಗತ್ವಾ ಪರಮಮಧ್ವಾನಮುಪರ್ಯುಪರಿ ಸಾಗರಮ್ ।
ಹಿಮವನ್ತಂ ನಗಶ್ರೇಷ್ಠಂ ಹನುಮನ್ಗನ್ತುಮರ್ಹಸಿ ॥೨೯॥

ತತಃ ಕಾಞ್ಚನಮತ್ಯುಚ್ಚಮೃಷಭಂ ಪರ್ವತೋತ್ತಮಮ್ ।
ಕೈಲಾಸಶಿಖರಂ ಚಾಪಿ ದ್ರಕ್ಷ್ಯಸ್ಯರಿನಿಷೂದನ ॥೩೦॥

ತಯೋಃ ಶಿಖರಯೋರ್ಮಧ್ಯೇ ಪ್ರದೀಪ್ತಮತುಲಪ್ರಭಮ್ ।
ಸರ್ವೌಷಧಿಯುತಂ ವೀರ ದ್ರಕ್ಷ್ಯಸ್ಯೋಷಧಿಪರ್ವತಮ್ ॥೩೧॥

ತಸ್ಯ ವಾನರಶಾರ್ದೂಲ ಚತಸ್ರೋ ಮೂರ್ಧ್ನಿ ಸಂಭವಾಃ ।
ದ್ರಕ್ಷ್ಯಸ್ಯೋಷಧಯೋ ದೀಪ್ತಾ ದೀಪಯನ್ತ್ಯೋ ದಿಶೋ ದಶ ॥೩೨॥

ಮೃತಸಂಜೀವನೀಂ ಚೈವ ವಿಶಲ್ಯಕರಣೀಮಪಿ ।
ಸಾವರ್ಣ್ಯಕರಣೀಂ ಚೈವ ಸಂಧಾನಕರಣೀಂ ತಥಾ ॥೩೩॥

ತಾಃ ಸರ್ವಾ ಹನುಮನ್ಗೃಹ್ಯ ಕ್ಷಿಪ್ರಮಾಗನ್ತುಮರ್ಹಸಿ ।
ಆಶ್ವಾಸಯ ಹರೀನ್ಪ್ರಾಣೈರ್ಯೋಜ್ಯ ಗನ್ಧವಹಾತ್ಮಜ ॥೩೪॥

ಶ್ರುತ್ವಾ ಜಾಮ್ಬವತೋ ವಾಕ್ಯಂ ಹನುಮಾನ್ಹರಿಪುಂಗವಃ ।
ಆಪೂರ್ಯತ ಬಲೋದ್ಧರ್ಷೈಸ್ತೋಯವೇಗೈರಿವಾರ್ಣವಃ ॥೩೫॥

ಸ ಪರ್ವತತಟಾಗ್ರಸ್ಥಃ ಪೀಡಯನ್ಪರ್ವತೋತ್ತಮಮ್ ।
ಹನುಮಾನ್ದೃಶ್ಯತೇ ವೀರೋ ದ್ವಿತೀಯ ಇವ ಪರ್ವತಃ ॥೩೬॥

ಹರಿಪಾದವಿನಿರ್ಭಗ್ನೋ ನಿಷಸಾದ ಸ ಪರ್ವತಃ ।
ನ ಶಶಾಕ ತದಾತ್ಮಾನಂ ಸೋಢುಂ ಭೃಶನಿಪೀಡಿತಃ ॥೩೭॥

ತಸ್ಯ ಪೇತುರ್ನಗಾ ಭೂಮೌ ಹರಿವೇಗಾಚ್ಚ ಜಜ್ವಲುಃ ।
ಶೃಙ್ಗಾಣಿ ಚ ವ್ಯಶೀರ್ಯನ್ತ ಪೀಡಿತಸ್ಯ ಹನೂಮತಾ ॥೩೮॥

ತಸ್ಮಿನ್ಸಂಪೀಡ್ಯಮಾನೇ ತು ಭಗ್ನದ್ರುಮಶಿಲಾತಲೇ ।
ನ ಶೇಕುರ್ವಾನರಾಃ ಸ್ಥಾತುಂ ಘೂರ್ಣಮಾನೇ ನಗೋತ್ತಮೇ ॥೩೯॥

ಸಾ ಘೂರ್ಣಿತಮಹಾದ್ವಾರಾ ಪ್ರಭಗ್ನಗೃಹಗೋಪುರಾ ।
ಲಙ್ಕಾ ತ್ರಾಸಾಕುಲಾ ರಾತ್ರೌ ಪ್ರನೃತ್ತೇವಾಭವತ್ತದಾ ॥೪೦॥

ಪೃಥಿವೀಧರಸಂಕಾಶೋ ನಿಪೀಡ್ಯ ಧರಣೀಧರಮ್ ।
ಪೃಥಿವೀಂ ಕ್ಷೋಭಯಾಮಾಸ ಸಾರ್ಣವಾಂ ಮಾರುತಾತ್ಮಜಃ ॥೪೧॥

ಆರುರೋಹ ತದಾ ತಸ್ಮಾದ್ಧರಿರ್ಮಲಯಪರ್ವತಮ್ ।
ಮೇರುಮನ್ದರಸಂಕಾಶಂ ನಾನಾಪ್ರಸ್ರವಣಾಕುಲಮ್ ॥೪೨॥

ನಾನಾದ್ರುಮಲತಾಕೀರ್ಣಂ ವಿಕಾಸಿಕಮಲೋತ್ಪಲಮ್ ।
ಸೇವಿತಂ ದೇವಗನ್ಧರ್ವೈಃ ಷಷ್ಟಿಯೋಜನಮುಚ್ಛ್ರಿತಮ್ ॥೪೩॥

ವಿದ್ಯಾಧರೈರ್ಮುನಿಗಣೈರಪ್ಸರೋಭಿರ್ನಿಷೇವಿತಮ್ ।
ನಾನಾಮೃಗಗಣಾಕೀರ್ಣಂ ಬಹುಕನ್ದರಶೋಭಿತಮ್ ॥೪೪॥

ಸರ್ವಾನಾಕುಲಯಂಸ್ತತ್ರ ಯಕ್ಷಗನ್ಧರ್ವಕಿನ್ನರಾನ್ ।
ಹನುಮಾನ್ಮೇಘಸಂಕಾಶೋ ಬುಬುಧೇ ಮಾರುತಾತ್ಮಜಃ ॥೪೫॥

ಪದ್ಭ್ಯಾಂ ತು ಶೈಲಮಾಪೀಡ್ಯ ಬಡಬಾಮುಖವನ್ಮುಖಮ್ ।
ವಿವೃತ್ಯೋಗ್ರಂ ನನಾದೋಚ್ಚೈಸ್ತ್ರಾಸಯನ್ನಿವ ರಾಕ್ಷಸಾನ್ ॥೪೬॥

ತಸ್ಯ ನಾನದ್ಯಮಾನಸ್ಯ ಶ್ರುತ್ವಾ ನಿನದಮದ್ಭುತಮ್ ।
ಲಙ್ಕಾಸ್ಥಾ ರಾಕ್ಷಸಾಃ ಸರ್ವೇ ನ ಶೇಕುಃ ಸ್ಪನ್ದಿತುಂ ಭಯಾತ್ ॥೪೭॥

ನಮಸ್ಕೃತ್ವಾಥ ರಾಮಾಯ ಮಾರುತಿರ್ಭೀಮವಿಕ್ರಮಃ ।
ರಾಘವಾರ್ಥೇ ಪರಂ ಕರ್ಮ ಸಮೀಹತ ಪರಂತಪಃ ॥೪೮॥

ಸ ಪುಚ್ಛಮುದ್ಯಮ್ಯ ಭುಜಂಗಕಲ್ಪಂ
ವಿನಮ್ಯ ಪೃಷ್ಠಂ ಶ್ರವಣೇ ನಿಕುಞ್ಚ್ಯ ।
ವಿವೃತ್ಯ ವಕ್ತ್ರಂ ಬಡಬಾಮುಖಾಭ-
ಮಾಪುಪ್ಲುವೇ ವ್ಯೋಮನಿ ಚಣ್ಡವೇಗಃ ॥೪೯॥

ಸ ವೃಕ್ಷಷಣ್ಡಾಂಸ್ತರಸಾ ಜಹಾರ
ಶೈಲಾನ್ ಶಿಲಾಃ ಪ್ರಾಕೃತವಾನರಾಂಶ್ಚ ।
ಬಾಹೂರುವೇಗೋದ್ಧತಸಂಪ್ರಣುನ್ನಾ-
ಸ್ತೇ ತೀಕ್ಷ್ಣವೇಗಾಃ ಸಲಿಲೇ ನಿಪೇತುಃ ॥೫೦॥

ಸ ತೌ ಪ್ರಸಾರ್ಯೋರಗಭೋಗಕಲ್ಪೌ
ಭುಜೌ ಭುಜಂಗಾರಿನಿಕಾಶವೀರ್ಯಃ ।
ಜಗಾಮ ಮೇರುಂ ನಗರಾಜಮಗ್ರ್ಯಂ
ದಿಶಃ ಪ್ರಕರ್ಷನ್ನಿವ ವಾಯುಸೂನುಃ ॥೫೧॥

ಸ ಸಾಗರಂ ಘೂರ್ಣಿತವೀಚಿಮಾಲಂ
ತದಮ್ಭಸಾ ಭ್ರಾಮಿತಸರ್ವಸತ್ತ್ವಮ್ ।
ಸಮೀಕ್ಷಮಾಣಃ ಸಹಸಾ ಜಗಾಮ್
ಚಕ್ರಂ ಯಥಾ ವಿಷ್ಣುಕರಾಗ್ರಮುಕ್ತಮ್ ॥೫೨॥

ಸ ಪರ್ವತಾನ್ವೃಕ್ಷಗಣಾನ್ಸರಾಂಸಿ
ನದೀಸ್ತಟಾಕಾನಿ ಪುರೋತ್ತಮಾನಿ ।
ಸ್ಫೀತಾಞ್ಜನಾನ್ತಾನಪಿ ಸಂಪ್ರವೀಕ್ಷ್ಯ
ಜಗಾಮ ವೇಗಾತ್ಪಿತೃತುಲ್ಯವೇಗಃ ॥೫೩॥

ಆದಿತ್ಯಪಥಮಾಶ್ರಿತ್ಯ ಜಗಾಮ ಸ ಗತಕ್ಲಮಃ ।
ಹನುಮಾಂಸ್ತ್ವರಿತೋ ವೀರಃ ಪಿತೃತುಲ್ಯಪರಾಕ್ರಮಃ ॥೫೪॥

ಜವೇನ ಮಹತಾ ಯುಕ್ತೋ ಮಾರುತಿರ್ಮಾರುತೋ ಯಥಾ ।
ಜಗಾಮ ಹರಿಶಾರ್ದೂಲೋ ದಿಶಃ ಶಬ್ದೇನ ಪೂರಯನ್ ॥೫೫॥

ಸ್ಮರನ್ ಜಾಮ್ಬವತೋ ವಾಕ್ಯಂ ಮಾರುತಿರ್ಭೀಮವಿಕ್ರಮಃ ।
ದದರ್ಶ ಸಹಸಾ ಚಾಪಿ ಹಿಮವನ್ತಂ ಮಹಾಕಪಿಃ ॥೫೬॥

ನಾನಾಪ್ರಸ್ರವಣೋಪೇತಂ ಬಹುಕನ್ದರನಿರ್ಝರಮ್ ।
ಶ್ವೇತಾಭ್ರಚಯಸಂಕಾಶೈಃ ಶಿಖರೈಶ್ಚಾರುದರ್ಶನೈಃ ।
ಶೋಭಿತಂ ವಿವಿಧೈರ್ವೃಕ್ಷೈರಗಮತ್ಪರ್ವತೋತ್ತಮಮ್ ॥೫೭॥

ಸ ತಂ ಸಮಾಸಾದ್ಯ ಮಹಾನಗೇನ್ದ್ರ -
ಮತಿಪ್ರವೃದ್ಧೋತ್ತಮಹೇಮಶೃಙ್ಗಮ್ ।
ದದರ್ಶ ಪುಣ್ಯಾನಿ ಮಹಾಶ್ರಮಾಣಿ
ಸುರರ್ಷಿಸಙ್ಘೋತ್ತಮಸೇವಿತಾನಿ ॥೫೮॥

ಸ ಬ್ರಹ್ಮಕೋಶಂ ರಜತಾಲಯಂ ಚ
ಶಕ್ರಾಲಯಂ ರುದ್ರಶರಪ್ರಮೋಕ್ಷಮ್ ।
ಹಯಾನನಂ ಬ್ರಹ್ಮಶಿರಶ್ಚ ದೀಪ್ತಂ
ದದರ್ಶ ವೈವಸ್ವತಕಿಙ್ಕರಾಂಶ್ಚ ॥೫೯॥

ವಹ್ನ್ಯಾಲಯಂ ವೈಶ್ರವಣಾಲಯಂ ಚ
ಸೂರ್ಯಪ್ರಭಂ ಸೂರ್ಯನಿಬನ್ಧನಂ ಚ ।
ಬ್ರಹ್ಮಾಸನಂ ಶಂಕರಕಾರ್ಮುಕಂ ಚ
ದದರ್ಶ ನಾಭಿಂ ಚ ವಸುಂಧರಾಯಾಃ ॥೬೦॥

ಕೈಲಾಸಮಗ್ರ್ಯಂ ಹಿಮವಚ್ಛಿಲಾಂ ಚ
ತಥರ್ಷಭಂ ಕಾಞ್ಚನಶೈಲಮಗ್ರ್ಯಮ್ ।
ಸಂದೀಪ್ತಸರ್ವೌಷಧಿಸಂಪ್ರದೀಪ್ತಂ
ದದರ್ಶ ಸರ್ವೌಷಧಿಪರ್ವತೇನ್ದ್ರಮ್ ॥೬೧॥

ಸ ತಂ ಸಮೀಕ್ಷ್ಯಾನಲರಶ್ಮಿದೀಪ್ತಂ
ವಿಸಿಷ್ಮಿಯೇ ವಾಸವದೂತಸೂನುಃ ।
ಆವೃತ್ಯ ತಂ ಚೌಷಧಿಪರ್ವತೇನ್ದ್ರಂ
ತತ್ರೌಷಧೀನಾಂ ವಿಚಯಂ ಚಕಾರ ॥೬೨॥

ಸ ಯೋಜನಸಹಸ್ರಾಣಿ ಸಮತೀತ್ಯ ಮಹಾಕಪಿಃ ।
ದಿವ್ಯೌಷಧಿವರಂ ಶೈಲಂ ವ್ಯಚರನ್ಮಾರುತಾತ್ಮಜಃ ॥೬೩॥

ಮಹೌಷಧ್ಯಸ್ತತಃ ಸರ್ವಾಸ್ತಸ್ಮಿನ್ಪರ್ವತಸತ್ತಮೇ ।
ವಿಜ್ಞಾಯಾರ್ಥಿನಮಾಯಾನ್ತಂ ತತೋ ಜಗ್ಮುರದರ್ಶನಮ್ ॥೬೪॥

ಸ ತಾ ಮಹಾತ್ಮಾ ಹನುಮಾನಪಶ್ಯಂ-
ಶ್ಚುಕೋಪ ಕೋಪಾಚ್ಚ ಭೃಶಂ ನನಾದ ।
ಅಮೃಷ್ಯಮಾಣೋಽಗ್ನಿನಿಕಾಶಚಕ್ಷು-
ರ್ಮಹೀಧರೇನ್ದ್ರಂ ತಮುವಾಚ ವಾಕ್ಯಮ್ ॥೬೫॥

ಕಿಮೇತದೇವಂ ಸುವಿನಿಶ್ಚಿತಂ ತೇ
ಯದ್ರಾಘವೇನಾಸಿ ಕೃತಾನುಕಮ್ಪಃ ।
ಪಶ್ಯಾದ್ಯ ಮದ್ಬಾಹುಬಲಾಭಿಭೂತೋ
ವಿಕೀರ್ಣಮಾತ್ಮಾನಮಥೋ ನಗೇನ್ದ್ರ ॥೬೬॥

ಸ ತಸ್ಯ ಶೃಙ್ಗಂ ಸನಗಂ ಸನಾಗಂ
ಸಕಾಞ್ಚನಂ ಧಾತುಸಹಸ್ರಜುಷ್ಟಮ್ ।
ವಿಕೀರ್ಣಕೂಟಜ್ವಲಿತಾಗ್ರಸಾನುಂ
ಪ್ರಗೃಹ್ಯ ವೇಗಾತ್ಸಹಸೋನ್ಮಮಾಥ ॥೬೭॥

ಸ ತಂ ಸಮುತ್ಪಾಟ್ಯ ಸಮುತ್ಪಪಾತ
ವಿತ್ರಾಸ್ಯ ಲೋಕಾನ್ಸಸುರಾಸುರೇನ್ದ್ರಾನ್ ।
ಸಂಸ್ತೂಯಮಾನಃ ಖಚರೈರನೇಕೈ-
ರ್ಜಗಾಮ ವೇಗಾದ್ಗರುಡೋಗ್ರವೇಗಃ ॥೬೮॥

ಸ ಭಾಸ್ಕರಾಧ್ವಾನಮನುಪ್ರಪನ್ನ-
ಸ್ತಂ ಭಾಸ್ಕರಾಭಂ ಶಿಖರಂ ಪ್ರಗೃಹ್ಯ ।
ಬಭೌ ತದಾ ಭಾಸ್ಕರಸಂನಿಕಾಶೋ
ರವೇಃ ಸಮೀಪೇ ಪ್ರತಿಭಾಸ್ಕರಾಭಃ ॥೬೯॥

ಸ ತೇನ ಶೈಲೇನ ಭೃಶಂ ರರಾಜ
ಶೈಲೋಪಮೋ ಗನ್ಧವಹಾತ್ಮಜಸ್ತು ।
ಸಹಸ್ರಧಾರೇಣ ಸಪಾವಕೇನ
ಚಕ್ರೇಣ ಖೇ ವಿಷ್ಣುರಿವಾರ್ಪಿತೇನ ॥೭೦॥

ತಂ ವಾನರಾಃ ಪ್ರೇಕ್ಷ್ಯ ವಿನೇದುರುಚ್ಚೈಃ
ಸ ತಾನಪಿ ಪ್ರೇಕ್ಷ್ಯ ಮುದಾ ನನಾದ ।
ತೇಷಾಂ ಸಮುದ್ಘುಷ್ಟರವಂ ನಿಶಮ್ಯ
ಲಙ್ಕಾಲಯಾ ಭೀಮತರಂ ವಿನೇದುಃ ॥೭೧॥

ತತೋ ಮಹಾತ್ಮಾ ನಿಪಪಾತ ತಸ್ಮಿನ್
ಶೈಲೋತ್ತಮೇ ವಾನರಸೈನ್ಯಮಧ್ಯೇ ।
ಹರ್ಯುತ್ತಮೇಭ್ಯಃ ಶಿರಸಾಭಿವಾದ್ಯ
ವಿಭೀಷಣಂ ತತ್ರ ಚ ಸಸ್ವಜೇ ಸಃ ॥೭೨॥

ತತಾವುಭೌ ಮಾನುಷರಾಜಪುತ್ರೌ
ತಂ ಗನ್ಧಮಾಘ್ರಾಯ ಮಹೌಷಧೀನಾಮ್ ।
ಬಭೂವತುಸ್ತತ್ರ ತದಾ ವಿಶಲ್ಯಾ-
ವುತ್ತಸ್ಥುರನ್ಯೇ ಚ ಹರಿಪ್ರವೀರಾಃ ॥೭೩॥

ಸರ್ವೇ ವಿಶಲ್ಯಾ ವಿರುಜಾಃ ಕ್ಷಣೇನ
ಹರಿಪ್ರವೀರಾ ನಿಹತಾಶ್ಚ ಯೇ ಸ್ಯುಃ।
ಗನ್ಧೇನ ತಾಸಾಂ ಪ್ರವರೌಷಧೀನಾಂ
ಸುಪ್ತಾ ನಿಶಾನ್ತೇಷ್ವಿವ ಸಂಪ್ರಬುದ್ಧಾಃ ॥೭೪॥

ಯದಾಪ್ರಭೃತಿ ಲಙ್ಕಾಯಾಂ ಯುಧ್ಯನ್ತೇ ಕಪಿರಾಕ್ಷಸಾಃ ।
ತದಾಪ್ರಭೃತಿ ಮಾನಾರ್ಥಮಾಜ್ಞಯಾ ರಾವಣಸ್ಯ ಚ ॥೭೫॥

ಯೇ ಹನ್ಯನ್ತೇ ರಣೇ ತತ್ರ ರಾಕ್ಷಸಾಃ ಕಪಿಕುಞ್ಜರೈಃ ।
ಹತಾ ಹತಾಸ್ತು ಕ್ಷಿಪ್ಯನ್ತೇ ಸರ್ವ ಏವ ತು ಸಾಗರೇ ॥೭೬॥

ತತೋ ಹರಿರ್ಗನ್ಧವಹಾತ್ಮಜಸ್ತು
ತಮೋಷಧೀಶೈಲಮುದಗ್ರವೀರ್ಯಃ ।
ನಿನಾಯ ವೇಗಾದ್ಧಿಮವನ್ತಮೇವ
ಪುನಶ್ಚ ರಾಮೇಣ ಸಮಾಜಗಾಮ ॥೭೭॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಯುದ್ಧಕಾಣ್ಡೇ ಚತುಃಸಪ್ತತಿತಮಃ ಸರ್ಗಃ

ಪಞ್ಚಸಪ್ತತಿತಮಃ ಸರ್ಗಃ

ತತೋಽಬ್ರವೀನ್ಮಹಾತೇಜಾಃ ಸುಗ್ರೀವೋ ವಾನರಾಧಿಪಃ ।
ಅರ್ಥ್ಯಂ ವಿಜ್ಞಾಪಯಂಶ್ಚಾಪಿ ಹನುಮನ್ತಮಿದಂ ವಚಃ ॥೧॥

ಯತೋ ಹತಃ ಕುಮ್ಭಕರ್ಣಃ ಕುಮಾರಾಶ್ಚ ನಿಷೂದಿತಾಃ ।
ನೇದಾನೀಮುಪನಿರ್ಹಾರಂ ರಾವಣೋ ದಾತುಮರ್ಹತಿ ॥೨॥

ಯೇ ಯೇ ಮಹಾಬಲಾಃ ಸನ್ತಿ ಲಘವಶ್ಚ ಪ್ಲವಂಗಮಾಃ ।
ಲಙ್ಕಾಮಭ್ಯುತ್ಪತನ್ತ್ವಾಶು ಗೃಹ್ಯೋಲ್ಕಾಃ ಪ್ಲವಗರ್ಷಭಾಃ ॥೩॥

ತತೋಽಸ್ತಂಗತ ಆದಿತ್ಯೇ ರೌದ್ರೇ ತಸ್ಮಿನ್ನಿಶಾಮುಖೇ ।
ಲಙ್ಕಾಮಭಿಮುಖಾಃ ಸೋಲ್ಕಾ ಜಗ್ಮುಸ್ತೇ ಪ್ಲವಗರ್ಷಭಾಃ ॥೪॥

ಉಲ್ಕಾಹಸ್ತೈರ್ಹರಿಗಣೈಃ ಸರ್ವತಃ ಸಮಭಿದ್ರುತಾಃ ।
ಆರಕ್ಷಸ್ಥಾ ವಿರೂಪಾಕ್ಷಾಃ ಸಹಸಾ ವಿಪ್ರದುದ್ರುವುಃ ॥೫॥

ಗೋಪುರಾಟ್ಟಪ್ರತೋಲೀಷು ಚರ್ಯಾಸು ವಿವಿಧಾಸು ಚ ।
ಪ್ರಾಸಾದೇಷು ಚ ಸಂಹೃಷ್ಟಾಃ ಸಸೃಜುಸ್ತೇ ಹುತಾಶನಮ್ ॥೬॥

ತೇಷಾಂ ಗೃಹಸಹಸ್ರಾಣಿ ದದಾಹ ಹುತಭುಕ್ತದಾ ।
ಪ್ರಾಸಾದಾಃ ಪರ್ವತಾಕಾರಾಃ ಪತನ್ತಿ ಧರಣೀತಲೇ ॥೭॥

ಅಗುರುರ್ದಹ್ಯತೇ ತತ್ರ ಪರಂ ಚ ಹರಿಚನ್ದನಮ್ ।
ಮೌಕ್ತಿಕಾಮಣಯಃ ಸ್ನಿಗ್ಧಾ ವಜ್ರಂ ಚಾಪಿ ಪ್ರವಾಲಕಮ್ ॥೮॥

ಕ್ಷೌಮಂ ಚ ದಹ್ಯತೇ ತತ್ರ ಕೌಶೇಯಂ ಚಾಪಿ ಶೋಭನಮ್ ।
ಆವಿಕಂ ವಿವಿಧಂ ಚೌರ್ಣಂ ಕಾಞ್ಚನಂ ಭಾಣ್ಡಮಾಯುಧಮ್ ॥೯॥

ನಾನಾವಿಕೃತಸಂಸ್ಥಾನಂ ವಾಜಿಭಾಣ್ಡಪರಿಚ್ಛದೌ ।
ಗಜಗ್ರೈವೇಯಕಕ್ಷ್ಯಾಶ್ಚ ರಥಭಾಣ್ಡಾಶ್ಚ ಸಂಸ್ಕೃತಾಃ ॥೧೦॥

ತನುತ್ರಾಣಿ ಚ ಯೋಧಾನಾಂ ಹಸ್ತ್ಯಶ್ವಾನಾಂ ಚ ವರ್ಮ ಚ ।
ಖಡ್ಗಾ ಧನೂಂಷಿ ಜ್ಯಾಬಾಣಾಸ್ತೋಮರಾಙ್ಕುಶಶಕ್ತಯಃ ॥೧೧॥

ರೋಮಜಂ ವಾಲಜಂ ಚರ್ಮ ವ್ಯಾಘ್ರಜಂ ಚಾಣ್ಡಜಂ ಬಹು ।
ಮುಕ್ತಾಮಣಿವಿಚಿತ್ರಾಂಶ್ಚ ಪ್ರಾಸಾದಾಂಶ್ಚ ಸಮನ್ತತಃ ॥೧೨॥

ವಿವಿಧಾನಸ್ತ್ರಸಂಯೋಗಾನಗ್ನಿರ್ದಹತಿ ತತ್ರ ವೈ ।
ನಾನಾವಿಧಾನ್ಗೃಹಚ್ಛನ್ದಾನ್ದದಾಹ ಹುತಭುಕ್ತದಾ ॥೧೩॥

ಆವಾಸಾನ್ರಾಕ್ಷಸಾನಾಂ ಚ ಸರ್ವೇಷಾಂ ಗೃಹಗರ್ಧಿನಾಮ್ ।
ಹೇಮಚಿತ್ರತನುತ್ರಾಣಾಂ ಸ್ರಗ್ದಾಮಾಮ್ಬರಧಾರಿಣಾಮ್ ॥೧೪॥

ಸೀಧುಪಾನಚಲಾಕ್ಷಾಣಾಂ ಮದವಿಹ್ವಲಗಾಮಿನಾಮ್ ।
ಕಾನ್ತಾಲಮ್ಬಿತವಸ್ತ್ರಾಣಾಂ ಶತ್ರುಸಂಜಾತಮನ್ಯುನಾಮ್ ॥೧೫॥

ಗದಾಶೂಲಾಸಿಹಸ್ತಾನಾಂ ಖಾದತಾಂ ಪಿಬತಾಮಪಿ ।
ಶಯನೇಷು ಮಹಾರ್ಹೇಷು ಪ್ರಸುಪ್ತಾನಾಂ ಪ್ರಿಯೈಃ ಸಹ ॥೧೬॥

ತ್ರಸ್ತಾನಾಂ ಗಚ್ಛತಾಂ ತೂರ್ಣಂ ಪುತ್ರಾನಾದಾಯ ಸರ್ವತಃ ।
ತೇಷಾಂ ಶತಸಹಸ್ರಾಣಿ ತದಾ ಲಙ್ಕಾನಿವಾಸಿನಾಮ್ ।
ಅದಹತ್ಪಾವಕಸ್ತತ್ರ ಜಜ್ವಾಲ ಚ ಪುನಃ ಪುನಃ ॥೧೭॥

ಸಾರವನ್ತಿ ಮಹಾರ್ಹಾಣಿ ಗಮ್ಭೀರಗುಣವನ್ತಿ ಚ ।
ಹೇಮಚನ್ದ್ರಾರ್ಧಚನ್ದ್ರಾಣಿ ಚನ್ದ್ರಶಾಲೋನ್ನತಾನಿ ಚ ॥೧೮॥

ತತ್ರ ಚಿತ್ರಗವಾಕ್ಷಾಣಿ ಸಾಧಿಷ್ಠಾನಾನಿ ಸರ್ವಶಃ ।
ಮಣಿವಿದ್ರುಮಚಿತ್ರಾಣಿ ಸ್ಪೃಶನ್ತೀವ ದಿವಾಕರಮ್ ॥೧೯॥

ಕ್ರೌಞ್ಚಬರ್ಹಿಣವೀಣಾನಾಂ ಭೂಷಣಾನಾಂ ಚ ನಿಃಸ್ವನೈಃ ।
ನಾದಿತಾನ್ಯಚಲಾಭಾನಿ ವೇಶ್ಮಾನ್ಯಗ್ನಿರ್ದದಾಹ ಸಃ ॥೨೦॥

ಜ್ವಲನೇನ ಪರೀತಾನಿ ತೋರಣಾನಿ ಚಕಾಶಿರೇ ।
ವಿದ್ಯುದ್ಭಿರಿವ ನದ್ಧಾನಿ ಮೇಘಜಾಲಾನಿ ಘರ್ಮಗೇ ॥೨೧॥

ಜ್ವಲನೇನ ಪರೀತಾನಿ ನಿಪೇತುರ್ಭವನಾನ್ಯಥ ।
ದಾವಾಗ್ನಿದೀಪ್ತಾನಿ ಯಥಾ ಶಿಖರಾಣಿ ಮಹಾಗಿರೇಃ ॥೨೨॥

ವಿಮಾನೇಷು ಪ್ರಸುಪ್ತಾಶ್ಚ ದಹ್ಯಮಾನಾ ವರಾಙ್ಗನಾಃ ।
ತ್ಯಕ್ತಾಭರಣಸರ್ವಾಙ್ಗಾ ಹಾ ಹೇತ್ಯುಚ್ಚೈರ್ವಿಚುಕ್ರುಶುಃ ॥೨೩॥

ತತ್ರ ಚಾಗ್ನಿಪರೀತಾನಿ ನಿಪೇತುರ್ಭವನಾನ್ಯಪಿ ।
ವಜ್ರಿವಜ್ರಹತಾನೀವ ಶಿಖರಾಣಿ ಮಹಾಗಿರೇಃ ॥೨೪॥

ತಾನಿ ನಿರ್ದಹ್ಯಮಾನಾನಿ ದೂರತಃ ಪ್ರಚಕಾಶಿರೇ ।
ಹಿಮವಚ್ಛಿಕರಾಣೀವ ದಹ್ಯಮಾನಾನಿ ಸರ್ವಶಃ ॥೨೫॥

ಹರ್ಮ್ಯಾಗ್ರೈರ್ದಹ್ಯಮಾನೈಶ್ಚ ಜ್ವಾಲಾಪ್ರಜ್ವಲಿತೈರಪಿ ।
ರಾತ್ರೌ ಸಾ ದೃಶ್ಯತೇ ಲಙ್ಕಾ ಪುಷ್ಪಿತೈರಿವ ಕಿಂಶುಕೈಃ ॥೨೬॥

ಹಸ್ತ್ಯಧ್ಯಕ್ಷೈರ್ಗಜೈರ್ಮುಕ್ತೈರ್ಮುಕ್ತೈಶ್ಚ ತುರಗೈರಪಿ ।
ಬಭೂವ ಲಙ್ಕಾ ಲೋಕಾನ್ತೇ ಭ್ರಾನ್ತಗ್ರಾಹ ಇವಾರ್ಣವಃ ॥೨೭॥

ಅಶ್ವಂ ಮುಕ್ತಂ ಗಜೋ ದೃಷ್ಟ್ವಾ ಕ್ವಚಿದ್ಭೀತೋಽಪಸರ್ಪತಿ ।
ಭೀತೇ ಭೀತಂ ಗಜಂ ದೃಷ್ಟ್ವಾ ಕ್ವಚಿದಶ್ವೋ ನಿವರ್ತತೇ ॥೨೮॥

ಲಙ್ಕಾಯಾಂ ದಹ್ಯಮಾನಾಯಾಂ ಶುಶುಭೇ ಸ ಮಹಾರ್ಣವಃ ।
ಛಾಯಾಸಂಸಕ್ತಸಲಿಲೋ ಲೋಹಿತೋದ ಇವಾರ್ಣವಃ ॥೨೯॥

ಸಾ ಬಭೂವ ಮುಹೂರ್ತೇನ ಹರಿಭಿರ್ದೀಪಿತಾ ಪುರೀ ।
ಲೋಕಸ್ಯಾಸ್ಯ ಕ್ಷಯೇ ಘೋರೇ ಪ್ರದೀಪ್ತೇವ ವಸುಂಧರಾ ॥೩೦॥

ನಾರೀಜನಸ್ಯ ಧೂಮೇನ ವ್ಯಾಪ್ತಸ್ಯೋಚ್ಚೈರ್ವಿನೇದುಷಃ ।
ಸ್ವನೋ ಜ್ವಲನತಪ್ತಸ್ಯ ಶುಶ್ರುವೇ ದಶಯೋಜನಮ್ ॥೩೧॥

ಪ್ರದಗ್ಧಕಾಯಾನಪರಾನ್ರಾಕ್ಷಸಾನ್ನಿರ್ಗತಾನ್ಬಹಿಃ ।
ಸಹಸಾಭ್ಯುತ್ಪತನ್ತಿ ಸ್ಮ ಹರಯೋಽಥ ಯುಯುತ್ಸವಃ ॥೩೨॥

ಉದ್ಘುಷ್ಟಂ ವಾನರಾಣಾಂ ಚ ರಾಕ್ಷಸಾನಾಂ ಚ ನಿಃಸ್ವನಃ ।
ದಿಶೋ ದಶ ಸಮುದ್ರಂ ಚ ಪೃಥಿವೀಂ ಚಾನ್ವನಾದಯತ್ ॥೩೩॥

ವಿಶಲ್ಯೌ ತು ಮಹಾತ್ಮಾನೌ ತಾವುಭೌ ರಾಮಲಕ್ಷ್ಮಣೌ ।
ಅಸಂಭ್ರಾನ್ತೌ ಜಗೃಹತುಸ್ತದೋಭೇ ಧನುಷೀ ವರೇ ॥೩೪॥

ತತೋ ವಿಸ್ಫಾರಯಾನಸ್ಯ ರಾಮಶ್ಚ ಧನುರುತ್ತಮಮ್ ।
ಬಭೂವ ತುಮುಲಃ ಶಬ್ದೋ ರಾಕ್ಷಸಾನಾಂ ಭಯಾವಹಃ ॥೩೫॥

ಅಶೋಭತ ತದಾ ರಾಮೋ ಧನುರ್ವಿಸ್ಫಾರಯನ್ಮಹತ್ ।
ಭಗವಾನಿವ ಸಂಕ್ರುದ್ಧೋ ಭವೋ ವೇದಮಯಂ ಧನುಃ ॥೩೬॥

ಉದ್ಘುಷ್ಟಂ ವಾನರಾಣಾಂ ಚ ರಾಕ್ಷಸಾನಾಂ ಚ ನಿಃಸ್ವನಮ್ ।
ಜ್ಯಾಶಬ್ದಸ್ತಾವುಭೌ ಶಬ್ದಾವತಿರಾಮಸ್ಯ ಶುಶ್ರುವೇ ॥೩೭॥

ವಾನರೋದ್ಘುಷ್ಟಘೋಷಶ್ಚ ರಾಕ್ಷಸಾನಾಂ ಚ ನಿಃಸ್ವನಃ ।
ಜ್ಯಾಶಬ್ದಶ್ಚಾಪಿ ರಾಮಸ್ಯ ತ್ರಯಂ ವ್ಯಾಪ್ತಂ ದಿಶೋ ದಶ ॥೩೮॥

ತಸ್ಯ ಕಾರ್ಮುಕಮುಕ್ತೈಶ್ಚ ಶರೈಸ್ತತ್ಪುರಗೋಪುರಮ್ ।
ಕೈಲಾಸಶೃಙ್ಗಪ್ರತಿಮಂ ವಿಕೀರ್ಣಮಪತದ್ಭುವಿ ॥೩೯॥

ತತೋ ರಾಮಶರಾನ್ದೃಷ್ಟ್ವಾ ವಿಮಾನೇಷು ಗೃಹೇಷು ಚ ।
ಸಂನಾಹೋ ರಾಕ್ಷಸೇನ್ದ್ರಾಣಾಂ ತುಮುಲಃ ಸಮಪದ್ಯತ ॥೪೦॥

ತೇಷಾಂ ಸಂನಹ್ಯಮಾನಾನಾಂ ಸಿಂಹನಾದಂ ಚ ಕುರ್ವತಾಮ್ ।
ಶರ್ವರೀ ರಾಕ್ಷಸೇನ್ದ್ರಾಣಾಂ ರೌದ್ರೀವ ಸಮಪದ್ಯತ ॥೪೧॥

ಆದಿಷ್ಟಾ ವಾನರೇನ್ದ್ರಾಸ್ತು ಸುಗ್ರೀವೇಣ ಮಹಾತ್ಮನಾ ।
ಆಸನ್ನಂ ದ್ವಾರಮಾಸಾದ್ಯ ಯುಧ್ಯಧ್ವಂ ಚ ಪ್ಲವಂಗಮಾಃ ॥೪೨॥

ಯಶ್ಚ ವೋ ವಿತಥಂ ಕುರ್ಯಾತ್ತತ್ರ ತತ್ರ ಹ್ಯುಪಸ್ಥಿತಃ ।
ಸ ಹನ್ತವ್ಯೋಽಭಿ ಸಂಪ್ಲುತ್ಯ ರಾಜಶಾಸನದೂಷಕಃ ॥೪೩॥

ತೇಷು ವಾನರಮುಖ್ಯೇಷು ದೀಪ್ತೋಲ್ಕೋಜ್ಜ್ವಲಪಾಣಿಷು ।
ಸ್ಥಿತೇಷು ದ್ವಾರಮಾಸಾದ್ಯ ರಾವಣಂ ಮನ್ಯುರಾವಿಶತ್ ॥೪೪॥

ತಸ್ಯ ಜೃಮ್ಭಿತವಿಕ್ಷೇಪಾದ್ವ್ಯಾಮಿಶ್ರಾ ವೈ ದಿಶೋ ದಶ ।
ರೂಪವಾನಿವ ರುದ್ರಸ್ಯ ಮನ್ಯುರ್ಗಾತ್ರೇಷ್ವದೃಶ್ಯತ ॥೪೫॥

ಸ ನಿಕುಮ್ಭಂ ಚ ಕುಮ್ಭಂ ಚ ಕುಮ್ಭಕರ್ಣಾತ್ಮಜಾವುಭೌ ।
ಪ್ರೇಷಯಾಮಾಸ ಸಂಕ್ರುದ್ಧೋ ರಾಕ್ಷಸೈರ್ಬಹುಭಿಃ ಸಹ ॥೪೬॥

ಯೂಪಾಕ್ಷಃ ಶೋಣಿತಾಕ್ಷಶ್ಚ ಪ್ರಜಙ್ಘಃ ಕಮ್ಪನಸ್ತಥಾ ।
ನಿರ್ಯಯುಃ ಕೌಮ್ಭಕರ್ಣಿಭ್ಯಾಂ ಸಹ ರಾವಣಶಾಸನಾತ್ ॥೪೭॥

ಶಶಾಸ ಚೈವ ತಾನ್ಸರ್ವಾನ್ರಾಕ್ಷಸಾನ್ಸುಮಹಾಬಲಾನ್ ।
ರಾಕ್ಷಸಾ ಗಚ್ಛತಾದ್ಯೈವ ಸಿಂಹನಾದಂ ಚ ನಾದಯನ್ ॥೪೮॥

ತತಸ್ತು ಚೋದಿತಾಸ್ತೇನ ರಾಕ್ಷಸಾ ಜ್ವಲಿತಾಯುಧಾಃ ।
ಲಙ್ಕಾಯಾ ನಿರ್ಯಯುರ್ವೀರಾಃ ಪ್ರಣದನ್ತಃ ಪುನಃ ಪುನಃ ॥೪೯॥

ರಕ್ಷಸಾಂ ಭೂಷಣಸ್ಥಾಭಿರ್ಭಾಭಿಃ ಸ್ವಾಭಿಶ್ಚ ಸರ್ವಶಃ ।
ಚಕ್ರುಸ್ತೇ ಸಪ್ರಭಂ ವ್ಯೋಮ ಹರಯಶ್ಚಾಗ್ನಿಭಿಃ ಸಹ ॥೫೦॥

ನಿವರ್ತಮಾನಃ ಕಾಕುತ್ಸ್ಥೋ ದೃಷ್ಟ್ವಾ ಗೃಧ್ರಂ ಪ್ರವಿವ್ಯಥೇ ॥೩೨॥

ಗೃಧ್ರಂ ಹತಂ ತತೋ ದಗ್ಧ್ವಾ ರಾಮಃ ಪ್ರಿಯಸಖಂ ಪಿತುಃ ॥೩೩॥

ಮಾರ್ಗಮಾಣಸ್ತು ವೈದೇಹೀಂ ರಾಘವಃ ಸಹಲಕ್ಷ್ಮಣಃ ।
ಗೋದಾವರೀಮನ್ವಚರದ್ವನೋದ್ದೇಶಾಂಶ್ಚ ಪುಷ್ಪಿತಾನ್ ॥೩೪॥

ಆಸೇದತುರ್ಮಹಾರಣ್ಯೇ ಕಬನ್ಧಂ ನಾಮ ರಾಕ್ಷಸಮ್ ।
ತತಃ ಕಬನ್ಧವಚನಾದ್ರಾಮಃ ಸತ್ಯಪರಾಕ್ರಮಃ ।
ಋಶ್ಯಮೂಕಂ ಗಿರಿಂ ಗತ್ವಾ ಸುಗ್ರೀವೇಣ ಸಮಾಗತಃ ॥೩೫॥

ತಯೋಃ ಸಮಾಗಮಃ ಪೂರ್ವಂ ಪ್ರೀತ್ಯಾ ಹಾರ್ದೋ ವ್ಯಜಾಯತ ।
ಭ್ರಾತ್ರಾ ನಿರಸ್ತಃ ಕ್ರುದ್ಧೇನ ಸುಗ್ರೀವೋ ವಾಲಿನಾ ಪುರಾ ॥೩೬॥

ಇತರೇತರಸಂವಾದಾತ್ಪ್ರಗಾಢಃ ಪ್ರಣಯಸ್ತಯೋಃ ॥೩೭॥

ರಾಮಸ್ಯ ಬಾಹುವೀರ್ಯೇಣ ಸ್ವರಾಜ್ಯಂ ಪ್ರತ್ಯಪಾದಯತ್ ।
ವಾಲಿನಂ ಸಮರೇ ಹತ್ವಾ ಮಹಾಕಾಯಂ ಮಹಾಬಲಮ್ ॥೩೮॥

ಸುಗ್ರೀವಃ ಸ್ಥಾಪಿತೋ ರಾಜ್ಯೇ ಸಹಿತಃ ಸರ್ವವಾನರೈಃ ।
ರಾಮಾಯ ಪ್ರತಿಜಾನೀತೇ ರಾಜಪುತ್ರ್ಯಾಶ್ಚ ಮಾರ್ಗಣಮ್ ॥೩೯॥

ಆದಿಷ್ಟಾ ವಾನರೇನ್ದ್ರೇಣ ಸುಗ್ರೀವೇಣ ಮಹಾತ್ಮನಾ ।
ದಶ ಕೋಟ್ಯಃ ಪ್ಲವಂಗಾನಾಂ ಸರ್ವಾಃ ಪ್ರಸ್ಥಾಪಿತಾ ದಿಶಃ ॥೪೦॥

ತೇಷಾಂ ನೋ ವಿಪ್ರಕೃಷ್ಟಾನಾಂ ವಿನ್ಧ್ಯೇ ಪರ್ವತಸತ್ತಮೇ ।
ಭೃಶಂ ಶೋಕಾಭಿತಪ್ತಾನಾಂ ಮಹಾನ್ಕಾಲೋಽತ್ಯವರ್ತತ ॥೪೧॥

ಭ್ರಾತಾ ತು ಗೃಧ್ರರಾಜಸ್ಯ ಸಂಪಾತಿರ್ನಾಮ ವೀರ್ಯವಾನ್ ।
ಸಮಾಖ್ಯಾತಿ ಸ್ಮ ವಸತಿಂ ಸೀತಾಯಾ ರಾವಣಾಲಯೇ ॥೪೨॥

ಸೋಽಹಂ ಶೋಕಪರೀತಾನಾಂ ದುಃಖಂ ತಜ್ಜ್ಞಾತಿನಾಂ ನುದನ್ ।
ಆತ್ಮವೀರ್ಯಂ ಸಮಾಸ್ಥಾಯ ಯೋಜನಾನಾಂ ಶತಂ ಪ್ಲುತಃ ।
ತತ್ರಾಹಮೇಕಾಮದ್ರಾಕ್ಷಮಶೋಕವನಿಕಾಂ ಗತಾಮ್ ॥೪೩॥

ಕೌಶೇಯವಸ್ತ್ರಾಂ ಮಲಿನಾಂ ನಿರಾನನ್ದಾಂ ದೃಢವ್ರತಾಮ್ ।
ತಯಾ ಸಮೇತ್ಯ ವಿಧಿವತ್ಪೃಷ್ಟ್ವಾ ಸರ್ವಮನಿನ್ದಿತಾಮ್ ॥೪೪॥

ಅಭಿಜ್ಞಾನಂ ಮಯಾ ದತ್ತಂ ರಾಮನಾಮಾಙ್ಗುಲೀಯಕಮ್ ।
ಅಭಿಜ್ಞಾನಂ ಮಣಿಂ ಲಬ್ಧ್ವಾ ಚರಿತಾರ್ಥೋಽಹಮಾಗತಃ ॥೪೫॥

ಮಯಾ ಚ ಪುನರಾಗಮ್ಯ ರಾಮಸ್ಯಾಕ್ಲಿಷ್ಟಕರ್ಮಣಃ ।
ಅಭಿಜ್ಞಾನಂ ಮಯಾ ದತ್ತಮರ್ಚಿಷ್ಮಾನ್ಸ ಮಹಾಮಣಿಃ ॥೪೬॥

ಶ್ರುತ್ವಾ ತು ಮೈಥಿಲೀಂ ಹೃಷ್ಟಸ್ತ್ವಾಶಶಂಸೇ ಚ ಜೀವಿತಮ್ ।
ಜೀವಿತಾನ್ತಮನುಪ್ರಾಪ್ತಃ ಪೀತ್ವಾಮೃತಮಿವಾತುರಃ ॥೪೭॥

ಉದ್ಯೋಜಯಿಷ್ಯನ್ನುದ್ಯೋಗಂ ದಧ್ರೇ ಕಾಮಂ ವಧೇ ಮನಃ ।
ಜಿಘಾಂಸುರಿವ ಲೋಕಾನ್ತೇ ಸರ್ವಾನ್ ಲೋಕಾನ್ವಿಭಾವಸುಃ ॥೪೮॥

ತತಃ ಸಮುದ್ರಮಾಸಾದ್ಯ ನಲಂ ಸೇತುಮಕಾರಯತ್ ।
ಅತರತ್ಕಪಿವೀರಾಣಾಂ ವಾಹಿನೀ ತೇನ ಸೇತುನಾ ॥೪೯॥

ಪ್ರಹಸ್ತಮವಧೀನ್ನೀಲಃ ಕುಮ್ಭಕರ್ಣಂ ಚ ರಾಘವಃ ।
ಲಕ್ಷ್ಮಣೋ ರಾವಣಸುತಂ ಸ್ವಯಂ ರಾಮಸ್ತು ರಾವಣಮ್ ॥೫೦॥

ಸ ಶಕ್ರೇಣ ಸಮಾಗಮ್ಯ ಯಮೇನ ವರುಣೇನ ಚ ।
ಮಹೇಶ್ವರಸ್ವಯಂಭೂಭ್ಯಾಂ ತಥಾ ದಶರಥೇನ ಚ ॥೫೧॥

ತೈಶ್ಚ ದತ್ತವರಃ ಶ್ರೀಮಾನೃಷಿಭಿಶ್ಚ ಸಮಾಗತೈಃ ।
ಸುರರ್ಷಿಭಿಶ್ಚ ಕಾಕುತ್ಸ್ಥೋ ವರಾನ್ ಲೇಭೇ ಪರಂತಪಃ ॥೫೨॥

ಸ ತು ದತ್ತವರಃ ಪ್ರೀತ್ಯಾ ವಾನರೈಶ್ಚ ಸಮಾಗತಃ ।
ಪುಷ್ಪಕೇಣ ವಿಮಾನೇನ ಕಿಷ್ಕಿನ್ಧಾಮಭ್ಯುಪಾಗಮತ್ ॥೫೩॥

ತಾಂ ಗಙ್ಗಾಂ ಪುನರಾಸಾದ್ಯ ವಸನ್ತಂ ಮುನಿಸನ್ನಿಧೌ ।
ಅವಿಘ್ನಂ ಪುಷ್ಯಯೋಗೇನ ಶ್ವೋ ರಾಮಂ ದ್ರಷ್ಟುಮರ್ಹಸಿ ॥೫೪॥

ತತಃ ಸ ವಾಕ್ಯೈರ್ಮಧುರೈರ್ಹನೂಮತೋ
ನಿಶಮ್ಯ ಹೃಷ್ಟೋ ಭರತಃ ಕೃತಾಞ್ಜಲಿಃ ।
ಉವಾಚ ವಾಣೀಂ ಮನಸಃ ಪ್ರಹರ್ಷಿಣೀಂ
ಚಿರಸ್ಯ ಪೂರ್ಣಃ ಖಲು ಮೇ ಮನೋರಥಃ ॥೫೫॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಯುದ್ಧಕಾಣ್ಡೇ ಷಡ್ವಿಂಶತ್ಯಧಿಕಶತತಮಃ ಸರ್ಗಃ

ಸಪ್ತವಿಂಶತ್ಯಧಿಕಶತತಮಃ ಸರ್ಗಃ

ಶ್ರುತ್ವಾ ತು ಪರಮಾನನ್ದಂ ಭರತಃ ಸತ್ಯವಿಕ್ರಮಃ ।
ಹೃಷ್ಟಮಾಜ್ಞಾಪಯಾಮಾಸ ಶತ್ರುಘ್ನಂ ಪರವೀರಹಾ ॥೧॥

ದೈವತಾನಿ ಚ ಸರ್ವಾಣಿ ಚೈತ್ಯಾನಿ ನಗರಸ್ಯ ಚ ।
ಸುಗನ್ಧಮಾಲ್ಯೈರ್ವಾದಿತ್ರೈರರ್ಚನ್ತು ಶುಚಯೋ ನರಾಃ ॥೨॥

ಸೂತಾಃ ಸ್ತುತಿಪುರಾಣಜ್ಞಾಃ ಸರ್ವೇ ವೈತಾಲಿಕಾಸ್ತಥಾ ।
ಸರ್ವೇ ವಾದಿತ್ರಕುಶಲಾ ಗಣಿಕಾಶ್ಚಾಪಿ ಸಙ್ಘಶಃ ।
ಅಭಿನಿರ್ಯಾನ್ತು ರಾಮಸ್ಯ ದ್ರಷ್ಟುಂ ಶಶಿನಿಭಂ ಮುಖಮ್ ॥೩॥

ಬ್ರಾಹ್ಮಣಾಶ್ಚ ಸರಾಜನ್ಯಾಃ ಶ್ರೇಣೀಮುಖ್ಯಾಸ್ತಥಾ ಗಣಾಃ ।
ಅಭಿನಿರ್ಯಾನ್ತು ರಾಮಸ್ಯ ದ್ರಷ್ಟುಂ ಶಶಿನಿಭಂ ಮುಖಮ್ ॥೪॥

ಭರತಸ್ಯ ವಚಃ ಶ್ರುತ್ವಾ ಶತ್ರುಘ್ನಃ ಪರವೀರಹಾ ।
ವಿಷ್ಟೀರನೇಕಸಾಹಸ್ರಾಶ್ಚೋದಯಾಮಾಸ ವೀರ್ಯವಾನ್ ॥೫॥

ಸಮೀಕುರುತ ನಿಮ್ನಾನಿ ವಿಷಮಾಣಿ ಸಮಾನಿ ಚ ॥೬॥

ಸ್ಥಲಾನಿ ಚ ನಿರಸ್ಯನ್ತಾಂ ನನ್ದಿಗ್ರಾಮಾದಿತಃ ಪರಮ್ ।
ಸಿಞ್ಚನ್ತು ಪೃಥಿವೀಂ ಕೃತ್ಸ್ನಾಂ ಹಿಮಶೀತೇನ ವಾರಿಣಾ ॥೭॥

ತತೋಽಭ್ಯವಕಿರನ್ತ್ವನ್ಯೇ ಲಾಜೈಃ ಪುಷ್ಪೈಶ್ಚ ಸರ್ವಶಃ ।
ಸಮುಚ್ಛ್ರಿತಪತಾಕಾಸ್ತು ರಥ್ಯಾಃ ಪುರವರೋತ್ತಮೇ ॥೮॥

ಶೋಭಯನ್ತು ಚ ವೇಶ್ಮಾನಿ ಸೂರ್ಯಸ್ಯೋದಯನಂ ಪ್ರತಿ ।
ಸ್ರಗ್ದಾಮಭಿರ್ಮುಕ್ತಪುಷ್ಪೈಃ ಸುಗನ್ಧೈಃ ಪಞ್ಚವರ್ಣಕೈಃ ॥೯॥

ರಾಜಮಾರ್ಗಮಸಂಬಾಧಂ ಕಿರನ್ತು ಶತಶೋ ನರಾಃ ।
ರಾಜದಾರಾಸ್ತಥಾಮಾತ್ಯಾಃ ಸೈನ್ಯಾಃ ಸೇನಾಗಣಾಙ್ಗನಾಃ ।
ತತಸ್ತಚ್ಛಾಸನಂ ಶ್ರುತ್ವಾ ಶತ್ರುಘ್ನಸ್ಯ ಮುದಾನ್ವಿತಾಃ ॥೧೦॥

ಧೃಷ್ಟಿರ್ಜಯನ್ತೋ ವಿಜಯಃ ಸಿದ್ಧಾರ್ಥೋ ಹ್ಯರ್ಥಸಾಧಕಃ ।
ಅಶೋಕೋ ಮನ್ತ್ರಪಾಲಶ್ಚ ಸುಮನ್ತ್ರಶ್ಚಾಪಿ ನಿರ್ಯಯುಃ ।
ಮತ್ತೈರ್ನಾಗಸಹಸ್ರೈಶ್ಚ ಶಾತಕುಮ್ಭವಿಭೂಷಿತೈಃ ॥೧೧॥

ಅಪರೇ ಹೇಮಕಕ್ಷ್ಯಾಭಿಃ ಸಗಜಾಭಿಃ ಕರೇಣುಭಿಃ ।
ನಿರ್ಯಯುಸ್ತುರಗಾಕ್ರಾನ್ತೈ ರಥೈಶ್ಚ ಸುಮಹಾರಥಾಃ ॥೧೨॥

ಶಕ್ತ್ಯೃಷ್ಟಿಪಾಶಹಸ್ತಾನಾಂ ಸಧ್ವಜಾನಾಂ ಪತಾಕಿನಾಮ್ ।
ತುರಗಾಣಾಂ ಸಹಸ್ರೈಶ್ಚ ಮುಖ್ಯೈರ್ಮುಖ್ಯನರಾನ್ವಿತೈಃ ॥೧೩॥

ಪದಾತೀನಾಂ ಸಹಸ್ರೈಶ್ಚ ವೀರಾಃ ಪರಿವೃತಾ ಯಯುಃ ।
ತತೋ ಯಾನಾನ್ಯುಪಾರೂಢಾಃ ಸರ್ವಾ ದಶರಥಸ್ತ್ರಿಯಃ ॥೧೪॥

ಕೌಸಲ್ಯಾಂ ಪ್ರಮುಖೇ ಕೃತ್ವಾ ಸುಮಿತ್ರಾಂ ಚಾಪಿ ನಿರ್ಯಯುಃ ॥೧೫॥
ಕೈಕೇಯ್ಯಾ ಸಹಿತಾಃ ಸರ್ವಾ ನನ್ದಿಗ್ರಾಮಮುಪಾಗಮನ್ ॥೧೬॥

ದ್ವಿಜಾತಿಮುಖ್ಯೈರ್ಧರ್ಮಾತ್ಮಾ ಶ್ರೇಣೀಮುಖ್ಯೈಃ ಸನೈಗಮೈಃ ।
ಮಾಲ್ಯಮೋದಕಹಸ್ತೈಶ್ಚ ಮನ್ತ್ರಿಭಿರ್ಭರತೋ ವೃತಃ ॥೧೭॥

ಶಙ್ಖಭೇರೀನಿನಾದೈಶ್ಚ ವನ್ದಿಭಿಶ್ಚಾಭಿವನ್ದಿತಃ ।
ಆರ್ಯಪಾದೌ ಗೃಹೀತ್ವಾ ತು ಶಿರಸಾ ಧರ್ಮಕೋವಿದಃ ॥೧೮॥

ಪಾಣ್ಡುರಂ ಛತ್ರಮಾದಾಯ ಶುಕ್ಲಮಾಲ್ಯೋಪಶೋಭಿತಮ್ ।
ಶುಕ್ಲೇ ಚ ವಾಲವ್ಯಜನೇ ರಾಜಾರ್ಹೇ ಹೇಮಭೂಷಿತೇ ॥೧೯॥

ಉಪವಾಸಕೃಶೋ ದೀನಶ್ಚೀರಕೃಷ್ಣಾಜಿನಾಮ್ಬರಃ ।
ಭ್ರಾತುರಾಗಮನಂ ಶ್ರುತ್ವಾ ತತ್ಪೂರ್ವಂ ಹರ್ಷಮಾಗತಃ ॥೨೦॥

ಪ್ರತ್ಯುದ್ಯಯೌ ತತೋ ರಾಮಂ ಮಹಾತ್ಮಾ ಸಚಿವೈಃ ಸಹ ।
ಅಶ್ವಾನಾಂ ಖುರಶಬ್ದೈಶ್ಚ ರಥನೇಮಿಸ್ವನೇನ ಚ ॥೨೧॥

ಶಙ್ಖದುನ್ದುಭಿನಾದೇನ ಸಂಚಚಾಲೇವ ಮೇದಿನೀ ।
ಗಜಾನಾಂ ಬೃಂಹಿತೈಶ್ಚಾಪಿ ಶಙ್ಖದುನ್ದುಭಿನಿಃಸ್ವನೈಃ ॥೨೨॥

ಕೃತ್ಸ್ನಂ ತು ನಗರಂ ತತ್ತು ನನ್ದಿಗ್ರಾಮಮುಪಾಗಮತ್ ।
ಸಮೀಕ್ಷ್ಯ ಭರತೋ ವಾಕ್ಯಮುವಾಚ ಪವನಾತ್ಮಜಮ್ ॥೨೩॥

ಕಚ್ಚಿನ್ನ ಖಲು ಕಾಪೇಯೀ ಸೇವ್ಯತೇ ಚಲಚಿತ್ತತಾ ।
ನ ಹಿ ಪಶ್ಯಾಮಿ ಕಾಕುತ್ಸ್ಥಂ ರಾಮಮಾರ್ಯಂ ಪರಂತಪಮ್ ।
ಕಚ್ಚಿನ್ನ ಖಲು ದೃಶ್ಯನ್ತೇ ವಾನರಾಃ ಕಾಮರೂಪಿಣಃ ॥೨೪॥

ಅಥೈವಮುಕ್ತೇ ವಚನೇ ಹನುಮಾನಿದಮಬ್ರವೀತ್ ।
ಅರ್ಥಂ ವಿಜ್ಞಾಪಯನ್ನೇವ ಭರತಂ ಸತ್ಯವಿಕ್ರಮಮ್ ॥೨೫॥

ಸದಾಫಲಾನ್ಕುಸುಮಿತಾನ್ವೃಕ್ಷಾನ್ಪ್ರಾಪ್ಯ ಮಧುಸ್ರವಾನ್ ।
ಭರದ್ವಾಜಪ್ರಸಾದೇನ ಮತ್ತಭ್ರಮರನಾದಿತಾನ್ ॥೨೬॥

ತಸ್ಯ ಚೈಷ ವರೋ ದತ್ತೋ ವಾಸವೇನ ಪರಂತಪ ।
ಸಸೈನ್ಯಸ್ಯ ತಥಾತಿಥ್ಯಂ ಕೃತಂ ಸರ್ವಗುಣಾನ್ವಿತಮ್ ॥೨೭॥

ನಿಸ್ವನಃ ಶ್ರೂಯತೇ ಭೀಮಃ ಪ್ರಹೃಷ್ಟಾನಾಂ ವನೌಕಸಾಮ್ ।
ಮನ್ಯೇ ವಾನರಸೇನಾ ಸಾ ನದೀಂ ತರತಿ ಗೋಮತೀಮ್ ॥೨೮॥

ರಜೋವರ್ಷಂ ಸಮುದ್ಭೂತಂ ಪಶ್ಯ ಸಾಲವನಂ ಪ್ರತಿ ।
ಮನ್ಯೇ ಸಾಲವನಂ ರಮ್ಯಂ ಲೋಲಯನ್ತಿ ಪ್ಲವಂಗಮಾಃ ॥೨೯॥

ತದೇತದ್ದೃಶ್ಯತೇ ದೂರಾದ್ವಿಮಲಂ ಚನ್ದ್ರಸಂನಿಭಮ್ ।
ವಿಮಾನಂ ಪುಷ್ಪಕಂ ದಿವ್ಯಂ ಮನಸಾ ಬ್ರಹ್ಮನಿರ್ಮಿತಮ್ ॥೩೦॥

ರಾವಣಂ ಬಾನ್ಧವೈಃ ಸಾರ್ಧಂ ಹತ್ವಾ ಲಬ್ಧಂ ಮಹಾತ್ಮನಾ ॥೩೧॥

ತರುಣಾದಿತ್ಯಸಂಕಾಶಂ ವಿಮಾನಂ ರಾಮವಾಹನಮ್ ।
ಧನದಸ್ಯ ಪ್ರಸಾದೇನ ದಿವ್ಯಮೇತನ್ಮನೋಜವಮ್ ॥೩೨॥

ಏತಸ್ಮಿನ್ ಭ್ರಾತರೌ ವೀರೌ ವೈದೇಹ್ಯಾ ಸಹ ರಾಘವೌ ।
ಸುಗ್ರೀವಶ್ಚ ಮಹಾತೇಜಾ ರಾಕ್ಷಸಶ್ಚ ವಿಭೀಷಣಃ ॥೩೩॥

ತತೋ ಹರ್ಷಸಮುದ್ಭೂತೋ ನಿಸ್ವನೋ ದಿವಮಸ್ಪೃಶತ್ ।
ಸ್ತ್ರೀಬಾಲಯುವವೃದ್ಧಾನಾಂ ರಾಮೋಽಯಮಿತಿ ಕೀರ್ತಿತೇ ॥೩೪॥

ರಥಕುಞ್ಜರವಾಜಿಭ್ಯಸ್ತೇಽವತೀರ್ಯ ಮಹೀಂ ಗತಾಃ ।
ದದೃಶುಸ್ತಂ ವಿಮಾನಸ್ಥಂ ನರಾಃ ಸೋಮಮಿವಾಮ್ಬರೇ ॥೩೫॥

ಪ್ರಾಞ್ಜಲಿರ್ಭರತೋ ಭೂತ್ವಾ ಪ್ರಹೃಷ್ಟೋ ರಾಘವೋನ್ಮುಖಃ ।
ಸ್ವಾಗತೇನ ಯಥಾರ್ಥೇನ ತತೋ ರಾಮಮಪೂಜಯತ್ ॥೩೬॥

ಮನಸಾ ಬ್ರಹ್ಮಣಾ ಸೃಷ್ಟೇ ವಿಮಾನೇ ಭರತಾಗ್ರಜಃ ।
ರರಾಜ ಪೃಥುದೀರ್ಘಾಕ್ಷೋ ವಜ್ರಪಾಣಿರಿವಾಪರಃ ॥೩೭॥

ತತೋ ವಿಮಾನಾಗ್ರಗತಂ ಭರತೋ ಭ್ರಾತರಂ ತದಾ ।
ವವನ್ದೇ ಪ್ರಯತೋ ರಾಮಂ ಮೇರುಸ್ಥಮಿವ ಭಾಸ್ಕರಮ್ ॥೩೮॥

ತತೋ ರಾಮಾಭ್ಯನುಜ್ಞಾತಂ ತದ್ವಿಮಾನಮನುತ್ತಮಮ್ ।
ಹಂಸಯುಕ್ತಂ ಮಹಾವೇಗಂ ನಿಷ್ಪಪಾತ ಮಹೀತಲೇ ॥೩೯॥

ಆರೋಪಿತೋ ವಿಮಾನಂ ತದ್ಭರತಃ ಸತ್ಯವಿಕ್ರಮಃ ।
ರಾಮಮಾಸಾದ್ಯ ಮುದಿತಃ ಪುನರೇವಾಭ್ಯವಾದಯತ್ ॥೪೦॥

ತಂ ಸಮುತ್ಥಾಯ ಕಾಕುತ್ಸ್ಥಶ್ಚಿರಸ್ಯಾಕ್ಷಿಪಥಂ ಗತಮ್ ।
ಅಙ್ಕೇ ಭರತಮಾರೋಪ್ಯ ಮುದಿತಃ ಪರಿಷಸ್ವಜೇ ॥೪೧॥

ತತೋ ಲಕ್ಷ್ಮಣಮಾಸಾದ್ಯ ವೈದೇಹೀಂ ಚ ಪರಂತಪಃ ।
ಅಭಿವಾದ್ಯ ತತಃ ಪ್ರೀತೋ ಭರತೋ ನಾಮ ಚಾಬ್ರವೀತ್ ॥೪೨॥

ಸುಗ್ರೀವಂ ಕೈಕಯೀಪುತ್ರೋ ಜಾಮ್ಬವನ್ತಂ ತಥಾಙ್ಗದಮ್ ।
ಮೈನ್ದಂ ಚ ದ್ವಿವಿದಂ ನೀಲಮೃಷಭಂ ಪರಿಷಸ್ವಜೇ ॥೪೩॥

ಸುಷೇಣಂ ಚ ನಲಂ ಚೈವ ಗವಾಕ್ಷಂ ಗನ್ಧಮಾದನಮ್ ।
ಶರಭಂ ಪನಸಂ ಚೈವ ಭರತಃ ಪರಿಷಸ್ವಜೇ ॥೪೪॥

ತೇ ಕೃತ್ವಾ ಮಾನುಷಂ ರೂಪಂ ವಾನರಾಃ ಕಾಮರೂಪಿಣಃ ।
ಕುಶಲಂ ಪರ್ಯಪೃಚ್ಛಂಸ್ತೇ ಪ್ರಹೃಷ್ಟಾ ಭರತಂ ತದಾ ॥೪೫॥

ಅಥಾಬ್ರವೀದ್ರಾಜಪುತ್ರಃ ಸುಗ್ರೀವಂ ವಾನರರ್ಷಭಮ್ ।
ಪರಿಷ್ವಜ್ಯ ಮಹಾತೇಜಾ ಭರತೋ ಧರ್ಮಿಣಾಂ ವರಃ ॥೪೬॥

ತ್ವಮಸ್ಮಾಕಂ ಚತುರ್ಣಾಂ ತು ಭ್ರಾತಾ ಸುಗ್ರೀವಪಞ್ಚಮಃ ।
ಸೌಹೃದಾಜ್ಜಾಯತೇ ಮಿತ್ರಮಪಕಾರೋಽರಿಲಕ್ಷಣಮ್ ॥೪೭॥

ವಿಭೀಷಣಂ ತು ಭರತಃ ಸಾನ್ತ್ವವಾಕ್ಯಮಥಾಬ್ರವೀತ್ ।
ದಿಷ್ಟ್ಯಾ ತ್ವಯಾ ಸಹಾಯೇನ ಕೃತಂ ಕರ್ಮ ಸುದುಷ್ಕರಮ್ ॥೪೮॥

ಶತ್ರುಘ್ನಶ್ಚ ತದಾ ರಾಮಮಭಿವಾದ್ಯ ಸಲಕ್ಷ್ಮಣಮ್ ।
ಸೀತಾಯಾಶ್ಚರಣೌ ಪಶ್ಚಾದ್ವಿನಯಾದಭ್ಯವಾದಯತ್ ॥೪೯॥

ರಾಮೋ ಮಾತರಮಾಸಾದ್ಯ ವಿಷಣ್ಣಾಂ ಶೋಕಕರ್ಶಿತಾಮ್ ।
ಜಗ್ರಾಹ ಪ್ರಣತಃ ಪಾದೌ ಮನೋ ಮಾತುಃ ಪ್ರಸಾದಯನ್ ॥೫೦॥

ಅಭಿವಾದ್ಯ ಸುಮಿತ್ರಾಂ ಚ ಕೈಕೇಯೀಂ ಚ ಯಶಸ್ವಿನೀಮ್ ।
ಸ ಮಾತೄಶ್ಚ ತತಃ ಸರ್ವಾಃ ಪುರೋಹಿತಮುಪಾಗತಮ್ ॥೫೧॥

ಸ್ವಾಗತಂ ತೇ ಮಹಾಬಾಹೋ ಕೌಸಲ್ಯಾನನ್ದವರ್ಧನ ।
ಇತಿ ಪ್ರಾಞ್ಜಲಯಃ ಸರ್ವೇ ನಾಗರಾ ರಾಮಮಬ್ರುವನ್ ॥೫೨॥

ತಾನ್ಯಞ್ಜಲಿಸಹಸ್ರಾಣಿ ಪ್ರಗೃಹೀತಾನಿ ನಾಗರೈಃ ।
ವ್ಯಾಕೋಶಾನೀವ ಪದ್ಮಾನಿ ದದರ್ಶ ಭರತಾಗ್ರಜಃ ॥೫೩॥

ಪಾದುಕೇ ತೇ ತು ರಾಮಸ್ಯ ಗೃಹೀತ್ವಾ ಭರತಃ ಸ್ವಯಮ್ ।
ಚರಣಾಭ್ಯಾಂ ನರೇನ್ದ್ರಸ್ಯ ಯೋಜಯಾಮಾಸ ಧರ್ಮವಿತ್ ।
ಅಬ್ರವೀಚ್ಚ ತದಾ ರಾಮಂ ಭರತಃ ಸ ಕೃತಾಞ್ಜಲಿಃ ॥೫೪॥

ಏತತ್ತೇ ಸಕಲಂ ರಾಜ್ಯಂ ನ್ಯಾಸಂ ನಿರ್ಯಾತಿತಂ ಮಯಾ ॥೫೫॥

ಅದ್ಯ ಜನ್ಮ ಕೃತಾರ್ಥಂ ಮೇ ಸಂವೃತ್ತಶ್ಚ ಮನೋರಥಃ ।
ಯಸ್ತ್ವಾಂ ಪಶ್ಯಾಮಿ ರಾಜಾನಮಯೋಧ್ಯಾಂ ಪುನರಾಗತಮ್ ॥೫೬॥

ಅವೇಕ್ಷತಾಂ ಭವಾನ್ಕೋಶಂ ಕೋಷ್ಠಾಗಾರಂ ಪುರಂ ಬಲಮ್ ।
ಭವತಸ್ತೇಜಸಾ ಸರ್ವಂ ಕೃತಂ ದಶಗುಣಂ ಮಯಾ ॥೫೭॥

ತಥಾ ಬ್ರುವಾಣಂ ಭರತಂ ದೃಷ್ಟ್ವಾ ತಂ ಭ್ರಾತೃವತ್ಸಲಮ್ ।
ಮುಮುಚುರ್ವಾನರಾ ಬಾಷ್ಪಂ ರಾಕ್ಷಸಶ್ಚ ವಿಭೀಷಣಃ ॥೫೮॥

ತತಃ ಪ್ರಹರ್ಷಾದ್ಭರತಮಙ್ಕಮಾರೋಪ್ಯ ರಾಘವಃ ।
ಯಯೌ ತೇನ ವಿಮಾನೇನ ಸಸೈನ್ಯೋ ಭರತಾಶ್ರಮಮ್ ॥೫೯॥

ಭರತಾಶ್ರಮಮಾಸಾದ್ಯ ಸಸೈನ್ಯೋ ರಾಘವಸ್ತದಾ ।
ಅವತೀರ್ಯ ವಿಮಾನಾಗ್ರಾದವತಸ್ಥೇ ಮಹೀತಲೇ ॥೬೦॥

ಅಬ್ರವೀಚ್ಚ ತದಾ ರಾಮಸ್ತದ್ವಿಮಾನಮನುತ್ತಮಮ್ ।
ವಹ ವೈಶ್ರವಣಂ ದೇವಮನುಜಾನಾಮಿ ಗಮ್ಯತಾಮ್ ॥೬೧॥

ತತೋ ರಾಮಾಭ್ಯನುಜ್ಞಾತಂ ತದ್ವಿಮಾನಮನುತ್ತಮಮ್ ।
ಉತ್ತರಾಂ ದಿಶಮಾಗಮ್ಯ ಜಗಾಮ ಧನದಾಲಯಮ್ ॥೬೨॥

ವಿಮಾನಂ ಪುಷ್ಪಕಂ ದಿವ್ಯಂ ಸಂಗೃಹೀತಂ ತು ರಕ್ಷಸಾ ।
ಅಗಮದ್ಧನದಂ ವೇಗಾದ್ರಾಮವಾಕ್ಯಪ್ರಚೋದನಾತ್ ॥೬೩॥

ಪುರೋಹಿತಸ್ಯಾತ್ಮಸಮಸ್ಯ ರಾಘವೋ
ಬೃಹಸ್ಪತೇಃ ಶಕ್ರ ಇವಾಮರಾಧಿಪಃ ।

ನಿಪೀಡ್ಯ ಪಾದೌ ಪೃಥಗಾಸನೇ ಶುಭೇ
ಸಹೈವ ತೇನೋಪವಿವೇಶ ರಾಘವಃ ॥೬೪॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಯುದ್ಧಕಾಣ್ಡೇ ಸಪ್ತವಿಂಶತ್ಯಧಿಕಶತತಮಃ ಸರ್ಗಃ

ಅಷ್ಟಾವಿಂಶತ್ಯಧಿಕಶತತಮಃ ಸರ್ಗಃ

ಶಿರಸ್ಯಞ್ಜಲಿಮಾಧಾಯ ಕೈಕೇಯ್ಯಾನನ್ದವರ್ಧನಃ ।
ಬಭಾಷೇ ಭರತೋ ಜ್ಯೇಷ್ಠಂ ರಾಮಂ ಸತ್ಯಪರಾಕ್ರಮಮ್ ॥೧॥

ಪೂಜಿತಾ ಮಾಮಿಕಾ ಮಾತಾ ದತ್ತಂ ರಾಜ್ಯಮಿದಂ ಮಮ ।
ತದ್ದದಾಮಿ ಪುನಸ್ತುಭ್ಯಂ ಯಥಾ ತ್ವಮದದಾ ಮಮ ॥೨॥

ಧುರಮೇಕಾಕಿನಾ ನ್ಯಸ್ತಾ ಮೃಷಭೇಣ ಬಲೀಯಸಾ ।
ಕಿಶೋರೀವ ಗುರುಂ ಭಾರಂ ನ ವೋಢುಮಹಮುತ್ಸಹೇ ॥೩॥

ವಾರಿವೇಗೇನ ಮಹತಾ ಭಿನ್ನಃ ಸೇತುರಿವ ಕ್ಷರನ್ ।
ದುರ್ಬನ್ಧನಮಿದಂ ಮನ್ಯೇ ರಾಜ್ಯಚ್ಛಿದ್ರಮಸಂವೃತಮ್ ॥೪॥

ಗತಿಂ ಖರ ಇವಾಶ್ವಸ್ಯ ಹಂಸಸ್ಯೇವ ಚ ವಾಯಸಃ ।
ನಾನ್ವೇತುಮುತ್ಸಹೇ ರಾಮ ತವ ಮಾರ್ಗಮರಿಂದಮ ॥೫॥

ಯಥಾ ಚಾರೋಪಿತೋ ವೃಕ್ಷೋ ಜಾತಶ್ಚಾನ್ತರ್ನಿವೇಶನೇ ।
ಮಹಾಂಶ್ಚ ಸುದುರಾರೋಹೋ ಮಹಾಸ್ಕನ್ಧಃ ಪ್ರಶಾಖವಾನ್ ॥೬॥

ಶೀರ್ಯೇತ ಪುಷ್ಪಿತೋ ಭೂತ್ವಾ ನ ಫಲಾನಿ ಪ್ರದರ್ಶಯನ್ ।
ತಸ್ಯ ನಾನುಭವೇದರ್ಥಂ ಯಸ್ಯ ಹೇತೋಃ ಸ ರೋಪ್ಯತೇ ॥೭॥

ಏಷೋಪಮಾ ಮಹಾಬಾಹೋ ತ್ವದರ್ಥಂ ವೇತ್ತುಮರ್ಹಸಿ ।
ಯದ್ಯಸ್ಮಾನ್ಮನುಜೇನ್ದ್ರ ತ್ವಂ ಭಕ್ತಾ ಭೃತ್ಯಾನ್ನ ಶಾಧಿ ಹಿ ॥೮॥

ಜಗದದ್ಯಾಭಿಷಿಕ್ತಂ ತ್ವಾಮನುಪಶ್ಯತು ಸರ್ವತಃ ।
ಪ್ರತಪನ್ತಮಿವಾದಿತ್ಯಂ ಮಧ್ಯಾಹ್ನೇ ದೀಪ್ತತೇಜಸಮ್ ॥೯॥

ತೂರ್ಯಸಂಘಾತನಿರ್ಘೋಷೈಃ ಕಾಞ್ಚೀನೂಪುರನಿಸ್ವನೈಃ ।
ಮಧುರೈರ್ಗೀತಶಬ್ದೈಶ್ಚ ಪ್ರತಿಬುಧ್ಯಸ್ವ ರಾಘವ ॥೧೦॥

ಯಾವದಾವರ್ತತೇ ಚಕ್ರಂ ಯಾವತೀ ಚ ವಸುನ್ಧರಾ ।
ತಾವತ್ತ್ವಮಿಹ ಸರ್ವಸ್ಯ ಸ್ವಾಮಿತ್ವಮನುವರ್ತಯ ॥೧೧॥

ಭರತಸ್ಯ ವಚಃ ಶ್ರುತ್ವಾ ರಾಮಃ ಪರಪುರಞ್ಜಯಃ ।
ತಥೇತಿ ಪ್ರತಿಜಗ್ರಾಹ ನಿಷಸಾದಾಸನೇ ಶುಭೇ ॥೧೨॥

ತತಃ ಶತ್ರುಘ್ನವಚನಾನ್ನಿಪುಣಾಃ ಶ್ಮಶ್ರುವರ್ಧಕಾಃ ।
ಸುಖಹಸ್ತಾ ಸುಶೀಘ್ರಾಶ್ಚ ರಾಘವಂ ಪರ್ಯುಪಾಸತ ॥೧೩॥

ಪೂರ್ವಂ ತು ಭರತೇ ಸ್ನಾತೇ ಲಕ್ಷ್ಮಣೇ ಚ ಮಹಾಬಲೇ ।
ಸುಗ್ರೀವೇ ವಾನರೇನ್ದ್ರೇ ಚ ರಾಕ್ಷಸೇನ್ದ್ರೇ ವಿಭೀಷಣೇ ॥೧೪॥

ವಿಶೋಧಿತಜಟಃ ಸ್ನಾತಶ್ಚಿತ್ರಮಾಲ್ಯಾನುಲೇಪನಃ ।
ಮಹಾರ್ಹವಸನೋ ರಾಮಸ್ತಸ್ಥೌ ತತ್ರ ಶ್ರಿಯಾ ಜ್ವಲನ್ ॥೧೫॥

ಪ್ರತಿಕರ್ಮ ಚ ರಾಮಸ್ಯ ಕಾರಯಾಮಾಸ ವೀರ್ಯವಾನ್ ।
ಲಕ್ಷ್ಮಣಸ್ಯ ಚ ಲಕ್ಷ್ಮೀವಾನಿಕ್ಷ್ವಾಕುಕುಲವರ್ಧನಃ ॥೧೬॥

ಪ್ರತಿಕರ್ಮ ಚ ಸೀತಾಯಾಃ ಸರ್ವಾ ದಶರಥಸ್ತ್ರಿಯಃ ।
ಆತ್ಮನೈವ ತದಾ ಚಕ್ರುರ್ಮನಸ್ವಿನ್ಯೋ ಮನೋಹರಮ್ ॥೧೭॥

ತತೋ ವಾನರಪತ್ನೀನಾಂ ಸರ್ವಾಸಾಮೇವ ಶೋಭನಮ್ ।
ಚಕಾರ ಯತ್ನಾತ್ಕೌಸಲ್ಯಾ ಪ್ರಹೃಷ್ಟಾ ಪುತ್ರಲಾಲಸಾ ॥೧೮॥

ತತಃ ಶತ್ರುಘ್ನವಚನಾತ್ಸುಮನ್ತ್ರೋ ನಾಮ ಸಾರಥಿಃ ।
ಯೋಜಯಿತ್ವಾಭಿಚಕ್ರಾಮ ರಥಂ ಸರ್ವಾಙ್ಗಶೋಭನಮ್ ॥೧೯॥

ಅರ್ಕಮಣ್ಡಲಸಂಕಾಶಂ ದಿವ್ಯಂ ದೃಷ್ಟ್ವಾ ರಥೋತ್ತಮಮ್ ।
ಆರುರೋಹ ಮಹಾಬಾಹೂ ರಾಮಃ ಸತ್ಯಪರಾಕ್ರಮಃ ॥೨೦॥

ಸುಗ್ರೀವೋ ಹನುಮಾಂಶ್ಚೈವ ಮಹೇನ್ದ್ರಸದೃಶದ್ಯುತೀ ।
ಸ್ನಾತೌ ದಿವ್ಯನಿಭೈರ್ವಸ್ತ್ರೈರ್ಜಗ್ಮತುಃ ಶುಭಕುಣ್ಡಲೌ ॥೨೧॥

ವರಾಭರಣಸಂಪನ್ನಾ ಯಯುಸ್ತಾಃ ಶುಭಕುಣ್ಡಲಾಃ ।
ಸುಗ್ರೀವಪತ್ನ್ಯಃ ಸೀತಾ ಚ ದ್ರಷ್ಟುಂ ನಗರಮುತ್ಸುಕಾಃ ॥೨೨॥

ಅಯೋಧ್ಯಾಯಾಂ ತು ಸಚಿವಾ ರಾಜ್ಞೋ ದಶರಥಸ್ಯ ಯೇ ।
ಪುರೋಹಿತಂ ಪುರಸ್ಕೃತ್ಯ ಮನ್ತ್ರಯಾಮಾಸುರರ್ಥವತ್ ॥೨೩॥

ಅಶೋಕೋ ವಿಜಯಶ್ಚೈವ ಸುಮನ್ತ್ರಶ್ಚ ಸಮಾಗತಾಃ ।
ಮನ್ತ್ರಯನ್ರಾಮವೃದ್ಧ್ಯರ್ಥಮೃದ್ಧ್ಯರ್ಥಂ ನಗರಸ್ಯ ಚ ॥೨೪॥

ಸರ್ವಮೇವಾಭಿಷೇಕಾರ್ಥಂ ಜಯಾರ್ಹಸ್ಯ ಮಹಾತ್ಮನಃ ।
ಕರ್ತುಮರ್ಹಸಿ ರಾಮಸ್ಯ ಯದ್ಯನ್ಮಙ್ಗಲಪೂರ್ವಕಮ್ ॥೨೫॥

ಇತಿ ತೇ ಮನ್ತ್ರಿಣಃ ಸರ್ವೇ ಸಂದಿಶ್ಯ ತು ಪುರೋಹಿತಮ್ ।
ನಗರಾನ್ನಿರ್ಯಯುಸ್ತೂರ್ಣಂ ರಾಮದರ್ಶನಬುದ್ಧಯಃ ॥೨೬॥

ಹರಿಯುಕ್ತಂ ಸಹಸ್ರಾಕ್ಷೋ ರಥಮಿನ್ದ್ರ ಇವಾನಘಃ ।
ಪ್ರಯಯೌ ರಥಮಾಸ್ಥಾಯ ರಾಮೋ ನಗರಮುತ್ತಮಮ್ ॥೨೭॥

ಜಗ್ರಾಹ ಭರತೋ ರಶ್ಮೀನ್ ಶತ್ರುಘ್ನಶ್ಛತ್ರಮಾದದೇ ।
ಲಕ್ಷ್ಮಣೋ ವ್ಯಜನಂ ತಸ್ಯ ಮೂರ್ಧ್ನಿ ಸಂಪರ್ಯವೀಜಯತ್ ॥೨೮॥

ಶ್ವೇತಂ ಚ ವಾಲವ್ಯಜನಂ ಜಗ್ರಾಹ ಪುರತಃ ಸ್ಥಿತಃ ।
ಅಪರಂ ಚನ್ದ್ರಸಂಕಾಶಂ ರಾಕ್ಷಸೇನ್ದ್ರೋ ವಿಭೀಷಣಃ ॥೨೯॥

ಋಷಿಸಙ್ಘೈಸ್ತದಾಕಾಶೇ ದೇವೈಶ್ಚ ಸಮರುದ್ಗಣೈಃ ।
ಸ್ತೂಯಮಾನಸ್ಯ ರಾಮಸ್ಯ ಶುಶ್ರುವೇ ಮಧುರಧ್ವನಿಃ ॥೩೦॥

ತತಃ ಶತ್ರುಂಜಯಂ ನಾಮ ಕುಞ್ಜರಂ ಪರ್ವತೋಪಮಮ್ ।
ಆರುರೋಹ ಮಹಾತೇಜಾಃ ಸುಗ್ರೀವಃ ಪ್ಲವಗರ್ಷಭಃ ॥೩೧॥

ನವನಾಗಸಹಸ್ರಾಣಿ ಯಯುರಾಸ್ಥಾಯ ವಾನರಾಃ ।
ಮಾನುಷಂ ವಿಗ್ರಹಂ ಕೃತ್ವಾ ಸರ್ವಾಭರಣಭೂಷಿತಾಃ ॥೩೨॥

ಶಙ್ಖಶಬ್ದಪ್ರಣಾದೈಶ್ಚ ದುನ್ದುಭೀನಾಂ ಚ ನಿಃಸ್ವನೈಃ ।
ಪ್ರಯಯೌ ಪುರುಷವ್ಯಾಘ್ರಸ್ತಾಂ ಪುರೀಂ ಹರ್ಮ್ಯಮಾಲಿನೀಮ್ ॥೩೩॥

ದದೃಶುಸ್ತೇ ಸಮಾಯಾನ್ತಂ ರಾಘವಂ ಸಪುರಃಸರಮ್ ।
ವಿರಾಜಮಾನಂ ವಪುಷಾ ರಥೇನಾತಿ ರಥಂ ತದಾ ॥೩೪॥

ತೇ ವರ್ಧಯಿತ್ವಾ ಕಾಕುತ್ಸ್ಥಂ ರಾಮೇಣ ಪ್ರತಿನನ್ದಿತಾಃ ।
ಅನುಜಗ್ಮುರ್ಮಹಾತ್ಮಾನಂ ಭ್ರಾತೃಭಿಃ ಪರಿವಾರಿತಮ್ ॥೩೫॥

ಅಮಾತ್ಯೈರ್ಬ್ರಾಹ್ಮಣೈಶ್ಚೈವ ತಥಾ ಪ್ರಕೃತಿಭಿರ್ವೃತಃ ।
ಶ್ರಿಯಾ ವಿರುರುಚೇ ರಾಮೋ ನಕ್ಷತ್ರೈರಿವ ಚನ್ದ್ರಮಾಃ ॥೩೬॥

ಸ ಪುರೋಗಾಮಿಭಿಸ್ತೂರ್ಯೈಸ್ತಾಲಸ್ವಸ್ತಿಕಪಾಣಿಭಿಃ ।
ಪ್ರವ್ಯಾಹರದ್ಭಿರ್ಮುದಿತೈರ್ಮಙ್ಗಲಾನಿ ಯಯೌ ವೃತಃ ॥೩೭॥

ಅಕ್ಷತಂ ಜಾತರೂಪಂ ಚ ಗಾವಃ ಕನ್ಯಾಸ್ತಥಾ ದ್ವಿಜಾಃ ।
ನರಾ ಮೋದಕಹಸ್ತಾಶ್ಚ ರಾಮಸ್ಯ ಪುರತೋ ಯಯುಃ ॥೩೮॥

ಸಖ್ಯಂ ಚ ರಾಮಃ ಸುಗ್ರೀವೇ ಪ್ರಭಾವಂ ಚಾನಿಲಾತ್ಮಜೇ ।
ವಾನರಾಣಾಂ ಚ ತತ್ಕರ್ಮ ರಾಕ್ಷಸಾನಾಂ ಚ ತದ್ಬಲಮ್ ॥೩೯॥

ಶ್ರುತ್ವಾ ತು ವಿಸ್ಮಯಂ ಜಗ್ಮುರಯೋಧ್ಯಾಪುರವಾಸಿನಃ ।
ವಿಭೀಷಣಸ್ಯ ಸಂಯೋಗಮಾಚಚಕ್ಷೇ ಚ ಮನ್ತ್ರಿಣಾಮ್ ॥೪೦॥

ದ್ಯುತಿಮಾನೇತದಾಖ್ಯಾಯ ರಾಮೋ ವಾನರಸಂವೃತಃ ।
ಹೃಷ್ಟಪುಷ್ಟಜನಾಕೀರ್ಣಾಮಯೋಧ್ಯಾಂ ಪ್ರವಿವೇಶ ಹ ॥೪೧॥

ತತೋ ಹ್ಯಭ್ಯುಚ್ಛ್ರಯನ್ಪೌರಾಃ ಪತಾಕಾಶ್ಚ ಗೃಹೇ ಗೃಹೇ ।
ಐಕ್ಷ್ವಾಕಾಧ್ಯುಷಿತಂ ರಮ್ಯಮಾಸಸಾದ ಪಿತುರ್ಗೃಹಮ್ ॥೪೨॥

ಅಥಾಬ್ರವೀದ್ರಾಜಪುತ್ರೋ ಭರತಂ ಧರ್ಮಿಣಾಂ ವರಮ್ ।
ಅರ್ಥೋಪಹಿತಯಾ ವಾಚಾ ಮಧುರಂ ರಘುನನ್ದನಃ ॥೪೩॥

ಪಿತುರ್ಭವನಮಾಸಾದ್ಯ ಪ್ರವಿಶ್ಯ ಚ ಮಹಾತ್ಮನಃ ।
ಕೌಸಲ್ಯಾಂ ಚ ಸುಮಿತ್ರಾಂ ಚ ಕೈಕೇಯೀಮಭಿವಾದ್ಯ ಚ ॥೪೪॥

ಯಚ್ಚ ಮದ್ಭವನಂ ಶ್ರೇಷ್ಠಂ ಸಾಶೋಕವನಿಕಂ ಮಹತ್ ।
ಮುಕ್ತಾವೈಡೂರ್ಯಸಂಕೀರ್ಣಂ ಸುಗ್ರೀವಾಯ ನಿವೇದಯ ॥೪೫॥

ತಸ್ಯ ತದ್ವಚನಂ ಶ್ರುತ್ವಾ ಭರತಃ ಸತ್ಯವಿಕ್ರಮಃ ।
ಪಾಣೌ ಗೃಹೀತ್ವಾ ಸುಗ್ರೀವಂ ಪ್ರವಿವೇಶ ತಮಾಲಯಮ್ ॥೪೬॥

ತತಸ್ತೈಲಪ್ರದೀಪಾಂಶ್ಚ ಪರ್ಯಙ್ಕಾಸ್ತರಣಾನಿ ಚ ।
ಗೃಹೀತ್ವಾ ವಿವಿಶುಃ ಕ್ಷಿಪ್ರಂ ಶತ್ರುಘ್ನೇನ ಪ್ರಚೋದಿತಾಃ ॥೪೭॥

ಉವಾಚ ಚ ಮಹಾತೇಜಾಃ ಸುಗ್ರೀವಂ ರಾಘವಾನುಜಃ ।
ಅಭಿಷೇಕಾಯ ರಾಮಸ್ಯ ದೂತಾನಾಜ್ಞಾಪಯ ಪ್ರಭೋ ॥೪೮॥

ಸೌವರ್ಣಾನ್ವಾನರೇನ್ದ್ರಾಣಾಂ ಚತುರ್ಣಾಂ ಚತುರೋ ಘಟಾನ್ ।
ದದೌ ಕ್ಷಿಪ್ರಂ ಸ ಸುಗ್ರೀವಃ ಸರ್ವರತ್ನವಿಭೂಷಿತಾನ್ ॥೪೯॥

ಯಥಾ ಪ್ರತ್ಯೂಷಸಮಯೇ ಚತುರ್ಣಾಂ ಸಾಗರಾಮ್ಭಸಾಮ್ ।
ಪೂರ್ಣೈರ್ಘಟೈಃ ಪ್ರತೀಕ್ಷಧ್ವಂ ತಥಾ ಕುರುತ ವಾನರಾಃ ॥೫೦॥

ಏವಮುಕ್ತಾ ಮಹಾತ್ಮಾನೋ ವಾನರಾ ವಾರಣೋಪಮಾಃ ।
ಉತ್ಪೇತುರ್ಗಗನಂ ಶೀಘ್ರಂ ಗರುಡಾನಿಲಶೀಘ್ರಗಾಃ ॥೫೧॥

ಜಾಮ್ಬವಾಂಶ್ಚ ಸುಷೇಣಶ್ಚ ವೇಗದರ್ಶೀ ಚ ವಾನರಃ ।
ಋಷಭಶ್ಚೈವ ಕಲಶಾಞ್ಜಲಪೂರ್ಣಾನಥಾನಯನ್ ॥೫೨॥

ನದೀಶತಾನಾಂ ಪಞ್ಚಾನಾಂ ಜಲಕುಮ್ಭೇಷು ಚಾಹರನ್ ।
ಪೂರ್ವಾತ್ಸಮುದ್ರಾತ್ಕಲಶಂ ಜಲಪೂರ್ಣಮಥಾನಯತ್ ।
ಸುಷೇಣಃ ಸತ್ತ್ವಸಂಪನ್ನಃ ಸರ್ವರತ್ನವಿಭೂಷಿತಮ್ ॥೫೩॥

ಋಷಭೋ ದಕ್ಷಿಣಾತ್ತೂರ್ಣಂ ಸಮುದ್ರಾಜ್ಜಲಮಾಹರತ್ ॥೫೪॥

ರಕ್ತಚನ್ದನಶಾಖಾಭಿಃ ಸಂವೃತಂ ಕಾಞ್ಚನಂ ಘಟಮ್ ।
ಗವಯಃ ಪಶ್ಚಿಮಾತ್ತೋಯಮಾಜಹಾರ ಮಹಾರ್ಣವಾತ್ ।
ರತ್ನಕುಮ್ಭೇನ ಮಹತಾ ಶೀತಂ ಮಾರುತವಿಕ್ರಮಃ ॥೫೫॥

ಉತ್ತರಾಚ್ಚ ಜಲಂ ಶೀಘ್ರಂ ಗರುಡಾನಿಲವಿಕ್ರಮಃ ।
ಆಜಹಾರ ಸ ಧರ್ಮಾತ್ಮಾನಿಲಃ ಸರ್ವಗುಣಾನ್ವಿತಃ ॥೫೬॥

ತತಸ್ತೈರ್ವಾನರಶ್ರೇಷ್ಠೈರಾನೀತಂ ಪ್ರೇಕ್ಷ್ಯ ತಜ್ಜಲಮ್ ।
ಅಭಿಷೇಕಾಯ ರಾಮಸ್ಯ ಶತ್ರುಘ್ನಃ ಸಚಿವೈಃ ಸಹ ॥೫೭॥

ಪುರೋಹಿತಾಯ ಶ್ರೇಷ್ಠಾಯ ಸುಹೃದ್ಭ್ಯಶ್ಚ ನ್ಯವೇದಯತ್ ॥೫೮॥

ತತಃ ಸ ಪ್ರಯತೋ ವೃದ್ಧೋ ವಸಿಷ್ಠೋ ಬ್ರಾಹ್ಮಣೈಃ ಸಹ ।
ರಾಮಂ ರತ್ನಮಯೇ ಪೀಠೇ ಸಸೀತಂ ಸಂನ್ಯವೇಶಯತ್ ॥೫೯॥

ವಸಿಷ್ಠೋ ವಾಮದೇವಶ್ಚ ಜಾಬಾಲಿರಥ ಕಾಶ್ಯಪಃ ।
ಕಾತ್ಯಾಯನಃ ಸುಯಜ್ಞಶ್ಚ ಗೌತಮೋ ವಿಜಯಸ್ತಥಾ ॥೬೦॥

ಅಭ್ಯಷಿಞ್ಚನ್ನರವ್ಯಾಘ್ರಂ ಪ್ರಸನ್ನೇನ ಸುಗನ್ಧಿನಾ ।
ಸಲಿಲೇನ ಸಹಸ್ರಾಕ್ಷಂ ವಸವೋ ವಾಸವಂ ಯಥಾ ॥೬೧॥

ಋತ್ವಿಗ್ಭಿರ್ಬ್ರಾಹ್ಮಣೈಃ ಪೂರ್ವಂ ಕನ್ಯಾಭಿರ್ಮನ್ತ್ರಿಭಿಸ್ತಥಾ ।
ಯೋಧೈಶ್ಚೈವಾಭ್ಯಷಿಞ್ಚಂಸ್ತೇ ಸುಸಂಹೃಷ್ಟಾಃ ಸನೈಗಮೈಃ ॥೬೨॥

ಸರ್ವೌಷಧಿರಸೈರ್ದಿವ್ಯೈರ್ದೈವತೈರ್ನಭಸಿ ಸ್ಥಿತೈಃ ।
ಚತುರ್ಭಿರ್ಲೋಕಪಾಲೈಶ್ಚ ಸರ್ವೈರ್ದೇವೈಶ್ಚ ಸಂಗತೈಃ ॥೬೩॥

ಬ್ರಹ್ಮಣಾ ನಿರ್ಮಿತಂ ಪೂರ್ವಂ ಕಿರೀಟಂ ರತ್ನಶೋಭಿತಮ್ ।
ಅಭಿಷಿಕ್ತಃ ಪುರಾ ಯೇನ ಮನುಸ್ತಂ ದೀಪ್ತತೇಜಸಮ್ ॥೬೪॥

ತಸ್ಯಾನ್ವವಾಯೇ ರಾಜಾನಃ
ಕ್ರಮಾದ್ಯೇನಾಭಿಷೇಚಿತಾಃ ।
ಸಭಾಯಾಂ ಹೇಮಕ್ಲೃಪ್ತಾಯಾಂ
ಶೋಭಿತಾಯಾಂ ಮಹಾಧನೈಃ ॥೬೫॥

ರತ್ನೈರ್ನಾನಾವಿಧೈಶ್ಚೈವ ಚಿತ್ರಿತಾಯಾಂ ಸುಶೋಭನೈಃ ।
ನಾನಾರತ್ನಮಯೇ ಪೀಠೇ ಕಲ್ಪಯಿತ್ವಾ ಯಥಾವಿಧಿ ॥೬೬॥

ಕಿರೀಟೇನ ತತಃ ಪಶ್ಚಾದ್ವಸಿಷ್ಠೇನ ಮಹಾತ್ಮನಾ ।
ಋತ್ವಿಗ್ಭಿರ್ಭೂಷಣೈಶ್ಚೈವ ಸಮಯೋಕ್ಷ್ಯತ ರಾಘವಃ ॥೬೭॥

ಛತ್ರಂ ತಸ್ಯ ಚ ಜಗ್ರಾಹ ಶತ್ರುಘ್ನಃ ಪಾಣ್ಡುರಂ ಶುಭಮ್ ।
ಶ್ವೇತಂ ಚ ವಾಲವ್ಯಜನಂ ಸುಗ್ರೀವೋ ವಾನರೇಶ್ವರಃ ।
ಅಪರಂ ಚನ್ದ್ರಸಂಕಾಶಂ ರಾಕ್ಷಸೇನ್ದ್ರೋ ವಿಭೀಷಣಃ ॥೬೮॥

ಮಾಲಾಂ ಜ್ವಲನ್ತೀಂ ವಪುಷಾ ಕಾಞ್ಚನೀಂ ಶತಪುಷ್ಕರಾಮ್ ।
ರಾಘವಾಯ ದದೌ ವಾಯುರ್ವಾಸವೇನ ಪ್ರಚೋದಿತಃ ॥೬೯॥

ಸರ್ವರತ್ನಸಮಾಯುಕ್ತಂ ಮಣಿಭಿಶ್ಚ ವಿಭೂಷಿತಮ್ ।
ಮುಕ್ತಾಹಾರಂ ನರೇನ್ದ್ರಾಯ ದದೌ ಶಕ್ರಪ್ರಚೋದಿತಃ ॥೭೦॥

ಪ್ರಜಗುರ್ದೇವಗನ್ಧರ್ವಾ ನನೃತುಶ್ಚಾಪ್ಸರೋಗಣಾಃ ।
ಅಭಿಷೇಕೇ ತದರ್ಹಸ್ಯ ತದಾ ರಾಮಸ್ಯ ಧೀಮತಃ ॥೭೧॥

ಭೂಮಿಃ ಸಸ್ಯವತೀ ಚೈವ ಫಲವನ್ತಶ್ಚ ಪಾದಪಾಃ ।
ಗನ್ಧವನ್ತಿ ಚ ಪುಷ್ಪಾಣಿ ಬಭೂವೂ ರಾಘವೋತ್ಸವೇ ॥೭೨॥

ಸಹಸ್ರಶತಮಶ್ವಾನಾಂ ಧೇನೂನಾಂ ಚ ಗವಾಂ ತಥಾ ।
ದದೌ ಶತಂ ವೃಷಾನ್ಪೂರ್ವಂ ದ್ವಿಜೇಭ್ಯೋ ಮನುಜರ್ಷಭಃ ॥೭೩॥

ತ್ರಿಂಶತ್ಕೋಟೀರ್ಹಿರಣ್ಯಸ್ಯ ಬ್ರಾಹ್ಮಣೇಭ್ಯೋ ದದೌ ಪುನಃ ।
ನಾನಾಭರಣವಸ್ತ್ರಾಣಿ ಮಹಾರ್ಹಾಣಿ ಚ ರಾಘವಃ ॥೭೪॥

ಅರ್ಕರಶ್ಮಿಪ್ರತೀಕಾಶಾಂ ಕಾಞ್ಚನೀಂ ಮಣಿವಿಗ್ರಹಾಮ್ ।
ಸುಗ್ರೀವಾಯ ಸ್ರಜಂ ದಿವ್ಯಾಂ ಪ್ರಾಯಚ್ಛನ್ಮನುಜರ್ಷಭಃ ॥೭೫॥

ವೈಡೂರ್ಯಮಣಿಚಿತ್ರೇ ಚ ಚನ್ದ್ರರಶ್ಮಿವಿಭೂಷಿತೇ ।
ವಾಲಿಪುತ್ರಾಯ ಧೃತಿಮಾನಙ್ಗದಾಯಾಙ್ಗದೇ ದದೌ ॥೭೬॥

ಮಣಿಪ್ರವರಜುಷ್ಟಂ ಚ ಮುಕ್ತಾಹಾರಮನುತ್ತಮಮ್ ।
ಸೀತಾಯೈ ಪ್ರದದೌ ರಾಮಶ್ಚನ್ದ್ರರಶ್ಮಿಸಮಪ್ರಭಮ್ ।
ಅರಜೇ ವಾಸಸೀ ದಿವ್ಯೇ ಶುಭಾನ್ಯಾಭರಣಾನಿ ಚ ॥೭೭॥

ಅವೇಕ್ಷಮಾಣಾ ವೈದೇಹೀ ಪ್ರದದೌ ವಾಯುಸೂನವೇ ।
ಅವಮುಚ್ಯಾತ್ಮನಃ ಕಣ್ಠಾದ್ಧಾರಂ ಜನಕನನ್ದಿನೀ ॥೭೮॥

ಅವೈಕ್ಷತ ಹರೀನ್ಸರ್ವಾನ್ಭರ್ತಾರಂ ಚ ಮುಹುರ್ಮುಹುಃ ॥೭೯॥

ತಾಮಿಙ್ಗಿತಜ್ಞಃ ಸಂಪ್ರೇಕ್ಷ್ಯ ಬಭಾಷೇ ಜನಕಾತ್ಮಜಾಮ್ ।
ಪ್ರದೇಹಿ ಸುಭಗೇ ಹಾರಂ ಯಸ್ಯ ತುಷ್ಟಾಸಿ ಭಾಮಿನಿ ॥೮೦॥

ದದೌ ಸಾ ವಾಯುಪುತ್ರಾಯ ತಂ ಹಾರಮಸಿತೇಕ್ಷಣಾ ॥೮೧॥

ತೇಜೋ ಧೃತಿರ್ಯಶೋ ದಾಕ್ಷ್ಯಂ ಸಾಮರ್ಥ್ಯಂ ವಿನಯೋ ನಯಃ ।
ಪೌರುಷಂ ವಿಕ್ರಮೋ ಬುದ್ಧಿರ್ಯಸ್ಮಿನ್ನೇತಾನಿ ಸರ್ವಶಃ ॥೮೨॥

ಹನುಮಾಂಸ್ತೇನ ಹಾರೇಣ ಶುಶುಭೇ ವಾನರರ್ಷಭಃ ।
ಚನ್ದ್ರಾಂಶುಚಯಗೌರೇಣ ಶ್ವೇತಾಭ್ರೇಣ ಯಥಾಚಲಃ ॥೮೩॥

ತತೋ ದ್ವಿವಿದಮೈನ್ದಾಭ್ಯಾಂ ನೀಲಾಯ ಚ ಪರಂತಪಃ ।
ಸರ್ವಾನ್ಕಾಮಗುಣಾನ್ವೀಕ್ಷ್ಯ ಪ್ರದದೌ ವಸುಧಾಧಿಪಃ ॥೮೪॥

ಸರ್ವೇ ವಾನರವೃದ್ಧಾಶ್ಚ ಯೇ ಚಾನ್ಯೇ ವಾನರೇಶ್ವರಾಃ ।
ವಾಸೋಭಿರ್ಭೂಷಣೈಶ್ಚೈವ ಯಥಾರ್ಹಂ ಪ್ರತಿಪೂಜಿತಾಃ ॥೮೫॥

ವಿಭೀಷಣೋಽಥ ಸುಗ್ರೀವೋ ಹನುಮಾಞ್ಜಾಮ್ಬವಾಂಸ್ತಥಾ ।
ಸರ್ವವಾನರಮುಖ್ಯಾಶ್ಚ ರಾಮೇಣಾಕ್ಲಿಷ್ಟಕರ್ಮಣಾ ॥೮೬॥

ಯಥಾರ್ಹಂ ಪೂಜಿತಾಃ ಸರ್ವೇ ಕಾಮ್ಯೆ ರತ್ನೈಶ್ಚ ಪುಷ್ಕಲೈಃ ।
ಪ್ರಹೃಷ್ಟಮನಸಃ ಸರ್ವೇ ಜಗ್ಮುರೇವ ಯಥಾಗತಮ್ ॥೮೭॥

ದೃಷ್ಟ್ವಾ ಸರ್ವೇ ಮಹಾತ್ಮಾನಸ್ತತಸ್ತೇ ಪ್ಲವಗರ್ಷಭಾಃ ।
ವಿಸೃಷ್ಟಾಃ ಪಾರ್ಥಿವೇನ್ದ್ರೇಣ ಕಿಷ್ಕಿನ್ಧಾಮಭ್ಯುಪಾಗಮನ್ ॥೮೮॥

ಸುಗ್ರೀವೋ ವಾನರಶ್ರೇಷ್ಠೋ ದೃಷ್ಟ್ವಾ ರಾಮಾಭಿಷೇಚನಮ್ ।
ಪೂಜಿತಶ್ಚೈವ ರಾಮೇಣ ಕಿಷ್ಕಿನ್ಧಾಂ ಪ್ರಾವಿಶತ್ಪುರೀಮ್ ॥೮೯॥

ವಿಭೀಷಣೋಽಪಿ ಧರ್ಮಾತ್ಮಾ ಸಹ ತೈರ್ನೈರ್ಋತರ್ಷಭೈಃ ।
ಲಬ್ಧ್ವಾ ಕುಲಧನಂ ರಾಜಾ ಲಙ್ಕಾಂ ಪ್ರಾಯಾನ್ಮಹಾಯಶಾಃ ॥೯೦॥

ಸ ರಾಜ್ಯಮಖಿಲಂ ಶಾಸನ್ನಿಹತಾರಿರ್ಮಹಾಯಶಾಃ ।
ರಾಘವಃ ಪರಮೋದಾರೋ ರರಾಜ ಪರಯಾ ಮುದಾ
ಉವಾಚ ಲಕ್ಷ್ಮಣಂ ರಾಮೋ ಧರ್ಮಜ್ಞಂ ಧರ್ಮವತ್ಸಲಃ ॥೯೧॥

ಆತಿಷ್ಠ ಧರ್ಮಜ್ಞ ಮಯಾ ಸಹೇಮಾಂ
ಗಾಂ ಪೂರ್ವರಾಜಾಧ್ಯುಷಿತಾಂ ಬಲೇನ ।
ತುಲ್ಯಂ ಮಯಾ ತ್ವಂ ಪಿತೃಭಿರ್ಧೃತಾ ಯಾ
ತಾಂ ಯೌವರಾಜ್ಯೇ ಧುರಮುದ್ವಹಸ್ವ ॥೯೨॥

ಸರ್ವಾತ್ಮನಾ ಪರ್ಯನುನೀಯಮಾನೋ
ಯದಾ ನ ಸೌಮಿತ್ರಿರುಪೈತಿ ಯೋಗಮ್ ।
ನಿಯುಜ್ಯಮಾನೋಽಪಿ ಚ ಯೌವರಾಜ್ಯೇ
ತತೋಽಭ್ಯಷಿಞ್ಚದ್ಭರತಂ ಮಹಾತ್ಮಾ ॥೯೩॥

ಪೌಣ್ಡರೀಕಾಶ್ವಮೇಧಾಭ್ಯಾಂ ವಾಜಪೇಯೇನ ಚಾಸಕೃತ್ ।
ಅನ್ಯೈಶ್ಚ ವಿವಿಧೈರ್ಯಜ್ಞೈರಯಜತ್ಪಾರ್ಥಿವಾತ್ಮಜಃ ॥೯೪॥

ರಾಜ್ಯಂ ದಶ ಸಹಸ್ರಾಣಿ ಪ್ರಾಪ್ಯ ವರ್ಷಾಣಿ ರಾಘವಃ ।
ಶತಾಶ್ವಮೇಧಾನಾಜಹ್ರೇ ಸದಶ್ವಾನ್ಭೂರಿದಕ್ಷಿಣಾನ್ ॥೯೫॥

ಆಜಾನುಲಮ್ಬಬಾಹುಃ ಸ ಮಹಾಸ್ಕನ್ಧಃ ಪ್ರತಾಪವಾನ್ ।
ಲಕ್ಷ್ಮಣಾನುಚರೋ ರಾಮಃ ಪೃಥಿವೀಮನ್ವಪಾಲಯತ್ ॥೯೬॥

ರಾಘವಶ್ಚಾಪಿ ಧರ್ಮಾತ್ಮಾ ಪ್ರಾಪ್ಯ ರಾಜ್ಯಮನುತ್ತಮಮ್ ।
ಈಜೇ ಬಹುವಿಧೈರ್ಯಜ್ಞೈಃ ಸಸುಹೃದ್ಜ್ಞಾತಿಬಾನ್ಧವೈಃ ॥೯೭॥

ನ ಪರ್ಯದೇವನ್ವಿಧವಾ ನ ಚ ವ್ಯಾಲಕೃತಂ ಭಯಮ್ ।
ನ ವ್ಯಾಧಿಜಂ ಭಯಂ ಚಾಸೀದ್ರಾಮೇ ರಾಜ್ಯಂ ಪ್ರಶಾಸತಿ ॥೯೮॥

ನಿರ್ದಸ್ಯುರಭವಲ್ಲೋಕೋ ನಾನರ್ಥಂ ಕಂಚಿದಸ್ಪೃಶತ್ ।
ನ ಚ ಸ್ಮ ವೃದ್ಧಾ ಬಾಲಾನಾಂ ಪ್ರೇತಕಾರ್ಯಾಣಿ ಕುರ್ವತೇ ॥೯೯॥

ಸರ್ವಂ ಮುದಿತಮೇವಾಸೀತ್ಸರ್ವೋ ಧರ್ಮಪರೋಽಭವತ್ ।
ರಾಮಮೇವಾನುಪಶ್ಯನ್ತೋ ನಾಭ್ಯಹಿಂಸನ್ಪರಸ್ಪರಮ್ ॥೧೦೦॥

ಆಸನ್ವರ್ಷಸಹಸ್ರಾಣಿ ತಥಾ ಪುತ್ರಸಹಸ್ರಿಣಃ ।
ನಿರಾಮಯಾ ವಿಶೋಕಾಶ್ಚ ರಾಮೇ ರಾಜ್ಯಂ ಪ್ರಶಾಸತಿ ॥೧೦೧॥

ರಾಮೋ ರಾಮೋ ರಾಮ ಇತಿ ಪ್ರಜಾನಾಮಭವನ್ಕಥಾಃ ।
ರಾಮಭೂತಂ ಜಗದಭೂದ್ರಾಮೇ ರಾಜ್ಯಂ ಪ್ರಶಾಸತಿ ॥೧೦೨॥

ನಿತ್ಯಮೂಲಾ ನಿತ್ಯಫಲಾಸ್ತರವಸ್ತತ್ರ ಪುಷ್ಪಿತಾಃ ।
ಕಾಮವರ್ಷೀ ಚ ಪರ್ಜನ್ಯಃ ಸುಖಸ್ಪರ್ಶಶ್ಚ ಮಾರುತಃ ॥೧೦೩॥

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಶೂದ್ರಾ ಲೋಭವಿವರ್ಜಿತಾಃ ।
ಸ್ವಕರ್ಮಸು ಪ್ರವರ್ತನ್ತೇ ತುಷ್ಟಾಃ ಸ್ವೈರೇವ ಕರ್ಮಭಿಃ ॥೧೦೪॥

ಆಸನ್ಪ್ರಜಾ ಧರ್ಮರತಾ ರಾಮೇ ಶಾಸತಿ ನಾನೃತಾಃ ।
ಸರ್ವೇ ಲಕ್ಷಣಸಂಪನ್ನಾಃ ಸರ್ವೇ ಧರ್ಮಪರಾಯಣಾಃ ॥೧೦೫॥

ದಶ ವರ್ಷಸಹಸ್ರಾಣಿ ರಾಮೋ ರಾಜ್ಯಮಕಾರಯತ್ ॥೧೦೬॥

ಧನ್ಯಂ ಯಶಸ್ಯಮಾಯುಷ್ಯಂ ರಾಜ್ಞಾಂ ಚ ವಿಜಯಾವಹಮ್ ।
ಆದಿಕಾವ್ಯಮಿದಂ ತ್ವಾರ್ಷಂ ಪುರಾ ವಾಲ್ಮೀಕಿನಾ ಕೃತಮ್ ॥೧೦೭॥

ಯಃ ಪಠೇಚ್ಛೃಣುಯಾಲ್ಲೋಕೇ ನರಃ ಪಾಪಾದ್ವಿಮುಚ್ಯತೇ ।
ಪುತ್ರಕಾಮಸ್ತು ಪುತ್ರಾನ್ವೈ ಧನಕಾಮೋ ಧನಾನಿ ಚ ॥೧೦೮॥

ಲಭತೇ ಮನುಜೋ ಲೋಕೇ ಶ್ರುತ್ವಾ ರಾಮಾಭಿಷೇಚನಮ್ ।
ಮಹೀಂ ವಿಜಯತೇ ರಾಜಾ ರಿಪೂಂಶ್ಚಾಪ್ಯಧಿತಿಷ್ಠತಿ ॥೧೦೯॥

ರಾಘವೇಣ ಯಥಾ ಮಾತಾ ಸುಮಿತ್ರಾ ಲಕ್ಷ್ಮಣೇನ ಚ ।
ಭರತೇನ ಚ ಕೈಕೇಯೀ ಜೀವಪುತ್ರಾಸ್ತಥಾ ಸ್ತ್ರಿಯಃ ।
ಭವಿಷ್ಯನ್ತಿ ಸದಾನನ್ದಾಃ ಪುತ್ರಪೌತ್ರಸಮನ್ವಿತಾಃ ॥೧೧೦॥

ಶ್ರುತ್ವಾ ರಾಮಾಯಣಮಿದಂ ದೀರ್ಘಮಾಯುಶ್ಚ ವಿನ್ದತಿ ।
ರಾಮಸ್ಯ ವಿಜಯಂ ಚೇಮಂ ಸರ್ವಮಕ್ಲಿಷ್ಟಕರ್ಮಣಃ ॥೧೧೧॥

ಶೃಣೋತಿ ಯ ಇದಂ ಕಾವ್ಯಂ ಪುರಾ ವಾಲ್ಮೀಕಿನಾ ಕೃತಮ್ ।
ಶ್ರದ್ದಧಾನೋ ಜಿತಕ್ರೋಧೋ ದುರ್ಗಾಣ್ಯತಿತರತ್ಯಸೌ ॥೧೧೨॥

ಸಮಾಗಮಂ ಪ್ರವಾಸಾನ್ತೇ ರಮನ್ತೇ ಸಹ ಬಾನ್ಧವೈಃ ।
ಶೃಣ್ವನ್ತಿ ಯ ಇದಂ ಕಾವ್ಯಂ ಪುರಾ ವಾಲ್ಮೀಕಿನಾ ಕೃತಮ್ ॥೧೧೩॥

ತೇ ಪ್ರಾರ್ಥಿತಾನ್ವರಾನ್ಸರ್ವಾನ್ಪ್ರಾಪ್ನುವನ್ತೀಹ ರಾಘವಾತ್ ॥೧೧೪॥

ಶ್ರವಣೇನ ಸುರಾಃ ಸರ್ವೇ ಪ್ರೀಯನ್ತೇ ಸಂಪ್ರಶೃಣ್ವತಾಮ್ ।
ವಿನಾಯಕಾಶ್ಚ ಶಾಮ್ಯನ್ತಿ ಗೃಹೇ ತಿಷ್ಠನ್ತಿ ಯಸ್ಯ ವೈ ॥೧೧೫॥

ವಿಜಯೇತ ಮಹೀಂ ರಾಜಾ ಪ್ರವಾಸೀ ಸ್ವಸ್ತಿಮಾನ್ಭವೇತ್ ।
ಸ್ತ್ರಿಯೋ ರಜಸ್ವಲಾಃ ಶ್ರುತ್ವಾ ಪುತ್ರಾನ್ಸೂಯುರನುತ್ತಮಾನ್ ॥೧೧೬॥

ಪೂಜಯಂಶ್ಚ ಪಠಂಶ್ಚೇಮಮಿತಿಹಾಸಂ ಪುರಾತನಮ್ ।
ಸರ್ವಪಾಪೈಃ ಪ್ರಮುಚ್ಯೇತ ದೀರ್ಘಮಾಯುರವಾಪ್ನುಯಾತ್ ॥೧೧೭॥

ಪ್ರಣಮ್ಯ ಶಿರಸಾ ನಿತ್ಯಂ ಶ್ರೋತವ್ಯಂ ಕ್ಷತ್ರಿಯೈರ್ದ್ವಿಜಾತ್ ।
ಐಶ್ವರ್ಯಂ ಪುತ್ರಲಾಭಶ್ಚ ಭವಿಷ್ಯತಿ ನ ಸಂಶಯಃ ॥೧೧೮॥

ರಾಮಾಯಣಮಿದಂ ಕೃತ್ಸ್ನಂ ಶೃಣ್ವತಃ ಪಠತಃ ಸದಾ ।
ಪ್ರೀಯತೇ ಸತತಂ ರಾಮಃ ಸ ಹಿ ವಿಷ್ಣುಃ ಸನಾತನಃ ॥೧೧೯॥

ಆದಿದೇವೋ ಮಹಾಬಾಹುರ್ಹರಿರ್ನಾರಾಯಣಃ ಪ್ರಭುಃ ।
ಸಾಕ್ಷಾದ್ರಾಮೋ ರಘುಶ್ರೇಷ್ಠಃ ಶೇಷೋ ಲಕ್ಷ್ಮಣ ಉಚ್ಯತೇ ॥೧೨೦॥

ಏವಮೇತತ್ಪುರಾವೃತ್ತಮಾಖ್ಯಾನಂ ಭದ್ರಮಸ್ತು ವಃ ।
ಪ್ರವ್ಯಾಹರತ ವಿಸ್ರಬ್ಧಂ ಬಲಂ ವಿಷ್ಣೋಃ ಪ್ರವರ್ಧತಾಮ್ ॥೧೨೧॥

ದೇವಾಶ್ಚ ಸರ್ವೇ ತುಷ್ಯನ್ತಿ ಗ್ರಹಣಾಚ್ಛ್ರವಣಾತ್ತಥಾ ।
ರಾಮಾಯಣಸ್ಯ ಶ್ರವಣೇ ತುಷ್ಯನ್ತಿ ಪಿತರಃ ಸದಾ ॥೧೨೨॥

ಭಕ್ತ್ಯಾ ರಾಮಸ್ಯ ಯೇ ಚೇಮಾಂ ಸಂಹಿತಾಮೃಷಿಣಾ ಕೃತಾಮ್ ।
ಲೇಖಯನ್ತೀಹ ಚ ನರಾಸ್ತೇಷಾಂ ವಾಸಸ್ತ್ರಿವಿಷ್ಟಪೇ ॥೧೨೩॥

ಕುಟುಮ್ಬವೃದ್ಧಿಂ ಧನಧಾನ್ಯವೃದ್ಧಿಂ
ಸ್ತ್ರಿಯಶ್ಚ ಮುಖ್ಯಾಃ ಸುಖಮುತ್ತಮಂ ಚ ।
ಶ್ರುತ್ವಾ ಶುಭಂ ಕಾವ್ಯಮಿದಂ ಮಹಾರ್ಥಂ
ಪ್ರಾಪ್ನೋತಿ ಸರ್ವಾಂ ಭುವಿ ಚಾರ್ಥಸಿದ್ಧಿಮ್ ॥೧೨೪॥

ಆಯುಷ್ಯಮಾರೋಗ್ಯಕರಂ ಯಶಸ್ಯಂ
ಸೌಭ್ರಾತೃಕಂ ಬುದ್ಧಿಕರಂ ಶುಭಂ ಚ ।
ಶ್ರೋತವ್ಯಮೇತನ್ನಿಯಮೇನ ಸದ್ಭಿ-
ರಾಖ್ಯಾನಮೋಜಸ್ಕರಮೃದ್ಧಿಕಾಮೈಃ ॥೧೨೫॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಯುದ್ಧಕಾಣ್ಡೇ ಅಷ್ಟಾವಿಂಶತ್ಯಧಿಕಶತತಮಃ ಸರ್ಗಃ

ಯುದ್ಧಕಾಣ್ಡಃ ಸಮಾಪ್ತಃ

ಪಾರಾಯಣಾನಂತರದಲ್ಲಿ ಹೇಳಬೇಕಾದ ಶ್ಲೋಕಗಳು

ಸ್ವಸ್ತಿ ಪ್ರಜಾಭ್ಯಃ ಪರಿಪಾಲಯನ್ತಾಂ
ನ್ಯಾಯ್ಯೇನ ಮಾರ್ಗೇಣ ಮಹೀಂ ಮಹೀಶಾಃ ।
ಗೋಬ್ರಾಹ್ಮಣೇಭ್ಯಃ ಶುಭಮಸ್ತು ನಿತ್ಯಂ
ಲೋಕಾಃ ಸಮಸ್ತಾಃ ಸುಖಿನೋ ಭವನ್ತು ॥

ಕಾಲೇ ವರ್ಷತು ಪರ್ಜನ್ಯಃ ಪೃಥಿವೀ ಸಸ್ಯಶಾಲಿನೀ ।
ದೇಶೋಽಯಂ ಕ್ಷೋಭರಹಿತೋ ಬ್ರಾಹ್ಮಣಾಃ ಸನ್ತು ನಿರ್ಭಯಾಃ ॥

ಅಪುತ್ರಾಃ ಪುತ್ರಿಣಃ ಸನ್ತು ಪುತ್ರಿಣಃ ಸನ್ತು ಪೌತ್ರಿಣಃ ।
ಅಧನಾಃ ಸಧನಾಃ ಸನ್ತು ಜೀವನ್ತು ಶರದಾಂ ಶತಮ್ ॥

ಮಙ್ಗಲಂ ಕೋಸಲೇನ್ದ್ರಾಯ ಮಹನೀಯಗುಣಾತ್ಮನೇ ।
ಚಕ್ರವರ್ತಿತನೂಜಾಯ ಸಾರ್ವಭೌಮಾಯ ಮಙ್ಗಲಮ್ ॥

ಯನ್ಮಙ್ಗಲಂ ಸುಪರ್ಣಸ್ಯ ವಿನತಾಕಲ್ಪಯತ್ಪುರಾ ।
ಅಮೃತಂ ಪ್ರಾರ್ಥಯಾನಸ್ಯ ತತ್ತೇ ಭವತು ಮಙ್ಗಲಮ್ ॥

ಅಮೃತೋತ್ಪಾದನೇ ದೈತ್ಯಾನ್ಘ್ನತೋ ವಜ್ರಧರಸ್ಯ ಯತ್ ।
ಅದಿತಿರ್ಮಙ್ಗಲಂ ಪ್ರಾದಾತ್ತತ್ತೇ ಭವತು ಮಙ್ಗಲಮ್ ॥

ತ್ರೀನ್ವಿಕ್ರಮಾನ್ಪ್ರಕ್ರಮತೋ ವಿಷ್ಣೋರಮಿತತೇಜಸಃ ।
ಯದಾಸೀನ್ಮಙ್ಗಲಂ ರಾಮ ತತ್ತೇ ಭವತು ಮಙ್ಗಲಮ್ ॥

ಋತವಃ ಸಾಗರಾ ದ್ವೀಪಾ ವೇದಾ ಲೋಕಾ ದಿಶಶ್ಚ ತೇ ।
ಮಙ್ಗಲಾನಿ ಮಹಾಬಾಹೋ ದಿಶನ್ತು ತರ ಸರ್ವದಾ ॥

ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ।
ತತ್ಸರ್ವಂ ಕ್ಷಮ್ಯತಾಂ ದೇವ ನಾರಾಯಣ ನಮೋಽಸ್ತು ತೇ ॥

ಹರಿಃ ಓಂ ಶ್ರೀಕೃಷ್ಣಾರ್ಪಣಮಸ್ತು ಶ್ರೀರಾಮಚಂದ್ರಾರ್ಪಣಮಸ್ತು
ಶ್ರೀಸದ್ಗುರುಚರಣಾರವಿನ್ದಾರ್ಪಣಮಸ್ತು ಓಂ ತತ್ಸತ್

♦

ಶ್ರೀಮಹಾಗಣಪತಯೇ ನಮಃ   ಶ್ರೀಮಹಾಸರಸ್ವತ್ಯೈ ನಮಃ   ಶ್ರೀಸದ್ಗುರವೇ ನಮಃ

ತಪಃಸ್ವಾಧ್ಯಾಯನಿರತಂ ತಪಸ್ವೀ ವಾಗ್ವಿದಾಂ ವರಮ್ ।
ನಾರದಂ ಪರಿಪಪ್ರಚ್ಛ ವಾಲ್ಮೀಕಿರ್ಮುನಿಪುಙ್ಗವಮ್ ॥

ಶ್ರೀಮದ್ವಾಲ್ಮೀಕಿರಾಮಾಯಣ-ಒಂಬತ್ತನೆಯ ಸಂಪುಟ
ಯುದ್ಧಕಾಂಡ

ಇಂದ್ರಜಿತುವು ಬ್ರಹ್ಮಾಸ್ತ್ರದಿಂದ ವಾನರಸೈನಿಕರನ್ನೂ ರಾಮ-ಲಕ್ಷ್ಮಣರನ್ನೂ ಮೂರ್ಛೆಗೊಳಿಸಿದುದು

ತತೋ ಹತಾನ್ರಾಕ್ಷಸಪುಂಗವಾಂಸ್ತಾ-
ನ್ದೇವಾನ್ತಕಾದಿತ್ರಿಶಿರೋऽತಿಕಾಯಾನ್ ।
ರಕ್ಷೋಗಣಾಸ್ತತ್ರ ಹತಾವಶಿಷ್ಟಾ-
ಸ್ತೇ ರಾವಣಾಯ ತ್ವರಿತಂ ಶಶಂಸುಃ ॥೧॥

ರಣಾಂಗಣದಲ್ಲಿ ಅಳಿದುಳಿದಿದ್ದ ರಾಕ್ಷಸರು ಬಹಳ ಶೀಘ್ರವಾಗಿ ರಾವಣನ ಸಮೀಪಕ್ಕೆ ಹೋಗಿ ದೇವಾಂತಕ, ತ್ರಿಶಿರಸ, ಅತಿಕಾಯ-ಇವರೇ ಮೊದಲಾದ ರಾಕ್ಷಸಶ್ರೇಷ್ಠರು ಯುದ್ಧದಲ್ಲಿ ಹತರಾದರೆಂಬ ವಾರ್ತೆಯನ್ನು ರಾಜನಿಗೆ ತಿಳಿಸಿದರು.

ತನ್ನ ಕಡೆಯ ಸೇನಾನಾಯಕರೆಲ್ಲರೂ ಹತರಾದುದನ್ನು ಕೇಳಿ ಮಹಾ ಬಲನಾದ ರಾವಣರಾಜನ ಕಣ್ಣುಗಳಲ್ಲಿ ಕಂಬನಿದುಂಬಿತು. ಪುತ್ರರ ಮತ್ತು ಸಹೋದರರ ವಧೆಯ ಕರ್ಣಕಠೋರವಾದ ವಾರ್ತೆಗಳನ್ನು ಕೇಳಿ ರಾಜನು ಚಿಂತಾಪರನಾಗಿ ಬಹಳವಾಗಿ ವಿಚಾರಮಾಡತೊಡಗಿದನು. ರಾಜನು ಹಾಗೆ ಶೋಕಸಮುದ್ರದಲ್ಲಿ ಮುಳುಗಿ ದೀನಮುಖನಾಗಿರುವುದನ್ನು ನೋಡಿ ರಥಿಗಳಲ್ಲಿ ಶ್ರೇಷ್ಠನಾದ ರಾಕ್ಷಸರಾಜಕುಮಾರನಾದ ಇಂದ್ರಜಿತುವು ಹೇಳಿದನು :

"ತಂದೆಯೇ! ರಾಕ್ಷಸೇಂದ್ರ! ನಿನ್ನ ಮಗನಾದ ಇಂದ್ರಜಿತುವು ಇನ್ನೂ ಬದುಕಿರುವಾಗ ನೀನು ಹೀಗೆ ದುಃಖಿಸಬಾರದು. ಯುದ್ಧದಲ್ಲಿ ಈ ಇಂದ್ರ ಜಿತುವಿನ ಬಾಣಗಳಿಂದ ಗಾಯಗೊಂಡ ಯಾವನು ತಾನೇ ಜೀವವನ್ನುಳಿಸಿ ಕೊಂಡು ಹೋಗುವನು? ರಾವಣೇಶ್ವರ! ಆ ರಾಮನು ತನ್ನ ತಮ್ಮನಾದ ಲಕ್ಷ್ಮಣನೊಡನೆ ನನ್ನ ಬಾಣಗಳಿಂದ ಛಿನ್ನ-ಭಿನ್ನನಾಗುವುದನ್ನು ನೀನಿಂದು ಕಾಣುವೆ. ಅಂಗಾಂಗಗಳಲ್ಲಿಯೂ ನಿಶಿತವಾದ ಬಾಣಗಳು ಚುಚ್ಚಿ ಪ್ರಾಣ ಗಳನ್ನು ಕಳೆದುಕೊಂಡು ಅವನಿಂದು ರಣಾಂಗಣದಲ್ಲಿ ಮಲಗುವುದನ್ನು ನೋಡು. ಸುನಿಶಿತವಾದ ಮತ್ತು ಪೌರುಷದಿಂದಲೂ ದೈವಬಲದಿಂದಲೂ ಯುಕ್ತವಾದ, ಇಂದ್ರನ ಶತ್ರುವಾದ ಈ ನನ್ನ ಪ್ರತಿಜ್ಞೆಯನ್ನು ಕೇಳು, ತಂದೆಯೇ! ಈಗಲೇ ನಾನು ಲಕ್ಷ್ಮಣಸಮೇತನಾದ ರಾಮನನ್ನು ನನ್ನ ಅಮೋಘವಾದ ಬಾಣಗಳಿಂದ ತೃಪ್ತಿಗೊಳಿಸುತ್ತೇನೆ. ಬಲಿಚಕ್ರವರ್ತಿಯ ಯಜ್ಞಮಂಟಪದಲ್ಲಿ ತ್ರಿವಿಕ್ರಮರೂಪಿಯಾದ ಮಹಾವಿಷ್ಣುವಿನ ಉಗ್ರವಾದ ಪರಾಕ್ರಮವನ್ನು ನೋಡಿದಂತೆ–ಇಂದು ನನ್ನ ಅತುಲವಾದ ಪರಾಕ್ರಮವನ್ನು ಇಂದ್ರ-ಯಮ-ವಿಷ್ಣು-ರುದ್ರರೂ, ಸಾಧ್ಯರೂ, ಚಂದ್ರ-ಸೂರ್ಯಾಗ್ನಿಗಳೂ ನೋಡುತ್ತಾರೆ."

ಮಹಾಸತ್ತ್ವಯುಕ್ತನಾದ, ಇಂದ್ರಶತ್ರುವಾದ ಇಂದ್ರಜಿತುವು ಹೀಗೆ ಹೇಳಿ ರಾವಣೇಶ್ವರನ ಅನುಜ್ಞೆಯನ್ನು ಪಡೆದು ವಾಯುವೇಗಕ್ಕೆ ಸಮಾನವಾದ ವೇಗದಿಂದ ಕೂಡಿದ್ದ, ಶ್ರೇಷ್ಠವಾದ ಕತ್ತೆಗಳಿಂದ ಹೂಡಲ್ಪಟ್ಟಿದ್ದ, ಯುದ್ಧಸಾಮಗ್ರಿಗಳಿಂದ ಸಂಪನ್ನವಾಗಿದ್ದ ರಥದ ಮೇಲೇರಿ ಕುಳಿತನು. ಹೀಗೆ ಆ ಮಹಾತೇಜಸ್ವಿಯಾದ ಇಂದ್ರಜಿತುವು ಇಂದ್ರನ ರಥದಂತೆಯೇ ಇದ್ದ ರಥದಲ್ಲಿ ಕುಳಿತು ಯುದ್ಧವು ನಡೆಯುತ್ತಿದ್ದ ಸ್ಥಳಕ್ಕೆ ಶೀಘ್ರವಾಗಿ ಧಾವಿ ಸಿದನು.

ಮಹಾತ್ಮನಾದ ಇಂದ್ರಜಿತುವು ಯುದ್ಧಕ್ಕೆ ಹೊರಟುದನ್ನು ನೋಡಿ ಮಹಾಬಲಿಷ್ಠರಾದ ಹಲವಾರು ರಾಕ್ಷಸರು ಶ್ರೇಷ್ಠವಾದ ಧನುಸ್ಸುಗಳನ್ನು ಹಿಡಿದು ಹರ್ಷೋತ್ಸಾಹಗಳಿಂದ ಕೂಡಿ ರಾಜಪುತ್ರನನ್ನನುಸರಿಸಿ ಹೊರ ಟರು. ಅವರಲ್ಲಿ ಕೆಲವರು ರಾಕ್ಷಸಯೋಧರು ಆನೆಗಳ ಮೇಲೆ ಕುಳಿತು ಹೊರಟರು. ಕೆಲವರು ಕುದುರೆಗಳ ಮೇಲೂ, ಕೆಲವರು ವ್ಯಾಘ್ರಗಳ

ಮೇಲೂ ಕುಳಿತು ಯುದ್ಧಕ್ಕೆ ಹೊರಟರು. ಚೇಳು, ಬೆಕ್ಕು, ಕತ್ತೆ, ಒಂಟೆ, ಸರ್ಪಗಳು, ಹಂದಿಗಳು, ಮಾಂಸಭಕ್ಷಿಗಳಾದ ಹಿಂಸ್ರಕ ಪ್ರಾಣಿಗಳು, ಸಿಂಹ ಗಳು, ಪರ್ವತೋಪಮವಾದ ಗುಳ್ಳೇನರಿಗಳು, ಕಾಗೆಗಳು, ಹಂಸಗಳು– ಇವೇ ಮುಂತಾದ ಪ್ರಾಣಿಗಳನ್ನು ವಾಹನಗಳನ್ನಾಗಿ ಮಾಡಿಕೊಂಡು ಭಯಂಕರಪರಾಕ್ರಮರಾದ ರಾಕ್ಷಸಯೋಧರು ಇಂದ್ರಜಿತುವನ್ನು ಅನುಸರಿಸಿ ಹೊರಟರು. ಅವರೆಲ್ಲರೂ ಪ್ರಾಸ-ಪಟ್ಟಿಶ-ಖಡ್ಗ-ಗಂಡುಗೊಡಲಿ-ಗದೆ-ಭುಷುಂಡಿ-ಮುದ್ಗರ-ದಂಡ-ಶತಘ್ನಿ-ಪರಿಘ–ಇವೇ ಮುಂತಾದ ಆಯುಧ ಗಳನ್ನು ಹಿಡಿದಿದ್ದರು. ಶಂಖಗಳ ಧ್ವನಿಯಿಂದ ಮಿಶ್ರಿತವಾಗಿದ್ದ ಭಯಂಕರವಾದ ಭೇರೀನಿನಾದವು ಸರ್ವತ್ರ ಕೇಳಿಬರುತ್ತಿರಲಾಗಿ ಇಂದ್ರನ ಶತ್ರುವಾದ ವೀರ್ಯವಂತನಾದ ಇಂದ್ರಜಿತುವು ರಾಕ್ಷಸರಿಂದ ಸ್ತುತಿಸಲ್ಪಡುತ್ತಾ ಬಹಳ ವೇಗವಾಗಿ ಧಾವಿಸಿದನು. ಪೂರ್ಣಚಂದ್ರನಿಂದ ಕೂಡಿರುವ ಆಕಾಶವು ಶೋಭಾಯಮಾನವಾಗಿ ಕಾಣುವಂತೆ–ಶಂಖ ಮತ್ತು ಮೊಲದ ಬಣ್ಣಕ್ಕೆ ಸಮಾನವಾದ ಬಿಳೀಬಣ್ಣದಿಂದ ಕೂಡಿದ್ದ ಮೇಲ್ಭಾಗದಲ್ಲಿದ್ದ ಛತ್ರಿಯಿಂದ ಇಂದ್ರಜಿತುವು ಶೋಭಾಯಮಾನನಾಗಿ ಕಾಣುತ್ತಿದ್ದನು. ಸುವರ್ಣಮಯ ವಾದ ಆಭರಣಗಳಿಂದ ಸಮಲಂಕೃತನಾಗಿದ್ದ, ಸಮಸ್ತ ಧನುರ್ಧಾರಿ ಗಳಲ್ಲಿಯೂ ಶ್ರೇಷ್ಠನಾಗಿದ್ದ, ವೀರನಾದ ಇಂದ್ರಜಿತುವು ಶ್ರೇಷ್ಠವಾದ ಮತ್ತು ಸುಂದರವಾದ ಚಾಮರಗಳಿಂದ ಬೀಸಲ್ಪಡುತ್ತಿದ್ದನು. ವಿಶಾಲವಾದ ಸೈನ್ಯದೊಡನೆ ಯುದ್ಧಕ್ಕೆ ಹೊರಟಿದ್ದ ಪುತ್ರನನ್ನು ನೋಡಿ ರಾಕ್ಷಸರಿಗೆ ಅಧಿಪತಿಯಾಗಿದ್ದ ಶ್ರೀಮಂತನಾದ ರಾವಣನು ಹೇಳಿದನು :

ತ್ವಮಪ್ರತಿರಥಃ ಪುತ್ರ ತ್ವಯಾ ವೈ ವಾಸವೋ ಜಿತಃ ।
ಕಿಂ ಪುನರ್ಮಾನುಷಂ ಧೃಷ್ಯಂ ನಿಹನಿಷ್ಯಸಿ ರಾಘವಮ್ ॥೧೮॥

"ಮಗು! ನಿನ್ನ ರಥಕ್ಕೆ ಎದುರಾಗಿ ನಿಂತು ಯುದ್ಧಮಾಡುವವನು ಯಾರೂ ಇಲ್ಲ. ಏಕೆಂದರೆ : ಅತುಲಪರಾಕ್ರಮಿಯಾದ ಇಂದ್ರನೇ ನಿನ್ನಿಂದ ಪರಾಜಿತನಾಗಿದ್ದಾನೆ. ಹೀಗಿರುವಾಗ ಸಾಮಾನ್ಯರಿಂದಲೂ ಎದುರಿಸಲು ಶಕ್ಯ ನಾದ, ಮನುಷ್ಯನಾದ ರಾಮನ ವಿಷಯವಾಗಿ ಹೇಳುವುದೇನಿದೆ? ಇಂದು ನೀನು ನಿಶ್ಚಯವಾಗಿಯೂ ಆ ರಾಮನನ್ನು ಸಂಹರಿಸುವೆ."

ರಾಕ್ಷಸರಾಜನಾದ ರಾವಣನು ಹೀಗೆ ಹೇಳಲು ಇಂದ್ರಜಿತುವು

ತಂದೆಯ ಆ ಅಮೋಘವಾದ ಆಶೀರ್ವಾದವನ್ನು ತಲೆಬಾಗಿ ಸ್ವೀಕರಿಸಿದನು. ಆ ಸಮಯದಲ್ಲಿ ಸೂರ್ಯನ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಕಂಗೊಳಿಸುತ್ತಿದ್ದ, ಅಪ್ರತಿಮಪರಾಕ್ರಮಿಯಾದ ಇಂದ್ರಜಿತುವಿನಿಂದ ಲಂಕಾಪಟ್ಟಣವು ಸೂರ್ಯನಿಂದ ಶೋಭಾಯಮಾನವಾಗಿ ಕಾಣುವ ಆಕಾಶದಂತೆಯೇ ರಾರಾಜಿಸಿತು.

ಮಹಾತೇಜಸ್ವಿಯಾದ, ಶತ್ರುದಮನನಾದ ಇಂದ್ರಜಿತುವು ರಣ ಭೂಮಿಯನ್ನು ಸೇರಿ ರಥದ ಸುತ್ತಲೂ ಮಹಾವೀರರಾದ ಅಂಗರಕ್ಷಕರಾದ ರಾಕ್ಷಸರನ್ನು ನಿಲ್ಲಿಸಿಕೊಂಡನು. ಬಳಿಕ ಅಗ್ನಿಯ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಕೂಡಿದ್ದ ರಾಕ್ಷಸಶ್ರೇಷ್ಠನಾದ ಆ ಇಂದ್ರಜಿತುವು ಶ್ರೇಷ್ಠವಾದ ಮಂತ್ರಗಳಿಂದ ಹುತಾಶನನಿಗೆ ಆಹುತಿಗಳನ್ನು ಸಮರ್ಪಿಸಿದನು. ಅನಂತರ ಚಂದನ-ಲಾಜಪುಷ್ಪಗಳಿಂದಲೂ-ಹವಿಸ್ಸುಗಳಿಂದಲೂ ಅಗ್ನಿದೇವನನ್ನು ಸಂಪೂಜಿಸಿದನು. ಅವನು ಆಗ ಮಾಡಿದ ಅಗ್ನಿಪೂಜೆಗೆ ಶಸ್ತ್ರಗಳೇ ಪರಿಸ್ತರಣ ಗಳಾಗಿದ್ದುವು. ತಾರೇಗಿಡದ ಕಡ್ಡಿಗಳೇ ಸಮಿತ್ತುಗಳಾಗಿದ್ದುವು. ಇಂದ್ರಜಿತುವು ಕೆಂಪುಬಣ್ಣದ ವಸ್ತ್ರಗಳನ್ನುಟ್ಟಿದ್ದನು. ಸ್ರುಕ್-ಸ್ರುವಗಳು ಕಬ್ಬಿಣದಿಂದ ಮಾಡಲ್ಪಟ್ಟಿದ್ದುವು. ಇಂದ್ರಜಿತುವು ರಣಭೂಮಿಯಲ್ಲಿಯೇ ಅಗ್ನಿಯನ್ನು ಪ್ರತಿಷ್ಠಾಪಿಸಿ ತೋಮರಗಳಿಂದ ಕೂಡಿದ ಬಾಣಗಳಿಂದ ನಾಲ್ಕು ಕಡೆಗಳ ಲ್ಲಿಯೂ ಪರಿಸ್ತರಣವನ್ನಿಟ್ಟು ಹೋಮದ ಸಲುವಾಗಿ ಜೀವಂತವಾಗಿದ್ದ ಕಪ್ಪಾದ ಮೇಕೆಯ ತಲೆಯನ್ನು ಕೈಗೆತ್ತಿಕೊಂಡನು. ಮೇಕೆಯ ತಲೆಯನ್ನು ಒಂದು ಬಾರಿಗೆ ಅಗ್ನಿಯಲ್ಲಿ ಹೋಮಮಾಡಿದ ಕೂಡಲೇ ಅಗ್ನಿಯು ಪ್ರಜ್ವ ಲಿಸತೊಡಗಿದನು. ಹೊಗೆಯಿಂದ ಕೂಡಿರದ ಮಹಾಜ್ವಾಲೆಗಳು ಹೊರ ಹೊಮ್ಮುತ್ತಿದ್ದುವು. ಹಿಂದೆ ದೇವತೆಗಳೊಡನೆ ಯುದ್ಧಕ್ಕೆ ಹೊರಟಿದ್ದಾಗಲೂ ಇದೇ ವಿಧವಾದ ವಿಜಯಸೂಚಕವಾದ ಚಿಹ್ನೆಗಳು ಅಗ್ನಿದೇವನಲ್ಲಿ ಕಂಡು ಬಂದಿದ್ದುವು. ಅಗ್ನಿದೇವನ ಜ್ವಾಲೆಗಳು ದಕ್ಷಿಣಾವರ್ತವಾಗಿ ಸುತ್ತುತ್ತಿದ್ದುವು. ಪುಟಕ್ಕೆಹಾಕಿದ ಚಿನ್ನದಂತೆ ಆ ಅಗ್ನಿದೇವನು ಬೆಳಗುತ್ತಿದ್ದನು. ಅಗ್ನಿದೇವನು ಆ ರೂಪದಲ್ಲಿ ತಾನೇ ಮೇಲೆ ಬಂದು ಇಂದ್ರಜಿತುವು ಸಮರ್ಪಿಸಿದ ಹವಿಸ್ಸನ್ನು ಪ್ರತಿಗ್ರಹಿಸಿದನು. ಬಳಿಕ ಅಸ್ತ್ರವಿದ್ಯಾವಿಶಾರದನಾದ ಇಂದ್ರಜಿತುವು ಮಂತ್ರಪೂರ್ವಕವಾಗಿ ಬ್ರಹ್ಮಾಸ್ತ್ರವನ್ನು ಆಹ್ವಾನಿಸಿದನು. ಅನಂತರ ತನ್ನ ರಥ, ಧನುಸ್ಸು ಇವೇ ಮುಂತಾದ ಸಕಲ ಯುದ್ಧಸಾಮಗ್ರಿಗಳನ್ನೂ ಬ್ರಹ್ಮಾಸ್ತ್ರ

ಮಂತ್ರದಿಂದಲೇ ಅಭಿಮಂತ್ರಿಸಿದನು. ಇಂದ್ರಜಿತುವು ಅಗ್ನಿಗೆ ಆಹುತಿಯನ್ನಿತ್ತು ಬ್ರಹ್ಮಾಸ್ತ್ರವನ್ನು ಆಹ್ವಾನಿಸಿದೊಡನೆಯೇ ಸೂರ್ಯ-ಚಂದ್ರ- ಗ್ರಹ-ನಕ್ಷತ್ರಗಳೂ ಮತ್ತು ಅಂತರಿಕ್ಷದಲ್ಲಿದ್ದ ಇತರ ಪ್ರಾಣಿಗಳೂ ಬಹಳವಾಗಿ ಭಯಗೊಂಡುವು. ಅಗ್ನಿಯಂತೆ ಪ್ರದೀಪ್ತವಾದ ತೇಜಸ್ಸಿನಿಂದ ಬೆಳಗುತ್ತಿದ್ದ, ಮಹೇಂದ್ರನ ಪ್ರಭಾವಕ್ಕೆ ಸದೃಶವಾದ ಪ್ರಭಾವವನ್ನು ಹೊಂದಿದ್ದ ರಾವಣ ಪುತ್ರನು ಯಥಾವಿಧಿಯಾಗಿ ಅಗ್ನಿಯಲ್ಲಿ ಹೋಮಮಾಡಿದನಂತರ ಧನುಸ್ಸು-ಬಾಣ-ಕತ್ತಿ-ರಥ-ಕುದುರೆಗಳಿಂದ ಕೂಡಿ ಆಕಾಶದಲ್ಲಿ ಅದೃಶ್ಯನಾದನು. ರಾವಣಿಯು ಆಕಾಶದಲ್ಲಿ ಅದೃಶ್ಯನಾದನಂತರ ಕುದುರೆಗಳಿಂದಲೂ ರಥ ಗಳಿಂದಲೂ ವ್ಯಾಪ್ತವಾಗಿದ್ದ, ಪತಾಕೆ-ಧ್ವಜಗಳಿಂದ ಸುಶೋಭಿತವಾಗಿದ್ದ ರಾಕ್ಷಸರ ಸೈನ್ಯವು ವಾನರಸೈನ್ಯದೊಡನೆ ಯುದ್ಧಮಾಡುವ ಇಚ್ಛೆಯಿಂದ ಗರ್ಜನೆಮಾಡುತ್ತಾ ಹೊರಟಿತು. ಆ ರಾಕ್ಷಸಸೈನಿಕರು ದುಸ್ಸಹವಾದ ವೇಗ ದಿಂದ ಕೂಡಿದ್ದ, ಸುವರ್ಣಭೂಷಿತವಾಗಿದ್ದ, ವಿಚಿತ್ರವಾಗಿದ್ದ ಅಸಂಖ್ಯಾತ ವಾದ ಬಾಣಗಳಿಂದಲೂ, ತೋಮರಗಳಿಂದಲೂ, ಅಂಕುಶಗಳಿಂದಲೂ ವಾನರಸೈನಿಕರನ್ನು ಪ್ರಹರಿಸತೊಡಗಿದರು. ಶತ್ರುಗಳ ವಿಷಯದಲ್ಲಿ ಪರಮ ಕ್ರುದ್ಧನಾಗಿದ್ದ ರಾವಣಿಯು ವಾನರರೊಡನೆ ಯುದ್ಧದಲ್ಲಿ ತೊಡಗಿದ್ದ ರಾಕ್ಷಸ ರನ್ನು ನೋಡಿ ಎಲ್ಲರನ್ನೂ ಪ್ರೋತ್ಸಾಹಿಸುತ್ತಾ ಹೇಳಿದನು :

ಹೃಷ್ಟಾ ಭವನ್ತೋ ಯುಧ್ಯನ್ತು ವಾನರಾಣಾಂ ಜಿಘಾಂಸಯಾ ॥

"ವಾನರರನ್ನು ಕೊಲ್ಲುವ ಅಭಿಲಾಷೆಯನ್ನಿಟ್ಟುಕೊಂಡು ನೀವೆಲ್ಲರೂ ಪರಮಸಂತೋಷದಿಂದ ಅವರೊಡನೆ ಯುದ್ಧಮಾಡಿರಿ."

ಇಂದ್ರಜಿತುವಿನ ಆ ಮಾತನ್ನು ಕೇಳಿ ವಿಜಯಕಾಂಕ್ಷಿಗಳಾದ ರಾಕ್ಷಸರು ಉತ್ಸಾಹಿತರಾಗಿ ಗಟ್ಟಿಯಾಗಿ ಗರ್ಜನೆಮಾಡುತ್ತಾ ವಾನರಸೈನಿಕರ ಮೇಲೆ ಭಯಂಕರವಾದ ರೀತಿಯಲ್ಲಿ ಬಾಣಗಳ ಮಳೆಗರೆದರು. ರಾಕ್ಷಸರಿಂದ ಸುತ್ತು ವರಿಯಲ್ಪಟ್ಟಿದ್ದ ಇಂದ್ರಜಿತುವೂ ಆ ಸಮಯದಲ್ಲಿ ನಾಲೀಕ-ನಾರಾಚ-ಗದೆ-ಮುಸಲ-ಅಸ್ತ್ರ-ಶಸ್ತ್ರ ಇವೇ ಮುಂತಾದ ಆಯುಧಗಳಿಂದ ವಾನರರನ್ನು ಸಂಹ ರಿಸಲು ಉಪಕ್ರಮಿಸಿದನು. ಹೀಗೆ ವೃಕ್ಷಾಯುಧರಾದ ವಾನರಸೈನಿಕರು ಇಂದ್ರ ಜಿತುವಿನಿಂದ ವಧಿಸಲ್ಪಡುತ್ತಿರಲಾಗಿ ಶೂರವೀರರಾದ ವಾನರನಾಯಕರು

ಬಂಡೆಗಳಿಂದಲೂ, ವೃಕ್ಷಗಳಿಂದಲೂ ರಾವಣಿಯನ್ನು ಪ್ರಹರಿಸತೊಡಗಿದರು. ಮಹಾತೇಜಸ್ವಿಯೂ ಮಹಾಬಲನೂ ಆದ ಇಂದ್ರಜಿತುವು ಅದರಿಂದ ಕ್ರುದ್ಧ ನಾಗಿ ವಾನರಸೈನಿಕರ ಶರೀರಗಳನ್ನು ಭಿನ್ನ-ಭಿನ್ನಮಾಡತೊಡಗಿದನು. ರಣಾಂಗಣದಲ್ಲಿ ರಾಕ್ಷಸಸೈನಿಕರನ್ನು ಹರ್ಷಗೊಳಿಸುತ್ತಾ ಇಂದ್ರಜಿತುವು ಒಂದೊಂದು ಬಾಣದಿಂದ ಐದು-ಏಳು-ಒಂಬತ್ತು ವಾನರಸೈನಿಕರನ್ನು ಸೀಳಿ ಹಾಕುತ್ತಿದ್ದನು. ಅತ್ಯಂತದುರ್ಜಯನಾದ ವೀರನಾದ ಇಂದ್ರಜಿತುವು ಸುವರ್ಣಭೂಷಿತವಾದ ಸೂರ್ಯಸದೃಶವಾದ ಬಾಣಗಳಿಂದ ವಾನರಸೈನಿಕ ರನ್ನು ಧ್ವಂಸಮಾಡಿದನು. ರಣಕ್ಷೇತ್ರದಲ್ಲಿ ದೇವತೆಗಳಿಂದ ಪೀಡಿತರಾದ ಮಹಾಸುರರಂತೆ ರಾವಣಿಯ ಬಾಣಗಳಿಂದ ಪೀಡಿಸಲ್ಪಡುತ್ತಿದ್ದ ಭಿನ್ನ-ಭಿನ್ನ ವಾದ ಶರೀರಗಳನ್ನು ಹೊಂದಿದ್ದ ವಾನರಸೈನಿಕರು ರಾಕ್ಷಸರೊಡನೆ ಮಾಡುವ ಯುದ್ಧದಲ್ಲಿ ವಿಜಯಗಳಿಸುವೆವೆಂಬ ಸಂಕಲ್ಪವನ್ನು ಸಾಧಿಸಲಾರದೇ ಜೀವ ಗಳನ್ನು ತೊರೆದು ಭೂಮಿಯ ಮೇಲೆ ಬಿದ್ದರು. ಅದನ್ನು ನೋಡಿ ಹಲವಾರು ವಾನರನಾಯಕರು ಪರಮಕ್ರುದ್ಧರಾಗಿ ಬಾಣರೂಪವಾದ ಭಯಂಕರ ಕಿರಣಗಳಿಂದ ಸೂರ್ಯನಂತೆಯೇ ಪ್ರಜ್ವಲಿಸುತ್ತಿದ್ದ ಇಂದ್ರಜಿತುವನ್ನು ಆಕ್ರಮಿಸಿದರು. ಆದರೆ ಹಾಗೆ ಆಕ್ರಮಿಸಿದ ಎಲ್ಲ ವಾನರರೂ ಸ್ವಲ್ಪಹೊತ್ತಿ ನಲ್ಲಿಯೇ ಇಂದ್ರಜಿತುವಿನ ಸತತವಾದ ಬಾಣಗಳ ಪ್ರಹಾರಗಳಿಂದ ಭಿನ್ನ ದೇಹರೂ ಹೀನಸತ್ತ್ವರೂ ಆದರು. ಅಳಿದುಳಿದವರು ರಕ್ತದಿಂದ ತೋಯ್ದು ವ್ಯಥೆಪಡುತ್ತಾ ಪಲಾಯನಮಾಡುತ್ತಿದ್ದರು. ಶ್ರೀರಾಮನ ಸಲುವಾಗಿ ತಮ್ಮ ಪ್ರಾಣಗಳನ್ನೇ ಒತ್ತೆಯಾಗಿಟ್ಟು ಕಾದಾಡುತ್ತಿದ್ದ ಕೆಲವು ವಾನರನಾಯಕರು ಬಾಣಗಳಿಂದ ಗಾಯಗೊಂಡರೂ ರಣಾಂಗಣದಿಂದ ಓಡಿಹೋಗದೇ ಬಂಡೆಗಳನ್ನೆತ್ತಿಕೊಂಡು ಗಟ್ಟಿಯಾಗಿ ಗರ್ಜನೆಮಾಡುತ್ತಿದ್ದರು. ಸುದೃಢವಾಗಿ ನಿಂತಿದ್ದ ವಾನರರು ಪರ್ವತಶಿಖರಗಳಿಂದಲೂ, ವೃಕ್ಷಗಳಿಂದಲೂ ಮತ್ತು ಬಂಡೆಗಳಿಂದಲೂ ಸತತವಾಗಿ ರಾವಣಿಯನ್ನು ಪ್ರಹರಿಸುತ್ತಿದ್ದರು. ಆದರೆ ಸಮಿತಿಂಜಯನಾದ ಮಹಾತೇಜಸ್ವಿಯಾದ ಇಂದ್ರಜಿತುವು ಪ್ರಾಣಾಪಹಾರಕ ಗಳಾದ ವೃಕ್ಷಗಳ ಮತ್ತು ಬಂಡೆಗಳ ವೃಷ್ಟಿಯನ್ನು ಕ್ಷಣಮಾತ್ರದಲ್ಲಿ ಧ್ವಂಸ ಮಾಡಿಬಿಟ್ಟನು. ಪುನಃ ರಾವಣಿಯು ಅಗ್ನಿಸದೃಶವಾದ ಸರ್ಪೋಪಮವಾದ ಬಾಣಗಳಿಂದ ಸತತವಾಗಿ ಪ್ರಹರಿಸುತ್ತಾ ವಾನರಸೈನ್ಯವನ್ನು ಧ್ವಂಸಮಾಡ

ತೊಡಗಿದನು. ಹದಿನೆಂಟು ಬಾಣಗಳಿಂದ ಗಂಧಮಾದನನನ್ನು ಗಾಯಗೊಳಿಸಿದನು. ದೂರದಲ್ಲಿದ್ದ ನಲನನ್ನು ಒಂಬತ್ತು ಬಾಣಗಳಿಂದ ಗಾಯಗೊಳಿಸಿದನು. ಮರ್ಮಸ್ಥಳಗಳನ್ನು ಭೇದಿಸುವ ಏಳು ಬಾಣಗಳಿಂದ ಮೈಂದನನ್ನೂ, ಐದು ಬಾಣಗಳಿಂದ ಗಜನೆಂಬ ವಾನರನನ್ನೂ ಮಹಾವೀರ್ಯನಾದ ಇಂದ್ರಜಿತುವು ಪ್ರಹರಿಸಿದನು. ಪುನಃ ರಾವಣಿಯು ಜಾಂಬವಂತನನ್ನು ಹತ್ತು ಬಾಣಗಳಿಂದಲೂ, ನೀಲನನ್ನು ಮೂರು ಬಾಣಗಳಿಂದಲೂ ಪ್ರಹರಿಸಿದನು. ವರದಾನದಿಂದ ದೊರೆತಿದ್ದ, ಘೋರವಾದ ಮತ್ತು ತೀಕ್ಷ್ಣವಾದ ಬಾಣ ಗಳಿಂದ ಇಂದ್ರಜಿತುವು ಸುಗ್ರೀವಾಂಗದ-ಋಷಭ-ದ್ವಿವಿದರನ್ನು ಸತ್ತ್ವಹೀನ ರನ್ನಾಗಿ ಮಾಡಿಬಿಟ್ಟನು.

ಎಲ್ಲೆಡೆಗಳಲ್ಲೂ ವ್ಯಾಪ್ತವಾಗಿರುವ ಪ್ರಳಯಕಾಲದ ಅಗ್ನಿಯಂತೆ ಕ್ರುದ್ಧನಾಗಿದ್ದ ಇಂದ್ರಜಿತುವು ಇತರ ವಾನರಮುಖ್ಯರನ್ನೂ ಬಹುಸಂಖ್ಯಾತವಾದ ಬಾಣಗಳಿಂದ ಮರ್ದನಮಾಡಿದನು. ಆ ಮಹಾಘೋರಯುದ್ಧದಲ್ಲಿ ರಾವಣಿಯು ಸೂರ್ಯಸದೃಶವಾದ, ಚೆನ್ನಾಗಿಪ್ರಯೋಗಿಸಲ್ಪಟ್ಟ, ಶೀಘ್ರಗಾಮಿಗಳಾದ ಬಾಣಗಳಿಂದ ವಾನರರ ಸೈನ್ಯವನ್ನು ಅರೆದುಬಿಟ್ಟನು. ಬಾಣಗಳ ಸಮೂಹದಿಂದ ಪೀಡಿತವಾಗಿ ವ್ಯಥೆಗೊಂಡಿದ್ದ ಮತ್ತು ರಕ್ತದಿಂದ ತೋಯ್ದು ಹೋಗಿದ್ದ ವಾನರಸೈನ್ಯವನ್ನು ರಾಜಕುಮಾರನು ನೋಡಿ ಪರಮಸಂತುಷ್ಟನಾದನು. ಅಷ್ಟರಿಂದಲೂ ಅವನಿಗೆ ತೃಪ್ತಿಯಾಗಲಿಲ್ಲ. ಪುನಃ ರಾಕ್ಷಸೇಂದ್ರನ ಮಗನಾದ, ಮಹಾಬಲಿಷ್ಠನಾದ, ಮಹಾತೇಜಸ್ವಿಯಾದ ಇಂದ್ರಜಿತುವು ಬಾಣವರ್ಷವನ್ನೂ ಭಯಂಕರವಾದ ಶಸ್ತ್ರವರ್ಷವನ್ನೂ ಸೃಷ್ಟಿಸಿ ವಾನರಸೈನಿಕರನ್ನು ಮರ್ದನಮಾಡಿದನು. ತನ್ನ ಸೈನಿಕರ ಜೊತೆಯಲ್ಲಿ ಅದುವರೆಗೂ ಇದ್ದ ಇಂದ್ರಜಿತುವು ತನ್ನ ಸೈನ್ಯವನ್ನು ವಿಸರ್ಜಿಸಿ ವಾನರಸೈನ್ಯದಲ್ಲಿ ಸೇರಿಕೊಂಡು ಅದೃಶ್ಯನಾಗಿ–ಕಾರ್ಮುಗಿಲು ಮುಸಲಧಾರೆಗಳಿಂದ ಕೂಡಿದ ಮಳೆಗರೆಯುವಂತೆ–ಭಯಂಕರವಾದ ಬಾಣಗಳ ಸಮೂಹವನ್ನು ವಾನರಸೈನ್ಯದ ಮೇಲೆ ಸುರಿಸಿದನು. ಇಂದ್ರಜಿತುವಿನ ಬಾಣಗಳ ಪ್ರಹಾರಗಳಿಂದ ಸೀಳಿಹೋದ ದೇಹವುಳ್ಳವರಾಗಿದ್ದ ಅವನ ಮಾಯೆಯಿಂದ ಹತರಾದ ಪರ್ವತಸದೃಶರಾಗಿದ್ದ ವಾನರಸೈನಿಕರು ವಿಕಾರಸ್ವರದಿಂದ ಕೂಗಿಕೊಳ್ಳುತ್ತಾ–ಇಂದ್ರನ ವಜ್ರಾಯುಧದಿಂದ ಕತ್ತರಿಸಲ್ಪಟ್ಟ ಪರ್ವತಗಳು ಕೆಳಕ್ಕೆ ಬಿದ್ದಂತೆ–ಭೂಮಿಯ

ಮೇಲೆ ಬಿದ್ದರು. ವಾನರನಾಯಕರು ಆ ಘೋರವಾದ ರಣಾಂಗಣದಲ್ಲಿ ನಿಶಿತವಾದ ಅಗ್ರಭಾಗಗಳಿಂದ ಕೂಡಿದ್ದ ಬಾಣಗಳು ಸತತವಾಗಿ ತಮ್ಮ ಮೇಲೆ ಬೀಳುತ್ತಿರುವುದನ್ನು ಮಾತ್ರವೇ ಕಾಣುತ್ತಿದ್ದರು. ಮಾಯೆಯಿಂದ ಅದೃಶ್ಯನಾಗಿ ತಮ್ಮ ಮೇಲೆ ಪುಂಖಾನುಪುಂಖವಾಗಿ ಬಾಣಗಳನ್ನು ಬಿಡುತ್ತಿದ್ದ ಇಂದ್ರಜಿತುವನ್ನು ಅವರು ಕಾಣಲೇ ಇಲ್ಲ. ಆ ಸಮಯದಲ್ಲಿ ಮಹಾಕಾಯ ನಾದ ರಾವಣಿಯು ನಿಶಿತವಾದ ಮತ್ತು ಸೂರ್ಯನಂತೆ ಪ್ರಕಾಶಮಾನ ವಾಗಿದ್ದ ಬಾಣಗಳಿಂದ ಎಲ್ಲ ದಿಕ್ಕುಗಳನ್ನೂ ಮುಚ್ಚಿಬಿಟ್ಟನು. ಅಂತೆಯೇ ವಾನರಶ್ರೇಷ್ಠರನ್ನೂ ಸೀಳಿಹಾಕಿದನು. ಪ್ರಜ್ವಲಿಸುವ ಅಗ್ನಿಗೆ ಸಮಾನವಾಗಿದ್ದ, ಪ್ರಕಾಶಮಾನವಾಗಿದ್ದ, ಬೆಂಕಿಯ ಕಿಡಿಗಳನ್ನು ಹೊರಸೂಸುತ್ತಿದ್ದ ಶೂಲ-ಖಡ್ಗ-ಗಂಡುಗೊಡಲಿ–ಇವೇ ಮುಂತಾದ ಆಯುಧಗಳನ್ನು ವಾನರಸೈನ್ಯದ ಮೇಲೆ ಸತತವಾಗಿ ಸುರಿಸುತ್ತಿದ್ದನು. ಇಂದ್ರಜಿತುವಿನಿಂದ ಬಿಡಲ್ಪಡುತ್ತಿದ್ದ ಅಗ್ನಿಸದೃಶವಾದ, ತೇಜೋವಿಶಿಷ್ಟವಾದ ಬಾಣಗಳಿಂದ ಗಾಯಗೊಂಡು ರಕ್ತ ದಿಂದ ತೋಯ್ದುಹೋಗಿದ್ದ ವಾನರರು ಅರಳಿದ ಹೂವುಗಳಿಂದ ತುಂಬಿದ ಮುತ್ತುಗದ ಮರಗಳಂತೆಯೇ ಕಾಣುತ್ತಿದ್ದರು. ರಾಕ್ಷಸೇಂದ್ರನಾದ ಇಂದ್ರಜಿತುವಿನ ಬಾಣಗಳಿಂದ ಛಿನ್ನ-ಭಿನ್ನರಾಗಿದ್ದ ವಾನರಸೈನಿಕರು ಒಬ್ಬರು ಮತ್ತೊಬ್ಬರ ಬಳಿಗೆ ಹೋಗಿ ಗಟ್ಟಿಯಾಗಿ ಚೀತ್ಕಾರಮಾಡುತ್ತಾ ಭೂಮಿಯ ಮೇಲೆ ಬೀಳುತ್ತಿದ್ದರು. ಬಾಣಗಳು ಎಲ್ಲಿಂದ ಬರುತ್ತಿವೆಯೆಂದು ತಿಳಿಯಲು ಕುತೂಹಲದಿಂದ ಆಕಾಶದ ಕಡೆಗೆ ನೋಡುತ್ತಿದ್ದಾಗ ಬಾಣಗಳು ವಾನರರ ಕಣ್ಣುಗಳಿಗೆ ಬೀಳುತ್ತಿದ್ದುವು. ಹೀಗೆ ಕಣ್ಣುಗಳನ್ನು ಕಳೆದುಕೊಂಡ ವಾನರರು ಒಬ್ಬರನ್ನೊಬ್ಬರು ಅಪ್ಪಿಕೊಂಡು ಚೀತ್ಕಾರಮಾಡುತ್ತಾ ಕೆಳಕ್ಕೆ ಬೀಳುತ್ತಿದ್ದರು.

ರಾಕ್ಷಸಶ್ರೇಷ್ಠನಾದ ಇಂದ್ರಜಿತುವು ಮಂತ್ರದಿಂದ ಅಭಿಮಂತ್ರಿತವಾದ ಪ್ರಾಸಗಳಿಂದಲೂ, ಶೂಲಗಳಿಂದಲೂ ಮತ್ತು ತೀಕ್ಷ್ಣವಾದ ಬಾಣ ಗಳಿಂದಲೂ ಹನುಮಂತ-ಸುಗ್ರೀವ-ಅಂಗದ-ಗಂಧಮಾದನ-ಜಾಂಬವಂತ-ಸುಷೇಣ-ವೇಗದರ್ಶೀ-ಮೈಂದ-ದ್ವಿವಿದ-ನೀಲ-ಗವಾಕ್ಷ- ಗವಯ- ಕೇಸರೀ-ಹರಿಲೋಮಾ-ವಿದ್ಯುದ್ದಂಷ್ಟ್ರ-ಸೂರ್ಯಾನನ-ಜ್ಯೋತಿರ್ಮುಖ-ದಧಿ ಮುಖ-ಪಾವಕಾಕ್ಷ-ನಲ-ಕುಮುದ–ಇವರೇ ಮೊದಲಾದ ಎಲ್ಲ ವಾನರ

ಶ್ರೇಷ್ಠರನ್ನು ಗಾಯಗೊಳಿಸಿದನು. ಹೀಗೆ ಅವನು ಗದೆಗಳಿಂದಲೂ, ಹೊಂಬಣ್ಣದ ಬಾಣಗಳಿಂದಲೂ ವಾನರಮುಖ್ಯರನ್ನು ಪ್ರಹರಿಸಿದನಂತರ ರಾಮ-ಲಕ್ಷ್ಮಣರ ಮೇಲೆ ಸೂರ್ಯನ ಕಿರಣಗಳಿಗೆ ಸಮಾನವಾದ ಪ್ರಭೆ ಯಿಂದ ಕೂಡಿದ್ದ ಬಾಣಗಳ ಸಮೂಹವನ್ನು ಸುರಿಸಿದನು. ಜಲಧಾರೆಯೋ ಪಾದಿಯಲ್ಲಿ ಸತತವಾಗಿ ಇಂದ್ರಜಿತುವಿನಿಂದ ಸುರಿಸಲ್ಪಡುತ್ತಿದ್ದ ಬಾಣಗಳನ್ನು ಗಣನೆಗೆ ತೆಗೆದುಕೊಳ್ಳದೇ ಪರಮಾದ್ಭುತವಾದ ಕಾಂತಿಯಿಂದ ವಿಶಿಷ್ಟನಾಗಿದ್ದ ಶ್ರೀರಾಮನು ಲಕ್ಷ್ಮಣನಿಗೆ ಹೇಳಿದನು :

"ಲಕ್ಷ್ಮಣ! ಇಂದ್ರಶತ್ರುವಾದ ಈ ಇಂದ್ರಜಿತುವು ಬ್ರಹ್ಮಾಸ್ತ್ರವನ್ನಾ ಶ್ರಯಿಸಿ ವಾನರಸೈನಿಕರನ್ನು ಧ್ವಂಸಮಾಡಿದ ಬಳಿಕ ಈಗ ತೀಕ್ಷ್ಣವಾದ ಬಾಣಗಳ ಮೂಲಕವಾಗಿ ನಮ್ಮಿಬ್ಬರನ್ನೂ ಪೀಡಿಸತೊಡಗಿದ್ದಾನೆ. ಬ್ರಹ್ಮನಿಂದ ವರವನ್ನು ಪಡೆದಿರುವ, ಮಹಾಕಾಯನಾದ, ಮಹಾಮನಸ್ವಿಯಾದ ಇವನು ನಮ್ಮನ್ನು ಪರಾಜಯಗೊಳಿಸಬೇಕೆಂಬ ನಿರ್ಧಾರದಿಂದ ಆಕಾಶದಲ್ಲಿ ಅದೃಶ್ಯನಾಗಿ ಯುದ್ಧಮಾಡುತ್ತಿದ್ದಾನೆ. ಸತತವಾಗಿ ನಮ್ಮ ಮೇಲೆ ಬಾಣಗಳ ಪ್ರಯೋಗವನ್ನು ಮಾಡುತ್ತಲೇ ಇದ್ದಾನೆ. ಕಣ್ಣಿಗೇ ಕಾಣಿಸದಿರುವ ಇವನನ್ನು ಪ್ರಹರಿಸುವುದಾದರೂ ಹೇಗೆ? ಪೂಜ್ಯನಾದ ಬ್ರಹ್ಮನ ಸ್ವರೂಪವು ಅಚಿಂತ್ಯ ವಾದುದು. ಅವನೇ ಈ ಜಗತ್ತಿಗೆ ಆದಿಕಾರಣನಾಗಿದ್ದಾನೆ. ಈಗ ಇಂದ್ರಜಿತುವು ಬಿಡುತ್ತಿರುವ ಅಸ್ತ್ರಗಳೆಲ್ಲವೂ ಅವನವೇ ಆಗಿವೆಯೆಂದು ನಾನು ಭಾವಿಸುತ್ತೇನೆ. ಧೀಮಂತನಾದ ಲಕ್ಷ್ಮಣನೇ! ಈ ಸಮಯದಲ್ಲಿ ನೀನು ಸ್ವಲ್ಪವೂ ಗಾಬರಿಗೊಳ್ಳದೇ ಏಕಾಗ್ರಚಿತ್ತನಾಗಿ ನನ್ನೊಡನೆ ಈ ಬಾಣಗಳ ಪ್ರಹಾರವನ್ನು ಸಹಿಸಿಕೊಳ್ಳಬೇಕಾಗಿದೆ. ರಾಕ್ಷಸರಾಜನಾದ ಇಂದ್ರಜಿತುವು ತನ್ನ ಬಾಣಗಳ ಸಮೂಹಗಳಿಂದ ಎಲ್ಲ ದಿಕ್ಕುಗಳನ್ನೂ ಮುಚ್ಚಿಬಿಟ್ಟಿದ್ದಾನೆ. ಅನೇಕ ವಾನರನಾಯಕರನ್ನು ಕಳೆದುಕೊಂಡಿರುವ ಈ ಸುಗ್ರೀವನ ಸೈನ್ಯದಲ್ಲಿ ಶೋಭೆಯೇ ಇಲ್ಲವಾಗಿದೆ. ನಾವೂ ಕೂಡ ಇವನಿಂದ ಪ್ರಹರಿಸಲ್ಪಟ್ಟು ಹರ್ಷ ವಾಗಲೀ-ಕೋಪವಾಗಲೀ ಇಲ್ಲದೇ ಸಂಜ್ಞೆಯನ್ನು ಕಳೆದುಕೊಂಡು ಯುದ್ಧ ದಿಂದ ವಿರಮಿಸಿದನಂತರ ಈ ರಾಕ್ಷಸನು ಯುದ್ಧದಲ್ಲಿ ವಿಜಯಶ್ರೀಯನ್ನು ಪಡೆದು ಆನಂದತುಂದಿಲನಾಗಿ ಲಂಕಾಪಟ್ಟಣವನ್ನು ಪ್ರವೇಶಿಸುತ್ತಾನೆ."

ಹೀಗೆ ಶ್ರೀರಾಮನು ಹೇಳುತ್ತಿರುವಾಗಲೇ ರಾಮ-ಲಕ್ಷ್ಮಣರಿಬ್ಬರೂ ಇಂದ್ರಜಿತುವಿನ ಬಾಣಗಳ ಸಮೂಹಗಳಿಂದ ಬಹಳವಾಗಿ ಗಾಯ

ಗೊಂಡರು. ವೀರನಾದ ರಾಕ್ಷಸರಾಜಕುಮಾರನು ರಾಮ-ಲಕ್ಷ್ಮಣರಿಗೂ ವಿಷಾದವನ್ನುಂಟುಮಾಡಿ ಅವರನ್ನೂ ಮೂರ್ಛೆಗೊಳಿಸಿ ಅತ್ಯಾನಂದದಿಂದ ಸಿಂಹನಾದಮಾಡಿದನು. ಹೀಗೆ ಇಂದ್ರಜಿತುವು ವಾನರಸೈನ್ಯವನ್ನೂ, ವಾನರ ನಾಯಕರನ್ನೂ, ರಾಮ-ಲಕ್ಷ್ಮಣರನ್ನೂ ಮೂರ್ಛೆಗೊಳಿಸಿ ರಾವಣನ ಭುಜಬಲದಿಂದ ಸಂರಕ್ಷಿತವಾಗಿದ್ದ ಲಂಕಾಪಟ್ಟಣವನ್ನು ಪ್ರವೇಶಿಸಿದನು. ಆ ಸಮಯದಲ್ಲಿ ರಾಕ್ಷಸರೆಲ್ಲರೂ ಇಂದ್ರಜಿತುವನ್ನು ಸ್ತುತಿಸುತ್ತಿದ್ದರು. ತಂದೆಯ ಬಳಿಗೆ ಹೋಗಿ ಪರಮಹೃಷ್ಟನಾಗಿ ಯುದ್ಧದಲ್ಲಿ ಜಯಗಳಿಸಿದ ಶುಭವಾರ್ತೆ ಯನ್ನು ರಾವಣನಿಗೆ ತಿಳಿಸಿದನು.

೭೩ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೭೪ನೆಯ ಸರ್ಗ

ಜಾಂಬವಂತನ ನಿರ್ದೇಶದಂತೆ ಹನುಮಂತನು ಹಿಮವತ್ಪರ್ವತಕ್ಕೆ ಹೋಗಿ ಓಷಧಿಲತೆಗಳಿದ್ದ ಪರ್ವತವನ್ನೇ ತಂದುದು : ಓಷಧಿಲತೆಯ ವಾಸನೆಯಿಂದಲೇ ರಾಮ-ಲಕ್ಷ್ಮಣರೂ ವಾನರರೂ ಎಚ್ಚರಗೊಂಡುದು

ತಯೋಸ್ತದಾಸಾದಿತಯೋ ರಣಾಗ್ರೇ
ಮುಮೋಹ ಸೈನ್ಯಂ ಹರಿಯೂಥಪಾನಾಮ್ ।
ಸುಗ್ರೀವನೀಲಾಙ್ಗದಜಾಮ್ಬವನ್ತೋ
ನ ಚಾಪಿ ಕಿಂಚಿತ್ಪ್ರತಿಪೇದಿರೇ ತೇ ॥೧॥

ರಣರಂಗದಲ್ಲಿ ಇಂದ್ರಜಿತುವಿನ ಬಾಣಗಳ ಪ್ರಹಾರಗಳಿಂದ ರಾಮ-ಲಕ್ಷ್ಮಣರು ಮೂರ್ಛಿತರಾಗಿ ಕೆಳಕ್ಕೆ ಬಿದ್ದೊಡನೆಯೇ ವಾನರಸೇನಾಪತಿಗಳ ವಶದಲ್ಲಿದ್ದ ಆ ಮಹಾಸೈನ್ಯವು ಭ್ರಾಂತವಾಯಿತು. ಆ ಸೈನ್ಯಕ್ಕೆ ಮುಂದೆ ಏನು ಮಾಡಬೇಕೆಂಬುದೇ ತಿಳಿಯಲಿಲ್ಲ. ಅಂತೆಯೇ ಸುಗ್ರೀವ-ನೀಲ-ಅಂಗದ-ಜಾಂಬವಂತರೂ ಕಿಂಕರ್ತವ್ಯತಾಮೂಢರಾದರು.

ಆ ಸಮಯದಲ್ಲಿ ಮೇಧಾವಿಯಾದ ವಿಭೀಷಣನು ವಾನರನಾಯಕ ರೆಲ್ಲರೂ ವಿಷಣ್ಣವದನರಾಗಿ ಕುಳಿತಿರುವುದನ್ನು ಕಂಡು ಅವರೆಲ್ಲರನ್ನೂ ಆಶ್ವಾಸಿ ಸುತ್ತಾ ಅಪ್ರತಿಮವಾದ ಮಾತುಗಳಿಂದ ಎಲ್ಲರನ್ನೂ ಸಮಾಧಾನ ಗೊಳಿಸಿದನು:

ಮಾ ಭೈಷ್ಟ ನಾಸ್ತ್ಯತ್ರ ವಿಷಾದಕಾಲೋ
ಯದಾರ್ಯಪುತ್ರೌ ಹ್ಯವಶೌ ವಿಷಣ್ಣೌ ।
ಸ್ವಯಂಭುವೋ ವಾಕ್ಯಮಥೋದ್ವಹನ್ತೌ
ಯತ್ಸಾದಿತಾವಿನ್ದ್ರಜಿದಸ್ತ್ರಜಾಲೈಃ ॥೩॥

"ವಾನರಶಿರೋಮಣಿಗಳೇ! ಭಯಪಡಬೇಡಿರಿ. ಆರ್ಯಪುತ್ರರಾದ ರಾಮ-ಲಕ್ಷ್ಮಣರು ವಿಷಣ್ಣರಾಗಿ ಎಚ್ಚರದಪ್ಪಿ ಬಿದ್ದಿರುವುದಕ್ಕಾಗಿ ವಿಷಾದಿಸುತ್ತಾ ಕುಳಿತುಕೊಳ್ಳುವ ಕಾಲವಿದಲ್ಲ. ಬ್ರಹ್ಮನ ವರವನ್ನು ಪುರಸ್ಕರಿಸಿ ಇವರಿಬ್ಬರೂ ಇಂದ್ರಜಿತುವಿನ ಅಸ್ತ್ರಗಳ ಸಮೂಹಗಳಿಂದ ಪ್ರಹರಿಸಲ್ಪಟ್ಟು ಮೂರ್ಛೆಹೋಗಿದ್ದಾರೆ.

ತಸ್ಮೈ ತು ದತ್ತಂ ಪರಮಾಸ್ತ್ರಮೇತ-
ತ್ಸ್ವಯಂಭುವಾ ಬ್ರಾಹ್ಮಮಮೋಘವೀವೇಗಮ್ ।
ತನ್ಮಾನಯನ್ತೌ ಯುಧಿ ರಾಜಪುತ್ರೌ
ನಿಪಾತಿತೌ ಕೋಽತ್ರ ವಿಷಾದಕಾಲಃ ॥೪॥

ಅಮೋಘವಾದ ವೇಗವುಳ್ಳ ಈ ಬ್ರಹ್ಮಾಸ್ತ್ರವು ಬ್ರಹ್ಮನಿಂದಲೇ ಇಂದ್ರ ಜಿತುವಿಗೆ ವರದ ರೂಪದಲ್ಲಿ ಕೊಡಲ್ಪಟ್ಟಿದೆ. ಶ್ರೇಷ್ಠವಾದ ಈ ಬ್ರಹ್ಮಾಸ್ತ್ರ ವನ್ನು ಗೌರವಿಸುತ್ತಾ ತಮ್ಮನ್ನು ಅದಕ್ಕೆ ಲಕ್ಷ್ಯವನ್ನಾಗಿ ಮಾಡಿಕೊಂಡು ಇವರಿಬ್ಬರೂ ಮೂರ್ಛಿತರಾಗಿ ಬಿದ್ದಿದ್ದಾರೆ. ಇದರಲ್ಲಿ ವಿಷಾದಿಸಬೇಕಾದ ವಿಷಯವೇನಿದೆ?"

ವಿಭೀಷಣನ ಮಾತನ್ನು ಕೇಳಿ ಬುದ್ಧಿವಂತನಾದ ಹನುಮಂತನು ಬ್ರಹ್ಮಾಸ್ತ್ರವನ್ನು ಗೌರವಿಸುತ್ತಾ ಹೇಳಿದನು :

"ರಾಕ್ಷಸಮಹಾರಾಜ! ಈ ಮಹಾಸ್ತ್ರದಿಂದ ಗಾಯಗೊಂಡು ಕೆಳಕ್ಕೆ ಬಿದ್ದಿರುವ ವೇಗಶಾಲಿಗಳಾದ ವಾನರಸೈನಿಕರಲ್ಲಿ ಯಾರು-ಯಾರು ಇನ್ನೂ ಜೀವಂತರಾಗಿರುವರೋ ಅವರ ಬಳಿಗೆ ಹೋಗಿ ಅವರಿಗೆ ಸಮಾಧಾನ ಹೇಳೋಣ."

ಹನುಮಂತನ ಮಾತಿಗೆ ವಿಭೀಷಣನು ಸಮ್ಮತಿಸಿದನಂತರ ಅವ

ರಿಬ್ಬರೂ ಒಟ್ಟಾಗಿ ಕೈಗಳಲ್ಲಿ ಪಂಜುಗಳನ್ನು ಹಿಡಿದುಕೊಂಡು ರಣಭೂಮಿಯಲ್ಲಿ ಸಂಚರಿಸತೊಡಗಿದರು. ಇಂದ್ರಜಿತುವಿನ ಶಸ್ತ್ರಪ್ರಹಾರಗಳಿಂದ ತೊಡೆಗಳನ್ನೂ, ಕಾಲುಗಳನ್ನೂ, ಉಗುರುಗಳನ್ನೂ, ಬಾಲಗಳನ್ನೂ, ಕೈಗಳನ್ನೂ, ಕತ್ತುಗಳನ್ನೂ ಕಳೆದುಕೊಂಡು ರಕ್ತದಿಂದ ತೋಯ್ದು ರಣಭೂಮಿಯ ಸುತ್ತಲೂ ಬಿದ್ದಿದ್ದ ಪರ್ವತೋಪಮರಾದ ವಾನರಸೈನಿಕರನ್ನು ಇಬ್ಬರೂ ನೋಡಿದರು. ರಣಭೂಮಿಯು ದೇದೀಪ್ಯಮಾನವಾದ ಶಸ್ತ್ರಗಳಿಂದ ಆಚ್ಛಾದಿತವಾಗಿರುವುದನ್ನೂ ಮತ್ತು ಸುಗ್ರೀವ, ಅಂಗದ, ನೀಲ, ಶರಭ, ಗಂಧಮಾದನ, ಗವಾಕ್ಷ, ಸುಷೇಣ, ವೇಗದರ್ಶೀ, ಆಹುಕ, ಮೈಂದ, ನಲ, ಜ್ಯೋತಿರ್ಮುಖ, ದ್ವಿವಿದ, ಪನಸ–ಇವರೇ ಮೊದಲಾದ ಕಪಿಸೈನ್ಯದ ಮಹಾನಾಯಕರು ಹತರಾಗಿ ರಣಾಂಗಣದಲ್ಲಿ ಬಿದ್ದಿರುವುದನ್ನೂ ನೋಡಿದರು. ಬ್ರಹ್ಮನಿಗೆ ಅತಿಪ್ರಿಯವಾಗಿದ್ದ ಬ್ರಹ್ಮಾಸ್ತ್ರವು ಹಗಲಿನಲ್ಲಿ ಐದನೆಯ ಒಂದು ಭಾಗವು ಇನ್ನೂ ಉಳಿದಿರುವಾಗಲೇ (ಸೂರ್ಯಾಸ್ತಕ್ಕೆ ಒಂದು ಮುಹೂರ್ತ ಅಥವಾ ೨ ಘಂಟೆ ೨೪ ನಿಮಿಷಗಳು ಉಳಿದಿರುವಾಗಲೇ) ಅರುವತ್ತೇಳು ಕೋಟಿ ವಾನರಸೈನಿಕರನ್ನು ಸಂಹರಿಸಿತು. ಸಮುದ್ರದಂತೆ ವಿಶಾಲವಾಗಿಯೂ ಭಯಂಕರವಾಗಿಯೂ ಇದ್ದ ಸೈನ್ಯವು ಬ್ರಹ್ಮಾಸ್ತ್ರದಿಂದ ಪೀಡಿತವಾಗಿ ಕೆಳಕ್ಕೆ ಬಿದ್ದಿರುವುದನ್ನು ನೋಡಿ ವಿಭೀಷಣ-ಹನುಮಂತರು ಆ ಸಮೂಹದಲ್ಲಿ ಜಾಂಬವಂತನನ್ನು ಹುಡುಕತೊಡಗಿದರು.

ಸ್ವಾಭಾವಿಕವಾಗಿಯೇ ಮುಪ್ಪಿನಿಂದ ಕೂಡಿ, ಬಾಣಗಳಿಂದ ಚುಚ್ಚಲ್ಪಟ್ಟು ಉಪಶಮನಗೊಂಡ ಯಜ್ಞೇಶ್ವರನಂತೆ ಕಾಣುತ್ತಿದ್ದ, ಬ್ರಹ್ಮನ ಮಗನಾದ ಜಾಂಬವಂತನು ರಣರಂಗದ ಒಂದೆಡೆಯಲ್ಲಿ ಬಿದ್ದಿರುವುದನ್ನು ಇಬ್ಬರೂ ನೋಡಿದರು.

ದೂರದಿಂದ ನೋಡಿದ ವಿಭೀಷಣನು ಹತ್ತಿರ ಹೋಗಿ ಜಾಂಬವಂತನನ್ನು ಪ್ರಶ್ನಿಸಿದನು :

ಕಚ್ಚಿದಾರ್ಯ ಶರೈಸ್ತೀಕ್ಷ್ಣೈಃ ಪ್ರಾಣಾ ನ ಧ್ವಂಸಿತಾಸ್ತವ ॥೧೫॥

“ಆರ್ಯನೇ! ತೀಕ್ಷ್ಣವಾದ ಬಾಣಗಳ ಪ್ರಹಾರಗಳಿಂದಾಗಿ ನಿನ್ನ ಪ್ರಾಣಗಳು ವಿನಾಶಹೊಂದಲಿಲ್ಲ ತಾನೇ?”

ವಿಭೀಷಣನ ಆ ಮಾತನ್ನು ಕೇಳಿ ಕರಡಿಗಳಲ್ಲಿ ಶ್ರೇಷ್ಠನಾದ ಜಾಂಬವಂತನು ಬಹಳ ಕಷ್ಟದಿಂದ ತಡವರಿಸುತ್ತಾ ಹೇಳಿದನು :

"ರಾಕ್ಷಸೇಂದ್ರನೇ! ಮಹಾವೀರ್ಯನೇ! ನಿನ್ನ ಧ್ವನಿಯಿಂದ ನೀನು ವಿಭೀಷಣನೆಂಬುದನ್ನು ಗುರುತಿಸಿದ್ದೇನೆ. ತೀಕ್ಷ್ಣವಾದ ಬಾಣಗಳಿಂದ ಅಂಗಾಂಗಗಳಲ್ಲಿಯೂ ಪ್ರಹರಿಸಲ್ಪಟ್ಟಿರುವ ನಾನು ನಿನ್ನನ್ನು ಕಣ್ಣುಗಳಿಂದ ನೋಡಲು ಸಾಧ್ಯವಾಗುತ್ತಿಲ್ಲ. ಸುವ್ರತನೇ! ವಿಭೀಷಣ! ಅಂಜನಾ ದೇವಿಯು ಯಾವನನ್ನು ಹಡೆದು ಸುಪುತ್ರವತಿಯಾದಳೋ, ವಾಯು ದೇವನು ಯಾವನನ್ನು ಪಡೆದು ಸುಪುತ್ರವಂತನಾದನೋ ಅಂತಹ ವಾನರ ಶ್ರೇಷ್ಠನಾದ ಹನುಮಂತನಾದರೂ ಜೀವಿಸಿರುವನೇ?-ಎಂಬುದನ್ನು ಹೇಳು."

ಜಾಂಬವಂತನ ಆ ಮಾತನ್ನು ಕೇಳಿ ವಿಭೀಷಣನು ಪ್ರಶ್ನಿಸಿದನು :

"ಜಾಂಬವಂತ! ನೀನು ಆರ್ಯಪುತ್ರರಾದ ರಾಮ-ಲಕ್ಷ್ಮಣರ ಕ್ಷೇಮ ವನ್ನೇ ವಿಚಾರಿಸದೇ ಎಲ್ಲಕ್ಕಿಂತಲೂ ಮೊದಲು ಮಾರುತಿಯ ಕ್ಷೇಮವನ್ನೇಕೆ ವಿಚಾರಿಸುತ್ತಿರುವೆ? ಹನುಮಂತನ ಮೇಲೆ ನೀನು ಅಪಾರವಾದ ಸ್ನೇಹವನ್ನು ತೋರಿರುವೆ. ಅಂತಹ ಸ್ನೇಹವನ್ನು ರಾಜನಾದ ಸುಗ್ರೀವನ ಮೇಲಾಗಲೀ, ಅಂಗದನ ಮೇಲಾಗಲೀ, ಶ್ರೀರಾಮನ ಮೇಲಾಗಲೀ ತೋರುತ್ತಿಲ್ಲ."

ವಿಭೀಷಣನ ಮಾತಿಗೆ ಜಾಂಬವಂತನು ಸೂಕ್ತವಾದ ರೀತಿಯಲ್ಲಿ ಉತ್ತರಿಸಿದನು :

"ವಿಭೀಷಣ! ನಾನು ಉಳಿದವರ ಪ್ರಸ್ತಾಪವನ್ನೇ ಎತ್ತದೇ ಮಾರುತಿ ಯೊಬ್ಬನ ಕ್ಷೇಮವನ್ನೇ ಏಕೆ ವಿಚಾರಿಸಿದೆನೆಂಬುದಕ್ಕೆ ಕಾರಣವನ್ನು ಹೇಳುವೆನು ಕೇಳು :

ತಸ್ಮಿನ್ ಜೀವತಿ ವೀರೇ ತು ಹತಮಪ್ಯಹತಂ ಬಲಮ್ ।
ಹನುಮತ್ಯುಜ್ಝಿತಪ್ರಾಣೇ ಜೀವನ್ತೋಽಪಿ ವಯಂ ಹತಾಃ ॥೨೨॥

ವೀರನಾದ ಹನುಮಂತನೊಬ್ಬನು ಜೀವಿಸಿದ್ದರೆ–ನಮ್ಮ ಸೈನ್ಯವು ಹತ ಪ್ರಾಯವಾಗಿದ್ದರೂ ಜೀವಂತವಾಗಿರುವುದೆಂದೇ ಭಾವಿಸಬಹುದು. ಹನು ಮಂತನೇನಾದರೂ ಪ್ರಾಣಗಳನ್ನು ತೊರೆದುಬಿಟ್ಟಿದ್ದರೆ ನಾವು ಜೀವಿಸಿದ್ದರೂ ಮೃತರಾದಂತೆಯೇ ಸರಿ.

ಧರತೇ ಮಾರುತಿಸ್ತಾತ ಮಾರುತಪ್ರತಿಮೋ ಯದಿ ।
ವೈಶ್ವಾನರಸಮೋ ವೀರ್ಯೇ ಜೀವಿತಾಶಾ ತತೋ ಭವೇತ್ ॥೨೩॥

ವೇಗದಲ್ಲಿ ವಾಯುವಿಗೆ ಸಮಾನನೂ-ಪರಾಕ್ರಮದಲ್ಲಿ ಅಗ್ನಿಗೆ ಸಮಾನನೂ ಆಗಿರುವ ವಾಯುಪುತ್ರನೇನಾದರೂ ಬದುಕಿದ್ದರೆ ನಾವೆಲ್ಲರೂ ಬದುಕಿ ಉಳಿಯುವ ಆಸೆಯನ್ನಿಟ್ಟುಕೊಳ್ಳಬಹುದು."

ಜಾಂಬವಂತನು ಹೀಗೆ ಹೇಳುತ್ತಿದ್ದಂತೆಯೇ ವಿನಯಶೀಲನಾದ ಮಾರುತಿಯು ಮುಂದೆ ಬಂದು ಜಾಂಬವಂತನ ಎರಡು ಪಾದಗಳನ್ನೂ ಹಿಡಿದುಕೊಂಡು ವಿನಯಪೂರ್ವಕವಾಗಿ ಅಭಿವಾದನಮಾಡಿದನು. ಬಾಣಗಳ ಪ್ರಹಾರಗಳಿಂದ ಗಾಯಗೊಂಡ ಅಂಗಾಂಗಗಳುಳ್ಳವನಾಗಿದ್ದ ಜಾಂಬವಂತನು ಹನುಮಂತನ ಮಾತನ್ನು ಕೇಳುತ್ತಲೇ ಪುನರ್ಜನ್ಮವನ್ನೇ ಪಡೆದಂತೆ ಭಾವಿಸಿ ಹೇಳಿದನು :

"ಬಾ ಹನುಮಂತ! ಸಮಸ್ತವಾನರರನ್ನೂ ನೀನೀಗ ರಕ್ಷಿಸಬೇಕಾಗಿದೆ. ನಮ್ಮಲ್ಲಿ ನಿನ್ನೊಬ್ಬನನ್ನು ಬಿಟ್ಟು ಬೇರೆ ಯಾರೂ ಪೂರ್ಣಪರಾಕ್ರಮದಿಂದ ಸಂಪನ್ನರಾಗಿರುವುದಿಲ್ಲ. ಈಗ ಇವರೆಲ್ಲರಿಗೂ ನೀನೇ ಪರಮಾಶ್ರಯನಾಗಿರುವೆ. ನಿನ್ನ ಅತುಲಪರಾಕ್ರಮವನ್ನು ತೋರುವ ಕಾಲವೀಗ ಸನ್ನಿಹಿತವಾಗಿದೆ. ಸಾಹಸಪೂರ್ಣವಾದ ಈ ಕಾರ್ಯಕ್ಕೆ ಯೋಗ್ಯರಾದ ಬೇರೆ ಯಾರನ್ನೂ ನಾನು ಕಾಣುತ್ತಿಲ್ಲ. ಕರಡಿ-ಕಪಿಗಳ ಈ ಅಪಾರಸೈನ್ಯವನ್ನು ಸಂತೋಷಗೊಳಿಸು. ಬಾಣಗಳಿಂದ ಪೀಡಿತರಾಗಿರುವ ರಾಮ-ಲಕ್ಷ್ಮಣರ ಶರೀರದಿಂದ ಬಾಣಗಳನ್ನು ಹೊರತೆಗೆದು ಇವರನ್ನು ಸ್ವಸ್ಥರನ್ನಾಗಿ ಮಾಡು. ನೀನು ಸಮುದ್ರದ ಮೇಲೆ ಬಹಳ ದೂರದವರೆಗೆ ಹಾರಿ ಹೋಗಿ ಹಿಮವತ್ಪರ್ವತಕ್ಕೆ ಹೋಗಬೇಕು. ಅಲ್ಲಿಗೆ ಹೋದನಂತರ ಹೆಚ್ಚು ಎತ್ತರವಾಗಿರುವ, ಸುವರ್ಣಮಯವಾದ ಋಷಭವೆಂಬ ಶ್ರೇಷ್ಠವಾದ ಪರ್ವತವನ್ನೂ ಕೈಲಾಸಶಿಖರವನ್ನೂ ಸಂದರ್ಶಿಸುವೆ. ಋಷಭ ಮತ್ತು ಕೈಲಾಸಶಿಖರಗಳ ಮಧ್ಯದಲ್ಲಿ ದೇದೀಪ್ಯಮಾನವಾಗಿಯೂ ಅಪಾರವಾದ ಪ್ರಭೆಯಿಂದಲೂ ಕೂಡಿರುವ ಮತ್ತು ಸಮಸ್ತವಾದ ಓಷಧಿಲತೆಗಳಿಂದಲೂ ಶೋಭಿಸುವ ಓಷಧಿಪರ್ವತ ವನ್ನು ಕಾಣುವೆ. ಆ ಪರ್ವತದ ಶಿಖರದ ಮೇಲೆ ಹತ್ತು ದಿಕ್ಕುಗಳನ್ನೂ ಬೆಳಗುತ್ತಿರುವ ಪ್ರಕಾಶಮಾನವಾದ ನಾಲ್ಕು ಓಷಧಿಲತೆಗಳನ್ನು ನೀನು ಕಾಣುವೆ.

ಮೃತಸಂಜೀವನೀಂ ಚೈವ ವಿಶಲ್ಯಕರಣೀಮಪಿ ।
ಸಾವರ್ಣ್ಯಕರಣೀಂ ಚೈವ ಸಂಧಾನಕರಣೀಂ ತಥಾ ॥೩೩॥

ಮೃತಸಂಜೀವನೀ, ವಿಶಲ್ಯಕರಣೀ, ಸಾವರ್ಣ್ಯಕರಣೀ ಮತ್ತು ಸಂಧಾನಕರಣೀ–ಇವೇ ಆ ನಾಲ್ಕು ಮಹೌಷಧಿಲತೆಗಳು. ಅವುಗಳನ್ನು ನೀನಲ್ಲಿ ಕಾಣುವೆ.

ಹನುಮಂತ! ನೀನು ಆ ಎಲ್ಲ ಓಷಧಿಲತೆಗಳನ್ನೂ ತೆಗೆದುಕೊಂಡು ಬಹಳ ಶೀಘ್ರವಾಗಿ ಇಲ್ಲಿಗೆ ಬರಬೇಕು. ಮರಣಹೊಂದಿರುವ ಕಪಿಸೈನಿಕರೆಲ್ಲರನ್ನೂ ಜೀವಂತಗೊಳಿಸಿ ಸಮಾಧಾನಗೊಳಿಸಬೇಕು.”

ಜಾಂಬವಂತನ ಆ ಮಾತನ್ನು ಕೇಳಿ ವಾಯುವಿನ ವೇಗದಿಂದ ಮಹಾಸಾಗರವು ಉಬ್ಬುವಂತೆ–ಹನುಮಂತನು ಬಲಾಧಿಕ್ಯದಿಂದ ತುಂಬಿ ಹೋದನು. ಒಡನೆಯೇ ಮಾರುತಿಯು ಪರ್ವತವೊಂದರ ಶಿಖರದ ಮೇಲೆ ಹತ್ತಿ ಹಾರುವಸಲುವಾಗಿ ಆ ಪರ್ವತಶಿಖರವನ್ನು ಕಾಲುಗಳಿಂದ ಮೆಟ್ಟಿದನು. ಆ ಸಮಯದಲ್ಲವನು ಮತ್ತೊಂದು ಪರ್ವತದಂತೆಯೇ ಕಾಣುತ್ತಿದ್ದನು. ಹನುಮಂತನ ಪಾದಗಳಿಂದ ಮೆಟ್ಟಲ್ಪಟ್ಟ ಆ ಪರ್ವತವು ಭೂಮಿಯೊಳಗೇ ಸೇರಿಹೋಯಿತು. ಹನುಮಂತನ ಆ ಅಧಿಕವಾದ ಪಾದಪೀಡನೆಯಿಂದಾಗಿ ಪುನಃ ಆ ಪರ್ವತಕ್ಕೆ ತನ್ನ ಇರುವಿಕೆಯನ್ನು ಉಳಿಸಿಕೊಳ್ಳಲು ಸಾಧ್ಯವಾಗಲೇ ಇಲ್ಲ. ಹನುಮಂತನ ವೇಗದಿಂದ ಪೀಡಿತವಾದ ಆ ಪರ್ವತದಲ್ಲಿದ್ದ ವೃಕ್ಷಗಳೆಲ್ಲವೂ ಕೆಳಕ್ಕೆ ಬಿದ್ದುವು. ಕೆಲವು ವೃಕ್ಷಗಳು ಪರಸ್ಪರಸಂಘರ್ಷದಿಂದ ಹೊತ್ತಿಕೊಂಡು ಪ್ರಜ್ವಲಿಸತೊಡಗಿದುವು. ಪರ್ವತಶಿಖರಗಳು ಸೀಳಿಹೋದುವು. ಹನುಮಂತನ ಪಾದಪೀಡನೆಯಿಂದಾಗಿ ಪರ್ವತದಲ್ಲಿದ್ದ ವೃಕ್ಷಗಳೂ ಶಿಖರಗಳೂ ಬಿದ್ದುಹೋದುವು. ಕಂಪಿಸುತ್ತಿದ್ದ ಆ ಪರ್ವತದ ಆಶ್ರಯದಲ್ಲಿರಲು ವಾನರಸೈನಿಕರಿಗೆ ಸಾಧ್ಯವಾಗಲಿಲ್ಲ. ಪರ್ವತದ ಕಂಪನದಿಂದಾಗಿ ಲಂಕಾಪಟ್ಟಣದ ಎತ್ತರವಾದ ಮತ್ತು ವಿಶಾಲವಾದ ಮಹಾದ್ವಾರವೂ ಅಳ್ಳಾಡತೊಡಗಿತು. ಗೃಹ-ಗೋಪುರಗಳು ಭಗ್ನವಾದುವು. ಭಯದಿಂದ ಸಮಾಕುಲವಾಗಿದ್ದ ಲಂಕಾಪಟ್ಟಣವು ಆ ರಾತ್ರಿಯಲ್ಲಿ ನೃತ್ಯಮಾಡುತ್ತಿರುವುದೋ ಎಂಬಂತೆ ಕಾಣುತ್ತಿದ್ದಿತು. ಪರ್ವತಸದೃಶನಾದ ಮಾರುತಿಯು ಆ ಪರ್ವತವನ್ನೂ ಮೆಟ್ಟಿ ಭೂ-ಸಮುದ್ರಗಳೆರಡನ್ನೂ ಕ್ಷೋಭೆಗೊಳಿಸಿದನು.

ಮಾರುತಿಯು ಅಲ್ಲಿಂದ ಮುಂದೆ ಹೋಗಿ ಮೇರು-ಮಂದರಪರ್ವತಗಳಂತೆ ಎತ್ತರವಾಗಿ ನಾನಾಪ್ರಕಾರವಾದ ಚಿಲುಮೆಗಳಿಂದ ಕೂಡಿದ್ದ ಮಲಯಪರ್ವತಕ್ಕೆ ಹೋದನು. ಅಲ್ಲಿ ನಾನಾವಿಧವಾದ ವೃಕ್ಷಗಳೂ ಬಳ್ಳಿಗಳೂ ಇದ್ದುವು. ಅಲ್ಲಿದ್ದ ಸರೋವರಗಳಲ್ಲಿ ವಿಕಸಿತವಾದ ಕಮಲಗಳೂ ಕನ್ನೈದಿಲೆಗಳೂ ಇದ್ದುವು. ಅರುವತ್ತು ಯೋಜನೆಗಳಷ್ಟು ಎತ್ತರವಿದ್ದ ಆ ಪರ್ವತವು ದೇವತೆಗಳಿಂದಲೂ, ಗಂಧರ್ವರಿಂದಲೂ, ವಿದ್ಯಾಧರರಿಂದಲೂ, ಮುನಿಗಳ ಸಮೂಹಗಳಿಂದಲೂ, ಅಪ್ಸರೆಯರಿಂದಲೂ ಸೇವಿಸಲ್ಪಡುತ್ತಿದ್ದಿತು. ನಾನಾವಿಧವಾದ ಮೃಗಗಳ ಸಮೂಹಗಳಿಂದ ವ್ಯಾಪ್ತವಾಗಿದ್ದ ಆ ಮಲಯಪರ್ವತವು ಹಲವಾರು ಗುಹೆಗಳಿಂದಲೂ ಶೋಭಿಸುತ್ತಿದ್ದಿತು.

ವಾಯುಪುತ್ರನಾದ ಹನುಮಂತನು ಅಲ್ಲಿ ವಾಸಮಾಡುತ್ತಿದ್ದ ಯಕ್ಷ-ಗಂಧರ್ವ-ಕಿನ್ನರರೇ ಮೊದಲಾದ ಸಮಸ್ತಪ್ರಾಣಿಗಳನ್ನೂ ವ್ಯಾಕುಲಗೊಳಿಸುತ್ತಾ ಮೇಘಕ್ಕೆ ಸಮಾನನಾಗಿ ಉಬ್ಬತೊಡಗಿದನು. ಮಲಯಪರ್ವತವನ್ನು ಕಾಲುಗಳಿಂದ ಮೆಟ್ಟಿ ವಡವಾಮುಖದಂತೆ ಅಗಲವಾಗಿದ್ದ ತನ್ನ ಬಾಯನ್ನು ಇನ್ನೂ ಅಗಲವಾಗಿ ತೆರೆದು ಗಟ್ಟಿಯಾಗಿ ಗರ್ಜಿಸಿ ರಾಕ್ಷಸರೆಲ್ಲರನ್ನೂ ಭಯಗೊಳಿಸಿದನು. ಹಾಗೆ ಬಾರಿ-ಬಾರಿಗೂ ಗರ್ಜಿಸುತ್ತಿದ್ದ ಹನುಮಂತನ ಆ ಸಿಂಹನಾದಗಳನ್ನು ಕೇಳಿ ಲಂಕಾವಾಸಿಗಳಾದ ರಾಕ್ಷಸಶ್ರೇಷ್ಠರು ಸ್ತಬ್ಧರಾದರು. ಭಯಂಕರಪರಾಕ್ರಮಿಯಾದ ಶತ್ರುತಾಪಕನಾದ ಮಾರುತಿಯು ಶ್ರೀರಾಮನಿಗೆ ನಮಸ್ಕರಿಸಿ ಅವನ ಸಲುವಾಗಿ ಅದ್ಭುತವಾದ ಕಾರ್ಯಮಾಡಲು ನಿಶ್ಚಯಿಸಿದನು.

ಚಂಡವೇಗನಾದ ಮಾರುತಿಯು ಸರ್ಪದಂತಿದ್ದ ತನ್ನ ಬಾಲವನ್ನು ಮೇಲೆತ್ತಿ, ಸೊಂಟವನ್ನು ಬಗ್ಗಿಸಿ, ಕಿವಿಗಳೆರಡನ್ನೂ ಹಿಂದಕ್ಕೆ ಮಡಚಿ ಕೊಂಡು, ವಡವಾಮುಖಕ್ಕೆ ಸಮಾನವಾಗಿದ್ದ ಬಾಯನ್ನು ಅಗಲವಾಗಿ ತೆರೆದು ಕೊಂಡು ಆಕಾಶಕ್ಕೆ ಹಾರಿದನು. ತನ್ನ ತೀವ್ರವಾದ ವೇಗದಿಂದ ಪರ್ವತದಲ್ಲಿದ್ದ ವೃಕ್ಷಗಳ ತೋಪುಗಳನ್ನೂ, ಶಿಖರಗಳನ್ನೂ, ಬಂಡೆಗಳನ್ನೂ ಮತ್ತು ಅಲ್ಲಿ ವಾಸಮಾಡುತ್ತಿದ್ದ ಸಾಧಾರಣವಾನರರನ್ನೂ ಜೊತೆಯಲ್ಲಿಯೇ ಹಾರಿಸಿಕೊಂಡು ಹೋಗುತ್ತಿದ್ದನು. ತೋಳುಗಳ ಮತ್ತು ತೊಡೆಗಳ ವೇಗದಿಂದ ಹುಟ್ಟಿದ ಗಾಳಿಯಿಂದ ಹಾರಿಸಲ್ಪಟ್ಟು ಜೊತೆಯಲ್ಲೇ ಬರುತ್ತಿದ್ದ ವೃಕ್ಷ ಶಿಖರಾದಿಗಳು, ಹನುಮಂತನು ಮುಂದೆ ಮುಂದೆ ಹೋಗುತ್ತಿದ್ದಂತೆ ವೇಗವನ್ನು

ಕಳೆದುಕೊಂಡು ಸಮುದ್ರದಲ್ಲಿ ಬಿದ್ದುಹೋದುವು. ಸರ್ಪಶತ್ರುವಾದ ಗರುಡನಂತೆ ಮಹಾಪರಾಕ್ರಮಿಯಾಗಿದ್ದ ವಾಯುಪುತ್ರನಾದ ಆಂಜನೇಯನು ಸರ್ಪದ ಶರೀರದಂತೆ ದಪ್ಪವಾಗಿಯೂ ದೀರ್ಘವಾಗಿಯೂ ಇದ್ದ ತನ್ನ ಎರಡು ತೋಳುಗಳನ್ನೂ ಚಾಚಿಕೊಂಡು ದಿಕ್ಕುಗಳನ್ನೇ ಸೆಳೆಯುತ್ತಿರು ವನೋ ಎಂಬಂತೆ ವೇಗವಾಗಿ ಶ್ರೇಷ್ಠವಾದ ಹಿಮವತ್ಪರ್ವತದ ಕಡೆಗೆ ಹೋದನು.

ಸುತ್ತುತ್ತಿದ್ದ ಅಲೆಗಳ ಸಾಲುಗಳಿಂದ ಕೂಡಿದ್ದ, ಅಲೆಗಳಿಂದ ಪರಿಶೋಭಿತವಾದ ನೀರಿನಿಂದ ಅತ್ತಲಿತ್ತ ದೂಡಲ್ಪಡುತ್ತಿದ್ದ ಜಲಜಂತುಗಳಿಂದ ಕೂಡಿದ್ದ ಸಮುದ್ರವನ್ನು ಮಾರುತಿಯು ವೀಕ್ಷಿಸುತ್ತಾ ಮಹಾವಿಷ್ಣುವಿನಿಂದ ಪ್ರಯೋಗಿಸಲ್ಪಟ್ಟ ಚಕ್ರದಂತೆಯೇ ಶೀಘ್ರವಾಗಿ ಹಿಮವತ್ಪರ್ವತದ ಕಡೆಗೆ ಹೋದನು. ವಾಯುವಿನ ವೇಗಕ್ಕೆ ಸಮಾನವಾದ ವೇಗದಿಂದ ಕೂಡಿದ್ದ ಹನುಮಂತನು ಹಲವಾರು ಪರ್ವತಗಳನ್ನೂ, ಪಕ್ಷಿಗಳ ಸಮೂಹಗಳನ್ನೂ, ಸರೋವರಗಳನ್ನೂ, ನದಿಗಳನ್ನೂ, ಕೆರೆಗಳನ್ನೂ, ನಗರಗಳನ್ನೂ, ಸಂಪತ್ಸಮೃದ್ಧವಾಗಿದ್ದ ದೇಶಗಳನ್ನೂ ನೋಡುತ್ತಾ ವೇಗವಾಗಿ ಮುಂದೆ ಹೋಗುತ್ತಿದ್ದನು. ತಂದೆಗೆ ಸಮಾನವಾದ ಪರಾಕ್ರಮವಿದ್ದ ಮಾರುತಿಯು ಸ್ವಲ್ಪವಾದರೂ ಆಯಾಸವೇ ಇಲ್ಲದೆ ಸೂರ್ಯನ ಮಾರ್ಗವನ್ನನುಸರಿಸಿ ತ್ವರೆಯಿಂದ ಪ್ರಯಾಣಮಾಡಿದನು. ಮಹಾವೇಗದಿಂದ ಕೂಡಿದ್ದ, ಕಪಿಶ್ರೇಷ್ಠನಾದ ಮಾರುತಿಯು ಎಲ್ಲ ದಿಕ್ಕುಗಳನ್ನೂ ಶಬ್ದದಿಂದ ಪ್ರತಿಧ್ವನಿಗೊಳಿಸುತ್ತಾ ವಾಯುವೇಗದಿಂದ ಹೋಗುತ್ತಿದ್ದನು. ಭಯಂಕರಪರಾಕ್ರಮನಾದ ಹನುಮಂತನು ಜಾಂಬವಂತನ ಮಾತನ್ನು ಸ್ಮರಿಸುತ್ತಾ ಹಿಮವತ್ಪರ್ವತವನ್ನು ಸ್ವಲ್ಪ ಸಮಯದಲ್ಲಿಯೇ ನೋಡಿದನು.

ಆ ಪರ್ವತವು ನಾನಾಪ್ರಕಾರವಾದ ಗಿರಿನದಿಗಳಿಂದಲೂ, ಚಿಲುಮೆಗಳಿಂದಲೂ, ಗುಹೆಗಳಿಂದಲೂ ಕೂಡಿದ್ದಿತು. ಬಿಳಿಯ ಮೋಡಗಳಂತಿದ್ದ ಸುಂದರವಾದ ಶಿಖರಗಳಿಂದ ಶೋಭಾಯಮಾನವಾಗಿದ್ದಿತು. ವಿಧ-ವಿಧವಾದ ವೃಕ್ಷಗಳಿಂದಲೂ ಪರಿಶೋಭಿಸುತ್ತಿದ್ದ ಹಿಮವತ್ಪರ್ವತಕ್ಕೆ ಮಾರುತಿಯು ಹೋದನು.

ಅಲ್ಲಿಗೆ ಹೋದನಂತರ ಹನುಮಂತನು ಮಹಾಪರ್ವತವನ್ನೂ,

ಅತ್ಯಂತ ಎತ್ತರವಾಗಿದ್ದ ಸುವರ್ಣಮಯವಾದ ಅದರ ಶಿಖರವನ್ನೂ, ದೇವರ್ಷಿಗಳ ಸಮೂಹಗಳಿಂದ ಸೇವಿಸಲ್ಪಡುತ್ತಿದ್ದ ಪುಣ್ಯತಮವಾದ ಮತ್ತು ಪವಿತ್ರವಾದ ಪುಣ್ಯಾಶ್ರಮಗಳನ್ನೂ ಸಂದರ್ಶಿಸಿದನು. ಅಲ್ಲಿ ಮಾರುತಿಯು ಬ್ರಹ್ಮನ ನಿವಾಸಸ್ಥಾನವನ್ನೂ, ಕೈಲಾಸಶಿಖರವನ್ನೂ (ರಜತನಾಭಿಯ ಸ್ಥಾನವನ್ನೂ), ಇಂದ್ರಾಲಯವನ್ನೂ, ದೇವದೇವನಾದ ಈಶ್ವರನು ಬಾಣಗಳನ್ನು ಬಿಟ್ಟ ಸ್ಥಳವನ್ನೂ,* ಹಯಗ್ರೀವನ ಸ್ಥಾನವನ್ನೂ, ಪ್ರಕಾಶಮಾನವಾದ ಬ್ರಹ್ಮಶಿರಸ್ಸಿನ ಸ್ಥಾನವನ್ನೂ (ಶಿವನು ಬ್ರಹ್ಮನ ತಲೆಯನ್ನು ಕತ್ತರಿಸಿಹಾಕಿದ ಸ್ಥಾನವನ್ನೂ), ಯಮಕಿಂಕರರ ಸ್ಥಾನವನ್ನೂ ನೋಡಿದನು. ಅಗ್ನಿಯ ಸ್ಥಾನವನ್ನೂ, ಬ್ರಹ್ಮನು ಇಂದ್ರನಿಗೆ ವಜ್ರಾಯುಧವನ್ನು ದಯಪಾಲಿಸಿದ ಸ್ಥಾನವನ್ನೂ,[1] ಸೂರ್ಯನ ಪ್ರಭೆಯಂತೆ ಮಹಾಪ್ರಭೆಯಿಂದ ಕೂಡಿದ್ದ ಕುಬೇರನ ಆಲಯವನ್ನೂ, ಸೂರ್ಯಸಮಾವೇಶ ಸ್ಥಾನವನ್ನೂ ದೇವತೆಗಳ ಸಂದರ್ಶನದ ಸಲುವಾಗಿ ಇಡಲ್ಪಟ್ಟಿದ್ದ ಬ್ರಹ್ಮನ ಆಸನವನ್ನೂ, ಪಿನಾಕಧನುಸ್ಸನ್ನೂ, ಭೂಮಿಯ ನಾಭಿಪ್ರದೇಶವನ್ನೂ ನೋಡಿದನು. ಅನಂತರ ಕೈಲಾಸಪರ್ವತವನ್ನೂ, ಹಿಮಾಲಯದ ಶಿಲೆಯನ್ನೂ, ಶಿವನ ವಾಹನವಾದ ವೃಷಭವನ್ನೂ, ಸುವರ್ಣಮಯವಾದ ಮತ್ತು ಶ್ರೇಷ್ಠವಾದ ಋಷಭವೆಂಬ ಪರ್ವತವನ್ನೂ, ಕೈಲಾಸ-ವೃಷಭಪರ್ವತಗಳ ಮಧ್ಯಭಾಗದಲ್ಲಿ ಸಮಸ್ತವಾದ ಓಷಧಿಲತೆಗಳಿಂದಲೂ ಕೂಡಿದ್ದು ದೇದೀಪ್ಯಮಾನವಾಗಿ ಕಾಣುತ್ತಿದ್ದ ಶ್ರೇಷ್ಠವಾದ ಸರ್ವೌಷಧಿಪರ್ವತವನ್ನೂ ವೀಕ್ಷಿಸಿದನು. ಅಗ್ನಿಯ ರಾಶಿಯಂತೆ ಪ್ರಕಾಶಮಾನವಾಗಿ ಕಾಣುತ್ತಿದ್ದ ಆ ಓಷಧಿಪರ್ವತವನ್ನು ನೋಡಿ ವಾಯುಪುತ್ರನು ಅಚ್ಚರಿಗೊಂಡನು. ಒಡನೆಯೇ ಮಾರುತಿಯು ಆ ಪರ್ವತದ ಮೇಲಿಳಿದು ಜಾಂಬವಂತನು ಹೇಳಿದ್ದ ನಾಲ್ಕು ಓಷಧಿಲತೆಗಳನ್ನು ಹುಡುಕತೊಡಗಿದನು. ಮಹಾಕಪಿಯಾದ ವಾಯುಪುತ್ರನು ಸಾವಿರಾರು ಯೋಜನಗಳಷ್ಟು ದೂರವನ್ನು ದಾಟಿಕೊಂಡು ದಿವ್ಯವಾದ ಓಷಧಿಗಳನ್ನು ಧರಿಸಿದ್ದ ಆ ಪರ್ವತಕ್ಕೆ ಬಂದು ಸಂಚರಿಸತೊಡಗಿದನು.

---

* ಈಶ್ವರನು ಬಾಣಗಳನ್ನು ಬಿಟ್ಟ ಸ್ಥಾನಗಳು : ತ್ರಿಪುರಸಂಹಾರಸ್ಥಾನ : ಅಂಧಕಾಸುರನಿಗ್ರಹಸ್ಥಾನ : ಶಂಖಚೂಡನಿಗ್ರಹಸ್ಥಾನ ಮುಂತಾದುವುಗಳು.

1 ವಜ್ರಾಲಯ ಎಂಬ ಪಾಠಾಂತರದ ಪ್ರಕಾರ.

ಮಹೌಷಧ್ಯಸ್ತತಃ ಸರ್ವಾಸ್ತಸ್ಮಿನ್ಪರ್ವತಸತ್ತಮೇ ।
ವಿಜ್ಞಾಯಾರ್ಥಿನಮಾಯಾನ್ತಂ ತತೋ ಜಗ್ಮುರದರ್ಶನಮ್ ॥೬೪॥

ಶ್ರೇಷ್ಠವಾದ ಆ ಪರ್ವತದಲ್ಲಿದ್ದ ಮಹೌಷಧಿಗಳು ಯಾವನೋ ಒಬ್ಬನು ತಮ್ಮನ್ನು ಹುಡುಕಿಕೊಂಡು ಬರುತ್ತಿರುವನೆಂಬುದನ್ನು ತಿಳಿದು ಒಡನೆಯೇ ಅದೃಶ್ಯವಾಗಿ ಹೋದುವು.

ಎಷ್ಟು ಹುಡುಕಿದರೂ ಮಹಾತ್ಮನಾದ ಹನುಮಂತನಿಗೆ ವನಸ್ಪತಿಗಳು ಕಾಣಲೇ ಇಲ್ಲ. ಅದರಿಂದ ಬಹಳವಾಗಿ ಕೋಪಗೊಂಡ ಮಾರುತಿಯು ಸಿಂಹನಾದಮಾಡಿದನು. ಅಗ್ನಿಗೆ ಸದೃಶವಾದ ಕಣ್ಣುಗಳನ್ನು ಹೊಂದಿದ್ದ ಹನುಮಂತನು ಅಸಹನೆಯಿಂದ ಪರ್ವತರಾಜನಿಗೆ ಹೇಳಿದನು :

ಕಿಮೇತದೇವಂ ಸುವಿನಿಶ್ಚಿತಂ ತೇ
ಯದ್ರಾಘವೇನಾಸಿ ಕೃತಾನುಕಮ್ಪಃ ।
ಪಶ್ಯಾದ್ಯ ಮದ್ಬಾಹುಬಲಾಭಿಭೂತೋ
ವಿಕೀರ್ಣಮಾತ್ಮಾನಮಥೋ ನಗೇನ್ದ್ರ ॥೬೬॥

"ಪರ್ವತನೇ! ಮಹಾನುಭಾವನಾದ ರಾಘವನ ಮೇಲೂ ನಿನಗೆ ಅನುಕಂಪವಿಲ್ಲವಾಗಿದೆ. ರಾಘವನ ಸಲುವಾಗಿಯೂ ನಿನ್ನಲ್ಲಿರುವ ವನಸ್ಪತಿಗಳನ್ನು ತೋರಿಸದಿರುವ ನಿಶ್ಚಯವನ್ನು ನೀನು ಹೇಗೆ ಕೈಗೊಂಡೆ? ನನ್ನ ಭುಜಬಲ-ಪರಾಕ್ರಮಗಳಿಂದ ಪರಾಜಯಗೊಳ್ಳುವ ನೀನು ಚೂರು-ಚೂರುಗಳಾಗಿ ಸುತ್ತಲೂ ಬೀಳುವುದನ್ನು ಈಗ ಕಾಣಲಿರುವೆ."

ಹೀಗೆ ಹೇಳಿ ಹನುಮಂತನು ವೃಕ್ಷಗಳಿಂದಲೂ, ಆನೆಗಳಿಂದಲೂ, ಗೈರಿಕಾದಿ ಧಾತುಗಳಿಂದಲೂ ಸಂಪನ್ನವಾಗಿದ್ದ, ಸುವರ್ಣಮಯವಾಗಿದ್ದ, ಪ್ರಜ್ವಲಿಸುತ್ತಿದ್ದ ತಪ್ಪಲುಪ್ರದೇಶಗಳಿಂದ ಕೂಡಿದ್ದ ಆ ಪರ್ವತವನ್ನು ಹಿಡಿದೆತ್ತಿ ನೆಲದ ಮೇಲೆ ಅಪ್ಪಳಿಸಿದನು. ಒಡನೆಯೇ ಅದರ ಶಿಖರಗಳೆಲ್ಲವೂ ನುಚ್ಚು-ನೂರಾಗಿ ಹೋದುವು. ಹೀಗೆ ಆತನು ಆ ಪರ್ವತವನ್ನು ಕಿತ್ತು ಕೈಯಲ್ಲಿ ಹಿಡಿದು ದೇವೇಶ್ವರರಿಂದಲೂ, ಅಸುರೇಶ್ವರರಿಂದಲೂ ಯುಕ್ತವಾದ ಸಮಸ್ತಲೋಕಗಳನ್ನೂ ಭಯದಿಂದ ನಡುಗಿಸಿಬಿಟ್ಟನು. ಆಕಾಶಚರರಾದ

ಸಿದ್ಧ-ಚಾರಣರಿಂದ ಸ್ತುತಿಸಲ್ಪಡುತ್ತಾ ಗರುಡನಂತೆ ಭಯಂಕರವೇಗದಿಂದ ಕೂಡಿದ್ದ ಮಾರುತಿಯು ಆಕಾಶಕ್ಕೆ ಹಾರಿದನು.



ಸ ಭಾಸ್ಕರಾಧ್ವಾನಮನುಪ್ರಪನ್ನ-
ಸ್ತಂ ಭಾಸ್ಕರಾಭಂ ಶಿಖರಂ ಪ್ರಗೃಹ್ಯ ।
ಬಭೌ ತದಾ ಭಾಸ್ಕರಸಂನಿಕಾಶೋ
ರವೇಃ ಸಮೀಪೇ ಪ್ರತಿಭಾಸ್ಕರಾಭಃ ॥೬॥

ಸೂರ್ಯನ ಮಾರ್ಗವನ್ನು ಸೇರಿ, ಸೂರ್ಯನ ಪ್ರಕಾಶಕ್ಕೆ ಸಮಾನವಾದ ಪ್ರಕಾಶದಿಂದ ಕೂಡಿದ್ದ ಪರ್ವತಶಿಖರವನ್ನು ಹಿಡಿದು ಹೊರಟ ಭಾಸ್ಕರಸದೃಶನಾದ ಮಾರುತಿಯು ಸೂರ್ಯದೇವನ ಸನ್ನಿಧಿಯಲ್ಲಿ ಮತ್ತೊಬ್ಬ ಸೂರ್ಯನಂತೆಯೇ ಪ್ರಕಾಶಿಸಿದನು.

ಪರ್ವತೋಪಮನಾದ ವಾಯುಪುತ್ರನು ಆ ಸಮಯದಲ್ಲಿ ಸಾವಿರ

ಅರೆಕಾಲುಗಳಿಂದಲೂ ಮತ್ತು ಅಗ್ನಿಯಿಂದಲೂ ಕೂಡಿದ ಸುದರ್ಶನಚಕ್ರವನ್ನು ಕೈಯಲ್ಲಿ ಧರಿಸಿದ್ದ ಮಹಾವಿಷ್ಣುವಿನಂತೆಯೇ ರಾರಾಜಿಸುತ್ತಿದ್ದನು.

ಹಾಗೆ ಪರ್ವತವನ್ನೇ ಹೊತ್ತು ತರುತ್ತಿದ್ದ ಹನುಮಂತನನ್ನು ನೋಡಿ ವಾನರರೆಲ್ಲರೂ ಗಟ್ಟಿಯಾಗಿ ಗರ್ಜನೆಮಾಡಿದರು. ವಾನರರನ್ನು ನೋಡಿದ ಮಾರುತಿಯೂ ಹರ್ಷದಿಂದ ಪ್ರತಿಗರ್ಜನೆ ಮಾಡಿದನು. ಅವರೆಲ್ಲರ ಮಹಾ ನಿನಾದವನ್ನು ಕೇಳಿ ಲಂಕೆಯಲ್ಲಿದ್ದ ರಾಕ್ಷಸರು ವಿಕಾರವಾಗಿ ಚೀತ್ಕಾರಮಾಡಿದರು. ಬಳಿಕ ಮಹಾತ್ಮನಾದ ಮಾರುತಿಯು ತ್ರಿಕೂಟಪರ್ವತದಲ್ಲಿದ್ದ ವಾನರ ಸೈನಿಕರ ಮಧ್ಯದಲ್ಲಿ ಇಳಿದನು. ವಾನರಶ್ರೇಷ್ಠರೆಲ್ಲರಿಗೂ ತಲೆಬಾಗಿ ನಮಸ್ಕರಿಸಿ ಅಲ್ಲಿಯೇ ಇದ್ದ ವಿಭೀಷಣನನ್ನು ಗಾಢವಾಗಿ ಆಲಿಂಗಿಸಿಕೊಂಡನು. ಮಾನವರಾಜಪುತ್ರರಾದ ಆ ಇಬ್ಬರು ರಾಮ-ಲಕ್ಷ್ಮಣರು ಪರ್ವತದಲ್ಲಿದ್ದ ಮಹೌಷಧಿಗಳ ಗಂಧವನ್ನು ಮೂಸಿದೊಡನೆಯೇ ಎಚ್ಚರಗೊಂಡರು. ಅವರ ಶರೀರದಲ್ಲಿದ್ದ ಬಾಣಗಳೆಲ್ಲವೂ ಹೊರಬಂದು ಗಾಯಗಳೆಲ್ಲವೂ ಮಾಯ್ದು ಹೋದುವು. ಅದೇ ಪರಿಣಾಮವೇ ಸಮಸ್ತರಾದ ವಾನರಸೈನಿಕರ ಮೇಲೂ ಉಂಟಾಗಿ ಎಲ್ಲರೂ ಏಕಕಾಲದಲ್ಲಿ ಎದ್ದು ಕುಳಿತರು.

ಸರ್ವೇ ವಿಶಲ್ಯಾ ವಿರುಜಾಃ ಕ್ಷಣೇನ
ಹರಿಪ್ರವೀರಾ ನಿಹತಾಶ್ಚ ಯೇ ಸ್ಯುಃ ।
ಗನ್ಧೇನ ತಾಸಾಂ ಪ್ರವರೌಷಧೀನಾಂ
ಸುಪ್ತಾ ನಿಶಾನ್ತೇಷ್ವಿವ ಸಂಪ್ರಬುದ್ಧಾಃ ॥೭೪॥

ಶ್ರೇಷ್ಠವಾದ ಆ ಓಷಧಿಲತೆಗಳ ವಾಸನೆಯ ಆಘ್ರಾಣದಿಂದಲೇ ಸತ್ತು ಹೋಗಿದ್ದ ವಾನರಸೈನಿಕರು ಎಚ್ಚರಗೊಂಡರು. ಕ್ಷಣಮಾತ್ರದಲ್ಲಿ ಬಾಣಗಳಿಂದಲೂ, ಗಾಯಗಳಿಂದಲೂ ರಹಿತರಾದರು. ಬೆಳಗಾಗುತ್ತಲೇ ನಿದ್ರೆಯು ತಳೆದು ಎಚ್ಚರಗೊಳ್ಳುವಂತೆ ಎಲ್ಲರೂ ಎದ್ದು ಕುಳಿತರು.

ಯದಾಪ್ರಭೃತಿ ಲಙ್ಕಾಯಾಂ ಯುಧ್ಯನ್ತೇ ಕಪಿರಾಕ್ಷಸಾಃ ।
ತದಾಪ್ರಭೃತಿ ಮಾನಾರ್ಥಮಾಜ್ಞಯಾ ರಾವಣಸ್ಯ ಚ ॥೭೫॥

ಯೇ ಹನ್ಯನ್ತೇ ರಣೇ ತತ್ರ ರಾಕ್ಷಸಾಃ ಕಪಿಕುಞ್ಜರೈಃ ।
ಹತಾ ಹತಾಸ್ತು ಕ್ಷಿಪ್ಯನ್ತೇ ಸರ್ವ ಏವ ತು ಸಾಗರೇ ॥೭೬॥

ಲಂಕೆಯಲ್ಲಿ ವಾನರಸೈನಿಕರಿಗೂ ರಾಕ್ಷಸರಿಗೂ ಯುದ್ಧವು ಪ್ರಾರಂಭವಾದ ದಿವಸದಿಂದಲೇ ವಾನರಸೈನಿಕರಿಂದ ಸಂಹರಿಸಲ್ಪಡುತ್ತಿದ್ದ ರಾಕ್ಷಸರನ್ನು ರಾವಣನ ಆಜ್ಞೆಯಂತೆ ಸಮುದ್ರಕ್ಕೆ ಹಾಕಿಬಿಡುತ್ತಿದ್ದರು. ತನ್ನ ಕಡೆಯಲ್ಲಿ ಸತ್ತುಹೋದ ರಾಕ್ಷಸರ ಸಂಖ್ಯೆಯು ಕಪಿನಾಯಕರಿಗೆ ತಿಳಿಯಬಾರದೆಂಬುದೇ ರಾವಣನ ಆ ಆಜ್ಞೆಗೆ ಕಾರಣವಾಗಿದ್ದಿತು. ತನಗೆ ಆಗಬಹುದಾಗಿದ್ದ ಅವಮಾನವನ್ನು ತಪ್ಪಿಸಿಕೊಳ್ಳಲು ರಾವಣನು ಹೀಗೆ ಆಜ್ಞೆಮಾಡಿದ್ದನು.*

ಬಳಿಕ ಗಂಧವಹನ ಆತ್ಮಜನಾದ ಮಹಾವೇಗಶಾಲಿಯಾದ ಮಾರುತಿಯು ಆ ಓಷಧಿಪರ್ವತವನ್ನು ಹಿಮವತ್ಪರ್ವತಕ್ಕೇ ಕೊಂಡೊಯ್ದು ಅಲ್ಲಿ ಅದನ್ನು ಪುನಃ ಪ್ರತಿಷ್ಠಾಪಿಸಿ ಪುನಃ ರಾಮನ ಬಳಿಗೆ ಬಂದು ಸೇರಿದನು.

ಎಪ್ಪತ್ನಾಲ್ಕನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೭೫ನೆಯ ಸರ್ಗ

ಲಂಕಾದಹನ : ವಾನರ-ರಾಕ್ಷಸರ ಭಯಂಕರಯುದ್ಧ

ತತೋಽಬ್ರವೀನ್ಮಹಾತೇಜಾಃ ಸುಗ್ರೀವೋ ವಾನರಾಧಿಪಃ ।
ಅರ್ಥ್ಯಂ ವಿಜ್ಞಾಪಯಂಶ್ಚಾಪಿ ಹನುಮನ್ತಮಿದಂ ವಚಃ ॥೧॥

ಅನಂತರ ಮಹಾತೇಜಸ್ವಿಯಾದ ವಾನರೇಶ್ವರನಾದ ಸುಗ್ರೀವನು ಶ್ರೀರಾಮನಲ್ಲಿ ಅರ್ಥಗರ್ಭಿತವಾದ ಮಾತನ್ನು ವಿಜ್ಞಾಪಿಸಿಕೊಂಡು ಬಳಿಕ ಹನುಮಂತನಿಗೆ ಹೇಳಿದನು :

"ಹನುಮಂತ! ಕುಂಭಕರ್ಣನು ಹತನಾದನು. ಅಂತೆಯೇ ರಾವಣನ ಮಕ್ಕಳೂ ಹತರಾದರು. ಈ ಸಮಯದಲ್ಲಿ ಲಂಕೆಗೆ ಯಾವುದೇ ರಕ್ಷಣೆಯನ್ನು ಕಲ್ಪಿಸಲು ರಾವಣನು ಅಸಮರ್ಥನಾಗಿರುವನು. ಆದುದರಿಂದ ನಮ್ಮ ಸೈನ್ಯದಲ್ಲಿರುವ ಮಹಾಬಲಿಷ್ಠರಾದ ಮತ್ತು ವೇಗವಂತರಾದ

---

* ಸತ್ತುಹೋಗಿದ್ದ ರಾಕ್ಷಸರ ಹೆಣಗಳನ್ನು ಕಂಡರೆ ಬದುಕಿದ್ದ ರಾಕ್ಷಸಯೋಧರು ಧೈರ್ಯಗುಂದುವರು ಮತ್ತು ಕಪಿಸೈನಿಕರಿಗೆ ಉತ್ಸಾಹವುಂಟಾಗುವುದು ಎಂದು ಭಾವಿಸಿ ರಾವಣನು ರಾಕ್ಷಸರು ಯುದ್ಧದಲ್ಲಿ ಸತ್ತೊಡನೆಯೇ ಅವರ ಹೆಣಗಳನ್ನು ಸಮುದ್ರಕ್ಕೆ ಎಸೆದುಬಿಡಬೇಕೆಂದು ನಿಯಮಮಾಡಿದ್ದನು.

ವಾನರರು ಪಂಜುಗಳನ್ನು ಹಿಡಿದುಕೊಂಡು ಲಂಕಾಪಟ್ಟಣವನ್ನು ಶೀಘ್ರವಾಗಿ ಆಕ್ರಮಿಸಲಿ."

ವಾನರರಾಜನಾದ ಸುಗ್ರೀವನು ಹೀಗೆ ಹೇಳಲು ಸೂರ್ಯನು ಮುಳುಗಿದನಂತರ ಭಯಂಕರವಾದ ಪ್ರದೋಷಕಾಲದಲ್ಲಿ ಎಲ್ಲ ವಾನರಶ್ರೇಷ್ಠರೂ ಪಂಜುಗಳನ್ನು ಹಿಡಿದುಕೊಂಡು ಲಂಕಾಪಟ್ಟಣದ ಕಡೆಗೆ ಹೊರಟರು. ಪಂಜುಗಳನ್ನು ಹಿಡಿದಿದ್ದ ವಾನರರು ಎಲ್ಲ ಕಡೆಗಳಿಂದಲೂ ಲಂಕಾಪಟ್ಟಣವನ್ನು ಆಕ್ರಮಿಸಲು ಮಹಾದ್ವಾರಗಳ ರಕ್ಷಣೆಯಲ್ಲಿ ನಿಯುಕ್ತರಾಗಿದ್ದ ವಿರೂಪವಾದ ಕಣ್ಣುಗಳನ್ನು ಹೊಂದಿದ್ದ ರಾಕ್ಷಸರು ಭಯದಿಂದ ಪಲಾಯನ ಮಾಡಿದರು. ಯಾವ ತಡೆಯೂ ಇಲ್ಲದೇ ಒಳನುಗ್ಗಿದ ವಾನರಸೈನಿಕರು ಮಹಾದ್ವಾರಗಳಲ್ಲಿಯೂ, ಉಪ್ಪರಿಗೆಗಳಲ್ಲಿಯೂ, ರಾಜಬೀದಿಗಳಲ್ಲಿಯೂ, ಓಣಿಗಳಲ್ಲಿಯೂ ಬೆಂಕಿಯನ್ನು ಹೊತ್ತಿಸಿದರು. ಹಾಗೆ ವಾನರರು ಹಚ್ಚಿದ ಅಗ್ನಿಯು ರಾಕ್ಷಸರ ಸಾವಿರಾರು ಮನೆಗಳನ್ನು ಸುಟ್ಟುಹಾಕಿತು. ಪರ್ವತಾಕಾರವಾಗಿದ್ದ ಪ್ರಾಸಾದಗಳು ಅತ್ಯಲ್ಪಕಾಲದಲ್ಲಿಯೇ ಉರಿದು ಭಸ್ಮವಾಗಿ ಕೆಳಗುರುಳಿದುವು.

ಪ್ರಾಸಾದಗಳಲ್ಲಿದ್ದ ಅಗುರುಗಳೂ, ಉತ್ತಮವಾದ ಚಂದನಗಳೂ, ಮುತ್ತುಗಳೂ, ಸುಂದರವಾದ ಮಣಿಗಳೂ, ವಜ್ರ-ಹವಳಗಳೇ ಮುಂತಾದ ನವರತ್ನಗಳೂ ಭಸ್ಮವಾಗಿ ಹೋದುವು. ಆ ಮಹಾಸೌಧಗಳಲ್ಲಿದ್ದ ಪೀತಾಂಬರಗಳೂ, ರೇಷ್ಮೆಯ ವಸ್ತ್ರಗಳೂ, ಕಂಬಳಿಗಳೂ, ಉಣ್ಣೆಯ ಬಟ್ಟೆಗಳೂ ಸುಟ್ಟುಹೋದುವು. ಸುವರ್ಣಮಯವಾದ ಆಭರಣಗಳೂ, ಅಸ್ತ್ರ-ಶಸ್ತ್ರಗಳೂ ಸುಟ್ಟುಹೋದುವು. ಹಲವಾರು ಆಕಾರಗಳಲ್ಲಿದ್ದ ಕುದುರೆಗಳ ಜೀನು, ಕಡಿವಾಣ ಇವೇ ಮುಂತಾದ ಅಲಂಕಾರವಸ್ತುಗಳು, ಆನೆಗಳ ಕಂಠಾಭರಣಗಳು, ಅವುಗಳನ್ನು ಕಟ್ಟುವ ಹಗ್ಗಗಳು, ಸುಂದರವಾದ ರಥದ ಉಪಕರಣಗಳು–ಇವೆಲ್ಲವೂ ಭಸ್ಮವಾದುವು. ಯೋಧರ ಮತ್ತು ಆನೆ-ಕುದುರೆಗಳ ಕವಚಗಳು, ಖಡ್ಗಗಳು, ಧನುಸ್ಸುಗಳು, ನಾಣುಗಳು, ಬಾಣಗಳು, ತೋಮರ, ಅಂಕುಶ ಮತ್ತು ಶಕ್ತ್ಯಾಯುಧಗಳು, ಕಂಬಳಿಗಳು, ಚಾಮರಗಳು, ಆಸನೋಪಯೋಗಿಯಾದ ವ್ಯಾಘ್ರಚರ್ಮಗಳು, ಕಸ್ತೂರಿಯೇ ಮೊದಲಾದ ಸುಗಂಧದ್ರವ್ಯಗಳು, ಮುತ್ತು-ಮಣಿಗಳಿಂದಲೇ ನಿರ್ಮಿತವಾದ

ಪ್ರಾಸಾದಗಳು, ವಿಧ-ವಿಧವಾದ ಅಸ್ತ್ರಗಳ ಸಮೂಹಗಳು–ಇವೆಲ್ಲವನ್ನೂ ವಾನರರು ಹೊತ್ತಿಸಿದ ಅಗ್ನಿಯು ಭಸ್ಮಮಾಡಿತು. ಆ ಸಮಯದಲ್ಲಿ ಅಗ್ನಿಯು ನಾನಾವಿಧವಾದ ವಿಚಿತ್ರವಾದ ಮನೆಗಳನ್ನೂ ಸುಡಲು ಪ್ರಾರಂಭಿಸಿತು. ಮನೆಯಲ್ಲಿಯೇ ಆಸಕ್ತರಾಗಿದ್ದ, ಸುವರ್ಣಮಯವಾದ ಕವಚಗಳನ್ನು ತೊಟ್ಟಿದ್ದ, ಆಭರಣಗಳಿಂದಲೂ ವಸ್ತ್ರಗಳಿಂದಲೂ ಸಮಲಂಕೃತರಾಗಿದ್ದ ರಾಕ್ಷಸರ ಮನೆಗಳೆಲ್ಲವನ್ನೂ ಅಗ್ನಿಯು ದಹಿಸಿಬಿಟ್ಟಿತು. ಮದಿರೆಯನ್ನು ಕುಡಿದು ಚಂಚಲ ನೇತ್ರರಾಗಿದ್ದ, ಮದ್ಯಪಾನದ ಪ್ರಭಾವದಿಂದ ಪ್ರಮತ್ತರಾಗಿ ತೂರಾಡುತ್ತಾ ಹೋಗುತ್ತಿದ್ದ ರಾಕ್ಷಸರ ಮನೆಗಳನ್ನು ಭಸ್ಮಮಾಡಿತು. ಅಗ್ನಿಯು ಹೊತ್ತಿಕೊಂಡಿರುವುದನ್ನು ನೋಡಿ ಹಾಸಿಗೆಯಿಂದೆದ್ದು ಹೋಗುತ್ತಿದ್ದ ರಾಕ್ಷಸರ ವಸ್ತ್ರಗಳನ್ನು ಅವರ ಪತ್ನಿಯರು ಬಲವಾಗಿ ಹಿಡಿದಿದ್ದರು. ಅಂತಹವರ ಮನೆಗಳೂ ಭಸ್ಮವಾಗಿ ಹೋದುವು. ಶತ್ರುಗಳ ವಿಷಯದಲ್ಲಿ ಕೋಪಗೊಂಡಿದ್ದ, ಗದೆ-ಶೂಲ-ಕತ್ತಿ ಇವೇ ಮುಂತಾದ ಆಯುಧಗಳನ್ನು ಹಿಡಿದಿದ್ದ ಯೋಧರ ಮನೆಗಳೂ ಭಸ್ಮವಾದುವು. ಭಕ್ಷ್ಯ-ಭೋಜ್ಯಾದಿಗಳನ್ನು ತಿನ್ನುತ್ತಿದ್ದವರ, ಮದ್ಯಪಾನಮಾಡುತ್ತಿದ್ದವರ ಮನೆಗಳೂ ಭಸ್ಮವಾದುವು. ಬಹುಮೌಲ್ಯವಾದ ಹಂಸತೂಲಿಕಾತಲ್ಪದಲ್ಲಿ ಪ್ರೇಯಸಿಯರೊಡನೆ ಮಲಗಿದ್ದ ರಾಕ್ಷಸರ ಸೌಧಗಳೂ ಭಸ್ಮವಾದುವು. ಮಕ್ಕಳನ್ನೆತ್ತಿಕೊಂಡು ಅವಸರದಿಂದ ಹೋಗುತ್ತಿದ್ದ ವರ ಮನೆಗಳೂ ಸುಟ್ಟುಹೋದುವು. ಅಂತಹ ಸಾವಿರಾರು ಮಂದಿ ಲಂಕಾ ನಿವಾಸಿಗಳಾದ ರಾಕ್ಷಸರ ಮನೆಗಳನ್ನು ಅಗ್ನಿದೇವನು ಭಸ್ಮಮಾಡುತ್ತಾ ಪುನಃ ಪುನಃ ಪ್ರಜ್ವಲಿಸುತ್ತಲೇ ಇದ್ದನು.

ಬಹಳ ಭದ್ರವಾಗಿದ್ದ ಬಹುಮೂಲ್ಯದ, ಗಾಂಭೀರ್ಯಗುಣದಿಂದ ಸಂಪನ್ನವಾಗಿದ್ದ (ಅನೇಕ ಕೊಠಡಿಗಳಿಂದ ಕೂಡಿದ್ದು ಅತ್ಯಂತಗಹನವಾಗಿದ್ದ), ಸುಂದರವಾಗಿದ್ದ, ಸುವರ್ಣಮಯವಾಗಿದ್ದ, ಅರ್ಧಚಂದ್ರಾಕಾರದಲ್ಲಿಯೂ ಪೂರ್ಣಚಂದ್ರಾಕಾರದಲ್ಲಿಯೂ ಇದ್ದ, ಶಿರೋಗೃಹಗಳಿಂದ ಎತ್ತರವಾಗಿ ಕಾಣುತ್ತಿದ್ದ, ಹಾಸಿಗೆ-ಪೀಠೋಪಕರಣ ಇತ್ಯಾದಿ ಗೃಹೋಪಯೋಗಿ ವಸ್ತುಗಳಿಂದ ಸಂಪನ್ನವಾಗಿದ್ದ, ಮಣಿಗಳಿಂದಲೂ ಹವಳಗಳಿಂದಲೂ ಚಿತ್ರಿತವಾಗಿದ್ದ, ಸೂರ್ಯನನ್ನು ಸ್ಪರ್ಶಿಸುತ್ತಿದೆಯೋ ಎಂಬಂತೆ ಕಾಣುತ್ತಿದ್ದ, ಕ್ರೌಂಚ-ನವಿಲುಗಳ ನಿನಾದದಿಂದಲೂ, ವೀಣೆಯ ಸುಮಧುರಧ್ವನಿ

ಯಿಂದಲೂ, ಒಡವೆಗಳ ಝಣ-ಝಣಾಶಬ್ದಗಳಿಂದಲೂ ಶಬ್ದಾಯಮಾನವಾಗಿದ್ದ, ಪರ್ವತೋಪಮವಾಗಿದ್ದ ಮಹಾಸೌಧಗಳನ್ನು ವಾನರರು ಹೊತ್ತಿಸಿಟ್ಟ ಅಗ್ನಿಯು ದಹಿಸಿತು.

ಗ್ರೀಷ್ಮರ್ತುವಿನಲ್ಲಿ ಮಿಂಚಿನಿಂದ ಕೂಡಿದ ಮೇಘಗಳ ಸಮೂಹದಂತೆ ಅಗ್ನಿಯ ಜ್ವಾಲೆಗಳಿಂದ ಸುತ್ತುವರಿಯಲ್ಪಟ್ಟಿದ್ದ ಮಹಾದ್ವಾರಗಳು ಪ್ರಕಾಶಿಸುತ್ತಿದ್ದುವು. ಮಹಾಪರ್ವತದ ಶಿಖರಗಳು ಕಾಳ್ಗಿಚ್ಚಿನಿಂದ ಪ್ರಜ್ವಲಿಸುವಂತೆ ಅಗ್ನಿಯ ಜ್ವಾಲೆಯಿಂದ ಸುತ್ತುವರಿಯಲ್ಪಟ್ಟಿದ್ದ ರಾಕ್ಷಸರ ಸೌಧಗಳು ಪ್ರಕಾಶಿಸುತ್ತಿದ್ದುವು. ಏಳು ಅಂತಸ್ತುಗಳ ಉಪ್ಪರಿಗೆಯ ಮನೆಗಳಲ್ಲಿ ಮಲಗಿದ್ದ ಸುಂದರಸ್ತ್ರೀಯರು ಬೆಂಕಿಯಿಂದ ದಹಿಸಲ್ಪಡುತ್ತಿರಲಾಗಿ ಮೈಮೇಲಿದ್ದ ಆಭರಣಗಳೆಲ್ಲವನ್ನೂ ಪರಿತ್ಯಜಿಸಿ 'ಅಯ್ಯೋ! ಅಯ್ಯೋ! ಇನ್ನೇನು ಗತಿ?' ಎಂದು ಚೀತ್ಕಾರಮಾಡುತ್ತಿದ್ದರು. ಇಂದ್ರನ ವಜ್ರಾಯುಧದಿಂದ ಕತ್ತರಿಸಲ್ಪಟ್ಟ ಮಹಾಪರ್ವತದ ಶಿಖರಗಳು ಕೆಳಕ್ಕೆ ಬೀಳುತ್ತಿದ್ದಂತೆ–ಅಗ್ನಿಯಿಂದ ಸುತ್ತುವರಿಯಲ್ಪಟ್ಟಿದ್ದ ಅನೇಕ ಭವನಗಳು ಕೆಳಗುರುಳಿದುವು. ಧಗ-ಧಗನೆ ಹೊತ್ತಿ ಉರಿಯುತ್ತಿದ್ದ ಗಗನಚುಂಬಿಯಾದ ಸೌಧಗಳು ದೂರದಿಂದ ನೋಡಿದವರಿಗೆ ಎಲ್ಲ ಕಡೆಗಳಲ್ಲಿಯೂ ಹೊತ್ತಿಕೊಂಡು ಉರಿಯುತ್ತಿರುವ ಹಿಮವತ್ಪರ್ವತದ ಶಿಖರಗಳಂತೆಯೇ ಕಾಣುತ್ತಿದ್ದುವು. ಜ್ವಾಲೆಗಳಿಂದ ಪ್ರಜ್ವಲಿಸುತ್ತಿದ್ದ, ದಹಿಸಲ್ಪಡುತ್ತಿದ್ದ ಭವನಗಳ ಅಗ್ರಭಾಗಗಳಿಂದ ಕೂಡಿದ್ದ ಆ ಲಂಕಾಪಟ್ಟಣವು ರಾತ್ರಿಯ ಕಾಲದಲ್ಲಿ ಅರಳಿದ ಹೂವುಗಳಿಂದ ಕೂಡಿರುವ ಮುತ್ತುಗದ ಮರಗಳಿಂದ ಸಮಾವೃತವಾಗಿರುವಂತೆಯೇ ಕಾಣುತ್ತಿದ್ದಿತು. ಆ ಸಮಯದಲ್ಲಿ ಗಜದಳದ ಮುಖ್ಯರು ಆನೆಗಳನ್ನು ಬಿಟ್ಟುಬಿಟ್ಟಿದ್ದರು. ಅಶ್ವದಳದ ಮುಖ್ಯರು ಕುದುರೆಗಳನ್ನು ಬಿಟ್ಟುಬಿಟ್ಟಿದ್ದರು. ಅಗ್ನಿಯ ಜ್ವಾಲೆಗಳಿಂದ ಭಯಗೊಂಡ ಆನೆ-ಕುದುರೆಗಳು ದಿಕ್ಕಾಪಾಲಾಗಿ ಓಡಾಡುತ್ತಿದ್ದುವು. ಅಂತಹ ದಾರುಣದೃಶ್ಯದಿಂದ ಕೂಡಿದ್ದ ಲಂಕಾಪಟ್ಟಣವು ಪ್ರಳಯಕಾಲದಲ್ಲಿ ಸಂಭ್ರಾಂತವಾದ ಮೊಸಳೆಗಳಿಂದ ಕೂಡಿದ ಸಮುದ್ರದಂತೆಯೇ ಕಾಣುತ್ತಿದ್ದಿತು.

ಅಶ್ವಂ ಮುಕ್ತಂ ಗಜೋ ದೃಷ್ಟ್ವಾ ಕ್ವಚಿದ್ಭೀತೋಽಪಸರ್ಪತಿ ।
ಭೀತೋ ಭೀತಂ ಗಜಂ ದೃಷ್ಟ್ವಾ ಕ್ವಚಿದಶ್ವೋ ನಿವರ್ತತೇ ॥೨೮॥

ಅಶ್ವದಳದ ಮುಖ್ಯರಿಂದ ಬಿಡಲ್ಪಟ್ಟ ಕುದುರೆಗಳು ಓಡಿಬರುತ್ತಿರುವುದನ್ನು ನೋಡಿ ಆನೆಯು ಹೆದರಿ ಓಡುತ್ತಿತ್ತು. ಭಯಗೊಂಡು ಹಿಂದಕ್ಕೆ ಸರಿದ ಆನೆಯನ್ನು ನೋಡಿ ಕುದುರೆಯೇ ಭಯಗೊಂಡು ಪಲಾಯನ ಮಾಡುತ್ತಿದ್ದಿತು.

ಹೀಗೆ ಲಂಕಾಪಟ್ಟಣವು ಸರ್ವತ್ರ ಸುಟ್ಟುಹೋಗುತ್ತಿರುವಾಗ ಅದರ ನೆರಳು ಸಮುದ್ರದಲ್ಲಿ ಬಿದ್ದು ಅದು ಕೆಂಪು ಸಮುದ್ರದಂತೆ ಪ್ರಕಾಶಿಸುತ್ತಿದ್ದಿತು. ಮುಹೂರ್ತಮಾತ್ರದಲ್ಲಿ ವಾನರಸೈನಿಕರಿಂದ ದಹಿಸಲ್ಪಟ್ಟ ಆ ಲಂಕಾಪಟ್ಟಣವು ಪ್ರಳಯಕಾಲದಲ್ಲಿ ಕಾಲಾಗ್ನಿಯಿಂದ ದಹಿಸಲ್ಪಡುವ ಭೂಮಂಡಲದಂತೆಯೇ ಕಾಣುತ್ತಿದ್ದಿತು. ಬೆಂಕಿಯ ಹೊಗೆಯಿಂದ ವ್ಯಾಪ್ತರಾಗಿದ್ದ ಮತ್ತು ಅಗ್ನಿಯಿಂದ ದಹಿಸಲ್ಪಡುತ್ತಿದ್ದ ರಾಕ್ಷಸಸ್ತ್ರೀಯರ ಆರ್ತ ನಾದಗಳು ನೂರು ಯೋಜನಗಳಷ್ಟು ದೂರದವರೆಗೂ ಕೇಳಿಸುತ್ತಿದ್ದುವು. ಸುಟ್ಟುಹೋದ ಶರೀರಗಳಿಂದ ಕೂಡಿದ್ದ, ಅಗ್ನಿಯ ಬಾಧೆಯನ್ನು ತಪ್ಪಿಸಿಕೊಳ್ಳಲು ಲಂಕಾಪಟ್ಟಣದಿಂದ ಹೊರಬರುತ್ತಿದ್ದ ರಾಕ್ಷಸರ ಮೇಲೆ ಯುದ್ಧ ಮಾಡುವ ಉತ್ಕಟೇಚ್ಛೆಯಿಂದ ಕೂಡಿದ್ದ ವಾನರಸೈನಿಕರು ದಾಳಿಮಾಡುತ್ತಿದ್ದರು. ಆ ಸಮಯದಲ್ಲಿ ವಾನರರ ಗರ್ಜನೆಗಳೂ ಮತ್ತು ರಾಕ್ಷಸರ ಆರ್ತನಾದಗಳೂ ಹತ್ತು ದಿಕ್ಕುಗಳಲ್ಲಿಯೂ ಮತ್ತು ಭೂಮ್ಯಾಕಾಶಗಳಲ್ಲಿಯೂ ಪ್ರತಿಧ್ವನಿಸಿದುವು. ಅಂಗಾಂಗಗಳಲ್ಲಿ ಚುಚ್ಚಿಕೊಂಡಿದ್ದ ಬಾಣಗಳೆಲ್ಲವೂ ಓಷಧಿಲತೆಗಳ ವಾಸನೆಯ ಪ್ರಭಾವದಿಂದಾಗಿ ಹೊರಬಂದು ಸ್ವಸ್ಥರಾಗಿದ್ದ, ಮಹಾತ್ಮರಾದ ರಾಮ-ಲಕ್ಷ್ಮಣರು ಸ್ವಲ್ಪವಾದರೂ ಗಾಬರಿಗೊಳ್ಳದೇ ತಮ್ಮ ಧನುಸ್ಸುಗಳನ್ನು ಕೈಗೆತ್ತಿಕೊಂಡರು. ಶ್ರೀರಾಮನು ತನ್ನ ಶ್ರೇಷ್ಠವಾದ ಧನುಸ್ಸಿನ ಶಿಂಜಿನಿಯನ್ನು ಸೆಳೆದು ಟೇಂಕರಿಸಿದನು. ಅದರಿಂದ ರಾಕ್ಷಸರಿಗೆ ಭಯವನ್ನುಂಟುಮಾಡುವ ಭಯಂಕರವಾದ ಶಬ್ದವು ಹೊರಹೊಮ್ಮಿತು.

ಮಹಾಧನುಸ್ಸನ್ನು ಟೇಂಕರಿಸುತ್ತಿದ್ದ ಶ್ರೀರಾಮನು–ಕ್ರುದ್ಧನಾದ ಭಗವಾನ್ ಶಂಕರನು ವೇದಮಯವಾದ (ಶಬ್ದಬ್ರಹ್ಮಾತ್ಮಕವಾದ) ತನ್ನ ಧನುಸ್ಸನ್ನು ಟೇಂಕರಿಸಿದಂತೆಯೇ ಪ್ರಕಾಶಿಸಿದನು. ವಾನರರ ಗರ್ಜನೆ, ರಾಕ್ಷಸರ ಕೋಲಾಹಲ–ಈ ಎರಡು ಶಬ್ದಗಳನ್ನೂ ಮೀರಿಸಿ ಶ್ರೀರಾಮನ ಧನುಸ್ಸಿನ ಶಬ್ದವು ಸರ್ವತ್ರ ಕೇಳಿಬರುತ್ತಿದ್ದಿತು. ವಾನರರ ಗರ್ಜನೆ, ರಾಕ್ಷಸರ ಕೋಲಾ

ಹಲ ಮತ್ತು ಶ್ರೀರಾಮನ ಧನುಸ್ಸಿನ ಟಂಕಾರಶಬ್ದ–ಇವು ಮೂರೂ ಹತ್ತು ದಿಕ್ಕುಗಳನ್ನೂ ವ್ಯಾಪಿಸಿದುವು. ಶ್ರೀರಾಮನ ಧನುಸ್ಸಿನಿಂದ ಹೊರಬಂದ ಬಾಣಗಳಿಂದ ಕೈಲಾಸಶಿಖರಗಳಂತೆಯೇ ಎತ್ತರವಾಗಿದ್ದ ಲಂಕಾಪಟ್ಟಣದ ನಗರದ್ವಾರಗಳು ಭಿನ್ನ-ಭಿನ್ನವಾಗಿ ಭೂಮಿಯಲ್ಲಿ ಬಿದ್ದುವು. ಏಳು ಅಂತಸ್ತಿನ ಉಪ್ಪರಿಗೆ ಮನೆಗಳಲ್ಲಿಯೂ ದೊಡ್ಡ-ದೊಡ್ಡ ಭವನಗಳಲ್ಲಿಯೂ ಶ್ರೀರಾಮನ ಬಾಣಗಳು ಬೀಳುತ್ತಿರುವುದನ್ನು ನೋಡಿ ರಾಕ್ಷಸರು ಭಯಂಕರವಾದ ಯುದ್ಧಕ್ಕೆ ಸನ್ನದ್ಧರಾಗತೊಡಗಿದರು. ಸೊಂಟಪಟ್ಟಿಯನ್ನು ಕಟ್ಟಿಕೊಂಡು, ಕವಚವನ್ನು ತೊಟ್ಟುಕೊಂಡು, ಸಿಂಹನಾದಗಳನ್ನು ಮಾಡಿಕೊಂಡು ಯುದ್ಧಕ್ಕೆ ಸನ್ನದ್ಧರಾಗುತ್ತಿದ್ದ ರಾಕ್ಷಸಶ್ರೇಷ್ಠರಿಗೆ ಆ ರಾತ್ರಿಯು ಮಹಾಭಯಂಕರವಾದ ಕಾಳರಾತ್ರಿಯಂತಾಯಿತು. ಆ ಸಮಯದಲ್ಲಿ ಮಹಾತ್ಮನಾದ ಸುಗ್ರೀವನು ಪ್ರಧಾನಭೂತರಾದ ವಾನರನಾಯಕರಿಗೆ ಆಜ್ಞಾಪಿಸಿದನು :

ಆಸನ್ನಂ ದ್ವಾರಮಾಸಾದ್ಯ ಯುಧ್ಯಧ್ವಂ ಚ ಪ್ಲವಂಗಮಾಃ ॥೪೨॥

"ವಾನರರೇ! ಸಮೀಪದಲ್ಲಿರುವ ಮಹಾದ್ವಾರದ ಬಳಿಗೆ ಹೋಗಿ ಮಹಾದ್ವಾರಗಳನ್ನು ರಕ್ಷಿಸುತ್ತಿರುವ ರಾಕ್ಷಸರೊಡನೆ ಯುದ್ಧವನ್ನು ಮಾಡಿರಿ.

ಯಶ್ಚ ವೋ ವಿತಥಂ ಕುರ್ಯಾತ್ತತ್ರ ತತ್ರಹ್ಯುಪಸ್ಥಿತಃ ।
ಸ ಹನ್ತವ್ಯೋऽಭಿಸಂಪ್ಲುತ್ಯ ರಾಜಶಾಸನದೂಷಕಃ ॥೪೩॥

ನಿಮ್ಮಲ್ಲಿ ಯಾವನು ಈ ಆಜ್ಞೆಯನ್ನು ಪಾಲಿಸುವುದಿಲ್ಲವೋ, ಯುದ್ಧ ಭೂಮಿಯಲ್ಲಿದ್ದರೂ ರಾಕ್ಷಸರೊಡನೆ ಯುದ್ಧಮಾಡದೇ ಪಲಾಯನಮಾಡು ವನೋ–ಅಂತಹವನನ್ನು ನೀವೆಲ್ಲರೂ ಹಿಡಿದು ಸಂಹರಿಸಬೇಕು. ಏಕೆಂದರೆ : ಅವನು ರಾಜಶಾಸನವನ್ನು ತಿರಸ್ಕರಿಸಿದವನಾಗುತ್ತಾನೆ."

ಸುಗ್ರೀವನ ಆಜ್ಞೆಯಂತೆ ವಾನರಮುಖ್ಯರು ರಾಕ್ಷಸರೊಡನೆ ಯುದ್ಧ ಮಾಡಲು ತಮಗೆ ಸಮೀಪದಲ್ಲಿದ್ದ ಮಹಾದ್ವಾರಗಳ ಬಳಿಗೆ ತೆರಳಿದರು. ಧಗ-ಧಗನೆ ಉರಿಯುತ್ತಿರುವ ಪಂಜುಗಳನ್ನು ಹಿಡಿದುಕೊಂಡು ಕಪಿ ಮುಖ್ಯರು ನಗರದ ಮಹಾದ್ವಾರಗಳಲ್ಲಿ ನಿಂತಿರುವುದನ್ನು ನೋಡಿ ರಾವಣನು ಕುಪಿತನಾದನು. ಅವನ ಆಕಳಿಸುವಿಕೆಯ ವಾಯುವಿನಿಂದ ಹತ್ತು ದಿಕ್ಕುಗಳೂ ವ್ಯಾಕುಲಗೊಂಡುವು. ಆ ಸಮಯದಲ್ಲಿ ರಾವಣನು ಕಾಲರುದ್ರನ

ಅಂಗಾಂಗಗಳಲ್ಲಿ ಪ್ರಕಟವಾಗುವ ಮೂರ್ತಿಮತ್ತಾದ ಕ್ರೋಧದಂತೆಯೇ ಕಾಣುತ್ತಿದ್ದನು. ಬಳಿಕ ರಾವಣನು ಕುಂಭಕರ್ಣನ ಮಕ್ಕಳಾದ ಕುಂಭ-ನಿಕುಂಭರನ್ನು ಬಹುಸಂಖ್ಯಾತ ರಾಕ್ಷಸರೊಡನೆ ಯುದ್ಧಕ್ಕೆ ಕಳುಹಿಸಿಕೊಟ್ಟನು. ರಾವಣನ ಆಜ್ಞೆಯಂತೆ ಯೂಪಾಕ್ಷ, ಶೋಣಿತಾಕ್ಷ, ಪ್ರಜಂಘ ಮತ್ತು ಕಂಪನರು ಕುಂಭ-ನಿಕುಂಭರ ಜೊತೆಯಲ್ಲಿ ಯುದ್ಧಕ್ಕೆ ಹೊರಟರು. ಆ ಸಮಯದಲ್ಲಿ ಮಹಾಬಲರಾದ ಆ ಎಲ್ಲ ರಾಕ್ಷಸರಿಗೂ ರಾವಣನು ಆಜ್ಞೆ ಮಾಡಿದನು.

ರಾಕ್ಷಸಾ ಗಚ್ಛತಾದ್ಯೈವ ಸಿಂಹನಾದಂ ಚ ನಾದಯನ್ ||೪೮||

"ವೀರರಾಕ್ಷಸರೇ! ನೀವೆಲ್ಲರೂ ಈ ರಾತ್ರಿಯಲ್ಲಿಯೇ ಸಿಂಹನಾದಗಳನ್ನು ಮಾಡುತ್ತಾ ಯುದ್ಧಕ್ಕೆ ಹೋಗಿರಿ."

ಪ್ರಜ್ವಲಿಸುವ ಆಯುಧಗಳನ್ನು ಹಿಡಿದಿದ್ದ ರಾವಣಪ್ರೇರಿತರಾದ ಆ ರಾಕ್ಷಸರು ಬಾರಿ ಬಾರಿಗೂ ಗರ್ಜನೆಮಾಡುತ್ತಾ ಲಂಕಾಪಟ್ಟಣದಿಂದ ಹೊರಟರು. ರಾಕ್ಷಸರು ತಮ್ಮ ಪ್ರಭೆಯಿಂದಲೂ, ಧರಿಸಿದ್ದ ಆಭರಣಗಳ ಪ್ರಭೆಯಿಂದಲೂ, ವಾನರರು ಕೈಗಳಲ್ಲಿ ಹಿಡಿದಿದ್ದ ಪಂಜುಗಳ ಪ್ರಭೆಯಿಂದಲೂ ಸಮಸ್ತವಾದ ಆಕಾಶವನ್ನೂ ಪ್ರಭಾಯುಕ್ತವನ್ನಾಗಿ ಮಾಡಿದರು. ಚಂದ್ರನ ಮತ್ತು ನಕ್ಷತ್ರಗಳ ಪ್ರಭೆಯೂ ಸೈನಿಕರ ಆಭರಣಗಳ ಜಾಜ್ವಲ್ಯಮಾನವಾದ ಪ್ರಭೆಯೊಡನೆ ಸೇರಿ ಆಕಾಶವನ್ನು ಬೆಳಗಿದುವು. ಚಂದ್ರನ ಬೆಳದಿಂಗಳು, ಅಗ್ನಿಯಿಂದ ದಹಿಸಲ್ಪಡುತ್ತಿದ್ದ ಮನೆಗಳ ಪ್ರಭೆ ಮತ್ತು ಸೈನಿಕರ ಆಭರಣಗಳ ಪ್ರಭೆ–ಇವೆಲ್ಲವೂ ಸೇರಿ ವಾನರ-ರಾಕ್ಷಸರ ಸೈನ್ಯಗಳನ್ನು ಬೆಳಗಿದುವು. ಲಂಕೆಯಲ್ಲಿ ಅರ್ಧಭಾಗ ಸುಟ್ಟುಹೋಗಿದ್ದ ಮನೆಗಳ ಪ್ರತಿಬಿಂಬವು ಸಮುದ್ರದಲ್ಲಿ ಬಿದ್ದು ಚಂಚಲವಾದ ಅಲೆಗಳಿಂದ ಕೂಡಿದ್ದ ಸಮುದ್ರವು ಬಹಳವಾಗಿ ಶೋಭಿಸಿತು.

ರಾಕ್ಷಸರ ಆ ಭಯಂಕರವಾದ ಸೈನ್ಯವು ಧ್ವಜ-ಪತಾಕೆಗಳಿಂದ ಸುಶೋಭಿತವಾಗಿದ್ದಿತು. ಶ್ರೇಷ್ಠವಾದ ಕತ್ತಿಗಳಿಂದಲೂ ಮತ್ತು ಗಂಡುಗೊಡಲಿಗಳಿಂದಲೂ ಸೈನಿಕರು ಸನ್ನದ್ಧರಾಗಿದ್ದರು. ಭಯಂಕರವಾದ ಅಶ್ವಸೈನ್ಯದಿಂದಲೂ, ಗಜಸೈನ್ಯದಿಂದಲೂ, ರಥಗಳಿಂದಲೂ ಮತ್ತು ಕಾಲಾಳು

ಗಳಿಂದಲೂ ರಾಕ್ಷಸಸೈನ್ಯವು ಸಂಪನ್ನವಾಗಿದ್ದಿತು. ಥಳ-ಥಳಿಸುತ್ತಿದ್ದ ಶೂಲಗಳಿಂದಲೂ, ಗದೆಗಳಿಂದಲೂ, ಕತ್ತಿಗಳಿಂದಲೂ, ಭಲ್ಲಗಳಿಂದಲೂ, ತೋಮರಗಳಿಂದಲೂ, ಧನುಸ್ಸುಗಳಿಂದಲೂ ಸಮೃದ್ಧವಾಗಿದ್ದ ಆ ರಾಕ್ಷಸ ಮಹಾಸೈನ್ಯವು ಭಯಂಕರವಾದ ಪರಾಕ್ರಮದಿಂದಲೂ ಮತ್ತು ಪೌರುಷ ದಿಂದಲೂ ಕೂಡಿದ್ದಿತು. ಆ ಸೈನಿಕರ ಕೈಯಲ್ಲಿ ಥಳ-ಥಳಿಸುತ್ತಿದ್ದ ಭರ್ಜಿಗಳಿ ದ್ದುವು. ರಥಗಳಲ್ಲಿದ್ದ ಸಾವಿರಾರು ಚಿಕ್ಕಗಂಟೆಗಳ ಘಣ-ಘಣಾಶಬ್ದವು ಕೇಳಿ ಬರುತ್ತಿದ್ದಿತು. ಸೈನಿಕರ ಭುಜಗಳಲ್ಲಿ ತೋಳುಬಂದಿಯೇ ಮೊದಲಾದ ಸುವರ್ಣಮಯವಾದ ಆಭರಣಗಳಿದ್ದುವು. ಆ ಭುಜಗಳ ಮೇಲೆ ಅವರು ಗಂಡುಗೊಡಲಿಗಳನ್ನಿಟ್ಟುಕೊಂಡಿದ್ದರು. ಮಹಾಸ್ತ್ರಗಳನ್ನು ತಿರುಗಿಸುತ್ತಾ ಹೋಗುತ್ತಿದ್ದರು. ಬಾಣಗಳನ್ನು ಧನುಸ್ಸಿನಲ್ಲಿ ಸಂಧಾನಮಾಡಿದ್ದರು. ಯೋಧರು ಪೂಸಿಕೊಂಡಿದ್ದ ಗಂಧದಿಂದಲೂ, ಕತ್ತಿನಲ್ಲಿ ಧರಿಸಿದ್ದ ಸುಗಂಧ ಯುಕ್ತವಾದ ಪುಷ್ಪಮಾಲಿಕೆಗಳಿಂದಲೂ, ವಿಶೇಷವಾದ ಮಧುಪಾನ ದಿಂದಲೂ ಅಲ್ಲಿಯ ವಾತಾವರಣವು ಅನುಪಮವಾದ ಸುಗಂಧದಿಂದ ಕೂಡಿ ದ್ದಿತು. ಶೂರ-ವೀರರಿಂದ ಸಂಪನ್ನವಾಗಿದ್ದ ಆ ಮಹಾಸೈನ್ಯವು ಮೇಘಗಳ ಗರ್ಜನೆಯಂತೆ ಶೂರ-ವೀರಸೈನಿಕರ ಸಿಂಹನಾದಗಳಿಂದ ಶಬ್ದಾಯಮಾನ ವಾಗಿದ್ದು ಅತ್ಯಂತಭಯಂಕರವಾಗಿ ಕಾಣುತ್ತಿದ್ದಿತು.

ರಾಕ್ಷಸರ ಅಂತಹ ದುರಾಸದವಾದ ಸೈನ್ಯವು ಬಂದುದನ್ನು ಕಂಡು ವಾನರಸೈನಿಕರು ಮುಂದೆ ಹೋಗಿ ಉಚ್ಚಸ್ವರದಿಂದ ಗರ್ಜಿಸತೊಡಗಿದರು. ರಾಕ್ಷಸರ ಆ ವಿಶಾಲಸೈನ್ಯವು ಅತ್ಯಂತವೇಗದಿಂದ ಮುಂದಕ್ಕೆ ಹಾರಿಬಂದು ಪತಂಗದ ಹುಳುಗಳು ಅಗ್ನಿಯ ಕಡೆಗೆ ಧಾವಿಸುವಂತೆ–ಬಹಳ ವೇಗವಾಗಿ ಶತ್ರುಸೈನ್ಯವನ್ನು ಆಕ್ರಮಿಸಿತು. ಭುಜಗಳ ಕಂಪನದಿಂದಾಗಿ ಪರಸ್ಪರ ಸಂಘರ್ಷಿಸುತ್ತಿದ್ದ ಗಂಡುಗೊಡಲಿ-ವಜ್ರಾಯುಧಗಳಿಂದ ಕೂಡಿದ್ದ ಆ ರಾಕ್ಷಸರ ಶ್ರೇಷ್ಠವಾದ ಸೈನ್ಯವು ಅತ್ಯಂತ ಶೋಭಾಯಮಾನವಾಗಿ ಕಾಣುತ್ತಿದ್ದಿತು. ಯುದ್ಧಾಕಾಂಕ್ಷಿಗಳಾದ ವಾನರಸೈನಿಕರು ಹುಚ್ಚು ಹಿಡಿದವರಂತೆ ವೃಕ್ಷ ಗಳಿಂದಲೂ, ಬಂಡೆಗಳಿಂದಲೂ, ಮುಷ್ಟಿಗಳಿಂದಲೂ ರಾಕ್ಷಸರನ್ನು ಸಂಹರಿ ಸುತ್ತಾ ಆಕ್ರಮಿಸಿದರು. ಅದೇ ರೀತಿಯಲ್ಲಿ ತಮ್ಮ ಮೇಲೆ ದಾಳಿ ಮಾಡಲು ಬರುತ್ತಿದ್ದ ವಾನರಸೈನಿಕರ ತಲೆಗಳನ್ನು ಭಯಂಕರಪರಾಕ್ರಮಿಗಳಾದ ರಾಕ್ಷಸ

ಸೈನಿಕರು ನಿಶಿತವಾದ ಬಾಣಗಳಿಂದ ಕತ್ತರಿಸುತ್ತಿದ್ದರು. ವಾನರಸೈನಿಕರು ಹಲ್ಲುಗಳಿಂದ ರಾಕ್ಷಸರ ಕಿವಿಗಳನ್ನೇ ಕಚ್ಚಿಹಾಕುತ್ತಿದ್ದರು. ಮುಷ್ಟಿಗಳ ಪ್ರಹಾರಗಳಿಂದ ತಲೆಗಳನ್ನೇ ಒಡೆದುಹಾಕುತ್ತಿದ್ದರು. ಬಂಡೆಗಳ ಪ್ರಹಾರ ಗಳಿಂದ ಅಂಗಾಂಗಗಳನ್ನು ಭಗ್ನಗೊಳಿಸುತ್ತಿದ್ದರು. ಹೀಗೆ ಅಂಗಹೀನರಾದ ರಾಕ್ಷಸರು ರಣರಂಗದ ಸುತ್ತಲೂ ಸುತ್ತಾಡುತ್ತಿದ್ದರು. ಅದೇ ರೀತಿಯಲ್ಲಿ ಘೋರರೂಪಿಗಳಾದ ರಾಕ್ಷಸರು ಕೂಡ ಮುಖ್ಯ-ಮುಖ್ಯರಾದ ಕಪಿನಾಯಕ ರನ್ನು ನಿಶಿತವಾದ ಬಾಣಗಳಿಂದ ಗಾಯಗೊಳಿಸುತ್ತಿದ್ದರು. ಒಬ್ಬ ರಾಕ್ಷಸನು ವಾನರನೊಬ್ಬನನ್ನು ಹಿಂಸಿಸುತ್ತಿದ್ದರೆ ಮತ್ತೊಬ್ಬ ವಾನರನು ಬಂದು ಆ ರಾಕ್ಷಸನನ್ನು ಹಿಂಸಿಸುತ್ತಿದ್ದನು. ಒಬ್ಬ ವಾನರನು ರಾಕ್ಷಸನೊಬ್ಬನನ್ನು ಕೆಳಕ್ಕೆ ಕೆಡವುತ್ತಿದ್ದರೆ ಮತ್ತೊಬ್ಬ ರಾಕ್ಷಸನು ಮಧ್ಯದಲ್ಲಿ ಬಂದು ಆ ವಾನರನನ್ನು ನೆಲಕಾಣಿಸುತ್ತಿದ್ದನು. ಒಬ್ಬ ರಾಕ್ಷಸನು ವಾನರನೊಬ್ಬನನ್ನು ನಿಂದಿಸುತ್ತಿದ್ದರೆ ಮತ್ತೊಬ್ಬ ವಾನರನು ಬಂದು ಆ ರಾಕ್ಷಸನನ್ನು ನಿಂದಿಸುವನು. ಒಬ್ಬ ವಾನರನು ರಾಕ್ಷಸನೊಬ್ಬನನ್ನು ಕಚ್ಚುತ್ತಿದ್ದರೆ ಮತ್ತೊಬ್ಬ ರಾಕ್ಷಸನು ಮಧ್ಯದಲ್ಲಿ ಬಂದು ಆ ವಾನರಸೈನಿಕನನ್ನು ಕಚ್ಚುತ್ತಿದ್ದನು. ಹೀಗೆ ಪರಸ್ಪರವಾಗಿ ಯುದ್ಧವು ನಡೆಯುತ್ತಿದ್ದಿತು.

ದೇಹೀತ್ಯನ್ಯೋ ದದಾತ್ಯನ್ಯೋ ದದಾಮೀತ್ಯಪರಃ ಪುನಃ ।
ಕಿಂ ಕ್ಲೇಶಯಸಿ ತಿಷ್ಠೇತಿ ತತ್ರಾನ್ಯೋನ್ಯಂ ಬ್ರಭಾಷಿರೇ ॥೬೬॥

'ನನಗೆ ಯುದ್ಧೋಪಹಾರವನ್ನು ಕೊಡು'–ಎಂದೊಬ್ಬನು ಕೂಗಿ ಕೊಳ್ಳುವನು. ಒಡನೆಯೇ ಅವನ ಮೇಲೆ ಎದುರಾಳಿಯು ಯುದ್ಧಕ್ಕೆರಗು ವನು. ಮತ್ತೊಬ್ಬನು 'ನೀನೇಕೆ ಕ್ಲೇಶಪಡುತ್ತಿರುವೆ? ನಾನೇ ಅವನ ಮೇಲೆ ಯುದ್ಧಮಾಡುವೆನು'–ಎನ್ನುವನು. ಹೀಗೆ ವಾನರ-ರಾಕ್ಷಸಯೋಧರು ಪರಸ್ಪರವಾಗಿ ವೀರೋಚಿತವಾದ ಮಾತುಗಳನ್ನಾಡುತ್ತಿದ್ದರು.

ಹೀಗೆ ವಾನರರಿಗೂ, ರಾಕ್ಷಸರಿಗೂ ಭಯಂಕರವಾದ ಯುದ್ಧವು ನಡೆ ಯುತ್ತಿದ್ದಿತು. ಯೋಧರ ಶಸ್ತ್ರಗಳು ಜಾರಿ ಕೆಳಕ್ಕೆ ಬೀಳುತ್ತಿದ್ದುವು. ಕವಚಗಳೂ, ಅಸ್ತ್ರ-ಶಸ್ತ್ರಗಳೂ ಕತ್ತರಿಸಲ್ಪಟ್ಟು ಕೆಳಗೆ ಬೀಳುತ್ತಿದ್ದುವು. ದೊಡ್ಡದಾದ ಪ್ರಾಸಾಯುಧವನ್ನೂ, ಯಷ್ಟಿಗಳನ್ನೂ, ಶೂಲಗಳನ್ನೂ, ಕತ್ತಿ ಗಳನ್ನೂ, ಈಟಿಗಳನ್ನೂ ಎತ್ತಿಕೊಂಡು ರಾಕ್ಷಸರು ಯುದ್ಧಮಾಡುತ್ತಿದ್ದರು.

ಮುಷ್ಟಿಗಳಿಂದಲೂ, ಶೈಲ-ವೃಕ್ಷಗಳಿಂದಲೂ ವಾನರರು ಯುದ್ಧಮಾಡುತ್ತಿದ್ದರು. ಏಳು-ಹತ್ತು ವಾನರರನ್ನು ರಾಕ್ಷಸರು ಒಂದೇ ಬಾರಿಗೆ ಸಂಹರಿಸುತ್ತಿದ್ದರು. ರಾಕ್ಷಸರ ವಸ್ತ್ರಗಳು ಕಳಚಿ ಕೆಳಕ್ಕೆ ಬೀಳುತ್ತಿದ್ದುವು. ಮುಡಿಗಳು ಬಿಚ್ಚಿಹೋಗಿದ್ದುವು. ಹೀಗೆ ಕವಚಗಳಿಂದಲೂ, ಧ್ವಜಗಳಿಂದಲೂ ವಿಹೀನರಾಗಿ ಪಲಾಯನಮಾಡುತ್ತಿದ್ದ ರಾಕ್ಷಸಯೋಧರನ್ನು ತಡೆದು ನಿಲ್ಲಿಸಿ ವಾನರಸೈನಿಕರು ಅವರನ್ನು ಸುತ್ತುವರಿದು ನಿಂತರು. ಪುನಃ ವಾನರರಿಗೂ ರಾಕ್ಷಸರಿಗೂ ಭಯಂಕರವಾದ ಯುದ್ಧವು ಪ್ರಾರಂಭವಾಯಿತು.

೭೫ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೭೬ನೆಯ ಸರ್ಗ

ಅಂಗದನಿಂದ ಕಂಪನ–ಪ್ರಜಂಘರ ಸಂಹಾರ : ದ್ವಿವಿದನಿಂದ ಶೋಣಿತಾಕ್ಷನ, ಮೈಂದನಿಂದ ಯೂಪಾಕ್ಷನ ಮತ್ತು ಸುಗ್ರೀವನಿಂದ ಕುಂಭನ ಸಂಹಾರ

ಪ್ರವೃತ್ತೇ ಸಂಕುಲೇ ತಸ್ಮಿನ್ಘೋರೇ ವೀರಜನಕ್ಷಯೇ ।
ಅಙ್ಗದಃ ಕಮ್ಪನಂ ವೀರಮಾಸಸಾದ ರಣೋತ್ಸುಕಃ ॥೧॥

ವೀರಜನವಿನಾಶಕವಾದ, ಭಯಂಕರವಾದ ಆ ವಾನರ-ರಾಕ್ಷಸರ ಘೋರಸಮರವು ನಡೆಯುತ್ತಿರಲಾಗಿ ರಣೋತ್ಸಾಹಿಯಾದ ಅಂಗದನು ವೀರನಾದ ಕಂಪನನನ್ನು ಆಕ್ರಮಿಸಿದನು.

ಕಂಪನನು ಕ್ರೋಧದಿಂದ ಅಂಗದನನ್ನು ಯುದ್ಧಕ್ಕೆ ಆಹ್ವಾನಿಸಿ ಅತ್ಯಂತ ವೇಗವಾಗಿ ಗದೆಯಿಂದ ಅವನನ್ನು ಮೊದಲು ಪ್ರಹರಿಸಿದನು. ಅದರಿಂದ ಬಹಳವಾಗಿ ಗಾಯಗೊಂಡ ಅಂಗದನು ತತ್ತರಿಸಿ ಮೂರ್ಛೆಗೊಂಡನು. ಮರುಕ್ಷಣದಲ್ಲಿಯೇ ಎಚ್ಚೆತ್ತು ಪರ್ವತದ ಶಿಖರವನ್ನು ಕಂಪನನ ಮೇಲೆಸೆದನು. ಪರ್ವತಶಿಖರದ ಪ್ರಹಾರದಿಂದ ಸಮ್ಮರ್ದಿತನಾದ ಕಂಪನನು ಅಸುನೀಗಿ ಕೆಳಕ್ಕೆ ಬಿದ್ದನು. ಹೀಗೆ ಕಂಪನನು ಹತನಾದುದನ್ನು ಕಂಡು ಶೋಣಿತಾಕ್ಷನು ಬಹಳ ಬೇಗ ರಥದಲ್ಲಿ ಕುಳಿತು ಭಯರಹಿತನಾಗಿ ನಿಂತಿದ್ದ ಅಂಗದನ ಬಳಿಗೆ ಬಂದು ಅವನನ್ನು ಆಕ್ರಮಿಸಿದನು. ಮರುಕ್ಷಣದಲ್ಲಿಯೇ ಶೋಣಿ

ತಾಕ್ಷನು ಶರೀರವನ್ನು ಸೀಳುವ ಸಾಮರ್ಥ್ಯವನ್ನು ಹೊಂದಿದ್ದ, ಕಾಲಾಗ್ನಿ ಸದೃಶವಾಗಿದ್ದ, ಅತ್ಯಂತತೀಕ್ಷ್ಣವೂ ನಿಶಿತವೂ ಆದ ಬಾಣಗಳಿಂದ ವೇಗವಾಗಿ ಅಂಗದನನ್ನು ಪ್ರಹರಿಸಿದನು. ಕ್ಷುರ, ಕ್ಷುರಪ್ರ, ನಾರಾಚ, ವತ್ಸದಂತ, ಶಿಲೀಮುಖ, ಕರ್ಣಿ, ಶಲ್ಯ, ವಿಪಾಠ–ಇವೇ ಮುಂತಾದ ನಾನಾಪ್ರಕಾರವಾದ ಬಾಣವಿಶೇಷಗಳಿಂದ ಶೋಣಿತಾಕ್ಷನು ಪ್ರತಾಪವಂತನಾದ ವಾಲಿಯ ಮಗ ನನ್ನು ಪ್ರಹರಿಸಿ ಗಾಯಗೊಳಿಸಿದನು. ಅದಕ್ಕೆ ಪ್ರತಿಯಾಗಿ ಅಂಗದನು ಬಂಡೆಗಳು, ವೃಕ್ಷಗಳು ಮತ್ತು ಪರ್ವತಶಿಖರಗಳು–ಇವೇ ಮುಂತಾದ ಆಯುಧಗಳಿಂದ ಶೋಣಿತಾಕ್ಷನ ಭಯಂಕರವಾದ ಧನುಸ್ಸನ್ನೂ, ರಥವನ್ನೂ, ಬಾಣಗಳನ್ನೂ ಧ್ವಂಸಮಾಡಿದನು. ಧನುರ್ಬಾಣಗಳನ್ನು ಕಳೆದುಕೊಂಡ ರಾಕ್ಷಸನು ಕತ್ತಿ-ಗುರಾಣಿಗಳನ್ನು ಕೈಗೆತ್ತಿಕೊಂಡು ಅತ್ಯಂತ ಕ್ರುದ್ಧನಾಗಿ ಮುಂದೇನಾಗುವುದೆಂಬುದನ್ನೂ ಯೋಚಿಸಹೋಗದೇ ಅಂಗದನ ಮೇಲೆರ ಗಿದನು. ಅಷ್ಟರಲ್ಲಿಯೇ ಮಹಾಬಲಿಷ್ಠನಾದ ಅಂಗದನು ಮೇಲಕ್ಕೆ ಹಾರಿ ರಾಕ್ಷಸನನ್ನು ಹಿಡಿದು ಅವನ ಕೈಯಲ್ಲಿದ್ದ ಕತ್ತಿಯನ್ನು ಕಿತ್ತುಕೊಂಡು ಸಿಂಹ ನಾದಮಾಡಿದನು. ಮರುಕ್ಷಣದಲ್ಲಿಯೇ ಅಂಗದನು ಗುರಾಣಿಯ ರೂಪ ದಲ್ಲಿದ್ದ ರಾಕ್ಷಸನ ಹೆಗಲಿನಲ್ಲಿ ಖಡ್ಗವನ್ನು ನೆಟ್ಟು ಯಜ್ಞೋಪವೀತದೋಪಾದಿ ಯಲ್ಲಿ ಮೂಲೆ-ಮೂಲೆಯಾಗಿ ಅವನ ಶರೀರವನ್ನು ಕತ್ತರಿಸಿದನು. ಆದರೂ ಶೋಣಿತಾಕ್ಷನು ಸಾಯಲಿಲ್ಲ. ವಾಲಿಯ ಮಗನಾದ ಅಂಗದನು ದೊಡ್ಡ ದಾಗಿದ್ದ ಆ ಕತ್ತಿಯನ್ನೆತ್ತಿಕೊಂಡು ಪುನಃ ಪುನಃ ಗರ್ಜನೆಮಾಡುತ್ತಾ ರಣಾಂಗಣದಲ್ಲಿದ್ದ ಇತರ ರಾಕ್ಷಸರನ್ನೂ ಆಕ್ರಮಿಸಿದನು. ಆ ಸಮಯದಲ್ಲಿ ಯೂಪಾಕ್ಷನು ಪರಮಕ್ರುದ್ಧನಾಗಿ ಪ್ರಜಂಘನೆಂಬ ರಾಕ್ಷಸನಾಯಕನೊಡನೆ ಮಹಾಬಲನಾದ ಅಂಗದನನ್ನು ಆಕ್ರಮಿಸಿದನು. ಆ ವೇಳೆಗೆ ಕನಕಾಂಗದ ಗಳಿಂದ ಸಮಲಂಕೃತನಾಗಿದ್ದ ಶೋಣಿತಾಕ್ಷನೂ ಸುಧಾರಿಸಿಕೊಂಡು ಲೋಹ ಮಯವಾದ ಗದೆಯನ್ನೆತ್ತಿಕೊಂಡು ಅಂಗದನ ಮೇಲೆ ಬಿದ್ದನು. ಯೂಪಾಕ್ಷ ನೊಡನೆ ಬಂದಿದ್ದ ಮಹಾವೀರನಾದ ಪ್ರಜಂಘನೂ ಶೋಣಿತಾಕ್ಷನಂತೆಯೇ ಗದಾಪಾಣಿಯಾಗಿ ಅಂಗದನನ್ನು ಆಕ್ರಮಿಸಿದನು. ಹೀಗೆ ಗದಾಪಾಣಿಗಳಾದ ಶೋಣಿತಾಕ್ಷ-ಪ್ರಜಂಘರ ಮಧ್ಯದಲ್ಲಿದ್ದ ಕಪಿಶ್ರೇಷ್ಠನಾದ ಅಂಗದನು ಎರಡು ವಿಶಾಖಾನಕ್ಷತ್ರಗಳ ಮಧ್ಯದಲ್ಲಿರುವ ಚಂದ್ರನಂತೆಯೇ ಪ್ರಕಾಶಿಸು

ತ್ತಿದ್ದನು. ಆ ಸಮಯದಲ್ಲಿ ಮೈಂದ-ದ್ವಿವಿದರು ಅಂಗದನನ್ನು ರಕ್ಷಿಸುವ ಸಲುವಾಗಿ ಅವನ ಸಮೀಪದಲ್ಲಿ ನಿಂತರು. ಹಾಗೆಯೇ ಅವರು ತಮ್ಮೊಡನೆ ಯುದ್ಧಮಾಡಲು ಯೋಗ್ಯರಾದ ರಾಕ್ಷಸರನ್ನೂ ಹುಡುಕುತ್ತಿದ್ದರು. ಅಷ್ಟರಲ್ಲಿಯೇ ಕತ್ತಿಗಳನ್ನೂ, ಧನುರ್ಬಾಣಗಳನ್ನೂ ಹಿಡಿದಿದ್ದ, ಮಹಾಬಲಿಷ್ಠರಾದ, ಮಹಾಕಾಯರಾದ ರಾಕ್ಷಸರು ಪರಮಕ್ರುದ್ಧರಾಗಿ ವಾನರಸೈನಿಕರನ್ನು ಎಲ್ಲ ಕಡೆಗಳಿಂದಲೂ ಆಕ್ರಮಿಸಿದರು. ರಾಕ್ಷಸಶ್ರೇಷ್ಠರಾದ ಶೋಣಿತಾಕ್ಷ, ಪ್ರಜಂಘ ಮತ್ತು ಯೂಪಾಕ್ಷ–ಈ ಮೂವರಿಗೂ ವಾನರಶ್ರೇಷ್ಠರಾದ ಅಂಗದ-ಮೈಂದ-ದ್ವಿವಿದ–ಈ ಮೂವರಿಗೂ ರೋಮಾಂಚಕರವಾದ ಭಯಂಕರಯುದ್ಧವು ಪ್ರಾರಂಭವಾಯಿತು. ವಾನರವೀರರು ವೃಕ್ಷಗಳನ್ನೇ ಕಿತ್ತುತಂದು ರಾಕ್ಷಸರ ಮೇಲೆ ವೇಗವಾಗಿ ಎಸೆಯುತ್ತಿದ್ದರು. ಆ ಎಲ್ಲ ವೃಕ್ಷಗಳನ್ನೂ ಮಹಾಬಲನಾದ ಪ್ರಜಂಘನೇ ಕತ್ತಿಯಿಂದ ಕತ್ತರಿಸುತ್ತಿದ್ದನು. ಕ್ರುದ್ಧರಾದ ವಾನರರು ರಾಕ್ಷಸರ ರಥ-ಕುದುರೆಗಳನ್ನೇ ಆಯುಧಗಳನ್ನಾಗಿ ಮಾಡಿಕೊಂಡು ಅವರ ಮೇಲೆಸೆಯುತ್ತಿದ್ದರು. ಅವುಗಳ ಜೊತೆಯಲ್ಲಿಯೇ ಪರ್ವತಶಿಖರಗಳಿಂದಲೂ ವೃಕ್ಷಗಳಿಂದಲೂ ಪ್ರಹರಿಸುತ್ತಿದ್ದರು. ಅವೆಲ್ಲವನ್ನೂ ಮಹಾಬಲಿಷ್ಠನಾದ ಯೂಪಾಕ್ಷನು ಬಾಣಗಳ ಸಮೂಹಗಳಿಂದ ಧ್ವಂಸಮಾಡಿದನು. ಮೈಂದ-ದ್ವಿವಿದರು ಕಿತ್ತುತಂದು ರಾಕ್ಷಸರ ಮೇಲೆಸೆಯುತ್ತಿದ್ದ ಅಸಂಖ್ಯಾತ ವೃಕ್ಷಗಳನ್ನು ಪ್ರತಾಪವಂತನಾದ ಶೋಣಿತಾಕ್ಷನು ಮಧ್ಯದಲ್ಲಿಯೇ ಗದಾಪ್ರಹಾರಗಳಿಂದ ಧ್ವಂಸಮಾಡುತ್ತಿದ್ದನು.

ಅನಂತರ ಪ್ರಜಂಘನು ಶತ್ರುಗಳ ಮರ್ಮಸ್ಥಾನಗಳನ್ನು ಭೇದಿಸಲು ಸಮರ್ಥವಾದ ದೊಡ್ಡದಾದ ಕತ್ತಿಯನ್ನೆತ್ತಿಕೊಂಡು ಅಂಗದನ ಕಡೆಗೆ ಧಾವಿಸಿದನು. ಆತನು ಹಾಗೆ ತನ್ನ ಕಡೆಗೆ ಬರುತ್ತಿರುವುದನ್ನು ಕಂಡು ವಾನರೇಂದ್ರನಾದ ಮಹಾಪ್ರತಾಪಶಾಲಿಯಾದ ಅಂಗದನು ಅಶ್ವಕರ್ಣವೆಂಬ ವೃಕ್ಷದಿಂದ ಪ್ರಜಂಘನನ್ನು ಪ್ರಹರಿಸಿದನು. ಮರುಕ್ಷಣದಲ್ಲಿಯೇ ಕತ್ತಿಯನ್ನು ಹಿಡಿದಿದ್ದ ರಾಕ್ಷಸನ ತೋಳನ್ನು ಮುಷ್ಟಿಯಿಂದ ಬಲವಾಗಿ ಗುದ್ದಿದನು. ಅಂಗದನ ಮುಷ್ಟಿಪ್ರಹಾರದಿಂದ ಪ್ರಜಂಘನ ಕೈಲಿದ್ದ ಕತ್ತಿಯು ಕೆಳಕ್ಕೆ ಬಿದ್ದಿತು. ಒನಕೆಯಷ್ಟು ಉದ್ದವಾಗಿದ್ದ ಕತ್ತಿಯು ಕೆಳಗೆ ಬಿದ್ದುದನ್ನು ನೋಡಿ

ಮಹಾಬಲಿಷ್ಠನಾದ ಪ್ರಜಂಘನು ವಜ್ರಸದೃಶವಾಗಿದ್ದ ತನ್ನ ಮುಷ್ಟಿಯನ್ನು ತಿರುಗಿಸುತ್ತಾ ಮಹಾವೀರ್ಯನಾದ ವಾನರಶ್ರೇಷ್ಠನಾದ ಅಂಗದನ ಹಣೆ ಯಲ್ಲಿ ಪ್ರಹರಿಸಿದನು. ಆ ಪ್ರಹಾರದಿಂದ ಅಂಗದನು ತತ್ತರಿಸುತ್ತಾ ಮುಹೂರ್ತಕಾಲದವರೆಗೆ ಪ್ರಜ್ಞಾಶೂನ್ಯನಾಗಿ ಬಿದ್ದಿದ್ದನು. ಅನಂತರ ಎಚ್ಚರಗೊಂಡ ಪ್ರತಾಪವಂತನಾದ ತೇಜಸ್ವಿಯಾದ ವಾಲಿಪುತ್ರನು ಮುಷ್ಟಿ ಪ್ರಹಾರದಿಂದಲೇ ಪ್ರಜಂಘನ ತಲೆಯನ್ನು ಶರೀರದಿಂದ ಬೇರ್ಪಡಿಸಿದನು.

ರಣಭೂಮಿಯಲ್ಲಿ ತನ್ನ ಚಿಕ್ಕಪ್ಪನಾದ ಪ್ರಜಂಘನು ಹತನಾದುದನ್ನು ಕಂಡು ಯೂಪಾಕ್ಷನು ದುಃಖದಿಂದ ಕಣ್ಣೀರಿಡುತ್ತಾ ರಥದಿಂದಿಳಿದು ಕತ್ತಿಯನ್ನು ಹಿಡಿದುಕೊಂಡನು. ಅವನ ಬತ್ತಳಿಕೆಯಲ್ಲಿದ್ದ ಎಲ್ಲ ಬಾಣಗಳೂ ಮುಗಿದುಹೋಗಿದ್ದುವು. ಆಗ ಕತ್ತಿಯನ್ನು ಹಿಡಿದು ತನ್ನ ಕಡೆಗೆ ರಭಸದಿಂದ ಬರುತ್ತಿದ್ದ ಯೂಪಾಕ್ಷನನ್ನು ನೋಡಿ ದ್ವಿವಿದನು ವೇಗಪೂರ್ವಕವಾಗಿ ಅವನ ಎದೆಯನ್ನು ಮುಷ್ಟಿಯಿಂದ ಗುದ್ದುತ್ತಾ ಅವನನ್ನು ಬಲಪೂರ್ವಕವಾಗಿ ಹಿಡಿದುಕೊಂಡನು. ತನ್ನ ಸಹೋದರನನ್ನು ದ್ವಿವಿದನು ಭದ್ರವಾಗಿ ಹಿಡಿದಿರುವುದನ್ನು ಕಂಡು ಮಹಾತೇಜಸ್ವಿಯಾದ ಶೋಣಿತಾಕ್ಷನು ದ್ವಿವಿದನ ವಕ್ಷಃಸ್ಥಳದಲ್ಲಿ ಗದೆಯಿಂದ ಪ್ರಹರಿಸಿದನು. ದ್ವಿವಿದನು ಆ ಪ್ರಹಾರದಿಂದ ತತ್ತರಿಸಿದನು. ಶೋಣಿತಾಕ್ಷನು ಪುನಃ ಪ್ರಹರಿಸಲು ಗದೆಯನ್ನು ಮೇಲಕ್ಕೆತ್ತುತ್ತಲೇ ದ್ವಿವಿದನು ಥಂಗನೆ ಹಾರಿ ಆ ಗದೆಯನ್ನೇ ಕಿತ್ತುಕೊಂಡನು. ಆ ಸಮಯಕ್ಕೆ ಸರಿಯಾಗಿ ವೀರ್ಯವಂತನಾದ ಮೈಂದನು ದ್ವಿವಿದನ ಬಳಿಗೆ ಬಂದು ಅಂಗೈಯಿಂದ ಯೂಪಾಕ್ಷನ ವಕ್ಷಃಸ್ಥಳವನ್ನು ಪ್ರಹರಿಸಿದನು. ವೇಗವಂತರಾದ ಶೋಣಿತಾಕ್ಷ-ಯೂಪಾಕ್ಷರು ಮೈಂದ-ದ್ವಿವಿದರೊಡನೆ ಯುದ್ಧಭೂಮಿಯಲ್ಲಿ ಪರಸ್ಪರವಾಗಿ ಎಳೆದಾಡುತ್ತಾ ಸೆಣೆಸಾಡತೊಡಗಿದರು. ದ್ವಿವಿದನು ಶೋಣಿತಾಕ್ಷನ ಮುಖವನ್ನು ಪರಚಿ ಗಾಯ ಗೊಳಿಸಿದನು. ಮರುಕ್ಷಣದಲ್ಲಿಯೇ ವೀರ್ಯವಂತನಾದ ದ್ವಿವಿದನು ಶೋಣಿತಾಕ್ಷನನ್ನು ನೆಲಕ್ಕೆ ಬೀಳಿಸಿ ಜಜ್ಜಿಬಿಟ್ಟನು. ಪರಮಕ್ರುದ್ಧನಾಗಿದ್ದ ವಾನರ ಶ್ರೇಷ್ಠನಾದ ಮೈಂದನು ಯೂಪಾಕ್ಷನನ್ನು ಎರಡು ತೋಳುಗಳಲ್ಲಿಯೂ ಬಲವಾಗಿ ಅಮುಕಿ ಅವನ ಪ್ರಾಣಗಳು ಹೋಗುವವರೆಗೂ ಹಿಸುಕಿದನು. ಅದರಿಂದ ಯೂಪಾಕ್ಷನು ಅಸುನೀಗಿ ಭೂಮಿಯ ಮೇಲೆ ಬಿದ್ದನು.

ಹೀಗೆ ರಾಕ್ಷಸಪ್ರಮುಖರೆಲ್ಲರೂ ಹತರಾಗಲು ರಾಕ್ಷಸಸೈನಿಕರು ವ್ಯಥೆ ಪಡುತ್ತಾ ಕುಂಭಕರ್ಣನ ಮಗನು ಯುದ್ಧಮಾಡುತ್ತಿದ್ದ ಸ್ಥಳಕ್ಕೆ ಧಾವಿಸಿದರು. ವೇಗವಾಗಿ ತನ್ನ ಕಡೆಗೆ ಬರುತ್ತಿದ್ದ ರಾಕ್ಷಸನೈನಿಕರನ್ನು ಕುಂಭನು ಸಾಂತ್ವನದ ಮಾತುಗಳಿಂದ ಸಮಾಧಾನಗೊಳಿಸಿದನು. ರಾಕ್ಷಸರು ಪಲಾಯನಮಾಡು ವಂತೆ ಪರಾಕ್ರಮವನ್ನು ತೋರಿಸಿ ವಿಜಯಿಗಳಾಗಿದ್ದ ಮಹಾವೀರ್ಯರಾದ ಕಪಿಶ್ರೇಷ್ಠರು ಗಟ್ಟಿಯಾಗಿ ಗರ್ಜನೆಮಾಡುತ್ತಿದ್ದರು. ರಾಕ್ಷಸರ ಸೈನ್ಯದಲ್ಲಿದ್ದ ಮಹಾವೀರರಾಗಿದ್ದ ನಾಯಕರು ಹತರಾದುದನ್ನು ನೋಡಿ ಮಹಾತೇಜಸ್ವಿ ಯಾದ ಕುಂಭನು ರಣಭೂಮಿಯಲ್ಲಿ ಸಾಮಾನ್ಯರಿಂದ ಮಾಡಲು ಅತಿದುಷ್ಕರವಾದ ಸಂಹಾರಕಾರ್ಯವನ್ನು ಮಾಡಲು ಉಪಕ್ರಮಿಸಿದನು. ಧನುಷ್ಮಂತರಲ್ಲಿ ಶ್ರೇಷ್ಠನಾದ ಕುಂಭನು ಧನುಸ್ಸನ್ನು ಹಿಡಿದು ದೇಹಗಳನ್ನು ಸೀಳುವುದರಲ್ಲಿ ಸಮರ್ಥವಾಗಿದ್ದ, ಸರ್ಪಸದೃಶವಾಗಿದ್ದ, ವಿಷಯುಕ್ತವಾದ ಬಾಣಗಳನ್ನು ಶತ್ರುಸೈನ್ಯದ ಮೇಲೆ ಸುರಿಸತೊಡಗಿದನು. ಆ ಸಮಯದಲ್ಲಿ ಅವನು ಹಿಡಿದಿದ್ದ ಧನುರ್ಬಾಣಗಳು ಮಿಂಚಿನ ಮತ್ತು ಐರಾವತದ ಪ್ರಭೆಯಿಂದ ಯುಕ್ತವಾದ ಇಂದ್ರಧನುಸ್ಸಿನ ಕಾಂತಿಗೆ ಸಮಾನವಾದ ಕಾಂತಿಯಿಂದ ಪರಿಶೋಭಿಸುತ್ತಿದ್ದುವು. ಕುಂಭನು ಸುವರ್ಣದ ರೆಕ್ಕೆಗಳಿಂದ ಕೂಡಿದ್ದ ಬಾಣವನ್ನು ಕಿವಿಯವರೆಗೂ ಸೆಳೆದು ತನ್ನೆದುರಿನಲ್ಲಿದ್ದ ದ್ವಿವಿದನನ್ನು ಪ್ರಹರಿಸಿದನು. ತ್ರಿಕೂಟಪರ್ವತದಂತೆ ವಿಶಾಲಕಾಯನಾಗಿದ್ದ ದ್ವಿವಿದನು ಹೀಗೆ ಕುಂಭನ ಬಾಣದಿಂದ ಪ್ರಹರಿಸಲ್ಪಟ್ಟು ತತ್ತರಿಸುತ್ತಾ ಮತ್ತು ಚಡಪಡಿಸುತ್ತಾ ಭೂಮಿಯಲ್ಲಿ ಬಿದ್ದನು.

ಆ ಮಹಾಯುದ್ಧದಲ್ಲಿ ತನ್ನ ಸಹೋದರನು ಗಾಯಗೊಂಡು ಕೆಳಕ್ಕೆ ಬಿದ್ದುದನ್ನು ಕಂಡು ಮೈಂದನು ದೊಡ್ಡದಾದೊಂದು ಬಂಡೆಯನ್ನೆತ್ತಿಕೊಂಡು ವೇಗವಾಗಿ ಕುಂಭನ ಕಡೆಗೆ ಧಾವಿಸಿದನು. ಕುಂಭನ ಬಳಿಗೆ ಹೋಗುತ್ತಲೇ ಆ ಮಹಾಶಿಲೆಯನ್ನು ರಭಸದಿಂದ ಅವನ ಮೇಲೆಸೆದನು. ಮರುಕ್ಷಣದಲ್ಲಿಯೇ ಕುಂಭನು ಪ್ರಕಾಶಮಾನವಾಗಿದ್ದ ಐದು ಬಾಣಗಳಿಂದ ಆ ಬಂಡೆಯನ್ನು ಪುಡಿ-ಪುಡಿಮಾಡಿದನು. ಪುನಃ ಕುಂಭನು ಸರ್ಪಸದೃಶವಾಗಿದ್ದ, ಸುಂದರವಾಗಿದ್ದ ಬಾಣವನ್ನು ಧನುಸ್ಸಿನಲ್ಲಿ ಅನುಸಂಧಾನಮಾಡಿ ಮೈಂದನ ವಕ್ಷಃಸ್ಥಳಕ್ಕೆ ಗುರಿಯಿಟ್ಟು ಪ್ರಹರಿಸಿದನು. ವಾನರನಾಯಕನಾದ ಮೈಂದನು

ಮರ್ಮಸ್ಥಳದಲ್ಲಿ ಬಿದ್ದ ಆ ಬಾಣಪ್ರಹಾರದಿಂದ ಮೂರ್ಛಿತನಾಗಿ ಕೆಳಕ್ಕೆ ಬಿದ್ದನು. ತನ್ನ ಸೋದರಮಾವಂದಿರಾದ ಮೈಂದ-ದ್ವಿವಿದರಿಬ್ಬರೂ ಗಾಯ ಗೊಂಡು ಮೂರ್ಛಿತರಾಗಿ ಕೆಳಕ್ಕೆ ಬಿದ್ದುದನ್ನು ನೋಡಿ ಅಂಗದನು ಧನುಸ್ಸ ನ್ನೆತ್ತಿ ಹಿಡಿದು ನಿಂತಿದ್ದ ಕುಂಭನ ಕಡೆಗೆ ಧಾವಿಸಿದನು. ತನ್ನನ್ನು ಆಕ್ರಮಿಸಲು ಬರುತ್ತಿದ್ದ ಅಂಗದನನ್ನು ನೋಡಿ ಕುಂಭನು ಐದು ಬಾಣಗಳಿಂದ ಅವನನ್ನು ಪ್ರಹರಿಸಿ ಪುನಃ ಮೂರು ಬಾಣಗಳಿಂದ ಪ್ರಹರಿಸಿದನು. ಮಾವಟಿಗನು ಅಂಕುಶದಿಂದ ಮದಿಸಿದ ಆನೆಯನ್ನು ಚುಚ್ಚುವಂತೆ–ಕುಂಭನು ಹಲವಾರು ಬಾಣಗಳಿಂದ ಅಂಗದನನ್ನು ನಿರಂತರವಾಗಿ ಗಾಯಗೊಳಿಸಿದನು. ಸ್ವರ್ಣ ಭೂಷಿತವಾದ ಬಾಣಗಳಿಂದ ಸತತವಾಗಿ ಪ್ರಹರಿಸಲ್ಪಡುತ್ತಿದ್ದರೂ ವಾಲಿ ಪುತ್ರನಾದ ಅಂಗದನು ವಿಚಲಿತನಾಗಲಿಲ್ಲ. ಬಂಡೆಗಳನ್ನೂ, ವೃಕ್ಷಗಳನ್ನೂ ಕುಂಭನ ಮೇಲೆ ಸತತವಾಗಿ ಸುರಿಸುತ್ತಲೇ ಇದ್ದನು. ಆದರೆ ಕುಂಭನು ವಾಲಿಪುತ್ರನು ಎಸೆಯುತ್ತಿದ್ದ ಬಂಡೆಗಳನ್ನು ಪುಡಿ-ಪುಡಿಮಾಡುತ್ತಾ ವೃಕ್ಷ ಗಳನ್ನೂ ಕತ್ತರಿಸಿ ಹಾಕುತ್ತಿದ್ದನು.

ಅನಂತರ ಅಂಗದನು ತನ್ನ ಮೇಲೆ ಬೀಳುತ್ತಿರುವುದನ್ನು ಗಮನಿಸಿದ ಕುಂಭನು ಎರಡು ಪಂಜುಗಳಿಂದ ಮದಿಸಿದ ಆನೆಯನ್ನು ಮಾವಟಿಗನು ಪ್ರಹರಿಸುವಂತೆ–ಎರಡು ಬಾಣಗಳಿಂದ ಅಂಗದನ ಹುಬ್ಬುಗಳ ನಡುವೆ ಪ್ರಹರಿಸಿದನು. ಅದರಿಂದ ಅಂಗದನ ಹುಬ್ಬುಗಳಿಂದ ರಕ್ತವು ಸೋರತೊಡ ಗಿತು. ಕಣ್ಣುಗಳು ಮುಚ್ಚಿಹೋದುವು. ಅಂಗದನು ಒಂದು ಕೈಯಿಂದ ರಕ್ತಸಿಕ್ತ ವಾದ ಕಣ್ಣುಗಳನ್ನು ಮುಚ್ಚಿಕೊಂಡು ಮತ್ತೊಂದು ಕೈಯಿಂದ ಸಮೀಪದಲ್ಲಿದ್ದ ಸಾಲವೃಕ್ಷವನ್ನು ಹಿಡಿದು ಎದೆಯಿಂದ ಹಿಂದಕ್ಕೆ ತಳ್ಳಿ ರೆಂಬೆಗಳಿಂದ ಸಹಿತವಾಗಿದ್ದ ಆ ಸಾಲವೃಕ್ಷವನ್ನು ಅಳ್ಳಾಡಿಸಿದನು. ಹೀಗೆ ನಾಲ್ಕಾರು ಬಾರಿ ಅಳ್ಳಾಡಿಸಿ ಒಂದೇ ಕೈಯಿಂದ ಆ ಮಹಾವೃಕ್ಷವನ್ನು ಕಿತ್ತನು. ಮಂದರ ಪರ್ವತದಂತೆಯೂ ಮತ್ತು ಇಂದ್ರನ ಧ್ವಜದಂತೆಯೂ ಇದ್ದ ಆ ಮಹಾವೃಕ್ಷ ವನ್ನು ಎಲ್ಲ ರಾಕ್ಷಸರೂ ನೋಡುತ್ತಿದ್ದಂತೆಯೇ ವೇಗವಾಗಿ ಕುಂಭನ ಮೇಲೆಸೆ ದನು. ಮರುಕ್ಷಣದಲ್ಲಿಯೇ ಕುಂಭನು ಶರೀರಭೇದಕಗಳಾದ ನಿಶಿತವಾದ ಏಳು ಬಾಣಗಳಿಂದ ಆ ಮಹಾವೃಕ್ಷವನ್ನು ತುಂಡರಿಸಿದನು. ಅದನ್ನು ನೋಡಿ ಅಂಗದನು ತಲ್ಲಣಿಸುತ್ತಾ ಬಹಳವಾಗಿ ಗಾಯಗೊಂಡಿದ್ದರಿಂದ ಮೂರ್ಛಿತ

ನಾಗಿ ಕೆಳಕ್ಕೆ ಬಿದ್ದನು. ದುರಾಸದನಾದ, ಹರಿಶ್ರೇಷ್ಠನಾದ ಅಂಗದನು ಸಾಗರದಲ್ಲಿ ಮುಳುಗಿಹೋಗುತ್ತಿರುವವನಂತೆ ಯುದ್ಧಭೂಮಿಯಲ್ಲಿ ಮೂರ್ಛಿತನಾಗಿ ಬಿದ್ದಿರುವನೆಂಬ ವಾರ್ತೆಯನ್ನು ವಾನರಸೈನಿಕರು ಶ್ರೀರಾಮನಿಗೆ ನಿವೇದಿಸಿದರು.

ವಾಲಿಯ ಮಗನು ರಣಾಂಗಣದಲ್ಲಿ ಮೂರ್ಛಿತನಾಗಿ ಬಿದ್ದಿರುವನೆಂಬ ವಾರ್ತೆಯನ್ನು ಕೇಳುತ್ತಲೇ ಶ್ರೀರಾಮನು ಜಾಂಬವಂತನೇ ಮೊದಲಾದ ವಾನರಶ್ರೇಷ್ಠರಿಗೆ ಕುಂಭನೊಡನೆ ಯುದ್ಧಕ್ಕೆ ಹೋಗುವಂತೆ ಆಜ್ಞಾಪಿಸಿದನು. ವಾನರಶ್ರೇಷ್ಠರಾದ ಜಾಂಬವಂತನೇ ಮೊದಲಾದವರು ಶ್ರೀರಾಮನ ಆಜ್ಞೆಯನ್ನು ಕೇಳಿ ಅತ್ಯಂತಕ್ರುದ್ಧರಾಗಿ ಧನುಸ್ಸನ್ನು ಹಿಡಿದು ನಿಂತಿದ್ದ ಕುಂಭನನ್ನು ಆಕ್ರಮಿಸಿದರು. ಅಂಗದನನ್ನು ರಕ್ಷಿಸುವ ಆಶಯದಿಂದ ಕೋಪದಿಂದ ಕೆಂಗಣ್ಣರಾಗಿದ್ದ ವಾನರನಾಯಕರು ವೃಕ್ಷಗಳನ್ನೂ ಬಂಡೆಗಳನ್ನೂ ಎತ್ತಿಕೊಂಡು ರಾಕ್ಷಸರನ್ನು ಆಕ್ರಮಿಸಿದರು. ಕ್ರುದ್ಧರಾಗಿದ್ದ ಜಾಂಬವಂತ, ಸುಷೇಣ, ವೇಗದರ್ಶಿಗಳೇ ಮುಂತಾದ ವಾನರರು ವೀರನಾದ ಕುಂಭಕರ್ಣನ ಮಗನಾದ ಕುಂಭನನ್ನು ಎಲ್ಲ ಕಡೆಗಳಿಂದಲೂ ಆಕ್ರಮಿಸಿದರು. ವೇಗದಿಂದ ಹರಿಯುತ್ತಿರುವ ಜಲಪ್ರವಾಹವನ್ನು ಅಡ್ಡಲಾಗಿ ಸಿಕ್ಕಿದ ಪರ್ವತವು ತಡೆದು ನಿಲ್ಲಿಸುವಂತೆ–ತನ್ನನ್ನು ರಭಸದಿಂದ ಆಕ್ರಮಣಮಾಡು ತ್ತಿದ್ದ ವಾನರರೆಲ್ಲರನ್ನೂ ಬಾಣಗಳ ಸಮೂಹಗಳಿಂದ ಕುಂಭನು ತಡೆದು ನಿಲ್ಲಿಸಿದನು. ಕುಂಭನ ಬಾಣಗಳಿಗೆ ಲಕ್ಷ್ಯರಾದ ವಾನರನಾಯಕರು ಅವನನ್ನು ನೋಡಲು ಕೂಡ ಸಮರ್ಥರಾಗಲಿಲ್ಲ. ಸಮುದ್ರವು ಎಲ್ಲೆಯನ್ನು ಮೀರಿ ಹೋಗದಂತೆ ಮಹಾತ್ಮರಾದ ವಾನರಶ್ರೇಷ್ಠರು ಸ್ತಬ್ಧರಾಗಿ ನಿಂತರು. ಹೀಗೆ ಕುಂಭನಿಂದ ಮರ್ದಿಸಲ್ಪಡುತ್ತಿದ್ದ ವಾನರಸೈನ್ಯವನ್ನು ಕಂಡು ಪ್ಲವಗೇಶ್ವರ ನಾದ ಸುಗ್ರೀವನು ಅಂಗದನನ್ನು ಹಿಂದಕ್ಕೆ ಸರಿಸಿ–ಪರ್ವತದ ತಪ್ಪಲುಪ್ರದೇಶದಲ್ಲಿರುವ ಆನೆಯನ್ನು ಆಕ್ರಮಿಸಲು ಸಿಂಹವು ವೇಗವಾಗಿ ಧಾವಿಸುವಂತೆ–ಕುಂಭನ ಕಡೆಗೆ ವೇಗವಾಗಿ ಧಾವಿಸಿದನು. ಅಶ್ವಕರ್ಣವೇ ಮೊದಲಾದ ಹಲವಾರು ಮಹಾವೃಕ್ಷಗಳನ್ನು ಬೇರುಸಹಿತವಾಗಿ ಕಿತ್ತು ಮಹಾಕಪಿಯಾದ ಸುಗ್ರೀವನು ಕುಂಭನ ಮೇಲೆಸೆದನು. ವೃಕ್ಷಗಳ ಆ ವೃಷ್ಟಿಯು ಆಕಾಶವನ್ನೇ ಮುಚ್ಚಿಬಿಟ್ಟಿತು. ಎದುರಿಸಲು ಅಸಾಧ್ಯವಾಗಿದ್ದ ಆ ವೃಕ್ಷವೃಷ್ಟಿಯನ್ನು

ಶ್ರೀಮಂತನಾದ ಕುಂಭನು ತನ್ನ ನಿಶಿತವಾದ ಬಾಣಗಳಿಂದ ಕತ್ತರಿಸಿ ಹಾಕಿದನು. ಲಕ್ಷ್ಯವನ್ನು ಭೇದಿಸುವುದರಲ್ಲಿ ಸಮರ್ಥನಾದ ಕುಂಭನಿಂದ ಬಿಡಲ್ಪಟ್ಟ ನಿಶಿತವಾದ ಬಾಣಗಳಿಂದ ಕತ್ತರಿಸಲ್ಪಟ್ಟ ಆ ವೃಕ್ಷಗಳು ಭಯಂಕರವಾದ ಶತಘ್ನಿಗಳಂತೆಯೇ ಕಾಣುತ್ತಿದ್ದುವು. ತಾನು ಸುರಿಸಿದ ವೃಕ್ಷವೃಷ್ಟಿಯು ಕುಂಭನಿಂದ ಛಿನ್ನ-ಭಿನ್ನವಾದುದನ್ನು ಕಂಡು ಮಹಾಸತ್ತ್ವನಾದ ಸುಗ್ರೀವನು ವ್ಯಥೆಪಡಲಿಲ್ಲ. ಕುಂಭನ ಕಡೆಯಿಂದ ಬಾಣಗಳು ಸತತವಾಗಿ ಬರುತ್ತಿದ್ದರೂ ಲೆಕ್ಕಿಸದೇ ಮುನ್ನುಗ್ಗಿ ಕುಂಭನ ರಥದ ಮೇಲಕ್ಕೆ ಹೋಗಿ ಇಂದ್ರಧನುಸ್ಸಿನ ಪ್ರಭೆಗೆ ಸಮಾನವಾದ ಪ್ರಭೆಯಿಂದ ಕೂಡಿ ಪ್ರಕಾಶಿಸುತ್ತಿದ್ದ ಕುಂಭನ ಧನುಸ್ಸನ್ನು ಕಿತ್ತುಕೊಂಡು ಅದನ್ನು ಪುಡಿ-ಪುಡಿಮಾಡಿಬಿಟ್ಟನು. ಇಂತಹ ಅತ್ಯಂತದುಷ್ಕರವಾದ ಕಾರ್ಯವನ್ನು ಮಾಡಿದನಂತರ ಸುಗ್ರೀವನು ರಥ ದಿಂದ ಕೆಳಕ್ಕೆ ಧುಮುಕಿ ಕುಪಿತನಾಗಿ ಮುರಿದುಹೋದ ದಂತಗಳುಳ್ಳ ಆನೆ ಯಂತಿದ್ದ ಕುಂಭನಿಗೆ ಹೇಳಿದನು :

"ನಿಕುಂಭನ ಅಗ್ರಜನೇ! ನಿನ್ನ ಪರಾಕ್ರಮವೂ ಮತ್ತು ನಿನ್ನ ಬಾಣಗಳ ವೇಗವೂ ಅದ್ಭುತವಾದುದು. ವಿನಯ ಮತ್ತು ಪ್ರಭಾವಗಳು ರಾವಣನಲ್ಲಿರುವಂತೆಯೇ ನಿನ್ನಲ್ಲೂ ಇವೆ. ನೀನು ಪ್ರಹ್ಲಾದ-ಬಲಿ-ಇಂದ್ರ-ಕುಬೇರ-ವರುಣರಿಗೆ ಸಮಾನನಾಗಿರುವೆ. ಅತ್ಯಂತಬಲಿಷ್ಠನಾಗಿದ್ದ ನಿನ್ನ ತಂದೆ ಕುಂಭಕರ್ಣನಿಗೆ ಅನುರೂಪನಾಗಿ ನೀನೊಬ್ಬನು ಮಾತ್ರವೇ ಹುಟ್ಟಿರುವೆ. ಜಿತೇಂದ್ರಿಯನಾದವನನ್ನು ಮಾನಸಿಕವಾದ ಚಿಂತೆಗಳು ಬಾಧೆಪಡಿಸದಂತೆ– ಮಹಾಬಾಹುವಾದ, ಶೂಲಪಾಣಿಯಾದ, ಶತ್ರುದಮನನಾದ ನಿನ್ನೊಬ್ಬನನ್ನು ದೇವತೆಗಳೂ ಅತಿಕ್ರಮಿಸಲಾರರು. ಮಹಾಮತಿಯೇ! ನೀನು ನಿನ್ನ ಪರಾಕ್ರಮವನ್ನು ಪ್ರದರ್ಶಿಸು. ಹಾಗೆಯೇ ನನ್ನ ಸಾಹಸಕರ್ಮಗಳನ್ನೂ ನೋಡು.

ವರದಾನಾತ್ಪಿತೃವ್ಯಸ್ತೇ ಸಹತೇ ದೇವದಾನವಾನ್ ।
ಕುಮ್ಭಕರ್ಣಸ್ತು ವೀರ್ಯೇಣ ಸಹತೇ ಚ ಸುರಾಸುರಾನ್ ॥೭೪॥

ನಿನ್ನ ದೊಡ್ಡಪ್ಪನಾದ ರಾವಣನಾದರೋ ವರದಾನದ ಪ್ರಭಾವದಿಂದ ದೇವ-ದಾನವರ ವೇಗವನ್ನೂ ಸಹಿಸಿಕೊಳ್ಳುವನು. ಆದರೆ ನಿನ್ನ ತಂದೆಯಾದ

ಕುಂಭಕರ್ಣನು ತನ್ನ ಭುಜಬಲ-ಪರಾಕ್ರಮಗಳಿಂದಲೇ ಸುರಾಸುರರ ವೇಗವನ್ನೂ ಸಹಿಸುತ್ತಿದ್ದನು.

ಧನುಷೀನ್ದ್ರಜಿತಸ್ತುಲ್ಯಃ ಪ್ರತಾಪೇ ರಾವಣಸ್ಯ ಚ ।
ತ್ವಮದ್ಯ ರಕ್ಷಸಾಂ ಲೋಕೇ ಶ್ರೇಷ್ಠೋಽಸಿ ಬಲವೀರ್ಯತಃ ॥೭೫॥

ನೀನು ಧನುರ್ವಿದ್ಯೆಯಲ್ಲಿ ಇಂದ್ರಜಿತುವಿಗೆ ಸಮಾನನಾಗಿರುವೆ. ಪ್ರತಾಪದಲ್ಲಿ ರಾವಣನಿಗೆ ಸಮಾನನಾಗಿರುವೆ. ಬಲದಲ್ಲಿಯೂ ಮತ್ತು ವೀರ್ಯದಲ್ಲಿಯೂ ನೀನಿಂದು ರಾಕ್ಷಸಲೋಕದಲ್ಲಿಯೇ ಶ್ರೇಷ್ಠನಾಗಿರುವೆ.

ಇಂದು ಈ ರಣಾಂಗಣದಲ್ಲಿ ಶಕ್ರ-ಶಂಬರರ ನಡುವೆ ನಡೆದಂತೆ ನನಗೂ-ನಿನಗೂ ನಡೆಯಲಿರುವ ಪರಮಾದ್ಭುತವಾದ ಕಾಳಗವನ್ನು ಎಲ್ಲ ಪ್ರಾಣಿಗಳೂ ನೋಡಲಿ. ನೀನು ಅಪ್ರತಿಮವಾದ ಸಾಹಸಕಾರ್ಯವನ್ನು ಮಾಡಿರುವೆ. ನಿನ್ನ ಅಸ್ತ್ರಕೌಶಲ್ಯವೆಷ್ಟೆಂಬುದನ್ನು ತೋರಿರುವೆ. ಭಯಂಕರ ಪರಾಕ್ರಮಿಗಳಾದ ವಾನರವೀರರನ್ನು ನೆಲದ ಮೇಲೆ ಕೆಡವಿರುವೆ. ಆದರೆ ನಾನು ಅಪವಾದದ ಭೀತಿಯಿಂದಾಗಿ ಇದುವರೆಗೆ ನಿನ್ನನ್ನು ಸಂಹರಿಸಿಲ್ಲ. 'ಕುಂಭನು ಯುದ್ಧಮಾಡಿ ಆಯಾಸಗೊಂಡಿದ್ದಾಗ ಮಹಾಪರಾಕ್ರಮಿಯೆನಿಸಿದ ಸುಗ್ರೀವನು ಅವನನ್ನು ಸಂಹರಿಸಿದನು'–ಎಂಬ ಅಪವಾದಕ್ಕೆ ನಾನು ಗುರಿಯಾಗಬಾರದು. ನೀನು ಯುದ್ಧಮಾಡಿ ಬಹಳವಾಗಿ ಬಳಲಿರುವೆ. ಸ್ವಲ್ಪ ವಿಶ್ರಮಿಸಿಕೊಂಡು ಯುದ್ಧಕ್ಕೆ ಬಾ. ಆಗ ನೋಡುವೆ ; ನನ್ನ ಬಲವನ್ನು."

ಹೀಗೆ ಸುಗ್ರೀವನ ಅವಮಾನದ ಮಾತುಗಳಿಂದ ಹೊಗಳಲ್ಪಟ್ಟ ಕುಂಭನು ಆಜ್ಯಾಹುತಿಯಾದನಂತರ ಅಗ್ನಿಯು ಪ್ರಜ್ವಲಿಸುವಂತೆ–ತೇಜಸ್ಸಿನಿಂದ ಪ್ರಜ್ವಲಿಸಿದನು. ಮರುಕ್ಷಣದಲ್ಲಿಯೇ ಆತನು ಸುಗ್ರೀವನನ್ನು ತನ್ನೆರಡು ಬಾಹುಗಳಿಂದಲೂ ಬಂಧಿಸಿದನು. ಅನಂತರ ಅವರಿಬ್ಬರೂ ಮದಿಸಿದ ಎರಡು ಆನೆಗಳಂತೆ ಕಾಳಗವಾಡುತ್ತಾ ಸುದೀರ್ಘವಾಗಿ ನಿಟ್ಟುಸಿರುಬಿಡುತ್ತಾ ಪರಸ್ಪರವಾಗಿ ಗಾಯಗೊಳಿಸತೊಡಗಿದರು. ಪರಿಶ್ರಮದಿಂದಾಗಿ ಹೊಗೆಯಿಂದ ಕೂಡಿದ ಜ್ವಾಲೆಯನ್ನು ಇಬ್ಬರೂ ಮುಖಗಳಿಂದ ಉಗುಳುತ್ತಿದ್ದರು. ಇಬ್ಬರ ಪಾದಗಳ ಸಂಘಟ್ಟನೆಯಿಂದಾಗಿ ಭೂಮಿಯಲ್ಲಿ ಹಳ್ಳವಾಯಿತು. ಕಂಪಿಸುತ್ತಿರುವ ಅಲೆಗಳಿಂದ ಕೂಡಿದ್ದ ಸಮುದ್ರವೂ ಅಲ್ಲೋಲಕಲ್ಲೋಲ

ವಾಯಿತು. ಆ ಸಮಯದಲ್ಲಿ ಸುಗ್ರೀವನು, ಕುಂಭನನ್ನು ಮೇಲಕ್ಕೆತ್ತಿ ಸಮುದ್ರದ ತಲವನ್ನು ತೋರಿಸುವನೋ ಎಂಬಂತೆ ರಭಸದಿಂದ ಸಮುದ್ರದಲ್ಲಿ ಹಾಕಿದನು. ಕುಂಭನನ್ನು ಸಮುದ್ರಕ್ಕೆ ಹಾಕಿದೊಡನೆಯೇ ವಿಂಧ್ಯ-ಮಂದರಪರ್ವತಗಳಿಗೆ ಸದೃಶವಾಗಿ ಜಲರಾಶಿಯು ಮೇಲೆದ್ದಿತು ಮತ್ತು ಹಾಗೆ ಮೇಲೆದ್ದ ಸಮುದ್ರದ ನೀರು ಸರ್ವತ್ರ ವ್ಯಾಪಿಸಿತು. ಆದರೆ ಮಹಾ ಬಲಿಷ್ಠನಾದ ಕುಂಭನು ಮರುಕ್ಷಣದಲ್ಲಿಯೇ ಸಮುದ್ರದಿಂದ ಮೇಲೆ ಬಂದು ಸುಗ್ರೀವನನ್ನು ಕೆಳಕ್ಕೆ ಕೆಡವಿ ವಜ್ರಾಯುಧಕ್ಕೆ ಸಮಾನವಾಗಿದ್ದ ಮುಷ್ಟಿಯಿಂದ ಅವನ ವಕ್ಷಃಸ್ಥಳದಲ್ಲಿ ಪ್ರಹರಿಸಿದನು. ಅದರಿಂದ ಸುಗ್ರೀವನು ತೊಟ್ಟಿದ್ದ ಕವಚವು ಛಿದ್ರವಾಗಿ ಹೋಯಿತು. ಅವನ ವಕ್ಷಃಸ್ಥಳದಿಂದ ರಕ್ತವು ಹರಿಯ ತೊಡಗಿತು. ವೇಗಯುಕ್ತವಾಗಿದ್ದ ಕುಂಭನ ಮುಷ್ಟಿಪ್ರಹಾರವು ಸುಗ್ರೀವನ ವಕ್ಷಃಸ್ಥಳದಲ್ಲಿದ್ದ ಮೂಳೆಗಳನ್ನೂ ಮುರಿಯಿತು. ವಜ್ರಾಯುಧದ ಪ್ರಹಾರ ದಿಂದ ಮೇರು ಪರ್ವತದ ಶಿಖರದಲ್ಲಿ ಜ್ವಾಲೆಯು ಹೊರಹೊಮ್ಮುವಂತೆ– ಮುಷ್ಟಿಯ ವೇಗಯುಕ್ತವಾದ ಪ್ರಹಾರದಿಂದ ಮಹಾಜ್ವಾಲೆಯು ಪ್ರಾದುರ್ಭ ವಿಸಿತು. ಕುಂಭನಿಂದ ಹೀಗೆ ಪ್ರಹರಿಸಲ್ಪಟ್ಟ ವಾನರಶ್ರೇಷ್ಠನಾದ ಸುಗ್ರೀವನು ವಜ್ರಾಯುಧ ಸದೃಶವಾದ ತನ್ನ ಮುಷ್ಟಿಯನ್ನು ತಿರುಗಿಸುತ್ತಾ ಸಾವಿರ ಕಿರಣ ಗಳಿಂದ ಪ್ರಕಾಶಿತವಾದ ಸೂರ್ಯಮಂಡಲದಂತೆ ಕಾಣುತ್ತಿದ್ದ ಆ ಮುಷ್ಟಿ ಯಿಂದ ಕುಂಭನ ವಕ್ಷಃಸ್ಥಳದಲ್ಲಿ ವೇಗವಾಗಿ ಪ್ರಹರಿಸಿದನು. ಸುಗ್ರೀವನ ಆ ಮುಷ್ಟಿಪ್ರಹಾರದಿಂದ ಬಹಳವಾಗಿ ಪೀಡಿತನಾದ ಕುಂಭನು ಅತ್ಯಂತ ವ್ಯಾಕುಲನಾಗಿ ಶಾಂತವಾದ ಜ್ವಾಲೆಯುಳ್ಳ ಅಗ್ನಿಯಂತೆ ನಿಸ್ತೇಜನಾಗಿ ಭೂಮಿ ಯಲ್ಲಿ ಬಿದ್ದನು. ರಕ್ತದಲ್ಲಿ ತೋಯ್ದು ಕೆಳಕ್ಕೆ ಬಿದ್ದ ಕುಂಭನು–ಆಕಸ್ಮಿಕವಾಗಿ ಸ್ವೇಚ್ಛೆಯಿಂದ ಧರೆಗಿಳಿದು ಬಂದ, ಪ್ರದೀಪ್ತವಾದ ಕಿರಣಗಳಿಂದ ಕೂಡಿರುವ, ಲೋಹಿತಾಂಗನಾದ ಕುಜಗ್ರಹದಂತೆಯೇ ಕಾಣುತ್ತಿದ್ದನು. ಮುಷ್ಟಿಪ್ರಹಾರ ದಿಂದ ಭಗ್ನವಾದ ವಕ್ಷಃಸ್ಥಳದಿಂದ ಕೂಡಿದ್ದ ಕುಂಭನು ಕೆಳಕ್ಕೆ ಬೀಳುವಾಗ ಅವನ ರೂಪವು ರುದ್ರನಿಂದ ಹಿಡಿಯಲ್ಪಟ್ಟ ಸೂರ್ಯನ ರೂಪದಂತೆಯೇ ಕಾಣುತ್ತಿದ್ದಿತು.*

---

* ಬಭೌ ರುದ್ರಾಭಿಪನ್ನಸ್ಯ ಯಥಾ ರೂಪಂ ಗವಾಂಪತೇಃ । ಅಭಿಪನ್ನ ಪದಕ್ಕೆ : ಹಿಡಿಯಲ್ಪಟ್ಟ ; ನುಂಗಿಹಾಕಲ್ಪಟ್ಟ ; ರಕ್ಷಣೆಯನ್ನು ಅಪೇಕ್ಷಿಸಿ ಬಂದಿರುವ ; ಮರೆ

ಭಯಂಕರಪರಾಕ್ರಮಿಯಾದ ಕಪಿಶ್ರೇಷ್ಠನಾದ ಸುಗ್ರೀವನು ಯುದ್ಧದಲ್ಲಿ ಕುಂಭನನ್ನು ಸಂಹರಿಸಲಾಗಿ ಪರ್ವತಾರಣ್ಯಗಳಿಂದ ಕೂಡಿರುವ ಭೂಮಿಯು ಕಂಪಿಸಿತು. ಅಂತೆಯೇ ಅತ್ಯಧಿಕವಾದ ಭಯವೂ ರಾಕ್ಷಸರ ಮನಸ್ಸನ್ನು ಆವರಿಸಿತು.

೭೬ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೭೭ನೆಯ ಸರ್ಗ

ಹನುಮಂತನಿಂದ ನಿಕುಂಭನ ಸಂಹಾರ

ನಿಕುಮ್ಭೋ ಭ್ರಾತರಂ ದೃಷ್ಟ್ವಾ ಸುಗ್ರೀವೇಣ ನಿಪಾತಿತಮ್ ।
ಪ್ರದಹನ್ನಿವ ಕೋಪೇನ ವಾನರೇನ್ದ್ರಮುದೈಕ್ಷತ ॥೧॥

ಸುಗ್ರೀವನಿಂದ ತನ್ನ ಅಣ್ಣನು ಮರಣಹೊಂದಿದುದನ್ನು ನೋಡಿ

ಹೊಕ್ಕಿರುವ ; ಎದುರಿಗೆ ಬಂದಿರುವ-ಎಂಬ ಅರ್ಥಗಳಾಗುತ್ತವೆ. ಗವಾಂಪತಿ ಎಂಬುದಕ್ಕೆ ಹೋರಿ, ಸೂರ್ಯ ಎಂಬ ಅರ್ಥಗಳಾಗುತ್ತವೆ. ವ್ಯಾಖ್ಯಾನಕಾರರೆಲ್ಲರೂ ಸೂರ್ಯ ಎಂಬ ಅರ್ಥವನ್ನೇ ಮಾಡಿದ್ದಾರೆ. **ರುದ್ರಾಭಿಪನ್ನಸ್ಯ = ರುದ್ರೇಣ ಅಭಿ ಹತಸ್ಯ**-ರುದ್ರನಿಂದ ಹಿಂಸಿಸಲ್ಪಟ್ಟವನ. ೨. **ರುದ್ರೇಣ ಅಭಿಭೂತಸ್ಯ**-ರುದ್ರನಿಂದ ಪರಾಜಿತನಾದವನ. ಆದರೆ ಸೂರ್ಯನು ರುದ್ರನಿಂದ ಯಾವ ಸಮಯದಲ್ಲಿ ಪರಾಜಿತನಾದನೆಂಬುದಕ್ಕೆ ವಿವರಣೆಯನ್ನು ಕೊಟ್ಟಿಲ್ಲ. **ಬಭೌ ರುದ್ರಾಭಿಪನ್ನಸ್ಯ ಯಥಾ ರೂಪಂ ಗವಾಂಪತೇಃ** –ಎಂಬುದಕ್ಕೆ ಈ ವಿವರಣೆಗಳನ್ನು ಕೊಡಬಹುದಾಗಿದೆ. ೧) ರುದ್ರನಿಗೆ (ಬಲಿಯಾಗಿ) ಸಮರ್ಪಿಸಲ್ಪಟ್ಟ ವೃಷಭದಂತೆ. ೨) ರುದ್ರ (ವೀರಭದ್ರ) ನಿಂದ ನಿಗ್ರಹಕ್ಕಾಗಿ ಹಿಡಿದುಕೊಳ್ಳಲ್ಪಟ್ಟ ದಕ್ಷಪ್ರಜಾಪತಿಯಂತೆ. **ಗವಾಂಪತಿಃ =** ಎಂಬುದಕ್ಕೆ ಪರ್ಯಾಯವಾಗಿ **'ಪ್ರಜಾಪತಿಃ'** ಎಂದೂ ಅರ್ಥಮಾಡಬಹುದು. ೩) ರುದ್ರ = ಕೇತುಗ್ರಹ. **ರೌದ್ರಂ ರೌದ್ರಾತ್ಮಕಂ ಘೋರಂ ತಂ ಕೇತುಂ ಪ್ರಣ ಮಾಮ್ಯಹಮ್॥** ಕೇತುಗ್ರಹದಿಂದ ಹಿಡಿಯಲ್ಪಟ್ಟ ಸೂರ್ಯನಂತೆ. ಈ ಉಪಮಾನವು ಸೂಕ್ತವಾಗಿರುವಂತೆ ಕಂಡುಬಂದರೂ ಉಪಮಾಸ್ವಾರಸ್ಯವಿರುವುದಿಲ್ಲ. ಏಕೆಂದರೆ : ಗ್ರಹಣವು ತಾತ್ಕಾಲಿಕ. ಮತ್ತೆ ಸೂರ್ಯನಿಗೆ ಎಂದಿನಂತೆ ತೇಜಸ್ಸು ಬರುತ್ತದೆ. ಆದುದರಿಂದ ಈ ಮೂರರಲ್ಲಿ ಮೊದಲನೆಯದೇ ಗ್ರಾಹ್ಯವೆಂದು ನಮ್ಮ ಅಭಿಪ್ರಾಯವಾಗಿದೆ. ಮೊದಲನೆಯದು ಗೃಹ್ಯಸೂತ್ರ ಮತ್ತು ಬ್ರಾಹ್ಮಣವಾಕ್ಯಗಳಿಗೆ ಅನುಗುಣವಾಗಿದೆ. ರುದ್ರನಿಗೆ ಸಮರ್ಪಿಸಲ್ಪಡಬೇಕಾದ ಪಶುವು ವೃಷಭ.

ನಿಕುಂಭನು ಕೋಪದಿಂದಲೇ ಸುಟ್ಟುಬಿಡುವನೋ ಎಂಬಂತೆ ವಾನರೇಂದ್ರನಾದ ಸುಗ್ರೀವನನ್ನು ನೋಡಿದನು.

ಅನಂತರ ಅವನು ಮಹೇಂದ್ರಪರ್ವತದ ಶಿಖರದಂತಿದ್ದ ಅತಿ ಭಯಂಕರವಾಗಿದ್ದ ಪರಿಘಾಯುಧವನ್ನು ಕೈಗೆತ್ತಿಕೊಂಡನು. ಆ ಪರಿಘವು ಪುಷ್ಪಮಾಲೆಗಳಿಂದ ಸಮಲಂಕೃತವಾಗಿದ್ದಿತು. ಐದೈದು ಅಂಗುಲಗಳಿಗೆ ಒಂದರಂತೆ ಲೋಹದಿಂದ ಮಾಡಿದ ಬಳೆಗಳು ಆ ಪರಿಘದಲ್ಲಿದ್ದುವು. ಅದು ಚಿನ್ನದ ತಗಡಿನಿಂದಲೂ ಆಚ್ಛಾದಿತವಾಗಿದ್ದಿತು. ವಜ್ರಗಳಿಂದಲೂ, ಹವಳಗಳಿಂದಲೂ ಸಮಲಂಕೃತವಾಗಿದ್ದಿತು. ರಾಕ್ಷಸರ ಭಯವನ್ನು ನಿವಾರಿಸಲು ಸಮರ್ಥವಾಗಿದ್ದ ಆ ಪರಿಘವು ಯಮದಂಡದಂತೆಯೇ ಇದ್ದು ಭಯಂಕರವಾಗಿದ್ದಿತು. ಮಹಾತೇಜಸ್ವಿಯಾದ, ಭಯಂಕರಪರಾಕ್ರಮಿಯಾದ ನಿಕುಂಭನು ಇಂದ್ರಧ್ವಜದಂತೆ ಅತ್ಯಂತಪ್ರಕಾಶಮಾನವಾಗಿದ್ದ ಆ ಪರಿಘವನ್ನು ದೃಢವಾಗಿ ಹಿಡಿದುಕೊಂಡು ಬಾಯನ್ನು ಅಗಲವಾಗಿ ತೆರೆದು ಗಟ್ಟಿಯಾಗಿ ಗರ್ಜಿಸಿದನು. ನಿಕುಂಭನ ವಕ್ಷಃಸ್ಥಳದಲ್ಲಿ ಚಿನ್ನದ ಪದಕವಿದ್ದಿತು. ಭುಜಗಳಲ್ಲಿ ಅಂಗದಗಳಿದ್ದುವು. ಚಿತ್ರಿತವಾದ ಕುಂಡಲಗಳನ್ನು ಧರಿಸಿ ವಿಚಿತ್ರವಾದ ಮಾಲೆಯಿಂದ ಅವನು ಸಮಲಂಕೃತನಾಗಿದ್ದನು. ಮಿಂಚಿನಿಂದಲೂ ಗುಡುಗಿನ ಶಬ್ದದಿಂದಲೂ ಕೂಡಿದ ಮೇಘವು ಕಾಮನ ಬಿಲ್ಲಿನಿಂದಲೂ ಕೂಡಿ ವಿಶೇಷವಾಗಿ ಪ್ರಕಾಶಿಸುವಂತೆ–ಆಭರಣಗಳಿಂದ ಸಮಲಂಕೃತನಾಗಿದ್ದ ನಿಕುಂಭನು ಪರಿಘಾಯುಧವನ್ನೂ ಹಿಡಿದು ಶೋಭಾಯಮಾನನಾಗಿ ಕಾಣುತ್ತಿದ್ದನು.

ಪರಿಘಾಗ್ರೇಣ ಪುಸ್ಫೋಟ ವಾತಗ್ರನ್ಥಿರ್ಮಹಾತ್ಮನಃ ।
ಪ್ರಜಜ್ವಾಲ ಸಘೋಷಶ್ಚ ವಿಧೂಮ ಇವ ಪಾವಕಃ ॥೭॥

ಮಹಾಕಾಯನಾದ ಕುಂಭನ ಪರಿಘಾಯುಧದ ಅಗ್ರಭಾಗದಿಂದ ವಾತಗ್ರಂಥಿಯು (ಆವಹವೇ ಮೊದಲಾದ ಏಳು ವಾಯುಗಳ ಸಂಧಿ ಬಂಧವು) ಒಡೆದುಹೋಯಿತು. ಹೊಗೆಯಿಲ್ಲದ ಅಗ್ನಿಯಂತೆ ಆ ಪರಿಘಾಯುಧವು ಮಹಾಶಬ್ದದೊಡನೆ ಪ್ರಜ್ವಲಿಸುತ್ತಿತ್ತು.*

---

* ಈ ಶ್ಲೋಕದ ಪೂರ್ವಾರ್ಧವನ್ನು ಹೀಗೆ ವಿವರಿಸಬಹುದಾಗಿದೆ. ಆವಹ, ಪ್ರವಹ, ವಿವಹ, ಪರಾವಹ, ಸಂವಹ, ಉದ್ವಹ, ಪರಿವಹ–ಇವೇ ಸಪ್ತವಾಯುಗಳು. ಆವಹವಾಯುವು ಭೂಮಿಯಲ್ಲಿರುತ್ತದೆ. ಪ್ರವಹವೇ ಮುಂತಾದ ವಾಯುಗಳು

ಅದು ಅಷ್ಟು ಎತ್ತರವಾಗಿದ್ದುದರಿಂದಲೇ ಅಳ್ಳಾಡುತ್ತಿದ್ದಾಗ ಕುಬೇರನ ಅಲಕಾಪುರಿ, ಗಂಧರ್ವರ ಶ್ರೇಷ್ಠವಾದ ಭವನಗಳು, ನಕ್ಷತ್ರ-ಗ್ರಹ-ತಾರೆಗಳು, ಚಂದ್ರ–ಇವುಗಳಿಂದ ಕೂಡಿದ ಆಕಾಶಮಂಡಲವು ನಡುಗುತ್ತಿರುವಂತೆ ಕಾಣುತ್ತಿದ್ದಿತು.

ನಿಕುಂಭನು ಪರಿಘವನ್ನೇ ಆಭರಣವನ್ನಾಗಿ ಹೊಂದಿದ್ದು ಮಹಾಪ್ರಭೆಯುಳ್ಳವನಾಗಿದ್ದನು. ಶತ್ರುಗಳಿಗೆ ಎದುರಿಸಲು ಅಸಾಧ್ಯನಾಗಿದ್ದನು. ಕ್ರೋಧವನ್ನೇ ಕಟ್ಟಿಗೆಯನ್ನಾಗಿ ಹೊಂದಿದ್ದ ನಿಕುಂಭಾಗ್ನಿಯು ಪ್ರಳಯಕಾಲದ ಅಗ್ನಿಯಂತೆಯೇ ಪ್ರಜ್ವಲಿಸುತ್ತಿದ್ದಿತು. ಆ ಸಮಯದಲ್ಲಿ ನಿಕುಂಭನ ಭಯದಿಂದಾಗಿ ವಾನರರಾಗಲೀ ರಾಕ್ಷಸರಾಗಲೀ ಅಳ್ಳಾಡುತ್ತಲೂ ಇರಲಿಲ್ಲ. ಆದರೆ ಹನುಮಂತನೊಬ್ಬನು ಮಾತ್ರ ತನ್ನ ವಿಶಾಲವಾದ ವಕ್ಷಃಸ್ಥಳವನ್ನು ಮುಂದೆಮಾಡಿಕೊಂಡು ನಿಕುಂಭನಿಗೆ ಎದುರಾಗಿ ನಿಂತನು. ಪರಿಘಾಯುಧಕ್ಕೆ ಸಮಾನವಾದ ತೋಳುಗಳನ್ನು ಹೊಂದಿದ್ದ ಬಲಿಷ್ಠನಾದ ನಿಕುಂಭನು ಸೂರ್ಯನ ಪ್ರಭೆಯಂತೆ ಉಜ್ವಲವಾದ ಪ್ರಭೆಯಿಂದ ಪರಿಶೋಭಿಸುತ್ತಿದ್ದ ಪರಿಘಾಯುಧವನ್ನು ಮಹಾಬಲಿಷ್ಠನಾದ ಹನುಮಂತನ ವಕ್ಷಃಸ್ಥಳದಲ್ಲಿ ಪ್ರಹರಿಸಿದನು. ವಿಶಾಲವಾಗಿಯೂ ಸುದೃಢವಾಗಿಯೂ ಇದ್ದ ಹನುಮಂತನ ವಕ್ಷಃಸ್ಥಳದಲ್ಲಿ ಬಿದ್ದ ಆ ಮಹಾಪರಿಘವು ನುಚ್ಚುನೂರಾಗಿ ಆಕಾಶದಿಂದ ಬೀಳುವ ನೂರಾರು ಉಲ್ಕೆಗಳಂತೆ ಎಲ್ಲ ಕಡೆಗಳಲ್ಲಿಯೂ ಬಿದ್ದಿತು. ಭೂಕಂಪವಾದರೂ ಪರ್ವತವು ಚಲಿಸದಂತೆ ಅಂತಹ ಮಹಾಪ್ರಹಾರದಿಂದಲೂ ಹನುಮಂತನು ವಿಚಲಿತನಾಗಲಿಲ್ಲ. ಹೀಗೆ ಮಹಾಬಲನಾದ ಮಾರುತಿಯು ಪರಿಘಾಯುಧದಿಂದ ಪ್ರಹರಿಸಲ್ಪಟ್ಟನಂತರ ಬಲಪೂರ್ವಕವಾಗಿ ಮುಷ್ಟಿಯನ್ನು ತಿರುಗಿಸತೊಡಗಿದನು. ವಾಯುವಿನಂತೆ ಪರಾಕ್ರಮ

ಒಂದರ ಮೇಲೊಂದಿರುತ್ತವೆ. ಎಲ್ಲ ವಾಯುಗಳನ್ನೂ ಭೇದಿಸಿಕೊಂಡು ಆ ಪರಿಘವು ಮೇಲೆ ಹೋಗಿದ್ದಿತು. ಅಷ್ಟೊಂದು ಎತ್ತರವಾಗಿದ್ದಿತು–ಎಂದು ವ್ಯಾಖ್ಯಾನಕಾರರು ಅರ್ಥಮಾಡಿರುತ್ತಾರೆ. ವಾತಗ್ರನ್ಥಿಃ ಆವಹ ಪ್ರವಹ ಪ್ರಭೃತಿ ಸಪ್ತವಾಯುಸನ್ಧಿಃ ಪುಸ್ಫೋಟ. ಏತೇನ ಪರಿಘಸ್ಯಾತಿದೈರ್ಘ್ಯಂ ಸೂಚಿತಂ । ೨) ಪರಿಘಾಗ್ರೇಣ ವಾತ ಗ್ರನ್ಥಿಃ ಆವಹಾದಿ ಸಪ್ತಮಹಾವಾಯೂನಾಂ ಸಂಧಿಃ ಪುಸ್ಫೋಟ. ಏತೇನ ಪರಿಘಸ್ಯ ದೈರ್ಘ್ಯಮುಕ್ತಂ

ಶಾಲಿಯಾದ, ವೀರ್ಯವಂತನಾದ, ಮಹಾತೇಜಸ್ವಿಯಾದ, ವೇಗವಂತನಾದ ಹನುಮಂತನು ನಿಕುಂಭನ ವಕ್ಷಃಸ್ಥಳದಲ್ಲಿ ವೇಗವಾಗಿ ಮುಷ್ಟಿಯಿಂದ ಪ್ರಹರಿಸಿದನು.

ಮೇಘದಲ್ಲಿ ಮಿಂಚು ಮೂಡಿಬರುವಂತೆ ಹನುಮಂತನ ಮುಷ್ಟಿ ಪ್ರಹಾರದಿಂದ ನಿಕುಂಭನ ಕವಚವು ಛಿನ್ನ-ಭಿನ್ನವಾಗಿ ವಕ್ಷಃಸ್ಥಳದಿಂದ ರಕ್ತವು ಸೋರತೊಡಗಿತು. ಹನುಮಂತನ ಮುಷ್ಟಿಪ್ರಹಾರದಿಂದ ನಿಕುಂಭನು ತತ್ತರಿಸಿದನು. ಆದರೂ ಸ್ವಲ್ಪಹೊತ್ತಿನಲ್ಲಿಯೇ ಚೇತರಿಸಿಕೊಂಡು ಹನು ಮಂತನನ್ನು ಹಿಡಿದುಕೊಂಡನು. ಮಹಾಬಲಿಷ್ಠನಾದ ಹನುಮಂತನನ್ನು ನಿಕುಂಭನು ಹಿಡಿದುದನ್ನು ಕಂಡೊಡನೆಯೇ ಲಂಕಾವಾಸಿಗಳಾದ ರಾಕ್ಷಸರು ಭಯಂಕರವಾಗಿ ಗರ್ಜಿಸಿದರು. ಹೀಗೆ ರಾಕ್ಷಸರು ಹನುಮಂತನನ್ನು ಹಿಡಿದೆತ್ತಿ ಕೊಂಡು ಹೋಗುತ್ತಿದ್ದರೂ ಹನುಮಂತನು ವಜ್ರಾಯುಧಸದೃಶವಾದ ತನ್ನ ಮುಷ್ಟಿಯಿಂದ ನಿಕುಂಭನನ್ನು ಪ್ರಹರಿಸುತ್ತಿದ್ದನು. ಅನಂತರ ಮಾರುತಿಯು ನಿಕುಂಭನ ಬಾಹುಬಂಧನದಿಂದ ಬಿಡಿಸಿಕೊಂಡು ರಣರಂಗದಲ್ಲಿ ನಿಂತನು. ಮರುಕ್ಷಣದಲ್ಲಿಯೇ ನಿಕುಂಭನನ್ನು ಜಜ್ಜಿಹಾಕಿದನು. ಹನುಮಂತನು ಮಹಾಪ್ರಯಾಸದಿಂದ ರಾಕ್ಷಸನನ್ನು ಕೆಳಕ್ಕೆ ಕೆಡವಿ ತುಳಿದು-ತುಳಿದು ಹೊಸಕಿಹಾಕಿದನು. ಮತ್ತೊಮ್ಮೆ ಮೇಲಕ್ಕೆ ಹಾರಿ ನಿಕುಂಭನ ಮಹಾಕಾಯದ ಮೇಲೆ ಬಿದ್ದು ಎರಡು ಕೈಗಳಿಂದಲೂ ಅವನ ತಲೆಯನ್ನು ಗಟ್ಟಿಯಾಗಿ ಹಿಡಿದು ಆರ್ತನಾದಮಾಡುತ್ತಿದ್ದ ರಾಕ್ಷಸನ ಆ ತಲೆಯನ್ನು ದೇಹದಿಂದ ಹೊರತೆಗೆದನು.

ಹೀಗೆ ಬಹಳವಾಗಿ ಗರ್ಜಿಸುತ್ತಿದ್ದ ನಿಕುಂಭನನ್ನು ಹನುಮಂತನು ಸಂಹರಿಸಿದನಂತರ ಅತ್ಯಂತಕುಪಿತನಾಗಿದ್ದ ದಶರಥನ ಮಗನಾದ ಶ್ರೀರಾಮ ನಿಗೂ ರಾಕ್ಷಸೇಂದ್ರನಾದ ರಾವಣನ ಮಕ್ಕಳಿಗೂ ಭಯಂಕರವಾದ ಯುದ್ಧವು ಪ್ರಾರಂಭವಾಯಿತು.

ನಿಕುಂಭನು ಹತನಾಗಲು ಎಲ್ಲ ವಾನರನಾಯಕರೂ ಹರ್ಷದಿಂದ ಗರ್ಜನೆಮಾಡಿದರು. ಎಲ್ಲ ದಿಕ್ಕುಗಳಲ್ಲಿಯೂ ಕೋಲಾಹಲಧ್ವನಿಯು ಕೇಳಿ ಬರುತ್ತಿದ್ದಿತು. ಭೂಮಿಯೇ ನಡುಗುತ್ತಿರುವುದೋ ಎಂಬಂತೆಯೂ

ಆಕಾಶವೇ ಕಳಚಿಬೀಳುತ್ತಿರುವುದೋ ಎಂಬಂತೆಯೂ ಕಾಣುತ್ತಿದ್ದಿತು. ನಿಕುಂಭನ ಅವಸಾನದಿಂದಾಗಿ ರಾಕ್ಷಸರ ಮನಸ್ಸು ಭಯಗ್ರಸ್ತವಾಯಿತು.

೭೭ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೭೮ನೆಯ ಸರ್ಗ

ರಾವಣನ ಆಜ್ಞೆಯಂತೆ ಮಕರಾಕ್ಷನು ಯುದ್ಧಕ್ಕೆ ಹೊರಟುದು

ನಿಕುಮ್ಭಂ ಚ ಹತಂ ಶ್ರುತ್ವಾ ಕುಮ್ಭಂ ಚ ವಿನಿಪಾತಿತಮ್ ।
ರಾವಣಃ ಪರಮಾಮರ್ಷೀ ಪ್ರಜಜ್ವಾಲಾನಲೋ ಯಥಾ ॥೧॥

ಕುಂಭ-ನಿಕುಂಭರು ಯುದ್ಧದಲ್ಲಿ ಹತರಾದುದನ್ನು ಕೇಳಿ ಅಸಹನ ಶೀಲನಾದ ರಾವಣನು ಕೋಪದಿಂದ ಬೆಂಕಿಯಂತೆ ಉರಿದುಹೋದನು.

ಕ್ರೋಧ ಮತ್ತು ಶೋಕಗಳೆರಡರಿಂದಲೂ ವ್ಯಾಕುಲನಾಗಿದ್ದ ರಾವಣನು ವಿಶಾಲನೇತ್ರನಾದ ಖರನ ಮಗ ಮಕರಾಕ್ಷನಿಗೆ ಹೇಳಿದನು :

"ಮಕರಾಕ್ಷ! ಈಗಲೇ ನೀನು ದೊಡ್ಡ ಸೈನ್ಯದೊಡನೆ ರಣರಂಗಕ್ಕೆ ಹೋಗಿ ಅಲ್ಲಿರುವ ರಾಮ-ಲಕ್ಷ್ಮಣರನ್ನು ಕಪಿಸೈನಿಕರೊಡನೆ ಸಂಹರಿಸು."

ರಾವಣನ ಆ ಮಾತನ್ನು ಕೇಳಿ ಶೂರಮಾನಿಯಾದ ಮಕರಾಕ್ಷನು ಹಾಗೆಯೇ ಆಗಲೆಂದು ರಾಕ್ಷಸರಾಜನಿಗೆ ಹೇಳಿ ರಾವಣನಿಗೆ ಪ್ರದಕ್ಷಿಣ ಪೂರ್ವಕವಾಗಿ ಅಭಿವಾದನಮಾಡಿ ಉಜ್ಜ್ವಲವಾಗಿದ್ದ ರಾಜಭವನದಿಂದ ರಾವಣನ ಆಜ್ಞೆಯಂತೆ ಹೊರಹೊರಟನು. ಆ ಸಮಯದಲ್ಲಿ ಅವನ ಬಳಿಗೆ ಬಂದ ಬಲಾಧ್ಯಕ್ಷನಿಗೆ ಶೀಘ್ರವಾಗಿ ರಥವನ್ನೂ ಮತ್ತು ಸೈನಿಕರನ್ನೂ ಕರೆತರುವಂತೆ ಹೇಳಿದನು. ಮಕರಾಕ್ಷನ ಮಾತನ್ನು ಕೇಳಿ ಬಲಾಧ್ಯಕ್ಷನು ರಥವನ್ನೂ ಸೈನಿಕರನ್ನೂ ಸಿದ್ಧಗೊಳಿಸಿದನು. ಬಳಿಕ ಮಕರಾಕ್ಷನು ರಥಕ್ಕೆ ಪ್ರದಕ್ಷಿಣೆಮಾಡಿ ಹತ್ತಿ ಕುಳಿತು ಶೀಘ್ರವಾಗಿ ರಣರಂಗಕ್ಕೆ ಒಯ್ಯುವಂತೆ ಸೂತನಿಗೆ ಆಜ್ಞಾಪಿಸಿದನು. ಅನಂತರ ತನ್ನನ್ನನುಸರಿಸಿ ಹೊರಟಿದ್ದ ರಾಕ್ಷಸರಿಗೆ ಹೇಳಿದನು :

"ರಾಕ್ಷಸರೇ! ನೀವೆಲ್ಲರೂ ನನ್ನ ಮುಂಭಾಗದಲ್ಲಿದ್ದು ವಾನರರೊಡನೆ

ಧೈರ್ಯದಿಂದ ಯುದ್ಧಮಾಡಿರಿ. ಆ ರಾಮ-ಲಕ್ಷ್ಮಣರಿಬ್ಬರನ್ನೂ ಯುದ್ಧದಲ್ಲಿ ಸಂಹರಿಸಲು ಮಹಾತ್ಮನಾದ ರಾವಣನು ನನಗೆ ಆಜ್ಞಾಪಿಸಿರುವನು. ನಾನಾದರೋ ರಾಮನನ್ನೂ, ಲಕ್ಷ್ಮಣನನ್ನೂ, ವಾನರರಾಜನಾದ ಸುಗ್ರೀವ ನನ್ನೂ, ಇತರ ವಾನರನಾಯಕರನ್ನೂ ಶ್ರೇಷ್ಠವಾದ ಬಾಣಗಳಿಂದ ಈಗಲೇ ಸಂಹರಿಸುತ್ತೇನೆ. ಒಣಗಿಹೋಗಿರುವ ಕಟ್ಟಿಗೆಯನ್ನು ಬೆಂಕಿಯು ಸುಟ್ಟು ಹಾಕುವಂತೆ–ಶೂಲಾಯುಧದ ಪ್ರಹಾರದಿಂದ ಇಲ್ಲಿಗೆ ಆಗಮಿಸಿರುವ ವಾನರ ಮಹಾಸೈನ್ಯವನ್ನು ಸುಟ್ಟುಹಾಕುತ್ತೇನೆ."

ನಾನಾವಿಧವಾದ ಆಯುಧಗಳನ್ನು ಧರಿಸಿದ್ದ, ಬಲಿಷ್ಠರಾಗಿದ್ದ ಎಲ್ಲ ರಾಕ್ಷಸರೂ ಮಕರಾಕ್ಷನ ಆ ಮಾತನ್ನು ಕೇಳಿ ಯುದ್ಧಸನ್ನದ್ಧರಾದರು. ಇಚ್ಛಾನುಸಾರವಾಗಿ ರೂಪಗಳನ್ನು ಧರಿಸುವ ಸಾಮರ್ಥ್ಯವುಳ್ಳ, ಮಹಾಕ್ರೂರಿ ಗಳಾದ, ಕೋರೆದಾಡೆಗಳನ್ನು ಹೊಂದಿದ್ದ, ಪಿಂಗಲವರ್ಣದ ಕಣ್ಣುಗಳನ್ನು ಹೊಂದಿದ್ದ, ಮಹಾಕಾಯರಾದ, ಭಯಂಕರರಾಗಿದ್ದ, ಕೆದರಿದ ತಲೆಗೂದಲು ಗಳಿಂದ ಕೂಡಿದ್ದ ಆ ರಾಕ್ಷಸರು ಮದಿಸಿದ ಆನೆಗಳಂತೆ ಘೀಳಿಡುತ್ತಾ ಖರನ ಮಗನಾದ ಮಹಾಕಾಯನಾದ ಮಕರಾಕ್ಷನನ್ನು ಸುತ್ತುವರಿದು ಪರಮ ಹೃಷ್ಟರಾಗಿ ಭೂಮಿಯನ್ನೇ ನಡುಗಿಸುತ್ತಿರುವರೋ ಎಂಬಂತೆ ಯುದ್ಧ ಭೂಮಿಯ ಕಡೆಗೆ ಹೊರಟರು. ನಾಲ್ಕು ದಿಕ್ಕುಗಳಲ್ಲಿಯೂ ಸಾವಿರಾರು ಶಂಖಧ್ವನಿಗಳೂ ಭೇರೀನಿನಾದಗಳೂ ಕೇಳಿಬರುತ್ತಿದ್ದುವು. ಅದರ ಜೊತೆಗೆ ಗರ್ಜನೆಗಳ ಮತ್ತು ಕೈಚಪ್ಪಾಳೆಗಳ ಶಬ್ದವೂ ಸೇರಿ ಕೋಲಾಹಲದ ಮಹಾ ಧ್ವನಿಯು ಕೇಳಿಬರುತ್ತಿದ್ದಿತು.

ಆ ಸಮಯದಲ್ಲಿ ಮಕರಾಕ್ಷನ ಸಾರಥಿಯ ಕೈಯಿಂದ ಚಾವಟಿಯು ಜಾರಿ ಕೆಳಕ್ಕೆ ಬಿದ್ದಿತು. ದೈವಯೋಗದಿಂದ ಮಕರಾಕ್ಷನ ರಥದ ಧ್ವಜವೂ ಕೆಳಕ್ಕೆ ಬಿದ್ದಿತು. ರಥಕ್ಕೆ ಕಟ್ಟಿದ ಕುದುರೆಗಳಿಗೆ ಮುಂದೆಹೋಗುವ ಉತ್ಸಾಹವೇ ಇರಲಿಲ್ಲ. ಅವು ಬಳಲಿ ಆಯಾಸಗೊಂಡಿರುವಂತೆ ಕಾಣುತ್ತಿದ್ದುವು. ಕಾಲುಗಳೇನಾದರೂ ಗಾಯಗೊಂಡಿವೆಯೋ ಎಂಬಂತೆ ಬಹಳ ಪ್ರಯಾಸ ದಿಂದ ಕುದುರೆಗಳು ಮುನ್ನಡೆಯುತ್ತಿದ್ದುವು. ಅವುಗಳ ಕಣ್ಣುಗಳಲ್ಲಿ ನೀರು ತುಂಬಿಕೊಂಡಿದ್ದಿತು. ದುಷ್ಟಬುದ್ಧಿಯವನಾದ ಮಹಾಭಯಂಕರ ನಾದ ಮಕರಾಕ್ಷನ ರಣಯಾತ್ರೆಯ ಸಮಯದಲ್ಲಿ ಧೂಳಿನಿಂದ ಕೂಡಿದ

ದಾರುಣವಾದ ಬಿರುಗಾಳಿಯು ಬೀಸುತ್ತಿದ್ದಿತು. ಅಂತಹ ದುರ್ನಿಮಿತ್ತಗಳನ್ನು ನೋಡಿಯೂ ಮಹಾವೀರ್ಯಶಾಲಿಗಳಾದ ರಾಕ್ಷಸರು ಯಾವುದನ್ನೂ ಲೆಕ್ಕಿಸದೇ ರಾಮ-ಲಕ್ಷ್ಮಣರಿದ್ದ ಸ್ಥಳಕ್ಕೆ ಧಾವಿಸಿದರು. ಆ ಸಮಯದಲ್ಲಿ ರಾಕ್ಷಸರ ಶರೀರಕಾಂತಿಯು ಮೇಘ-ಮಹಿಷ-ಮದಗಜಗಳ ಶರೀರ ಕಾಂತಿಯಂತೆಯೇ ಇದ್ದಿತು. ಹಿಂದೆ ನಡೆದ ಅನೇಕಯುದ್ಧಗಳಲ್ಲಿ ಅವರು ಗದೆಗಳಿಂದಲೂ ಕತ್ತಿಗಳಿಂದಲೂ ಪೆಟ್ಟುತಿಂದು ಅವರ ಶರೀರಗಳು ಜಡ್ಡುಕಟ್ಟಿ ಹೋಗಿದ್ದುವು. ಎಲ್ಲರೂ ಯುದ್ಧಕುಶಲಿಗಳಾಗಿದ್ದರು. ನಾಮುಂದು-ತಾಮುಂದು ಎಂದೆನ್ನುತ್ತಾ ಎಲ್ಲ ಕಡೆಗಳಲ್ಲೂ ತಿರುಗುತ್ತಾ ವಾನರಸೈನಿಕರೊಡನೆ ಯುದ್ಧಮಾಡತೊಡಗಿದರು.

೭೮ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೭೯ನೆಯ ಸರ್ಗ

ಶ್ರೀರಾಮನಿಂದ ಮಕರಾಕ್ಷನ ಸಂಹಾರ

ನಿರ್ಗತಂ ಮಕರಾಕ್ಷಂ ತೇ ದೃಷ್ಟ್ವಾ ವಾನರಯೂಥಪಾಃ ।
ಆಪ್ಲುತ್ಯ ಸಹಸಾ ಸರ್ವೇ ಯೋದ್ಧುಕಾಮಾ ವ್ಯವಸ್ಥಿತಾಃ ॥೧॥

ಮಕರಾಕ್ಷನು ರಾಕ್ಷಸಸೈನಿಕರೊಡನೆ ಲಂಕಾಪಟ್ಟಣದಿಂದ ಹೊರ ಬಂದುದನ್ನು ನೋಡಿದೊಡನೆಯೇ ವಾನರದಳಪತಿಗಳು ಯುದ್ಧಾಕಾಂಕ್ಷಿ ಗಳಾಗಿ ಥಟ್ಟನೆ ಹಾರಿ ಯುದ್ಧಸನ್ನದ್ಧರಾಗಿ ನಿಂತರು.

ಅನಂತರ ಹಿಂದೆ ದೇವತೆಗಳಿಗೂ-ದಾನವರಿಗೂ ನಡೆದ ಯುದ್ಧ ದಂತೆಯೇ ರಾಕ್ಷಸರಿಗೂ ಮತ್ತು ವಾನರರಿಗೂ ಅತಿಘೋರವಾದ ಮತ್ತು ರೋಮಾಂಚಕವಾದ ಯುದ್ಧವು ಪ್ರಾರಂಭವಾಯಿತು. ವೃಕ್ಷ-ಶೈಲ-ಶೂಲ-ಗದಾ-ಪರಿಘಗಳೇ ಮುಂತಾದ ಆಯುಧಗಳ ಪ್ರಹಾರಗಳಿಂದ ಕಪಿ-ನಿಶಾಚ ರರು ಒಬ್ಬರನ್ನೊಬ್ಬರು ಮರ್ದನಮಾಡುತ್ತಿದ್ದರು. ರಾಕ್ಷಸರು ಶಕ್ತ್ಯಾಯುಧ, ಕತ್ತಿ, ಗದೆ, ಭಲ್ಲೆ, ತೋಮರ, ಪಟ್ಟಿಶ, ಭಿಂದಿಪಾಲ, ಬಾಣಗಳು, ಪಾಶ, ಮುದ್ಗರ, ದಂಡಗಳು–ಇವೇ ಮುಂತಾದ ಆಯುಧಗಳಿಂದ ವಾನರಶ್ರೇಷ್ಠ ರನ್ನು ಸಂಹರಿಸತೊಡಗಿದರು. ಖರಪುತ್ರನಾದ ಮಕರಾಕ್ಷನ ಬಾಣಗಳಿಂದ ಪೀಡಿತರಾದ ವಾನರರು ಭ್ರಾಂತರಾಗಿ ಭಯಪೀಡಿತರಾಗಿ ದಿಕ್ಕಾಪಾಲಾಗಿ

ಓಡತೊಡಗಿದರು. ವಾನರರು ಪಲಾಯನಮಾಡುತ್ತಿರುವುದನ್ನು ನೋಡಿ ವಿಜಯೋತ್ಸಾಹದಿಂದ ಶೋಭಿಸುತ್ತಿದ್ದ ದರ್ಪಿಷ್ಠರಾದ ರಾಕ್ಷಸರು ಸಿಂಹ ದಂತೆ ಗರ್ಜಿಸತೊಡಗಿದರು. ಹೀಗೆ ವಾನರನಾಯಕರು ಚದುರಿ ಪಲಾಯನ ಮಾಡುತ್ತಿರಲು ಶ್ರೀರಾಮನು ಬಾಣಗಳ ವರ್ಷದಿಂದ ರಾಕ್ಷಸರು ಮುಂದೆ ಬರುವುದನ್ನು ತಡೆದನು. ರಾಕ್ಷಸಸೈನಿಕರನ್ನು ಬಾಣವರ್ಷದಿಂದ ತಡೆದುದನ್ನು ನೋಡಿ ಕೋಪಾವಿಷ್ಟನಾದ ಮಕರಾಕ್ಷನು ಶ್ರೀರಾಮನಿಗೆ ಹೇಳಿದನು :

"ರಾಮ! ನಿಲ್ಲು! ಈಗ ನನಗೂ ನಿನಗೂ ದ್ವಂದ್ವಯುದ್ಧವು ನಡೆಯ ಲಿದೆ. ನಿಶಿತವಾದ ಬಾಣಗಳ ಪ್ರಯೋಗದಿಂದ ನೀನು ಪ್ರಾಣತ್ಯಾಗಮಾಡು ವಂತೆ ಮಾಡುವೆನು. ದಂಡಕಾರಣ್ಯದಲ್ಲಿ ನನ್ನ ತಂದೆಯನ್ನು ಕೊಂದ ದಿವಸ ದಿಂದಲೂ ನೀನು ರಾಕ್ಷಸರ ಹನನಕಾರ್ಯದಲ್ಲಿಯೇ ತೊಡಗಿರುವೆ. ಇದನ್ನು ನೆನೆದೊಡನೆಯೇ ನನ್ನ ಕೋಪವು ಉಕ್ಕೇರಿ ಬರುತ್ತದೆ. ದುರಾತ್ಮನೇ! ರಾಘವ! ಆ ಮಹಾವನದಲ್ಲಿ ಅಂದು ನೀನು ನನ್ನ ಕಣ್ಣಿಗೆ ಬೀಳಲಿಲ್ಲ. ಈಗ ನಿನ್ನನ್ನು ನೋಡಿದೊಡನೆಯೇ ನನ್ನ ಅಂಗಾಂಗಗಳೂ ಕೋಪದಿಂದ ದಹಿಸಿಹೋಗುತ್ತಿವೆ. ಸಿಂಹವು ಕ್ಷುದ್ರಮೃಗಗಳನ್ನು ಬಯಸುವಂತೆ ನಾನು ನಿನ್ನ ಆಗಮನವನ್ನೇ ನಿರೀಕ್ಷಿಸುತ್ತಿದ್ದೆನು. ಸೌಭಾಗ್ಯವಶದಿಂದ ಈಗ ನೀನು ನನ್ನ ಕಣ್ಮುಂದೆ ನಿಂತಿರುವೆ. ಈಗ ನನ್ನ ಬಾಣದಿಂದ ಹತನಾಗುವ ನೀನು ಯಮನ ಪಟ್ಟಣಕ್ಕೆ ಹೋಗಿ ಯಾವ ರಾಕ್ಷಸವೀರರನ್ನು ಸಂಹರಿಸಿದೆಯೋ ಅವರ ಜೊತೆಯಲ್ಲಿಯೇ ವಾಸಮಾಡಲಿರುವೆ. ಹೆಚ್ಚು ಮಾತನಾಡಿ ಪ್ರಯೋಜನವೇನಿದೆ? ರಾಮ! ನನ್ನ ಈ ಒಂದು ಮಾತನ್ನು ಕೇಳು. ಸಮಸ್ತಲೋಕಗಳೂ ನನಗೂ ಮತ್ತು ನಿನಗೂ ಈ ರಣರಂಗದಲ್ಲಿ ನಡೆಯಲಿರುವ ಮಹಾಸಮರವನ್ನು ನೋಡಲಿ. ಅಸ್ತ್ರಯುದ್ಧ, ಗದಾಯುದ್ಧ, ಬಾಹುಯುದ್ಧ–ಇವೇ ಮೊದಲಾದ ಬಗೆ-ಬಗೆಯ ಯುದ್ಧಗಳಲ್ಲಿ ನಿನಗೆ ಯಾವ ಯುದ್ಧದಲ್ಲಿ ಹೆಚ್ಚಿನ ಪರಿಶ್ರಮವಿರುವುದೋ–ನೀನು ಯಾವ ಯುದ್ಧವನ್ನು ವಿಶೇಷವಾಗಿ ಅಭ್ಯಾಸಮಾಡಿರುವೆಯೋ–ಅದರ ಮೂಲಕ ವಾಗಿಯೇ ನಮ್ಮಿಬ್ಬರಿಗೂ ಯುದ್ಧವಾಗಲಿ."

ಮನಸ್ಸಿಗೆ ಬಂದಂತೆ ರಗಳುತ್ತಲೇ ಇದ್ದ ಮಕರಾಕ್ಷನ ಮಾತನ್ನು ಕೇಳಿ ಶ್ರೀರಾಮನು ಗಹ-ಗಹಿಸಿ ನಗುತ್ತಾ ಹೇಳಿದನು :

"ರಾಕ್ಷಸನೇ! ಉಚಿತವಲ್ಲದ ಮಾತುಗಳನ್ನೇನೋ ರಗಳುತ್ತಿರುವೆ. ಆದರೆ ಯುದ್ಧದಲ್ಲಿ ವಾಗ್ಬಲದಿಂದಲೇ ಶತ್ರುವನ್ನು ಜಯಿಸುವ ಸಾಧ್ಯತೆಯಿಲ್ಲ. ಜಯಾಪಜಯಗಳನ್ನು ನಿಶ್ಚಯಿಸಬೇಕಾದರೆ ಯುದ್ಧಮಾಡಲೇಬೇಕು.

ಪಾಪಿಷ್ಠನೇ! ದಂಡಕಾರಣ್ಯದಲ್ಲಿ ಹದಿನಾಲ್ಕು ಸಾವಿರ ರಾಕ್ಷಸರೊಡನೆ ನಿನ್ನ ತಂದೆ, ತ್ರಿಶಿರಸ, ದೂಷಣ ಇವರೆಲ್ಲರನ್ನೂ ನಾನು ಸಂಹರಿಸಿದೆನು. ತೀಕ್ಷ್ಣವಾಗಿರುವ ಕೊಕ್ಕುಗಳೂ ಅಂಕುಶಕ್ಕೆ ಸಮಾನವಾಗಿರುವ ಉಗುರುಗಳೂ ಇರುವ ರಣಹದ್ದು, ಗುಳ್ಳೇನರಿ ಮತ್ತು ಕಾಗೆಗಳು ಅವರೆಲ್ಲರ ರುಚಿಕರವಾದ ಮಾಂಸಗಳನ್ನು ತಿಂದು ತೃಪ್ತಿಹೊಂದಿದುವು. ಈಗ ಅವೇ ನಿನ್ನ ಮಾಂಸವನ್ನೂ ತಿಂದು ತೃಪ್ತಿಹೊಂದಲಿವೆ."

ಶ್ರೀರಾಮನು ಹೀಗೆ ಹೇಳಲು ಮಹಾಬಲನಾದ ಮಕರಾಕ್ಷನು ಆ ರಣ ರಂಗದಲ್ಲಿ ರಾಘವನ ಮೇಲೆ ಬಾಣಗಳ ಸಮೂಹಗಳನ್ನೇ ಸುರಿಸಿದನು. ಆ ಎಲ್ಲ ಬಾಣಗಳನ್ನೂ ಶ್ರೀರಾಮನು ಹಲವಾರು ಬಾರಿ ಕತ್ತರಿಸಿ ಹಾಕಿದನು. ಚಿನ್ನದ ರೆಕ್ಕೆಗಳನ್ನು ಹೊಂದಿದ್ದ ಸಾವಿರಾರು ಬಾಣಗಳು ತುಂಡು-ತುಂಡಾಗಿ ಕೆಳಗೆ ಬಿದ್ದುವು. ದಶರಥಪುತ್ರನಾದ ಶ್ರೀರಾಮನೂ ಖರಪುತ್ರನಾದ ಮಕರಾಕ್ಷನೂ ಪರಸ್ಪರವಾಗಿ ಹತ್ತಿರಕ್ಕೆ ಬಂದು ಶೌರ್ಯದಿಂದ ಯುದ್ಧ ಮಾಡತೊಡಗಿದರು.

ಶಿಂಜಿನಿ ಮತ್ತು ಅಂಗೈಗಳ ಸಂಘರ್ಷದಿಂದ ಹೊರಹೊಮ್ಮುತ್ತಿದ್ದ ಇಬ್ಬರ ಧನುಸ್ಸುಗಳ ಶಬ್ದವು ಆಕಾಶದಲ್ಲಿರುವ ಎರಡು ಮೇಘಗಳ ಶಬ್ದ ಗಳಂತೆಯೇ ಕೇಳಿಬರುತ್ತಿದ್ದಿತು. ಅಂತಹ ಅದ್ಭುತವಾದ ಶ್ರೀರಾಮ- ಮಕರಾಕ್ಷರ ಯುದ್ಧವನ್ನು ನೋಡಲು ದೇವ-ದಾನವ-ಗಂಧರ್ವ-ಕಿನ್ನರ-ಮಹಾಸರ್ಪರು ಆಕಾಶದಲ್ಲಿ ಉಪಸ್ಥಿತರಾಗಿದ್ದರು. ಒಬ್ಬರು ಮತ್ತೊಬ್ಬರನ್ನು ಗಾಯಗೊಳಿಸುತ್ತಿದ್ದರೂ ಅವರ ಬಲವು ಇಮ್ಮಡಿಯಾಗಿ ಹೆಚ್ಚುತ್ತಿದ್ದಿತು. ಇಬ್ಬರೂ ಪರಸ್ಪರವಾಗಿ ಅಸ್ತ್ರಗಳಿಂದ ಪ್ರತೀಕಾರಮಾಡುತ್ತಿದ್ದರು.*

---

* ಒಬ್ಬರು ಆಗ್ನೇಯಾಸ್ತ್ರವನ್ನು ಪ್ರಯೋಗಿಸದರೆ ಮತ್ತೊಬ್ಬರು ವಾರುಣಾಸ್ತ್ರ ದಿಂದ ಅದನ್ನು ಉಪಶಮನಗೊಳಿಸುತ್ತಿದ್ದರು. ಒಬ್ಬರು ಬಾಣಗಳನ್ನು ಬಿಡುತ್ತಿದ್ದರೆ

ಶ್ರೀರಾಮನು ಬಿಟ್ಟ ಬಾಣಗಳನ್ನು ರಾಕ್ಷಸನು ಕತ್ತರಿಸುತ್ತಿದ್ದನು. ಅಂತೆಯೇ ರಾಕ್ಷಸನು ಬಿಟ್ಟ ಬಾಣಗಳನ್ನು ಶ್ರೀರಾಮನು ತುಂಡು-ತುಂಡುಗಳನ್ನಾಗಿ ಮಾಡುತ್ತಿದ್ದನು. ಎಲ್ಲ ದಿಕ್ಕುಗಳೂ ಉಪದಿಕ್ಕುಗಳೂ ಬಾಣಗಳ ಸಮೂಹಗಳಿಂದ ಮುಚ್ಚಿಹೋದುವು. ಅಂತೆಯೇ ಭೂಮಿಯೂ ಮುಚ್ಚಿಹೋಯಿತು. ಯಾವ ಕಡೆಯಲ್ಲಿಯೂ ಏನೊಂದೂ ಕಾಣುತ್ತಲೇ ಇರಲಿಲ್ಲ.

ಬಳಿಕ ಕ್ರುದ್ಧನಾದ ಮಹಾಬಾಹುವಾದ ರಾಘವನು ನಿಶಿತವಾದ ಬಾಣಗಳಿಂದ ರಾಕ್ಷಸನ ಧನುಸ್ಸನ್ನು ಕತ್ತರಿಸಿದನು. ಮರುಕ್ಷಣದಲ್ಲಿಯೇ ಎಂಟು ನಾರಾಚಗಳಿಂದ ಮಕರಾಕ್ಷನ ಸಾರಥಿಯನ್ನು ಗಾಯಗೊಳಿಸಿದನು. ಅನಂತರ ಬಾಣಗಳಿಂದ ರಥವನ್ನು ಧ್ವಂಸಮಾಡಿ ಕುದುರೆಗಳನ್ನು ಸಂಹರಿಸಿ ಕೆಳಗುರುಳಿಸಿದನು. ಹೀಗೆ ರಥವನ್ನು ಕಳೆದುಕೊಂಡ ಮಕರಾಕ್ಷನು ನೆಲದ ಮೇಲೆ ನಿಂತನು. ಹಾಗೆ ನಿಂತ ಮಕರಾಕ್ಷನು ಸರ್ವಪ್ರಾಣಿಗಳನ್ನೂ ಭಯಗೊಳಿಸುವ ಪ್ರಲಯಕಾಲದ ಅಗ್ನಿಯಂತೆಯೇ ಕಾಣುತ್ತಿದ್ದ ಶೂಲಾಯುಧವನ್ನೆತ್ತಿಕೊಂಡನು. ಆ ಮಹಾಶೂಲವನ್ನು ಸಾಮಾನ್ಯರು ಹೊಂದಲು ಸಾಧ್ಯವಿರಲಿಲ್ಲ. ಅದು ಮಕರಾಕ್ಷನಿಗೆ ರುದ್ರದೇವನಿಂದಲೇ ಕೊಡಲ್ಪಟ್ಟಿದ್ದಿತು. ಮತ್ತೊಂದು ಸಂಹಾರಾಸ್ತ್ರದಂತೆಯೇ ಇದ್ದ ಆ ಭಯಂಕರವಾದ ಶೂಲಾಯುಧವು ಆಕಾಶದಲ್ಲಿ ಜಾಜ್ವಲ್ಯಮಾನವಾಗಿ ಪ್ರಕಾಶಿಸುತ್ತಿದ್ದಿತು. ಆ ಮಹಾಶೂಲವನ್ನು ಕಂಡು ದೇವತೆಗಳೂ ಭಯಭ್ರಾಂತರಾಗಿ ದಿಕ್ಕಾಪಾಲಾಗಿ ಓಡಿಹೋದರು. ಮಕರಾಕ್ಷನು ಪ್ರಜ್ವಲಿಸುತ್ತಿದ್ದ ಆ ಮಹಾಶೂಲವನ್ನು ಹಿಂದಕ್ಕೂ ಮುಂದಕ್ಕೂ ನಾಲ್ಕಾರು ಬಾರಿ ಆಡಿಸುತ್ತಾ ಅತ್ಯಂತಕ್ರುದ್ಧನಾಗಿ ಶ್ರೀರಾಮನ ಮೇಲೆ ರಭಸದಿಂದೆಸೆದನು. ಮಕರಾಕ್ಷನ ಕೈಯಿಂದ ಹೊರಬಂದು ತನ್ನ ಕಡೆಗೆ ರಭಸದಿಂದ ಬರುತ್ತಿದ್ದ ಜಾಜ್ವಲ್ಯಮಾನವಾಗಿದ್ದ ಆ ಶೂಲವನ್ನು ಶ್ರೀರಾಮನು ಆಕಾಶದಲ್ಲಿಯೇ ನಾಲ್ಕು ಬಾಣಗಳಿಂದ ಕತ್ತರಿಸಿ ಹಾಕಿದನು. ದಿವ್ಯವಾದ, ಸುವರ್ಣದಿಂದ ಸಮಲಂಕೃತವಾಗಿದ್ದ ಆ ಮಹಾಶೂಲವು ಶ್ರೀರಾಮನ ಬಾಣದಿಂದ ಕತ್ತರಿಸಲ್ಪಟ್ಟು ಅನೇಕ

ಮತ್ತೊಬ್ಬರು ಅವನ್ನು ಕತ್ತರಿಸುತ್ತಿದ್ದರು. ಒಬ್ಬರು ಸರ್ಪಾಸ್ತ್ರವನ್ನು ಪ್ರಯೋಗಿಸಿದರೆ ಮತ್ತೊಬ್ಬರು ಗರುಡಾಸ್ತ್ರವನ್ನು ಪ್ರಯೋಗಿಸುತ್ತಿದ್ದರು. ಹೀಗೆ ಅವರಿಬ್ಬರೂ ಮಹಾಪರಾಕ್ರಮದಿಂದ ಯುದ್ಧಮಾಡುತ್ತಿದ್ದರು.

ಚೂರುಗಳಾಗಿ–ಉಲ್ಕೆಯು ಆಕಾಶದಿಂದ ಚೂರು-ಚೂರುಗಳಾಗಿ ಭೂಮಿಯ ಮೇಲೆ ಬೀಳುವಂತೆ–ಎಲ್ಲೆಡೆಗಳಲ್ಲಿಯೂ ವ್ಯಾಪಿಸಿಕೊಂಡು ಭೂಮಿಯಲ್ಲಿ ಬಿದ್ದಿತು. ಅನಾಯಾಸವಾಗಿ ಕಷ್ಟಸಾಧ್ಯವಾದ ಕಾರ್ಯಗಳನ್ನು ಮಾಡುವ ಸಾಮರ್ಥ್ಯವನ್ನು ಹೊಂದಿದ್ದ ಶ್ರೀರಾಮನು ಶೂಲವನ್ನು ಕತ್ತರಿಸಿ ಹಾಕಲು ಆಕಾಶದಲ್ಲಿದ್ದವರೆಲ್ಲರೂ 'ಸಾಧು! ರಾಘವ! ಸಾಧು!' ಎಂದು ಶ್ರೀರಾಮನನ್ನು ಪ್ರಶಂಸೆಮಾಡಿದರು. ರುದ್ರದತ್ತವಾಗಿದ್ದ ಮಹಾಶೂಲವು ಧ್ವಂಸವಾಗಲಾಗಿ ಮಕರಾಕ್ಷನು ಮುಷ್ಟಿಯನ್ನೆತ್ತಿಕೊಂಡು 'ಎಲವೋ! ನಿಲ್ಲು! ನಿಲ್ಲು' ಎಂದೆನ್ನುತ್ತಾ ಶ್ರೀರಾಮನ ಕಡೆಗೆ ನುಗ್ಗಿದನು. ರಾಕ್ಷಸನು ತನ್ನ ಮೇಲೆ ಬೀಳಲು ರಭಸದಿಂದ ಬರುತ್ತಿರುವುದನ್ನು ಕಂಡು ಶ್ರೀರಾಮನು ಗಹ-ಗಹಿಸಿ ನಗುತ್ತಾ ಪಾವಕಾಸ್ತ್ರವನ್ನು ಧನುಸ್ಸಿಗೆ ಹೂಡಿದನು. ಮರು ಕ್ಷಣದಲ್ಲಿಯೇ ಆ ಅಸ್ತ್ರದಿಂದ ಮಕರಾಕ್ಷನನ್ನು ಪ್ರಹರಿಸಿದನು. ಆ ಮಹಾಸ್ತ್ರವು ಮಕರಾಕ್ಷನ ಹೃದಯವನ್ನು ಭೇದಿಸುತ್ತಲೇ ರಾಕ್ಷಸನು ಪ್ರಾಣತೊರೆದು ಕೆಳಗುರುಳಿದನು. ಮಕರಾಕ್ಷನು ಕೆಳಕ್ಕೆ ಬಿದ್ದುದನ್ನು ಕಂಡು ಶ್ರೀರಾಮಬಾಣಗಳಿಂದ ಪೀಡಿತರಾದ ರಾಕ್ಷಸರೆಲ್ಲರೂ ಲಂಕೆಯ ಕಡೆಗೆ ಓಡಿಹೋದರು. ವಜ್ರಾಯುಧದಿಂದ ಕತ್ತರಿಸಲ್ಪಟ್ಟ ಪರ್ವತವು ಕೆಳಕ್ಕೆ ಬೀಳುವಂತೆ–ಶ್ರೀರಾಮನ ಬಾಣಗಳ ವೇಗದಿಂದ ಹತನಾದ ಮಕರಾಕ್ಷನನ್ನು ನೋಡಿ ದೇವತೆಗಳೆಲ್ಲರೂ ಪರಮಹೃಷ್ಟರಾದರು.

೭೯ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೮೦ನೆಯ ಸರ್ಗ

ರಾವಣನ ಆಜ್ಞೆಯಂತೆ ಇಂದ್ರಜಿತುವು ಯುದ್ಧಕ್ಕೆ ಬಂದುದು : ಅವನ ಸಂಹಾರದ ವಿಷಯವಾಗಿ ರಾಮ-ಲಕ್ಷ್ಮಣರ ಸಮಾಲೋಚನೆ

ಮಕರಾಕ್ಷಂ ಹತಂ ಶ್ರುತ್ವಾ ರಾವಣಃ ಸಮಿತಿಂಜಯಃ ।
ರೋಷೇಣ ಮಹತಾವಿಷ್ಟೋ ದನ್ತಾನ್ಕಟಕಟಾಪಯನ್ ॥೧॥

ಕುಪಿತಶ್ಚ ತದಾ ತತ್ರ ಕಿಂ ಕಾರ್ಯಮಿತಿ ಚಿನ್ತಯನ್ ।
ಆದಿದೇಶಾಥ ಸಂಕ್ರುದ್ಧೋ ರಣಾಯೇನ್ದ್ರಜಿತಂ ಸುತಮ್ ॥೨॥

ಯುದ್ಧಗಳಲ್ಲಿ ಯಾವಾಗಲೂ ಜಯಗಳಿಸುತ್ತಿದ್ದ ರಾವಣನು ಖರನ ಮಗನಾದ ಮಕರಾಕ್ಷನೂ ಹತನಾದನೆಂಬ ವಾರ್ತೆಯನ್ನು ಕೇಳಿ ಕೋಪ ದಿಂದ ಕಿಡಿ-ಕಿಡಿಯಾದನು. ಕಟ-ಕಟನೆ ಹಲ್ಲುಗಳನ್ನು ಕಡಿಯುತ್ತಾ ಮುಂದೇನು ಮಾಡಬೇಕೆಂಬುದನ್ನು ಕ್ಷಣಕಾಲ ಚಿಂತಿಸಿ ತನ್ನ ಮಗನಾದ ಇಂದ್ರಜಿತುವಿಗೆ ಯುದ್ಧಕ್ಕೆ ಹೋಗುವಂತೆ ಆಜ್ಞೆಯನ್ನಿತ್ತನು :

"ಪುತ್ರ! ಬಲದಲ್ಲಿ ನೀನು ಎಲ್ಲರಿಗಿಂತಲೂ ಅಧಿಕನಾಗಿರುವೆ. ದೃಶ್ಯನಾಗಿಯೋ, ಅದೃಶ್ಯನಾಗಿಯೋ ನೀನು ಆ ರಾಮ-ಲಕ್ಷ್ಮಣರೊಡನೆ ಯುದ್ಧಮಾಡಿ ಅವರನ್ನು ಸಂಹರಿಸು. ಅಪ್ರತಿಮಪರಾಕ್ರಮಿಯಾದ ಇಂದ್ರನನ್ನೇ ನೀನು ಯುದ್ಧದಲ್ಲಿ ಜಯಿಸಿರುವೆ. ಹೀಗಿರುವಾಗ ಆ ಇಬ್ಬರು ಮಾನವಸಾಮಾನ್ಯರನ್ನು ಯುದ್ಧದಲ್ಲಿ ವಧಿಸಲಾರೆಯಾ?"

ರಾವಣನು ಹೀಗೆ ಹೇಳಲು ಇಂದ್ರಜಿತುವು ತಂದೆಯ ಆಜ್ಞೆಯನ್ನು ಶಿರಸಾವಹಿಸಿ ಯಜ್ಞಶಾಲೆಗೆ ಹೋಗಿ ವಿಧಿವತ್ತಾಗಿ ಅಗ್ನಿಯಲ್ಲಿ ಹೋಮ ಮಾಡಿದನು. ಇಂದ್ರಜಿತುವು ಹಾಗೆ ಹೋಮಮಾಡುತ್ತಿದ್ದಾಗ ಕೆಂಪಾದ ಪಾಗುಗಳನ್ನು ಧರಿಸಿದ್ದ ರಾಕ್ಷಸಸ್ತ್ರೀಯರು ಗಾಬರಿಗೊಂಡವರಾಗಿ ಅಲ್ಲಿಗೆ ಆಗಮಿಸಿದರು. ಇಂದ್ರಜಿತುವು ಹೋಮಮಾಡುತ್ತಿದ್ದಾಗ ಶಸ್ತ್ರಗಳು ಮತ್ತು ಲಾಳದ ಕಡ್ಡಿಗಳೇ ಅಗ್ನಿಗೆ ದರ್ಭೆಯ ಪರಿಸ್ತರಣಗಳಾಗಿದ್ದುವು. ಭೂತಗಳಿಗೆ ಮತ್ತು ಕಲಿಗೆ ಆಶ್ರಯವಾಗಿರುವ ತಾರೆಯ ಗಿಡದ ಕಡ್ಡಿಗಳೇ ಸಮಿತ್ತು ಗಳಾಗಿದ್ದುವು. ಇಂದ್ರಜಿತುವು ಉಟ್ಟಿದ್ದ ವಸ್ತ್ರಗಳೂ ಕೆಂಪುಬಣ್ಣದ್ದಾಗಿದ್ದುವು. ಸ್ರುಕ್-ಸ್ರುವಗಳು ಕಬ್ಬಿಣದಿಂದ ಮಾಡಲ್ಪಟ್ಟಿದ್ದುವು. ಶರಪತ್ರಗಳನ್ನೂ ಮತ್ತು ತೋಮರಗಳನ್ನೂ ಅಗ್ನಿಯ ಸುತ್ತಲೂ ಪರಿಸ್ತರಣವಾಗಿ ಹಾಕಿದ್ದನು. ಜೀವಂತವಾಗಿದ್ದ ಕಪ್ಪುಬಣ್ಣದ ಮೇಕೆಯ ತಲೆಯನ್ನು ಕಡಿದು ಆ ತಲೆಯನ್ನೇ ಅಗ್ನಿಯಲ್ಲಿ ಹೋಮಮಾಡಿದನು. ಒಂದೇ ಬಾರಿಗೆ ಮಾಡಿದ ಆ ಹೋಮದಿಂದ ಅಗ್ನಿಯು ಧೂಮರಹಿತನಾಗಿ ಪ್ರಜ್ವಲಿಸತೊಡಗಿದನು. ಧಗ-ಧಗಿಸಿ ಉರಿಯುತ್ತಿದ್ದ ಯಜ್ಞೇಶ್ವರನ ಜ್ವಾಲೆಗಳು ವಿಜಯಸೂಚಕ ಗಳಾಗಿದ್ದುವು. ಜ್ವಾಲೆಗಳು ಪ್ರದಕ್ಷಿಣಾಕಾರವಾಗಿದ್ದುವು. ಪುಟಕ್ಕೆ ಹಾಕಿದ ಚಿನ್ನದಂತೆ ಬೆಳಗುತ್ತಿದ್ದುವು. ಯಜ್ಞೇಶ್ವರನೇ ಸಾಕ್ಷಾತ್ತಾಗಿ ಮೇಲೆದ್ದು ಬಂದು ಇಂದ್ರಜಿತುವು ಸಮರ್ಪಿಸಿದ ಹವಿಸ್ಸನ್ನು ಪ್ರತಿಗ್ರಹಿಸಿದನು. ಹೀಗೆ

ಇಂದ್ರಜಿತುವು ಅಗ್ನಿಗೆ ಆಹುತಿಯನ್ನಿತ್ತು ಅಭಿಚಾರಯಜ್ಞಕ್ಕೆ ಸಂಬಂಧಿಸಿದಂತೆ ದೇವ-ದಾನವ-ರಾಕ್ಷಸರನ್ನು ತೃಪ್ತಿಗೊಳಿಸಿ ಅಂತರ್ಧಾನಹೊಂದುವ ಸಾಮರ್ಥ್ಯವನ್ನು ಹೊಂದಿದ್ದ ಶ್ರೇಷ್ಠವಾದ ರಥದಲ್ಲಿ ಕುಳಿತನು. ನಾಲ್ಕು ಕುದುರೆಗಳಿಂದಲೂ, ನಿಶಿತವಾದ ಬಾಣಗಳಿಂದಲೂ ಮತ್ತು ಧನುಸ್ಸಿನಿಂದಲೂ ಪರಿಪೂರ್ಣವಾಗಿದ್ದ ಆ ರಥವು ಶೋಭಾಯಮಾನವಾಗಿ ಕಾಣುತ್ತಿದ್ದಿತು. ಸುವರ್ಣನಿರ್ಮಿತವಾಗಿದ್ದ ಆ ರಥವು ಜಾಜ್ವಲ್ಯಮಾನವಾಗಿದ್ದಿತು. ಮೃಗಗಳ ಚಿಹ್ನೆಗಳಿಂದಲೂ, ಅರ್ಧಚಂದ್ರ-ಚಂದ್ರರ ಚಿಹ್ನೆಗಳಿಂದಲೂ ಸಮಲಂಕೃತವಾಗಿದ್ದು ಧ್ವಜವು ಪ್ರಜ್ವಲಿಸುವ ಅಗ್ನಿಯಂತೆ ಪ್ರಕಾಶಮಾನವಾಗಿದ್ದಿತು. ಅದು ಚಿನ್ನದ ಬಳೆಯಿಂದ ಕೂಡಿದ್ದು ವೈಡೂರ್ಯದಿಂದ ಸಮಲಂಕೃತವಾಗಿದ್ದಿತು.

ಸೂರ್ಯಸದೃಶವಾಗಿದ್ದ ಆ ರಥದಿಂದಲೂ ಮತ್ತು ಬ್ರಹ್ಮಾಸ್ತ್ರದಿಂದಲೂ ರಕ್ಷಿಸಲ್ಪಡುತ್ತಿದ್ದ ಮಹಾಬಲನಾದ ರಾವಣಿಯು ಶತ್ರುಗಳಿಗೆ ಎದುರಿಸಲು ಅಸಾಧ್ಯನಾಗಿದ್ದನು. ಹೀಗೆ ಸಮಿತಿಂಜಯನಾದ ಇಂದ್ರಜಿತುವು ನಿರ್ಋತಿ ದೇವತೆಗೆ ಸಂಬಂಧಿಸಿದ ಮಂತ್ರಗಳಿಂದ ಅಗ್ನಿಯಲ್ಲಿ ಹೋಮ ಮಾಡಿ ಲಂಕಾಪಟ್ಟಣದಿಂದ ಹೊರಟು ಅಂತರ್ಧಾನನಾಗುತ್ತಾ ಹೇಳಿದನು :

ಅದ್ಯ ಹತ್ವಾ ರಣೇ ಯೌ ತೌ ಮಿಥ್ಯಾಪ್ರವ್ರಾಜಿತೌ ವನೇ ।
ಜಯಂ ಪಿತ್ರೇ ಪ್ರದಾಸ್ಯಾಮಿ ರಾವಣಾಯ ರಣಾರ್ಜಿತಮ್ ॥೧೭॥

"ವ್ಯರ್ಥವಾಗಿ ಅರಣ್ಯಕ್ಕೆ ದೂಡಲ್ಪಟ್ಟಿರುವ ಆ ರಾಮ-ಲಕ್ಷ್ಮಣರಿಬ್ಬರನ್ನೂ ನಾನಿಂದು ಸಂಹರಿಸಿ ತಂದೆಯಾದ ರಾವಣನಿಗೆ ಯುದ್ಧದಿಂದ ಗಳಿಸಿದ ಜಯವನ್ನು ಸಮರ್ಪಿಸುವೆನು.

ಅದ್ಯ ನಿರ್ವಾನರಾಮುರ್ವೀಂ ಹತ್ವಾ ರಾಮಂ ಚ ಲಕ್ಷ್ಮಣಮ್ ।
ಕರಿಷ್ಯೇ ಪರಮಾಂ ಪ್ರೀತಿಂ ....

ಈಗಲೇ ನಾನು ಭೂಮಿಯನ್ನು ವಾನರರಿಂದ ರಹಿತವನ್ನಾಗಿ ಮಾಡಿ ರಾಮನನ್ನೂ ಲಕ್ಷ್ಮಣನನ್ನೂ ಸಂಹರಿಸಿ ನನ್ನ ತಂದೆಗೆ ಪರಮಪ್ರೀತಿಯನ್ನು ಉಂಟುಮಾಡುತ್ತೇನೆ"–ಹೀಗೆ ಹೇಳುತ್ತಾ ರಾವಣಿಯು ಅಂತರ್ಧಾನ ಹೊಂದಿದನು.

ಕ್ರೂರಿಯಾದ ಇಂದ್ರಜಿತುವು ರಾವಣನಿಂದ ಪ್ರೇರಿತನಾಗಿ ಪರಮ

ಕ್ರುದ್ಧನಾಗಿ ಕೈಯಲ್ಲಿ ಧನುಸ್ಸನ್ನೂ ತೀಕ್ಷ್ಣವಾದ ಬಾಣಗಳನ್ನೂ ಹಿಡಿದು ಯುದ್ಧಕ್ಕೆ ಧುಮುಕಿದನು. ರಣರಂಗದಲ್ಲಿ ರಾವಣಿಯು ಮಹಾವೀರ್ಯರಾದ, ಮೂರು ಹೆಡೆಗಳ ಸರ್ಪಗಳಂತೆ ಕಾಣುತ್ತಿದ್ದ, ಅವ್ಯಾಹತವಾಗಿ ಬಾಣಗಳ ಮಳೆಗರೆಯುತ್ತಿದ್ದ, ವಾನರಸೈನಿಕರ ಮಧ್ಯದಲ್ಲಿದ್ದ ರಾಮ-ಲಕ್ಷ್ಮಣರನ್ನು ನೋಡಿದನು. 'ಇವರೇ ಆ ರಾಮ-ಲಕ್ಷ್ಮಣರು'–ಎಂದು ಇಂದ್ರಜಿತುವು ನಿಶ್ಚಯಿಸಿ ಧನುಸ್ಸನ್ನು ಸಜ್ಜುಗೊಳಿಸಿ ಮೋಡವು ಮಳೆಗರೆಯುವಂತೆ ಸತತವಾದ ಬಾಣಗಳ ವರ್ಷದಿಂದ ಎಲ್ಲ ದಿಕ್ಕುಗಳನ್ನೂ ಮುಚ್ಚಿದನು. ಆಕಾಶದಲ್ಲಿ ನಿರಾಲಂಬವಾಗಿದ್ದ ರಥದಲ್ಲಿ ಕುಳಿತಿದ್ದ ಇಂದ್ರಜಿತುವು ರಾಮ-ಲಕ್ಷ್ಮಣರಿಗೆ ಗೋಚರನಾಗದೇ ನಿಶಿತವಾದ ಬಾಣಗಳಿಂದ ಇಬ್ಬರನ್ನೂ ಬಾಧೆಪಡಿಸುತ್ತಿದ್ದನು. ಇಂದ್ರಜಿತುವಿನ ವೇಗವಾದ ಬಾಣಗಳಿಂದ ವ್ಯಾಪ್ತರಾದ ರಾಮ-ಲಕ್ಷ್ಮಣರು ಧನುಸ್ಸುಗಳಲ್ಲಿ ಬಾಣಗಳನ್ನು ಅನುಸಂಧಾನ ಮಾಡುತ್ತಾ ದಿವ್ಯಾಸ್ತ್ರಗಳನ್ನು ಪ್ರಯೋಗಿಸತೊಡಗಿದರು. ಮಹಾಬಲರಾದ ರಾಮ-ಲಕ್ಷ್ಮಣರು ಬಾಣಗಳ ಸಮೂಹಗಳಿಂದ ಆಕಾಶವನ್ನೇ ಮುಚ್ಚುತ್ತಿದ್ದರು. ಅವರು ಬಿಡುತ್ತಿದ್ದ ಸೂರ್ಯಸದೃಶವಾದ ಅಸ್ತ್ರಗಳಿಂದ ಇಂದ್ರಜಿತುವನ್ನು ಸ್ಪರ್ಶಿಸಲು ಕೂಡ ಅವರಿಗೆ ಸಾಧ್ಯವಾಗಲಿಲ್ಲ. ಮಹಾತೇಜಸ್ವಿಯಾಗಿದ್ದ ರಾವಣಿಯು ಆಕಾಶವನ್ನು ಮುಚ್ಚುತ್ತಾ ಮಾಯೆಯಿಂದ ಧೂಮಾಂಧಕಾರವನ್ನು ಸೃಷ್ಟಿಸಿದನು. ಹಿಮದಿಂದಲೂ ಅಂಧಕಾರವನ್ನು ಸೃಷ್ಟಿಸಿ ದಿಕ್ಕುಗಳೇ ಕಾಣದಂತೆ ಮಾಡಿದನು. ಅವನು ಯುದ್ಧಮಾಡುತ್ತಾ ಆಕಾಶಮಾರ್ಗದಲ್ಲಿ ಸಂಚರಿಸುತ್ತಿದ್ದಾಗ ನಾಣೆನ ಶಬ್ದವಾಗಲೀ, ಅಂಗೈಯಿನ ಶಬ್ದವಾಗಲೀ, ರಥಚಕ್ರಗಳ ಗಡ-ಗಡಾ ಶಬ್ದವಾಗಲೀ, ಕುದುರೆಗಳ ಗೊರಸುಗಳ ಶಬ್ದವಾಗಲೀ ಕೇಳಿಬರುತ್ತಿರಲಿಲ್ಲ. ಅವನ ರೂಪವು ಕೂಡ ಕಾಣಿಸುತ್ತಿರಲಿಲ್ಲ. ದಟ್ಟವಾಗಿ ಕತ್ತಲು ಕವಿದಿದ್ದ ಆ ಸಮಯದಲ್ಲಿ ಮಹಾಬಾಹುವಾದ ರಾವಣಿಯು ಅದ್ಭುತವಾದ ಮಳೆಗರೆಯುತ್ತಿರುವಂತೆ ಬಾಣಗಳ ವೃಷ್ಟಿಯನ್ನು ರಾಮ-ಲಕ್ಷ್ಮಣರ ಮೇಲೆ ಸುರಿಸುತ್ತಿದ್ದನು. ಕ್ರುದ್ಧನಾಗಿದ್ದ ಅವನು ವರದಾನದಿಂದ ಲಭಿಸಿದ್ದ ಸೂರ್ಯಸದೃಶವಾದ ಬಾಣಗಳಿಂದ ಶ್ರೀರಾಮನ ಎಲ್ಲ ಅಂಗಗಳನ್ನೂ ಗಾಯಗೊಳಿಸಿದನು.

ಪರ್ವತಗಳ ಮೇಲೆ ಬೀಳುವ ವರ್ಷಧಾರೆಗಳಂತೆ ರಾಮ-ಲಕ್ಷ್ಮಣರ

ಮೇಲೆ ಇಂದ್ರಜಿತುವಿನ ಬಾಣಗಳು ಸತತವಾಗಿ ಬೀಳುತ್ತಿದ್ದುವು. ಆ ಸಮಯದಲ್ಲಿ ನರಶ್ರೇಷ್ಠರಾದ ರಾಮ-ಲಕ್ಷ್ಮಣರು ಕೂಡ ಸುವರ್ಣಮಯ ವಾದ ಗರಿಗಳಿಂದ ಕೂಡಿದ್ದ ತೀಕ್ಷ್ಣವಾದ ಬಾಣಗಳನ್ನು ಬಿಡಲು ಪ್ರಾರಂಭಿಸಿದರು. ಚಿನ್ನದ ಮತ್ತು ರಣಹದ್ದಿನ ರೆಕ್ಕೆಗಳಿಂದ ಕೂಡಿದ್ದ, ರಾಮ-ಲಕ್ಷ್ಮಣರಿಂದ ಬಿಡಲ್ಪಡುತ್ತಿದ್ದ ಆ ಬಾಣಗಳು ಅಂತರಿಕ್ಷದಲ್ಲಿದ್ದ ರಾವಣಿಯ ಬಳಿಗೆ ಸಾರಿ ಅವನನ್ನು ಗಾಯಗೊಳಿಸಿ ರಕ್ತದಿಂದ ನೆನೆದು ಕೆಳಕ್ಕೆ ಬೀಳುತ್ತಿದ್ದುವು. ಇಂದ್ರಜಿತುವು ಬಿಡುತ್ತಿದ್ದ ಬಾಣಗಳ ಸಮೂಹಗಳಿಂದ ಪ್ರಕಾಶಮಾನರಾಗಿ ಕಾಣುತ್ತಿದ್ದ ರಾಮ-ಲಕ್ಷ್ಮಣರು ತಮ್ಮ ಮೇಲೆ ಸತತವಾಗಿ ಬೀಳುತ್ತಿದ್ದ ಬಾಣಗಳ ಸಮೂಹಗಳನ್ನು ಭಲ್ಲಗಳೆಂಬ ಅನೇಕ ಬಾಣಗಳಿಂದ ಕತ್ತರಿಸಿಹಾಕುತ್ತಿದ್ದರು. ಯಾವ ದಿಕ್ಕಿನಿಂದ ಇಂದ್ರಜಿತುವಿನ ಬಾಣಗಳು ಬರುತ್ತಿದ್ದುವೋ ಅದೇ ದಿಕ್ಕಿಗೇ ರಾಮ-ಲಕ್ಷ್ಮಣರು ಶ್ರೇಷ್ಠವಾದ ಅಸ್ತ್ರಗಳನ್ನು ಬಿಡುತ್ತಿದ್ದರು. ಆದರೆ ರಾವಣಿಯು ಮಾತ್ರ ಒಂದೇ ದಿಕ್ಕಿನಲ್ಲಿ ನಿಂತು ಯುದ್ಧಮಾಡುತ್ತಿರಲಿಲ್ಲ. ಅತಿರಥನಾದ, ಬಾಣಗಳನ್ನು ಬಹಳ ಬೇಗಬಿಡುವ ಸಾಮರ್ಥ್ಯವನ್ನು ಹೊಂದಿದ್ದ ರಾವಣಿಯು ಎಲ್ಲ ದಿಕ್ಕುಗಳಲ್ಲಿಯೂ ಸಂಚರಿಸುತ್ತಾ ನಿಶಿತವಾದ ಬಾಣಗಳಿಂದ ರಾಮ-ಲಕ್ಷ್ಮಣರನ್ನು ಬಹಳವಾಗಿ ಗಾಯಗೊಳಿಸಿದನು. ಚಿನ್ನದ ರೆಕ್ಕೆಗಳನ್ನು ಹೊಂದಿದ್ದ, ಸುದೃಢವಾಗಿದ್ದ ಬಾಣಗಳಿಂದ ಪ್ರಹರಿಸಲ್ಪಟ್ಟ ರಾಮ-ಲಕ್ಷ್ಮಣರು ಹೂದುಂಬಿದ ಮುತ್ತುಗದ ಮರಗಳಂತೆಯೇ ಕಾಣುತ್ತಿದ್ದರು. ಮೋಡಕವಿದ ಸೂರ್ಯನಂತೆ ಆ ಸಮಯದಲ್ಲಿ ಅದೃಶ್ಯನಾಗಿದ್ದ ಇಂದ್ರಜಿತುವಿನ ವೇಗಗತಿಯನ್ನಾಗಲೀ, ರೂಪವನ್ನಾಗಲೀ, ಧನುಸ್ಸನ್ನಾಗಲೀ, ಬಾಣಗಳನ್ನಾಗಲೀ ಯಾರಿಂದಲೂ ತಿಳಿಯಲು ಸಾಧ್ಯವಾಗುತ್ತಿರಲಿಲ್ಲ. ಇಂದ್ರಜಿತುವಿನ ಬಾಣಗಳಿಂದ ಪ್ರಹರಿಸಲ್ಪಟ್ಟ ನೂರಾರು ವಾನರರು ಪ್ರಾಣಗಳನ್ನು ತೊರೆದು ಕೆಳ ಗುರುಳಿದರು.

ಬಳಿಕ ಲಕ್ಷ್ಮಣನು ಕ್ರುದ್ಧನಾಗಿ ರಾಮನಿಗೆ ಹೇಳಿದನು :

ಬ್ರಾಹ್ಮಮಸ್ತ್ರಂ ಪ್ರಯೋಕ್ಷ್ಯಾಮಿ ವಧಾರ್ಥಂ ಸರ್ವರಕ್ಷಸಾಮ್ ॥೩೭॥

"ಅಣ್ಣ! ಸಮಸ್ತರಾಕ್ಷಸರ ಸಂಹಾರಕ್ಕಾಗಿ ನಾನೀಗಲೇ ಬ್ರಹ್ಮಾಸ್ತ್ರವನ್ನು ಪ್ರಯೋಗಿಸುತ್ತೇನೆ."

ಶುಭಲಕ್ಷಣನಾದ ಲಕ್ಷ್ಮಣನ ಆ ಮಾತನ್ನು ಕೇಳಿ ಶ್ರೀರಾಮನು ಹೇಳಿದನು:

"ಲಕ್ಷ್ಮಣ! ಒಬ್ಬನ ನಿಮಿತ್ತವಾಗಿ ಪೃಥ್ವಿಯಲ್ಲಿರುವ ರಾಕ್ಷಸರೆಲ್ಲರನ್ನೂ ಸಂಹರಿಸುವುದು ಯೋಗ್ಯವಲ್ಲ.

ಅಯುಧ್ಯಮಾನಂ ಪ್ರಚ್ಛನ್ನಂ ಪ್ರಾಞ್ಜಲಿಂ ಶರಣಾಗತಮ್ ।
ಪಲಾಯನ್ತಂ ಪ್ರಮತ್ತಂ ವಾ ನ ಹನ್ತುಂ ತ್ವಮಿಹಾರ್ಹಸಿ ॥೩೯॥

ಯುದ್ಧಮಾಡದೇ ಇರುವವನನ್ನೂ, ಅವಿತುಕೊಂಡಿರುವವನನ್ನೂ, ಕೈಜೋಡಿಸಿಕೊಂಡು ಶರಣಾಗತನಾಗಿ ಬಂದವನನ್ನೂ, ಪಲಾಯನಮಾಡುತ್ತಿರುವವನನ್ನೂ, ಹುಚ್ಚನಾಗಿರುವವನನ್ನೂ ಸಂಹರಿಸುವುದು ಉಚಿತವಲ್ಲ.

ಆದುದರಿಂದ ನಾವೀಗ ಇವನ ವಧೆಗೆ ಮಾತ್ರ ಪ್ರಯತ್ನಿಸೋಣ. ಸರ್ಪಗಳಂತೆ ಮಹಾಭಯಂಕರವಾದ ಅತ್ಯಂತವೇಗಶಾಲಿಗಳಾದ ಅಸ್ತ್ರಗಳನ್ನು ಪ್ರಯೋಗಿಸೋಣ.

ಮಾಯಾಯುದ್ಧದಲ್ಲಿ ಚತುರನಾದ, ಕ್ಷುದ್ರನಾದ, ಅಂತರ್ಧಾನದ ಶಕ್ತಿಯಿಂದ ರಥವನ್ನೂ ಕೂಡ ಇತರರಿಗೆ ಕಾಣಿಸದಂತೆ ಮಾಡಿರುವ ಆ ರಾಕ್ಷಸನನ್ನೇನಾದರೂ ಕಪಿನಾಯಕರು ನೋಡಿದ್ದೇ ಆದರೆ ಅವನನ್ನು ಖಂಡಿತವಾಗಿಯೂ ಸಂಹರಿಸುತ್ತಾರೆ.

ಮೂಢನಾದ ಇಂದ್ರಜಿತುವು ಭೂಮಿಗಿಳಿದು ಬಂದರೂ, ಸ್ವರ್ಗಕ್ಕೇ ಹೊರಟುಹೋದರೂ, ರಸಾತಲವನ್ನೇ ಪ್ರವೇಶಿಸಿದರೂ, ಆಕಾಶದಲ್ಲಿಯೇ ಸ್ಥಿರವಾಗಿ ನಿಂತರೂ, ಇದೇ ರೀತಿಯಲ್ಲಿ ನಿಗೂಢವಾಗಿಯೇ ಯುದ್ಧಮಾಡುತ್ತಿದ್ದರೂ ನಾನು ಬಿಡಲಿರುವ ಮಹಾಸ್ತ್ರಗಳಿಂದ ದಗ್ಧನಾಗಿ ಪ್ರಾಣತೊರೆದು ಭೂಮಿಯಲ್ಲಿ ಬೀಳುವನು."

ಹೀಗೆ ರಘುಶ್ರೇಷ್ಠನಾದ, ಪ್ಲವಗಶ್ರೇಷ್ಠರಿಂದ ಪರಿವೃತನಾಗಿದ್ದ, ಮಹಾತ್ಮನಾದ ಶ್ರೀರಾಮನು ಮಹಾರ್ಥಯುಕ್ತವಾದ ಮಾತನ್ನು ಹೇಳಿ ಭಯಂಕರನಾದ ಕ್ರೂರಕರ್ಮನಾದ ರಾಕ್ಷಸನನ್ನು ವಧಿಸುವ ಸಲುವಾಗಿ ಅತ್ತಲಿತ್ತ ನೋಡತೊಡಗಿದನು.

೮೦ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೮೧ನೆಯ ಸರ್ಗ

ಇಂದ್ರಜಿತುವಿನಿಂದ ಮಾಯಾಸೀತೆಯ ಸಂಹಾರ

ವಿಜ್ಞಾಯ ತು ಮನಸ್ತಸ್ಯ ರಾಘವಸ್ಯ ಮಹಾತ್ಮನಃ ।
ಸಂನಿವೃತ್ಯಾಹವಾತ್ತಸ್ಮಾತ್ಸಂವಿವೇಶ ಪುರಂ ತತಃ ॥೧॥

ಇಂದ್ರಜಿತುವು ಮಹಾತ್ಮನಾದ ರಾಘವನ ಮನಸ್ಸಿನ ಅಭಿಪ್ರಾಯವನ್ನು ತಿಳಿದು ಯುದ್ಧದಿಂದ ವಿರಮಿತನಾಗಿ ಲಂಕಾಪಟ್ಟಣವನ್ನು ಪ್ರವೇಶಿಸಿದನು.

ಅಲ್ಲಿಗೆ ಹೋಗುತ್ತಲೇ ಇಂದ್ರಜಿತುವು ವೇಗಶಾಲಿಗಳಾದ ರಾಕ್ಷಸರನೇಕರು ಯುದ್ಧದಲ್ಲಿ ಮಡಿದುದನ್ನು ಸ್ಮರಿಸಿ ಅತ್ಯಂತಕ್ರುದ್ಧನಾಗಿ ಪುನಃ ಯುದ್ಧ ಮಾಡುವ ಸಲುವಾಗಿ ನಗರದಿಂದ ಹೊರಬಂದನು. ಆ ಸಮಯದಲ್ಲಿ ಅವನ ಕಣ್ಣುಗಳು ಕೆಂಪಾಗಿದ್ದುವು. ರಾಕ್ಷಸರಿಂದ ಪರಿವೃತನಾಗಿದ್ದ, ಮಹಾವೀರ್ಯನಾದ, ದೇವಕಂಟಕನಾದ, ಪುಲಸ್ತ್ಯವಂಶೀಯನಾದ ಇಂದ್ರಜಿತುವು ಪಶ್ಚಿಮದ್ವಾರದ ಕಡೆಯಿಂದ ಹೊರಟನು.

ರಾಮ-ಲಕ್ಷ್ಮಣರು ಯುದ್ಧಸನ್ನದ್ಧರಾಗಿ ನಿಂತಿರುವುದನ್ನು ನೋಡಿ ಮಾಯಾವಿದ್ಯೆಯನ್ನು ಪ್ರಕಟಿಸಲು ಉಪಕ್ರಮಿಸಿದನು. ಮಹಾಸೈನ್ಯವು ಸುತ್ತುವರಿದು ನಿಂತಿರುವಾಗ ಮಾಯಾಸೀತೆಯನ್ನು ರಥದಲ್ಲಿರಿಸಿ ಅವಳನ್ನು ಅವರೆಲ್ಲರ ಸಮ್ಮುಖದಲ್ಲಿ ವಧಿಸಬೇಕೆಂದು ಇಂದ್ರಜಿತುವು ಸಮಾಲೋಚಿಸಿದನು. ದುರ್ಮತಿಯಾದ ರಾವಣಿಯು ಎಲ್ಲರನ್ನೂ ವಿಮೋಹಗೊಳಿಸುವ ಸಲುವಾಗಿ ಹೀಗೆ ನಿಶ್ಚಯಿಸಿ ವಾನರಸೈನಿಕರಿಗೆ ಅಭಿಮುಖವಾಗಿ ಹೋದನು. ಇಂದ್ರಜಿತುವು ಯುದ್ಧಕ್ಕಾಗಿ ತಮ್ಮ ಕಡೆಗೆ ಬರುತ್ತಿರುವುದನ್ನು ಕಂಡು ಕ್ರುದ್ಧರಾದ ವಾನರರು ಅವನೊಡನೆ ಯುದ್ಧಮಾಡುವ ಸಲುವಾಗಿ ಬಂಡೆಗಳನ್ನೆತ್ತಿಕೊಂಡು ದಾಳಿಮಾಡಿದರು. ಕಪಿಶ್ರೇಷ್ಠನಾದ ಹನುಮಂತನು ಎದುರಿಸಲು ಅಸಾಧ್ಯವಾದ ಪರ್ವತದ ಮಹಾಶಿಖರವನ್ನೆತ್ತಿಕೊಂಡು ಕಪಿಸೈನಿಕರ ಮುಂದೆ ಹೊರಟನು. ವಾನರಸೈನ್ಯದ ಮುಂಭಾಗದಲ್ಲಿದ್ದ ಹನುಮಂತನು ಇಂದ್ರಜಿತುವಿನ ರಥದಲ್ಲಿ ಆನಂದರಹಿತಳಾಗಿ, ಏಕವೇಣೀಧರಳಾಗಿ, ಪರಮ ದುಃಖಿತೆಯಾಗಿ ಕುಳಿತಿದ್ದ ಸೀತಾದೇವಿಯನ್ನು ನೋಡಿದನು. ನಿರಂತರ

ವಾದ ಉಪವಾಸದ ಕಾರಣದಿಂದ ಅವಳು ಅತ್ಯಂತಕೃಶಳಾಗಿದ್ದಳು. ಅವಳ ಶರೀರದ ಮೇಲೆ ಮಲಿನವಾದ, ಒಗೆಯದೇ ಇದ್ದ ಒಂದೇ ವಸ್ತ್ರವಿದ್ದಿತು. ಅವಳ ಅಂಗಾಂಗಗಳಲ್ಲಿಯೂ ಧೂಳು ಮತ್ತು ಕೆಸರು ತುಂಬಿದ್ದಿತು. ಆದರೂ ಅವಳು ಸುಂದರಿಯಂತೆ ಕಾಣುತ್ತಿದ್ದಳು. ಅಂತಹ ರಘುವೀರನಿಗೆ ಅತ್ಯಂತಪ್ರಿಯೆಯಾದ ಸೀತೆಯನ್ನು ಹನುಮಂತನು ಇಂದ್ರಜಿತುವಿನ ರಥದಲ್ಲಿ ನೋಡಿದನು. ಹನುಮಂತನು ಸ್ವಲ್ಪಹೊತ್ತಿನವರೆಗೆ ಅವಳನ್ನೇ ನೋಡುತ್ತಿದ್ದನು. ಜಾನಕಿಯನ್ನು ಅವನು ಕೆಲವು ದಿವಸಗಳ ಹಿಂದೆಯೇ ನೋಡಿದ್ದನಾದ ಕಾರಣ ಇಂದ್ರಜಿತುವಿನ ರಥದಲ್ಲಿ ಕುಳಿತಿರುವವಳು ಸೀತೆಯೇ ಎಂದು ಗುರುತಿಸಿದನು. ಶೋಕಪೀಡಿತಳಾಗಿದ್ದ, ಆನಂದದಿಂದ ರಹಿತಳಾಗಿದ್ದ, ಕೃಶಳಾಗಿದ್ದ, ರಾಕ್ಷಸೇಂದ್ರನ ಮಗನಾದ ಇಂದ್ರಜಿತುವಿನ ರಥವನ್ನು ಆಶ್ರಯಿಸಿ ಕುಳಿತಿದ್ದ, ದೀನೆಯಾದ ಸೀತಾದೇವಿಯನ್ನು ನೋಡಿ ವಾನರನಾಯಕರಿಗೆ ಹೇಳಿದನು :

"ಈತನು ಸೀತಾದೇವಿಯನ್ನು ಇಲ್ಲಿಗೆ ಕರೆತಂದ ಕಾರಣವಾದರೂ ಏನಿರಬಹುದು?"

ಹೀಗೆ ಹೇಳಿ ಮಾರುತಿಯು ಅದನ್ನೇ ಮನಸ್ಸಿನಲ್ಲಿ ತರ್ಕಿಸುತ್ತಾ ವಾನರನಾಯಕರೊಡನೆ ರಾವಣಿಯನ್ನು ಮುತ್ತಿಗೆಹಾಕಿದನು. ತನ್ನ ಮೇಲೆರಗಿ ಬಂದ ಆ ವಾನರಮಹಾಸೈನ್ಯವನ್ನು ನೋಡಿ ಪರಮಕ್ರುದ್ಧನಾದ ರಾವಣಿಯು ಕತ್ತಿಯನ್ನು ಒರೆಯಿಂದ ಹೊರತೆಗೆದು ಮಾಯಾ ಸೀತೆಯ ಮುಡಿಯನ್ನು ಹಿಡಿದೆಳೆದನು. ಮಾಯಾಕಲ್ಪಿತಳಾದ ಸೀತೆಯು ಆಗ ಹಾ ರಾಮ! ಹಾ ರಾಮ! ಎಂದು ಕೂಗಿಕೊಳ್ಳುತ್ತಿದ್ದಳು. ವಾನರರೆಲ್ಲರೂ ನೋಡುತ್ತಿದ್ದಂತೆಯೇ ಇಂದ್ರಜಿತುವು ಹಾಗೆ ಕಿರುಚಿಕೊಳ್ಳುತ್ತಿದ್ದ ಹೆಂಗಸನ್ನು ಚೆನ್ನಾಗಿ ಪ್ರಹರಿಸಿದನು. ಇಂದ್ರಜಿತುವು ಸೀತಾದೇವಿಯ ಮುಡಿಯನ್ನು ಹಿಡಿದೆಳೆಯುತ್ತಿರುವುದನ್ನು ಕಂಡು ಹನುಮಂತನು ಪರಮ ದುಃಖಿತನಾದನು. ಅವನ ಕಣ್ಣುಗಳಿಂದ ಕಂಬನಿಯು ಧಾರಾಕಾರವಾಗಿ ಸುರಿಯತೊಡಗಿತು. ಮರುಕ್ಷಣದಲ್ಲಿಯೇ ಸರ್ವಾಂಗಸುಂದರಿಯಾದ ಶ್ರೀರಾಮನ ಪ್ರಿಯಭಾರ್ಯೆಯಾದ ಸೀತಾದೇವಿಯು ಅಂತಹ ಅವಸ್ಥೆಯಲ್ಲಿರುವುದನ್ನು ನೋಡಿ ಮಾರುತಿಯು ಪರಮಕ್ರುದ್ಧನಾಗಿ ಅತಿಕಠೋರವಾದ ಈ ಮಾತನ್ನು ರಾವಣಿಗೆ ಹೇಳಿದನು :

“ದುರಾತ್ಮನೇ! ನಿನ್ನ ವಿನಾಶಕ್ಕಾಗಿಯೇ ನೀನು ಸಾಧ್ವಿಯಾದ ಸೀತಾದೇವಿಯ ಮುಡಿಯನ್ನು ಹಿಡಿದಿರುವೆ. ಬ್ರಹ್ಮರ್ಷಿಗಳ ಕುಲದಲ್ಲಿಯೇ ಹುಟ್ಟಿದ್ದರೂ ನೀನು ರಾಕ್ಷಸಜಾತಿಯ ಸ್ವಭಾವವನ್ನು ಆಶ್ರಯಿಸಿರುವೆ. ಕ್ರೂರಿಯೇ! ದುರ್ವೃತ್ತನೇ! ಕ್ಷುದ್ರನೇ! ಪಾಪಪರಾಕ್ರಮಿಯೇ! ಅನಾರ್ಯನೇ! ಇಂತಹ ಅನಾರ್ಯಬುದ್ಧಿಯವನಾದ ನಿನಗೆ ಧಿಕ್ಕಾರವಿರಲಿ. ನಿರ್ಘೃಣನೇ! ಇಂತಹ ನೀಚಕಾರ್ಯವನ್ನು ಮಾಡುತ್ತಿರುವ ನಿನಗೆ ಕರುಣೆಯೆಂಬುದೇ ಇಲ್ಲವಾಗಿದೆ. ದಯಾಹೀನನೇ! ಬಡಪಾಯಿಯಾದ ಈ ಮಿಥಿಲೇಶ ಕುವರಿಯು ಮನೆಯಿಂದಲೂ ಭ್ರಷ್ಟಳಾಗಿದ್ದಾಳೆ. ರಾಜ್ಯದಿಂದಲೂ ಭ್ರಷ್ಟಳಾಗಿದ್ದಾಳೆ. ಶ್ರೀರಾಮನ ಕೈತಪ್ಪಿಹೋಗಿದ್ದಾಳೆ. ಇವಳನ್ನು ನೀನು ಇಷ್ಟು ನಿರ್ದಯನಾಗಿ ಹಿಂಸಿಸುವುದಕ್ಕೆ ಇವಳು ಯಾವ ಅಪರಾಧವನ್ನು ನಿನಗೆ ಮಾಡಿರುವಳು? ವಧೆಗೆ ಯೋಗ್ಯನಾದವನೇ! ನೀಚನೇ! ಸೀತೆಯನ್ನು ಕೊಂದನಂತರ ನೀನು ಹೆಚ್ಚು ಕಾಲ ಬದುಕಿರಲಾರೆ. ಈಗ ನೀನು ನನ್ನ ಕೈಗೆ ಸಿಕ್ಕಿಹಾಕಿಕೊಂಡಿರುವೆ. ನೀನೀಗ ಇಲ್ಲಿಯೇ ಈ ಕ್ಷಣದಲ್ಲಿಯೇ ಜೀವವನ್ನು ತೊರೆದು ಲೋಕವಧ್ಯರಾದ ಸ್ತ್ರೀಸಂಹಾರಕರಿಗೆ ಪ್ರಾಪ್ತವಾಗುವ ಕುತ್ಸಿತವಾದ ಘೋರನರಕಲೋಕಗಳನ್ನು ಹೊಂದಲಿರುವೆ.”

ಶಿಲಾ-ವೃಕ್ಷಗಳೇ ಮೊದಲಾದ ಆಯುಧಗಳನ್ನು ಧರಿಸಿದ್ದ ವಾನರ ಸೈನಿಕರಿಂದ ಪರಿವೃತನಾಗಿದ್ದ ಹನುಮಂತನು ಹೀಗೆ ಹೇಳುತ್ತಾ ಅತ್ಯಂತ ಕ್ರುದ್ಧನಾಗಿ ರಾಕ್ಷಸೇಂದ್ರನ ಮಗನಾದ ರಾವಣಿಯ ಬಳಿಗೆ ಧಾವಿಸಿದನು.

ಮಹಾವೀರ್ಯಸಂಪನ್ನವಾಗಿದ್ದ ವಾನರಸೈನ್ಯವು ತನ್ನನ್ನು ಆಕ್ರಮಿಸಲು ಬರುತ್ತಿರುವುದನ್ನು ನೋಡಿ ಇಂದ್ರಜಿತುವು ಭಯಂಕರಕೋಪಿಷ್ಠರಾದ ರಾಕ್ಷಸಸೈನಿಕರ ಮೂಲಕವಾಗಿ ವಾನರಸೈನ್ಯವನ್ನು ಮುಂದೆ ಬಾರದ ರೀತಿ ಯಲ್ಲಿ ತಡೆದನು. ಇಂದ್ರಜಿತುವು ಆ ವಾನರಸೈನ್ಯವನ್ನು ಸಾವಿರಾರು ಬಾಣ ಗಳ ಮೂಲಕವಾಗಿ ಧ್ವಂಸಮಾಡಿ ಹರಿಶ್ರೇಷ್ಠನಾದ ಹನುಮಂತನಿಗೆ ಹೇಳಿದನು:

“ವಾನರ! ಸುಗ್ರೀವನೂ, ರಾಮನೂ ಮತ್ತು ನೀನೂ ಯಾವಳ ಸಲು ವಾಗಿ ಇಲ್ಲಿಗೆ ಬಂದಿರುವಿರೋ–ಆ ಸೀತೆಯನ್ನು ಈಗಲೇ ನೀನು ನೋಡು

ತ್ತಿರುವಂತೆಯೇ ಸಂಹರಿಸುವೆನು. ಇವಳನ್ನು ಸಂಹರಿಸಿದನಂತರ ರಾಮ-ಲಕ್ಷ್ಮಣರನ್ನೂ, ನಿನ್ನನ್ನೂ, ಸುಗ್ರೀವನನ್ನೂ, ಕೊನೆಗೆ ಅನಾರ್ಯನಾದ ಆ ವಿಭೀಷಣನನ್ನೂ ಸಂಹರಿಸುವೆನು.



ನ ಹನ್ತವ್ಯಾಃ ಸ್ತ್ರಿಯಶ್ಚೇತಿ ಯದ್ಬ್ರವೀಷಿ ಪ್ಲವಂಗಮ ।
ಪೀಡಾಕರಮಮಿತ್ರಾಣಾಂ ಯತ್ಸ್ಯಾತ್ಕರ್ತವ್ಯಮೇವ ತತ್ ॥೨೮॥

'ಸ್ತ್ರೀಯರನ್ನು ಕೊಲ್ಲಬಾರದು' 'ಇದು ಧರ್ಮಸಮ್ಮತವಲ್ಲ'– ಮುಂತಾಗಿ ಹೇಳುತ್ತಿರುವೆಯಲ್ಲವೇ? ಶತ್ರುಗಳಿಗೆ ತೊಂದರೆಯಾಗುವ ಕಾರ್ಯವು ಯಾವುದೇ ಆಗಿದ್ದರೂ ಅದನ್ನು ಅವಶ್ಯವಾಗಿ ಮಾಡಲೇಬೇಕು. ಇದೇ ನನ್ನ ಕರ್ತವ್ಯವೂ ಆಗಿದೆ."

ಹನುಮಂತನಿಗೆ ಹೀಗೆ ಹೇಳಿ ಇಂದ್ರಜಿತುವು 'ಹಾ ರಾಮ! ಹಾ

ರಾಮ'! ಎಂದು ಕೂಗಿಕೊಳ್ಳುತ್ತಾ ಗೋಳಾಡುತ್ತಿದ್ದ ಮಾಯಾಸೀತೆಯನ್ನು ನಿಶಿತವಾದ ಕತ್ತಿಯಿಂದ ತಾನೇ ಕತ್ತರಿಸಿಹಾಕಿದನು. ಯಜ್ಞೋಪವೀತದ ಮಾರ್ಗದಿಂದ (ಮೂಲೆ-ಮೂಲೆಯಾಗಿ) ಕತ್ತರಿಸಲ್ಪಟ್ಟು ಸ್ಥೂಲವಾದ ಕಟಿ ಪ್ರದೇಶವನ್ನು ಹೊಂದಿದ್ದ, ಪ್ರಿಯದರ್ಶನೆಯಾದ, ತಪಸ್ವಿನಿಯಾದ ಸೀತಾ ದೇವಿಯು ಭೂಮಿಯಲ್ಲಿ ಬಿದ್ದಳು.

ಮಾಯಾಸೀತೆಯನ್ನು ಸಂಹರಿಸಿದನಂತರ ಇಂದ್ರಜಿತುವು ಪುನಃ ಹನು ಮಂತನಿಗೆ ಹೇಳಿದನು :

"ವಾನರನೇ! ಖಡ್ಗದಿಂದ ಕತ್ತರಿಸಲ್ಪಟ್ಟು ಭೂಮಿಯಲ್ಲಿ ಬಿದ್ದಿರುವ ರಾಮನ ಪ್ರೇಯಸಿಯಾದ ಸೀತೆಯನ್ನು ನೋಡು. ನಿಮಗೆ ಬೇಕಾಗಿದ್ದ ಸೀತಾದೇವಿಯನ್ನು ತುಂಡರಿಸಿಯಾಯಿತು. ಮುಂದಿನ ನಿಮ್ಮ ಯುದ್ಧಪರಿ ಶ್ರಮವೆಲ್ಲವೂ ವ್ಯರ್ಥವೇ ಸರಿ."

ಹೀಗೆ ಇಂದ್ರಜಿತುವು ವಿಶಾಲವಾದ ಖಡ್ಗದಿಂದ ಮಾಯಾಸೀತೆಯನ್ನು ಸಂಹರಿಸಿದನಂತರ ರಥದಲ್ಲಿ ಕುಳಿತು ಗಟ್ಟಿಯಾಗಿ ಸಿಂಹನಾದಮಾಡಿದನು. ಹತ್ತಿರದಲ್ಲಿಯೇ ಇದ್ದ ವಾನರರೂ ಇಂದ್ರಜಿತುವಿನ ಗರ್ಜನೆಯನ್ನು ಕೇಳಿದರು. ಇಂದ್ರಜಿತುವು ದುರ್ಗಮವಾದ ರಥದಲ್ಲಿ ಕುಳಿತು ಬಾಯನ್ನು ಅಗಲವಾಗಿ ಬಿಟ್ಟುಕೊಂಡು ಸಿಂಹನಾದಗಳನ್ನು ಮಾಡುತ್ತಿದ್ದನು. ಹೀಗೆ ದುರ್ಮತಿಯಾದ ಇಂದ್ರಜಿತುವು ಮಾಯಾಸೀತೆಯನ್ನು ಕೊಂದುದಕ್ಕಾಗಿಯೇ ಪರಮ ಹೃಷ್ಟನಾದನು. ಪರಮಹೃಷ್ಟನಾಗಿ ಗಹ-ಗಹಿಸಿ ನಗುತ್ತಾ ಗರ್ಜನೆಮಾಡುತ್ತಿದ್ದ ಇಂದ್ರಜಿತುವನ್ನು ನೋಡಿದ ವಾನರರು ಅತಿದುಃಖಿತರಾಗಿ ಪಲಾಯನ ಮಾಡಿದರು.

೮೧ನೆಯ ಸರ್ಗವು ಮುಗಿಯಿತು.

ಹನುಮಂತನ ಮುಂದಾಳುತನದಲ್ಲಿ ವಾನರ-ರಾಕ್ಷಸರ ಯುದ್ಧ: ಹನುಮಂತನು ಶ್ರೀರಾಮನ ಬಳಿಗೆ ಹೋದುದು : ಇಂದ್ರಜಿತುವು ನಿಕುಂಭಿಲಾಮಂದಿರಕ್ಕೆ ಹೋಗಿ ಹೋಮಮಾಡಿದುದು

ಶ್ರುತ್ವಾ ತು ಭೀಮನಿರ್ಹ್ರಾದಂ ಶಕ್ರಾಶನಿಸಮಸ್ವನಮ್ ।
ವೀಕ್ಷ್ಯಮಾಣಾ ದಿಶಃ ಸರ್ವಾ ದುದ್ರುವುರ್ವಾನರರ್ಷಭಾಃ ॥೧॥

ಇಂದ್ರನ ವಜ್ರಾಯುಧದ ಶಬ್ದಕ್ಕೆ ಸಮಾನವಾಗಿದ್ದ ಅತ್ಯಂತಭಯಂಕರವಾಗಿದ್ದ ಸಿಂಹನಾದವನ್ನು ಕೇಳಿ ಸುತ್ತಲೂ ನೋಡುತ್ತಾ ವಾನರಶ್ರೇಷ್ಠರು ಪಲಾಯನಮಾಡತೊಡಗಿದರು.

ವಿಷಣ್ಣವಾದ ಮುಖಗಳಿಂದ ಕೂಡಿದ್ದ, ದೀನರಾಗಿ ಭಯಗೊಂಡಿದ್ದ ಮತ್ತು ಪಲಾಯನಮಾಡುತ್ತಿದ್ದ ಆ ಎಲ್ಲ ಕಪಿನಾಯಕರಿಗೂ ವಾಯುಪುತ್ರನಾದ ಹನುಮಂತನು ಹೇಳಿದನು :

"ಪ್ಲವಂಗಮರೇ! ಯುದ್ಧವನ್ನೂ ಉತ್ಸಾಹವನ್ನೂ ತೊರೆದು ವಿಷಣ್ಣವದನರಾಗಿ ಹೀಗೇಕೆ ಓಡಿಹೋಗುತ್ತಿರುವಿರಿ? ನಿಮ್ಮ ಶೌರ್ಯವೆಲ್ಲವೂ ಎಲ್ಲಿಗೆ ಹೋಯಿತು? ನಾನು ಯುದ್ಧದಲ್ಲಿ ಮುನ್ನುಗ್ಗಿ ಹೋಗುತ್ತೇನೆ. ನೀವೆಲ್ಲರೂ ನನ್ನನ್ನು ಅನುಸರಿಸಿ ಬನ್ನಿರಿ. ಶ್ರೇಷ್ಠವಾದ ಕುಲದಲ್ಲಿ ಹುಟ್ಟಿರುವ ಮತ್ತು ಶೌರ್ಯ-ವೀರ್ಯಸಂಪನ್ನರಾಗಿರುವ ನಿಮಗೆ ಪಲಾಯನವೆಂಬುದು ಶೋಭಿಸುವುದಿಲ್ಲ."

ಧೀಮಂತನಾದ ಹನುಮಂತನ ಆ ಮಾತಿನಿಂದ ವಾನರರು ಪರಮಹೃಷ್ಟರಾಗಿ ಶತ್ರುವಿನ ವಿಷಯದಲ್ಲಿ ಪರಮಕ್ರುದ್ಧರಾಗಿ ಪರ್ವತಶಿಖರಗಳನ್ನೂ, ವೃಕ್ಷಗಳನ್ನೂ ಎತ್ತಿಕೊಂಡು ಹನುಮಂತನ ಹಿಂದೆ ಯುದ್ಧಕ್ಕೆ ಹೊರಟರು. ವಾನರಶ್ರೇಷ್ಠರು ಹನುಮಂತನನ್ನು ಸುತ್ತುವರಿದು ಅವನನ್ನೇ ಅನುಸರಿಸಿ ಹೋಗಿ ಗರ್ಜನೆಮಾಡುತ್ತಾ ರಾಕ್ಷಸರನ್ನು ಆಕ್ರಮಿಸಿದರು. ವಾನರಮುಖ್ಯರಿಂದ ಎಲ್ಲ ಕಡೆಗಳಲ್ಲಿಯೂ ಸಮಾವೃತನಾಗಿದ್ದ ಹನು

ಮಂತನು ಜ್ವಾಲೆಗಳಿಂದ ಕೂಡಿದ ಅಗ್ನಿಯಂತೆಯೇ ಶತ್ರುಸೈನ್ಯವನ್ನು ದಹಿಸ ತೊಡಗಿದನು. ಸರ್ವಸಂಹಾರಕನಾದ ಪ್ರಲಯಕಾಲದ ಯಮನಂತೆ ವಾನರ ಸೈನ್ಯದಿಂದ ಪರಿವೃತನಾಗಿದ್ದ ಹನುಮಂತನು ರಾಕ್ಷಸರನ್ನು ಅಪಾರಸಂಖ್ಯೆ ಯಲ್ಲಿ ಸಂಹರಿಸಿದನು. ಸೀತೆಯು ಅವಸಾನಹೊಂದಿದಳೆಂಬ ಶೋಕ ದಿಂದಲೂ ಸೀತೆಯನ್ನು ಸಂಹರಿಸಿದನೆಂಬ ಕೋಪದಿಂದಲೂ ಕೂಡಿದ್ದ ಮಾರುತಿಯು ಇಂದ್ರಜಿತುವಿನ ರಥದ ಮೇಲೆ ದೊಡ್ಡದಾದೊಂದು ಬಂಡೆ ಯನ್ನು ಹಾಕಿದನು. ಬಂಡೆಯು ರಥದ ಮೇಲೆ ಬೀಳಲಿರುವುದನ್ನು ಕಂಡು ಸಾರಥಿಯು ರಥಕ್ಕೆ ಹೂಡಿದ್ದ ವಿಧೇಯವಾದ ಕುದುರೆಗಳ ಮೂಲಕವಾಗಿ ರಥವನ್ನು ಬಹಳ ದೂರಕ್ಕೆ ಒಯ್ದುಬಿಟ್ಟನು. ದೊಡ್ಡದಾಗಿದ್ದ ಆ ಬಂಡೆಯು ತನಗೆ ಲಕ್ಷ್ಯವಾಗಿದ್ದ ಇಂದ್ರಜಿತುವನ್ನಾಗಲೀ, ರಥವನ್ನಾಗಲೀ, ಸಾರಥಿಯನ್ನಾ ಗಲೀ ಭೇದಿಸದೇ ಭೂಮಿಯನ್ನೇ ಭೇದಿಸಿಕೊಂಡು ಕೆಳಗುರುಳಿತು. ಹನುಮಂತನು ಪ್ರಯತ್ನಪೂರ್ವಕವಾಗಿ ಇಂದ್ರಜಿತುವಿನ ರಥವನ್ನೇ ಧ್ವಂಸಮಾಡಲು ಬಂಡೆಯನ್ನೆತ್ತಿ ಎಸೆದ ಸಾಹಸಕಾರ್ಯವು ವ್ಯರ್ಥವಾಗಿ ಹೋಯಿತು. ಇಂದ್ರಜಿತುವು ಶಿಲಾಪ್ರಹಾರವನ್ನು ತಪ್ಪಿಸಿಕೊಂಡರೂ ಅಲ್ಲಿಯೇ ಇದ್ದ ರಾಕ್ಷಸರಿಗೆ ಬಹಳ ಪೀಡೆಯಾಯಿತು. ಸಾವಿರಾರು ರಾಕ್ಷಸರು ರಭಸದಿಂದ ಬಿದ್ದ ಬಂಡೆಗೆ ಸಿಕ್ಕಿ ಜಜ್ಜಿಹೋದರು. ಅನಂತರ ನೂರಾರು ಮಹಾಕಾಯರಾದ ವಾನರರು ವೃಕ್ಷಗಳನ್ನೂ ಪರ್ವತಶಿಖರಗಳನ್ನೂ ಹಿಡಿದು ಕೊಂಡು ಗರ್ಜನೆಮಾಡುತ್ತಾ ಇಂದ್ರಜಿತುವನ್ನು ಪುನಃ ಆಕ್ರಮಿಸಿದರು. ಭಯಂಕರಪರಾಕ್ರಮಿಗಳಾಗಿದ್ದ ವಾನರರು ರಣರಂಗದಲ್ಲಿ ಇಂದ್ರಜಿತುವಿನ ಮೇಲೆ ಬಂಡೆಗಳನ್ನೂ ವೃಕ್ಷಗಳನ್ನೂ ಸತತವಾಗಿ ಎಸೆಯುತ್ತಿದ್ದರು. ಅಂತೆಯೇ ವಿಧ-ವಿಧವಾಗಿ ಗರ್ಜನೆಮಾಡುತ್ತಾ ವೃಕ್ಷಗಳಿಂದಲೂ ಬಂಡೆ ಗಳಿಂದಲೂ ಬಡಿದು ರಾಕ್ಷಸಸೈನಿಕರನ್ನು ಸಂಹರಿಸುತ್ತಿದ್ದರು. ಮಹಾ ಭಯಂಕರರಾದ ವಾನರರು ಘೋರರೂಪಿಗಳಾದ ರಾಕ್ಷಸರನ್ನು ಬಲ ಪೂರ್ವಕವಾಗಿ ವೃಕ್ಷವೇ ಮೊದಲಾದ ಆಯುಧಗಳಿಂದ ಸಂಹರಿಸುತ್ತಿದ್ದರು. ಬಹಳವಾಗಿ ಗಾಯಗೊಂಡ ಅನೇಕರಾಕ್ಷಸರು ರಣರಂಗದಲ್ಲಿ ಬಿದ್ದು ಒದ್ದಾ ಡುತ್ತಿದ್ದರು. ತನ್ನ ಸೈನ್ಯವು ವಾನರರಿಂದ ಸತತವಾಗಿ ಮರ್ದಿಸಲ್ಪಡುತ್ತಿರುವು ದನ್ನು ಕಂಡು ಕ್ರುದ್ಧನಾದ ಇಂದ್ರಜಿತುವು ಆಯುಧಗಳನ್ನು ಹಿಡಿದು ಶತ್ರು

ಗಳಿಗೆ ಅಭಿಮುಖವಾಗಿ ತೆರಳಿದನು. ರಾಕ್ಷಸಸೈನಿಕರಿಂದಲೂ ಪರಿವೃತ ನಾಗಿದ್ದ, ದೃಢಪರಾಕ್ರಮಿಯಾದ ಇಂದ್ರಜಿತುವು ವಾನರರ ಮೇಲೆ ಬಾಣಗಳ ಸಮೂಹವನ್ನೇ ಸುರಿಸುತ್ತಾ ವಾನರಸೈನಿಕರನ್ನು ಅಪಾರಸಂಖ್ಯೆಯಲ್ಲಿ ಸಂಹರಿ ಸಿದನು. ಶೂಲಗಳಿಂದಲೂ, ವಜ್ರಾಯುಧಗಳಿಂದಲೂ, ಖಡ್ಗ-ಪಟ್ಟಿಶ-ಶೂಲ-ತೋಮರಗಳಿಂದಲೂ ಇಂದ್ರಜಿತುವು ಶತ್ರುಗಳನ್ನು ಪ್ರಹರಿಸಿದನು. ವಾನರಸೈನಿಕರು ಕೂಡ ಇಂದ್ರಜಿತುವಿನ ಅನುಚರರಾಗಿದ್ದ ರಾಕ್ಷಸರನ್ನು ನೂರಾರು ಸಂಖ್ಯೆಯಲ್ಲಿ ಸಂಹರಿಸಿದರು. ಮಹಾಬಲಿಷ್ಠನಾದ ಹನುಮಂತನು ಒಳ್ಳೆಯ ರೆಂಬೆಗಳಿಂದ ಕೂಡಿದ್ದ ವೃಕ್ಷಗಳಿಂದಲೂ, ಪರ್ವತ ಶಿಖರಗಳಿಂದಲೂ, ಬಂಡೆಗಳಿಂದಲೂ ಪ್ರಹರಿಸುತ್ತಾ ಭಯಂಕರಕರ್ಮರಾದ ರಾಕ್ಷಸರನ್ನು ಸಂಹರಿಸಿದನು.

ಹೀಗೆ ಹನುಮಂತನು ಶತ್ರುಸೈನ್ಯದ ವೇಗವನ್ನು ತಡೆದು ನಿಲ್ಲಿಸುತ್ತಾ ತನ್ನ ಅನುಯಾಯಿಗಳಿಗೆ ಹೇಳಿದನು :

"ವಾನರಬಂಧುಗಳೇ! ಹಿಂದಿರುಗಿರಿ. ಈಗ ನಾವು ಈ ರಾಕ್ಷಸರನ್ನು ಎದುರಿಸಿ ಸಾಧಿಸಬೇಕಾದುದು ಯಾವುದೂ ಇರುವುದಿಲ್ಲ. ಶ್ರೀರಾಮನಿಗೆ ಪ್ರಿಯವನ್ನುಂಟುಮಾಡುವ ಸಲುವಾಗಿ ಪ್ರಾಣಗಳನ್ನೇ ಒತ್ತೆಯಾಗಿಟ್ಟು ನಾವು ಯುದ್ಧಮಾಡುತ್ತಿದ್ದೆವು. ಆದರೆ ಯಾವಳ ಸಲುವಾಗಿ ನಾವು ಹೀಗೆ ಯುದ್ಧಮಾಡುತ್ತಿದ್ದೆವೋ ಆ ಜಾನಕಿಯೇ ಈಗ ಹತಳಾಗಿದ್ದಾಳೆ. ಈ ವಿಷಯವನ್ನು ನಾವು ರಾಮ-ಸುಗ್ರೀವರಿಗೆ ವಿಜ್ಞಾಪಿಸೋಣ. ಅವರು ಅದಕ್ಕೆ ಯಾವ ಪ್ರತೀಕಾರವನ್ನು ಸೂಚಿಸುವರೋ ಅದರಂತೆಯೇ ನಾವೂ ನಡೆದುಕೊಳ್ಳೋಣ."

ವಾನರಶ್ರೇಷ್ಠನಾದ ಹನುಮಂತನು ಅನುಯಾಯಿಗಳಾದ ವಾನರರಿಗೆ ಹೀಗೆ ಹೇಳಿ ಅವರನ್ನು ಯುದ್ಧದಿಂದ ಹಿಮ್ಮೆಟ್ಟಿಸಿ ಸೈನ್ಯದೊಂದಿಗೆ ಮೆಲ್ಲ-ಮೆಲ್ಲನೆ ಶ್ರೀರಾಮ-ಸುಗ್ರೀವರಿದ್ದಲ್ಲಿಗೆ ಧಾವಿಸಿದನು.

ಹನುಮಂತನು ಸೈನ್ಯದೊಡನೆ ಶ್ರೀರಾಮನ ಬಳಿಗೆ ಹೋದುದನ್ನು ಕಂಡು ದುರಾತ್ಮನಾದ ಇಂದ್ರಜಿತುವು ಹೋಮಮಾಡುವ ಅಭಿಲಾಷೆ ಯಿಂದ ನಿಕುಂಭಿಲಾದೇವಿಯ* ಮಂದಿರಕ್ಕೆ ಹೋದನು. ಅಲ್ಲಿಗೆ

* ನಿಕುಂಭಿಲಾ ಎಂಬುದು ಲಂಕಾಪಟ್ಟಣಕ್ಕೆ ಪಶ್ಚಿಮದಿಕ್ಕಿನಲ್ಲಿರುವ ಒಂದು

ಹೋದ ಕೂಡಲೇ ಇಂದ್ರಜಿತುವು ಅಗ್ನಿಗೆ ಆಹುತಿಯನ್ನಿತ್ತನು. ಅನಂತರ ಯಜ್ಞಭೂಮಿಗೂ ಹೋಗಿ ಅಗ್ನಿದೇವನನ್ನು ಹೋಮದ ಮೂಲಕವಾಗಿ ತೃಪ್ತಿಗೊಳಿಸಿದನು. ಮಾಂಸ-ರಕ್ತಗಳನ್ನು ಭುಂಜಿಸುವ ಆ ಅಗ್ನಿದೇವತೆಯು ಮಾಂಸ-ರಕ್ತಗಳನ್ನು ವಿಧಿವತ್ತಾಗಿ ಹೋಮಮಾಡಿದೊಡನೆಯೇ ಆ ಆಹುತಿಯಿಂದ ತೃಪ್ತಿಗೊಂಡು ಧಗ-ಧಗಿಸಿ ಉರಿಯತೊಡಗಿದನು. ಜ್ವಾಲೆಗಳಿಂದ ಸಮಾವೃತನಾಗಿರುವಂತೆ ಕಾಣುತ್ತಿದ್ದನು. ತೀವ್ರವಾದ ತೇಜಸ್ಸಿನಿಂದ ಕೂಡಿದ್ದ ಅಗ್ನಿದೇವನು ಆ ಸಮಯದಲ್ಲಿ ಸಂಧ್ಯಾಕಾಲದ ಸೂರ್ಯನಂತೆಯೇ ಕಾಣುತ್ತಿದ್ದನು.

ಆಭಿಚಾರಿಕಯಜ್ಞಗಳ ವಿಧಿ-ವಿಧಾನಗಳನ್ನು ಚೆನ್ನಾಗಿ ತಿಳಿದಿದ್ದ ಇಂದ್ರಜಿತುವು ರಾಕ್ಷಸರ ಅಭ್ಯುದಯಕ್ಕಾಗಿ ಯಥಾವಿಧಿಯಾಗಿ ಹವಿಸ್ಸನ್ನು ಅಗ್ನಿಯಲ್ಲಿ ಹೋಮಮಾಡಿದನು. ಇಂದ್ರಜಿತುವು ಹೀಗೆ ಹೋಮಮಾಡುತ್ತಿರುವುದನ್ನು ಕಂಡು ನೀತಿ-ಅನೀತಿಗಳನ್ನೂ ಕರ್ತವ್ಯಾಕರ್ತವ್ಯಗಳನ್ನೂ ಚೆನ್ನಾಗಿ ತಿಳಿದಿದ್ದ ರಾಕ್ಷಸರೆಲ್ಲರೂ ಭಕ್ತಿಭಾವದಿಂದ ಎದ್ದುನಿಂತರು.

೮೨ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೮೩ನೆಯ ಸರ್ಗ

ಸೀತೆಯು ಮೃತಳಾದಳೆಂಬ ಮಾತನ್ನು ಕೇಳಿ ಶ್ರೀರಾಮನ ಮೂರ್ಛೆ : ಲಕ್ಷ್ಮಣನ ಸಮಾಧಾನ

ರಾಘವಶ್ಚಾಪಿ ವಿಪುಲಂ ತಂ ರಾಕ್ಷಸವನೌಕಸಾಮ್ ।
ಶ್ರುತ್ವಾ ಸಂಗ್ರಾಮನಿರ್ಘೋಷಂ ಜಾಮ್ಬವನ್ತಮುವಾಚ ಹ ॥೧॥

ಶ್ರೀರಾಮನು ವಾನರ-ರಾಕ್ಷಸರ ಯುದ್ಧದ ಆ ಕೋಲಾಹಲವನ್ನು ಕೇಳಿ ಜಾಂಬವಂತನಿಗೆ ಹೇಳಿದನು :

“ಸೌಮ್ಯನೇ! ಜಾಂಬವಂತ! ನಿಶ್ಚಯವಾಗಿಯೂ ಹನುಮಂತನು

ತೋಪು. ಆ ತೋಪಿನಲ್ಲಿರುವ ದೇವತೆಗೂ ನಿಕುಂಭಿಲಾ ಎಂದೇ ಹೆಸರು. ಅವಳ ಸಂಬಂಧವಾದ ಯಾಗಕ್ಕೆ ನಿಕುಂಭಿಲಾಯಾಗವೆಂದು ಹೆಸರು.

ದುಷ್ಕರವಾದ ಕಾರ್ಯವನ್ನೇ ಮಾಡುತ್ತಿರುವನು. ಭಯಂಕರವೂ ಮತ್ತು ಮಹತ್ತರವೂ ಆದ ಆಯುಧಗಳ ಶಬ್ದವು ಕೇಳಿಬರುತ್ತಿದೆ. ನೀನೀಗಲೇ ನಿನ್ನ ಸೈನ್ಯದೊಡನೆ ಹೋಗಿ ಯುದ್ಧಮಾಡುತ್ತಿರುವ ಹನುಮಂತನಿಗೆ ಸಹಾಯ ಮಾಡು."

ಜಾಂಬವಂತನು ಹಾಗೆಯೇ ಆಗಲೆಂದು ಶ್ರೀರಾಮನಿಗೆ ಹೇಳಿ ತನ್ನ ಸೈನಿಕರೊಡನೆ ಹನುಮಂತನು ಯುದ್ಧಮಾಡುತ್ತಿದ್ದ ಪಶ್ಚಿಮದ ಹೆಬ್ಬಾಗಿಲ ಬಳಿಗೆ ಹೋದನು. ಆದರೆ ಹೋಗುತ್ತಿರುವ ಮಾರ್ಗದಲ್ಲಿಯೇ ಯುದ್ಧವನ್ನು ನಿಲ್ಲಿಸಿ ನಿಟ್ಟುಸಿರುಬಿಡುತ್ತಾ ಹಿಂದಕ್ಕೆ ಬರುತ್ತಿದ್ದ ವಾನರಸೈನ್ಯವನ್ನೂ ಮತ್ತು ಹನುಮಂತನನ್ನೂ ನೋಡಿದನು. ಹನುಮಂತನು–ಕಾರ್ಮುಗಿಲಿನಂತೆ ಕಾಣುತ್ತಿದ್ದು ಅತ್ಯಂತಭಯಂಕರವಾಗಿ ಸಾಲುಗಟ್ಟಿ ದಾರಿಯಲ್ಲಿ ಬರುತ್ತಿದ್ದ ಕರಡಿಗಳ ಸೈನ್ಯವನ್ನು ತಡೆದು ನಿಲ್ಲಿಸಿ ಆ ಎಲ್ಲ ಕಪಿ-ಕರಡಿಗಳ ಸೈನಿಕರೊಡನೆ ಶ್ರೀರಾಮನ ಬಳಿಗೆ ಬಂದನು.

ಮಹಾಯಶೋವಂತನಾದ ಹನುಮಂತನು ಅಪಾರವಾದ ಆ ಸೈನ್ಯ ದೊಡನೆ ಬೇಗನೆ ಶ್ರೀರಾಮನ ಬಳಿಗೆ ಬಂದು ದುಃಖದಿಂದ ಹೇಳಿದನು :

"ಪ್ರಭುವೇ! ರಣರಂಗದಲ್ಲಿ ಯುದ್ಧಮಾಡುತ್ತಿದ್ದ ನಾವೆಲ್ಲರೂ ನೋಡುತ್ತಿದ್ದಂತೆಯೇ ರಾವಣನ ಮಗನಾದ ಇಂದ್ರಜಿತುವು ದುಃಖದಿಂದ ರೋದನಮಾಡುತ್ತಿದ್ದ ಸೀತಾದೇವಿಯನ್ನು ಸಂಹರಿಸಿದನು. ಅವಳನ್ನು ಆ ದುರವಸ್ಥೆಯಲ್ಲಿ ನೋಡಿದ ನನ್ನ ಮನಸ್ಸು ಬಹಳವಾಗಿ ಕಳವಳಗೊಂಡಿತು. ಅತ್ಯಂತವಿಷಾದದಿಂದ ನಾನು ಈ ವೃತ್ತಾಂತವನ್ನು ನಿನಗೆ ತಿಳಿಸಲು ಬಂದಿರುವೆನು."

ಹನುಮಂತನ ಆ ಮಾತನ್ನು ಕೇಳುತ್ತಲೇ ಶ್ರೀರಾಮನು–ಬೇರನ್ನು ಕತ್ತರಿಸಿದ ವೃಕ್ಷದಂತೆ–ಶೋಕದಿಂದ ಮೂರ್ಛಿತನಾಗಿ ಭೂಮಿಯಲ್ಲಿ ಬಿದ್ದನು. ದೇವಸದೃಶನಾದ ಶ್ರೀರಾಮನು ಹಾಗೆ ಬಿದ್ದುದನ್ನು ಕಂಡು ವಾನರ ನಾಯಕರು ಎಲ್ಲ ಕಡೆಗಳಿಂದಲೂ ಧಾವಿಸಿ ಅಲ್ಲಿಗೆ ಬಂದರು. ಸೀತಾ ವಿನಾಶದ ಶೋಕಾಗ್ನಿಯಿಂದ ದಹಿಸಲ್ಪಡುತ್ತಿದ್ದ, ಯಾವುದರಿಂದಲೂ ಉಪಶಮನ ಹೊಂದದಿದ್ದ, ಮೂರ್ತಿಮತ್ತಾಗಿ ಭುಗಿಲ್ಲನೆ ಹೊತ್ತಿಕೊಂಡು

ಉರಿಯುವ ಅಗ್ನಿಯಂತೆಯೇ ಕಾಣುತ್ತಿದ್ದ ಶ್ರೀರಾಮನ ಮೇಲೆ ಕಮಲ ಮತ್ತು ಕನ್ನೈದಿಲೆಗಳ ಸುಗಂಧದಿಂದ ಮಿಶ್ರವಾಗಿದ್ದ ಶೀತೋದಕವನ್ನು ವಾನರಪ್ರಮುಖರು ಚುಮುಕಿಸಿದರು. ಲಕ್ಷ್ಮಣನು ಕೂಡ ಅತ್ಯಂತದುಃಖಿತ ನಾಗಿ ತನ್ನೆರಡು ಬಾಹುಗಳಿಂದಲೂ ಶ್ರೀರಾಮನನ್ನು ತಬ್ಬಿಕೊಂಡು ಅಸ್ವಸ್ಥ ನಾಗಿದ್ದ ಶ್ರೀರಾಮನಿಗೆ ಯುಕ್ತಿಯುಕ್ತವೂ ಮತ್ತು ಪ್ರಯೋಜನಕಾರಿಯೂ ಆದ ಈ ಮಾತುಗಳನ್ನು ಹೇಳತೊಡಗಿದನು :

ಶುಭೇ ವರ್ತ್ಮನಿ ತಿಷ್ಠನ್ತಂ ತ್ವಾಮಾರ್ಯ ವಿಜಿತೇನ್ದ್ರಿಯಮ್ ।
ಅನರ್ಥೇಭ್ಯೋ ನ ಶಕ್ನೋತಿ ತ್ರಾತುಂ ಧರ್ಮೋ ನಿರರ್ಥಕಃ ॥೧೪॥

"ಆರ್ಯನೇ! ನೀನು ಯಾವಾಗಲೂ ಶುಭಕರವಾದ ಧರ್ಮಮಾರ್ಗ ದಲ್ಲಿಯೇ ನಿರತನಾಗಿರುವೆ. ಜಿತೇಂದ್ರಿಯನೂ ಆಗಿರುವೆ. ಆದರೆ ನೀನು ಆಶ್ರಯಿಸಿರುವ ಆ ಧರ್ಮವು ನಿನ್ನನ್ನು ಅನರ್ಥಗಳಿಂದ ಪಾರುಮಾಡಲು ಅಸಮರ್ಥವಾಗಿದೆ. ಆದುದರಿಂದ ಧರ್ಮಮಾರ್ಗಾವಲಂಬನೆಯು ನಿರರ್ಥಕವೆಂದೇ ನಿಶ್ಚಯಿಸಬೇಕಾಗಿದೆ.

ಭೂತಾನಾಂ ಸ್ಥಾವರಾಣಾಂ ಚ ಜಙ್ಗಮಾನಾಂ ಚ ದರ್ಶನಮ್ ।
ಯಥಾಸ್ತಿ ನ ತಥಾ ಧರ್ಮಸ್ತೇನ ನಾಸ್ತೀತಿ ಮೇ ಮತಿಃ ॥೧೫॥

ಸ್ಥಾವರ-ಜಂಗಮಾದಿಪ್ರಾಣಿಗಳ ದರ್ಶನವು ನಮಗೆ ಹೇಗಾಗು ವುದೋ ಹಾಗೆ ಧರ್ಮಾಧರ್ಮಗಳು ಕಾಣುವುದಿಲ್ಲ. ಆದುದರಿಂದ ಧರ್ಮಾ ಧರ್ಮಗಳೆಂಬುದೇ ಇಲ್ಲ ಎಂಬುದು ನನ್ನ ನಿಶ್ಚಯವಾಗಿದೆ. ಅಥವಾ ಸ್ಥಾವರ-ಜಂಗಮಪ್ರಾಣಿಗಳು, ವೃಕ್ಷ-ಪರ್ವತ, ಪಶು-ಪಕ್ಷಿ ಮುಂತಾದುವು ಗಳು ಯಾವ ಧರ್ಮವನ್ನಾಗಲೀ ಅಧರ್ಮವನ್ನಾಗಲೀ ಮಾಡುವುದಿಲ್ಲ. ಅವು ಗಳೂ ಹುಟ್ಟಿ-ಬೆಳೆದು ಫಲಾನುಭವವನ್ನು ಪಡೆಯುತ್ತವೆ. ಇದನ್ನು ನಾವು ಪ್ರತ್ಯಕ್ಷವಾಗಿ ಕಾಣುತ್ತಿದ್ದೇವೆ. ಆದುದರಿಂದ ಫಲಾನುಭವಕ್ಕೆ ಧರ್ಮಾಧರ್ಮ ಗಳು ಕಾರಣವಲ್ಲ–ಎಂಬುದು ಇದರಿಂದ ಸ್ಪಷ್ಟವಾಗಿದೆ. ಪಶು-ಪಕ್ಷಿಗಳು ಹುಟ್ಟುತ್ತವೆ ; ಬೆಳೆಯುತ್ತವೆ ; ಸುಖವನ್ನು ಅನುಭವಿಸುತ್ತವೆ. ಅವು ಯಾವ ವಿಶೇಷಧರ್ಮವನ್ನೂ ಆಚರಿಸುವುದಿಲ್ಲ. ಇದರಿಂದಾಗಿ ಅವುಗಳ ಸುಖಕ್ಕೆ ಯಾವ ಕೊರತೆಯೂ ಇಲ್ಲ. ಆದುದರಿಂದ ಮನುಷ್ಯನ ಸುಖ-ದುಃಖಗಳಿಗೆ ಧರ್ಮವಾಗಲೀ ಅಧರ್ಮವಾಗಲೀ ಕಾರಣವಲ್ಲ.

ಯಥೈವ ಸ್ಥಾವರಂ ವ್ಯಕ್ತಂ ಜಙ್ಗಮಂ ಚ ತಥಾವಿಧಮ್ ।
ನಾಯಮರ್ಥಸ್ತಥಾ ಯುಕ್ತಸ್ತ್ವದ್ವಿಧೋ ನ ವಿಪದ್ಯತೇ ॥೧೬॥

ವೃಕ್ಷ-ಪರ್ವತಗಳೇ ಮೊದಲಾದ ಸ್ಥಾವರಪ್ರಾಣಿಗಳು ಸ್ಪಷ್ಟವಾಗಿ ಕಾಣುವಂತೆ ಪಶು-ಪಕ್ಷಿಗಳೇ ಮೊದಲಾದ ಜಂಗಮಪ್ರಾಣಿಗಳೂ ಪ್ರತ್ಯಕ್ಷ ವಾಗಿ ಕಾಣುತ್ತವೆ. ಹಾಗೆ ಧರ್ಮಾಧರ್ಮಗಳು ನಮ್ಮ ಕಣ್ಣಿಗೆ ಪ್ರತ್ಯಕ್ಷವಾಗಿ ಕಾಣುವುದಿಲ್ಲ. ಹಾಗೇನಾದರೂ ಅವು ಇದ್ದಿದ್ದೇ ಆದರೆ ನಿನ್ನಂತಹ ಧರ್ಮಾವಲಂಬಿಗೆ ವಿಪತ್ತು ಉಂಟಾಗುತ್ತಿರಲಿಲ್ಲ.

(ಯಾವ ರೀತಿಯಲ್ಲಿ ವೃಕ್ಷ-ಪರ್ವತಗಳೇ ಮೊದಲಾದ ಸ್ಥಾವರಪ್ರಾಣಿ ಗಳೂ ಪಶು-ಪಕ್ಷಿಗಳೇ ಮೊದಲಾದ ಜಂಗಮಪ್ರಾಣಿಗಳೂ ಧರ್ಮಾಧರ್ಮ ಗಳ ಅವಲಂಬನೆಯೇ ಇಲ್ಲದೇ ಸುಖವಾಗಿರುವುದು ವ್ಯಕ್ತವಾಗಿ ಕಾಣುತ್ತಿದೆ. ಇವು ಪ್ರತ್ಯಕ್ಷಪ್ರಮಾಣಗಳಾಗಿವೆ. ಅವು ಯಾವುದೇ ವಿಧವಾದ ಧರ್ಮವನ್ನಾ ಗಲೀ ಅಧರ್ಮವನ್ನಾಗಲೀ ಆಚರಿಸುವುದಿಲ್ಲ. ಆದುದರಿಂದ ಪ್ರಾಣಿಯ ಸುಖ-ಕಷ್ಟಗಳಿಗೆ ಧರ್ಮಾಧರ್ಮಗಳು ಕಾರಣವಲ್ಲವೆಂಬುದು ಇದರಿಂದಲೇ ಸಿದ್ಧಾಂತವಾಗಿದೆ. ಒಂದು ವೇಳೆ ಹಾಗೆ ಮನುಷ್ಯನ ಸುಖ-ಕಷ್ಟಗಳಿಗೇನಾ ದರೂ ಧರ್ಮಾಧರ್ಮಗಳು ಕಾರಣವಾಗುವುವೆನ್ನುವುದಾದರೆ–ಸದಾ ಧರ್ಮವನ್ನೇ ಆಶ್ರಯಿಸಿರುವ ನಿನ್ನಂತಹವನಿಗೆ ವಿಪತ್ತೇ ಉಂಟಾಗಬಾರದಾಗಿ ದ್ದಿತು. ನಿನ್ನಂತಹವನಿಗೂ ವಿಪತ್ತು ಉಂಟಾಗಿರುವುದರಿಂದ ಮನುಷ್ಯನ ಆಗು-ಹೋಗುಗಳಿಗೆ ಧರ್ಮಾಧರ್ಮಗಳು ಕಾರಣವಲ್ಲವೆಂಬುದು ಪ್ರಮಾಣಿಸಿದಂತಾಗಿದೆ.)

ಯದ್ಯಧರ್ಮೋ ಭವೇದ್ಭೂತೋ ರಾವಣೋ ನರಕಂ ವ್ರಜೇತ್ ।
ಭವಾಂಶ್ಚ ಧರ್ಮಯುಕ್ತೋ ವೈ ನೈವಂ ವ್ಯಸನಮಾಪ್ನುಯಾತ್ ॥

ಧರ್ಮಾಧರ್ಮಗಳು ಪ್ರತ್ಯಕ್ಷವಾಗಿ ಕಾಣದಿದ್ದರೂ ಅವುಗಳಿಗೂ ಅಸ್ತಿತ್ವವಿದೆ. ಪರಿಣಾಮದಲ್ಲಿ ಅವು ಪ್ರತ್ಯಕ್ಷವಾಗಿ ಫಲಿಸುತ್ತವೆ–ಎನ್ನುವು ದಾದರೆ ಅಧರ್ಮವನ್ನೇ ಅವಲಂಬಿಸಿರುವ ರಾವಣನು ದುಃಖಿಯಾಗಬೇಕಾಗಿ ದ್ದಿತು. ಧರ್ಮವನ್ನೇ ಆಶ್ರಯಿಸಿರುವ ನೀನು ವ್ಯಸನವನ್ನೇ ಹೊಂದಬಾರ ದಾಗಿದ್ದಿತು. ಧರ್ಮಾಧರ್ಮಗಳು ನಿಮ್ಮಿಬ್ಬರಲ್ಲಿಯೂ ವಿಪರೀತವಾದ ಫಲ ಗಳನ್ನು ಕೊಡುತ್ತಿರುವುದರಿಂದ ಮನುಷ್ಯನ ಸುಖ-ಕಷ್ಟಗಳಿಗೆ ಧರ್ಮಾ ಧರ್ಮಗಳು ಕಾರಣವಲ್ಲವೆಂಬುದನ್ನು ಸ್ಪಷ್ಟವಾಗಿ ಹೇಳಬಹುದಾಗಿದೆ.

ತಸ್ಯ ಚ ವ್ಯಸನಾಭಾವಾದ್ವ್ಯಸನಂ ಚಾಗತೇ ತ್ವಯಿ ।
ಧರ್ಮೋ ಭವತ್ಯಧರ್ಮಶ್ಚ ಪರಸ್ಪರವಿರೋಧಿನೌ ॥೧೮॥

ಅಧರ್ಮಿಯಾದ ರಾವಣನು ದುಃಖಿಯಾಗದೇ ಇರುವುದರಿಂದ ಮತ್ತು ಧಾರ್ಮಿಕನಾದ ನೀನು ವ್ಯಸನಪಡುತ್ತಿರುವುದರಿಂದ–ಧರ್ಮಾ ಧರ್ಮಗಳ ಅಸ್ತಿತ್ವವನ್ನಾಗಲೀ ಮತ್ತು ಅವುಗಳ ಪರಿಣಾಮವನ್ನಾಗಲೀ ನಾವು ವಿವೇಚಿಸಿದರೆ ಧರ್ಮಮಾಡಿದವನಿಗೆ ಅಧರ್ಮಮಾಡಿದವನಿಗೆ ಪ್ರಾಪ್ತವಾಗ ಬೇಕಾದ ಫಲವೂ–ಅಧರ್ಮಮಾಡಿದವನಿಗೆ ಧರ್ಮಮಾಡಿದವನಿಗೆ ಪ್ರಾಪ್ತ ವಾಗಬೇಕಾದ ಫಲವೂ ಲಭಿಸಿದಂತಾಗುತ್ತದೆ. ಇಂತಹ ವಿಪರ್ಯಾಸವಾದ ಫಲವಿರುವ ಧರ್ಮಾಧರ್ಮಗಳು ಇವೆ–ಎಂಬುದಕ್ಕಿಂತಲೂ ಧರ್ಮಾ ಧರ್ಮಗಳೇ ಇಲ್ಲ–ಎಂಬುದೇ ಸರಿಯಾಗಿ ಕಾಣುತ್ತದೆ.

ಧರ್ಮೇಣೋಪಲಭೇದ್ಧರ್ಮಮಧರ್ಮಂ ಚಾಪ್ಯಧರ್ಮತಃ ।
ಯದ್ಯಧರ್ಮೇಣ ಯುಜ್ಯೇಯುರ್ಯೇಷ್ವಧರ್ಮಃ ಪ್ರತಿಷ್ಠಿತಃ ॥೧೯॥

ನ ಧರ್ಮೇಣ ವಿಯುಜ್ಯೇರನ್ನಾಧರ್ಮರುಚಯೋ ಜನಾಃ ।
ಧರ್ಮೇಣಾಚರತಾಂ ತೇಷಾಂ ತಥಾ ಧರ್ಮಫಲಂ ಭವೇತ್ ॥೨೦॥

ಧರ್ಮಮಾರ್ಗದಲ್ಲಿದ್ದರೆ ಸುಖವನ್ನೇ ಪಡೆಯುತ್ತಾನೆ. ಅಧರ್ಮ ಮಾರ್ಗದಲ್ಲಿದ್ದರೆ ಕಷ್ಟವನ್ನೇ ಹೊಂದುತ್ತಾನೆ–ಎಂಬ ನಿಯಮವೇನಾದರೂ ಇದ್ದಿದ್ದರೆ ಯಾವನಲ್ಲಿ ಅಧರ್ಮವಿರುವುದೋ ಅಂತಹವನು (ರಾವಣನು) ಕಷ್ಟಕ್ಕೆ ಭಾಗಿಯಾಗಿದ್ದರೆ–ಅಧರ್ಮಮಾರ್ಗದಲ್ಲಿ ಅಭಿರುಚಿಯಿರದ ಜನಗಳು ಧರ್ಮಮಾರ್ಗವನ್ನು ಎಂದಿಗೂ ಬಿಡುತ್ತಿರಲೇ ಇಲ್ಲ. ಅಧರ್ಮವನ್ನಾಚರಿ ಸಿದವನಿಗೆ ಕಷ್ಟವು ಪ್ರಾಪ್ತವಾದಂತೆ ಧರ್ಮವನ್ನಾಚರಿಸಿದವರಿಗೆ ಸುಖವು ಲಭಿಸಿಯೇ ಲಭಿಸುವುದೆಂಬ ವಿಶ್ವಾಸವು ಕೂಡ ಜನರಲ್ಲುಂಟಾಗುತ್ತಿದ್ದಿತು.

(ಇದು ಪ್ರತ್ಯಕ್ಷವಾಗಿ ಕಾಣುವುದಾಗಿದ್ದಿದ್ದರೆ ಜನರು ಅಧರ್ಮಮಾರ್ಗ ವನ್ನು ಅವಲಂಬಿಸುತ್ತಲೇ ಇರಲಿಲ್ಲ. ಆದರೆ ಅದು ಈಗ ಬಹಳ ವಿಪರ್ಯಾ ಸವೇ ಆಗಿದೆ. ಅಧರ್ಮಮಾರ್ಗದಲ್ಲಿರುವವರೇ ಸುಖಿಗಳಾಗಿರುವಂತೆಯೂ ಧರ್ಮಮಾರ್ಗದಲ್ಲಿರುವವರು ಕಷ್ಟಪಡುತ್ತಿರುವಂತೆಯೂ ಕಾಣುತ್ತಿದೆ.

ಆದುದರಿಂದ ಜನಸಾಮಾನ್ಯರಲ್ಲಿ–ಧರ್ಮವಿಷಯದಲ್ಲಿ ಸಂದೇಹವುಂಟಾಗುವಂತಾಗಿದೆ.)

ಯಸ್ಮಾದರ್ಥಾ ವಿವರ್ಧನ್ತೇ ಯೇಷ್ವಧರ್ಮಃ ಪ್ರತಿಷ್ಠಿತಃ ।
ಕ್ಲಿಶ್ಯನ್ತೇ ಧರ್ಮಶೀಲಾಶ್ಚ ತಸ್ಮಾದೇತೌ ನಿರರ್ಥಕೌ ॥೨೧॥

ಯಾವನಲ್ಲಿ ಅಧರ್ಮವಿರುವುದೋ-ಯಾವನು ಅಧರ್ಮಮಾರ್ಗವನ್ನೇ ಆಶ್ರಯಿಸಿರುವನೋ–ಅಂತಹವನಲ್ಲಿ ಧನಸಮೃದ್ಧಿಯಿರುತ್ತದೆ. ಅವನ ಸುಖೋಪಭೋಗಗಳು ದಿನ-ದಿನಕ್ಕೂ ಹೆಚ್ಚುತ್ತಲೇ ಇರುತ್ತವೆ. ಧರ್ಮಶೀಲರಾದವರು ಯಾವಾಗಲೂ ಕಷ್ಟಪಡುತ್ತಲೇ ಇರುತ್ತಾರೆ. ಆದುದರಿಂದ ಈ ಧರ್ಮಾಧರ್ಮಮಾರ್ಗಗಳೆರಡೂ ನಿರರ್ಥಕಗಳೇ ಸರಿ.

(ಅವುಗಳ ಅರ್ಥಕ್ಕನುಗುಣವಾದ ಫಲವಿರುವುದಿಲ್ಲ. ಅಧರ್ಮ ಎಂದರೆ ಕಷ್ಟ. ಅಧರ್ಮಾವಲಂಬಿಯು ಕಷ್ಟಪಡುವುದಿಲ್ಲ. ಆದುದರಿಂದ ಅಧರ್ಮದ ಅರ್ಥವು ನಿರರ್ಥಕವಾಯಿತು. ಧರ್ಮ ಎಂದರೆ ಸುಖ. ಧರ್ಮಾವಲಂಬಿಯು ಸುಖಪಡುವುದಿಲ್ಲ. ಕಷ್ಟಪಡುತ್ತಲೇ ಇರುತ್ತಾನೆ. ಆದುದರಿಂದ ಧರ್ಮ ಎಂಬ ಪದದ ಅರ್ಥವೂ ನಿರರ್ಥಕವಾಯಿತು. ಈ ಅರ್ಥಗಳಲ್ಲಿ ಧರ್ಮಾಧರ್ಮಗಳೆರಡೂ ನಿರರ್ಥಕಗಳು.)

ವಧ್ಯನ್ತೇ ಪಾಪಕರ್ಮಾಣೋ ಯದ್ಯಧರ್ಮೇಣ ರಾಘವ ।
ವಧಕರ್ಮಹತೋಽಧರ್ಮಃ ಸ ಹತಃ ಕಂ ವಧಿಷ್ಯತಿ ॥೨೨॥

ಪಾಪಕರ್ಮಿಗಳನ್ನೂ ಅಧರ್ಮಮಾರ್ಗಿಗಳನ್ನೂ ಅಧರ್ಮದಿಂದಲೇ ಕೊಂದುದಾದರೆ–ಈ ಹನನಕ್ರಿಯೆಯಿಂದ ನಿರಸನವಾಗಿ ಹೋದ ಅಧರ್ಮವು ಮುಂದೆ ಯಾರನ್ನು ತಾನೇ ಕೊಲ್ಲಬಲ್ಲುದು?

(ಅಧರ್ಮಿಯನ್ನು ಧರ್ಮಮಾರ್ಗದಿಂದಲೇ ಸಂಹರಿಸಬೇಕೆಂಬುದೇನೂ ಇಲ್ಲ. ಪಾಪಿಷ್ಠನನ್ನು ಅಧರ್ಮಮಾರ್ಗದಿಂದಲಾದರೂ ಸಂಹರಿಸಬಹುದು. ಅಧರ್ಮಮಾರ್ಗದಿಂದ ಸಂಹರಿಸಿದರೂ ಅಧರ್ಮಭೂತನಾದ ಪಾಪಿಷ್ಠನನ್ನು ಸಂಹರಿಸಿದಂತಾಗಿ ಅಧರ್ಮವನ್ನೇ ನಿರ್ಮೂಲನಮಾಡಿದಂತಾಗುತ್ತದೆ. ಅಧರ್ಮಕ್ಕೆ ಆಶ್ರಯವಿತ್ತಿದ್ದ ಪಾಪಿಷ್ಠನೇ ಸತ್ತುಹೋದ ನಂತರ ಆಶ್ರಯವನ್ನು ಕಳೆದುಕೊಂಡ ಅಧರ್ಮಕ್ಕೆ ಅಸ್ತಿತ್ವವೇನೂ ಇರುವು

ದಿಲ್ಲ. ಆದುದರಿಂದ ಅಧರ್ಮಿಯನ್ನು ಅಧರ್ಮಮೂಲಕವಾಗಿ ಸಂಹರಿಸಿದರೂ ದೋಷವೇನೂ ಇಲ್ಲ.)

ಅಥವಾ ವಿಹಿತೇನಾಯಂ ಹನ್ಯತೇ ಹನ್ತಿ ಚಾಪರಮ್ ।
ವಿಧಿಃ ಸ ಲಿಪ್ಯತೇ ತೇನ ನ ಸ ಪಾಪೇನ ಕರ್ಮಣಾ ॥೨೩॥

ಅಧರ್ಮಮಾರ್ಗವನ್ನು ಅವಲಂಬಿಸಿದುದರಿಂದ ಒಬ್ಬನು ಕೊಲ್ಲಲ್ಪಡುತ್ತಾನೆ. ಅಥವಾ ಅಧರ್ಮಮಾರ್ಗದಲ್ಲಿರುವವನನ್ನು ಒಬ್ಬನು ಕೊಲ್ಲುತ್ತಾನೆ. ಈ ಎರಡು ಕಾರ್ಯಗಳಿಂದಲೂ ಕರ್ತೃವು ಪಾಪಲಿಪ್ತನಾಗುವುದಿಲ್ಲ. ದೈವವೇ ಆ ಪಾಪದ ಲೇಪವನ್ನು ಹೊಂದಿರುತ್ತದೆ. ಆದುದರಿಂದ ಅಧರ್ಮಮಾರ್ಗದಲ್ಲಿರುವವನನ್ನು ಕೊಲ್ಲುವುದರಿಂದ ಕರ್ತೃವಿಗೆ ಯಾವ ವಿಧವಾದ ಪಾಪವೂ ಇಲ್ಲ.

ಅದೃಷ್ಟಪ್ರತಿಕಾರೇಣ ಅವ್ಯಕ್ತೇನಾಸತಾ ಸತಾ ।
ಕಥಂ ಶಕ್ಯಂ ಪರಂ ಪ್ರಾಪ್ತುಂ ಧರ್ಮೇಣಾರಿವಿಕರ್ಷಣ ॥೨೪॥

ರಾಜನು ಒಂದು ನಿಯಮವನ್ನು ವಿಧಿಸುತ್ತಾನೆ. ಆ ನಿಯಮವನ್ನು ಪರಿಪಾಲಿಸಿದವರಿಗೆ ಅನುಗ್ರಹಮಾಡುತ್ತಾನೆ. ವಿರೋಧಿಸಿದವರನ್ನು ಶಿಕ್ಷಿಸುತ್ತಾನೆ. ಆದರೆ ಧರ್ಮದ ವಿಷಯವು ಹಾಗಲ್ಲ. ಧರ್ಮವೆಂಬುದು ಪ್ರತೀಕಾರ ಶೂನ್ಯವಾದುದು. ಧರ್ಮಾವಲಂಬಿಗೆ ಧರ್ಮವು ಯಾವ ವಿಧವಾದ ಪ್ರತ್ಯಕ್ಷ ಪ್ರಯೋಜನವನ್ನೂ ಉಂಟುಮಾಡುವುದಿಲ್ಲ. ಧರ್ಮದಿಂದ ಪ್ರಾಪ್ತವಾಗುವ ಫಲವು ನಿಗೂಢವಾಗಿರುತ್ತದೆ. ಅದು ಅವ್ಯಕ್ತವಾದುದು. ಅದಕ್ಕೊಂದು ಅಸ್ತಿತ್ವವಿಲ್ಲ. ಆದರೂ 'ಧರ್ಮ' ಎಂಬುದು ಇದೆ ಎಂದು ಹೇಳುತ್ತಾರೆ.

ಶತ್ರುಸೂದನನೇ! ಅಂತಹ ಪ್ರತಿಫಲಶೂನ್ಯವಾದ, ಅವ್ಯಕ್ತವಾದ, ನಿಯತವಾದ ಪ್ರತಿಕ್ರಿಯೆಯು ಇಲ್ಲದಿರುವ ಧರ್ಮದಿಂದ ಯಾವ ಶ್ರೇಯಸ್ಸನ್ನು ತಾನೇ ಪಡೆಯಲು ಶಕ್ಯವಿದೆ?

ಯದಿ ಸತ್ಸ್ಯಾತ್ಸತಾಂ ಮುಖ್ಯ ನಾಸತ್ಸ್ಯಾತ್ತವ ಕಿಂಚನ ।
ತ್ವಯಾ ಯದೀದೃಶಂ ಪ್ರಾಪ್ತಂ ತಸ್ಮಾತ್ತನ್ನೋಪಪದ್ಯತೇ ॥೨೫॥

ಸತ್ಪುರುಷಶ್ರೇಷ್ಠನೇ! ಧರ್ಮವೆಂಬುದು ಇದ್ದುದೇ ಆಗಿದ್ದರೆ–ಅದರಿಂದ ಶುಭಫಲವೂ ಲಭಿಸುವುದೇ ಆಗಿದ್ದರೆ–ಅದನ್ನೇ ಸಂಪೂರ್ಣವಾಗಿ

ಆಶ್ರಯಿಸಿರುವ ನಿನಗೆ ಇಂತಹ ದುಃಖವು ಪ್ರಾಪ್ತವಾಗುತ್ತಿರಲಿಲ್ಲ. ನಿನ್ನಂತಹವನಿಗೇ ಇಂತಹ ದುಃಖವು ಪ್ರಾಪ್ತವಾಯಿತೆಂದಮೇಲೆ 'ಧರ್ಮ'–ಎಂಬುದಕ್ಕೆ ಅಸ್ತಿತ್ವವೇ ಇಲ್ಲ.

ಅಥವಾ ದುರ್ಬಲಃ ಕ್ಲೀಬೋ ಬಲಂ ಧರ್ಮೋಽನುವರ್ತತೇ ।
ದುರ್ಬಲೋ ಹೃತಮರ್ಯಾದೋ ನ ಸೇವ್ಯ ಇತಿ ಮೇ ಮತಿಃ ॥೨೬॥

ಒಂದು ವೇಳೆ ಧರ್ಮವು ದುರ್ಬಲವೂ ಅಸ್ವತಂತ್ರವೂ ಆಗಿದ್ದು ಬಲವನ್ನೇ ಅನುಸರಿಸಿ (ಬಲಿಷ್ಠನನ್ನೇ ಅನುಸರಿಸಿ) ಹೋಗುವುದೆನ್ನುವುದಾದರೆ, ಬಲಿಷ್ಠನಾದವನು ಮಾಡಿದ್ದೇ ಧರ್ಮ ಎಂಬ ಅವಹೇಳನಕ್ಕೆ ಒಳಗಾಗುವುದಾಗಿದ್ದರೆ–ಅಂತಹ ಅಸ್ವತಂತ್ರವಾದ ಮತ್ತು ದುರ್ಬಲವಾದ ಧರ್ಮವನ್ನು ಸೇವಿಸಬಾರದೆಂಬುದೇ ನನ್ನ ಅಭಿಪ್ರಾಯವಾಗಿದೆ.

ಬಲಸ್ಯ ಯದಿ ಚೇದ್ಧರ್ಮೋ ಗುಣಭೂತಃ ಪರಾಕ್ರಮೈಃ ।
ಧರ್ಮಮುತ್ಸೃಜ್ಯ ವರ್ತಸ್ವ ಯಥಾ ಧರ್ಮೇ ತಥಾ ಬಲೇ ॥೨೭॥

ಬಲಕ್ಕೆ ಧರ್ಮವೇ ಗುಣಭೂತವಾಗಿದ್ದರೆ–ಪೌರುಷವೇ ಧರ್ಮ–ಎಂಬುದು ನಿಶ್ಚಿತವಾಗಿದ್ದರೆ–ಅಂತಹ ಅಸ್ವತಂತ್ರವಾದ ಮತ್ತು ದುರ್ಬಲ ವಾದ ಧರ್ಮವನ್ನು ತ್ಯಜಿಸಿ, ಇದುವರೆಗೂ ನೀನು ಧರ್ಮದಲ್ಲಿಯೇ ನಿಷ್ಠೆಯನ್ನಿಟ್ಟುಕೊಂಡಿದ್ದಂತೆ ಮುಂದೆ ಪರಾಕ್ರಮಗಳಿಂದ ಬಲದಲ್ಲಿಯೇ ನಿನ್ನ ನಿಷ್ಠೆಯನ್ನಿಟ್ಟುಕೋ. ನೀನು ಬಲಿಷ್ಠನಾದರೆ ಬಲವು ತಾನಾಗಿಯೇ ನಿನಗೊಲಿದು ಬರುತ್ತದೆ. ಕೇವಲ ಧರ್ಮವನ್ನೇ ಆಶ್ರಯಿಸಿದ್ದು ನೀನು ದುರ್ಬಲನಾಗಿದ್ದರೆ ಧರ್ಮವು ನಿನ್ನಲ್ಲಿ ಕೆಲಸಕ್ಕೆ ಬಾರದ್ದಾಗುತ್ತದೆ. ನಿಷ್ಫಲವಾಗುತ್ತದೆ. ಆದುದರಿಂದ ಧರ್ಮನಿಷ್ಠನಾಗಿರುವುದಕ್ಕೆ ಬದಲಾಗಿ ಬಲದಲ್ಲಿಯೇ ನಿಷ್ಠೆಯುಳ್ಳವನಾಗು.

ಅಥ ಚೇತ್ಸತ್ಯವಚನಂ ಧರ್ಮಃ ಕಿಲ ಪರಂತಪ ।
ಅನೃತಸ್ತ್ವಯ್ಯಕರುಣಃ ಕಿಂ ನ ಬದ್ಧಸ್ತ್ವಯಾ ಪಿತಾ ॥೨೮॥

ಪರಂತಪನೇ! ತಂದೆಗೆ ಕೊಟ್ಟ ಮಾತಿಗೆ ತಪ್ಪಲಾರದೆ ನೀನು ಕಾಡಿಗೆ ಬಂದೆ. ಸತ್ಯವನ್ನು ಪರಿಪಾಲಿಸಿದೆ. ಸತ್ಯವಾಕ್ಯಪರಿಪಾಲನೆಯೇ ಧರ್ಮವೆಂದೂ ಭಾವಿಸಿದೆ. ಈಗಲೂ ಹಾಗೆಯೇ ಭಾವಿಸಿಕೊಂಡಿರುವೆ. ಸತ್ಯ

ವಚನವೇ ಧರ್ಮ ; ಸತ್ಯವಾಕ್ಯಪರಿಪಾಲನೆಯೇ ಧರ್ಮ ಎಂಬುದರಲ್ಲಿ ನಿನಗೆ ಅಚಲವಾದ ವಿಶ್ವಾಸವಿದ್ದುದಾದರೆ ನಿನಗೆ ಯೌವರಾಜ್ಯಾಭಿಷೇಕವನ್ನು ಮಾಡುವೆನೆಂದು ಹೇಳಿ ಮಾತುಕೊಟ್ಟು ಅನಂತರ ಮಾತಿಗೆ ತಪ್ಪಿದ ಸುಳ್ಳ ನಾದ, ನಿಷ್ಕರುಣಿಯಾದ ತಂದೆಯನ್ನು ನೀನೇಕೆ ಬಂಧಿಸಲಿಲ್ಲ? ನೀನೇಕೆ ಅವನನ್ನು ಶಿಕ್ಷಿಸಲಿಲ್ಲ? ನೀನೇಕೆ ಅವನನ್ನು ಪ್ರತಿಭಟಿಸಲೂ ಇಲ್ಲ? ಅನೃತ ವೆಂಬ ಅಧರ್ಮವನ್ನು ಆಗಲೇ ನೀನು ತೊಡೆದುಹಾಕಿದ್ದರೆ ನೀನು ಕಾಡಿಗೆ ಬರಬೇಕಾಗಿಯೂ ಇರಲಿಲ್ಲ. ಸೀತಾವಿಯೋಗದಂತಹ ಕಷ್ಟಗಳನ್ನು ಅನು ಭವಿಸಬೇಕಾಗಿಯೂ ಇರಲಿಲ್ಲ.

ಯದಿ ಧರ್ಮೋ ಭವೇದ್ಭೂತ ಅಧರ್ಮೋ ವಾ ಪರಂತಪ ।
ನ ಸ್ಮ ಹತ್ವಾ ಮುನಿಂ ವಜ್ರೀ ಕುರ್ಯಾದಿಜ್ಯಾಂ ಶತಕ್ರತುಃ ॥೨೯॥

ಕೇವಲ ಧರ್ಮ ಮತ್ತು ಅಧರ್ಮಗಳೇ ಅನುಷ್ಠಾನಕ್ಕೆ ಯೋಗ್ಯ ವಾಗಿದ್ದಿದ್ದರೆ ಇಂದ್ರನು ವಿಶ್ವರೂಪಮುನಿಯನ್ನು ಕೊಂದು ಅಧರ್ಮದ ಕಾರ್ಯ ಮತ್ತು ಯಜ್ಞದ ಮೂಲಕವಾಗಿ ಧರ್ಮದ ಕಾರ್ಯ–ಈ ಎರಡನ್ನೂ ಮಾಡುತ್ತಿರಲಿಲ್ಲ. (ಶ್ರೇಯಸ್ಕಾಮನಾದ ಮನುಷ್ಯನು ಸಮಯೋಚಿತವಾಗಿ ಧರ್ಮಾಧರ್ಮಗಳೆರಡನ್ನೂ ಆಶ್ರಯಿಸಬೇಕು.)

ಅಧರ್ಮಸಂಶ್ರಿತೋ ಧರ್ಮೋ ವಿನಾಶಯತಿ ರಾಘವ ।
ಸರ್ವಮೇತದ್ಯಥಾಕಾಮಂ ಕಾಕುತ್ಸ್ಥ ಕುರುತೇ ನರಃ ॥೩೦॥

ಇಂದ್ರನ ಆದರ್ಶದಂತೆ ಅಧರ್ಮದಿಂದ (ಬಲದಿಂದ) ಯುಕ್ತವಾದ ಧರ್ಮವೇ ಶತ್ರುಗಳನ್ನು ವಿನಾಶಗೊಳಿಸಲು ಸಮರ್ಥವಾಗುತ್ತದೆ. ಆದುದ ರಿಂದ ಜನರು ಯಾವಾಗಲು ಧರ್ಮಾಧರ್ಮಗಳನ್ನು ಕಾಲೋಚಿತವಾಗಿ ತಮಗೆ ಬೇಕಾದಂತೆ ಆಶ್ರಯಿಸುತ್ತಾರೆ.

(ಅಧರ್ಮದಿಂದ (ಪೌರುಷದಿಂದ) ಯುಕ್ತವಾದ ಧರ್ಮವು ಶತ್ರು ವನ್ನು ವಿನಾಶಗೊಳಿಸುತ್ತದೆ. ಪ್ರತ್ಯೇಕ-ಪ್ರತ್ಯೇಕವಾಗಿ ನಿಯಮಪೂರ್ವಕವಾಗಿ ಆಶ್ರಯಿಸಲ್ಪಟ್ಟು ಧರ್ಮಾಧರ್ಮಗಳೂ ಕೆಲವು ಸಮಯಗಳಲ್ಲಿ ಕರ್ತೃವನ್ನು ವಿನಾಶಗೊಳಿಸುತ್ತವೆ. ಆದುದರಿಂದ ಜನರು ಇವೆರಡನ್ನೂ ತಮಗೆ ಬೇಕಾದಂತೆ ಸಮಯೋಚಿತವಾಗಿ ಆಶ್ರಯಿಸುತ್ತಾರೆ.)

ಮಮ ಚೇದಂ ಮತಂ ತಾತ ಧರ್ಮೋऽಯಮಿತಿ ರಾಘವ |
ಧರ್ಮಮೂಲಂ ತ್ವಯಾ ಛಿನ್ನಂ ರಾಜ್ಯಮುತ್ಸೃಜತಾ ತದಾ ||೩೧||

ಆದುದರಿಂದ ಪರಾಕ್ರಮಕ್ಕೆ ಗುಣಭೂತವಾಗಿರುವ ಧರ್ಮವನ್ನೇ ಆಚರಿಸುವುದು ಯುಕ್ತವೆಂದು ನನ್ನ ಭಾವನೆಯಾಗಿದೆ. ಅದಕ್ಕೇ ಧರ್ಮ ವೆಂದು ಹೆಸರು. ನೀನು ರಾಜ್ಯವನ್ನು ಪರಿತ್ಯಜಿಸಿ ಬಂದು ಅಂತಹ ಮೂಲ ಭೂತವಾದ ಧರ್ಮದ ಬೇರನ್ನೇ ಕತ್ತರಿಸಿಹಾಕಿರುವೆ.

ಅರ್ಥೇಭ್ಯೋಥ ಪ್ರವೃತ್ತೇಭ್ಯಃ ಸಂವೃತ್ತೇಭ್ಯಸ್ತತಸ್ತತಃ |
ಕ್ರಿಯಾಃ ಸರ್ವಾಃ ಪ್ರವರ್ತನ್ತೇ ಪರ್ವತೇಭ್ಯ ಇವಾಪಗಾಃ ||೩೨||

ಪರ್ವತದಿಂದ ನದಿಗಳು ಹೊರಬರುವಂತೆ–ಪೌರುಷದಿಂದಲೋ ಧರ್ಮದ ಆಶ್ರಯದಿಂದಲೋ ದೇಶಗಳ ನಾನಾಭಾಗಗಳಿಂದ ಸಂಗ್ರಹಿಸಿ ತಂದ ಅರ್ಥದಿಂದ (ಹಣದಿಂದ) ಯಜ್ಞ-ಯಾಗಾದಿ ಧರ್ಮಕ್ರಿಯೆಗಳೂ ನಡೆಯುತ್ತವೆ. ಭೋಗೋಪಭೋಗಗಳಿಗೂ ಆ ಹಣವು ಸಾಧನವಾಗುತ್ತದೆ. ಆದುದರಿಂದ ಭೋಗಕ್ರಿಯೆಗಳಿಗೇ ಆಗಲೀ ಯಾಗಕ್ರಿಯೆಗಳಿಗೇ ಆಗಲೀ ಅರ್ಥವು ಆವಶ್ಯವಾಗಿ ಬೇಕಾಗುತ್ತದೆ.

ಅರ್ಥೇನ ಹಿ ವಿಮುಕ್ತಸ್ಯ ಪುರುಷಸ್ಯಾಲ್ಪಚೇತಸಃ |
ವಿಚ್ಛಿದ್ಯನ್ತೇ ಕ್ರಿಯಾಃ ಸರ್ವಾ ಗ್ರೀಷ್ಮೇ ಕುಸರಿತೋ ಯಥಾ ||೩೩||

ಅರ್ಥದಿಂದ ವಂಚಿತನಾದ ಮಂದಬುದ್ಧಿಯ ಮೂರ್ಖನಿಗೆ ಗ್ರೀಷ್ಮರ್ತುವಿನಲ್ಲಿ ಸಣ್ಣನದಿಗಳು ಒಣಗಿಹೋಗುವಂತೆ ಯಾವುದೇ ಕಾರ್ಯ ಗಳನ್ನು ಮಾಡಲೂ ಸಾಧ್ಯವಾಗುವುದಿಲ್ಲ. ಭೋಗಪಡಲೂ ಸಾಧ್ಯವಾಗುವು ದಿಲ್ಲ. ಯಜ್ಞಾದಿ ಧರ್ಮಕ್ರಿಯೆಗಳನ್ನು ಮಾಡಲೂ ಸಾಧ್ಯವಾಗುವುದಿಲ್ಲ.

ಸೋऽಯಮರ್ಥಂ ಪರಿತ್ಯಜ್ಯ ಸುಖಕಾಮಃ ಸುಖೈಧಿತಃ |
ಪಾಪಮಾಚರತೇ ಕರ್ತುಂ ತದಾ ದೋಷಃ ಪ್ರವರ್ತತೇ ||೩೪||

ಸುಖದಲ್ಲಿಯೇ ಬೆಳೆದು ಬಂದವನು ಸುಖಕ್ಕೆ ಮೂಲಭೂತವಾದ ಅರ್ಥವನ್ನು ಪರಿತ್ಯಜಿಸಿಯೂ ಸುಖವನ್ನು ಬಯಸಿದರೆ–ಅಂತಹ ಸುಖ ಪ್ರಾಪ್ತಿಗಾಗಿ ಅವನು ಪಾಪಕಾರ್ಯಗಳನ್ನೂ ಮಾಡಬೇಕಾಗುತ್ತದೆ. ಅದರಿಂದ

ಅವನಿಗೆ ದೋಷವೇ ಉಂಟಾಗುತ್ತದೆ. (ತಾಡನ-ಬಂಧನಾದಿ ಶಿಕ್ಷೆಗಳಿಗೆ ಗುರಿಯಾಗುತ್ತಾನೆ.)

ಯಸ್ಯಾರ್ಥಾಸ್ತಸ್ಯ ಮಿತ್ರಾಣಿ
ಯಸ್ಯಾರ್ಥಾಸ್ತಸ್ಯ ಬಾನ್ಧವಾಃ ।
ಯಸ್ಯಾರ್ಥಾಃ ಸ ಪುಮಾನ್ ಲೋಕೇ
ಯಸ್ಯಾರ್ಥಾಃ ಸ ಚ ಪಣ್ಡಿತಃ ॥೩೫॥

ಯಾವನ ಬಳಿ ಹಣವಿರುವುದೋ ಅವನಿಗೆ ಹಲವಾರು ಮಂದಿ ಮಿತ್ರರಾಗುತ್ತಾರೆ. ಯಾವನ ಬಳಿ ಹಣವಿರುವುದೋ ಅವನ ಬಂಧುಗಳೆಂದು ಹೇಳಿಕೊಂಡು ಜನರು ಅವನ ಬಳಿಗೆ ಬರುತ್ತಾರೆ. ಬಂಧುಗಳು ಕೂಡ ಹಣವಿದ್ದರೆ ಮಾತ್ರವೇ ಬಂಧುತ್ವವನ್ನು ಪುರಸ್ಕರಿಸುತ್ತಾರೆ. ಹಣವಿಲ್ಲದವನು ಎಷ್ಟೇ ಹತ್ತಿರದ ಬಂಧುವಾಗಿರಲಿ ಅಗಣ್ಯನಾಗುತ್ತಾನೆ. ಹಣವಿದ್ದವನು ಎಷ್ಟೇ ದೂರದ ಬಂಧುವಾಗಿರಲಿ ನಿಕಟವಾದ ಬಂಧುತ್ವಕ್ಕೆ ವಿಷಯನಾಗುತ್ತಾನೆ. ಹಣವಿದ್ದವನೇ ಶ್ರೇಷ್ಠ ಪುರುಷನೆಂದು ಸಮಾಜದಲ್ಲಿ ಪರಿಗಣಿತನಾಗುತ್ತಾನೆ. ಹಣವಿದ್ದವನು ಶುಂಠನೇ ಆಗಿದ್ದರೂ ಅವನನ್ನು ವಿದ್ವಾಂಸರ ಸ್ಥಾನದಲ್ಲಿ ಕುಳ್ಳಿರಿಸಿ ಗೌರವಿಸುತ್ತಾರೆ. ಹಣವಿದ್ದವನು ಏನಾದರೂ ಆದಾನು ; ಏನು ಬೇಕಾದರೂ ಮಾಡಿಯಾನು.

ಯಸ್ಯಾರ್ಥಾಃ ಸ ಚ ವಿಕ್ರಾನ್ತೋ
ಯಸ್ಯಾರ್ಥಾಃ ಸ ಚ ಬುದ್ಧಿಮಾನ್ ।
ಯಸ್ಯಾರ್ಥಾಃ ಸ ಮಹಾಭಾಗೋ
ಯಸ್ಯಾರ್ಥಾಃ ಸ ಗುಣಾಧಿಕಃ ॥೩೬॥

ಹಣವಿದ್ದವನು ಮಹಾಶೂರನೆನಿಸಿಕೊಳ್ಳುತ್ತಾನೆ. ಅವನನ್ನು ಮಹಾಬುದ್ಧಿವಂತನೆಂದು ಎಲ್ಲರೂ ಕೊಂಡಾಡುತ್ತಾರೆ. ಹಣವಿದ್ದವನೇ ಮಹಾಭಾಗ್ಯಶಾಲಿಯು. ಹಣವಂತನನ್ನು ಮಹಾಗುಣವಂತನೆಂದೂ ಜನರು ಹಾಡಿ ಹೊಗಳುತ್ತಾರೆ.

ಅರ್ಥಸ್ಯೈತೇ ಪರಿತ್ಯಾಗೇ ದೋಷಾಃ ಪ್ರವ್ಯಾಹೃತಾ ಮಯಾ ।
ರಾಜ್ಯಮುತ್ಸೃಜತಾ ಧೀರ ಯೇನ ಬುದ್ಧಿಸ್ತ್ವಯಾ ಕೃತಾ ॥೩೭॥

ಐಶ್ವರ್ಯದ ಪರಿತ್ಯಾಗದಿಂದ ಉಂಟಾಗುವ ದೋಷಗಳನ್ನೆಲ್ಲಾ ನಾನು ನಿನಗೆ ವಿವರಿಸಿ ಹೇಳಿದ್ದೇನೆ.

(ಅರ್ಥಹೀನನ ಬಳಿ ಮಿತ್ರರಿರುವುದಿಲ್ಲ. ಹತ್ತಿರದ ಬಂಧುಗಳೂ ಅವನನ್ನು ತಮ್ಮ ಬಂಧುವೆಂದು ಹೇಳಲು ನಾಚಿಕೆಪಡುತ್ತಾರೆ. ಸಮಾಜದಲ್ಲಿ ಅವನನ್ನು ಮನುಷ್ಯನೆಂದೂ ಜನರು ಪರಿಗಣಿಸುವುದಿಲ್ಲ. ಪಂಡಿತನೇ ಆಗಿದ್ದರೂ ನಿರ್ಧನನು ಜನರಿಗೆ ಮೂರ್ಖನಂತೆ ಕಾಣುತ್ತಾನೆ. ಹಣವಿಲ್ಲದವನ ಬಲ-ಪೌರುಷಗಳಿಗೂ ಬೆಲೆಯಿರುವುದಿಲ್ಲ. ಹಣವಿಲ್ಲದವನನ್ನು ಬುದ್ಧಿಯಿಲ್ಲದ ಮೂರ್ಖನೆಂದೇ ಜನರು ಭಾವಿಸುತ್ತಾರೆ. ಹಣವಿಲ್ಲದವನೊಬ್ಬ ದುರ್ಭಾಗ್ಯನಾಗುತ್ತಾನೆ. ಹಣವಿಲ್ಲದವನಲ್ಲಿ ಎಷ್ಟೇ ಗುಣಗಳಿದ್ದರೂ ಪ್ರಕಾಶಕ್ಕೆ ಬರುವುದಿಲ್ಲ. ಇವಿಷ್ಟೂ ಅರ್ಥತ್ಯಾಗದ ದೋಷಗಳಾಗಿವೆ.)

ವೀರನೇ! ನೀನು ರಾಜ್ಯವನ್ನು ಪರಿತ್ಯಜಿಸುವಾಗ ಯಾವ ಪ್ರಯೋಜನವನ್ನು ಉದ್ದೇಶಿಸಿ ಆ ನಿರ್ಧಾರಕ್ಕೆ ಬಂದೆ? ಇದನ್ನು ಊಹಿಸಲೂ ಕೂಡ ನನ್ನಿಂದ ಸಾಧ್ಯವಾಗುತ್ತಿಲ್ಲ.

ಯಸ್ಯಾರ್ಥಾ ಧರ್ಮಕಾಮಾರ್ಥಾಸ್ತಸ್ಯ ಸರ್ವಂ ಪ್ರದಕ್ಷಿಣಮ್ ।
ಅಧನೇನಾರ್ಥಕಾಮೇನ ನಾರ್ಥಃ ಶಕ್ಯೋ ವಿಚಿನ್ವತಾ ॥೩೮॥

ಯಾವನ ಬಳಿ ಹಣವಿರುವುದೋ ಅಂತಹವನಿಗೆ ಧರ್ಮ-ಕಾಮಗಳೆರಡೂ ಸಿದ್ಧಿಸುತ್ತವೆ. ಸಮಸ್ತವಾದ ಭೋಗಸಾಮಗ್ರಿಗಳೂ ಅವನನ್ನು ಸುತ್ತುವರಿದು ನಿಂತಿರುತ್ತವೆ. ನಿರ್ಧನನಾದವನು ಧನವನ್ನು ಬಯಸಿದರೂ ಪೌರುಷವನ್ನು ಆಶ್ರಯಿಸದೆ ಅಲ್ಲಲ್ಲಿ ಹುಡುಕುವುದರಿಂದ ಹಣವು ಲಭಿಸುವುದಿಲ್ಲ.

ಹರ್ಷಃ ಕಾಮಶ್ಚ ದರ್ಪಶ್ಚ ಧರ್ಮಃ ಕ್ರೋಧಃ ಶಮೋ ದಮಃ ।
ಅರ್ಥಾದೇತಾನಿ ಸರ್ವಾಣಿ ಪ್ರವರ್ತನ್ತೇ ನರಾಧಿಪ ॥೩೯॥

ನರೇಶ್ವರನೇ! ಹರ್ಷ, ಕಾಮ, ದರ್ಪ, ಧರ್ಮ, ಕ್ರೋಧ, ಶಮ ಮತ್ತು ದಮ–ಇವೆಲ್ಲವೂ ಅರ್ಥದಿಂದಲೇ ಬಂದೊದಗುತ್ತವೆ.

ಯೇಷಾಂ ನಶ್ಯತ್ಯಯಂ ಲೋಕಶ್ಚರತಾಂ ಧರ್ಮಚಾರಿಣಾಮ್ ।
ತೇಽರ್ಥಾಸ್ತ್ವಯಿ ನ ದೃಶ್ಯನ್ತೇ ದುರ್ದಿನೇಷು ಯಥಾ ಗ್ರಹಾಃ ॥೪೦॥

ಧರ್ಮಾತ್ಮನಾದ ನಿನಗೆ ದುರ್ದಿನದಲ್ಲಿ (ಮೋಡದಿಂದ ಕತ್ತಲು ಕವಿದಿರುವ ದಿವಸದಲ್ಲಿ) ಆಕಾಶದಲ್ಲಿ ಗ್ರಹಗಳು ಕಾಣದಿರುವಂತೆ–ಯಾವ ಐಶ್ವರ್ಯಗಳು ನಿನ್ನಲ್ಲೀಗ ಕಾಣುತ್ತಿಲ್ಲವೋ ಅಂತಹ ಐಶ್ವರ್ಯಗಳಿಲ್ಲದ ಕಾರಣದಿಂದಲೇ ಕೇವಲ ಧರ್ಮಾತ್ಮರಾದವರಿಗೆ ಐಹಿಕವಾದ ಸುಖವಿರುವುದಿಲ್ಲ.

ಅದಕ್ಕೆ ನೀನೇ ಸಾಕ್ಷಿಯಾಗಿರುವೆ.

ತ್ವಯಿ ಪ್ರವ್ರಜಿತೇ ವೀರ ಗುರೋಶ್ಚ ವಚನೇ ಸ್ಥಿತೇ ।
ರಕ್ಷಸಾಪಹೃತಾ ಭಾರ್ಯಾ ಪ್ರಾಣೈಃ ಪ್ರಿಯತರಾ ತವ ॥೪೧॥

ವೀರನೇ! ನೀನು ಪೂಜ್ಯನಾದ ತಂದೆಯ ಆಜ್ಞೆಯನ್ನು ಪರಿಪಾಲಿಸಲು ಅವನಿಂದ ಕಳುಹಿಸಲ್ಪಟ್ಟವನಾಗಿ ರಾಜ್ಯೈಶ್ವರ್ಯಗಳನ್ನು ತೊರೆದು ಕಾಡಿಗೆ ಬಂದೆ. ಫಲವೇನಾಯಿತು? ನಿನಗೆ ಅತ್ಯಂತಪ್ರಿಯಳಾಗಿದ್ದ ಭಾರ್ಯೆಯನ್ನು ರಾಕ್ಷಸರು ಅಪಹರಿಸಿಕೊಂಡು ಹೋದರು.

ಈಗಂತೂ ಇಂದ್ರಜಿತುವು ಮಾಡಿದ ಕಾರ್ಯವು ಅತ್ಯಂತದುಃಖಕರವಾದುದೇ ಸರಿ. ನಾನೀಗ ಪರಾಕ್ರಮದಿಂದ ಅವನನ್ನೂ ಅವನ ಅನುಯಾಯಿಗಳನ್ನೂ ಸಂಹರಿಸಿ ಆ ದುಃಖವನ್ನು ದೂರೀಕರಿಸುತ್ತೇನೆ. ರಾಘವ! ಎದ್ದೇಳು ; ಸಮಾಧಾನವನ್ನು ತಂದುಕೋ.

ನರಶ್ರೇಷ್ಠನೇ! ಉತ್ತಮವಾದ ವ್ರತವನ್ನಾಚರಿಸುವವನೇ! ಮಹಾಬಾಹುವೇ! ನೀನು ಬುದ್ಧಿವಂತನಾಗಿರುವೆ. ಮಹಾತ್ಮನೂ ಆಗಿರುವೆ. ನೀನಾರೆಂಬುದು ನಿನಗೆ ತಿಳಿಯದೇ? ಪಾಪರಹಿತನೇ! ನಾನು ಈ ಎಲ್ಲ ಮಾತುಗಳನ್ನೂ ನಿನಗೆ ಪ್ರಿಯವಾಗಲೆಂದು ಹೇಳಿರುವೆನು. ನಿನ್ನ ದುಃಖದ ನಿವಾರಣೆಯಾಗಲೆಂದು ಹೇಳಿದೆನು. ನಿಶ್ಚಯವಾಗಿಯೂ ನಾನೂ ಕೂಡ ಜಾನಕಿಯು ನಿಧನಹೊಂದಿದುದನ್ನು ಕಂಡು ಹೆಚ್ಚು ಕೋಪಗೊಂಡಿದ್ದೇನೆ. ರಾಕ್ಷಸಶ್ರೇಷ್ಠರಿಂದಲೂ ರಥ-ಗಜ-ಕುದುರೆಗಳಿಂದಲೂ ಕೂಡಿರುವ ಲಂಕಾಪಟ್ಟಣವನ್ನು ನನ್ನ ತೀಕ್ಷ್ಣವಾದ ಬಾಣಗಳಿಂದ ಭಸ್ಮಮಾಡಿಬಿಡುತ್ತೇನೆ."*

ಲ೩ನೆಯ ಸರ್ಗವು ಮುಗಿಯಿತು.

---

* ಈ ಪ್ರಕರಣದಲ್ಲಿ ಲಕ್ಷ್ಮಣನು ಧರ್ಮವನ್ನು ನಿಂದಿಸಿ ಮಾತನಾಡುತ್ತಾನೆ. ಸೀತೆಯನ್ನು ಇಂದ್ರಜಿತುವು ಕೊಂದನೆಂಬ ವಾರ್ತೆಯನ್ನು ಹನುಮಂತನಿಂದಲೇ ಕೇಳಿದ

ವಿಭೀಷಣನು ಇಂದ್ರಜಿತುವಿನ ಮಾಯಾರಹಸ್ಯವನ್ನು ಹೇಳಿ ಸೀತೆಯು ಜೀವಿಸಿರುವಳೆಂಬ ವಿಶ್ವಾಸವನ್ನು ಹುಟ್ಟಿಸಿದುದು : ಲಕ್ಷ್ಮಣನನ್ನು ಕಪಿಸೇನೆಯೊಡನೆ ನಿಕುಂಭಿಲಾಮಂದಿರಕ್ಕೆ ಕಳುಹಿಸಲು ಪ್ರಾರ್ಥಿಸಿದುದು

ರಾಮಮಾಶ್ವಾಸಯಾನೇ ತು ಲಕ್ಷ್ಮಣೇ ಭ್ರಾತೃವತ್ಸಲೇ ।
ನಿಕ್ಷಿಪ್ಯ ಗುಲ್ಮಾನ್ಸ್ವಸ್ಥಾನೇ ತತ್ರಾಗಚ್ಛದ್ವಿಭೀಷಣಃ ॥೧॥

ಭ್ರಾತೃವತ್ಸಲನಾದ ಲಕ್ಷ್ಮಣನು ಈ ಪರಿಯಲ್ಲಿ ಶ್ರೀರಾಮನನ್ನು ಸಮಾಧಾನಗೊಳಿಸುತ್ತಿರಲು–ವಿಭೀಷಣನು ವಾನರಸೈನಿಕರನ್ನು ಅವರವರ ಸ್ಥಾನಗಳಲ್ಲಿ ನಿಲ್ಲಿಸಿ ರಾಮ-ಲಕ್ಷ್ಮಣರಿದ್ದೆಡೆಗೆ ಆಗಮಿಸಿದನು.

ನಾನಾವಿಧವಾದ ಆಯುಧಗಳನ್ನು ಧರಿಸಿದ್ದ, ಕಾಡಿಗೆಯ ರಾಶಿಗೆ ಸಮಾನವಾದ ಕಪ್ಪುಬಣ್ಣದವರಾಗಿದ್ದ, ಮದಿಸಿದ ಸಲಗಗಳಂತೆ ಕಾಣುತ್ತಿದ್ದ ನಾಲ್ವರು ರಾಕ್ಷಸಶ್ರೇಷ್ಠರಿಂದ ವಿಭೀಷಣನು ಪರಿವೃತನಾಗಿದ್ದನು. ಅವನು ಅಲ್ಲಿಗೆ ಬಂದನಂತರ ಶೋಕಮಗ್ನನಾಗಿದ್ದ ಮಹಾತ್ಮನಾದ ಶ್ರೀರಾಮನನ್ನೂ, ಕಂಬನಿದುಂಬಿದ ಕಣ್ಣುಗಳಿಂದ ಕೂಡಿದ್ದ ವಾನರನಾಯಕರನ್ನೂ ನೋಡಿದನು. ಇಕ್ಷ್ವಾಕುಕುಲನಂದನನಾದ, ಮಹಾತ್ಮನಾದ ಶ್ರೀರಾಮನು ಮೂರ್ಛೆಗೊಂಡು ಲಕ್ಷ್ಮಣನ ತೊಡೆಯ ಮೇಲೆ ಮಲಗಿದ್ದನು. ಶ್ರೀರಾಮನು ಲಜ್ಜಿತನಾಗಿರುವುದನ್ನೂ ಶೋಕಸಂತಪ್ತನಾಗಿರುವುದನ್ನೂ ನೋಡಿ ದುಃಖ

ನಂತರ ಹೀಗಾಡುವುದು ಸ್ವಾಭಾವಿಕ. ಅಪರಿಮಿತವಾದ ಅಂತಹ ದುಃಖಗಳನ್ನು ತಡೆದುಕೊಳ್ಳಲು ಸಾಧ್ಯವಾಗದೇ ಇರುವಾಗ ಧರ್ಮದ ಮೇಲೆ ತಾತ್ಸಾರವುಂಟಾಗುತ್ತದೆ. ಆದರೆ ಇದು ತಾತ್ಕಾಲಿಕ. ಪ್ರಸಕ್ತಸಂದರ್ಭದಲ್ಲಿ ಮಾಯಾಸೀತೆಯನ್ನು ಇಂದ್ರಜಿತುವು ಕೊಂದಿದ್ದಾನೆ. ನಿಜವಾದ ಸೀತೆಯನ್ನಲ್ಲ. ಆದುದರಿಂದ ಧರ್ಮವು ಎಂದೂ ಶ್ರೀರಾಮನ ಕೈಬಿಟ್ಟಿಲ್ಲ. ಅವನ ಧರ್ಮಕ್ಕೆ ತಕ್ಕ ಫಲ ರಾವಣನ ಮೇಲಿನ ವಿಜಯ ಮತ್ತು ಸೀತಾಪ್ರಾಪ್ತಿ. ಇವೆರಡನ್ನೂ ಶ್ರೀರಾಮನು ಧರ್ಮದ ಹಿನ್ನೆಲೆಯಲ್ಲೇ ಸಾಧಿಸುತ್ತಾನೆ. ಆದುದರಿಂದ ಈ ಸಮಯದಲ್ಲಿ ಲಕ್ಷ್ಮಣನಾಡಿದ ಆವೇಶದ ಮಾತುಗಳು ಸರಿಯಾದುವೆಂದು ಸಮರ್ಥಿಸಬೇಕಾಗಿಲ್ಲ. ಈ ಪ್ರಸಂಗದಲ್ಲಿ ಮೇಲು ನೋಟಕ್ಕೆ ಯುಕ್ತಿಯುಕ್ತವಾಗಿ ಕಾಣುತ್ತವೆಯೆಂದು ಮಾತ್ರ ಹೇಳಬಹುದು.

ದಿಂದ ದೀನಹೃದಯನಾದ ವಿಭೀಷಣನು 'ಇದೇನಿದು?' ಎಂದು ಪ್ರಶ್ನಿಸಿದನು. ವಿಭೀಷಣನ ಮುಖವನ್ನು ನೋಡಿ ಸುಗ್ರೀವನೇ ಮೊದಲಾದ ವಾನರರನ್ನು ವೀಕ್ಷಿಸುತ್ತಾ ಕಂಬನಿಗರೆಯುತ್ತಿದ್ದ ಲಕ್ಷ್ಮಣನು ಮೆಲ್ಲನೆ ವಿಭೀಷಣನಿಗೆ ಹೇಳಿದನು :

ಹತಾಮಿನ್ದ್ರಜಿತಾ ಸೀತಾಮಿಹ ಶ್ರುತ್ವೈವ ರಾಘವಃ ।
ಹನುಮದ್ವಚನಾತ್ಸೌಮ್ಯ ತತೋ ಮೋಹಮುಪಾಗತಃ ॥೭॥

"ಸೌಮ್ಯನೇ! ವಿಭೀಷಣನೇ! 'ಇಂದ್ರಜಿತುವಿನಿಂದ ಸೀತಾದೇವಿಯು ಹತಳಾದಳು'-ಎಂಬ ಮಾತನ್ನು ಹನುಮಂತನಿಂದ ಕೇಳಿದೊಡನೆಯೇ ರಾಘವನು ಮೂರ್ಛಿತನಾಗಿದ್ದಾನೆ."

ಲಕ್ಷ್ಮಣನು ಮಾತನ್ನು ಮುಂದುವರಿಸದಂತೆ ತಡೆದು ನಿಲ್ಲಿಸಿ ವಿಭೀಷಣನು ಸಂಜ್ಞೆಯಿಂದ ರಹಿತನಾಗಿದ್ದ ಶ್ರೀರಾಮನಿಗೆ ಶ್ರೇಷ್ಠವಾದ ಈ ಮಾತನ್ನು ಹೇಳಿದನು :

"ಮಹಾರಾಜ! ಹನುಮಂತನು ದುಃಖಿತನಾಗಿ ನಿನಗೆ ಯಾವ ವಾರ್ತೆಯನ್ನು ಅರುಹಿದನೋ-ಆ ವಾರ್ತೆಯು ಸಮುದ್ರದ ಶೋಷಣೆಯಂತೆ ಅಸಂಭವವಾದುದೆಂದು ನಾನು ಭಾವಿಸುತ್ತೇನೆ. ದುರಾತ್ಮನಾದ ರಾವಣನಿಗೆ ಸೀತೆಯ ವಿಷಯದಲ್ಲಿ ಎಂತಹ ಅಭಿಪ್ರಾಯವಿರುವುದೆಂಬುದನ್ನು ನಾನು ಚೆನ್ನಾಗಿ ತಿಳಿದಿರುವೆನು. ಯಾವುದೇ ಕಾರಣದಿಂದಲೂ ರಾವಣನು ಸೀತೆಯನ್ನು ಕೊಲ್ಲಲು ಹೋಗುವುದಿಲ್ಲ. ಹಿತಚಿಂತಕನಾದ ನಾನು ಹಲವು ಬಾರಿ ಅವನಿಗೆ ಸೀತೆಯನ್ನು ಬಿಟ್ಟುಬಿಡುವಂತೆ ಹೇಳಿದರೂ ಅವನು ನನ್ನ ಮಾತಿನಂತೆ ನಡೆದುಕೊಳ್ಳಲಿಲ್ಲ.

ನೈವ ಸಾಮ್ನಾ ನ ದಾನೇನ ನ ಭೇದೇನ ಕುತೋ ಯುಧಾ ।
ಸಾ ದ್ರಷ್ಟುಮಪಿ ಶಕ್ಯೇತ ನೈವ ಚಾನ್ಯೇನ ಕೇನಚಿತ್ ॥೧೨॥

ಬೇರೊಬ್ಬ ಯಾವನೇ ಪುರುಷನಾದರೂ ಸಾಮ-ದಾನ-ಭೇದನೀತಿಗಳಿಂದಲೂ ಸೀತಾದೇವಿಯನ್ನು ನೋಡಲಾರನು. ಹೀಗಿರುವಾಗ ಯುದ್ಧದ ಮೂಲಕವಾಗಿ ನೋಡಲು ಹೇಗೆ ತಾನೇ ಸಾಧ್ಯವಾದೀತು?

ವಾನರಾನ್ಮೋಹಯಿತ್ವಾ ತು ಪ್ರತಿಯಾತಃ ಸ ರಾಕ್ಷಸಃ ।
ಮಾಯಾಮಯೀಂ ಮಹಾಬಾಹೋ ತಾಂ ವಿದ್ಧಿ ಜನಕಾತ್ಮಜಾಮ್ ।
ಚೈತ್ಯಂ ನಿಕುಮ್ಭಿಲಾಂ ನಾಮ ಯತ್ರ ಹೋಮಂ ಕರಿಷ್ಯತಿ ॥೧೩॥

ಮಹಾಬಾಹುವೇ! ರಾಘವ! ರಾಕ್ಷಸನಾದ ಇಂದ್ರಜಿತುವು ವಾನರರನ್ನು ಭ್ರಮೆಗೊಳಿಸಿ ಹೊರಟುಹೋಗಿದ್ದಾನೆ. ಇಂದ್ರಜಿತುವಿನಿಂದ ಕೊಲ್ಲಲ್ಪಟ್ಟ ಜಾನಕಿಯು ಮಾಯಾಸೀತೆಯೆಂದು ತಿಳಿ. ನಿಜವಾದ ಸೀತಾದೇವಿಯಲ್ಲ. ಈಗ ಇಂದ್ರಜಿತುವು ನಿಕುಂಭಿಲಾಮಂದಿರಕ್ಕೆ ಹೋಗಿ ಹೋಮವನ್ನು ಮಾಡುತ್ತಾನೆ.

ಅವನೇನಾದರೂ ಹೋಮವನ್ನು ಪೂರೈಸಿ ಯುದ್ಧಕ್ಕೆ ಬಂದುದೇ ಆದರೆ ಅವನನ್ನು ಎದುರಿಸಿ ನಿಂತು ಯುದ್ಧಮಾಡಲು ಇಂದ್ರಸಹಿತರಾದ ದೇವತೆಗಳಿಗೂ ಸಾಧ್ಯವಾಗುವುದಿಲ್ಲ. ನಮ್ಮನ್ನು ಭ್ರಾಂತಿಗೊಳಿಸುವ ಸಲುವಾಗಿಯೇ ಅವನು ಈ ಮಾಯೆಯ ಪ್ರಯೋಗಮಾಡಿದ್ದಾನೆ. ವಾನರರು ಪರಾಕ್ರಮವನ್ನೇ ತೋರಿಸುತ್ತಿದ್ದರೆ ತನ್ನ ಹೋಮಕ್ರಿಯೆಗೆ ವಿಘ್ನವುಂಟಾಗುವುದೆಂದು ಭಾವಿಸಿ ಅವನು ಹೀಗೆ ಮಾಡಿದ್ದಾನೆ. ಅವನು ಪ್ರಾರಂಭಿಸಿರುವ ಹೋಮವು ಪೂರ್ಣವಾಗುವಷ್ಟರಲ್ಲಿಯೇ ನಾವೆಲ್ಲರೂ ಸೈನ್ಯಸಮೇತರಾಗಿ ನಿಕುಂಭಿಲಾಮಂದಿರಕ್ಕೆ ಹೋಗೋಣ. ರಾಘವ! ಸುಳ್ಳುಮಾತಿನಿಂದ ಒದಗಿರುವ ಈ ನಿನ್ನ ಸಂತಾಪವನ್ನು ದೂರಮಾಡು.

ಪ್ರಭುವೇ! ನೀನು ಶೋಕತಪ್ತನಾಗಿರುವುದನ್ನು ಕಂಡು ನಮ್ಮ ಸಮಗ್ರಸೈನ್ಯವೂ ಕುಗ್ಗಿಹೋಗುತ್ತದೆ. ಧೈರ್ಯದಿಂದಲೂ ಬಲದಿಂದಲೂ ಶ್ರೇಷ್ಠನಾಗಿರವ ನೀನು ದುಃಖವನ್ನು ದೂರಗೊಳಿಸಿ ಸ್ವಸ್ಥಚಿತ್ತನಾಗಿ ಇಲ್ಲಿಯೇ ಇರು. ಸೈನ್ಯದೊಡನೆ ಹೋಗುವ ನಮ್ಮೊಡನೆ ಲಕ್ಷ್ಮಣನನ್ನು ಕಳುಹಿಸಿಕೊಡು. ನರಶ್ರೇಷ್ಠನಾದ ಲಕ್ಷ್ಮಣನು ನಿಶಿತವಾದ ಬಾಣಗಳಿಂದ ಇಂದ್ರಜಿತುವು ತನ್ನ ಹೋಮಕರ್ಮಗಳನ್ನು ಮುಗಿಸದಂತೆ ಮಾಡುತ್ತಾನೆ. ಅನಂತರ ಅವನನ್ನು ವಧಿಸಲು ಶಕ್ತನಾಗುತ್ತಾನೆ. ಲಕ್ಷ್ಮಣನ ನಿಶಿತವಾದ, ತೀಕ್ಷ್ಣವಾದ, ಪಕ್ಷಿಗಳ ರೆಕ್ಕೆಗಳನ್ನು ಹೊಂದಿರುವ ಕ್ರೂರವಾದ ಬಾಣಗಳು ಗೃಧ್ರಗಳಂತೆ ಇಂದ್ರಜಿತುವಿನ ರಕ್ತವನ್ನು ಪಾನಮಾಡುತ್ತವೆ. ವಜ್ರಾಯುಧಧರನಾದ ಇಂದ್ರನು ದೈತ್ಯರ ವಧೆಗಾಗಿ ವಜ್ರಾಯುಧಕ್ಕೆ ಆದೇಶವನ್ನು

ನೀಡುವಂತೆ–ಇಂದ್ರಜಿತುವಿನ ವಧೆಗಾಗಿ ನೀನು ಶುಭಲಕ್ಷಣನಾದ ಲಕ್ಷ್ಮಣನಿಗೆ ಆದೇಶವನ್ನು ನೀಡು. ನರೇಶ್ವರನೇ! ಶತ್ರುವಿನ ವಿನಾಶವಾಗಬೇಕಾಗಿರುವ ಈ ಸಮಯದಲ್ಲಿ ವ್ಯರ್ಥವಾಗಿ ಕಾಲಕಳೆಯುವುದು ಉಚಿತವಾಗಿ ಕಾಣುವುದಿಲ್ಲ. ಆದುದರಿಂದ ಶತ್ರುವಿನ ವಿನಾಶಕ್ಕೆ ಯಾವುದು ಉಚಿತವೋ ಅದನ್ನು ಶೀಘ್ರವಾಗಿ ಮಾಡಬೇಕು. ದೈವದ್ರೋಹಿಗಳಾದ ದೈತ್ಯರ ವಿನಾಶಕ್ಕಾಗಿ ದೇವೇಂದ್ರನು ವಜ್ರಾಯುಧವನ್ನು ಕಳುಹಿಸಿದಂತೆ–ನೀನು ಇಂದ್ರಜಿತುವಿನ ವಿನಾಶಕ್ಕಾಗಿ ಲಕ್ಷ್ಮಣನನ್ನು ಕಳುಹಿಸಿಕೊಡು.

ನಾನು ಈ ಹಿಂದೆಯೇ ಹೇಳಿದಂತೆ ನಿಕುಂಭಿಲಾಮಂದಿರದಲ್ಲಿ ಅವನೇನಾದರೂ ಹೋಮಕರ್ಮವನ್ನು ಪೂರ್ಣಗೊಳಿಸಿಬಿಟ್ಟರೆ–ಯುದ್ಧದಲ್ಲವನನ್ನು ದೇವ-ದಾನವರಾದಿಯಾಗಿ ಯಾರೂ ನೋಡಲಾರರು. ಹೋಮವನ್ನು ಮುಗಿಸಿ ಅವನೇನಾದರೂ ರಣರಂಗಕ್ಕೆ ಬಂದನಾದರೆ ದೇವತೆಗಳಿಗೆ ಕೂಡ ಅವನೊಡನೆ ಯುದ್ಧಮಾಡಲು ಸಾಧ್ಯವಾಗುವುದಿಲ್ಲ. ಅವರ ಪ್ರಾಣರಕ್ಷಣೆಯಲ್ಲಿ ಸಂಶಯವೇ ಉಂಟಾಗುತ್ತದೆ.

೮೪ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೮೫ನೆಯ ಸರ್ಗ

ವಿಭೀಷಣನ ಪ್ರಾರ್ಥನೆಯಂತೆ ಶ್ರೀರಾಮನು ಇಂದ್ರಜಿತುವಿನೊಡನೆ ಯುದ್ಧಮಾಡಲು ಲಕ್ಷ್ಮಣನಿಗೆ ಅನುಮತಿಸಿದುದು : ಸೇನಾಸಹಿತನಾದ ಲಕ್ಷ್ಮಣನು ನಿಕುಂಭಿಲಾಮಂದಿರದ ಬಳಿಗೆ ಹೋದುದು

ತಸ್ಯ ತದ್ವಚನಂ ಶ್ರುತ್ವಾ ರಾಘವಃ ಶೋಕಕರ್ಶಿತಃ ।
ನೋಪಧಾರಯತೇ ವ್ಯಕ್ತಂ ಯದುಕ್ತಂ ತೇನ ರಕ್ಷಸಾ ॥೧॥

ಅತ್ಯಂತಶೋಕಮಗ್ನನಾಗಿದ್ದ ಶ್ರೀರಾಮನು ವಿಭೀಷಣನ ಮಾತುಗಳನ್ನೇನೋ ಕೇಳಿದನು. ಆದರೆ ಮನಸ್ಸು ಸೀತಾಮರಣದ ವಿಷಯದಲ್ಲಿಯೇ ಮಗ್ನವಾಗಿದ್ದುದರಿಂದ ವಿಭೀಷಣನು ಏನು ಹೇಳಿದನೆಂಬುದನ್ನು ಗ್ರಹಿಸಲೇ ಇಲ್ಲ.

ಅನಂತರ ಸ್ವಲ್ಪ ಧೈರ್ಯವನ್ನು ತಂದುಕೊಂಡು ಪರಪುರಂಜಯನಾದ ಶ್ರೀರಾಮನು ಹನುಮಂತನ ಸಮೀಪದಲ್ಲಿ ಕುಳಿತಿದ್ದ ವಿಭೀಷಣನಿಗೆ ಹೇಳಿದನು:

"ರಾಕ್ಷಸರಾಜನೇ! ನೀನು ಇದುವರೆಗೆ ಹೇಳಿದ ಮಾತುಗಳೆಲ್ಲವನ್ನೂ ನಾನು ಪುನಃ ಕೇಳಬೇಕೆಂದಿದ್ದೇನೆ. ನೀನು ಹೇಳಬೇಕಾಗಿರುವುದನ್ನು ಪುನಃ ಹೇಳು."

ಶ್ರೀರಾಮನ ಆ ಮಾತನ್ನು ಕೇಳಿ ಮಾತನಾಡುವುದರಲ್ಲಿ ಅತಿಕುಶಲ ನಾದ ವಿಭೀಷಣನು ಹಿಂದೆ ತಾನು ಹೇಳಿದ್ದ ಮಾತುಗಳನ್ನೇ ಪುನಃ ಹೇಳಲು ಉಪಕ್ರಮಿಸಿದನು :

"ಮಹಾಬಾಹುವೇ! ರಾಘವ! ನಿನ್ನ ಆದೇಶದಂತೆ ನಾನು ವಾನರ ಸೈನ್ಯವನ್ನು ಆಯಾಸ್ಥಳಗಳಲ್ಲಿ ನಿಲ್ಲಿಸಿ ಬಂದಿದ್ದೇನೆ. ಎಲ್ಲ ಸೈನ್ಯವನ್ನೂ ವಿಭಾಗಿಸಿ ಸುತ್ತಲೂ ಇರುವ ಹೆಬ್ಬಾಗಿಲುಗಳ ಬಳಿಯಲ್ಲಿ ನಿಲ್ಲಿಸಿದ್ದೇನೆ. ಯಥೋಚಿತವಾದ ರೀತಿಯಲ್ಲಿ ಯೂಥಪತಿಗಳನ್ನು ಅಲ್ಲಿ ನಿಯಮಿಸ ಲಾಗಿದೆ. ನಿನ್ನ ಆಜ್ಞೆಗೆ ಸಂಬಂಧಿಸಿದಂತೆ ಈ ವಿಷಯವನ್ನು ನಿನ್ನಲ್ಲಿ ವಿಜ್ಞಾಪಿಸಿ ಕೊಂಡಿರುತ್ತೇನೆ. ಇದಲ್ಲದೇ ವಿಜ್ಞಾಪಿಸಿಕೊಳ್ಳಬೇಕಾದ ಮತ್ತೊಂದು ವಿಷ ಯವೂ ಇದೆ. ನೀನು ಕಾರಣವಿಲ್ಲದೇ ಶೋಕದಿಂದ ಪರಿತಪಿಸುತ್ತಿರುವೆ. ನೀನು ಪರಿತಪಿಸುತ್ತಿರುವುದರಿಂದ ನಮ್ಮ ಮನಸ್ಸೂ ಸಂತಾಪಗೊಂಡಿದೆ. ಸುಳ್ಳುಸುದ್ದಿಯಿಂದ ಒದಗಿರುವ ಈ ನಿನ್ನ ಶೋಕವನ್ನು ಪರಿತ್ಯಜಿಸು. ಈ ನಿನ್ನ ಚಿಂತೆಯು ನಮ್ಮನ್ನೂ ಚಿಂತಿತರನ್ನಾಗಿ ಮಾಡಿರುವುದಲ್ಲದೇ ನಮ್ಮ ಶತ್ರುಗಳಿಗೆ ಹರ್ಷವನ್ನೂ ಉಂಟುಮಾಡಿದೆ. ನಿನ್ನ ಚಿಂತೆಯನ್ನು ದೂರ ಮಾಡು. ಸೀತೆಯನ್ನು ಪಡೆದುಕೊಳ್ಳಬೇಕಾದರೆ ರಾಕ್ಷಸರನ್ನು ಸಂಹರಿಸಲು ಉದ್ಯುಕ್ತನಾಗು. ಹರ್ಷೋತ್ಸಾಹಗಳನ್ನು ಹೊಂದು. ನೀನು ಹರ್ಷದಿಂದಿದ್ದರೆ ನಾವೆಲ್ಲರೂ ಉತ್ಸಾಹದಿಂದ ಕಾರ್ಯಮಾಡುತ್ತೇವೆ.

ರಘುನಂದನ! ಹಿತಕರವಾದ ಇನ್ನೂ ಒಂದು ಮಾತನ್ನು ಹೇಳು ವೆನು ; ಕೇಳು. ಇಂದ್ರಜಿತುವು ಈಗ ಹೋಮವನ್ನು ಪೂರೈಸಲು ನಿಕುಂಭಿಲಾ ಮಂದಿರಕ್ಕೆ ಹೋಗಿದ್ದಾನೆ. ಆ ಮಂದಿರದ ಬಳಿಗೆ ಹೋಗಿ ಇಂದ್ರಜಿತು

ವನ್ನು ಸಂಹರಿಸುವ ಸಲುವಾಗಿ ಲಕ್ಷ್ಮಣನು ಅಪಾರವಾದ ವಾನರಸೈನ್ಯ ದೊಡನೆ ಅಲ್ಲಿಗೆ ಹೋಗುವುದು ಉಚಿತವಾಗಿ ಕಾಣುತ್ತದೆ.

ಮಹಾಧನುಷ್ಮಂತನಾದ ಲಕ್ಷ್ಮಣನು–ಮಂಡಲಾಕಾರವಾದ ಧನುಸ್ಸಿನಿಂದ ಹೊರಬರುವ ಸರ್ಪಗಳಂತಿರುವ ಬಾಣಗಳಿಂದ ರಾವಣಿಯನ್ನು ಸಂಹರಿಸಲು ನಿಕುಂಭಿಲಾಮಂದಿರಕ್ಕೆ ಹೋಗಬೇಕಾಗಿದೆ. ಮಹಾವೀರನಾದ ಇಂದ್ರಜಿತುವು ತಪಸ್ಸನ್ನು ಮಾಡಿ ಬ್ರಹ್ಮನಿಂದ ವರದ ರೂಪವಾಗಿ ಬ್ರಹ್ಮಶಿರವೆಂಬ ಅಮೋಘವಾದ ಅಸ್ತ್ರವನ್ನು ಪಡೆದುಕೊಂಡಿರುವನು. ಅವನ ಕುದುರೆಗಳು ಇಚ್ಛಿಸಿದಲ್ಲಿಗೆ ಹೋಗುವ ಸಾಮರ್ಥ್ಯವನ್ನು ಪಡೆದಿವೆ. ಇಂದ್ರಜಿತುವು ಈ ಸಮಯದಲ್ಲಿ ಸೈನ್ಯಸಮೇತನಾಗಿ ನಿಕುಂಭಿಲಾಮಂದಿರಕ್ಕೆ ಹೋಗಿದ್ದಾನೆ. ಅವನೇನಾದರೂ ಹೋಮಕರ್ಮವನ್ನು ಯಥಾವಿಧಿಯಾಗಿ ಮುಗಿಸಿ ಎದ್ದು ಬಂದನೆಂದರೆ–ನಾವೆಲ್ಲರೂ ಹತರಾದೆವೆಂದೇ ಭಾವಿಸಬಹುದು. ಸರ್ವಲೋಕೇಶ್ವರನಾದ ಬ್ರಹ್ಮನು ಇಂದ್ರಜಿತುವಿಗೆ ವರವನ್ನು ದಯಪಾಲಿಸುತ್ತಾ ಅವನ ಮೃತ್ಯುವಿಗೆ ಸಂಬಂಧಿಸಿದ ರಹಸ್ಯವನ್ನು ಹೇಳಿರುವನು :

ನಿಕುಮ್ಭಿಲಾಮಸಂಪ್ರಾಪ್ತಮಹುತಾಗ್ನಿಂ ಚ ಯೋ ರಿಪುಃ ।
ತ್ವಾಮಾತತಾಯಿನಂ ಹನ್ಯಾದಿನ್ದ್ರಶತ್ರೋಃ ಸ ತೇ ವಧಃ ॥೧೪॥

"ನೀನು ಆಲದಮರದ ಬುಡದಲ್ಲಿರುವ ನಿಕುಂಭಿಲಾಮಂದಿರವನ್ನು ಸೇರದೇ ಮತ್ತು ಹೋಮವನ್ನು ಪೂರ್ತಿಗೊಳಿಸದೇ ಇರುವಾಗ ಶಸ್ತ್ರಪಾಣಿಯಾದ ನಿನ್ನನ್ನು ಯಾವ ಶತ್ರುವು ಆಕ್ರಮಿಸುವನೋ–ಅವನೇ ಮುಂದೆ ನಿನ್ನನ್ನು ವಧಿಸುತ್ತಾನೆ."

ರಾಘವ! ಬ್ರಹ್ಮನು ಧೀಮಂತನಾದ ಇಂದ್ರಜಿತುವಿನ ವಧೆಯನ್ನು ಹೀಗೆ ವಿಧಿಸಿದ್ದಾನೆ. ಆದುದರಿಂದ ಇಂದ್ರಜಿತುವಿನ ವಧೆಗಾಗಿ ಮಹಾಬಲ ನಾದ ಲಕ್ಷ್ಮಣನಿಗೆ ಆಜ್ಞಾಪಿಸು. ಅವನೊಬ್ಬನು ಹತನಾದರೆ ಸುಹೃದರಿಂದ ಸಮೇತನಾದ ರಾವಣನೂ ಹತನಾದನೆಂದೇ ಭಾವಿಸು."

ವಿಭೀಷಣನ ಆ ಮಾತನ್ನು ಕೇಳಿ ಶ್ರೀರಾಮನು ಹೇಳಿದನು :

"ಸತ್ಯಪರಾಕ್ರಮನೇ! ವಿಭೀಷಣ! ಮಹಾಭಯಂಕರನಾದ ಇಂದ್ರಜಿತುವಿನ ಮಾಯೆಯನ್ನು ನಾನೂ ತಿಳಿದಿರುವೆನು. ಬ್ರಹ್ಮಾಸ್ತ್ರವನ್ನು ತಿಳಿದಿರುವ, ಬುದ್ಧಿವಂತನಾದ, ಮಹಾಮಾಯನಾದ, ಮಹಾಬಲನಾದ ಅವನು

ಯುದ್ಧದಲ್ಲಿ ವರುಣಸಹಿತರಾದ ಎಲ್ಲ ದೇವತೆಗಳನ್ನೂ ಸಂಜ್ಞಾಹೀನರನ್ನಾಗಿ ಮಾಡಲು ಸಮರ್ಥನಾಗಿದ್ದಾನೆ. ಮಹಾಯಶೋವಂತನಾದ ಅವನು ರಥದಲ್ಲಿ ಕುಳಿತು ಆಕಾಶದಲ್ಲಿ ಸಂಚರಿಸುತ್ತಿದ್ದರೆ ಮೇಘಗಳಿಂದ ಆವೃತನಾದ ಸೂರ್ಯನ ಗಮನದಂತೆ–ಅವನ ಸಂಚಾರಮಾರ್ಗವೇ ನಮಗೆ ತಿಳಿಯುವುದಿಲ್ಲ.''

ಶ್ರೀರಾಮನು, ದುರಾತ್ಮನಾದ ಶತ್ರುವು ಮಹಾವೀರ್ಯವಂತನೆಂಬುದನ್ನು ತಿಳಿದು ಕೀರ್ತಿಸಂಪನ್ನನಾದ ಲಕ್ಷ್ಮಣನಿಗೆ ಹೇಳಿದನು :

"ಲಕ್ಷ್ಮಣ! ನೀನು ವಾನರೇಂದ್ರನಾದ ಸುಗ್ರೀವನ ಸೈನ್ಯದಿಂದಲೂ, ಹನುಮಂತನೇ ಮೊದಲಾದ ವಾನರನಾಯಕರಿಂದಲೂ, ಕರಡಿಗಳಿಗೆ ರಾಜನಾದ ಜಾಂಬವಂತನಿಂದಲೂ ಮತ್ತು ಅವನ ಸೈನ್ಯದಿಂದಲೂ ಪರಿವೃತನಾಗಿ ನಿಕುಂಭಿಲಾಮಂದಿರಕ್ಕೆ ಹೋಗಿ ಅಲ್ಲಿರುವ ಮಾಯಾಬಲದಿಂದ ಕೂಡಿರುವ ರಾಕ್ಷಸಪುತ್ರನಾದ ಇಂದ್ರಜಿತುವನ್ನು ಸಂಹರಿಸು. ಇಂದ್ರಜಿತುವಿನ ಮಾಯೆಗಳೆಲ್ಲವನ್ನೂ ಸಂಪೂರ್ಣವಾಗಿ ತಿಳಿದಿರುವ ಮಹಾತ್ಮನಾದ ವಿಭೀಷಣನು ತನ್ನ ಸಚಿವರೊಡನೆ ನಿನ್ನನ್ನನುಸರಿಸಿ ಬರುತ್ತಾನೆ.''

ಭಯಂಕರಪರಾಕ್ರಮಿಯಾದ ಲಕ್ಷ್ಮಣನು ವಿಭೀಷಣಸಹಿತನಾಗಿ ಶ್ರೀರಾಮನ ಮಾತನ್ನು ಕೇಳಿ ಶ್ರೇಷ್ಠವಾದೊಂದು ಧನುಸ್ಸನ್ನು ಎತ್ತಿಕೊಂಡನು. ಕವಚವನ್ನು ಧರಿಸಿ ಕತ್ತಿಯನ್ನು ಹಿಡಿದು ಸುವರ್ಣಮಯವಾದ ಧನುಸ್ಸನ್ನೂ ಬಾಣಗಳನ್ನೂ ಹಿಡಿದು ಯುದ್ಧಸನ್ನದ್ಧನಾಗಿ ಪರಮ ಹರ್ಷದಿಂದ ಶ್ರೀರಾಮನ ಪಾದಗಳಿಗೆ ನಮಸ್ಕರಿಸಿ ಹೇಳಿದನು :

"ಆರ್ಯನೇ! ನನ್ನ ಧನುಸ್ಸಿನಿಂದ ಹೊರಬರುವ ನಿಶಿತವಾದ ಬಾಣಗಳು ರಾವಣಿಯನ್ನು ಭೇದಿಸಿಕೊಂಡು ಹೊರಬಂದು ಹಂಸಗಳು ಪುಷ್ಕರಿಣಿಯನ್ನು ಸೇರುವಂತೆ ಲಂಕೆಗೆ ಹೋಗಿ ಬೀಳುತ್ತವೆ. ನನ್ನ ಈ ಮಹಾಧನುಸ್ಸಿನ ನಾಣಿನಿಂದ ಚಿಮ್ಮಲ್ಪಟ್ಟ ಬಾಣಗಳು ಭಯಂಕರನಾದ ಆ ರಾಕ್ಷಸನ ಶರೀರವನ್ನು ಭೇದಿಸಿ ಈ ಕ್ಷಣದಲ್ಲಿಯೇ ಅವನನ್ನು ಧ್ವಂಸಮಾಡುತ್ತವೆ.''

ಇಂದ್ರಜಿತುವನ್ನು ಸಂಹರಿಸಬೇಕೆನ್ನುವ ಪೂರ್ಣವಾದ ಅಭಿಲಾಷೆಯಿಂದ ಕೂಡಿದ್ದ ಕಾಂತಿಯುಕ್ತನಾಗಿದ್ದ ಲಕ್ಷ್ಮಣನು ಅಣ್ಣನ ಮುಂದೆ ಹೀಗೆ

ಹೇಳಿ ಅತಿತ್ವರೆಯಿಂದಲೇ ಅಲ್ಲಿಂದ ಹೊರಟನು. ಹೊರಡುವ ಮೊದಲು ಅಣ್ಣನಾದ ಶ್ರೀರಾಮನ ಪಾದಗಳಿಗೆ ನಮಸ್ಕರಿಸಿ ಅವನಿಗೆ ಪ್ರದಕ್ಷಿಣೆಮಾಡಿ ಇಂದ್ರಜಿತುವಿನಿಂದ ರಕ್ಷಿಸಲ್ಪಡುತ್ತಿದ್ದ ನಿಕುಂಭಿಲಾಮಂದಿರಕ್ಕೆ ಹೊರಟನು. ಶ್ರೀರಾಮನು ತಮ್ಮನ ವಿಜಯಕ್ಕಾಗಿ ಸ್ವಸ್ತಿವಾಚನಮಾಡಿದನಂತರ ಪ್ರತಾಪ ವಂತನಾದ ಲಕ್ಷ್ಮಣನು ವಿಭೀಷಣನೊಡನೆ ವೇಗವಾಗಿ ನಿಕುಂಭಿಲಾ ಮಂದಿರದ ಕಡೆಗೆ ಹೊರಟನು.

ಅನೇಕಸಹಸ್ರ ವಾನರರಿಂದ ಪರಿವೃತನಾಗಿದ್ದ ಹನುಮಂತನೂ– ನಾಲ್ವರು ಅಮಾತ್ಯರೊಡನೆ ವಿಭೀಷಣನೂ ಲಕ್ಷ್ಮಣನನ್ನು ಅನುಸರಿಸಿ ಹೊರ ಟರು. ಅಪಾರವಾದ ವಾನರಸೈನ್ಯದಿಂದ ಪರಿವೃತನಾಗಿ ಹೋಗುತ್ತಿದ್ದಾಗ ಲಕ್ಷ್ಮಣನು ಹಾದಿಯಲ್ಲಿ ಋಕ್ಷರಾಜನಾದ ಜಾಂಬವಂತನೂ ಸೈನ್ಯದೊಡನೆ ನಿಂತಿರುವುದನ್ನು ನೋಡಿದನು. ಬಹಳ ದೂರ ಪ್ರಯಾಣಮಾಡಿದನಂತರ ಮಿತ್ರರಿಗೆ ಆನಂದದಾಯಕನಾದ ಲಕ್ಷ್ಮಣನು ವ್ಯೂಹಕ್ರಮದಲ್ಲಿ ನಿಂತಿದ್ದ ರಾಕ್ಷ ಸೇಂದ್ರನ ಮಹಾಸೈನ್ಯವನ್ನು ದೂರದಿಂದಲೇ ನೋಡಿದನು. ಶತ್ರುದಮನ ನಾದ ಲಕ್ಷ್ಮಣನು ಧನುಸ್ಸನ್ನು ಕೈಯಲ್ಲಿ ಹಿಡಿದು, ಬ್ರಹ್ಮನಿಂದ ನಿಶ್ಚಯಿಸಲ್ಪಟ್ಟಿದ್ದ ವಿಧಿಗೆ ಅನುಸಾರವಾಗಿ ಮಾಯಾಕುಶಲನಾದ ಇಂದ್ರಜಿತುವನ್ನು ಜಯಿಸಲು ಅವನಿದ್ದ ನಿಕುಂಭಿಲಾಮಂದಿರದ ಸಮೀಪಕ್ಕೆ ಹೋಗಿ ನಿಂತನು. ಆ ಸಮಯದಲ್ಲಿ ವಿಭೀಷಣ, ಅಂಗದ ಮತ್ತು ಹನುಮಂತರು ಲಕ್ಷ್ಮಣನ ಜೊತೆಯಲ್ಲಿದ್ದರು. ಝುಗ-ಝುಗಿಸುವ ಶಸ್ತ್ರಾಸ್ತ್ರಗಳಿಂದ ಪ್ರಕಾಶಮಾನವಾಗಿದ್ದ, ಧ್ವಜಗಳಿಂದಲೂ ಮತ್ತು ಮಹಾರಥಗಳಿಂದಲೂ ಅತ್ಯಂತಗಹನವಾಗಿ ಕಾಣುತ್ತಿದ್ದ, ಪ್ರತಿರೋಧಿಗಳಿಗೆ ಅತಿಭಯಂಕರವಾಗಿ ಕಾಣುತ್ತಿದ್ದ, ಅಪ್ರತಿಮವಾದ ವೇಗದಿಂದ ಕೂಡಿದ್ದ, ಗಾಢಾಂಧಕಾರಸದೃಶವಾಗಿದ್ದ ಶತ್ರುಗಳ ಸೈನ್ಯವನ್ನು ಲಕ್ಷ್ಮಣನು ಪ್ರವೇಶಿಸಿದನು.

ಲ೫ನೆಯ ಸರ್ಗವು ಮುಗಿಯಿತು.

ವಾನರ-ರಾಕ್ಷಸರ ಭಯಂಕರ ಸಮರ : ಹನುಮಂತನಿಂದ ರಾಕ್ಷಸಸೈನಿಕರ ಸಂಹಾರ : ಹನುಮಂತನು ದ್ವಂದ್ವಯುದ್ಧಕ್ಕೆ ಇಂದ್ರಜಿತುವನ್ನು ಆಹ್ವಾನಿಸಿದುದು

ಅಥ ತಸ್ಯಾಮವಸ್ಥಾಯಾಂ ಲಕ್ಷ್ಮಣಂ ರಾವಣಾನುಜಃ ।
ಪರೇಷಾಮಹಿತಂ ವಾಕ್ಯಮರ್ಥಸಾಧಕಮಬ್ರವೀತ್ ॥೧॥

ಆ ಸಮಯದಲ್ಲಿ ರಾವಣನ ತಮ್ಮನಾದ ವಿಭೀಷಣನು ಶತ್ರುಗಳಿಗೆ ಅಹಿತಕರವಾದ ಮತ್ತು ಲಕ್ಷ್ಮಣನ ಅರ್ಥಸಿದ್ಧಿಗೆ ಕಾರಣವಾಗುವ ಈ ಮಾತುಗಳನ್ನು ಹೇಳಿದನು :

"ಲಕ್ಷ್ಮಣ! ವೃಕ್ಷಾಯುಧರಾದ ವಾನರಸೈನಿಕರೊಡನೆ ಕೂಡಿಕೊಂಡು ಇಲ್ಲಿ ಕಾಣುತ್ತಿರುವ, ಮೇಘದಂತೆ ಶ್ಯಾಮಲವರ್ಣದಿಂದ ಕೂಡಿರುವ ರಾಕ್ಷಸ ಸೈನಿಕರೊಡನೆ ಯುದ್ಧವನ್ನು ಆರಂಭಿಸು. ವ್ಯೂಹಕ್ರಮದಲ್ಲಿ ನಿಂತಿರುವ ಈ ರಾಕ್ಷಸಸೈನ್ಯವನ್ನು ಭೇದಿಸಲು ಪ್ರಯತ್ನಿಸು. ಅದನ್ನು ಭೇದಿಸಿದ ನಂತರವೇ ನಿನಗೆ ರಾವಣನ ಮಗನಾದ ಇಂದ್ರಜಿತುವು ಕಾಣಿಸಿಕೊಳ್ಳುವನು. ಅವನೀಗ ಮಾಡುತ್ತಿರುವ ಹವನಕರ್ಮವು ಮುಗಿಯುವುದರೊಳಗಾಗಿ ವಜ್ರಾಯುಧ ಸದೃಶವಾದ ಬಾಣಗಳನ್ನು ಸುರಿಸುತ್ತಾ ಶತ್ರುಸೈನ್ಯವನ್ನು ಆಕ್ರಮಿಸು. ಈ ರಾಕ್ಷಸವ್ಯೂಹವನ್ನು ಛಿನ್ನ-ಭಿನ್ನಗೊಳಿಸಿದನಂತರ ದುರಾತ್ಮನಾದ, ಅಧಾರ್ಮಿಕನಾದ, ಕ್ರೂರಕರ್ಮಿಯಾದ, ಮಾಯಾವಿಯಾದ, ಸರ್ವ ಲೋಕಭಯಂಕರನಾದ ಇಂದ್ರಜಿತುವನ್ನು ಸಂಹರಿಸು."

ವಿಭೀಷಣನ ಆ ಮಾತನ್ನು ಕೇಳಿ ಶುಭಲಕ್ಷಣಗಳಿಂದ ಸಂಪನ್ನನಾದ ಲಕ್ಷ್ಮಣನು ಇಂದ್ರಜಿತುವನ್ನು ಅನುಲಕ್ಷಿಸಿ ಬಾಣಗಳ ಮಳೆಗರೆದನು. ಲಕ್ಷ್ಮಣನು ಇಂದ್ರಜಿತುವಿನೊಡನೆ ಯುದ್ಧವನ್ನು ಪ್ರಾರಂಭಿಸಿದೊಡನೆಯೇ ವೃಕ್ಷಾಯುಧಧಾರಿಗಳಾದ ಕಪಿ-ಕರಡಿಸೈನಿಕರು ರಾಕ್ಷಸಸೈನಿಕರ ಮೇಲೆ ದಾಳಿ ಮಾಡಿದರು. ರಾಕ್ಷಸರು ಕೂಡ ನಿಶಿತವಾದ ಬಾಣಗಳಿಂದಲೂ, ಕತ್ತಿ ಗಳಿಂದಲೂ, ಶಕ್ತಿ-ತೋಮರಗಳಿಂದಲೂ ಕೂಡಿದವರಾಗಿ ವಾನರಸೈನ್ಯವನ್ನು ನಾಶಮಾಡುವ ಇಚ್ಛೆಯಿಂದ ಮರುದಾಳಿಯನ್ನು ಆರಂಭಿಸಿದರು. ಹೀಗೆ

ವಾನರರಿಗೂ–ರಾಕ್ಷಸರಿಗೂ ಘೋರವಾದ ಯುದ್ಧವು ಪ್ರಾರಂಭವಾಯಿತು. ಅವರ ಕೋಲಾಹಲಶಬ್ದವು ಲಂಕಾಪಟ್ಟಣದ ಸುತ್ತಲೂ ಪ್ರತಿಧ್ವನಿಸಿತು. ಪರಸ್ಪರವಾಗಿ ಪ್ರಯೋಗಿಸುತ್ತಿದ್ದ ನಾನಾಪ್ರಕಾರವಾದ ಶಸ್ತ್ರಗಳಿಂದಲೂ, ನಿಶಿತವಾದ ಬಾಣಗಳಿಂದಲೂ, ವೃಕ್ಷಗಳಿಂದಲೂ, ಭಯಂಕರವಾದ ಪರ್ವತ ಶಿಖರಗಳಿಂದಲೂ ಆಕಾಶವು ತುಂಬಿಹೋಯಿತು. ವಿಕಾರವಾದ ಮುಖ ಗಳನ್ನೂ ಮತ್ತು ತೋಳುಗಳನ್ನೂ ಹೊಂದಿದ್ದ ರಾಕ್ಷಸಸೈನಿಕರು ನಿಶಿತವಾದ ಶಸ್ತ್ರಗಳಿಂದ ವಾನರಸೈನಿಕರನ್ನು ಪ್ರಹರಿಸುತ್ತಾ ಮಹಾಭಯವನ್ನುಂಟು ಮಾಡಿದರು. ಅದೇ ರೀತಿಯಲ್ಲಿ ವಾನರಸೈನಿಕರು ವೃಕ್ಷಗಳಿಂದಲೂ ಪರ್ವತ ಶಿಖರಗಳಿಂದಲೂ ಸಮಸ್ತರಾಕ್ಷಸಸೈನಿಕರನ್ನೂ ಸದೆಬಡಿಯುತ್ತಿದ್ದರು. ಮಹಾ ಕಾಯರಾದ ಮತ್ತು ಮಹಾಬಲರಾದ ಋಕ್ಷ-ವಾನರಸೈನಿಕರೊಡನೆ ಯುದ್ಧ ಮಾಡುತ್ತಿದ್ದ ರಾಕ್ಷಸಸೈನಿಕರಿಗೆ ಮಹಾಭಯವುಂಟಾಯಿತು. ತನ್ನ ಸೈನ್ಯವು ಶತ್ರುಗಳ ದಾಳಿಗೆ ಸಿಕ್ಕಿ ನಾಶವಾಗುವುತ್ತಿರುವುದನ್ನೂ ಮತ್ತು ಅಳಿದುಳಿದ ಸೈನಿಕರು ವಿಷಣ್ಣರಾಗಿರುವುದನ್ನೂ ಕೇಳಿ ದುರ್ಧರ್ಷನಾದ ಇಂದ್ರಜಿತುವು ಹೋಮಕರ್ಮವು ಮುಗಿಯುವ ಮೊದಲೇ ಎದ್ದುಬಿಟ್ಟನು. ಅತ್ಯಂತ ಕ್ರುದ್ಧನಾಗಿದ್ದ ರಾವಣಿಯು ಅಂಧಕಾರಸದೃಶವಾಗಿದ್ದ ವೃಕ್ಷಗಳ ಸಮೂಹ ದಿಂದ ಹೊರಬಂದು ಮೊದಲೇ ಸಜ್ಜಾಗಿ ನಿಂತಿದ್ದ ಮತ್ತು ಸುದೃಢವಾಗಿದ್ದ ರಥವನ್ನು ಹತ್ತಿದನು. ಕಾಲಮೇಘದ ಪ್ರಭೆಗೆ ಸಮಾನವಾದ ಪ್ರಭೆಯಿಂದ ಕೂಡಿದ್ದ, ಭಯಂಕರವಾದ ಧನುಸ್ಸನ್ನೂ ಮತ್ತು ಬಾಣಗಳನ್ನೂ ಹಿಡಿದಿದ್ದ, ಕೆಂಪಾದ ಮುಖದಿಂದಲೂ ಮತ್ತು ಕಣ್ಣುಗಳಿಂದಲೂ ಕಂಗೊಳಿಸುತ್ತಿದ್ದ, ಭಯಂಕರನಾಗಿದ್ದ ಇಂದ್ರಜಿತುವು ಆ ಸಮಯದಲ್ಲಿ ಸರ್ವವಿನಾಶಕನಾದ ಮೃತ್ಯುವಿನಂತೆಯೇ ಕಾಣುತ್ತಿದ್ದನು. ರಥದಲ್ಲಿ ಕುಳಿತಿದ್ದ ಇಂದ್ರಜಿತುವನ್ನು ನೋಡಿದೊಡನೆಯೇ ಭಯಂಕರವಾದ ವೇಗದಿಂದ ಕೂಡಿದ್ದ ರಾಕ್ಷಸಸೈನ್ಯವು ಲಕ್ಷ್ಮಣನೊಡನೆ ಯುದ್ಧಮಾಡಲು ಪುನಃ ಹಿಂದಿರುಗಿತು.

ಆ ಸಮಯದಲ್ಲಿ ಶತ್ರುದಮನನಾದ, ಪರ್ವತದಂತೆ ಮಹಾಕಾಯ ನಾದ, ಹನುಮಂತನು ಸಾಮಾನ್ಯರಿಂದ ಕೀಳಲು ಅಸಾಧ್ಯವಾಗಿದ್ದ ಮಹಾ ವೃಕ್ಷವೊಂದನ್ನು ಬುಡಸಹಿತವಾಗಿ ಕಿತ್ತನು. ಆ ವೃಕ್ಷದಿಂದಲೇ ರಾಕ್ಷಸನ ಆ ಮಹಾಸೈನ್ಯವನ್ನು ಕಾಲಾಗ್ನಿಯೋಪಾದಿಯಲ್ಲಿ ಧ್ವಂಸಮಾಡಿದನು. ಹಾಗೆಯೇ

ಅಲ್ಲಿದ್ದ ಅನೇಕ ವೃಕ್ಷಗಳನ್ನು ಕಿತ್ತು ಅವುಗಳಿಂದಲೇ ಅವ್ಯಾಹತವಾಗಿ ರಾಕ್ಷಸರನ್ನು ಪ್ರಹರಿಸುತ್ತಾ ರಾಕ್ಷಸಸೈನ್ಯವನ್ನು ಮೂರ್ಛಿತರನ್ನಾಗಿ ಮಾಡಿದನು. ಬಹಳ ವೇಗದಿಂದ ರಾಕ್ಷಸಸೈನ್ಯವನ್ನು ವೃಕ್ಷಾಯುಧದಿಂದ ಹನುಮಂತನು ಧ್ವಂಸಮಾಡುತ್ತಿರಲು ಸಾವಿರಾರು ರಾಕ್ಷಸರು ಅಸ್ತ್ರ-ಶಸ್ತ್ರಗಳನ್ನು ಹಿಡಿದು ಹನುಮಂತನನ್ನು ಮುತ್ತಿದರು. ಶೂಲಗಳನ್ನು ಹಿಡಿದಿದ್ದ ರಾಕ್ಷಸರು ಶೂಲಗಳಿಂದಲೂ, ಖಡ್ಗಧಾರಿಗಳು ಕತ್ತಿಗಳಿಂದಲೂ, ಶಕ್ತ್ಯಾಯುಧವನ್ನು ಹಿಡಿದಿದ್ದವರು ಶಕ್ತ್ಯಾಯುಧಗಳಿಂದಲೂ, ಪಟ್ಟಿಶವನ್ನು ಹಿಡಿದಿದ್ದವರು ಪಟ್ಟಿಶಗಳಿಂದಲೂ ಸತತವಾಗಿ ಮಾರುತಿಯನ್ನು ಪ್ರಹರಿಸುತ್ತಿದ್ದರು. ಪರಿಘ-ಗದೆಗಳಿಂದಲೂ, ಸುಂದರವಾಗಿದ್ದ ಕುಂತಾಯುಧಗಳಿಂದಲೂ, ನೂರಾರು ಶತಘ್ನಿಗಳಿಂದಲೂ, ಲೋಹಮಯವಾದ ಮುದ್ಗರಗಳಿಂದಲೂ, ಭಯಂಕರವಾಗಿದ್ದ ಗಂಡುಗೊಡಲಿಗಳಿಂದಲೂ, ಭಿಂದಿಪಾಲಗಳಿಂದಲೂ ರಾಕ್ಷಸರು ಸುತ್ತಲೂ ನಿಂತು ಮಾರುತಿಯನ್ನು ಪ್ರಹರಿಸುತ್ತಿದ್ದರು. ಕೆಲವು ರಾಕ್ಷಸರು ವಜ್ರಸದೃಶವಾದ ಮುಷ್ಟಿಗಳಿಂದಲೂ, ಸಿಡಿಲಿಗೆ ಸಮಾನವಾದ ಅಂಗೈಗಳಿಂದಲೂ ಪರ್ವತೋಪಮನಾದ ಮಾರುತಿಯನ್ನು ಪ್ರಹರಿಸುತ್ತಿದ್ದರು. ಕ್ರುದ್ಧನಾದ ಹನುಮಂತನು ಅವರೆಲ್ಲರನ್ನೂ ವೃಕ್ಷ ಪ್ರಹಾರಗಳಿಂದಲೇ ಸಂಹರಿಸುತ್ತಿದ್ದನು.

ಹೀಗೆ ಪರ್ವತದಂತೆ ಸ್ಥಿರನಾಗಿದ್ದ ಕಪಿಶ್ರೇಷ್ಠನಾದ ವಾಯುಪುತ್ರನು ಸ್ವಲ್ಪವಾದರೂ ತ್ರಾಸವೇ ಇಲ್ಲದೆ ಶತ್ರುಗಳನ್ನು ಅವ್ಯಾಹತವಾಗಿ ಸಂಹರಿಸುತ್ತಿರುವುದನ್ನು ಇಂದ್ರಜಿತುವು ನೋಡಿದನು. ಒಡನೆಯೇ ಅವನು ಸಾರಥಿಗೆ ಹೇಳಿದನು :

"ಸೂತನೇ! ಆ ವಾನರನಿರುವಲ್ಲಿಗೆ ನನ್ನ ರಥವನ್ನು ನಡೆಸು. ನಾವೇನಾದರೂ ಉಪೇಕ್ಷಿಸಿದ್ದೇ ಆದರೆ ಅವನು ಎಲ್ಲ ರಾಕ್ಷಸರನ್ನೂ ಸ್ವಲ್ಪ ಸಮಯದಲ್ಲಿಯೇ ಸಂಹರಿಸಿಬಿಡಬಹುದು.

ಇಂದ್ರಜಿತುವು ಹೀಗೆ ಹೇಳಲು ಸಾರಥಿಯು ಶತ್ರುಗಳಿಂದ ಎದುರಿಸಲು ಅತ್ಯಂತ ಅಸಾಧ್ಯನಾಗಿದ್ದ ಇಂದ್ರಜಿತುವನ್ನು ಹೊತ್ತಿದ್ದ ಆ ರಥವನ್ನು ಹನುಮಂತನಿದ್ದೆಡೆಗೆ ಒಯ್ದನು. ಹನುಮಂತನಿಗೆ ಎದುರಾಗಿ ನಿಂತೊಡನೆಯೇ ಇಂದ್ರಜಿತುವು ಅವನ ಮೇಲೆ ಬಾಣಗಳನ್ನೂ, ಖಡ್ಗಗಳನ್ನೂ,

ಪಟ್ಟಿಶ-ಪರಶ್ವಧಗಳನ್ನೂ ಜಲಧಾರೆಯೋಪಾದಿಯಲ್ಲಿ ಸುರಿಸತೊಡಗಿದನು. ಭಯಾನಕವಾದ ಆ ಎಲ್ಲ ಶಸ್ತ್ರಾಯುಧಗಳನ್ನೂ ಹನುಮಂತನು ಸಹಿಸಿಕೊಂಡು ಅತ್ಯಂತಕ್ರುದ್ಧನಾಗಿ ಹೇಳಿದನು :

"ದುರ್ಮತಿಯೇ! ರಾವಣಕುಮಾರ! ನೀನು ಶೂರನೇ ಆಗಿರುವುದಾದರೆ ನನ್ನೊಡನೆ ಮಲ್ಲಯುದ್ಧವನ್ನು ಮಾಡು. ಮಲ್ಲಯುದ್ಧದಲ್ಲಿ ವಾಯುಪುತ್ರನೊಡನೆ ಸೆಣೆಸಾಡುವ ನೀನು ಜೀವಂತನಾಗಿ ಹೋಗಲು ಸಾಧ್ಯವೇ ಇಲ್ಲ. ಬಾಹುಗಳಿಂದ ನನ್ನೊಡನೆ ದ್ವಂದ್ವಯುದ್ಧವನ್ನು ಮಾಡು. ಆ ದ್ವಂದ್ವಯುದ್ಧದಲ್ಲಿ ನೀನು ನನ್ನ ಬಾಹುಪ್ರಹಾರಗಳ ವೇಗವನ್ನು ಸಹಿಸಿಕೊಂಡೆಯಾದರೆ–ನಿಶ್ಚಯವಾಗಿಯೂ ನೀನು ರಾಕ್ಷಸಶ್ರೇಷ್ಠನೆಂದು ನಾನು ಭಾವಿಸುವೆನು."

ಹೀಗೆ ಹೇಳುತ್ತಿದ್ದ ಹನುಮಂತನನ್ನು ಸಂಹರಿಸಲು ಇಂದ್ರಜಿತುವು ಧನುಸ್ಸನ್ನೆತ್ತಿದ್ದ ಸಮಯಕ್ಕೆ ಸರಿಯಾಗಿ ವಿಭೀಷಣನು ಲಕ್ಷ್ಮಣನಿಗೆ ಹೇಳಿದನು:

"ಸುಮಿತ್ರಾನಂದನನೇ! ಇಂದ್ರನನ್ನೂ ಜಯಿಸಿರುವ ರಾವಣನ ಮಗನಾದ ಇಂದ್ರಜಿತುವು ರಥದಲ್ಲಿ ಕುಳಿತು ಹನುಮಂತನನ್ನು ಸಂಹರಿಸಲು ಪ್ರಯತ್ನಿಸುತ್ತಿದ್ದಾನೆ. ಅವನನ್ನು ಶತ್ರುಸಂಹಾರಕಗಳಾದ, ಅನುಪಮವಾದ ಆಕಾರ-ಪ್ರಕಾರಗಳಿಂದ ಯುಕ್ತವಾಗಿರುವ, ಪ್ರಾಣಾಂತಕಾರಿಗಳಾದ, ಭಯಂಕರಗಳಾದ ಬಾಣಗಳಿಂದ ಈಗಲೇ ಸಂಹರಿಸು."

ಶತ್ರುಗಳಿಗೆ ಭಯವನ್ನುಂಟುಮಾಡುವ ವಿಭೀಷಣನು ಹೀಗೆ ಹೇಳಲು ಮಹಾತ್ಮನಾದ ಲಕ್ಷ್ಮಣನು ರಥದಲ್ಲಿ ಕುಳಿತಿದ್ದ, ಭಯಂಕರಪರಾಕ್ರಮಿಯಾದ, ಪರ್ವತೋಪಮನಾದ, ಗರ್ಜನೆಮಾಡುತ್ತಿದ್ದ ಇಂದ್ರಜಿತುವಿನ ಕಡೆಗೆ ನೋಡಿದನು.

ಲ೭ನೆಯ ಸರ್ಗವು ಮುಗಿಯಿತು.

ಇಂದ್ರಜಿತು ಮತ್ತು ವಿಭೀಷಣರ ರೋಷಪೂರ್ಣವಾದ ಉದ್ಗಾರ

ಏವಮುಕ್ತ್ವಾ ತು ಸೌಮಿತ್ರಿಂ ಜಾತಹರ್ಷೋ ವಿಭೀಷಣಃ ।
ಧನುಷ್ಪಾಣಿನಮಾದಾಯ ತ್ವರಮಾಣೋ ಜಗಾಮ ಹ ॥೧॥

ಪರಮಹೃಷ್ಟನಾದ ವಿಭೀಷಣನು ಲಕ್ಷ್ಮಣನಿಗೆ ಹೀಗೆ ಹೇಳಿ ಧನುರ್ಧರನಾದ ಅವನನ್ನೂ ತನ್ನ ಜೊತೆಯಲ್ಲಿ ಕರೆದುಕೊಂಡು ಅತ್ಯಂತವೇಗವಾಗಿ ಇಂದ್ರಜಿತುವಿದ್ದೆಡೆಗೆ ತೆರಳಿದನು.

ಸ್ವಲ್ಪದೂರ ಹೋದನಂತರ ದೊಡ್ಡದಾದೊಂದು ಅರಣ್ಯವನ್ನು ಪ್ರವೇಶಿಸಿದ ವಿಭೀಷಣನು ಇಂದ್ರಜಿತುವು ಕರ್ಮಾನುಷ್ಠಾನಮಾಡುತ್ತಿದ್ದ ಸ್ಥಳವನ್ನು ಲಕ್ಷ್ಮಣನಿಗೆ ತೋರಿಸಿದನು. ಅಲ್ಲೊಂದು ಆಲದಮರವಿದ್ದಿತು. ಅದು ಕಪ್ಪಾದ ಮೇಘದಂತಿದ್ದಿತು. ನೋಡಲು ಅತಿಭಯಂಕರವಾಗಿ ಕಾಣುತ್ತಿದ್ದಿತು. ವಿಭೀಷಣನು ಆ ವಟವೃಕ್ಷವನ್ನು ಲಕ್ಷ್ಮಣನಿಗೆ ತೋರಿಸುತ್ತಾ ಹೇಳಿದನು :

"ಲಕ್ಷ್ಮಣ! ಇಲ್ಲಿಯೇ ಇಂದ್ರಜಿತುವು ಭೂತಗಳಿಗೆ ಬಲಿಯನ್ನಿತ್ತು ಅನಂತರ ಯುದ್ಧಭೂಮಿಗೆ ಬರುತ್ತಾನೆ. ಇಲ್ಲಿ ಭೂತಗಳಿಗೆ ಬಲಿಯನ್ನು ಕೊಡುವುದರ ಫಲವಾಗಿ ಅವನು ಯುದ್ಧಭೂಮಿಯಲ್ಲಿ ಎಲ್ಲರಿಗೂ ಅದೃಶ್ಯನಾಗುತ್ತಾನೆ. ಅದೃಶ್ಯನಾಗಿದ್ದೇ ಶತ್ರುಗಳನ್ನು ಸಂಹರಿಸುವುದಲ್ಲದೇ ಶ್ರೇಷ್ಠವಾದ ಬಾಣಗಳಿಂದ ಬಂಧಿಸುತ್ತಾನೆ. ಇಂದ್ರಜಿತುವು ಈ ವಟವೃಕ್ಷದ ಬಳಿಗೆ ಬರುವುದರೊಳಗಾಗಿಯೇ ನೀನು ಅವನನ್ನು ರಥಾಶ್ವ-ಸಾರಥಿಗಳೊಡನೆ ಧ್ವಂಸಮಾಡು."

ಮಹಾತೇಜಸ್ವಿಯಾದ ಮತ್ತು ಮಿತ್ರರಿಗೆ ಆನಂದವನ್ನುಂಟುಮಾಡುವ ಸೌಮಿತ್ರಿಯು ಹಾಗೆಯೇ ಆಗಲೆಂದು ಹೇಳಿ ತನ್ನ ಚಿತ್ರಿತವಾದ ಧನುಸ್ಸನ್ನು ಟೇಂಕರಿಸುತ್ತಾ ಅಲ್ಲಿಯೇ ನಿಂತಿದ್ದನು.

ಅಷ್ಟರಲ್ಲಿಯೇ ಮಹಾಬಲಿಷ್ಠನಾದ, ಕವಚವನ್ನು ಧರಿಸಿ ಧನುಸ್ಸನ್ನು

ಹಿಡಿದಿದ್ದ ಇಂದ್ರಜಿತುವು ಅಗ್ನಿಯ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಕಂಗೊಳಿಸುತ್ತಿದ್ದ ಮತ್ತು ಧ್ವಜದಿಂದ ಕೂಡಿದ್ದ ರಥದಲ್ಲಿ ಕುಳಿತು ಲಕ್ಷ್ಮಣನಿಗೆ ಕಾಣಿಸಿಕೊಂಡನು.

ಪುಲಸ್ತ್ಯವಂಶೀಯನಾದ ಅಪರಾಜಿತನಾದ ಇಂದ್ರಜಿತುವನ್ನು ರಥದಲ್ಲಿ ಕಂಡೊಡನೆಯೇ ಮಹಾತೇಜಸ್ವಿಯಾದ ಲಕ್ಷ್ಮಣನು ಹೇಳಿದನು :

ಸಮಾಹ್ವಯೇ ತ್ವಾಂ ಸಮರೇ ಸಮ್ಯಗ್ಯುದ್ಧಂ ಪ್ರಯಚ್ಛ ಮೇ ॥೯॥

"ರಾಕ್ಷಸರಾಜಕುಮಾರನೇ! ನಿನ್ನನ್ನು ಯುದ್ಧಕ್ಕೆ ಆಹ್ವಾನಿಸುತ್ತಿದ್ದೇನೆ. ನೀನು ನನ್ನೊಡನೆ ನ್ಯಾಯೋಚಿತವಾದ ರೀತಿಯಲ್ಲಿ ಯುದ್ಧ ಮಾಡು."

ಲಕ್ಷ್ಮಣನು ಹೀಗೆ ಹೇಳಲು ಮಹಾತೇಜಸ್ವಿಯಾದ ಮನನಶೀಲನಾದ ಇಂದ್ರಜಿತುವು ಲಕ್ಷ್ಮಣನ ಪಕ್ಕದಲ್ಲಿ ನಿಂತಿದ್ದ ವಿಭೀಷಣನನ್ನು ನೋಡಿ ಅತಿ ಕಠೋರವಾದ ಈ ಮಾತನ್ನು ಹೇಳಿದನು :

ಇಹ ತ್ವಂ ಜಾತಸಂವೃದ್ಧಃ ಸಾಕ್ಷಾದ್ಭ್ರಾತಾ ಪಿತುರ್ಮಮ ।
ಕಥಂ ದ್ರುಹ್ಯಸಿ ಪುತ್ರಸ್ಯ ಪಿತೃವ್ಯೋ ಮಮ ರಾಕ್ಷಸ ॥೧೧॥

"ರಾಕ್ಷಸನೇ! ಈ ಲಂಕೆಯಲ್ಲಿಯೇ ನೀನು ಹುಟ್ಟಿ ಬೆಳೆದೆ. ನೀನು ನನ್ನ ತಂದೆಯ ತಮ್ಮನು. ಆದುದರಿಂದ ನನಗೆ ಚಿಕ್ಕಪ್ಪನಾಗಬೇಕು. ನನ್ನ ಚಿಕ್ಕತಂದೆಯಾಗಿದ್ದೂ ಪುತ್ರನಾದ ನನಗೆ ಹೇಗೆ ತಾನೇ ದ್ರೋಹ ವನ್ನೆಸಗುವೆ?

ನ ಜ್ಞಾತಿತ್ವಂ ನ ಸೌಹಾರ್ದಂ ನ ಜಾತಿಸ್ತವ ದುರ್ಮತೇ ।
ಪ್ರಮಾಣಂ ನ ಚ ಸೌದರ್ಯಂ ನ ಧರ್ಮೋ ಧರ್ಮದೂಷಣ ॥೧೨॥

ಧರ್ಮಬಾಹಿರನೇ! ದುರ್ಮತಿಯೇ! ನಿನಗೆ ಕುಟುಂಬದ ಜನರ ಬಗೆಗೆ ಪ್ರೇಮವಿಲ್ಲ. ಆತ್ಮೀಯರಲ್ಲಿ ಸ್ನೇಹವಿಲ್ಲ. ರಾಕ್ಷಸಜಾತಿಯ ಬಗೆಗೆ ಅಭಿಮಾನವಿಲ್ಲ. ಕರ್ತವ್ಯಾಕರ್ತವ್ಯಗಳ ವಿವೇಚನೆ, ಭ್ರಾತೃಪ್ರೇಮ, ಧರ್ಮ– ಇವು ಯಾವುವೂ ನಿನ್ನಲ್ಲಿಲ್ಲ.

ಶೋಚ್ಯಸ್ತ್ವಮಸಿ ದುರ್ಬುದ್ಧೇ ನಿನ್ದನೀಯಶ್ಚ ಸಾಧುಭಿಃ ।
ಯಸ್ತ್ವಂ ಸ್ವಜನಮುತ್ಸೃಜ್ಯ ಪರಭೃತ್ಯತ್ವಮಾಗತಃ ॥೧೩॥

ದುರ್ಬುದ್ಧಿಯವನೇ! ನಿನ್ನ ಸ್ಥಿತಿಯು ಚಿಂತಾಜನಕವಾಗಿದೆ. ನೀನು ಸ್ವಜನರನ್ನು ಬಿಟ್ಟು ಶತ್ರುಗಳಿಗೆ ಸೇವಕನಾಗಿರುವುದರಿಂದ ಸತ್ಪುರುಷರ ದೃಷ್ಟಿಯಲ್ಲಿ ನಿಂದ್ಯನಾಗಿರುವೆ.

ನೈತಚ್ಛಿಥಿಲಯಾ ಬುದ್ಧ್ಯಾ ತ್ವಂ ವೇತ್ಸಿ ಮಹದನ್ತರಮ್ ।
ಕ್ವ ಚ ಸ್ವಜನಸಂವಾಸಃ ಕ್ವ ಚ ನೀಚಪರಾಶ್ರಯಃ ॥೧೪॥

ಸ್ವಜನರೊಡನೆ ಬಾಳಿ ಬದುಕುವುದೆಲ್ಲಿ? ನೀಚರಾದ ಇತರರನ್ನಾಶ್ರಯಿಸಿ ಬದುಕುವುದೆಲ್ಲಿ? ಒಂದಕ್ಕೊಂದಕ್ಕೆ ಸಂಬಂಧವೇ ಇಲ್ಲ. ನಿನ್ನ ಬುದ್ಧಿಯು ಶಿಥಿಲವಾಗಿರುವುದರಿಂದ ಇದರಲ್ಲಿರುವ ತಾರತಮ್ಯವನ್ನು ನೀನು ತಿಳಿದಿಲ್ಲ.

ಗುಣವಾನ್ವಾ ಪರಜನಃ ಸ್ವಜನೋ ನಿರ್ಗುಣೋಽಪಿ ವಾ ।
ನಿರ್ಗುಣಃ ಸ್ವಜನಃ ಶ್ರೇಯಾನ್ಯಃ ಪರಃ ಪರ ಏವ ಸಃ ॥೧೫॥

ಶತ್ರುವು ಗುಣವಂತನೇ ಆಗಿರಬಹುದು ; ನಮ್ಮವನು ನಿರ್ಗುಣನೇ ಆಗಿರಬಹುದು. ಗುಣವಂತನಾದ ಶತ್ರುವನ್ನು ಆಶ್ರಯಿಸಿಕೊಂಡಿರುವುದಕ್ಕಿಂತಲೂ ನಿರ್ಗುಣನಾದ ತನ್ನವನನ್ನೇ ಆಶ್ರಯಿಸಿಕೊಂಡಿರುವುದು ಶ್ರೇಯಸ್ಕರ. ಏಕೆಂದರೆ : ಹೊರಗಿನವನು ಯಾವಾಗಲೂ ಹೊರಗಿನವನೇ ಆಗಿರುತ್ತಾನೆ.

ಯಃ ಸ್ವಪಕ್ಷಂ ಪರಿತ್ಯಜ್ಯ ಪರಪಕ್ಷಂ ನಿಷೇವತೇ ।
ಸ ಸ್ವಪಕ್ಷೇ ಕ್ಷಯಂ ಪ್ರಾಪ್ತೇ ಪಶ್ಚಾತ್ತೈರೇವ ಹನ್ಯತೇ ॥೧೬॥

ಯಾವನು ತನ್ನ ಪಕ್ಷವನ್ನು ಪರಿತ್ಯಜಿಸಿ ಶತ್ರುಪಕ್ಷವನ್ನು ಸೇರುವನೋ–ಅಂತಹವನನ್ನು ಶತ್ರುಪಕ್ಷದವರೇ ಸಂಹರಿಸುತ್ತಾರೆ. ತನ್ನ ಪಕ್ಷವನ್ನು ಬಿಟ್ಟು ಶತ್ರುಪಕ್ಷವನ್ನು ಸೇರಿದನಂತರ ಸ್ವಪಕ್ಷವು ದುರ್ಬಲವಾಗಿ ಶತ್ರುಪಕ್ಷದವರ ದಾಳಿಯಿಂದ ಬಹಳ ಬೇಗ ವಿನಾಶಹೊಂದುತ್ತದೆ. ಕಾರ್ಯದ ಸಾಧನೆಯಾದನಂತರ ಶತ್ರುಪಕ್ಷಕ್ಕೆ ಸೇರಿದವನನ್ನು ಅವರೇ (ಶತ್ರುಗಳೇ) ಸಂಹರಿಸುತ್ತಾರೆ. ಆದುದರಿಂದ ಶತ್ರುಪಕ್ಷಕ್ಕೆ ಸೇರುವವನು ತನ್ನ ಪಕ್ಷದ ವಿನಾಶಕ್ಕೂ ಕಾರಣನಾಗುತ್ತಾನೆ. ಕಡೆಯಲ್ಲಿ ತಾನೂ ಅವಸಾನಹೊಂದುತ್ತಾನೆ.

ನಿರನುಕ್ರೋಶತಾ ಚೇಯಂ ಯಾದೃಶೀ ತೇ ನಿಶಾಚರ ।
ಸ್ವಜನೇನ ತ್ವಯಾ ಶಕ್ಯಂ ಪರುಷಂ ರಾವಣಾನುಜ ॥೧೭॥

ರಾವಣಾನುಜನೇ! ನೀನು ಲಕ್ಷ್ಮಣನನ್ನು ಇಲ್ಲಿಗೆ ಕರೆತಂದು ನನ್ನ ವಧೆಮಾಡಿಸಲು ಪ್ರಯತ್ನಿಸುತ್ತಿರುವುದು ನಿರ್ದಯತೆಯೇ ಸರಿ. ಇಂತಹ ಕ್ರೂರವಾದ ಕಾರ್ಯಮಾಡಲು ಸ್ವಜನನಾದ ಮತ್ತು ನಿರ್ದಯನಾದ ನಿನ್ನಂತಹವನಿಂದ ಮಾತ್ರವೇ ಸಾಧ್ಯ."

ಅಣ್ಣನ ಮಗನು ಹೇಳಿದ ಮಾತನ್ನು ಕೇಳಿ ವಿಭೀಷಣನು ಉತ್ತರಿಸಿದನು:

"ರಾಕ್ಷಸನೇ! ನನ್ನ ಸ್ವಭಾವ-ಶೀಲಗಳು ತಿಳಿಯದೇ ಇರುವವನಂತೆ ಹೀಗೇಕೆ ಹರಟುತ್ತಿರುವೆ? ಹಿರಿಯರನ್ನು ಗೌರವಿಸುವ ಕಾರಣದಿಂದಾದರೂ ಕಠಿಣೋಕ್ತಿಯನ್ನು ಸಾಕುಮಾಡು. ನಾನು ರಾಕ್ಷಸರ ವಂಶದಲ್ಲಿಯೇ ಹುಟ್ಟಿದ್ದರೂ ನನ್ನ ಶೀಲ-ಸ್ವಭಾವಗಳು ರಾಕ್ಷಸರದಲ್ಲ. ಸತ್ಪುರುಷರಲ್ಲಿ ಪ್ರಧಾನಗುಣವಾದ ಯಾವ ಸತ್ತ್ವವಿರುವುದೋ ಅದನ್ನೇ ನಾನು ಆಶ್ರಯಿಸಿದ್ದೇನೆ.

ನ ರಮೇ ದಾರುಣೇನಾಹಂ ನ ಚಾಧರ್ಮೇಣ ವೈ ರಮೇ ।
ಭ್ರಾತ್ರಾ ವಿಷಮಶೀಲೇನ ಕಥಂ ಭ್ರಾತಾ ನಿರಸ್ಯತೇ ॥೨೦॥

ಕ್ರೂರವಾದ ಕರ್ಮಗಳಲ್ಲಿ ನನ್ನ ಮನಸ್ಸು ತೊಡಗುವುದಿಲ್ಲ. ಅಧರ್ಮಕಾರ್ಯಗಳಲ್ಲಿ ನನಗೆ ಅಭಿರುಚಿಯಿಲ್ಲ. ಒಂದು ವೇಳೆ ತಮ್ಮನ ಶೀಲ-ಸ್ವಭಾವಗಳು ತನ್ನ ಶೀಲ-ಸ್ವಭಾವಗಳಿಗಿಂತಲೂ ಬೇರೆಯಾಗಿದ್ದರೂ ತಮ್ಮನನ್ನು ಮನೆಯಿಂದ ಹೊರಗಟ್ಟಿದುದೇಕೆ?

ಧರ್ಮಾತ್ಪ್ರಚ್ಯುತಶೀಲಂ ಹಿ ಪುರುಷಂ ಪಾಪನಿಶ್ಚಯಮ್ ।
ತ್ಯಕ್ತ್ವಾ ಸುಖಮವಾಪ್ನೋತಿ ಹಸ್ತಾದಾಶೀವಿಷಂ ಯಥಾ ॥೨೧॥

ಯಾವನ ಶೀಲ-ಸ್ವಭಾವಗಳು ಧರ್ಮಮಾರ್ಗದಿಂದ ಜಾರಿಹೋಗಿವೆಯೋ–ಯಾವನ ಸಂಕಲ್ಪಗಳು ಯಾವಾಗಲೂ ಪಾಪಭೂಯಿಷ್ಠವಾಗಿರುವುವೋ–ಅಂತಹ ಮನುಷ್ಯನನ್ನು ತ್ಯಜಿಸುವುದರಿಂದ–ಕೈಯಲ್ಲಿ ಹಿಡಿದಿರುವ ವಿಷಸರ್ಪವನ್ನು ಬಿಸಾಡಿದಂತೆ–ಸುಖವೇ ಉಂಟಾಗುತ್ತದೆ.

ಪರಹಿಂಸೆ, ಇತರರ ಸೊತ್ತಿನ ಅಪಹರಣ, ಪರಸ್ತ್ರೀ ಸಂಪರ್ಕ—ಈ ಮೂರು ದುಷ್ಕೃತ್ಯಗಳನ್ನೂ ಬೆಂಕಿಬಿದ್ದ ಮನೆಯನ್ನು ತ್ಯಜಿಸುವಂತೆ ತ್ಯಜಿಸಬೇಕೆಂದು ಹಿರಿಯರು ಹೇಳುತ್ತಾರೆ.

ಪರಸ್ವಾನಾಂ ಚ ಹರಣಂ ಪರದಾರಾಭಿಮರ್ಶನಮ್ ।
ಸುಹೃದಾಮತಿಶಙ್ಕಾ ಚ ತ್ರಯೋ ದೋಷಾಃ ಕ್ಷಯಾವಹಾಃ ॥೨೩॥

ಇತರರ ಸ್ವತ್ತನ್ನು ಅಪಹರಿಸುವುದರಲ್ಲಿಯೇ ಆಸಕ್ತಿ, ಪರನಾರಿಯ ರೊಡನೆ ಸಂಸರ್ಗ ಮತ್ತು ಹಿತೈಷಿಗಳಾದ ಸುಹೃದರಲ್ಲಿ ತುಂಬಾ ಸಂದೇಹ ಪಡುವಿಕೆ—ಈ ಮೂರು ದೋಷಗಳೂ ಸರ್ವವಿನಾಶಕ್ಕೆ ಕಾರಣಗಳಾಗುತ್ತವೆ.

ಮಹರ್ಷೀಣಾಂ ವಧೋ ಘೋರಃ ಸರ್ವದೇವೈಶ್ಚ ವಿಗ್ರಹಃ ।
ಅಭಿಮಾನಶ್ಚ ರೋಷಶ್ಚ ವೈರತ್ವಂ ಪ್ರತಿಕೂಲತಾ ॥೨೪॥

ಏತೇ ದೋಷಾ ಮಮ ಭ್ರಾತುರ್ಜೀವಿತೈಶ್ವರ್ಯನಾಶನಾಃ ।
ಗುಣಾನ್ಪ್ರಚ್ಛಾದಯಾಮಾಸುಃ ಪರ್ವತಾನಿವ ತೋಯದಾಃ ॥೨೫॥

ಮಹರ್ಷಿಗಳ ಭಯಂಕರ ವಧೆ, ಎಲ್ಲ ದೇವತೆಗಳೊಡನೆಯೂ ಯುದ್ಧ, ಗರ್ವ, ರೋಷ, ವೈರ, ಧರ್ಮಕ್ಕೆ ವಿರುದ್ಧವಾದ ನಡವಳಿಕೆ—ಜೀವಕ್ಕೂ ಐಶ್ವರ್ಯಕ್ಕೂ ಹಾನಿಯನ್ನುಂಟುಮಾಡುವ ಈ ದೋಷಗಳೆಲ್ಲವೂ ನನ್ನ ಅಣ್ಣನಲ್ಲಿ ತುಂಬಿತುಳುಕಾಡುತ್ತಿವೆ. ಮೇಘಗಳು ಪರ್ವತಗಳನ್ನು ಮುಚ್ಚಿಬಿಡುವಂತೆ—ಈ ದೋಷಗಳೆಲ್ಲವೂ ಅವನ ಗುಣಗಳನ್ನು ಮುಚ್ಚಿ ಬಿಟ್ಟಿವೆ.

ಈ ಎಲ್ಲ ದೋಷಗಳೂ ಇರುವುದರಿಂದಲೇ ನಾನು ನನ್ನ ಅಣ್ಣನೂ ಮತ್ತು ನಿನ್ನ ತಂದೆಯೂ ಆದ ರಾವಣನನ್ನು ತ್ಯಜಿಸಿದೆನು, ಈಗಲಾದರೋ ಲಂಕೆಯೂ ಉಳಿಯುವುದಿಲ್ಲ. ನೀನಾಗಲೀ ನಿನ್ನ ತಂದೆಯಾಗಲೀ ಉಳಿಯ ಲಾರಿರಿ.

ರಾಕ್ಷಸನೇ! ನೀನು ದುರಭಿಮಾನಿಯಾಗಿರುವೆ. ಮೂರ್ಖನಾಗಿರುವೆ. ಅವಿಧೇಯನೂ ಅಗಿರುವೆ. ಆದುದರಿಂದಲೇ ನೀನು ಕಾಲಪಾಶದಿಂದ ಕಟ್ಟ ಲ್ಪಟ್ಟಿರುವೆ. ನಿನ್ನ ಈ ಕಡೆಯ ಕ್ಷಣಗಳಲ್ಲಿ ನಿನಗೇನು ಬೇಕಾಗಿರುವುದೋ ಅದನ್ನು ಹೇಳಿಬಿಡು. ನನ್ನನ್ನು ನೀನು ಕಠೋರವಾದ ಮಾತು

ಗಳಿಂದ ನಿಂದಿಸಿರುವೆ. ಅದರ ಫಲವೂ ಈಗಲೇ ಲಭಿಸಲಿದೆ. ವಟವೃಕ್ಷದ ಬಳಿಗೆ ಹೋಗಲು ನಿನ್ನಿಂದ ಖಂಡಿತವಾಗಿಯೂ ಸಾಧ್ಯವಾಗುವುದಿಲ್ಲ.

ಲಕ್ಷ್ಮಣನನ್ನು ಎದುರಿಸಿ ಯುದ್ಧಕ್ಕೆ ನಿಂತನಂತರ ನೀನು ಜೀವಸಹಿತವಾಗಿ ಹಿಂದಿರುಗಲಾರೆ. ಈಗ ನೀನು ನರಶ್ರೇಷ್ಠನಾದ ಲಕ್ಷ್ಮಣನೊಡನೆ ಯುದ್ಧಮಾಡು. ಲಕ್ಷ್ಮಣನಿಂದ ಹತನಾಗುವ ನೀನು ಇಲ್ಲಿ ಮಾಡಲಾಗದೇ ಉಳಿಯುವ ದೇವತಾಕಾರ್ಯವನ್ನು ಯಮನ ಅರಮನೆಯಲ್ಲಿಯೇ ಮಾಡುವೆಯಂತೆ.

ಈಗ ನೀನು ನಿನ್ನಲ್ಲಿರುವ ಸಂಪೂರ್ಣಬಲವನ್ನೂ ತೋರಿಸು. ನಿನ್ನಲ್ಲಿರುವ ಸಮಸ್ತವಾದ ಆಯುಧಗಳನ್ನೂ ಪ್ರಯೋಗಿಸಿ ಕಳೆದುಕೊ. ಆದರೆ ಲಕ್ಷ್ಮಣನ ಬಾಣಗಳಿಗೆ ಲಕ್ಷ್ಯನಾಗುವ ನೀನು ಜೀವವನ್ನುಳಿಸಿಕೊಂಡು ಸೈನ್ಯದ ಸಮೇತ ಹಿಂದಿರುಗಲಾರೆ. ಇದು ನಿಶ್ಚಯ.”

ಜರನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೮೮ನೆಯ ಸರ್ಗ

ಲಕ್ಷ್ಮಣ ಮತ್ತು ಇಂದ್ರಜಿತುಗಳ ಸಂಭಾಷಣೆ : ಘೋರವಾದ ಯುದ್ಧ

ವಿಭೀಷಣವಚಃ ಶ್ರುತ್ವಾ ರಾವಣಿಃ ಕ್ರೋಧಮೂರ್ಛಿತಃ ।
ಅಬ್ರವೀತ್ಪರುಷಂ ವಾಕ್ಯಂ ವೇಗೇನಾಭ್ಯುತ್ಪಪಾತ ಹ ॥೧॥

ವಿಭೀಷಣನ ಮಾತನ್ನು ಕೇಳಿ ರಾವಣಿಯು ಅತಿಕ್ರುದ್ಧನಾದನು. ವಿಭೀಷಣನೊಡನೆ ಮತ್ತೂ ಕಾಠಿಣ್ಯದಿಂದಲೇ ಮಾತನಾಡುತ್ತಾ ವೇಗದಿಂದ ಮುನ್ನುಗ್ಗಿ ಬಂದನು.

ಇಂದ್ರಜಿತುವು ಅಲಂಕೃತವಾದ ಮತ್ತು ದೊಡ್ಡದಾದ ರಥದಲ್ಲಿ ಕುಳಿತಿದ್ದನು. ಕತ್ತಿಯನ್ನು ಎತ್ತಿಹಿಡಿದಿದ್ದನು. ಅವನ ರಥದ ಕುದುರೆಗಳು ಕಪ್ಪಗಿದ್ದುವು. ಆ ಸಮಯದಲ್ಲವನು ಸರ್ವವಿನಾಶಕನಾದ ಕಾಲನಂತೆಯೇ ಕಾಣುತ್ತಿದ್ದನು. ಭಯಂಕರಪರಾಕ್ರಮಿಯಾದ ಆ ನಿಶಾಚರನು ದೊಡ್ಡದಾಗಿಯೂ, ದೃಢವಾಗಿಯೂ, ಭಯಂಕರವಾಗಿಯೂ ಇದ್ದ ಧನುಸ್ಸನ್ನೂ

ಶತ್ರುನಾಶಕಗಳಾದ ಬಾಣಗಳನ್ನೂ ಹಿಡಿದು ಯುದ್ಧಸನ್ನದ್ಧನಾಗಿ ನಿಂತಿದ್ದನು. ಹೀಗೆ ಅಲಂಕಾರಮಾಡಿಕೊಂಡು ರಥದಲ್ಲಿ ಕುಳಿತಿದ್ದ ಮಹಾಧನುಷ್ಮಂತನಾದ ಇಂದ್ರಜಿತುವು–ಶತ್ರುನಾಶಕನಾದ, ಅಲಂಕರಿಸಿಕೊಂಡು ಹನುಮಂತನ ಹೆಗಲಮೇಲೆ ಕುಳಿತಿದ್ದ, ಬಾಲಸೂರ್ಯನಂತೆಯೇ ಪ್ರಕಾಶಮಾನನಾಗಿದ್ದ ಲಕ್ಷ್ಮಣನನ್ನು ನೋಡಿದನು. ಬಳಿಕ ಇಂದ್ರಜಿತುವು ಲಕ್ಷ್ಮಣ- ವಿಭೀಷಣರಿಗೂ ಅವರನ್ನನುಸರಿಸಿ ಯುದ್ಧಸನ್ನದ್ಧರಾಗಿ ನಿಂತಿದ್ದ ಋಕ್ಷ-ವಾನರಶ್ರೇಷ್ಠರಿಗೂ ಹೇಳಿದನು :

"ಶತ್ರುಗಳೇ! ಇಂದು ನನ್ನ ಪರಾಕ್ರಮವನ್ನಾದರೂ ನೋಡಿರಿ. ಆಕಾಶದಿಂದ ಬೀಳುವ ಜಲಧಾರೆಯಂತೆ ನನ್ನ ಧನುಸ್ಸಿನಿಂದ ಬಿಡಲ್ಪಡುವ, ಸಹಿಸಲು ಅಸಾಧ್ಯವಾದ ಬಾಣವರ್ಷವನ್ನು ನೀವೀಗ ನಿವಾರಿಸಿಕೊಳ್ಳಿರಿ. ಬೆಂಕಿಯು ಹತ್ತಿಯ ರಾಶಿಯನ್ನು ಕ್ಷಣಮಾತ್ರದಲ್ಲಿ ಸುಟ್ಟು ಬೂದಿಮಾಡು ವಂತೆ–ನನ್ನ ಧನುಸ್ಸಿನಿಂದ ಹೊರಬರುವ ಬಾಣಗಳು ನಿಮ್ಮ ಅಂಗಾಂಗ ಗಳನ್ನು ಛಿನ್ನ-ಭಿನ್ನ ಮಾಡಿಬಿಡುತ್ತವೆ. ಶೂಲ, ಶಕ್ತಿ, ಋಷ್ಟಿ, ತೋಮರ ಮತ್ತು ಬಾಣಗಳಿಂದ ಭಿನ್ನರಾಗುವ ನಿಮ್ಮೆಲ್ಲರನ್ನೂ ಯಮನ ಮನೆಗೆ ಇದೀಗ ಕಳುಹಿಸುತ್ತೇನೆ. ಕೈಚಳಕದಿಂದ ಬಾಣಗಳ ಮಳೆಯನ್ನೇ ಸೃಷ್ಟಿಸುತ್ತಾ ಮೇಘದಂತೆ ಗರ್ಜಿಸುವ ನನ್ನ ಎದುರಾಗಿ ಯಾವನು ತಾನೇ ನಿಂತು ಯುದ್ಧ ಮಾಡಬಲ್ಲನು?

ಲಕ್ಷ್ಮಣ! ಹಿಂದೊಂದು ದಿನ ರಾತ್ರಿಯ ಯುದ್ಧದಲ್ಲಿ ವಜ್ರಾಶನಿಗಳಿಗೆ ಸಮಾನವಾದ ತೇಜೋವಿಶಿಷ್ಟವಾದ ಬಾಣಗಳ ಮೂಲಕವಾಗಿ ನಿಮ್ಮಿಬ್ಬ ರನ್ನೂ ಭೂಮಿಯಲ್ಲಿ ಕೆಡವಿದ್ದೆನು. ಸೈನಿಕರ ಸಮೇತರಾಗಿ ನೀವಿಬ್ಬರೂ ಮೂರ್ಛಿತರಾಗಿ ರಣರಂಗದಲ್ಲಿ ಬಿದ್ದಿದ್ದಿರಿ. ಅದು ನಿನ್ನ ಸ್ಮರಣೆಯಲ್ಲಿಲ್ಲವೆಂದು ಭಾವಿಸುತ್ತೇನೆ. ವಿಷಸರ್ಪದಂತೆ ಕ್ರುದ್ಧನಾಗಿರುವ ನನ್ನೊಡನೆ ಪುನಃ ಯುದ್ಧಮಾಡಲು ಬಂದಿರುವುದನ್ನು ನೋಡಿದರೆ ಯಮನ ಅರಮನೆಗೆ ಹೋಗುವ ಅಭಿಲಾಷೆಯಿರುವಂತೆ ಕಾಣುತ್ತಿದೆ."

ರಾಕ್ಷಸರಾಜಕುಮಾರನ ಆ ಗರ್ಜನೆಯನ್ನು ಕೇಳಿದ ಲಕ್ಷ್ಮಣನ ಮುಖದಲ್ಲಿ ಭಯದ ಛಾಯೆಯೂ ಕಾಣಿಸಲಿಲ್ಲ. ಸೌಮಿತ್ರಿಯು ಅತ್ಯಂತ ಕ್ರುದ್ಧನಾಗಿ ಹೇಳಿದನು :

ಉಕ್ತಶ್ಚ ದುರ್ಗಮಃ ಪಾರಃ ಕಾರ್ಯಾಣಾಂ ರಾಕ್ಷಸ ತ್ವಯಾ ।
ಕಾರ್ಯಾಣಾಂ ಕರ್ಮಣಾ ಪಾರಂ ಯೋ ಗಚ್ಛತಿ ಸ ಬುದ್ಧಿಮಾನ್ ॥

"ರಾಕ್ಷಸನೇ! ನೀನು ಶತ್ರುವಧೆಯೇ ಮೊದಲಾದ ಕಾರ್ಯಗಳ ಪರಿಸಮಾಪ್ತಿಯನ್ನು ಮಾತಿನಿಂದಲೇ ಹೇಳುತ್ತಿರುವೆ. ಆದರೆ ಅದು ಅತಿ ದುರ್ಗಮವಾದ ಕಾರ್ಯವಾಗಿದೆ. ಶತ್ರುಸಂಹಾರಕಾರ್ಯವನ್ನು ಪೂರ್ತಿಗೊಳಿಸುವುದು ಅಷ್ಟು ಸುಲಭವಲ್ಲ. ಯಾರು ಕೆಲಸಮಾಡಿ ಕಾರ್ಯಗಳನ್ನು ಸಾಧಿಸುವರೋ ಅವರೇ ಬುದ್ಧಿವಂತರು. ಅಂತಹವರು ಮಾತಿನಿಂದ ಹೇಳ ಹೋಗುವುದಿಲ್ಲ.

ಸ ತ್ವಮರ್ಥಸ್ಯ ಹೀನಾರ್ಥೋ ದುರವಾಪಸ್ಯ ಕೇನಚಿತ್ ।
ವಚೋ ವ್ಯಾಹೃತ್ಯ ಜಾನೀಷೇ ಕೃತಾರ್ಥೋಽಸ್ಮೀತಿ ದುರ್ಮತೇ ॥

ಎಲವೋ ದುರ್ಬುದ್ಧಿಯವನೇ! ಯಾರಿಂದಲೂ ಹೊಂದಲಸಾಧ್ಯವಾದ ಅಭೀಷ್ಟವಾದ ಕಾರ್ಯವನ್ನು ಸಿದ್ಧಿಸಿಕೊಳ್ಳಲು ನೀನು ಅಸಮರ್ಥನಾಗಿರುವೆ. ಇದು ಸಹಜವಾಗಿಯೇ ಇದೆ. ನೀನು ಉದ್ದೇಶಿಸಿರುವ ಆ ಕಾರ್ಯವನ್ನು ಯಾವನೊಬ್ಬನೂ ಸಿದ್ಧಿಸಿಕೊಳ್ಳಲಾರನು. ಆದರೆ ನೀನು ಅದನ್ನು ಮಾತಿನಿಂದ ಹೇಳುತ್ತಾ ಅದರಿಂದಲೇ ಕೃತಾರ್ಥನಾದೆನೆಂದು ಭಾವಿಸಿಕೊಂಡಿರುವೆ.

ಅನ್ತರ್ಧಾನಗತೇನಾಜೌ ಯತ್ತ್ವಯಾಚರಿತಸ್ತದಾ ।
ತಸ್ಕರಾಚರಿತೋ ಮಾರ್ಗೋ ನೈಷ ವೀರನಿಷೇವಿತಃ ॥೧೫॥

ಅಂದಿನ ಯುದ್ಧದಲ್ಲಿ ನೀನು ಯಾರಿಗೂ ಕಾಣದ ರೀತಿಯಲ್ಲಿ ಅಂತರ್ಧಾನನಾಗಿ ಯುದ್ಧಮಾಡಿದೆ. ಹೀಗೆ ಯುದ್ಧಮಾಡುವುದು ಕಳ್ಳರ ಮಾರ್ಗ. ಇದು ವೀರರು ಅನುಸರಿಸುವ ಮಾರ್ಗವಲ್ಲ.

ರಾಕ್ಷಸನೇ! ಈಗ ನಾನು ನಿನ್ನ ಬಾಣದ ಜಾಡಿನಲ್ಲಿಯೇ ನಿಂತಿದ್ದೇನೆ. ಬಾಣಕ್ಕೆ ಲಕ್ಷ್ಯನಾಗಿ ನಿನ್ನೆದುರಾಗಿಯೇ ನಿಂತಿದ್ದೇನೆ. ನಿನ್ನ ಆ ಪರಾಕ್ರಮವನ್ನು ತೋರು. ಕೇವಲ ಮಾತಿನಿಂದೇಕೆ ಆತ್ಮಶ್ಲಾಘನೆಯನ್ನು ಮಾಡಿಕೊಳ್ಳುತ್ತಿರುವೆ?"

ಲಕ್ಷ್ಮಣನು ಹೀಗೆ ಹೇಳಲು ಮಹಾಬಲನಾದ ಸಂಗ್ರಾಮವಿಜಯಿಯಾದ ಇಂದ್ರಜಿತುವು ಭಯಂಕರವಾದ ಧನುಸ್ಸನ್ನು ದೃಢವಾಗಿ ಹಿಡಿದು ಹರಿತವಾದ ಬಾಣಗಳನ್ನು ಲಕ್ಷ್ಮಣನ ಮೇಲೆ ಸುರಿಸಲು ಪ್ರಾರಂಭಿಸಿದನು. ಇಂದ್ರಜಿತುವಿನಿಂದ ಬಿಡಲ್ಪಡುತ್ತಿದ್ದ ಮಹಾವೇಗಯುಕ್ತವಾಗಿಯೂ ಸರ್ಪ ಗಳ ವಿಷದಂತೆ ತೀಕ್ಷ್ಣವಾಗಿಯೂ ಇದ್ದ ಬಾಣಗಳು ನಿಟ್ಟುಸಿರುಬಿಡುತ್ತಿರುವ ಸರ್ಪಗಳೋಪಾದಿಯಲ್ಲಿ ಲಕ್ಷ್ಮಣನ ಮೇಲೆ ಬೀಳತೊಡಗಿದುವು. ವೇಗವಂತನಾದ ರಾವಣಕುಮಾರನು ಆ ಯುದ್ಧದಲ್ಲಿ ವೇಗಯುಕ್ತವಾದ ಬಾಣಗಳಿಂದ ಶುಭಲಕ್ಷಣಸಂಪನ್ನನಾದ ಲಕ್ಷ್ಮಣನನ್ನು ಗಾಯಗೊಳಿಸಿದನು. ಲಕ್ಷ್ಮಣನು ಇಂದ್ರಜಿತುವಿನಿಂದ ಪ್ರಹರಿಸಲ್ಪಟ್ಟ ಬಾಣಗಳಿಂದ ಕ್ಷತ-ವಿಕ್ಷತನಾಗಿ ರಕ್ತದಿಂದ ತೋಯ್ದು ಹೊಗೆಯಿಲ್ಲದ ಬೆಂಕಿಯಂತೆಯೇ ಪ್ರಕಾಶಿಸುತ್ತಿದ್ದನು. ಇಂದ್ರಜಿತುವು ತನ್ನ ಸಾಹಸಕರ್ಮವನ್ನು ಚೆನ್ನಾಗಿ ವೀಕ್ಷಿಸುತ್ತಾ ಇನ್ನೂ ಮುಂದೆ ಹೋಗಿ ಗಟ್ಟಿಯಾಗಿ ಗರ್ಜನೆಮಾಡಿ ಹೇಳಿದನು :

"ಸೌಮಿತ್ರಿಯೇ! ನನ್ನ ಧನುಸ್ಸಿನಿಂದ ಹೊರಬರುವ, ಹರಿತವಾದ ಅಲಗುಗಳನ್ನು ಹೊಂದಿರುವ, ರೆಕ್ಕೆಗಳಿಂದ ಭೂಷಿತವಾಗಿರುವ, ಶತ್ರುವಿನ ಜೀವಿತವನ್ನು ಕೊನೆಗಾಣಿಸುವ ಬಾಣಗಳೀಗ ನಿನ್ನ ಜೀವಿತವನ್ನೂ ಅಪಹರಿಸಲಿವೆ. ಗುಳ್ಳೇನರಿಗಳ ಸಮೂಹಗಳೂ, ಗಿಡಗಪಕ್ಷಿಗಳೂ, ರಣಹದ್ದುಗಳೂ ರಕ್ತ-ಮಾಂಸಗಳ ಭಕ್ಷಣೆಗಾಗಿ ಈಗಲೇ ನನ್ನಿಂದ ಹತನಾಗಿ ಪ್ರಾಣ ತೊರೆದು ಕೆಳಗುರುಳುವ ನಿನ್ನ ಮೇಲೆ ಬೀಳಲಿ. ಪರಮದುರ್ಬುದ್ಧಿಯವನಾದ ಶ್ರೀರಾಮನು–ಅನಾರ್ಯನೂ, ಕ್ಷತ್ರಿಯಾಧಮನೂ, ಭಕ್ತನೂ, ತಮ್ಮನೂ ಆದ ನೀನು ನನ್ನಿಂದ ಹತನಾಗುವುದನ್ನು ಈಗಲೇ ನೋಡುವನು. ಈ ಕ್ಷಣದಲ್ಲಿಯೇ ನನ್ನ ಬಾಣಪ್ರಹಾರಗಳ ಫಲವಾಗಿ ನಿನ್ನ ಕವಚವು ಕಳಚಿ ನೆಲದ ಮೇಲೆ ಬೀಳುತ್ತದೆ. ನಿನ್ನ ಧನುಸ್ಸೂ ಕೈಯಿಂದ ಜಾರಿ ಬೀಳುತ್ತದೆ. ನಿನ್ನ ತಲೆಯೂ ಹಾರಿಹೋಗುತ್ತದೆ. ಹೀಗೆ ನನ್ನಿಂದ ಹತನಾಗುವ ನಿನ್ನನ್ನು ನಿಮ್ಮ ಅಣ್ಣನಾದ ರಾಮನು ನೋಡುತ್ತಾನೆ."

ಹೀಗೆ ಕಠೋರವಾದ ಮಾತುಗಳನ್ನಾಡುತ್ತಿದ್ದ ಇಂದ್ರಜಿತುವಿಗೆ ಕ್ರುದ್ಧನಾಗಿದ್ದ ಲಕ್ಷ್ಮಣನು ಯುಕ್ತಿಯುಕ್ತವಾಗಿಯೇ ಹೇಳಿದನು :

ವಾಗ್ಬಲಂ ತ್ಯಜ ದುರ್ಬುದ್ಧೇ ಕ್ರೂರಕರ್ಮಾಸಿ ರಾಕ್ಷಸ ।
ಅಥ ಕಸ್ಮಾದ್ವದಸ್ಯೇತತ್ಸಂಪಾದಯ ಸುಕರ್ಮಣಾ ॥೨೭॥

"ಕ್ರೂರಕರ್ಮಿಯೇ! ದುರ್ಬುದ್ಧಿಯೇ! ರಾಕ್ಷಸನೇ! ನೀನು ಕ್ರೂರ ಕರ್ಮನಾಗಿರುವೆ. ನಿನಗಿರುವ ಮಾತಿನ ಬಲವನ್ನು ಪರಿತ್ಯಜಿಸು. ವ್ಯರ್ಥ ವಾಗಿ ಏಕೆ ಮಾತನಾಡುವೆ? ಯುದ್ಧಮಾಡಿ ನಿನ್ನ ಪರಾಕ್ರಮವನ್ನು ತೋರಿಸು.

ಅಕೃತ್ವಾ ಕತ್ಥಸೇ ಕರ್ಮ ಕಿಮರ್ಥಮಿಹ ರಾಕ್ಷಸ ।
ಕುರು ತತ್ಕರ್ಮ ಯೇನಾಹಂ ಶ್ರದ್ದಧ್ಯಾಂ ತವ ಕತ್ಥನಮ್ ॥೨೮॥

ಕಾರ್ಯವನ್ನೇ ಮಾಡದೇ ಗಳಹುತ್ತಿರುವೆಯೇಕೆ? ನೀನು ಏನು ಹೇಳುತ್ತಿರುವೆಯೋ ಅದನ್ನು ಕಾರ್ಯದಲ್ಲಿ ಮಾಡಿ ತೋರಿಸು. ಆಗ ನಾನು ನಿನ್ನ ಆತ್ಮಶ್ಲಾಘನೆಯಲ್ಲಿ ವಿಶ್ವಾಸವನ್ನಿಡುತ್ತೇನೆ.

ಅನುಕ್ತ್ವಾ ಪರುಷಂ ವಾಕ್ಯಂ ಕಿಂಚಿದಪ್ಯನವಕ್ಷಿಪನ್ ।
ಅವಿಕತ್ಥನ್ವಧಿಷ್ಯಾಮಿ ತ್ವಾಂ ಪಶ್ಯ ಪುರುಷಾಧಮ ॥೨೯॥

ಪುರುಷಾಧಮನೇ! ನಾನಾದರೋ ಯಾವ ವಿಧವಾದ ಕಠಿನೋಕ್ತಿ ಗಳನ್ನೂ ಆಡದೇ ಆತ್ಮಶ್ಲಾಘನೆಯನ್ನೂ ಮಾಡಿಕೊಳ್ಳದೇ ನಿನ್ನನ್ನು ಸಂಹರಿಸುತ್ತೇನೆ. ಅದನ್ನೀಗಲೇ ನಿರೀಕ್ಷಿಸು."

ಹೀಗೆ ಹೇಳಿ ಲಕ್ಷ್ಮಣನು ಅತ್ಯಂತವೇಗವುಳ್ಳ ಐದು ಬಾಣಗಳನ್ನು ಕಿವಿಯವರೆಗೂ ಸೆಳೆದು ರಾಕ್ಷಸನ ವಕ್ಷಃಸ್ಥಳದಲ್ಲಿ ಪ್ರಹರಿಸಿದನು. ಸುಂದರ ವಾದ ರೆಕ್ಕೆಗಳಿಂದ ಕೂಡಿದ್ದು ವೇಗಶಾಲಿಗಳಾಗಿದ್ದ ಪ್ರಜ್ವಲಿತವಾದ ಸರ್ಪ ಗಳಂತೆಯೇ ಕಾಣುತ್ತಿದ್ದ ಆ ಐದು ಬಾಣಗಳು ರಾಕ್ಷಸನ ಎದೆಯ ಮೇಲೆ ಸೂರ್ಯನ ಕಿರಣಗಳೋ ಎಂಬಂತೆ ಭಾಸವಾಗುತ್ತಿದ್ದುವು.

ಲಕ್ಷ್ಮಣನ ಆ ಐದು ಬಾಣಗಳಿಂದ ಹೊಡೆಯಲ್ಪಟ್ಟ ಇಂದ್ರಜಿತುವು ಹೆಚ್ಚು ಕೋಪಗೊಂಡು ಸುಪ್ರಯುಕ್ತವಾದ ಮೂರು ಬಾಣಗಳಿಂದ ಲಕ್ಷ್ಮಣನನ್ನು ಪ್ರತಿಯಾಗಿ ಪ್ರಹರಿಸಿದನು. ಹೀಗೆ ಪರಸ್ಪರವಾಗಿ ವಿಜಯವನ್ನು ಆಶಿಸಿದ್ದ ಆ ಇಬ್ಬರು ನರ-ರಾಕ್ಷಸರ ನಡುವೆ ಅತ್ಯಂತಭಯಂಕರವಾದ ಯುದ್ಧವು ಪ್ರಾರಂಭವಾಯಿತು. ಇಬ್ಬರೂ ಮಹಾಪರಾಕ್ರಮಿಗಳಾಗಿದ್ದರು.

ಬಲಸಂಪನ್ನರಾಗಿದ್ದರು. ಅತ್ಯಂತದುರ್ಜಯರಾಗಿದ್ದರು. ಸಮಸ್ತವಾದ ಶಸ್ತ್ರಾಸ್ತ್ರಗಳನ್ನೂ ತಿಳಿದವರಾಗಿದ್ದರು. ತೇಜಸ್ಸಿನಿಂದಲೂ ಬಲದಿಂದಲೂ ಸಂಪನ್ನರಾಗಿದ್ದುದರಿಂದ ದುರ್ಜಯರೂ ಆಗಿದ್ದರು. ಶತ್ರುಗಳಿಂದ ಎದುರಿಸಲು ಅಸಾಧ್ಯರಾಗಿದ್ದ ನರ-ರಾಕ್ಷಸವೀರರು ಆಕಾಶದಲ್ಲಿರುವ ಗ್ರಹಗಳು ಪರಸ್ಪರವಾಗಿ ಸೇರುವಂತೆಯೂ–ಇಂದ್ರ-ವೃತ್ರಾಸುರರು ಪರಸ್ಪರವಾಗಿ ಯುದ್ಧಮಾಡಿದಂತೆಯೂ–ಅತಿಘೋರವಾಗಿ ಯುದ್ಧಮಾಡುತ್ತಿದ್ದರು. ಮಹಾತ್ಮರಾದ ನರ-ರಾಕ್ಷಸಶ್ರೇಷ್ಠರಾದ ಇಂದ್ರಜಿತು ಮತ್ತು ಲಕ್ಷ್ಮಣರು ಬಹುಸಂಖ್ಯಾತವಾದ ಬಾಣಗಳನ್ನು ಒಬ್ಬರಮೇಲೊಬ್ಬರು ಸುರಿಸುತ್ತಾ ಎರಡು ಸಿಂಹಗಳು ಕಾದಾಡುವಂತೆ ಪರಮಹೃಷ್ಟರಾಗಿ ಯುದ್ಧಮಾಡು ತ್ತಿದ್ದರು. ಮೋಡಗಳು ಮಳೆಗರೆಯುವಂತೆ ಒಬ್ಬರು ಮತ್ತೊಬ್ಬರ ಮೇಲೆ ಬಾಣಗಳ ಮಳೆಗರೆಯುತ್ತಿದ್ದರು. ಯುದ್ಧದಲ್ಲಿ ಹೆಚ್ಚು ಹೆಚ್ಚು ಉತ್ಸಾಹವನ್ನು ತೋರುತ್ತಿದ್ದ, ಯುದ್ಧಕೋವಿದರಾದ, ಬಾಣಗಳನ್ನೂ ಕತ್ತಿಗಳನ್ನೂ ಹಿಡಿದು ಅತಿಪ್ರಚಂಡರಾಗಿ ಕಾಣುತ್ತಿದ್ದ, ನಿಶಿತವಾದ ಶಸ್ತ್ರಗಳನ್ನು ಹಿಡಿದಿದ್ದ, ಮಹಾಬಲರಾದ ನರ-ರಾಕ್ಷಸಶ್ರೇಷ್ಠರು ಆ ಮಹಾಸಮರಾಂಗಣದಲ್ಲಿ ಶಂಬರಾಸುರ-ವಾಸವರಂತೆ ಅತಿಶೀಘ್ರವಾಗಿ ಒಬ್ಬರು ಮತ್ತೊಬ್ಬರನ್ನು ಪ್ರಹರಿಸುತ್ತಿದ್ದರು. ಅನಂತರ ಶತ್ರುನಾಶಕನಾದ ಸೌಮಿತ್ರಿಯು ಅತಿಕ್ರುದ್ಧ ನಾಗಿ ಸರ್ಪದಂತೆ ನಿಟ್ಟುಸಿರುಬಿಡುತ್ತಾ ಒಂದು ಬಾಣವನ್ನು ಬತ್ತಳಿಕೆಯಿಂದ ತೆಗೆದು ಧನುಸ್ಸಿನಲ್ಲಿ ಅನುಸಂಧಾನಮಾಡಿ ರಾಕ್ಷಸನನ್ನು ಪ್ರಹರಿಸಿದನು. ರಾವಣನ ಮಗನಾದ ಇಂದ್ರಜಿತುವು ಲಕ್ಷ್ಮಣನು ಮಾಡಿದ ಧನುಸ್ಸಿನ ಟೇಂಕಾರವನ್ನು ಕೇಳುತ್ತಲೇ ಕಂಗೆಟ್ಟ ಮುಖದಿಂದ ಲಕ್ಷ್ಮಣನನ್ನು ನೋಡಿದನು. ಇಂದ್ರಜಿತುವಿನ ಮುಖವು ಬಾಡಿರುವುದನ್ನು ನೋಡಿ ಯುದ್ಧದಲ್ಲಿ ತೊಡಗಿದ್ದ ಲಕ್ಷ್ಮಣನಿಗೆ ವಿಭೀಷಣನು ಹೇಳಿದನು :

"ಲಕ್ಷ್ಮಣ! ಮುಖವಿಕಾರವೇ ಮೊದಲಾದ ದುರ್ನಿಮಿತ್ತಗಳನ್ನು ನಾವೀಗ ಇಂದ್ರಜಿತುವಿನಲ್ಲಿ ಕಾಣುತ್ತಿದ್ದೇವೆ. ಆದುದರಿಂದ ತ್ವರೆಮಾಡು. ಈ ಸಮಯದಲ್ಲಿ ಇವನು ಭಗ್ನನಾಗುವುದರಲ್ಲಿ ಸಂದೇಹವೇ ಇಲ್ಲ."

ವಿಭೀಷಣನ ಆ ಮಾತನ್ನು ಕೇಳಿ ಸೌಮಿತ್ರಿಯು ವಿಷಸರ್ಪಗಳಿಗೆ ಸಮಾನವಾಗಿದ್ದ ಬಾಣಗಳನ್ನು ಧನುಸ್ಸಿನಲ್ಲಿ ಹೂಡಿ ಇಂದ್ರಜಿತುವಿನ ಮೇಲೆ

ಗುರಿಯಿಟ್ಟು ಪ್ರಯೋಗಿಸಿದನು. ಇಂದ್ರನ ವಜ್ರಾಯುಧಕ್ಕೆ ಸಮಾನವಾಗಿದ್ದ ಲಕ್ಷ್ಮಣನ ಬಾಣಗಳಿಂದ ಹೊಡೆಯಲ್ಪಟ್ಟ ಇಂದ್ರಜಿತುವು ಮುಹೂರ್ತಕಾಲ ದವರೆಗೆ ಮೂರ್ಛಿತನಾಗಿ ಬಿದ್ದಿದ್ದನು. ಅವನ ಎಲ್ಲ ಇಂದ್ರಿಯಗಳೂ ತರತರನೆ ನಡುಗುತ್ತಿದ್ದುವು. ಮುಹೂರ್ತಕಾಲವು ಕಳೆದನಂತರ ಇಂದ್ರ ಜಿತುವು ಎಚ್ಚರಗೊಂಡನು. ಲಕ್ಷ್ಮಣನು ತನ್ನ ಮುಂದೆ ಯುದ್ಧಸನ್ನದ್ಧನಾಗಿ ನಿಂತಿರುವುದನ್ನು ನೋಡುತ್ತಲೇ ರೋಷದಿಂದ ಕೆಂಗಣ್ಣನಾಗಿ ಪುನಃ ಯುದ್ಧಮಾಡಲು ಸೌಮಿತ್ರಿಯ ಮುಂದೆ ನಿಂತು ಪುನಃ ಹಿಂದಿನಂತೆಯೇ ಕಠೋರವಾದ ಮಾತುಗಳನ್ನಾಡಲು ಉಪಕ್ರಮಿಸಿದನು.

ಕಿಂ ನ ಸ್ಮರಸಿ ತದ್ಯುದ್ಧೇ ಪ್ರಥಮೇ ಮತ್ಪರಾಕ್ರಮಮ್ ।
ನಿಬದ್ಧಸ್ತ್ವಂ ಸಹ ಭ್ರಾತ್ರಾ ಯದಾ ಭುವಿ ವಿಚೇಷ್ಟಸೇ ॥೪೭॥

"ಈ ಹಿಂದೆ ನಡೆದ ಮೊದಲನೆಯ ಯುದ್ಧದಲ್ಲಿ ನಾನು ತೋರಿದ ಪರಾಕ್ರಮವನ್ನು ಮರೆತುಬಿಟ್ಟೆಯಾ? ನಾನು ನಿನ್ನನ್ನೂ ಮತ್ತು ನಿನ್ನ ಅಣ್ಣನನ್ನೂ ನಾಗಪಾಶದಿಂದ ಬಂಧಿಸಿಬಿಟ್ಟಿದ್ದೆನು. ಆಗ ನೀನು ಭೂಮಿಯಲ್ಲಿ ಬಿದ್ದು ಹೊರಳಾಡುತ್ತಿದ್ದೆ.

ಆ ಮಹಾಯುದ್ಧದಲ್ಲಿ ನಾನು ವಜ್ರಾಶನಿಗಳಿಗೆ ಸದೃಶವಾದ ಬಾಣ ಗಳಿಂದ ಪ್ರಹರಿಸಿ ಮೊದಲು ನಿಮ್ಮಿಬ್ಬರನ್ನೂ ಮಲಗಿಸಿದೆನು. ಅನಂತರ ವಾನರಸೇನಾನಾಯಕರೆಲ್ಲರನ್ನೂ ಮೂರ್ಛಿತರನ್ನಾಗಿ ಮಾಡಿದೆನು.

ಸ್ಮೃತಿರ್ವಾ ನಾಸ್ತಿ ತೇ ಮನ್ಯೇ ವ್ಯಕ್ತಂ ವಾ ಯಮಸಾದನಮ್ ।
ಗನ್ತುಮಿಚ್ಛಸಿ ಯಸ್ಮಾತ್ತ್ವಂ ಮಾಂ ಧರ್ಷಯಿತುಮಿಚ್ಛಸಿ ॥೪೯॥

ನಿನಗೆ ಸ್ಮರಣಶಕ್ತಿಯಿಲ್ಲದೇ ಅಂದಾಗಿದ್ದನ್ನು ನೀನು ಮರೆತಿರಬಹುದು. ಅಥವಾ ಯಮನ ಅರಮನೆಗೆ ಹೋಗಲು ನೀನು ನಿಶ್ಚಯಿಸಿಬಿಟ್ಟಿರಬಹುದು. ಆದುದರಿಂದಲೇ ನೀನು ನನ್ನನ್ನು ಪರಾಜಯಗೊಳಿಸಲು ಅಪೇಕ್ಷಿಸಿ ಪುನಃ ಬಂದಿರುವೆ.

ಯದಿ ತೇ ಪ್ರಥಮೇ ಯುದ್ಧೇ ನ ದೃಷ್ಟೋ ಮತ್ಪರಾಕ್ರಮಃ ।
ಅದ್ಯ ತೇ ದರ್ಶಯಿಷ್ಯಾಮಿ ತಿಷ್ಠೇದಾನೀಂ ವ್ಯವಸ್ಥಿತಃ ॥೫೦॥

ಮೊದಲ ಯುದ್ಧದಲ್ಲಿ ನನ್ನ ಪರಾಕ್ರಮದ ಅರಿವು ನಿನಗಾಗಿರದಿದ್ದರೆ

ಈಗ ನಿನಗೆ ನನ್ನ ಪರಾಕ್ರಮವೆಷ್ಟೆಂಬುದನ್ನು ತೋರುತ್ತೇನೆ. ಸುಸ್ಥಿರನಾಗಿ ನಿಲ್ಲು."

ಇಂದ್ರಜಿತುವು ಹೀಗೆ ಹೇಳಿ ಲಕ್ಷ್ಮಣನನ್ನು ಏಳು ಬಾಣಗಳಿಂದಲೂ ಅವನನ್ನು ಹೊತ್ತಿದ್ದ ಮಾರುತಿಯನ್ನು ತೀಕ್ಷ್ಣವಾದ ಅಲಗುಳ್ಳ ಶ್ರೇಷ್ಠವಾದ ಹತ್ತು ಬಾಣಗಳಿಂದಲೂ ಪ್ರಹರಿಸಿದನು. ಅನಂತರ ಇಮ್ಮಡಿಯಾದ ಕೋಪದಿಂದ ಸಮಾವಿಷ್ಟನಾಗಿದ್ದ ವೀರ್ಯವಂತನಾದ ರಾವಣಿಯು ನೂರು ಬಾಣಗಳಿಂದ ವಿಭೀಷಣನನ್ನು ಪ್ರಹರಿಸಿದನು. ಇಂದ್ರಜಿತುವು ತೋರಿದ ಪರಾಕ್ರಮವನ್ನು ನೋಡಿ ರಾಮಾನುಜನಾದ ಲಕ್ಷ್ಮಣನು ಆ ಪ್ರಹಾರವನ್ನು ಸ್ವಲ್ಪವಾದರೂ ಲೆಕ್ಕಿಸದೇ ಗಹ-ಗಹಿಸಿ ನಗುತ್ತಾ 'ಇದೇನು ಮಹಾ'– ಎಂದುಕೊಂಡನು. ಆಗ ಲಕ್ಷ್ಮಣನ ಮುಖದಲ್ಲಿ ಭಯದ ಕುರುಹೂ ಇರಲಿಲ್ಲ. ಪರಮಕ್ರುದ್ಧನಾಗಿ ಘೋರವಾದ ಬಾಣಗಳನ್ನು ಬತ್ತಳಿಕೆಯಿಂದ ತೆಗೆದು ರಾವಣಿಯ ಮೇಲೆ ಪ್ರಹರಿಸಿ ಹೇಳಿದನು :

"ನಿಶಾಚರನೇ! ರಣಭೂಮಿಗೆ ಬರುವ ಶೂರರು ನೀನು ಬಿಟ್ಟಂತಹ ಸಪ್ಪೆಯಾದ ಬಾಣಗಳಿಂದ ಯಾವಾಗಲೂ ಶತ್ರುಗಳನ್ನು ಪ್ರಹರಿಸುವುದಿಲ್ಲ. ನೀನು ಬಿಟ್ಟಿರುವ ಬಾಣಗಳು ಹಗುರವೂ ಅಲ್ಪವಾದ ಶಕ್ತಿಯವೂ ಆಗಿವೆ. ಈ ಬಾಣಗಳ ಸ್ಪರ್ಶದಿಂದ ನನಗೆ ಸುಖವೇ ಆಗಿದೆ. ಯುದ್ಧಾಕಾಂಕ್ಷಿಗಳಾದ ವೀರರು ಸಮರಾಂಗಣದಲ್ಲಿ ಹೀಗೆಂದಿಗೂ ಯುದ್ಧಮಾಡುವುದಿಲ್ಲ."

ಧನುಷ್ಮಂತನಾದ ಲಕ್ಷ್ಮಣನು ಹೀಗೆ ಹೇಳುತ್ತಾ ಇಂದ್ರಜಿತುವಿನ ಮೇಲೆ ಬಾಣಗಳ ಮಳೆಯನ್ನೇ ಸುರಿಸಿದನು.

ಲಕ್ಷ್ಮಣನು ಬಿಟ್ಟ ಆ ಬಾಣಗಳಿಂದ ರಾವಣಿಯ ಸುವರ್ಣಮಯ ವಾದ ಕವಚವು ನುಚ್ಚುನೂರಾಗಿ–ಆಕಾಶದಿಂದ ನಕ್ಷತ್ರಗಳ ಗುಂಪು ಕೆಳಕ್ಕೆ ಬೀಳುವಂತೆ ರಥದ ಎಲ್ಲ ಕಡೆಗಳಲ್ಲಿಯೂ ಚದುರಿದಂತೆ ಬಿದ್ದಿತು. ಕವಚವು ಜಾರಿ ಕೆಳಕ್ಕೆ ಬಿದ್ದುದರಿಂದ ಪುಂಖಾನುಪುಂಖವಾಗಿ ಬರುತ್ತಿದ್ದ ಲಕ್ಷ್ಮಣನ ಬಾಣಗಳು ರಾವಣಿಯ ಅಂಗಾಂಗಗಳನ್ನು ಗಾಯಗೊಳಿಸಿದುವು. ಆ ಸಮಯದಲ್ಲಿ ರಕ್ತದಿಂದ ತೋಯ್ದು ಹೋಗಿದ್ದ ರಾವಣಿಯು ಪ್ರಾತಃ ಕಾಲದ ಸೂರ್ಯನಂತೆಯೇ ಕಾಣುತ್ತಿದ್ದನು. ಆದರಿಂದ ಕ್ರುದ್ಧನಾದ

ಭಯಂಕರಪರಾಕ್ರಮಿಯಾದ ಇಂದ್ರಜಿತುವು ಲಕ್ಷ್ಮಣನನ್ನು ಸಾವಿರ ಬಾಣಗಳಿಂದ ಪ್ರಹರಿಸಿದನು. ಇಂದ್ರಜಿತುವಿನ ಕವಚದಂತೆಯೇ ಲಕ್ಷ್ಮಣನ ಕವಚವೂ ರಾವಣಿಯು ಬಿಟ್ಟ ಬಾಣಗಳಿಂದ ಛಿನ್ನ-ಭಿನ್ನವಾಗಿಹೋಯಿತು. ಹೀಗೆ ಶತ್ರುಧ್ವಂಸಕರಾದ ಆ ನರ-ರಾಕ್ಷಸರು ಒಬ್ಬರು ಮಾಡಿದುದಕ್ಕೆ ಮತ್ತೊಬ್ಬರು ಪ್ರತಿಯಾಗಿ ಮಾಡುತ್ತಾ ಘೋರವಾದ ಯುದ್ಧವನ್ನು ಮಾಡುತ್ತಿದ್ದರು. ಇಬ್ಬರೂ

ಬಾರಿ-ಬಾರಿಗೂ ನಿಟ್ಟುಸಿರುಬಿಡುತ್ತಿದ್ದರು. ಇಬ್ಬರ ಅಂಗಾಂಗಗಳೂ ಕ್ಷತ-ವಿಕ್ಷತವಾಗಿ ಇಬ್ಬರೂ ರಕ್ತದಿಂದ ತೋಯ್ದು ಹೋಗಿದ್ದರು. ರಣಕರ್ಮವಿಶಾರದರಾದ, ಭಯಂಕರಪರಾಕ್ರಮಿಗಳಾದ, ವಿಜಯಗಳಿಸುವುದಕ್ಕಾಗಿ ಸತತವಾಗಿ ಪ್ರಯತ್ನಮಾಡುತ್ತಿದ್ದ ನರ-ರಾಕ್ಷಸರು ಬಹಳ ಹೊತ್ತಿನವರೆಗೆ ಒಬ್ಬರು ಮತ್ತೊಬ್ಬರನ್ನು ನಿಶಿತವಾದ ಬಾಣಗಳಿಂದ

ಗಾಯಗೊಳಿಸುತ್ತಲೇ ಇದ್ದರು. ಇಬ್ಬರ ಶರೀರಗಳೂ ಬಾಣಗಳ ಸಮೂಹಗಳಿಂದ ತುಂಬಿಹೋಗಿದ್ದುವು. ಇಬ್ಬರ ಕವಚ-ಧ್ವಜಗಳೂ ಕತ್ತರಿಸಲ್ಪಟ್ಟು ಕೆಳಕ್ಕೆ ಬಿದ್ದಿದ್ದುವು. ಎರಡು ಗಿರಿನದಿಗಳಿಂದ ನೀರು ಪ್ರವಹಿಸುವಂತೆ–ಇಬ್ಬರ ಶರೀರಗಳಿಂದಲೂ ಬಿಸಿ-ಬಿಸಿಯಾದ ರಕ್ತವು ಹರಿಯುತ್ತಿದ್ದಿತು. ಪ್ರಳಯಕಾಲದಲ್ಲಿ ಎರಡು ಕಾರ್ಮುಗಿಲುಗಳು ಆಕಾಶದಿಂದ ನೀರನ್ನು ಸುರಿಸುವಂತೆ–ನರ-ರಾಕ್ಷಸರು ಮೇಘದಂತೆ ಭಯಂಕರವಾಗಿ ಗರ್ಜನೆ ಮಾಡುತ್ತಾ ಬಾಣರೂಪವಾದ ಮಳೆಯನ್ನು ಒಬ್ಬರು ಮತ್ತೊಬ್ಬರ ಮೇಲೆ ಎಡಬಿಡದೆ ಸುರಿಸುತ್ತಿದ್ದರು. ಹಾಗೆ ಅವರು ಯುದ್ಧಮಾಡುತ್ತಿದ್ದಂತೆಯೇ ಬಹಳ ಕಾಲವು ಕಳೆದುಹೋಯಿತು. ಆದರೆ ಆ ಯುದ್ಧದಿಂದ ಅವರು ಆಯಾಸಗೊಳ್ಳಲೂ ಇಲ್ಲ ; ಹಿಂದಿರುಗಲೂ ಇಲ್ಲ. ಅಸ್ತ್ರವಿದ್ಯೆಯನ್ನು ತಿಳಿದವರಲ್ಲಿ ಶ್ರೇಷ್ಠರಾಗಿದ್ದ ಇಬ್ಬರೂ ಬಾರಿ-ಬಾರಿಗೂ ತಮ್ಮಲ್ಲಿದ್ದ ಅಮೋಘವಾದ ಅಸ್ತ್ರಗಳನ್ನು ಪ್ರದರ್ಶಿಸುತ್ತಿದ್ದರು. ಚಿಕ್ಕದಾದ ಮತ್ತು ದೊಡ್ಡದಾದ ಬಾಣಗಳ ಸಮೂಹವನ್ನೇ ಅಂತರಿಕ್ಷದಲ್ಲಿ ಬಲೆಗಳ ರೀತಿಯಲ್ಲಿ ಸೇರಿಸುತ್ತಿದ್ದರು. ಆದಾನ-ಸಂಧಾನ-ಪ್ರಯೋಗಗಳಲ್ಲಿ ಯಾವ ವಿಧವಾದ ದೋಷವೂ ಇಲ್ಲದ ರೀತಿಯಲ್ಲಿ ಶೀಘ್ರವಾಗಿಯೂ, ಚಿತ್ರ-ವಿಚಿತ್ರವಾಗಿಯೂ ಮತ್ತು ಚೆನ್ನಾಗಿಯೂ ಬಾಣಗಳನ್ನು ಬಿಡುತ್ತಾ ಲಕ್ಷ್ಮಣ-ಇಂದ್ರಜಿತರು ಭಯಂಕರವಾದ ರೀತಿಯಲ್ಲಿ ಯುದ್ಧಮಾಡುತ್ತಿದ್ದರು. ಅವರು ಬಾಣಗಳನ್ನು ಬಿಡುತ್ತಿದ್ದಾಗ ಭಯಂಕರವಾದ ಅವರ ಅಂಗೈಶಬ್ದವು ಬೇರೆ-ಬೇರೆಯಾಗಿಯೇ ಕೇಳಿಬರುತ್ತಿದ್ದಿತು. ಆ ಶಬ್ದವು ಭಯಂಕರವಾದ ಸಿಡಿಲಿನ ಶಬ್ದದಂತೆ ಎಲ್ಲರ ಹೃದಯಗಳಲ್ಲಿಯೂ ನಡುಕವನ್ನುಂಟು ಮಾಡುತ್ತಿದ್ದಿತು. ರಣೋನ್ಮತ್ತರಾಗಿದ್ದ ಇಬ್ಬರು ವೀರರ ಅಂಗೈಗಳ ಶಬ್ದವು ಆಕಾಶದಲ್ಲಿರುವ ಭಯಂಕರವಾದ ಎರಡು ಮೇಘಗಳ ಘೋರಗರ್ಜನೆಯಂತೆ ಕೇಳಿಬರುತ್ತಿದ್ದಿತು.

ಬಲಿಷ್ಠರಾಗಿದ್ದ ಅವರಿಬ್ಬರೂ ಚಿನ್ನದ ರೆಕ್ಕೆಗಳಿಂದ ಕೂಡಿದ್ದ ಬಾಣಗಳ ಪರಸ್ಪರ ಪ್ರಯೋಗದಿಂದ ಬಹಳವಾಗಿ ಗಾಯಗೊಂಡಿದ್ದರು. ಇಬ್ಬರ ಶರೀರಗಳಿಂದಲೂ ರಕ್ತವು ಸುರಿಯುತ್ತಿದ್ದಿತು. ಕೀರ್ತಿಶಾಲಿಗಳಾಗಿ ವಿಜಯಗಳಿಸುವುದಕ್ಕಾಗಿ ಸತತಪ್ರಯತ್ನವನ್ನು ಮಾಡುತ್ತಿದ್ದರು. ಅವರ

ಶರೀರಗಳ ಮೇಲೆ ಬೀಳುತ್ತಿದ್ದ ಚಿನ್ನದ ರೆಕ್ಕೆಗಳುಳ್ಳ ಬಾಣಗಳು ಆ ನರ-ರಾಕ್ಷಸಶ್ರೇಷ್ಠರ ಶರೀರಗಳನ್ನು ಹೊಕ್ಕು ರಕ್ತದಿಂದ ತೋಯ್ದು ಹೊರಬಂದು ಭೂಮಿಯೊಳಗೆ ನುಸುಳಿ ಹೋಗುತ್ತಿದ್ದುವು. ಅವರ ಇತರ ಸಾವಿರಾರು ಬಾಣಗಳು ಆಕಾಶದಲ್ಲಿ ಸುನಿಶಿತವಾದ ಶಸ್ತ್ರಗಳೊಡನೆ ಸಂಘರ್ಷಿಸುತ್ತಾ ಪರಸ್ಪರವಾಗಿ ಛಿನ್ನ-ಭಿನ್ನ ಮಾಡುತ್ತಿದ್ದುವು. ಆ ಯುದ್ಧವು ಕ್ಷಣ-ಕ್ಷಣಕ್ಕೂ ಅತ್ಯಂತಭಯಂಕರವಾಗಿ ನಡೆಯುತ್ತಿದ್ದಿತು. ಬಾಣಗಳ ಸಮೂಹಗಳಿಂದ ವ್ಯಾಪ್ತರಾಗಿದ್ದ ಇಬ್ಬರೂ ಯಜ್ಞದಲ್ಲಿ ಪರಿಸ್ತರಣದರ್ಭೆಯಿಂದ ಸಮಾವೃತವಾದ ಗಾರ್ಹಪತ್ಯ ಮತ್ತು ಆಹವನೀಯಾಗ್ನಿಗಳಂತೆಯೇ ಕಾಣು ತ್ತಿದ್ದರು. ಗಾಯಗೊಂಡಿದ್ದ ಅವರ ದೇಹಗಳು ಅರಣ್ಯದಲ್ಲಿ ಎಲೆಗಳಿಲ್ಲದ ಕೆಂಪುಹೂವುಗಳಿಂದ ತುಂಬಿರುವ ಮುತ್ತುಗದ ಮರಗಳಂತೆಯೇ ಕಾಣು ತ್ತಿದ್ದುವು. ಒಬ್ಬರನ್ನು ಮತ್ತೊಬ್ಬರು ಜಯಿಸಬೇಕೆಂಬ ಇಚ್ಛೆಯಿಂದ ಕೂಡಿದ್ದ ಇಂದ್ರಜಿತು ಮತ್ತು ಲಕ್ಷ್ಮಣರು ಕ್ಷಣ-ಕ್ಷಣಕ್ಕೂ ಒಬ್ಬರು ಮತ್ತೊಬ್ಬರನ್ನು ಪ್ರಹರಿಸುತ್ತಾ ಘೋರವಾಗಿ ಯುದ್ಧಮಾಡುತ್ತಿದ್ದರು. ಲಕ್ಷ್ಮಣನು ರಾವಣಿಯನ್ನೂ ರಾವಣಿಯು ಲಕ್ಷ್ಮಣನನ್ನೂ ಯುದ್ಧದಲ್ಲಿ ಪ್ರಹರಿಸುತ್ತಿದ್ದರು. ಆದರೆ ಯಾರೊಬ್ಬರೂ ಆಯಾಸಗೊಳ್ಳಲಿಲ್ಲ. ಪರ ಸ್ಪರವಾಗಿ ಬಿಟ್ಟ ಬಾಣಗಳು ಇಬ್ಬರ ಶರೀರಗಳಲ್ಲಿಯೂ ಆಳವಾಗಿ ಚುಚ್ಚಿ ಕೊಂಡಿದ್ದುವು. ಬಾಣಗಳಿಂದ ಯುಕ್ತರಾಗಿದ್ದ ಮಹಾವೀರ್ಯರಾದ ನರ-ರಾಕ್ಷಸರು ವೃಕ್ಷಗಳು ತುಂಬಿರುವ ಎರಡು ಪರ್ವತಗಳಂತೆಯೇ ಶೋಭಿಸುತ್ತಿದ್ದರು. ಬಾಣಗಳಿಂದ ಕೂಡಿರುವ ಮತ್ತು ರಕ್ತದಿಂದ ತೋಯ್ದು ಹೋಗಿದ್ದ ಅವರ ಅಂಗಾಂಗಗಳು ಪ್ರಜ್ವಲಿಸುತ್ತಿರುವ ಅಗ್ನಿಗಳಂತೆಯೇ ಕಾಣುತ್ತಿದ್ದುವು. ಹೀಗೆ ಅವರು ಯುದ್ಧಮಾಡುತ್ತಿದ್ದಂತೆಯೇ ಬಹಳ ಹೊತ್ತು ಕಳೆದುಹೋಯಿತು. ಆದರೆ ಇಬ್ಬರಲ್ಲಿ ಯಾರೊಬ್ಬರೂ ಯುದ್ಧ ದಿಂದ ವಿಮುಖರಾಗಲೂ ಇಲ್ಲ; ಆಯಾಸಗೊಳ್ಳಲೂ ಇಲ್ಲ.

ಯುದ್ಧದಲ್ಲಿ ಪರಾಜಿತನಾಗದಿದ್ದ ಲಕ್ಷ್ಮಣನಿಗೆ ಯುದ್ಧದಿಂದಾದ ಶ್ರಮ ವನ್ನು ಹೋಗಲಾಡಿಸಲು ಮತ್ತು ಹಿತಕರವೂ ಪ್ರಿಯವೂ ಆದ ಮಾತನ್ನು ಹೇಳಲು ಮಹಾತ್ಮನಾದ ವಿಭೀಷಣನು ಲಕ್ಷ್ಮಣನ ಬಳಿಗೆ ಬಂದನು.

ಲಲನೆಯ ಸರ್ಗವು ಮುಗಿಯಿತು.

ರಾಕ್ಷಸರೊಡನೆ ವಿಭೀಷಣನ ಯುದ್ಧ: ವಿಭೀಷಣನಿಗೆ ವಾನರಯೂಥಪತಿಗಳ ಪ್ರೋತ್ಸಾಹ: ಲಕ್ಷ್ಮಣನಿಂದ ಇಂದ್ರಜಿತುವಿನ ಸಾರಥಿಯ ಸಂಹಾರ: ವಾನರರಿಂದ ಇಂದ್ರಜಿತುವಿನ ಕುದುರೆಗಳ ಸಂಹಾರ

ಯುಧ್ಯಮಾನೌ ತು ತೌ ದೃಷ್ಟ್ವಾ ಪ್ರಸಕ್ತೌ ನರರಾಕ್ಷಸೌ ।
ಪ್ರಭಿನ್ನಾವಿವ ಮಾತಙ್ಗೌ ಪರಸ್ಪರಜಯೈಷಿಣೌ ॥೧॥

ತಯೋರ್ಯುದ್ಧಂ ದ್ರಷ್ಟುಕಾಮೋ ವರಚಾಪಧರೋ ಬಲೀ ।
ಶೂರಃ ಸ ರಾವಣಭ್ರಾತಾ ತಸ್ಥೌ ಸಂಗ್ರಾಮಮೂರ್ಧನಿ ॥೨॥

ನರ-ರಾಕ್ಷಸಶ್ರೇಷ್ಠರು ಮದಿಸಿದ ಆನೆಗಳಂತೆ ಒಬ್ಬರನ್ನೊಬ್ಬರು ಜಯಿಸುವ ಇಚ್ಛೆಯಿಂದ ಘೋರವಾದ ಯುದ್ಧದಲ್ಲಿ ತೊಡಗಿದ್ದರು. ಅವರಿಬ್ಬರ ಘೋರಯುದ್ಧವನ್ನು ನೋಡುವ ಅಪೇಕ್ಷೆಯಿಂದ ಶ್ರೇಷ್ಠವಾದ ಧನುಸ್ಸನ್ನು ಹಿಡಿದಿದ್ದ, ಶೂರನಾದ, ರಾವಣಾನುಜನಾದ ವಿಭೀಷಣನು ರಣರಂಗದಲ್ಲಿ ನಿಂತನು.

ಅವರು ಯುದ್ಧಮಾಡುತ್ತಿದ್ದುದನ್ನು ನೋಡಿ ವಿಭೀಷಣನಿಗೂ ಯುದ್ಧ ಮಾಡಬೇಕೆನ್ನಿಸಿತು. ಅವನು ದೊಡ್ಡದಾಗಿದ್ದ ತನ್ನ ಧನುಸ್ಸನ್ನು ಟೇಂಕರಿಸಿ ತೀಕ್ಷ್ಣವಾದ ಅಗ್ರಭಾಗಗಳಿಂದ ಕೂಡಿದ್ದ ಮಹಾಶರಗಳನ್ನು ಇಂದ್ರಜಿತುವಿನ ಅನುಯಾಯಿಗಳಾದ ರಾಕ್ಷಸರ ಮೇಲೆ ಪ್ರಯೋಗಿಸಿದನು. ಅಗ್ನಿಯ ಸ್ಪರ್ಶಕ್ಕೆ ಸಮಾನವಾದ ಸ್ಪರ್ಶವಿದ್ದ, ಏಕಾಗ್ರವಾಗಿ ಹೋಗುತ್ತಿದ್ದ, ವಿಭೀಷಣನು ಬಿಟ್ಟ ಬಾಣಗಳು ರಾಕ್ಷಸರ ಮೇಲೆ ಬೀಳುತ್ತಾ–ವಜ್ರಾಯುಧಗಳು ಮಹಾಪರ್ವತಗಳ ರೆಕ್ಕೆಗಳನ್ನು ಕತ್ತರಿಸಿಹಾಕಿದಂತೆ ರಾಕ್ಷಸರನ್ನು ಸೀಳಿಬಿಟ್ಟುವು. ವಿಭೀಷಣನ ಅನುಚರರಾದ ನಾಲ್ವರು ರಾಕ್ಷಸಶ್ರೇಷ್ಠರೂ ಶೂಲ-ಕತ್ತಿ-ಪಟ್ಟಿಶ ಇವೇ ಮೊದಲಾದ ಆಯುಧಗಳಿಂದ ರಾಕ್ಷಸವೀರರನ್ನು ಕತ್ತರಿಸುತ್ತಿದ್ದರು. ಆ ಸಮಯದಲ್ಲಿ ರಾಕ್ಷಸರಿಂದ ಪರಿವೃತನಾಗಿದ್ದ ವಿಭೀಷಣನು ಆನೆಯ ಮರಿಗಳ ನಡುವೆ ಇರುವ ಸಲಗದಂತೆಯೇ ಕಾಣುತ್ತಿದ್ದನು. ಸಮಯೋಚಿತ

ವಾದ ಕರ್ತವ್ಯಗಳೇನೆಂಬುದನ್ನು ತಿಳಿದಿದ್ದ ವಿಭೀಷಣನು ರಾಕ್ಷಸರ ವಧೆ ಯಲ್ಲಿ ಆಸಕ್ತರಾಗಿದ್ದ ವಾನರರನ್ನು ಯುದ್ಧಕ್ಕೆ ಹುರಿದುಂಬಿಸುತ್ತಾ ಹೇಳಿದನು :

"ವಾನರೇಶ್ವರನೇ! ಸುಮ್ಮನೇಕೆ ನಿಂತು ನೋಡುತ್ತಿರುವಿರಿ? ಉಳಿದಿರುವ ರಾವಣನ ಏಕಮಾತ್ರಪುತ್ರನು ನಿನ್ನ ಮುಂದೆ ನಿಂತಿದ್ದಾನೆ. ರಾವಣನ ಸೈನ್ಯದಲ್ಲಿ ಇಲ್ಲಿ ಕಾಣುತ್ತಿರುವ ಇಷ್ಟು ಸೈನ್ಯವು ಮಾತ್ರ ಜೀವಂತವಾಗಿ ಉಳಿದಿದೆ. ಇವನೊಬ್ಬನನ್ನು ಸಂಹಾರಮಾಡಿಬಿಟ್ಟರೆ ರಾವಣನೊಬ್ಬನನ್ನು ಬಿಟ್ಟು ಉಳಿದ ಅವನ ಸೈನ್ಯವೆಲ್ಲವೂ ವಿನಾಶವಾದಂತೆಯೇ ಸರಿ. ವೀರ ನಾದ ಪ್ರಹಸ್ತ, ಮಹಾಬಲನಾದ ನಿಕುಂಭ, ಕುಂಭಕರ್ಣ, ಕುಂಭ, ಧೂಮ್ರಾಕ್ಷ–ಇವರೆಲ್ಲರೂ ಯುದ್ಧದಲ್ಲಿ ಹತರಾದರು. ಜಂಬುಮಾಲೀ, ಮಹಾಮಾಲೀ, ತೀಕ್ಷ್ಣವೇಗ, ಅಶನಿಪ್ರಭ, ಸುಪ್ತಘ್ನ, ಯಜ್ಞಕೋಪ, ವಜ್ರ ದಂಷ್ಟ್ರ, ಸಂಹ್ರಾದೀ, ವಿಕಟ, ನಿಘ್ನ, ತಪನ, ಮಂದ, ಪ್ರಘಾಸ, ಪ್ರಘಸ, ಪ್ರಜಂಘ, ಜಂಘ, ದುರ್ಜಯನಾದ ಅಗ್ನಿಕೇತು, ಪರಾಕ್ರಮಿಯಾದ ರಶ್ಮಿ ಕೇತು, ವಿದ್ಯುಜ್ಜಿಹ್ವ, ದ್ವಿಜಿಹ್ವ, ಸೂರ್ಯಶತ್ರು, ಅಕಂಪನ, ಸುಪಾರ್ಶ್ವ, ಚಕ್ರಮಾಲೀ, ಕಂಪನ, ದೇವಾಂತಕ, ನರಾಂತಕ–ಇವರೆಲ್ಲರೂ ಮಹಾಸಮರ ದಲ್ಲಿ ಅಸುನೀಗಿದ್ದಾರೆ.

ಮಹಾಬಲಿಷ್ಠರಾದ ಬಹುಸಂಖ್ಯಾತರಾದ ರಾಕ್ಷಸಶ್ರೇಷ್ಠರೆಲ್ಲರನ್ನೂ ಸಂಹರಿಸಿ ನೀವು ನಿಮ್ಮ ಬಾಹುಬಲದಿಂದ ಅಪಾರವಾದ ಸಮರಸಮುದ್ರ ವನ್ನೇ ದಾಟಿಬಿಟ್ಟಿರುವಿರಿ. ಈಗ ಹಸುವಿನ ಹೆಜ್ಜೆಯಷ್ಟು ಮಾತ್ರವೇ ಸೈನಿಕರು ಉಳಿದಿದ್ದಾರೆ. ಈ ಸೈನ್ಯಶೇಷವನ್ನು ಮಾತ್ರವೇ ನೀವೀಗ ಜಯಿಸಬೇಕಾ ಗಿದೆ. ಬಲದರ್ಪಿತರಾಗಿದ್ದ ರಾಕ್ಷಸರೆಲ್ಲರೂ ನಿಮ್ಮೊಡನೆ ಯುದ್ಧಮಾಡಲು ಬಂದು ಹತರಾಗಿಹೋದರು.

ನಾನು ಇವನ ಚಿಕ್ಕಪ್ಪನಾಗಿದ್ದೇನೆ. ಒಂದು ರೀತಿಯಲ್ಲಿ ನೋಡಿದರೆ ಇವನ ವಧೆಗೆ ಒತ್ತಾಸೆನೀಡುವುದು ಯುಕ್ತವಾಗಿ ಕಾಣುವುದಿಲ್ಲ. ಆದರೂ ಶ್ರೀರಾಮನ ಸಲುವಾಗಿ ಇವನು ನನ್ನ ಪುತ್ರನೆಂಬ ಕರುಣೆಯನ್ನು ಬದಿಗೊತ್ತಿ ಈ ನಮ್ಮ ಅಣ್ಣನ ಮಗನನ್ನು ಸಂಹರಿಸಲು ನಾನು ಸಿದ್ಧನಾಗಿದ್ದೇನೆ.

ಆದರೂ ನಾನು ಇವನನ್ನು ಸಂಹರಿಸಬೇಕೆಂದು ಶಸ್ತ್ರವನ್ನೆತ್ತಿದಾಗ

ಕಣ್ಣಿನಲ್ಲಿ ನೀರುತುಂಬಿಕೊಂಡು ನನ್ನ ಗುರಿಯೇ ತಪ್ಪಿಹೋಗುತ್ತದೆ. ಆದುದರಿಂದ ಮಹಾಬಾಹುವಾದ ಲಕ್ಷ್ಮಣನೇ ಇವನನ್ನು ಸಂಹರಿಸಬೇಕಾಗಿದೆ. ವಾನರಸೈನಿಕರೇ! ನೀವೆಲ್ಲರೂ ಸೇರಿಕೊಂಡು ಇಂದ್ರಜಿತುವಿನ ಸಮೀಪದಲ್ಲಿರುವ ಇವನ ಭೃತ್ಯರನ್ನು ಸಂಹರಿಸಿರಿ.”

ಯಶೋವಂತನಾದ ವಿಭೀಷಣನು ಹೀಗೆ ಹೇಳಲು ವಾನರಶ್ರೇಷ್ಠರೆಲ್ಲರೂ ಪರಮಹೃಷ್ಟರಾಗಿ ಬಾಲಗಳನ್ನು ನೆಲಕ್ಕೆ ಅಪ್ಪಳಿಸಿದರು. ಮೇಘಗಳನ್ನು ಕಂಡ ನವಿಲುಗಳು ಕೇಕೆಹಾಕುವಂತೆ–ಕಪಿಶ್ರೇಷ್ಠರು ಬಾರಿ-ಬಾರಿಗೂ ಗರ್ಜಿಸುತ್ತಾ ನಾನಾಪ್ರಕಾರವಾಗಿ ಕಿಲ-ಕಿಲ ಧ್ವನಿಮಾಡುತ್ತಿದ್ದರು. ಕರಡಿಗಳ ಸಮೂಹದಿಂದ ಪರಿವೃತನಾಗಿದ್ದ ಜಾಂಬವಂತನು ರಾಕ್ಷಸರ ಮೇಲೆ ಬಂಡೆಗಳನ್ನು ತೂರತೊಡಗಿದನು. ಕೈಗೆ ಸಿಕ್ಕಿದ ರಾಕ್ಷಸರನ್ನು ಉಗುರುಗಳಿಂದ ಪರಚುತ್ತಾ ಹಲ್ಲುಗಳಿಂದ ಕಚ್ಚಿದನು. ಮಹಾಬಲಿಷ್ಠರಾದ ರಾಕ್ಷಸರು ಭಯವನ್ನು ಪರಿತ್ಯಜಿಸಿ ಅನೇಕವಿಧವಾದ ಆಯುಧಗಳನ್ನು ಹಿಡಿದು ತಮ್ಮನ್ನು ಬಂಡೆಗಳಿಂದ ಪ್ರಹರಿಸುತ್ತಿದ್ದ ಜಾಂಬವಂತನನ್ನು ಸುತ್ತುವರಿದು ನಿಂತರು. ರಾಕ್ಷಸರ ಸೈನ್ಯವನ್ನು ಅಡಿಗಡಿಗೂ ಸಂಹರಿಸುತ್ತಿದ್ದ ಜಾಂಬವಂತನನ್ನು ರಾಕ್ಷಸಸೈನಿಕರು ಬಾಣಗಳಿಂದಲೂ, ತೀಕ್ಷ್ಣವಾದ ಗಂಡುಗೊಡಲಿಗಳಿಂದಲೂ, ಪಟ್ಟಿಶಗಳಿಂದಲೂ, ಯಷ್ಟಿಗಳಿಂದಲೂ, ತೋಮರಗಳಿಂದಲೂ ಪ್ರಹರಿಸತೊಡಗಿದರು. ಕ್ರುದ್ಧರಾದ ದೇವತೆಗಳಿಗೂ ಮತ್ತು ಅಸುರರಿಗೂ ಮಹಾಘೋರಶಬ್ದದಿಂದ ಕೂಡಿದ ಯುದ್ಧವಾದಂತೆ-ಕಪಿಗಳಿಗೂ ಮತ್ತು ರಾಕ್ಷಸರಿಗೂ ಅತಿಭಯಂಕರವಾದ ಯುದ್ಧವು ನಡೆಯುತ್ತಿದ್ದಿತು. ಆ ಸಮಯದಲ್ಲಿ ಹನುಮಂತನು ಪರಮಕ್ರುದ್ಧನಾಗಿ ಲಕ್ಷ್ಮಣನನ್ನು ಹೆಗಲಿನಿಂದ ಕೆಳಗಿಳಿಸಿ ಪರ್ವತದಲ್ಲಿದ್ದ ಸಾಲವೃಕ್ಷಗಳನ್ನು ಬುಡಸಹಿತವಾಗಿ ಕಿತ್ತು ಸಾವಿರಾರು ರಾಕ್ಷಸರನ್ನು ಸಂಹರಿಸಿದನು. ರಾಕ್ಷಸರಿಗೆ ಅವನ ಸಮೀಪಕ್ಕೆ ಕೂಡ ಹೋಗಲಾಗುತ್ತಿರಲಿಲ್ಲ.

ಶತ್ರುವೀರರನ್ನು ಸಂಹರಿಸಲು ಸಮರ್ಥನಾದ ಇಂದ್ರಜಿತುವು ಚಿಕ್ಕಪ್ಪನಾದ ವಿಭೀಷಣನೊಡನೆ ಸ್ವಲ್ಪಹೊತ್ತು ಯುದ್ಧಮಾಡುತ್ತಿದ್ದು ಪುನಃ ಲಕ್ಷ್ಮಣನನ್ನೇ ಆಕ್ರಮಿಸಿದನು. ನರ-ರಾಕ್ಷಸರಿಬ್ಬರೂ ಘೋರಯುದ್ಧದಲ್ಲಿ ತೊಡಗಿದರು. ಬಾಣಗಳ ಸಮೂಹಗಳನ್ನೇ ಒಬ್ಬರು ಮತ್ತೊಬ್ಬರ

ಮೇಲೆ ಸುರಿಸುತ್ತಾ ಪರಸ್ಪರವಾಗಿ ಗಾಯಗೊಳಿಸಿದರು. ವರ್ಷಾಕಾಲದಲ್ಲಿ ಮೇಘಗಳಿಂದ ಸೂರ್ಯ-ಚಂದ್ರರಿಬ್ಬರೂ ಮುಚ್ಚಿಹೋಗುವಂತೆ–ಪರಸ್ಪರವಾಗಿ ಬಿಡುತ್ತಿದ್ದ ಬಾಣಗಳ ಸಮೂಹಗಳಿಂದ ನರ-ರಾಕ್ಷಸರಿಬ್ಬರೂ ಮುಚ್ಚಿಹೋಗುತ್ತಿದ್ದರು.

ನ ಹ್ಯಾದಾನಂ ನ ಸಂಧಾನಂ ಧನುಷೋ ವಾ ಪರಿಗ್ರಹಃ ।
ನ ವಿಪ್ರಮೋಕ್ಷೋ ಬಾಣಾನಾಂ ನ ವಿಕರ್ಷೋ ನ ವಿಗ್ರಹಃ ॥೨೯॥

ನ ಮುಷ್ಟಿಪ್ರತಿಸಂಧಾನಂ ನ ಲಕ್ಷ್ಯಪ್ರತಿಪಾದನಮ್ ।
ಅದೃಶ್ಯತ ತಯೋಸ್ತತ್ರ ಯುಧ್ಯತೋಃ ಪಾಣಿಲಾಘವಾತ್ ॥೩೦॥

ಯುದ್ಧಮಾಡುತ್ತಿದ್ದ ಆ ಇಬ್ಬರು ನರ-ರಾಕ್ಷಸರ ಕೈಚಳಕವು ಹೇಗಿತ್ತೆಂದರೆ : ಬಾಣವನ್ನು ಬತ್ತಳಿಕೆಯಿಂದ ತೆಗೆಯುವುದಾಗಲೀ, ಧನುಸ್ಸಿನಲ್ಲಿ ಅನುಸಂಧಾನಮಾಡುವುದಾಗಲೀ, ಧನುಸ್ಸನ್ನು ಹಿಡಿಯುವುದಾಗಲೀ, ನಾಣನ್ನು ಸೆಳೆಯುವುದಾಗಲೀ, ಬಿಲ್ಲನ್ನು ದೃಢವಾಗಿ ಮುಷ್ಟಿಯಲ್ಲಿ ಹಿಡಿದು ಬಾಣಗಳನ್ನು ಬಿಡುವುದಾಗಲೀ, ಲಕ್ಷ್ಯವನ್ನು ಭೇದಿಸುವುದಾಗಲೀ ಕಾಣುತ್ತಲೇ ಇರಲಿಲ್ಲ. ಚಾಪವೇಗದಿಂದ ಹೊರಹೊಮ್ಮಿದ ಬಾಣಗಳ ಸಮೂಹಗಳಿಂದ ತುಂಬಿಹೋದ ಆಕಾಶದಲ್ಲಿ ಬೇರೆ ಯಾವುದೇ ವಸ್ತುಗಳೂ ಕಾಣುತ್ತಿರಲಿಲ್ಲ. ಲಕ್ಷ್ಮಣನು ರಾವಣಿಯನ್ನೂ ರಾವಣಿಯು ಲಕ್ಷ್ಮಣನನ್ನೂ ಸಂಧಿಸಿ ಯುದ್ಧಮಾಡುತ್ತಿದ್ದಾಗ ಭಯಂಕರವಾದ ಅನಿಶ್ಚಿತತೆಯುಂಟಾಯಿತು. ಇಬ್ಬರಲ್ಲಿ ಯಾರು ಗೆಲ್ಲುವರೆಂಬುದನ್ನು ಹೇಳಲೇ ಸಾಧ್ಯವಾಗುತ್ತಿರಲಿಲ್ಲ. ಇಬ್ಬರೂ ವೇಗವಾಗಿ ಬಿಡುತ್ತಿದ್ದ ನಿಶಿತವಾದ ಬಾಣಗಳ ಸಮೂಹಗಳಿಂದ ಆಕಾಶವೇ ಮುಚ್ಚಿಹೋಗಿ ಕತ್ತಲು ಕವಿಯಿತು. ದಿಕ್ಕುಗಳೂ ಉಪದಿಕ್ಕುಗಳೂ ಅವರು ಬಿಡುತ್ತಿದ್ದ ನೂರಾರು ನಿಶಿತವಾದ ಬಾಣಗಳಿಂದ ವ್ಯಾಪ್ತವಾದುವು. ಎಲ್ಲವೂ ಬಾಣಗಳಿಂದ ಸೃಷ್ಟಿಯಾದ ಅಂಧಕಾರದಲ್ಲಿ ಮುಚ್ಚಿಹೋಗಿದ್ದಿತು. ಭಯಂಕರವಾದ ದೃಶ್ಯವು ಎಲ್ಲ ಕಡೆಗಳಲ್ಲಿಯೂ ಕಾಣುತ್ತಿದ್ದಿತು. ಸೂರ್ಯನು ಅಸ್ತಮಿಸಿ ಕತ್ತಲು ಕವಿದಿರಲಾಗಿ ಸಾವಿರಾರು ರಕ್ತದ ನದಿಗಳೇ ರಣಭೂಮಿಯಲ್ಲಿ ಪ್ರವಹಿಸತೊಡಗಿದುವು. ಮಾಂಸಭಕ್ಷಿಗಳಾದ ಭಯಂಕರಪ್ರಾಣಿಗಳು ವಿಕಾರವಾಗಿ ಕೂಗತೊಡಗಿದುವು. ಆ ಸಮಯದಲ್ಲಿ

ಗಾಳಿಯು ಬೀಸುತ್ತಿರಲಿಲ್ಲ. ಅಗ್ನಿಯು ಜ್ವಲಿಸುತ್ತಿರಲಿಲ್ಲ. 'ಸ್ವಸ್ತ್ಯಸ್ತು ಲೋಕೇಭ್ಯಃ ಲೋಕಕ್ಕೆ ಮಂಗಳವಾಗಿ'-ಎಂಬುದಾಗಿ ಮಹರ್ಷಿಗಳು ಹೇಳುತ್ತಿದ್ದರು. ಗಂಧರ್ವರು ಚಾರಣರೊಡನೆ ಅಂತರಿಕ್ಷದಲ್ಲಿ ಬಂದು ಸೇರಿದರು.

ಬಳಿಕ ಸೌಮಿತ್ರಿಯು ಕಪ್ಪಾಗಿಯೂ ಸುವರ್ಣಭೂಷಿತವಾಗಿಯೂ ಇದ್ದ ರಾಕ್ಷಸಶ್ರೇಷ್ಠನ ನಾಲ್ಕು ಕುದುರೆಗಳನ್ನು ನಾಲ್ಕು ಬಾಣಗಳಿಂದ ಪ್ರಹರಿಸಿದನು. ಸುಂದರವಾದ ರೆಕ್ಕೆಗಳನ್ನು ಹೊಂದಿದ್ದ, ತೇಜಃಪುಂಜವಾಗಿದ್ದ, ಮಹೇಂದ್ರನ ವಜ್ರಾಯುಧಕ್ಕೆ ಸಮಾನವಾಗಿದ್ದ ಮತ್ತೊಂದು ನಿಶಿತವಾದ ಬಾಣವನ್ನು ಬತ್ತಳಿಕೆಯಿಂದ ತೆಗೆದು, ಧನುಸ್ಸಿನಲ್ಲಿ ಅನುಸಂಧಾನ ಮಾಡಿ, ಕಿವಿಯವರೆಗೂ ದೀರ್ಘವಾಗಿ ಸೆಳೆದು ಅಂಗೈಶಬ್ದದೊಡನೆ ಇಂದ್ರಜಿತುವಿನ ರಥವನ್ನು ನಡೆಸುತ್ತಿದ್ದ ಸಾರಥಿಯನ್ನು ಪ್ರಹರಿಸಿ ಅವನ ತಲೆಯನ್ನು ಮುಂಡ ದಿಂದ ಬೇರ್ಪಡಿಸಿದನು. ಸಾರಥಿಯು ಹತನಾಗಲು ಮಂಡೋದರಿಯ ಮಗನು ತಾನೇ ಸಾರಥ್ಯವನ್ನೂ ವಹಿಸಿ ಧನುಸ್ಸನ್ನೂ ಹಿಡಿದು ಕುಳಿತನು. ಇಂದ್ರಜಿತುವಿನ ಆ ಸಾಮರ್ಥ್ಯವನ್ನು ಕಂಡವರಿಗೆ ಅದು ಬಹಳ ಅದ್ಭುತ ವಾಗಿ ಕಾಣಿಸಿತು.

ಹಯೇಷು ವ್ಯಗ್ರಹಸ್ತಂ ತಂ ವಿವ್ಯಾಧ ನಿಶಿತೈಃ ಶರೈಃ ।
ಧನುಷ್ಯಥ ಪುನರ್ವ್ಯಗ್ರೇ ಹಯೇಷು ಮುಮುಚೇ ಶರಾನ್ ॥೪೪॥

ಇಂದ್ರಜಿತುವು ಕುದುರೆಗಳನ್ನು ನಡೆಸಲು ತೊಡಗಿದ್ದಾಗ ಲಕ್ಷ್ಮಣನು ಅವನನ್ನು ಬಾಣಗಳಿಂದ ಪ್ರಹರಿಸುತ್ತಿದ್ದನು. ಧನುಸ್ಸನ್ನು ಹಿಡಿದು ಬಾಣ ಬಿಡಲು ತೊಡಗಿದಾಗ ಬಾಣಗಳಿಂದ ಕುದುರೆಗಳನ್ನು ಪ್ರಹರಿಸುತ್ತಿದ್ದನು.

ಭಯವೇ ಇಲ್ಲದವನಂತೆ ರಣರಂಗದಲ್ಲಿ ಸಂಚರಿಸುತ್ತಿದ್ದ ಇಂದ್ರಜಿತು ವನ್ನು ಅಂತಹ ಛಿದ್ರಗಳು (ಸಮಯಾವಕಾಶಗಳು) ಸಿಕ್ಕಿದಾಗ ಅತಿಶೀಘ್ರವಾಗಿ ಬಾಣಗಳನ್ನು ಬಿಡುತ್ತಿದ್ದ ಲಕ್ಷ್ಮಣನು ಬಹಳವಾಗಿ ಪೀಡಿಸುತ್ತಿದ್ದನು. ಲಕ್ಷ್ಮಣನ ಸತತಪ್ರಹಾರದಿಂದಾಗಿ ಸಾರಥಿಯನ್ನು ಕಳೆದುಕೊಂಡಿದ್ದ ಇಂದ್ರಜಿತುವಿಗೆ ಹೆಚ್ಚುಕಾಲ ಸ್ಥೈರ್ಯದಿಂದ ನಿಲ್ಲಲಾಗಲಿಲ್ಲ. ಅವನ ಸಮರೋತ್ಸಾಹವು ಕುಸಿಯಿತು. ವಿಷಣ್ಣವದನನಾದನು.

ಅದನ್ನು ಕಂಡು ವಾನರಯೂಥಪತಿಗಳು ಪರಮಹೃಷ್ಟರಾಗಿ ಲಕ್ಷ್ಮಣನನ್ನು ಅಭಿನಂದಿಸಿದರು.

ಅನಂತರ ಪ್ರಮಾಥೀ, ಶರಭ, ರಭಸ ಮತ್ತು ಗಂಧಮಾದನ–ಈ ನಾಲ್ವರು ವಾನರಶ್ರೇಷ್ಠರು ರಾಕ್ಷಸನ ಪರಾಕ್ರಮವನ್ನು ಸಹಿಸಲಾರದೇ ತಮ್ಮ ಪರಾಕ್ರಮವನ್ನು ಪ್ರದರ್ಶಿಸತೊಡಗಿದರು. ಭಯಂಕರಪರಾಕ್ರಮಿಗಳಾಗಿದ್ದ ಆ ನಾಲ್ವರೂ ಇಂದ್ರಜಿತುವಿನ ನಾಲ್ಕು ಕುದುರೆಗಳ ಮೇಲೆ ಹಾರಿ ಕುಳಿತರು. ಪರ್ವತೋಪಮರಾದ ಆ ವಾನರರು ಕುದುರೆಗಳ ಮೇಲೆ ಕುಳಿತೊಡನೆಯೇ ಹೆಚ್ಚು ಒತ್ತಡದಿಂದಾಗಿ ಕುದುರೆಗಳ ಮುಖಗಳಿಂದ ರಕ್ತವು ಪ್ರವಹಿಸತೊಡಗಿತು. ಹಾಗೂ ಕಪಿನಾಯಕರ ಭಾರದಿಂದ ಮಥಿಸಲ್ಪಟ್ಟು ಪ್ರಾಣತೊರೆದು ಭೂಮಿಯಲ್ಲಿ ಬಿದ್ದುವು. ಹೀಗೆ ಪ್ರಮಾಥಿಯೇ ಮೊದಲಾದ ನಾಲ್ವರು ಕಪಿಶ್ರೇಷ್ಠರು ಕುದುರೆಗಳನ್ನು ಸಂಹರಿಸಿ ಆ ಮಹಾರಥವನ್ನು ಧ್ವಂಸಮಾಡಿ ಅನಂತರ ವೇಗವಾಗಿ ನೆಗೆದು ಲಕ್ಷ್ಮಣನ ಪಕ್ಕದಲ್ಲಿ ನಿಂತರು.

ಇಂದ್ರಜಿತುವು ಸಾರಥಿಯಿಂದಲೂ ಕುದುರೆಗಳಿಂದಲೂ ವಿಹೀನವಾಗಿದ್ದ ರಥದಿಂದ ಕೆಳಕ್ಕೆ ಧುಮುಕಿ ಬಾಣಗಳನ್ನು ಸುರಿಸುತ್ತಾ ಸೌಮಿತ್ರಿಯ ಕಡೆಗೆ ಧಾವಿಸಿದನು.

ಆ ಸಮಯದಲ್ಲಿ ಇಂದ್ರಸಮಾನಪರಾಕ್ರಮಿಯಾದ ಲಕ್ಷ್ಮಣನು– ರಥ-ಕುದುರೆ-ಸಾರಥಿಗಳನ್ನು ಕಳೆದುಕೊಂಡು ನೆಲದ ಮೇಲೆಯೇ ನಿಂತು ನಿಶಿತವಾದ ಬಾಣಗಳನ್ನು ಪುಂಖಾನುಪುಂಖವಾಗಿ ಬಿಡುತ್ತಿದ್ದ ಇಂದ್ರಜಿತುವನ್ನು ಬಾಣಗಳ ಪ್ರತಿಪ್ರಹಾರದಿಂದ ಗಾಯಗೊಳಿಸಿದನು.

೮೯ನೆಯ ಸರ್ಗವು ಮುಗಿಯಿತು.

ನರ-ರಾಕ್ಷಸಶ್ರೇಷ್ಠರ ಭಯಂಕರಯುದ್ಧ: ಇಂದ್ರಜಿತುವಿನ ವಧೆ

ಸ ಹತಾಶ್ವೋ ಮಹಾತೇಜಾ ಭೂಮೌ ತಿಷ್ಠನ್ನಿಶಾಚರಃ ।
ಇನ್ದ್ರಜಿತ್ಪರಮಕ್ರುದ್ಧಃ ಸಂಪ್ರಜಜ್ವಾಲ ತೇಜಸಾ ॥೧॥

ಮಹಾತೇಜಸ್ವಿಯಾದ ನಿಶಾಚರನಾದ ಇಂದ್ರಜಿತುವು ಕುದುರೆಗಳನ್ನು ಕಳೆದುಕೊಂಡು ಭೂಮಿಯಮೇಲೆ ನಿಂತು ಪರಮಕ್ರುದ್ಧನಾಗಿ ತೇಜಸ್ಸಿನಿಂದ ಉರಿಯುತ್ತಿದ್ದನು.

ಧನುಷ್ಪಾಣಿಗಳಾಗಿ ವಿಜಯಗಳಿಸಲು ಪರಸ್ಪರವಾಗಿ ಯುದ್ಧದಲ್ಲಿ ತೊಡಗಿದ್ದ ನರ-ರಾಕ್ಷಸಶ್ರೇಷ್ಠರು ಅರಣ್ಯದಲ್ಲಿ ಸೆಣೆಸಾಡುವ ಎರಡು ಸಲಗ ಗಳಂತೆ ನಿಶಿತವಾದ ಬಾಣಗಳಿಂದ ಒಬ್ಬರು ಮತ್ತೊಬ್ಬರನ್ನು ಗಾಯಗೊಳಿಸು ತ್ತಿದ್ದರು. ಇಂದ್ರಜಿತು-ಲಕ್ಷ್ಮಣರ ಅನುಯಾಯಿಗಳಾದ ರಾಕ್ಷಸ-ವಾನರರೂ ಪರಸ್ಪರವಾಗಿ ಪ್ರಹರಿಸುತ್ತಾ ಅತ್ತಲಿತ್ತ ಓಡಾಡುತ್ತಿದ್ದರು. ಆದರೆ ಅವರು ತಮ್ಮ ನಾಯಕನನ್ನು ಬಿಟ್ಟು ದೂರಹೋಗುತ್ತಿರಲಿಲ್ಲ.

ರಾವಣಿಯು ತನ್ನ ಅನುಯಾಯಿಗಳಾದ ರಾಕ್ಷಸರನ್ನು ಹರ್ಷಗೊಳಿ ಸುತ್ತಾ ಮತ್ತು ಶ್ಲಾಘಿಸುತ್ತಾ ಹೇಳಿದನು :

"ನಿಶಾಚರರೇ! ನಾಲ್ಕು ದಿಕ್ಕುಗಳಲ್ಲಿಯೂ ಕತ್ತಲೆಯು ಕವಿದಿರುವು ದರಿಂದ ನಮ್ಮವರಾರು? ಶತ್ರುಗಳಾರು? ಎಂಬುದೇ ತಿಳಿಯುತ್ತಿಲ್ಲ. ನಾನೀಗ ಲಂಕೆಗೆ ಹೋಗುತ್ತೇನೆ. ಬೇರೊಂದು ರಥದಲ್ಲಿ ಕುಳಿತು ಪುನಃ ಯುದ್ಧಕ್ಕೆ ಬರುತ್ತೇನೆ. ಅಲ್ಲಿಯವರೆಗೂ ನೀವು ಈ ವಾನರರನ್ನು ವಿಮೋಹಗೊಳಿಸಲು ಭಯರಹಿತರಾಗಿ ಯುದ್ಧಮಾಡುತ್ತಿರಬೇಕು. ನಾನು ನಗರಕ್ಕೆ ಪ್ರವೇಶಮಾಡಿದಾಗ ನನ್ನೊಡನೆ ಯುದ್ಧಮಾಡುವ ಸಲುವಾಗಿ ಇವರಾರೂ ಬೆನ್ನಟ್ಟಿ ಬರದಂತೆ ನೋಡಿಕೊಳ್ಳಿರಿ."

ಇಂದ್ರಜಿತುವು ಹೀಗೆ ತನ್ನ ಅನುಯಾಯಿಗಳಿಗೆ ಹೇಳಿ ವಾನರಸೈನಿಕ ರನ್ನು ವಂಚಿಸಿ ಮತ್ತೊಂದು ರಥವನ್ನು ತರುವ ಸಲುವಾಗಿ ಲಂಕೆಗೆ ಹೋದನು. ಒಡನೆಯೇ ಸುವರ್ಣಭೂಷಿತವಾದ ಮತ್ತು ಅತ್ಯಂತಸುಂದರ ವಾದ ರಥವನ್ನು ಅಲಂಕರಿಸಿ ಸಜ್ಜುಗೊಳಿಸುವಂತೆ ಸೇವಕರಿಗೆ ಹೇಳಿದನು.

ಪ್ರಾಸಾಯುಧ, ಕತ್ತಿ ಮತ್ತು ಬಾಣಗಳಿಂದ ಸಂಪನ್ನವಾಗಿದ್ದ, ಶ್ರೇಷ್ಠವಾದ ಕುದುರೆಗಳಿಂದ ಹೂಡಲ್ಪಟ್ಟಿದ್ದ, ಅಶ್ವವಿದ್ಯೆಯನ್ನು ತಿಳಿದಿದ್ದ, ಹಿರಿಯರಿಂದ ಉಪದೇಶಪಡೆದಿದ್ದ ಸೂತನಿಂದ ನಡೆಸಲ್ಪಡುತ್ತಿದ್ದ ರಥವು ಸಿದ್ಧವಾಯಿತು. ಮಹಾತೇಜಸ್ವಿಯಾದ ಮತ್ತು ಯುದ್ಧಗಳಲ್ಲಿ ಜಯಶೀಲನಾದ ರಾವಣಿಯು ಆ ರಥದಲ್ಲಿ ಕುಳಿತನು.

ಮೃತ್ಯುವಿನ ಬಲದಿಂದ ಪ್ರೇರಿತನಾಗಿದ್ದ ಮಂದೋದರೀಪುತ್ರನು ಮುಖ್ಯ-ಮುಖ್ಯರಾದ ರಾಕ್ಷಸರಿಂದ ಪರಿವೃತನಾಗಿ ನಗರದಿಂದ ನಿರ್ಗಮಿಸಿದನು. ವೇಗಶಾಲಿಗಳಾದ ಕುದುರೆಗಳ ಮೂಲಕವಾಗಿ ಬಹಳ ಶೀಘ್ರವಾಗಿ ಲಕ್ಷ್ಮಣ-ವಿಭೀಷಣರ ಬಳಿಗೆ ಹೋದನು. ಧೀಮಂತನಾದ ರಾವಣಿಯು ರಥಸ್ಥನಾಗಿ ಬಂದುದನ್ನು ನೋಡಿ ಲಕ್ಷ್ಮಣನೂ, ಮಹಾವೀರ್ಯನಾದ ವಿಭೀಷಣರಾಕ್ಷಸನೂ, ವಾನರರೂ ಅವನ ಚಮತ್ಕಾರವನ್ನು ನೋಡಿ ವಿಸ್ಮಯಗೊಂಡರು.

ಅನಂತರ ಪರಮಕ್ರುದ್ಧನಾಗಿದ್ದ ರಾವಣಿಯು ನೂರಾರು ಸಾವಿರಾರು ವಾನರಸೈನಿಕರನ್ನು ಬಾಣಗಳ ಸಮೂಹಗಳಿಂದ ಸಂಹರಿಸಲು ಪ್ರಾರಂಭಿಸಿದನು. ಅವನ ಧನುಸ್ಸು ಮಂಡಲಾಕಾರವಾಗಿಯೇ ಇರುತ್ತಿದ್ದಿತು. ಅಷ್ಟು ಶೀಘ್ರವಾಗಿ ಅವನು ಆದಾನ-ಸಂಧಾನ-ಪ್ರಯೋಗಗಳನ್ನು ಮಾಡುತ್ತಾ ಅಪಾರಸಂಖ್ಯೆಯಲ್ಲಿ ವಾನರಸೈನಿಕರನ್ನು ಸಂಹರಿಸಿದನು. ಸತತವಾಗಿ ಬಾಣಗಳಿಂದ ಪ್ರಹರಿಸಲ್ಪಡುತ್ತಿದ್ದ ಭಯಂಕರಪರಾಕ್ರಮಿಗಳಾದ ವಾನರಸೈನಿಕರು-ಪ್ರಜೆಗಳು ಕಷ್ಟಸಮಯಗಳಲ್ಲಿ ಪ್ರಜಾಪತಿಬ್ರಹ್ಮನನ್ನು ಶರಣುಹೋಗುವಂತೆ–ಲಕ್ಷ್ಮಣನನ್ನು ಶರಣುಹೊಂದಿದರು. ಗಾಯಗೊಂಡ ವಾನರರನ್ನು ನೋಡಿ ಯುದ್ಧಕೋಪದಿಂದ ಜ್ವಲಿಸುತ್ತಿದ್ದ ಲಕ್ಷ್ಮಣನು ತನ್ನ ಕೈಚಳಕವನ್ನು ತೋರಿಸುತ್ತಾ ರಾವಣಿಯ ಧನುಸ್ಸನ್ನು ಕತ್ತರಿಸಿದನು. ಅಷ್ಟೇ ಶೀಘ್ರವಾಗಿ ರಾವಣಿಯು ಮತ್ತೊಂದು ಧನುಸ್ಸನ್ನೆತ್ತಿಕೊಂಡು ಹೆದೆಯೇರಿಸಿದನು. ಆ ಧನುಸ್ಸನ್ನು ಕೂಡ ಲಕ್ಷ್ಮಣನು ಮೂರು ಬಾಣಗಳಿಂದ ಕತ್ತರಿಸಿದನು. ಅನಂತರ ಧನುಸ್ಸನ್ನು ಕಳೆದುಕೊಂಡಿದ್ದ ರಾವಣಿಯನ್ನು ಸರ್ಪೋಪಮವಾಗಿದ್ದ ಐದು ಬಾಣಗಳಿಂದ ಅವನ ವಕ್ಷಃಸ್ಥಳದಲ್ಲಿ

ಪ್ರಹರಿಸಿದನು. ಮಹಾಧನುಸ್ಸಿನಿಂದ ಹೊರಹೊರಟ ಆ ಐದು ಬಾಣಗಳೂ ರಾವಣಿಯ ಶರೀರವನ್ನು ಭೇದಿಸಿಕೊಂಡು ಒಳಹೊಕ್ಕು ರಕ್ತದಲ್ಲಿ ನೆನೆದು ಶರೀರದಿಂದ ಹೊರಬಂದು ಕೆಂಪುಸರ್ಪಗಳಂತೆ ಭೂಮಿಯ ಮೇಲೆ ಬಿದ್ದುವು. ಕವಚವನ್ನು ಕಳೆದುಕೊಂಡಿದ್ದ ರಾವಣಿಯು ರಕ್ತವನ್ನು ಕಕ್ಕಿದನು. ಆದರೂ ಧೃತಿಗೆಡದೇ ಅತ್ಯಂತ ಬಲಿಷ್ಠವಾಗಿದ್ದ, ದೃಢವಾದ ನಾಣೆನಿಂದ ಕೂಡಿದ್ದ ಮತ್ತೊಂದು ಧನುಸ್ಸನ್ನು ಕೈಗೆತ್ತಿಕೊಂಡನು. ಅನಂತರ ರಾವಣಿಯು ಅತಿ ವೇಗವಾಗಿ ಸಾವಿರಾರು ಬಾಣಗಳನ್ನು ಏಕಕಾಲದಲ್ಲಿ–ಇಂದ್ರನು ಮಳೆಗರೆಯುವಂತೆಯೇ ಲಕ್ಷ್ಮಣನ ಮೇಲೆ ಸುರಿಸಿದನು. ಇಂದ್ರಜಿತುವಿನಿಂದ ಸುರಿಸಲ್ಪಟ್ಟ, ಎದುರಿಸಲು ಅಸಾಧ್ಯವಾಗಿದ್ದ ಆ ಶರವರ್ಷವನ್ನು ಮಹಾ ತೇಜಸ್ವಿಯಾದ ಲಕ್ಷ್ಮಣನು ಸ್ವಲ್ಪವೂ ಗಾಬರಿಗೊಳ್ಳದೆ ತಡೆದನು.

ಆ ಸಮಯದಲ್ಲಿ ಅವನು ತೋರಿದ ಪರಾಕ್ರಮವು ಅತ್ಯದ್ಭುತವಾಗಿದ್ದಿತು. ಅನಂತರ ಲಕ್ಷ್ಮಣನು ಶೀಘ್ರವಾಗಿ ಅಸ್ತ್ರಗಳನ್ನು ಬಿಡುವ ತನ್ನ ಕೈಚಳಕವನ್ನು ತೋರ್ಪಡಿಸುತ್ತಾ ಅಲ್ಲಿದ್ದ ಸಮಸ್ತರಾಕ್ಷಸರಲ್ಲಿ ಪ್ರತಿಯೊಬ್ಬನನ್ನೂ ಮೂರು ಮೂರು ಬಾಣಗಳಿಂದ ಪ್ರಹರಿಸಿ ಗಾಯಗೊಳಿಸಿದನು. ಅಂತೆಯೇ ರಾವಣಿಯನ್ನೂ ಬಾಣಗಳ ಸಮೂಹಗಳಿಂದ ಪ್ರಹರಿಸಿದನು. ಶತ್ರುಘಾತಿಯಾದ ಬಲಿಷ್ಠನಾದ ಶತ್ರುವಿನಿಂದ ಗಾಯಗೊಂಡ ಇಂದ್ರಜಿತುವು ಯಾವ ವಿಧವಾದ ಅಡೆ-ತಡೆಗಳೂ ಇಲ್ಲದೇ ಅಸಂಖ್ಯಾತವಾದ ಬಾಣಗಳನ್ನು ಲಕ್ಷ್ಮಣನ ಮೇಲೆ ಸುರಿಸಿದನು. ಶತ್ರುವೀರಹಂತಕನಾದ, ರಥಿಗಳಲ್ಲಿ ಶ್ರೇಷ್ಠನಾದ ಲಕ್ಷ್ಮಣನು ಆ ಎಲ್ಲ ಬಾಣಗಳನ್ನೂ ತನ್ನ ಬಳಿಗೆ ಬರುವ ಮೊದಲೇ ಕತ್ತರಿಸಿಹಾಕಿದನು. ಅನಂತರ ಬಗ್ಗಿದ ಗಿಣ್ಣುಗಳಿದ್ದ ಭಲ್ಲವೆಂಬ ಬಾಣದಿಂದ ಅವನ ಸಾರಥಿಯ ತಲೆಯನ್ನು ಕತ್ತರಿಸಿದನು. ಸಾರಥಿಯಿಲ್ಲದಿದ್ದರೂ ರಾವಣಿಯ ರಥದ ಕುದುರೆಗಳು ಸ್ವಲ್ಪವೂ ಆಯಾಸಗೊಳ್ಳದೆ ಮಂಡಲಾಕಾರ ಗತಿಯಿಂದ ವ್ಯವಸ್ಥಿತವಾದ ರೀತಿಯಲ್ಲಿ ಹೋಗುತ್ತಿದ್ದುವು. ಅದು ಪರಮಾದ್ಭುತವಾಗಿ ಕಂಡಿತು. ದೃಢಪರಾಕ್ರಮಿಯಾದ ಸೌಮಿತ್ರಿಯು ಸಹನೆಯನ್ನು ಕಳೆದುಕೊಂಡು ರಾವಣಿಯ ರಥದ ಕುದುರೆಗಳನ್ನು ಭಯಗೊಳಿಸುತ್ತಾ ಬಾಣಗಳಿಂದ ಪ್ರಹರಿಸಿದನು. ಲಕ್ಷ್ಮಣನ ಆ ಸಾಹಸಕರ್ಮವನ್ನು ಸಹಿಸಲಾರದೇ ರಾವಣಿಯು ಹತ್ತು ಬಾಣಗಳಿಂದ ಅಸಹನಶೀಲನಾದ ಲಕ್ಷ್ಮ

ನನ್ನು ಪ್ರಹರಿಸದನು. ವಜ್ರಾಯುಧಕ್ಕೆ ಸಮಾನವಾಗಿದ್ದ, ಸರ್ಪಗಳ ವಿಷದಂತೆ ಪ್ರಾಣಾಪಹಾರಕಗಳಾಗಿದ್ದ ಆ ಬಾಣಗಳು ಸುವರ್ಣದ ಪ್ರಭೆಯಿಂದ ಕೂಡಿದ್ದ ಲಕ್ಷ್ಮಣನ ಕವಚಕ್ಕೆ ಬಡಿದು ಕೆಳಗೆ ಬಿದ್ದುವು. ಲಕ್ಷ್ಮಣನು ಅಭೇದ್ಯವಾದ ಕವಚವನ್ನು* ಹೊಂದಿರುವನೆಂದು ಭಾವಿಸಿದ ರಾವಣಿಯು ಮರುಕ್ಷಣದಲ್ಲಿಯೇ ತನ್ನ ಅಸ್ತ್ರವೇಗವನ್ನು ಪ್ರದರ್ಶಿಸುತ್ತಾ ಮೂರು ಬಾಣಗಳನ್ನು ಲಕ್ಷ್ಮಣನ ಹಣೆಯಲ್ಲಿ ಪ್ರಹರಿಸಿದನು. ಹಣೆಗೆ ನೆಟ್ಟುಕೊಂಡಿದ್ದ ಆ ಮೂರು ಬಾಣಗಳಿಂದ ಲಕ್ಷ್ಮಣನು ಮೂರು ಶಿಖರಗಳಿಂದ ಕೂಡಿದ ಪರ್ವತದಂತೆಯೇ ಪ್ರಕಾಶಿಸಿದನು. ರಾಕ್ಷಸನಿಂದ ಹೀಗೆ ಪೀಡಿಸಲ್ಪಟ್ಟ ಲಕ್ಷ್ಮಣನು ಮರುಕ್ಷಣದಲ್ಲಿಯೇ ಐದು ಬಾಣಗಳನ್ನು ಧನುಸ್ಸಿನಲ್ಲಿ ಹೂಡಿ ಕಿವಿಯವರೆಗೂ ಸೆಳೆದು ಶುಭಕುಂಡಲಗಳಿಂದ ಸಮಲಂಕೃತವಾಗಿದ್ದ ರಾವಣಿಯ ಮುಖದಲ್ಲಿ ಪ್ರಯೋಗಿಸಿದನು.

ಹೀಗೆ ಮಹಾವೀರರಾಗಿದ್ದ, ದೊಡ್ಡದಾದ ಧನುಸ್ಸುಗಳನ್ನು ಹೊಂದಿದ್ದ, ಭಯಂಕರಪರಾಕ್ರಮಿಗಳಾದ ನರ-ರಾಕ್ಷಸಶ್ರೇಷ್ಠರು ಬಾಣ ಗಳಿಂದ ಪರಸ್ಪರವಾಗಿ ಗಾಯಗೊಳಿಸುತ್ತಿದ್ದರು. ರಕ್ತದಿಂದ ತೋಯ್ದು ಹೋಗಿದ್ದ ಇಬ್ಬರೂ ಭಯಂಕರವಾದ ಆ ರಣಭೂಮಿಯಲ್ಲಿ ಪುಷ್ಪಿತವಾದ ಎರಡು ಮುತ್ತುಗದ ಮರಗಳಂತೆಯೇ ಕಾಣುತ್ತಿದ್ದರು. ವಿಜಯಗಳಿಸುವುದ ರಲ್ಲಿ ದೃಢಸಂಕಲ್ಪರಾಗಿದ್ದ ಇಬ್ಬರೂ ಪರಸ್ಪರವಾಗಿ ಸಂಘರ್ಷಿಸುತ್ತಾ ಭಯಂಕರವಾದ ಬಾಣಗಳಿಂದ ಒಬ್ಬರು ಮತ್ತೊಬ್ಬರನ್ನು ಗಾಯಗೊಳಿಸು ತ್ತಿದ್ದರು.

ಆ ಮಧ್ಯದಲ್ಲಿ ಸಮರೋಚಿತವಾದ ಕೋಪದಿಂದ ಪರಿತಪ್ತನಾದ ರಾವಣಿಯು ವಿಭೀಷಣನನ್ನು ಮೂರು ಬಾಣಗಳಿಂದ ಅವನ ಶುಭಕರವಾದ ಮುಖದಲ್ಲಿ ಪ್ರಹರಿಸಿದನು. ಹೀಗೆ ರಾವಣಿಯು ಲೋಹದ ಅಗ್ರಭಾಗಗಳನ್ನು ಹೊಂದಿದ್ದ ಮೂರು ಬಾಣಗಳಿಂದ ವಿಭೀಷಣನನ್ನು ಪ್ರಹರಿಸಿ ಅಲ್ಲಿದ್ದ ಎಲ್ಲ ವಾನರನಾಯಕರನ್ನೂ ಒಂದೊಂದು ಬಾಣದಿಂದ ಪ್ರಹರಿಸಿದನು. ಅದರಿಂದ ಮಹಾತೇಜಸ್ವಿಯಾದ ವಿಭೀಷಣನು ಬಹಳವಾಗಿ ಕೋಪಗೊಂಡು ಗದೆ ಯಿಂದ ದುರಾತ್ಮನಾದ ರಾವಣಿಯ ಕುದುರೆಗಳನ್ನು ಸಂಹರಿಸಿದನು.

---

* ಈ ಹಿಂದೆ ಲಕ್ಷ್ಮಣನ ಕವಚವನ್ನು ರಾವಣಿಯು ಕತ್ತರಿಸಿದ ಪ್ರಸಂಗವು ಬಂದಿದೆ. ಅನಂತರ ಲಕ್ಷ್ಮಣನು ಅಭೇದ್ಯವಾದ ಕವಚವನ್ನು ತೊಟ್ಟನೆಂದು ತಿಳಿಯಬೇಕು.

ಕೂಡಲೇ ರಾವಣಿಯು ಕುದುರೆಗಳಿಂದಲೂ, ಸಾರಥಿಯಿಂದಲೂ ವಿಹೀನ ವಾಗಿದ್ದ ಆ ರಥದಿಂದ ಕೆಳಕ್ಕೆ ಧುಮುಕಿ ವಿಭೀಷಣನ ಮೇಲೆ ಶಕ್ತ್ಯಾಯುಧ ವನ್ನು ಪ್ರಯೋಗಿಸಿದನು. ಶಕ್ತ್ಯಾಯುಧವು ರಭಸದಿಂದ ಬರುತ್ತಿರುವುದನ್ನು ಕಂಡು ಸುಮಿತ್ರಾನಂದವರ್ಧನನಾದ ಲಕ್ಷ್ಮಣನು ನಿಶಿತವಾದ ಬಾಣಗಳಿಂದ ಅದನ್ನು ಹತ್ತು ತುಂಡುಗಳನ್ನಾಗಿ ಕತ್ತರಿಸಿದನು. ಅನಂತರ ಧನುಸ್ಸನ್ನು ದೃಢ ವಾಗಿ ಹಿಡಿದಿದ್ದ ವಿಭೀಷಣನು ಪರಮಕ್ರುದ್ಧನಾಗಿ ಕುದುರೆಗಳನ್ನು ಕಳೆದು ಕೊಂಡಿದ್ದ ರಾವಣಿಯ ಮೇಲೆ ವಜ್ರಾಯುಧದಂತೆ ದುಃಸಹವಾದ ಐದು ಬಾಣಗಳನ್ನು ಪ್ರಯೋಗಿಸಿದನು. ಸುವರ್ಣದ ರೆಕ್ಕೆಗಳನ್ನು ಹೊಂದಿದ್ದ ಆ ಐದು ಬಾಣಗಳೂ ಲಕ್ಷ್ಯವನ್ನು ಸೇರಿ ರಾವಣಿಯ ಶರೀರವನ್ನು ಭೇದಿಸಿ ಹೊರಬರುತ್ತಾ ರಕ್ತದಿಂದ ತೋಯ್ದು ಕೆಂಪುಬಣ್ಣದ ಐದು ವಿಷಸರ್ಪಗಳಂತೆ ಕಾಣುತ್ತಿದ್ದುವು. ಚಿಕ್ಕಪ್ಪನ ಆ ಪ್ರಹಾರದಿಂದ ಅತಿಕುಪಿತನಾದ ರಾವಣಿಯು ರಾಕ್ಷಸರ ಮಧ್ಯದಲ್ಲಿ ಯಮರಾಜನಿಂದ ಕೊಡಲ್ಪಟ್ಟಿದ್ದ ಉತ್ತಮೋತ್ತಮ ವಾದ ಬಾಣವನ್ನು ಬತ್ತಳಿಕೆಯಿಂದ ಹೊರತೆಗೆದನು. ಮಹಾಬಾಣವನ್ನು ಇಂದ್ರಜಿತುವು ಧನುಸ್ಸಿನಲ್ಲಿ ಹೂಡಿದುದನ್ನು ಕಂಡು ಮಹಾತೇಜಸ್ವಿಯಾದ ಲಕ್ಷ್ಮಣನು ಕೂಡ ಅದಕ್ಕೆ ಸರಿದೂಗುವ ಮತ್ತೊಂದು ಬಾಣವನ್ನು ಬತ್ತಳಿಕೆ ಯಿಂದ ತೆಗೆದನು. ಆ ಬಾಣವು ಮಹಾತ್ಮನಾದ ಕುಬೇರನಿಂದ ಸ್ವತಃ ಸ್ವಪ್ನದಲ್ಲಿ ಅವನಿಗೆ ಕೊಡಲ್ಪಟ್ಟಿದ್ದಿತು. ಅದು ಇಂದ್ರಸಹಿತರಾದ ಸುರಾಸುರರಿಂದ ಕೂಡ ಜಯಿಸಲು ಅಸಾಧ್ಯವಾದುದೂ, ಸಹಿಸಲು ಅಸಾಧ್ಯವಾದುದೂ ಆಗಿದ್ದಿತು. ನರ-ರಾಕ್ಷಸಶ್ರೇಷ್ಠರು ಪರಿಘೋಪಮವಾದ ತಮ್ಮ ಬಾಹುಗಳಿಂದ ಶ್ರೇಷ್ಠ ವಾದ ಧನುಸ್ಸುಗಳಲ್ಲಿ ಮಹಾಬಾಣಗಳನ್ನು ಹೂಡಿ ಸೆಳೆಯುತ್ತಿರುವಾಗ ಆ ಮಹಾಧನುಸ್ಸುಗಳು ಕ್ರೌಂಚಪಕ್ಷಿಗಳಂತೆ ಶಬ್ದಮಾಡುತ್ತಿದ್ದುವು. ಹಾಗೆ ನಾಣನ್ನು ಸೆಳೆಯುತ್ತಿದ್ದಾಗ ಧನುಸ್ಸಿನೊಡನೆ ಸಂಘರ್ಷಿಸುತ್ತಿದ್ದ ಆ ಬಾಣಗಳು ಕಾಂತಿಯಿಂದ ಬಹಳವಾಗಿ ಪ್ರಜ್ವಲಿಸುತ್ತಿದ್ದುವು. ಧನುಸ್ಸಿನಿಂದ ಚಿಮ್ಮಿದ ಆ ಎರಡು ಬಾಣಗಳು ಕಾಂತಿಯಿಂದ ಆಕಾಶವನ್ನೇ ಬೆಳಗುತ್ತಾ ಪರಸ್ಪರ ವಾಗಿ ಸಂಘರ್ಷಿಸಿ ಕೆಳಕ್ಕೆ ಬಿದ್ದುವು. ಘೋರವಾದ ರೂಪಗಳನ್ನು ಹೊಂದಿದ್ದ ಆ ಬಾಣಗಳ ಸಂಘರ್ಷಣೆಯಿಂದಾಗಿ ದಾರುಣವಾದ ಹೊಗೆಯಿಂದ ಕೂಡಿದ ಅಗ್ನಿಯು ಹುಟ್ಟಿಕೊಂಡು ಕಿಡಿಗಳು ಹೊರಬರುತ್ತಿದ್ದುವು. ಆ

ಎರಡು ಬಾಣಗಳೂ ಎರಡು ಮಹಾಗ್ರಹಗಳಂತೆ ಪರಸ್ಪರವಾಗಿ ಸಂಘರ್ಷಿಸಿ ನೂರಾರು ಚೂರುಗಳಾಗಿ ಸಂಗ್ರಾಮಭೂಮಿಯಲ್ಲಿ ಬಿದ್ದುವು. ಇಂದ್ರಜಿತು ಮತ್ತು ಲಕ್ಷ್ಮಣರು ತಮ್ಮ ಬಾಣಗಳು ಆಘಾತ-ಪ್ರತಿಘಾತಗಳಿಂದ ನಷ್ಟವಾಗಿ ಹೋದುದನ್ನು ಕಂಡು ಲಜ್ಜಿತರಾಗಿ ಹೆಚ್ಚು ಕೋಪಿಷ್ಠರೂ ಆದರು. ಸೌಮಿತ್ರಿಯು ಸಂಭ್ರಮದಿಂದ ವಾರುಣಾಸ್ತ್ರವನ್ನು ಪ್ರಯೋಗಿಸಿದನು. ಅದಕ್ಕೆ ಪ್ರತಿಯಾಗಿ ಮಹೇಂದ್ರಜಿತುವು ರೌದ್ರಾಸ್ತ್ರವನ್ನು ಪ್ರಯೋಗಿಸಿದನು. ಇಂದ್ರಜಿತುವು ಬಿಟ್ಟ ರೌದ್ರಾಸ್ತ್ರವು ಲಕ್ಷ್ಮಣನ ಪರಮಾದ್ಭುತವಾದ ವಾರು ಣಾಸ್ತ್ರವನ್ನು ಶಾಂತಗೊಳಿಸಿತು. ಅನಂತರ ಕ್ರುದ್ಧನಾದ ಇಂದ್ರಜಿತುವು ಲೋಕವನ್ನೇ ವಿನಾಶಗೊಳಿಸುವನೋ ಎಂಬಂತೆ ಆಗ್ನೇಯಾಸ್ತ್ರವನ್ನು ಪ್ರಯೋಗಿಸಿದನು. ಲಕ್ಷ್ಮಣನು ಇಂದ್ರಜಿತುವು ಬಿಟ್ಟ ಆಗ್ನೇಯಾಸ್ತ್ರವನ್ನು ಸೌರಾಸ್ತ್ರದಿಂದ ಉಪಶಮನಗೊಳಿಸಿದನು. ಆಗ್ನೇಯಾಸ್ತ್ರವು ವ್ಯರ್ಥವಾದು ದನ್ನು ಕಂಡು ಅತ್ಯಂತ ಕ್ರುದ್ಧನಾದ ಇಂದ್ರಜಿತುವು ಶತ್ರುನಾಶಕ್ಕಾಗಿ ಅತ್ಯಂತ ನಿಶಿತವಾಗಿದ್ದ 'ಆಸುರ' ಎಂಬ ಭೀಕರವಾದ ಅಸ್ತ್ರವನ್ನು ಬತ್ತಳಿಕೆಯಿಂದ ಹೊರತೆಗೆದನು. ಆ ಅಸ್ತ್ರವನ್ನು ಧನುಸ್ಸಿನಲ್ಲಿ ಅನುಸಂಧಾನಮಾಡಿ ಪ್ರಯೋ ಗಿಸಿದೊಡನೆಯೇ ಧನುಸ್ಸಿನಿಂದ ದೇದೀಪ್ಯಮಾನವಾಗಿ ಕಾಣುತ್ತಿದ್ದ ಕೂಟ ಗಳು-ಮುದ್ಗರಗಳು-ಶೂಲಗಳು-ಭುಶುಂಡಿಗಳು-ಗದೆಗಳು-ಕತ್ತಿಗಳು- ಗಂಡುಗೊಡಲಿಗಳು ಮತ್ತು ಇನ್ನೂ ಅನೇಕವಿಧವಾದ ಆಯುಧಗಳು ಹೊರ ಬರತೊಡಗಿದುವು. ರಣರಂಗದಲ್ಲಿ ಲಕ್ಷ್ಮಣನು ಆಸುರಾಸ್ತ್ರದ ಪ್ರಭಾವವನ್ನು ಕಂಡು ಸಮಸ್ತವಾದ ಅಸ್ತ್ರ-ಶಸ್ತ್ರಗಳನ್ನೂ ವಿನಾಶಗೊಳಿಸುವ ಸಾಮರ್ಥ್ಯದಿಂದ ಕೂಡಿದ್ದ, ಯಾರಿಂದಲೂ ತಡೆಯಲು ಸಾಧ್ಯವಾಗದಿದ್ದ ಮಾಹೇಶ್ವರಾಸ್ತ್ರವನ್ನು ಪ್ರಯೋಗಿಸಿದನು. ಒಡನೆಯೇ ಇಂದ್ರಜಿತುವಿನ ಆಸುರಾಸ್ತ್ರವು ಉಪಶಮನ ಹೊಂದಿತು. ಹೀಗೆ ಅವರಿಬ್ಬರಿಗೂ ಅದ್ಭುತವಾದ ಮತ್ತು ರೋಮಾಂಚ ಕರವಾದ ಯುದ್ಧವು ನಡೆಯುತ್ತಿದ್ದಿತು. ಆಕಾಶದಲ್ಲಿದ್ದ ಪ್ರಾಣಿಗಳೆಲ್ಲವೂ ಲಕ್ಷ್ಮಣನನ್ನು ಸುತ್ತುವರಿದು ನಿಂತಿದ್ದುವು.

ಭಯಂಕರವಾದ ಶಬ್ದಗಳಿಂದ ಕೂಡಿದ್ದ ವಾನರ-ರಾಕ್ಷಸರ ಭಯಂಕರ ವಾದ ಯುದ್ಧದಲ್ಲಿ ಆಕಾಶವು, ವಿಸ್ಮಿತವಾದ ನಾನಾವಿಧವಾದ ಪ್ರಾಣಿಗಳಿಂದ ತುಂಬಿದ್ದು ಶೋಭಾಯಮಾನವಾಗಿ ಕಾಣುತ್ತಿದ್ದಿತು. ಇಂದ್ರಪ್ರಮುಖರಾದ

ಋಷಿಗಳು, ಪಿತೃದೇವತೆಗಳು, ದೇವತೆಗಳು, ಗಂಧರ್ವರು, ಗರುಡ-ನಾಗರು ಇವರೆಲ್ಲರೂ ಲಕ್ಷ್ಮಣನನ್ನು ರಕ್ಷಿಸುತ್ತಿದ್ದರು. ಅನಂತರ ರಾಘವಾನುಜನು ಮತ್ತೊಂದು ಶ್ರೇಷ್ಠವಾದ ಬಾಣವನ್ನು ಧನುಸ್ಸಿನಲ್ಲಿ ಅನುಸಂಧಾನಮಾಡಿದನು. ಆ ಬಾಣವು ಅಗ್ನಿಯಂತೆ ಶತ್ರುವನ್ನು ದಹಿಸುವುದಾಗಿದ್ದು ರಾವಣಿಯನ್ನೂ ಸೀಳಿಹಾಕುವ ಸಾಮರ್ಥ್ಯವನ್ನು ಹೊಂದಿದ್ದಿತು. ಅದಕ್ಕೆ ಸುಂದರವಾದ ರೆಕ್ಕೆಗಳಿದ್ದುವು. ಸುಂದರವಾದ ಗಿಣ್ಣುಗಳಿದ್ದುವು. ಅದರ ಗಾತ್ರವು ದುಂಡಾಗಿದ್ದಿತು. ಅದು ಅತ್ಯಂತ ದೃಢವಾಗಿದ್ದು ಚಿನ್ನದಿಂದ ಚಿತ್ರಿತವಾಗಿದ್ದಿತು. ಶತ್ರುವಿನ ಜೀವನವನ್ನು ಅಂತ್ಯಗೊಳಿಸುವ ಸಾಮರ್ಥ್ಯವನ್ನು ಹೊಂದಿದ್ದಿತು. ನಿವಾರಿಸಲು ಅಥವಾ ಸಹಿಸಿಕೊಳ್ಳಲು ಅಸಾಧ್ಯವಾಗಿದ್ದಿತು. ರಾಕ್ಷಸರಿಗೆ ಭಯದಾಯಕವಾಗಿದ್ದಿತು. ಸರ್ಪದ ವಿಷದಂತೆ ಶತ್ರುಗಳ ಪ್ರಾಣವನ್ನು ಅಪಹರಿಸುವುದಾಗಿದ್ದಿತು. ದೇವತೆಗಳಿಂದ ಸರ್ವಕಾಲದಲ್ಲಿಯೂ ಪೂಜಿಸಲ್ಪಡುತ್ತಿದ್ದಿತು. ಹಿಂದೆ ದೇವತೆಗಳಿಗೂ ಅಸುರರಿಗೂ ನಡೆದ ಯುದ್ಧದಲ್ಲಿ ವೀರ್ಯವಂತನಾದ ಹರಿವಾಹನನಾದ ಇಂದ್ರನು ದಾನವರನ್ನು ಅದೇ ಬಾಣದಿಂದಲೇ ಜಯಿಸಿದ್ದನು. ಯುದ್ಧದಲ್ಲಿ ಎಂದೂ ಪರಾಜಯವೆಂಬುದನ್ನೇ ಕಾಣದಿದ್ದ ಅಂತಹ ಪರಮಾದ್ಭುತವಾದ ಐಂದ್ರವೆಂಬ ಶ್ರೇಷ್ಠವಾದ ಅಸ್ತ್ರವನ್ನು ಲಕ್ಷ್ಮಣನು ತನ್ನ ಶ್ರೇಷ್ಠವಾದ ಧನುಸ್ಸಿನಲ್ಲಿ ಯೋಜಿಸಿ ನಾಣನ್ನು ಸೆಳೆಯುತ್ತಾ ಗುರಿಯನ್ನು ಸಾಧಿಸಲು ಸಮರ್ಥವಾದ ಈ ಮಾತನ್ನು ಹೇಳಿದನು:

ಧರ್ಮಾತ್ಮಾ ಸತ್ಯಸನ್ಧಶ್ಚ ರಾಮೋ ದಾಶರಥಿರ್ಯದಿ ।
ಪೌರುಷೇ ಚಾಪ್ರತಿದ್ವನ್ದ್ವಃ ಶರೈನಂ ಜಹಿ ರಾವಣಿಮ್ ॥೯॥

"ದಶರಥನ ಮಗನಾದ ಶ್ರೀರಾಮನು ಧರ್ಮಾತ್ಮನೂ, ಸತ್ಯ ಸಂಧನೂ, ಪೌರುಷದಲ್ಲಿ ಅದ್ವಿತೀಯನೂ ಆಗಿದ್ದಾನೆ. ಅವನ ಮಹಿಮೆ ಯಿಂದ ಎಲೌ ಐಂದ್ರಮಹಾಸ್ತ್ರವೇ! ರಾವಣನ ಮಗನಾದ ಈ ಇಂದ್ರಜಿತು ವನ್ನು ಸಂಹರಿಸು."

ಸಮರವೀರನಾದ, ಶತ್ರುವೀರಹಂತಕನಾದ ಲಕ್ಷ್ಮಣನು ಹೀಗೆ ಹೇಳುತ್ತಾ ನೇರವಾಗಿ ಹೋಗುವ ಆ ಬಾಣವನ್ನು ಐಂದ್ರಾಸ್ತ್ರದಿಂದ ಸಂಯೋಜಿಸಿ ಕಿವಿಯವರೆಗೂ ಸೆಳೆದು ಇಂದ್ರಜಿತುವಿನ ಮೇಲೆ ಪ್ರಯೋಗಿಸಿ

ದನು. ಧನುಸ್ಸಿನಿಂದ ಹೊರಟೊಡನೆಯೇ ಆ ಮಹಾಸ್ತ್ರವು ಕಿರೀಟದಿಂದಲೂ, ಕಾಂತಿಯಿಂದ ಪ್ರಜ್ವಲಿಸುತ್ತಿದ್ದ ಕುಂಡಲಗಳಿಂದಲೂ ಸಮಲಂಕೃತವಾಗಿದ್ದ ಇಂದ್ರಜಿತುವಿನ ತಲೆಯನ್ನು ಶರೀರದಿಂದ ಬೇರ್ಪಡಿಸಿ ನೆಲದ ಮೇಲೆ ಬೀಳಿಸಿತು. ಹೆಗಲಿನಿಂದ ಬೇರ್ಪಟ್ಟು ಭೂಮಿಯ ಮೇಲೆ ಬಿದ್ದ ರಾಕ್ಷಸನ ಆ ದೊಡ್ಡದಾದ ರುಂಡವು ರಕ್ತದಿಂದ ತೋಯ್ದುಹೋಗಿದ್ದು ಚಿನ್ನದ ಉಂಡೆಯಂತೆಯೇ ಕಾಣುತ್ತಿದ್ದಿತು. ಹೀಗೆ ರಾವಣಿಯು ಹತನಾಗಿ ಕವಚ, ಶಿರ, ಶಿರಸ್ತ್ರಾಣಗಳ ಸಹಿತವಾಗಿ ನೆಲದ ಮೇಲೆ ಬಿದ್ದನು. ಅವನು ಹಿಡಿದಿದ್ದ ಧನುಸ್ಸು ಕೈಯಿಂದ ಜಾರಿ ದೂರದಲ್ಲಿ ಬಿದ್ದಿತು. ವಿಭೀಷಣನೊಂದಿಗೆ ಎಲ್ಲ ವಾನರರೂ ಗಟ್ಟಿಯಾಗಿ ಕೂಗಿಕೊಂಡರು. ವೃತ್ರಾಸುರನ ವಧೆಯಾದನಂತರ ದೇವತೆಗಳು ಪರಮಹರ್ಷಿತರಾದಂತೆ–ಇಂದ್ರಜಿತುವಿನ ವಧೆಯಿಂದ ವಾನರರೆಲ್ಲರೂ ಪರಮಹೃಷ್ಟರಾದರು. ಅಂತರಿಕ್ಷದಲ್ಲಿದ್ದ ದೇವತೆಗಳೂ, ಮಹಾತ್ಮರಾದ ಋಷಿಗಳೂ, ಗಂಧರ್ವಾಪ್ಸರೆಯರೂ 'ಲಕ್ಷ್ಮಣನಿಗೆ ಜಯವಾಗಲಿ' 'ಶ್ರೀರಾಮನಿಗೆ ಜಯವಾಗಲಿ'–ಎಂದು ಜಯಘೋಷಗಳನ್ನು ಮಾಡಿದರು. ವಿಜಯದಿಂದ ಉಲ್ಲಸಿತರಾಗಿದ್ದ ವಾನರರಿಂದ ವಧಿಸಲ್ಪಡುತ್ತಿದ್ದ ರಾಕ್ಷಸರು ಇಂದ್ರಜಿತವು ಹತನಾದನೆಂಬ ವಾರ್ತೆಯನ್ನು ಕೇಳಿದೊಡನೆಯೇ ದಿಕ್ಕಾಪಾಲಾಗಿ ಓಡಿಹೋದರು. ವಾನರರಿಂದ ಪೀಡಿಸಲ್ಪಡುತ್ತಿದ್ದ ಆ ರಾಕ್ಷಸರು ವಿವೇಕಶೂನ್ಯರಾಗಿ ಶಸ್ತ್ರಾಸ್ತ್ರಗಳನ್ನು ತ್ಯಜಿಸಿ ಪಲಾಯನಮಾಡುತ್ತಾ ಲಂಕೆಯನ್ನು ಸೇರಿದರು. ಭಯಗೊಂಡ ರಾಕ್ಷಸರು ನೂರಾರು ಸಾವಿರಾರು ಸಂಖ್ಯೆಯಲ್ಲಿ ಪಟ್ಟಿಶ-ಕತ್ತಿ-ಗಂಡುಗೊಡಲಿ–ಇವೇ ಮುಂತಾದ ಆಯುಧಗಳನ್ನು ಪರಿತ್ಯಜಿಸಿ ದಿಕ್ಕಾಪಾಲಾಗಿ ಓಡಿಹೋದರು. ವಾನರರಿಂದ ಸತತವಾಗಿ ಪೀಡಿಸಲ್ಪಡುತ್ತಿದ್ದ ಕೆಲವರು ರಾಕ್ಷಸರು ಭಯಗೊಂಡು ಲಂಕೆಗೆ ಓಡಿದರು. ಕೆಲವರು ಸಮುದ್ರದಲ್ಲಿ ಬಿದ್ದರು. ಮತ್ತೆ ಕೆಲವರು ಪರ್ವತಗಳಲ್ಲಿ ಆಶ್ರಯವನ್ನು ಹೊಂದಿದರು. ಇಂದ್ರಜಿತುವು ಮರಣಹೊಂದಿ ರಣರಂಗದಲ್ಲಿ ಬಿದ್ದಿರುವುದನ್ನು ನೋಡಿದನಂತರ ಅಲ್ಲಿದ್ದ ಸಾವಿರಾರು ರಾಕ್ಷಸರಲ್ಲಿ ಒಬ್ಬನು ಕೂಡ ಕಾಣಲಿಲ್ಲ. ಸೂರ್ಯನು ಮುಳುಗಿದೊಡನೆಯೇ ಅವನ ಕಿರಣಗಳು ಉಳಿದುಕೊಳ್ಳದೇ ಇರುವಂತೆ–ಇಂದ್ರಜಿತುವು ಅವಸಾನವನ್ನು ಹೊಂದಿದೊಡನೆಯೇ ಅವನ ಅನುಯಾಯಿಗಳಾಗಿದ್ದ ರಾಕ್ಷಸರು ಯಾರೂ ಅಲ್ಲಿ ಉಳಿದು

ಕೊಳ್ಳಲಿಲ್ಲ. ದಿಕ್ಕಾಪಾಲಾಗಿ ಓಡಿಹೋದರು. ಇಂದ್ರಜಿತುವು ರಣರಂಗದಲ್ಲಿ ಪ್ರಾಣಗಳನ್ನು ತೊರೆದನಂತರ ಶಾಂತವಾದ ಕಿರಣಗಳುಳ್ಳ ಸೂರ್ಯ ನಂತೆಯೂ–ಆರಿಹೋದ ಬೆಂಕಿಯಂತೆಯೂ ಕಾಣುತ್ತಿದ್ದನು. ರಾವಣನ ಮಗನಾದ ಇಂದ್ರಜಿತುವು ಹತನಾಗಲು ಅವನಿಂದ ಲೋಕಕ್ಕೆ ಆಗುತ್ತಿದ್ದ ಪೀಡೆಯೂ ನಿಂತುಹೋಯಿತು. ಲೋಕಶತ್ರುವು ವಿನಾಶಹೊಂದಲು ಲೋಕವೇ ಸಂತೋಷಿಸಿತು. ಪಾಪಕರ್ಮಿಯಾದ ರಾಕ್ಷಸನು ಅವಸಾನ ಹೊಂದಲು ಪೂಜ್ಯನಾದ ಇಂದ್ರನು ಮಹರ್ಷಿಗಳೊಡನೆ ಪ್ರಹೃಷ್ಟನಾದನು. ಆಕಾಶವು ನೃತ್ಯಮಾಡುತ್ತಿದ್ದ ಅಪ್ಸರೆಯರಿಂದಲೂ, ಗಾನಮಾಡುತ್ತಿದ್ದ ಮಹಾತ್ಮರಾದ ಗಂಧರ್ವರಿಂದಲೂ ತುಂಬಿಹೋಗಿದ್ದು ನೃತ್ಯ-ಗಾನಧ್ವನಿ ಗಳೊಡನೆ ದೇವತೆಗಳ ದುಂದುಭಿಶಬ್ದವೂ ಕೇಳಿಬರುತ್ತಿದ್ದಿತು. ಕ್ರೂರಕರ್ಮಿ ಯಾದ ರಾಕ್ಷಸನು ಹತನಾಗಲು ಪರ್ವತೋಪಮವಾಗಿ ಎದ್ದಿದ್ದ ಧೂಳು ಉಡುಗಿಹೋಯಿತು. ದೇವತೆಗಳು ಹೂಮಳೆಗರೆದರು. ಅದು ಬಹಳ ಅದ್ಭುತವಾಗಿ ಕಾಣುತ್ತಿದ್ದಿತು. ಸರ್ವಲೋಕಭಯಂಕರನಾಗಿದ್ದ ರಾವಣಿಯು ಸಾವನ್ನಪ್ಪಲು ಜಲವು ಸ್ವಚ್ಛವಾಯಿತು. ಆಕಾಶವು ನಿರ್ಮಲವಾಯಿತು. ದೇವ-ದಾನವರು ಹರ್ಷದಿಂದ ಪುಲಕಿತರಾದರು. ದೇವ-ದಾನವ-ಗಂಧರ್ವ ರೆಲ್ಲರೂ ಒಟ್ಟಾಗಿ ಸೇರಿ ಅಲ್ಲಿಗೆ ಬಂದು ರಾವಣಿಯು ನಿಧನಹೊಂದಿರುವು ದನ್ನು ನೋಡಿ ಪರಮತುಷ್ಟರಾಗಿ 'ವಿಜ್ವರಾಃ ಶಾನ್ತಕಲುಷಾ ಬ್ರಾಹ್ಮಣಾ ವಿಚರನ್ತು' ಇನ್ನು ಮೇಲೆ ಬ್ರಾಹ್ಮಣರು ಭಯರಹಿತರೂ, ನಿರ್ಮಲ ಚಿತ್ತರೂ ಆಗಿ ಭೂಮಿಯಲ್ಲಿ ಸಂಚರಿಸಲಿ' ಎಂದು ಹರಸಿದರು.

ಅಪ್ರತಿಮಪರಾಕ್ರಮಿಯಾದ ರಾಕ್ಷಸಶ್ರೇಷ್ಠನಾದ ರಾವಣಿಯು ಹತ ನಾದುದನ್ನು ಕಂಡು ಸಂಹೃಷ್ಟರಾದ ವಾನರನಾಯಕರು ಲಕ್ಷ್ಮಣನನ್ನು ಅಭಿನಂದಿಸಿದರು. ವಿಭೀಷಣ, ಹನುಮಂತ, ಕರಡಿಗಳ ನಾಯಕನಾದ ಜಾಂಬವಂತ–ಇವರೇ ಮೊದಲಾದ ನಾಯಕರು ವಿಜಯವನ್ನು ಗಳಿಸಿದುದ ಕ್ಕಾಗಿ ಲಕ್ಷ್ಮಣನನ್ನು ಅಭಿನಂದಿಸಿದುದಲ್ಲದೇ ಅವನನ್ನು ಪರಿ-ಪರಿಯಾಗಿ ಪ್ರಶಂಸೆಮಾಡಿದರು. ಗುರಿಯನ್ನು ಸಾಧಿಸಿದ ಕಪಿವೀರರು ಕಿಲ-ಕಿಲಾಧ್ವನಿ ಮಾಡುತ್ತಾ, ನೆಗೆಯುತ್ತಾ, ಗರ್ಜನೆಮಾಡುತ್ತಾ ಲಕ್ಷ್ಮಣನನು ಸುತ್ತು ವರಿದು ಕುಳಿತರು. ಬಾಲಗಳನ್ನಳ್ಳಾಡಿಸುತ್ತಾ, ನೆಲವನ್ನು ಅಪ್ಪಳಿಸುತ್ತಾ

ಕಪಿಸೈನಿಕರು 'ಲಕ್ಷ್ಮಣನಿಗೆ ಜಯವಾಗಲೀ ; ರಾಘವನಿಗೆ ಜಯವಾಗಲೀ' ಎಂಬ ಜಯಕಾರವನ್ನು ಎಲ್ಲರಿಗೂ ಕೇಳಿಸುವಂತೆ ಗಟ್ಟಿಯಾಗಿ ಕೂಗತೊಡಗಿದರು. ಪ್ರಹೃಷ್ಟವಾದ ಮನಸ್ಸಿನಿಂದ ಕೂಡಿದ್ದ ವಿಧ-ವಿಧವಾದ ಕಲ್ಯಾಣ ಗುಣಗಳಿಂದ ಸಂಪನ್ನರಾಗಿದ್ದ ವಾನರರು ಪರಸ್ಪರವಾಗಿ ಒಬ್ಬರನ್ನೊಬ್ಬರು ತಬ್ಬಿಕೊಂಡು ಶ್ರೀರಾಮನ ಸಂಬಂಧವಾದ ಕಥೆಗಳನ್ನು ಹೇಳಿಕೊಳ್ಳುತ್ತಿದ್ದರು.

ಯುದ್ಧಭೂಮಿಯಲ್ಲಿ ಲಕ್ಷ್ಮಣನ ಸುಹೃದರಾದ ವಾನರರು ಅವನ ದುಷ್ಕರವಾದ ಮತ್ತು ಪರಾಕ್ರಮದಿಂದ ಕೂಡಿದ ಸಾಹಸಕಾರ್ಯವನ್ನು ನೋಡಿ ಅತ್ಯಂತಪ್ರಸನ್ನರಾದರು. ದೇವತೆಗಳು ಕೂಡ ದೈವದ್ರೋಹಿಯಾದ ರಾವಣಿಯ ವಧೆಯನ್ನು ಕೇಳಿ ಆನಂದತುಂದಿಲರಾದರು.

೯೦ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೯೧ನೆಯ ಸರ್ಗ

ಲಕ್ಷ್ಮಣ-ವಿಭೀಷಣರು ಶ್ರೀರಾಮಚಂದ್ರನಿಗೆ ಇಂದ್ರಜಿತುವಿನ ವಧೆಯ ವಾರ್ತೆಯನ್ನು ತಿಳಿಸಿದುದು : ಪ್ರಸನ್ನಚಿತ್ತನಾದ ಶ್ರೀರಾಮನು ಲಕ್ಷ್ಮಣನನ್ನು ಆಲಿಂಗಿಸಿಕೊಂಡು ಪ್ರಶಂಸಿಸಿದುದು : ಸುಷೇಣನು ಲಕ್ಷ್ಮಣನೇ ಮೊದಲಾದವರಿಗೆ ಚಿಕಿತ್ಸೆಮಾಡಿದುದು

ರುಧಿರಕ್ಲಿನ್ನಗಾತ್ರಸ್ತು ಲಕ್ಷ್ಮಣಃ ಶುಭಲಕ್ಷಣಃ ।
ಬಭೂವ ಹೃಷ್ಟಸ್ತಂ ಹತ್ವಾ ಶಕ್ರಜೇತಾರಮಾಹವೇ ॥೧॥

ರಕ್ತದಿಂದ ತೋಯ್ದ ಶರೀರದಿಂದ ಕೂಡಿದ್ದ ಶುಭಲಕ್ಷಣಸಂಪನ್ನನಾದ ಲಕ್ಷ್ಮಣನು ಇಂದ್ರನನ್ನೇ ಜಯಿಸಿದ್ದ ಇಂದ್ರಜಿತುವನ್ನೇ ಸಂಗ್ರಾಮಭೂಮಿ ಯಲ್ಲಿ ಸಂಹರಿಸಿ ಪರಮಹೃಷ್ಟನಾದನು.

ಬಲ-ಪರಾಕ್ರಮಸಂಪನ್ನನಾಗಿದ್ದ, ಮಹಾತೇಜಸ್ವಿಯಾದ ಸುಮಿತ್ರಾನಂದನನು ಜಾಂಬವಂತ-ಹನುಮಂತರಿದ್ದ ಕಡೆಗೆ ಶೀಘ್ರವಾಗಿ ಬಂದನು. ಅನಂತರ ಸಮಸ್ತವಾನರಸೈನಿಕರೊಡನೆ ವಿಭೀಷಣ-ಹನುಮಂತರನ್ನು ಕರೆದುಕೊಂಡು ಸುಗ್ರೀವ-ಶ್ರೀರಾಮರಿದ್ದೆಡೆಗೆ ಹೋದನು. ಅಲ್ಲಿ ಲಕ್ಷ್ಮಣನು

ಶ್ರೀರಾಮನಿಗೆ ಅಭಿವಾದನಪೂರ್ವಕವಾಗಿ ನಮಸ್ಕರಿಸಿ–ಇಂದ್ರನೊಡನೆ ಉಪೇಂದ್ರನು ನಿಂತಿದ್ದಂತೆ ಶ್ರೀರಾಮನ ಸಮೀಪದಲ್ಲಿ ನಿಂತನು. ಆ ಸಮಯದಲ್ಲಿ ವಿಭೀಷಣನು ವಿಜಯವನ್ನು ಸೂಚಿಸುತ್ತಿರುವನೋ ಎಂಬಂತೆ ಪ್ರಸನ್ನಮುಖನಾಗಿ ಮುಂದೆ ಬಂದು ಮಹಾತ್ಮನಾದ ಶ್ರೀರಾಮನಿಗೆ, ಇಂದ್ರಜಿತುವಿನ ವಧೆಯೆಂಬ ಭಯಂಕರವಾದ ಕಾರ್ಯದ ಸಾಧನೆಯಾಯಿತೆಂದು ಹೇಳಿದನು. ಅಂತೆಯೇ ಮಹಾತ್ಮನಾದ ಲಕ್ಷ್ಮಣನು ಇಂದ್ರಜಿತುವಿನ ತಲೆಯನ್ನು ಕತ್ತರಿಸಿದನೆಂಬ ಶುಭವಾರ್ತೆಯನ್ನು ಶ್ರೀರಾಮನಿಗೆ ಹೇಳಿದನು.

ಮಹಾವೀರ್ಯನಾದ ಶ್ರೀರಾಮನು ಲಕ್ಷ್ಮಣನಿಂದ ಇಂದ್ರಜಿತುವಿನ ವಧೆಯಾಯಿತೆಂಬ ಸುವಾರ್ತೆಯನ್ನು ಕೇಳಿದೊಡನೆಯೇ ಆನಂದತುಂದಿಲನಾಗಿ ಹೇಳಿದನು :

ಸಾಧು ಲಕ್ಷ್ಮಣ ತುಷ್ಟೋಽಸ್ಮಿ ಕರ್ಮ ಚಾಸುಕರಂ ಕೃತಮ್ ।
ರಾವಣೇರ್ಹಿ ವಿನಾಶೇನ ಜಿತಮಿತ್ಯುಪಧಾರಯ ॥೮॥

“ಭಲೇ ಲಕ್ಷ್ಮಣ! ಸಾಧು! ನೀನು ನಿಶ್ಚಯವಾಗಿಯೂ ಅತಿ ದುಷ್ಕರವಾದ ಕಾರ್ಯವನ್ನೇ ಮಾಡಿರುವೆ. ಇದರಿಂದ ನಾನು ಸಂತುಷ್ಟನಾದೆನು. ಇಂದ್ರಜಿತುವಿನ ವಿನಾಶದ ಫಲವಾಗಿ ನಾವು ಯುದ್ಧದಲ್ಲಿ ಜಯಗಳಿಸಿದೆವೆಂದೇ ಭಾವಿಸು.”

ಹೀಗೆ ಹೇಳಿ ಕೀರ್ತಿವರ್ಧನನಾದ ಲಕ್ಷ್ಮಣನ ನೆತ್ತಿಯನ್ನು ಆಘ್ರಾಣಿಸಿ ಬಹಳವಾಗಿ ನಾಚಿಕೆಪಡುತ್ತಿದ್ದ ಲಕ್ಷ್ಮಣನನ್ನು ಬಲಪೂರ್ವಕವಾಗಿ ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಗಾಢವಾಗಿ ಆಲಿಂಗಿಸಿಕೊಳ್ಳುತ್ತಾ ಬಾಣಗಳ ಪ್ರಹಾರಗಳಿಂದ ಬಹಳವಾಗಿ ಗಾಯಗೊಂಡಿದ್ದ ಮೃದುಸ್ವಭಾವದವನಾದ ಲಕ್ಷ್ಮಣನನ್ನು ಪುನಃ ಪುನಃ ನೋಡುತ್ತಿದ್ದನು.

ಶರೀರವನ್ನು ಒಳಹೊಕ್ಕಿದ್ದ ಬಾಣಗಳಿಂದ ಅತ್ಯಂತಪೀಡಿತನಾಗಿ ಬಾರಿ-ಬಾರಿಗೂ ನಿಟ್ಟುಸಿರುಬಿಡುತ್ತಿದ್ದ ನೋವಿನಿಂದಾಗಿ ದುಃಖಿಸುತ್ತಿದ್ದ, ಉಸಿರಾಡುವುದಕ್ಕೂ ಕಷ್ಟಪಡುತ್ತಿದ್ದ ಲಕ್ಷ್ಮಣನ ನೆತ್ತಿಯನ್ನು ಬಾರಿ-ಬಾರಿಗೂ ಆಘ್ರಾಣಿಸುತ್ತಾ ಗಾಯಗೊಂಡಿದ್ದ ಶರೀರರನ್ನು ಮೃದುವಾಗಿ ಸ್ಪರ್ಶಿಸುತ್ತಾ ಪುರುಷಶ್ರೇಷ್ಠನಾದ ಶ್ರೀರಾಮನು ಸಮಾಧಾನಕರವಾದ ಈ ಮಾತುಗಳನ್ನು ಹೇಳಿದನು :

"ತಮ್ಮ! ಎಂತಹ ಕಷ್ಟಸಾಧ್ಯವಾದ ಕಾರ್ಯವನ್ನೂ ಮಾಡುವ ಸಾಮರ್ಥ್ಯವಿರುವ ನೀನು ಇಂದ್ರಜಿತುವನ್ನು ಸಂಹರಿಸಿ ಅತ್ಯಂತ ಶುಭಕರವಾದ ಕಾರ್ಯವನ್ನೇ ಮಾಡಿರುವೆ. ಮಗನು ಹತನಾದನಂತರ ರಾವಣನೂ ಯುದ್ಧದಲ್ಲಿ ಮಡಿದನೆಂದೇ ನಾನು ಭಾವಿಸುತ್ತೇನೆ. ದುರಾತ್ಮನಾದ ಆ ಶತ್ರುವು ಹತನಾಗಲಾಗಿ ನಾನು ನಿಶ್ಚಯವಾಗಿಯೂ ವಿಜಯಿಯಾಗಿದ್ದೇನೆ. ಇಂದ್ರಜಿತುವು ತನ್ನ ತಂದೆಗೆ ಪರಮಾಶ್ರಯನಾಗಿದ್ದನು. ಕ್ರೂರಿಯಾದ ರಾವಣನಿಗೆ ಬಲತೋಳಿನಂತಿದ್ದ ಅವನ ಮಗನನ್ನು ನೀನು ಸೌಭಾಗ್ಯವಶ ದಿಂದ ಸಂಹರಿಸಿರುವೆ. ವಿಭೀಷಣ-ಹನುಮಂತರೂ ಸಮರಭೂಮಿಯಲ್ಲಿ ಮಹಾಪರಾಕ್ರಮವನ್ನೇ ತೋರಿದ್ದಾರೆ. ವಾನರಸೈನಿಕರೂ ಮತ್ತು ನೀವು ಮೂವರೂ ಸೇರಿಕೊಂಡು ಮೂರು ದಿವಸಗಳು ಸತತವಾಗಿ ಹೋರಾಡಿ ಪರಮಶತ್ರುವಾದ ಇಂದ್ರಜಿತುವನ್ನು ಸಂಹರಿಸಿರುವಿರಿ. ಈಗ ನಾನು ನಿಶ್ಚಯವಾಗಿಯೂ ಶತ್ರುರಹಿತನಾಗಿದ್ದೇನೆ. ಶತ್ರುಪಕ್ಷದಲ್ಲಿ ಉಳಿದಿರುವ ರಾವಣನೊಬ್ಬನು ಈಗಲೇ ಯುದ್ಧಮಾಡಲು ಬರುವನು. ಮಹಾಸೈನ್ಯದೊಡನೆ ಯುದ್ಧಮಾಡಲು ಹೋಗಿದ್ದ ಮಗನು ಮೃತನಾದನೆಂಬ ವಾರ್ತೆಯನ್ನು ಕೇಳಿದೊಡನೆಯೇ ದೊಡ್ಡದಾದ ಸೈನ್ಯದೊಡನೆ ಯುದ್ಧಕ್ಕಾಗಿ ರಾವಣನು ಲಂಕೆಯಿಂದ ನಿರ್ಗಮಿಸುವನು. ಮಗನ ವಧೆಯಿಂದ ಸಂತಪ್ತನಾಗಿ ಹೊರಬರುವ ದುರ್ಜಯನಾದ ರಾಕ್ಷಸಾಧಿಪತಿಯನ್ನು ನಾನು ವಾನರಮಹಾಸೈನ್ಯದೊಡನೆ ಕೂಡಿಕೊಂಡು ಸಂಹರಿಸುತ್ತೇನೆ. ಇಂದ್ರನನ್ನು ಜಯಿಸಿದ್ದ ಇಂದ್ರಜಿತುವನ್ನು ಸಂಹರಿಸಿದ ನಿನ್ನಂತಹ ರಕ್ಷಕನಿರುವ ನನಗೆ ಸೀತೆಯನ್ನಾಗಲೀ ಭೂಮಂಡಲವನ್ನಾಗಲೀ ಪಡೆದುಕೊಳ್ಳಲು ಕಷ್ಟಸಾಧ್ಯವೇನೂ ಅಲ್ಲ. (ಸೀತೆಯನ್ನು ಪಡೆದುಕೊಳ್ಳಲು ಮತ್ತು ಭೂಮಂಡಲಕ್ಕೆ ಚಕ್ರಾಧಿಪತಿಯಾಗಲು ಕಷ್ಟವೇನೂ ಆಗುವುದಿಲ್ಲ.)"

ಹೀಗೆ ಶ್ರೀರಾಮನು ಲಕ್ಷ್ಮಣನನ್ನು ಯಥೋಚಿತವಾಗಿ ಶ್ಲಾಘಿಸಿ ಪುನಃ ಆಲಿಂಗಿಸಿಕೊಂಡು ಸಮಾಧಾನಗೊಳಿಸುತ್ತಾ ಪರಮಹೃಷ್ಟನಾಗಿ ವಾನರವೈದ್ಯನಾದ ಸುಷೇಣನಿಗೆ ಹೇಳಿದನು :

"ಮಹಾಪ್ರಾಜ್ಞನೇ! ಸುಷೇಣ! ಮಿತ್ರವತ್ಸಲನಾದ ಸೌಮಿತ್ರಿಯು ಶಸ್ತ್ರಪ್ರಹಾರಗಳಿಂದಾಗಿರುವ ಗಾಯಗಳಿಂದ ವೇದನೆಯನ್ನು ಅನುಭವಿಸುತ್ತಿ

ರುವನು. ಇವನ ಶರೀರದಲ್ಲಿ ನೆಟ್ಟಿರುವ ಬಾಣಗಳು ಹೊರಬರುವಂತೆಯೂ ಮತ್ತು ಇವನು ಹಿಂದಿನಂತೆ ಸ್ವಸ್ಥನೂ ಸುಖಿಯೂ ಆಗುವಂತೆಯೂ ಇವನನ್ನು ಉಪಚರಿಸು.

ಸುಷೇಣ! ಅಂತೆಯೇ ವಿಭೀಷಣನ ಶರೀರದಲ್ಲಿ ನೆಟ್ಟುಕೊಂಡಿರುವ ಬಾಣಗಳನ್ನೂ ತೆಗೆದು ಅವನ ಗಾಯಗಳೂ ಶೀಘ್ರವಾಗಿ ಮಾಯುವಂತೆ ಮಾಡು. ವೃಕ್ಷಯೋಧಿಗಳಾದ ಋಕ್ಷ-ವಾನರಸೈನಿಕರಲ್ಲಿ ಇನ್ನೂ ಯಾರು ಯಾರಿಗೆ ಶಸ್ತ್ರಾಘಾತಗಳಾಗಿವೆಯೋ ಮತ್ತು ಯಾರ ಶರೀರಗಳಲ್ಲಿ ಬಾಣಗಳು ನೆಟ್ಟುಕೊಂಡಿವೆಯೋ–ಅವರೆಲ್ಲರ ಶರೀರಗಳಿಂದಲೂ ಅಪಾಯವಾಗದಂತೆ ಬಾಣಗಳನ್ನು ಹೊರತೆಗೆದು ಗಾಯಗಳು ಬೇಗ ಮಾಯುವಂತೆ ಚಿಕಿತ್ಸೆಯನ್ನು ಮಾಡಿ ಅವರೆಲ್ಲರನ್ನೂ ಸ್ವಸ್ಥರನ್ನಾಗಿಯೂ ಸುಖಿಗಳನ್ನಾಗಿಯೂ ಮಾಡು.”

ಮಹಾತ್ಮನಾದ ಶ್ರೀರಾಮನು ಹೀಗೆ ಹೇಳಲು ವಾನರಯೂಥಪತಿಯಾದ ಸುಷೇಣನು ಲಕ್ಷ್ಮಣನಿಗೆ ಮೂಸಿನೋಡಲು ಶ್ರೇಷ್ಠವಾದೊಂದು ಓಷಧಿಯನ್ನು ಕೊಟ್ಟನು.

ಆ ಪರಮೌಷಧಿಯನ್ನು ಲಕ್ಷ್ಮಣನು ಆಘ್ರಾಣಿಸುತ್ತಲೇ ಅವನ ಶರೀ ರದ ಆದ್ಯಂತವಾಗಿ ನೆಟ್ಟಿದ್ದ ಬಾಣಗಳು ಹೊರಬಂದುವು. ಗಾಯಗಳೆಲ್ಲವೂ ಕ್ಷಣಮಾತ್ರದಲ್ಲಿ ಮಾಯ್ದು ನೋವಿಲ್ಲದವನಾದನು. ಅದೇ ರೀತಿಯಲ್ಲಿ ಶ್ರೀರಾಮನ ಆಜ್ಞೆಯಂತೆ ಸುಷೇಣನು ವಿಭೀಷಣನಿಗೂ ಮತ್ತು ಸಮಸ್ತ ವಾನರಸೈನಿಕರಿಗೂ ಚಿಕಿತ್ಸೆಯನ್ನು ಮಾಡಿದನು.

ಸುಷೇಣನ ಅದ್ಭುತವಾದ ಚಿಕಿತ್ಸೆಯಿಂದ ಕ್ಷಣಮಾತ್ರದಲ್ಲಿ ಲಕ್ಷ್ಮಣನ ಶರೀರದಲ್ಲಿ ನೆಟ್ಟುಕೊಂಡಿದ್ದ ಬಾಣಗಳೆಲ್ಲವೂ ಹೊರಬಂದುವು. ಯುದ್ಧದಿಂದುಂಟಾಗಿದ್ದ ಆಯಾಸವೆಲ್ಲವೂ ಪರಿಹಾರವಾಯಿತು. ಹೀಗೆ ನೀರೋಗನಾದ ಸೌಮಿತ್ರಿಯು ಅಮಿತಾನಂದವನ್ನು ಹೊಂದಿದನು.

ಆ ಸಮಯದಲ್ಲಿ ಸುಷೇಣನ ಚಿಕಿತ್ಸೆಯಿಂದ ಲಕ್ಷ್ಮಣನು ಕ್ಷಣಮಾತ್ರದಲ್ಲಿ ನೀರೋಗದೃಢಕಾಯನಾದುದನ್ನು ನೋಡಿ ರಾಮ-ಸುಗ್ರೀವ-ವಿಭೀಷಣ-ಜಾಂಬವಂತರೂ ಮತ್ತು ವಾನರಸೈನಿಕರೂ ಪರಮಹೃಷ್ಟರಾದರು. ಅವರ ಆನಂದಕ್ಕೆ ಪಾರವೇ ಇರಲಿಲ್ಲ.

ಅತ್ಯಂತದುಷ್ಕರವಾದ ಶತ್ರುಸಂಹಾರಕಾರ್ಯವನ್ನು ಸಾಧಿಸಿದ ಲಕ್ಷ್ಮಣನನ್ನು ಶ್ರೀರಾಮನು ಪರಿ-ಪರಿಯಾಗಿ ಕೊಂಡಾಡಿದನು. ಇಂದ್ರನ ಶತ್ರುವಾದ ಇಂದ್ರಜಿತುವು ಲಕ್ಷ್ಮಣನಿಂದ ಹತನಾದನೆಂಬ ವಾರ್ತೆಯನ್ನು ಕೇಳಿ ವಾನರೇಂದ್ರನಾದ ಸುಗ್ರೀವನೂ ಬಹಳವಾಗಿ ಸಂತೋಷಿಸಿದನು.

೯೧ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೯೨ನೆಯ ಸರ್ಗ

ರಾವಣನ ಶೋಕ : ಸೀತೆಯನ್ನು ಸಂಹರಿಸಲು ಹೊರಟುದು : ಸುಪಾರ್ಶ್ವನಿಂದ ಆಶ್ವಾಸನೆ

ತತಃ ಪೌಲಸ್ತ್ಯ ಸಚಿವಾಃ ಶ್ರುತ್ವಾ ಚೇನ್ದ್ರಜಿತಂ ಹತಮ್ ।
ಆಚಚಕ್ಷುರಭಿಜ್ಞಾಯ ದಶಗ್ರೀವಾಯ ಸತ್ವರಾಃ ॥೧॥

ರಾವಣನ ಮಂತ್ರಿಗಳು ಇಂದ್ರಜಿತುವು ಹತನಾದನೆಂಬ ವಾರ್ತೆಯನ್ನು ಕೇಳುತ್ತಲೇ ಅವನು ಯುದ್ಧರಂಗದಲ್ಲಿ ಬಿದ್ದಿರುವುದನ್ನು ತಾವೂ ನೋಡಿ ಬಹಳ ಅವಸರದಿಂದ ಲಂಕೆಗೆ ಬಂದು ಆ ಶೋಕವಾರ್ತೆಯನ್ನು ರಾವಣನಿಗೆ ಅರುಹಿದರು :

"ಮಹಾರಾಜ! ವಿಭೀಷಣನ ಸಹಾಯವನ್ನು ಪಡೆದ ಲಕ್ಷ್ಮಣನಿಂದ ಮಹಾದ್ಯುತಿಮಂತನಾದ ನಿನ್ನ ಮಗ ಇಂದ್ರಜಿತುವು ನಮ್ಮ ಸೈನಿಕರು ನೋಡುತ್ತಿದ್ದಂತೆಯೇ ಕೊಲ್ಲಲ್ಪಟ್ಟನು. ಯುದ್ಧಗಳಲ್ಲಿ ಎಂದೂ ಸೋತು ಹೋಗದಿದ್ದ, ದೇವೇಂದ್ರನನ್ನೂ ಪರಾಜಯಗೊಳಿಸಿದ್ದ ನಿನ್ನ ಮಗನು ಶೂರನಾದ ಲಕ್ಷ್ಮಣನೊಡನೆ ಯುದ್ಧದಲ್ಲಿ ತೊಡಗಿ ಅವನನ್ನು ಬಾಣಗಳ ಪ್ರಯೋಗಗಳಿಂದ ಸಂತಾಪಗೊಳಿಸಿ ಕಡೆಗೆ ಲಕ್ಷ್ಮಣನಿಂದ ಹತನಾಗಿ ಉತ್ತಮ ಲೋಕಗಳನ್ನು ಸೇರಿದನು."

ಅತಿಭಯಂಕರವಾದ, ಘೋರವಾದ ಮತ್ತು ದಾರುಣವಾದ ಮಗನ ಮರಣವಾರ್ತೆಯನ್ನು ಕೇಳಿದೊಡನೆಯೇ ರಾವಣನು ಮೂರ್ಛಿತನಾದನು. ಬಹಳ ಹೊತ್ತು ಕಳೆದನಂತರ ಎಚ್ಚರಗೊಂಡು ಪುತ್ರಶೋಕದಿಂದ ವ್ಯಾಕುಲಗೊಂಡಿದ್ದ, ಕ್ಲೇಶದಿಂದ ಕೂಡಿದ ಇಂದ್ರಿಯಗಳುಳ್ಳವನಾಗಿದ್ದ, ದೀನನಾಗಿದ್ದ, ರಾಕ್ಷಸಶ್ರೇಷ್ಠನಾದ ರಾವಣನು ವಿಲಪಿಸತೊಡಗಿದನು :

"ರಾಕ್ಷಸಸೇನಾಪ್ರಮುಖನೇ! ಮಹಾಬಲನೇ! ಅಯ್ಯೋ ಮಗನೇ! ದೇವಶ್ರೇಷ್ಠನಾದ ಇಂದ್ರನನ್ನೇ ಜಯಿಸಿದ್ದ ನೀನು ಹುಲುಮನುಜನಾದ ಲಕ್ಷ್ಮಣನಿಗೆ ಹೇಗೆ ವಶನಾದೆ? ಕುಪಿತನಾದ ನೀನು ಬಾಣಗಳಿಂದ ಕಾಲ ಮತ್ತು ಅಂತಕರನ್ನು ಕೂಡ ಸೀಳಿಹಾಕುವಷ್ಟು ಸಮರ್ಥನಾಗಿದ್ದೆ. ಮಂದರಪರ್ವತದ ಶಿಖರಗಳನ್ನೂ ಧ್ವಂಸಮಾಡುವಷ್ಟು ಸಮರ್ಥನಾಗಿದ್ದೆ. ಹೀಗಿರುವಾಗ ಯುದ್ಧದಲ್ಲಿ ಮಾನವನಾದ ಲಕ್ಷ್ಮಣನನ್ನು ಸಂಹರಿಸುವುದು ನಿನಗೆ ಯಾವ ಮಹಾವಿಷಯವಾಗಿದ್ದಿತು?

ಈಗ ಸೂರ್ಯನ ಮಗನಾದ ಯಮನೇ ನನಗಿಂತಲೂ ಹೆಚ್ಚು ಪ್ರಭಾವವಿರುವವನೆಂದು ನಾನು ಭಾವಿಸುತ್ತೇನೆ. ಏಕೆಂದರೆ : ಅವನು ನನ್ನ ಮಗನಾದ ನಿನ್ನನ್ನು ಕೂಡ ಮರಣಧರ್ಮದೊಡನೆ ಕೂಡಿಸಿದನಲ್ಲವೇ?

ಏಷ ಪನ್ಥಾಃ ಸುಯೋಧಾನಾಂ ಸರ್ವಾಮರಗಣೇಷ್ವಪಿ ।
ಯಃ ಕೃತೇ ಹನ್ಯತೇ ಭರ್ತುಃ ಸ ಪುಮಾನ್ಸ್ವರ್ಗಮೃಚ್ಛತಿ ॥೯॥

ಯಾವನು ತನ್ನ ಸ್ವಾಮಿಯ ಸಲುವಾಗಿ ಯುದ್ಧದಲ್ಲಿ ಮಡಿಯು ವನೋ ಆ ಮನುಷ್ಯನು ಸ್ವರ್ಗಕ್ಕೆ ಹೋಗುತ್ತಾನೆ. ಇದು ಮನುಷ್ಯ-ರಾಕ್ಷಸ- ವಾನರರಿಗೆ ಮಾತ್ರವೇ ಸೀಮಿತವಾಗಿಲ್ಲ. ಸಮಸ್ತವಾದ ದೇವಗಣಗಳಲ್ಲಿರುವ ಸುಯೋಧರಿಗೂ ಇದೇ ಮಾರ್ಗವೇ ಹೇಳಲ್ಪಟ್ಟಿದೆ. (ಆದುದರಿಂದ ನಿನ್ನ ಸಾವಿಗಾಗಿ ನಾನು ಚಿಂತಿಸಹೋಗುವುದಿಲ್ಲ.)

ಇಂದ್ರಜಿತುವು ಯುದ್ಧದಲ್ಲಿ ಮರಣಹೊಂದಿದನೆಂಬ ವಾರ್ತೆಯನ್ನು ಕೇಳಿ ದೇವತೆಗಳೂ, ಎಲ್ಲ ಲೋಕಪಾಲರೂ, ಮಹರ್ಷಿಗಳೂ ಯಾವ ಭಯವೂ ಇಲ್ಲದೇ ಸುಖವಾಗಿ ನಿದ್ರಿಸುತ್ತಾರೆ. ಈಗ ನನಗೆ ಈ ಮೂರು ಲೋಕಗಳೂ, ಇದರಲ್ಲಿ ಅಂತರ್ಗತವಾಗಿರುವ ಅರಣ್ಯ-ಪರ್ವತಗಳಿಂದ ಸಂಪನ್ನವಾಗಿರುವ ಭೂಮಂಡಲವೂ ಇಂದ್ರಜಿತುವೊಬ್ಬನಿಲ್ಲದ ಕಾರಣ ಶೂನ್ಯವಾಗಿ ಕಾಣುತ್ತಿದೆ. ಸಲಗವು ಸತ್ತುಹೋದಾಗ ಗಿರಿಗುಹೆಗಳಲ್ಲಿರುವ ಹೆಣ್ಣಾನೆಗಳು ಆರ್ತನಾದ ಮಾಡುವಂತೆ–ಅಂತಃಪುರದಲ್ಲಿರುವ ರಾಕ್ಷಸಕನ್ಯೆ ಯರ ಕರುಣಾಜನಕವಾದ ಗೋಳನ್ನು ನಾನೀಗಲೇ ಕೇಳುತ್ತೇನೆ. ಶತ್ರುಸಂತಾ ಪಕನೇ! ಈಗ ನೀನು ನಿನ್ನ ಯುವರಾಜಪದವಿಯನ್ನೂ, ಲಂಕೆಯನ್ನೂ, ರಾಕ್ಷಸರನ್ನೂ, ನನ್ನನ್ನೂ ಮತ್ತು ನಿನ್ನ ಭಾರ್ಯೆಯರನ್ನೂ ಬಿಟ್ಟು ಎಲ್ಲಿಗೆ

ಹೊರಟುಹೋದೆ? ನಾನು ಮೊದಲು ಮರಣಹೊಂದಿ ನನ್ನ ಪ್ರೇತಕಾರ್ಯಗಳನ್ನು ನೀನು ಮಾಡುವುದು ಸಮುಚಿತವಾಗಿದ್ದಿತು. ಈಗ ಅದು ವಿಪರೀತವಾಗಿದೆ. ನನ್ನ ಮುಂದೆಯೇ ನೀನು ಮರಣಹೊಂದಿ ನಿನ್ನ ಪ್ರೇತಕಾರ್ಯಗಳನ್ನು ನಾನು ಮಾಡಬೇಕಾಗಿ ಬಂದಿರುವುದಲ್ಲವೇ? ಅಯ್ಯೋ! ಕುಮಾರ! ನನಗೆ ಶಲ್ಯಪ್ರಾಯರಾಗಿರುವ ಸುಗ್ರೀವ-ಲಕ್ಷ್ಮಣ-ರಾಮ ಇವರಿನ್ನೂ ಬದುಕಿಯೇ ಇದ್ದಾರೆ. ನನ್ನ ಮನಸ್ಸಿನಲ್ಲಿರುವ ಈ ಮುಳ್ಳನ್ನು ತೆಗೆದುಹಾಕದೇ ನಮ್ಮೆಲ್ಲರನ್ನೂ ಬಿಟ್ಟು ನೀನು ಎಲ್ಲಿಗೆ ಹೊರಟುಹೋದೆ?"

ಇವೇ ಮುಂತಾಗಿ ಹೇಳಿಕೊಂಡು ಗೋಳಾಡುತ್ತಿದ್ದ ರಾಕ್ಷಸಾಧಿಪತಿಯಾದ ರಾವಣನ ಮನಸ್ಸನ್ನು ಮಹಾಕೋಪವು ಆವರಿಸಿತು.

ಸ್ವಭಾವದಿಂದಲೇ ಕೋಪಿಷ್ಠನಾಗಿದ್ದ ರಾವಣನನ್ನು ಮಗನ ಸಂಬಂಧವಾದ ಮನೋವ್ಯಥೆಗಳು ಹೆಚ್ಚು ಉತ್ತೇಜಿಸಿದುವು. ಬೇಸಿಗೆಯಲ್ಲಿ ಸೂರ್ಯಕಿರಣಗಳು ಪ್ರಖರವಾಗುವಂತೆ–ಮೊದಲೇ ಕೋಪದಿಂದ ಉರಿಯುತ್ತಿದ್ದ ರಾವಣನನ್ನು ಮಗನ ಸಂಬಂಧವಾದ ಮಾನಸಿಕಚಿಂತೆಗಳು ಕೋಪದಿಂದ ಮತ್ತಷ್ಟು ಪ್ರಜ್ವಲಿಸುವಂತೆ ಮಾಡಿದುವು. ಪ್ರಲಯಕಾಲದಲ್ಲಿ ಸಮುದ್ರವು ಮೊಸಳೆಗಳಿಂದಲೂ ಮತ್ತು ದೊಡ್ಡ-ದೊಡ್ಡ ಅಲೆಗಳಿಂದಲೂ ಕೂಡಿ ಶೋಭಾಯಮಾನವಾಗಿ ಕಾಣುವಂತೆ–ರಾವಣನ ಹಣೆಯಲ್ಲಿ ಹುಬ್ಬುಗಳು ಗಂಟಿಕ್ಕಿ ಒಂದಕ್ಕೊಂದು ಸೇರಿಕೊಂಡು ಶೋಭಾಯಮಾನವಾಗಿ ಕಾಣುತ್ತಿದ್ದುವು. (ಭೀಕರವಾದ ಕೋಪದಿಂದ ರಾವಣನು ಹುಬ್ಬುಗಳನ್ನು ಗಂಟಿಕ್ಕಿದನು.) ವೃತ್ರಾಸುರನ ಮುಖದಿಂದ ಹೊಗೆಯಿಂದ ಕೂಡಿದ ಅಗ್ನಿಯು ಹೊರಹೊಮ್ಮುತ್ತಿದ್ದಂತೆ–ಕೋಪದಿಂದ ಆಕಳಿಸುತ್ತಿದ್ದ ರಾವಣನ ಬಾಯಿಂದ ಹೊಗೆಯಿಂದ ಕೂಡಿದ ಅಗ್ನಿಯು ಹೊರಹೊಮ್ಮುತ್ತಿದ್ದಿತು. ಮಗನ ವಧೆಯಿಂದ ಪರಿತಪಿಸುತ್ತಿದ್ದ ಕ್ರೋಧವಶನಾಗಿದ್ದ ರಾವಣನು ಬುದ್ಧಿಯಿಂದ ಸಮಾಲೋಚಿಸಿ ತನ್ನ ಪುತ್ರನ ವಧೆಗೆ ತಕ್ಕುದಾದ ಪ್ರತಿಕ್ರಿಯೆಯನ್ನು ಮಾಡಲು ವೈದೇಹಿಯನ್ನು ವಧಿಸುವುದೇ ಯುಕ್ತವೆಂದು ನಿಶ್ಚಯಿಸಿದನು. ಸ್ವಭಾವತಃ ಕೆಂಪಾಗಿದ್ದ ಅವನ ಕಣ್ಣುಗಳು ಕ್ರೋಧಾಗ್ನಿಯಿಂದ ಮತ್ತಷ್ಟು ಕೆಂಪಾಗಿ ಅತ್ಯಂತಪ್ರಕಾಶಮಾನವಾಗಿಯೂ ಅತಿಘೋರವಾಗಿಯೂ ಕಾಣು

ತ್ತಿದ್ದುವು. ಸ್ವಭಾವತಃ ಘೋರವಾಗಿದ್ದ ಅವನ ರೂಪವು ಕ್ರೋಧಾಗ್ನಿಯಿಂದಲೂ ಸಮಾವೃತವಾಗಿ ಎದುರಿಗೆ ನಿಂತು ನೋಡಲಾಗದ ಕ್ರುದ್ಧನಾದ ರುದ್ರನ ರೂಪದಂತೆಯೇ ಕಾಣುತ್ತಿದ್ದಿತು. ಉರಿಯುತ್ತಿರುವ ಪಂಜುಗಳಿಂದ, ಕಿಡಿಗಳಿಂದ ಕೂಡಿದ ತೈಲಬಿಂದುಗಳು ಬೀಳುವಂತೆ–ಕ್ರುದ್ಧನಾಗಿದ್ದ ರಾವಣನ ಕಣ್ಣುಗಳಿಂದ ಬಿಸಿ-ಬಿಸಿಯಾದ ನೀರಿನ ತೊಟ್ಟುಗಳು ಉದುರುತ್ತಿದ್ದುವು. ದೇವ-ದಾನವರು ಕ್ಷೀರಸಮುದ್ರವನ್ನು ಕಡೆಯುವಾಗ ಕಡೆಗೋಲಿನ ರೂಪದಲ್ಲಿದ್ದ ಮಂದರಪರ್ವತದ ಧ್ವನಿಯಂತೆ ಕೋಪದಿಂದ ಕಟ-ಕಟಾಯಿಸುತ್ತಿದ್ದ ರಾವಣನ ಹಲ್ಲುಗಳ ಶಬ್ದವು ಕೇಳಿಬರುತ್ತಿದ್ದಿತು. ಕಾಲಾಗ್ನಿಯಂತೆ ಅತಿಕ್ರುದ್ಧನಾದ ರಾವಣನು ಯಾವ ಯಾವ ದಿಕ್ಕಿನ ಕಡೆಗೆ ನೋಡುತ್ತಿದ್ದನೋ ಆಯಾ ದಿಕ್ಕುಗಳಲ್ಲಿದ್ದ ರಾಕ್ಷಸರು ಭಯಭೀತರಾಗಿ ಅಲ್ಲಲ್ಲಿಯೇ ಅಡಗಿಕೊಳ್ಳುತ್ತಿದ್ದರು. ಚರಾಚರಪ್ರಾಣಿಗಳನ್ನು ನುಂಗಿಹಾಕುವ ಇಚ್ಛೆಯುಳ್ಳ ಅಂತಕನಂತೆ ಪರಮಕ್ರುದ್ಧನಾಗಿ ಎಲ್ಲ ದಿಕ್ಕುಗಳನ್ನೂ ದಿಟ್ಟಿಸಿ ನೋಡುತ್ತಿದ್ದ ರಾವಣನ ಬಳಿಗೆ ಯಾವ ರಾಕ್ಷಸರೂ ಹೋಗಲಿಲ್ಲ. ಅನಂತರ ಯುದ್ಧದಲ್ಲಿ ರಾಕ್ಷಸರನ್ನು ಪುನಃ ತೊಡಗಿಸುವ ಸಲುವಾಗಿ ಅಡಗಿದ್ದ ರಾಕ್ಷಸರಿಗೆ ರಾವಣನು ಹೇಳಿದನು :

"ರಾಕ್ಷಸಶಿರೋಮಣಿಗಳೇ! ನಾನು ಸಾವಿರ-ಸಾವಿರ ವರ್ಷಗಳವರೆಗೂ ಕಠೋರವಾದ ತಪಸ್ಸುಗಳನ್ನು ಮಾಡುತ್ತಿದ್ದೆನು. ಒಂದೊಂದು ತಪಸ್ಸು ಮುಗಿದಾಗಲೂ ಬ್ರಹ್ಮನು ಸಂತುಷ್ಟನಾಗಿ ವರವನ್ನು ದಯಪಾಲಿಸುತ್ತಿದ್ದನು. ಆ ಎಲ್ಲ ತಪಸ್ಸುಗಳ ಫಲದಿಂದ ಮತ್ತು ಬ್ರಹ್ಮನ ಕೃಪೆಯಿಂದ ನನಗೆ ಅಸುರರಿಂದಾಗಲೀ, ದೇವತೆಗಳಿಂದಾಗಲೀ ಭಯವೆಂಬುದೇ ಇಲ್ಲ. ನನ್ನ ಹತ್ತಿರ ಬ್ರಹ್ಮನು ಅನುಗ್ರಹಿಸಿಕೊಟ್ಟಿರುವ ಸೂರ್ಯನ ಪ್ರಭೆಗೆ ಸಮಾನವಾದ ಪ್ರಭೆಯಿಂದ ಕೂಡಿರುವ ಕವಚವಿದೆ. ಆ ಕವಚವನ್ನು ತೊಟ್ಟು ದೇವಾಸುರರೊಡನೆ ಮಾಡಿದ ಯುದ್ಧದಲ್ಲಿ ವಜ್ರಾಯುಧದ ಪ್ರಹಾರದಿಂದಲೂ ಆ ದಿವ್ಯಕವಚವು ಛಿನ್ನ-ಭಿನ್ನವಾಗಲಿಲ್ಲ. ಅದನ್ನು ಧರಿಸಿ ರಥದಲ್ಲಿ ಕುಳಿತು ರಣಭೂಮಿಗೆ ಹೋಗುವ ನನ್ನನ್ನು ಯಾರುತಾನೇ ಎದುರಿಸಬಲ್ಲರು? ಸಾಕ್ಷಾತ್ ಇಂದ್ರನು ಕೂಡ ನನ್ನೊಡನೆ ಯುದ್ಧಮಾಡುವ ಸಾಹಸವನ್ನು ಮಾಡಲಾರನು. ದೇವಾಸುರಯುದ್ಧದಲ್ಲಿ ನನ್ನ ಅಪ್ರತಿಮಸಾಹಸವನ್ನು ಕಂಡು

ಪ್ರಸನ್ನನಾದ ಚತುರ್ಮುಖನು ನನಗೆ ಮಹಾಧನುಸ್ಸನ್ನು ಬಾಣಗಳೊಡನೆ ಅನುಗ್ರಹಿಸಿಕೊಟ್ಟಿರುವನು. ಮುಂದೆ ನಡೆಯಲಿರುವ ಮಹಾಯುದ್ಧದಲ್ಲಿ ರಾಮ-ಲಕ್ಷ್ಮಣರನ್ನು ಸಂಹರಿಸಲು ನೂರಾರು ಮಂಗಳವಾದ್ಯಗಳೊಡನೆ ಆ ನನ್ನ ಧನುಸ್ಸನ್ನೆತ್ತಿಕೊಂಡು ಇಲ್ಲಿಗೆ ತನ್ನಿರಿ."

ಪೌರುಷದಿಂದ ಇಷ್ಟು ಮಾತನ್ನಾಡಿದರೂ ಮಗನ ಮರಣದಿಂದ ಶೋಕತಪ್ತನಾಗಿದ್ದ, ಅಂತೆಯೇ ಪರಮಕ್ರುದ್ಧನೂ ಆಗಿದ್ದ, ಮಹಾಕ್ರೂರಿಯಾದ ರಾವಣನು ಪುನಃ ಸೀತೆಯನ್ನು ಕೊಲ್ಲಬೇಕೆಂದು ಮನಸ್ಸಿನಲ್ಲಿ ನಿಶ್ಚಯಿಸಿದನು. ಆಗ ಅವನ ಕಣ್ಣುಗಳು ಕೆಂಡದಂತೆ ಕೆಂಪಾಗಿದ್ದುವು. ಸ್ವರೂಪವು ಅತಿ ಘೋರವಾಗಿದ್ದು, ಭಯಂಕರವಾಗಿ ಕಾಣುತ್ತಿದ್ದಿತು. ಆದರೂ ಪುತ್ರ ಶೋಕದಿಂದ ದೀನನಾಗಿದ್ದನು. ದೈನ್ಯದಿಂದ ಕುಗ್ಗಿದ ಧ್ವನಿಗಳುಳ್ಳ ರಾಕ್ಷಸರಿಗೆ ಹೇಳಿದನು : "ನಿಶಾಚರರೇ! ನನ್ನ ಮಗನು ವಾನರರನ್ನು ವಂಚಿಸಲು ಮಾಯಾಸೀತೆಯನ್ನು ತೋರಿಸಿ–ಇವಳೇ ನಿಜವಾದ ಸೀತೆಯೆಂದು ಹೇಳಿ–ಅವರೆಲ್ಲರ ಸಮ್ಮುಖದಲ್ಲಿಯೇ ಆ ಮಾಯಾಸೀತೆಯನ್ನು ಸಂಹರಿಸಿದನು. ಕ್ಷತ್ರಿಯಾಧಮನಾದ ರಾಮನಲ್ಲಿಯೇ ಅನುರಾಗವನ್ನಿಟ್ಟುಕೊಂಡಿರುವ ಆ ಸೀತೆಯನ್ನು ಈಗ ನಾನು ನಿಜವಾಗಿಯೇ ಕೊಂದು ಆತ್ಮತೃಪ್ತಿಯನ್ನು ಪಡೆದುಕೊಳ್ಳುವೆನು."

ರಾವಣನು ಸಚಿವರಿಗೆ ಹೀಗೆ ಹೇಳಿ ಆಕಾಶದಂತೆ ನಿರ್ಮಲವಾಗಿ ಮತ್ತು ಸಮಸ್ತಗುಣಗಳಿಂದಲೂ ಸಂಪನ್ನವಾಗಿದ್ದ ಕತ್ತಿಯನ್ನು ಮೇಲೆತ್ತಿದನು. ಪುತ್ರಶೋಕದಿಂದ ವ್ಯಾಕುಲನಾಗಿದ್ದ ರಾವಣನು ಅತ್ಯಂತವೇಗದಿಂದ ಮುಂದೆ ಧಾವಿಸಿದನು. ಅವನ ಭಾರ್ಯೆಯರೂ ಮತ್ತು ಮಂತ್ರಿಗಳೂ ಅವನನ್ನನುಸರಿಸಿದರು. ಕತ್ತಿಯನ್ನೆತ್ತಿಕೊಂಡು ಸೀತೆಯಿದ್ದ ಅಶೋಕವನದ ಕಡೆಗೆ ಹೋಗುತ್ತಿದ್ದ ರಾವಣನನ್ನು ನೋಡಿ ಅವನನ್ನು ಅನುಸರಿಸಿ ಬರುತ್ತಿದ್ದ ಮಂತ್ರಿಗಳು ಸಿಂಹನಾದಗಳನ್ನು ಮಾಡಿದರು. ಕ್ರುದ್ಧನಾಗಿದ್ದ ರಾವಣನನ್ನು ನೋಡಿ ಪರಸ್ಪರವಾಗಿ ಆಲಿಂಗನೆಮಾಡಿಕೊಂಡು ಮಂತ್ರಿಗಳು ಮಾತನಾಡಿಕೊಂಡರು :

"ಇಂದು ನಮ್ಮ ರಾಜನಾದ ಈ ರಾವಣನನ್ನು ನೋಡಿ ರಾಮ-

ಲಕ್ಷ್ಮಣರಿಬ್ಬರೂ ವ್ಯಥೆಪಡುತ್ತಾರೆ. ಏಕೆಂದರೆ : ಹಿಂದೆ ಕ್ರುದ್ಧನಾಗಿದ್ದ ಇವನು ನಾಲ್ವರು ಲೋಕಪಾಲರನ್ನೂ ಜಯಿಸಿದ್ದನು. ಅಂತೆಯೇ ಯುದ್ಧಗಳಲ್ಲಿ ಅನೇಕಶತ್ರುಗಳನ್ನು ಸಂಹರಿಸಿರುವನು. ಮೂರು ಲೋಕಗಳಲ್ಲಿರುವ ರತ್ನಕ್ಕೆ ಸಮಾನವಾದ ವಸ್ತುಗಳೆಲ್ಲವನ್ನೂ ಸಂಗ್ರಹಿಸಿ ನಮ್ಮ ರಾಜನು ಅವೆಲ್ಲವನ್ನೂ ಉಪಭೋಗಿಸುತ್ತಿದ್ದಾನೆ. ಪರಾಕ್ರಮದಲ್ಲಾಗಲೀ, ಬಲದಲ್ಲಾಗಲೀ ಇವನಿಗೆ ಸಾಟಿಯಾದವರು ಈ ಭೂಮಂಡಲದಲ್ಲಿಯೇ ಮತ್ತೊಬ್ಬರಿಲ್ಲ."

ಅವರೆಲ್ಲರೂ ಹೀಗೆ ಮಾತನಾಡುತ್ತಿರಲು ಕೋಪದಿಂದ ಬುದ್ಧಿಗೆಟ್ಟಿದ್ದ ರಾವಣನು ವಧೆಮಾಡುವ ಸಲುವಾಗಿ ಅಶೋಕವನದಲ್ಲಿದ್ದ ಸೀತೆಯ ಬಳಿಗೆ ಧಾವಿಸಿದನು. ಹಿತಕರವಾದ ಬುದ್ಧಿವಾದವನ್ನು ಹೇಳುವ ಸುಹೃದರು ರಾವಣನನ್ನು ತಡೆಯಲು ಪ್ರಯತ್ನಿಸಿದರು. ಅವರೆಲ್ಲರ ಮಾತುಗಳನ್ನೂ ಅನಾದರಿಸಿದ ರಾವಣನು–ಆಕಾಶದಲ್ಲಿ ರೋಹಿಣೀನಕ್ಷತ್ರವನ್ನು ಆಕ್ರಮಿಸುವ ದುಷ್ಟಗ್ರಹದಂತೆ–ಸೀತೆಯನ್ನು ಆಕ್ರಮಿಸಿದನು. ರಾಕ್ಷಸಿಯರಿಂದ ರಕ್ಷಿಸ ಲ್ಪಡುತ್ತಿದ್ದ ಅನಿಂದ್ಯಳಾದ ಜಾನಕಿಯು ಕ್ರುದ್ಧನಾದ ರಾವಣನು ಕತ್ತಿಯ ನ್ನೆತ್ತಿಕೊಂಡು ಬರುತ್ತಿರುವುದನ್ನು ನೋಡಿದಳು. ಹಿತೈಷಿಗಳಿಂದ ತಡೆಯ ಲ್ಪಡುತ್ತಿದ್ದರೂ ಮುನ್ನುಗ್ಗಿ ಬರುತ್ತಿದ್ದ ರಾವಣನನ್ನು ನೋಡಿ, ವೈದೇಹಿಯು ಸಂತಾಪಗೊಂಡು ಕಣ್ಣೀರಿಡುತ್ತಾ ತನ್ನಲ್ಲಿಯೇ ಹೇಳಿಕೊಂಡಳು :

"ದುರ್ಬುದ್ಧಿಯವನಾದ ಈ ರಾಕ್ಷಸನು ಅತ್ಯಂತಕ್ರುದ್ಧನಾಗಿ ಇತ್ತ ಕಡೆಗೇ ಧಾವಿಸಿಬರುತ್ತಿದ್ದಾನೆ. ಸನಾಥೆಯಾದ ನನ್ನನ್ನು ಅನಾಥೆಯೋಪಾದಿ ಯಲ್ಲಿ ಸಂಹರಿಸುವನು. ಪತಿಪರಾಯಣೆಯಾಗಿರುವ ನನ್ನನ್ನು ಈ ದುಷ್ಟನು ಹಲವಾರು ಬಾರಿ ತನ್ನ ಪತ್ನಿಯಾಗುವಂತೆ ಪ್ರಚೋದಿಸಿದನು. ಆ ಸಮಯ ದಲ್ಲಿ ನಾನು ಸಾಧ್ಯವಿಲ್ಲವೆಂದು ಸ್ಪಷ್ಟವಾಗಿ ಹೇಳಿಬಿಟ್ಟೆನು. ಹೀಗೆ ಪ್ರಲೋ ಭನಗಳಿಂದ ನನ್ನನ್ನು ಹೊಂದಲು ಸಾಧ್ಯವಾಗದೇ ಇವನು ನಿರಾಶೆಗೊಂಡಿರು ವನೆಂಬುದು ಸ್ಪಷ್ಟವಾಗಿದೆ. ಈ ಕಾರಣದಿಂದಲೇ ಕ್ರೋಧ-ಮೋಹ ಗಳೆರಡರಿಂದಲೂ ಕೂಡಿರುವ ಇವನು ನನ್ನನ್ನು ಕೊಲ್ಲಲು ಬಂದಿರುವನು. ಅಥವಾ ನನ್ನ ಸಲುವಾಗಿ ಯುದ್ಧಮಾಡುತ್ತಿದ್ದ ನರಶ್ರೇಷ್ಠರಾದ ಸೋದರರಾದ ರಾಮ-ಲಕ್ಷ್ಮಣರನ್ನು ಯುದ್ಧದಲ್ಲಿ ಈ ಅನಾರ್ಯನೇನಾದರೂ ಸಂಹರಿಸಿಬಿಟ್ಟನೋ? ಏಕೆಂದರೆ : ನಾನು ಸ್ವಲ್ಪಹೊತ್ತಿಗೆ ಮೊದಲು ರಾಕ್ಷಸರ

ಭಯಂಕರವಾದ ಸಿಂಹನಾದಗಳನ್ನು ಕೇಳಿದೆನು. ಹರ್ಷಭರಿತರಾದ ಅನೇಕ ನಿಶಾಚರರು ತಮ್ಮ ಪ್ರಿಯಬಂಧುಗಳೊಡನೆ ಹರ್ಷೋತ್ಸಾಹಗಳಿಂದ ಕೂಗಾಡುತ್ತಿದ್ದರು. ಅಯ್ಯೋ! ನನ್ನ ನಿಮಿತ್ತವಾಗಿ ರಾಜಪುತ್ರರ ವಧೆಯಾಗಿದ್ದರೆ ನನ್ನ ಈ ಜೀವನಕ್ಕೇ ಧಿಕ್ಕಾರವಿರಲಿ!

ಅಥವಾ ಹೀಗೇನಾದರೂ ಆಗಿರಬಹುದೇ? ಪುತ್ರಶೋಕದಿಂದ ಪರಿತಪ್ತನಾಗಿರುವ, ಪಾಪಕಾರ್ಯಗಳನ್ನು ಮಾಡುವುದರಲ್ಲಿಯೇ ನಿಶ್ಚಿತವಾದ ಬುದ್ಧಿಯುಳ್ಳ, ಭಯಂಕರನಾದ ಈ ರಾಕ್ಷಸನು ರಾಮ-ಲಕ್ಷ್ಮಣರನ್ನು ಸಂಹರಿಸದೆಯೇ ನನ್ನನ್ನು ಸಂಹರಿಸಲು ಬಂದಿರಬಹುದೇ?

ಹನುಮನ್ತಸ್ತು ತದ್ವಾಕ್ಯಂ ನ ಕೃತಂ ಕ್ಷುದ್ರಯಾ ಮಯಾ ।
ಯದ್ಯಹಂ ತಸ್ಯ ಪೃಷ್ಠೇನ ತದಾ ಯಾಯಾಮನಿನ್ದಿತಾ ।
ನಾದ್ಯೈವಮನುಶೋಚೇಯಂ ಭರ್ತುರಙ್ಕಗತಾ ಸತೀ ॥೩೩॥

ಅಲ್ಪಬುದ್ಧಿಯವಳಾದ ನಾನು ಹನುಮಂತನು ಆಗ ಹೇಳಿದ ಮಾತನ್ನು ಕೇಳಲಿಲ್ಲ. ಶ್ರೀರಾಮನು ರಾವಣನನ್ನು ಜಯಿಸಿ ನನ್ನನ್ನು ಕರೆದು ಕೊಂಡು ಹೋಗದಿದ್ದರೂ ಚಿಂತೆಯಿಲ್ಲವೆಂದು ನಿರ್ಧರಿಸಿ ಹನುಮಂತನು ಹೇಳಿದಂತೆ ನಾನೇನಾದರೂ ಅವನ ಬೆನ್ನಮೇಲೆ ಕುಳಿತು ಹೊರಟು ಹೋಗಿ ದ್ದರೆ ಈಗ ಈ ಪರಿಯಲ್ಲಿ ಶೋಕಪಡಬೇಕಾಗಿಯೂ ಇರಲಿಲ್ಲ. ಈ ವೇಳೆ ಗಾಗಲೇ ನಾನು ನನ್ನ ಪ್ರಿಯತಮನ ತೊಡೆಯನ್ನು ಸೇರಿಬಿಡುತ್ತಿದ್ದೆನು.

ಒಬ್ಬನೇ ಮಗನನ್ನು ಹೊಂದಿರುವ ಕೌಸಲ್ಯೆಯೇನಾದರೂ ಯುದ್ಧದಲ್ಲಿ ತನ್ನ ಏಕಮಾತ್ರ ಪುತ್ರನಾದ ಶ್ರೀರಾಮನು ಮಡಿದನೆಂಬ ವಾರ್ತೆಯನ್ನು ಕೇಳಿದಳಾದರೆ–ಮರುಕ್ಷಣದಲ್ಲಿಯೇ ಅವಳ ಎದೆಯು ಒಡೆದೇ ಹೋಗುತ್ತದೆ. ಅವಳು ಗೋಳಾಡುತ್ತಾ ಮಹಾತ್ಮನಾದ ಶ್ರೀರಾಮನ ಬಾಲ್ಯ, ಯೌವನ, ಇದುವರೆಗೆ ಅವನು ಮಾಡಿರುವ ಧರ್ಮಕಾರ್ಯಗಳು, ಅವನ ಮನಮೋಹಕವಾದ ರೂಪ–ಈ ಎಲ್ಲವನ್ನೂ ಒಂದಾದ ಮೇಲೊಂದರಂತೆ ಸ್ಮರಿಸಿಕೊಳ್ಳುವಳು. ತನ್ನ ಮಗನು ಮಡಿಯಲು ಜೀವನದಲ್ಲಿಯೇ ನಿರಾಶೆಹೊಂದುವ ಮತ್ತು ಬುದ್ಧಿಗೆಡುವ ಕೌಸಲ್ಯಾದೇವಿಯು ಮಗನಿಗೆ ಶ್ರಾದ್ಧಕರ್ಮವನ್ನು ಮಾಡಿ ಬೆಂಕಿಯಲ್ಲಾದರೂ ಬೀಳುತ್ತಾಳೆ, ಮಡುವಿನಲ್ಲಾದರೂ ಧುಮುಕುತ್ತಾಳೆ. ಇದು ನಿಶ್ಚಯ. ಯಾವಳ ಕಾರಣದಿಂದ

ಕೌಸಲ್ಯಾದೇವಿಯು ಇಂತಹ ದಾರುಣವಾದ ಶೋಕವನ್ನು ಹೊಂದಲಿರುವಳೋ–ಅಂತಹ ಕುಲಟೆಯಾದ, ಪಾಪನಿಶ್ಚಯಳಾದ ಮಂಥರೆಗೆ ಧಿಕ್ಕಾರವಿರಲಿ!"

ಚಂದ್ರನಿಂದ ಬೇರ್ಪಟ್ಟು ಬೇರೆಯ ಗ್ರಹಕ್ಕೆ ವಶಳಾದ ರೋಹಿಣಿ ಯಂತೆ ಕಾಣುತ್ತಿದ್ದ ಸೀತಾದೇವಿಯು ಹೀಗೆ ಗೋಳಾಡುತ್ತಿರುವುದನ್ನು ಕಂಡು ಶೀಲವಂತನಾದ, ಶುಚಿಯಾದ, ಮೇಧಾವಿಯಾದ ಸುಪಾರ್ಶ್ವನೆಂಬ ರಾವಣನ ಮಂತ್ರಿಯು ಇತರ ಸಚಿವರಿಂದ ತಡೆಯಲ್ಪಡುತ್ತಿದ್ದರೂ ಪರಿಗಣಿಸದೇ ರಾವಣನಿಗೆ ಹೇಳಿದನು :



"ಮಹಾರಾಜ! ದಶಗ್ರೀವನೇ! ನೀನು ಸಾಕ್ಷಾತ್ ಕುಬೇರನಿಗೆ ತಮ್ಮನಾಗಿರುವೆ. ಆದರೂ ಕ್ರೋಧಕ್ಕೆ ವಶನಾಗಿ ಧರ್ಮವನ್ನು ಪರಿತ್ಯಜಿಸಿ ವೈದೇಹಿಯನ್ನು ಕೊಲ್ಲಲು ಅಪೇಕ್ಷಿಸುತ್ತಿರುವೆಯಲ್ಲವೇ?

ವೇದವಿದ್ಯಾವ್ರತಸ್ನಾತಃ ಸ್ವಕರ್ಮನಿರತಃ ಸದಾ ।
ಸ್ತ್ರಿಯಾಃ ಕಸ್ಮಾದ್ವಧಂ ವೀರ ಮನ್ಯಸೇ ರಾಕ್ಷಸೇಶ್ವರ ॥೬೩॥

ರಾಕ್ಷಸೇಶ್ವರನೇ! ನೀನು ವಿಧಿಪೂರ್ವಕವಾಗಿ ಬ್ರಹ್ಮಚರ್ಯದ ಪಾಲನೆ ಮಾಡುತ್ತಾ ವೇದಗಳನ್ನು ಅಧ್ಯಯನಮಾಡಿ ಸ್ನಾತಕನಾಗಿ ಗುರುಕುಲದಿಂದ ಬಂದಿರುವೆ. ಯಾವಾಗಲೂ ವರ್ಣಾಶ್ರಮಗಳಿಗೆ ಅನುಸಾರವಾಗಿ ನಿನ್ನ ಕರ್ತವ್ಯಗಳನ್ನು ಪರಿಪಾಲಿಸುತ್ತಿರುವೆ. ಹೀಗಿದ್ದರೂ ಸ್ತ್ರೀಯೊಬ್ಬಳ ವಧೆ ಮಾಡುವುದು ಉಚಿತವೆಂದು ಹೇಗೆ ಭಾವಿಸುತ್ತಿರುವೆ?

ಮೈಥಿಲೀಂ ರೂಪಸಂಪನ್ನಾಂ ಪ್ರತ್ಯವೇಕ್ಷಸ್ವ ಪಾರ್ಥಿವ ।
ತಸ್ಮಿನ್ನೇವ ಸಹಾಸ್ಮಾಭೀ ರಾಘವೇ ಕ್ರೋಧಮುತ್ಸೃಜ ॥೬೪॥

ರಾವಣೇಶ್ವರ! ರೂಪಸಂಪನ್ನೆಯಾದ ಮೈಥಿಲಿಯ ಕಡೆಗೆ ನೋಡು. (ಸೌಂದರ್ಯದ ಖನಿಯೇ ಆಗಿರುವ ಇವಳ ಮೇಲೆ ಕೋಪಗೊಂಡು ಇವಳನ್ನು ವಧಿಸಲು ನಿನಗೆ ಹೇಗೆ ತಾನೇ ಮನಸ್ಸು ಬರುವುದು?) ನಮ್ಮೊಡನೆ ಯುದ್ಧಭೂಮಿಗೆ ಬಂದು ಈ ನಿನ್ನ ಎಲ್ಲ ಕೋಪವನ್ನೂ ರಾಮನ ಮೇಲೆ ಹರಿಯಬಿಡು.

ಅಭ್ಯುತ್ಥಾನಂ ತ್ವಮದ್ಯೈವ ಕೃಷ್ಣಪಕ್ಷಚತುರ್ದಶೀಮ್ ।
ಕೃತ್ವಾ ನಿರ್ಯಾಹ್ಯಮಾವಾಸ್ಯಾಂ ವಿಜಯಾಯ ಬಲೈರ್ವೃತಃ ॥೬೫॥

ಇಂದು (ಫಾಲ್ಗುಣ) ಕೃಷ್ಣಚತುರ್ದಶಿಯಾಗಿದೆ. ಆದುದರಿಂದ ನೀನು ಇಂದೇ ಯುದ್ಧಕ್ಕೆ ಸಿದ್ಧತೆಯನ್ನು ಮಾಡಿ ನಾಳೆ ಅಮಾವಾಸ್ಯೆಯ ದಿನ ಸೈನಿಕರೊಡನೆ ವಿಜಯವನ್ನು ಗಳಿಸಲು ನಿರ್ಗಮಿಸು.

ಶೂರೋ ಧೀಮಾನ್ರಥೀ ಖಡ್ಗೀ ರಥಪ್ರವರಮಾಸ್ಥಿತಃ ।
ಹತ್ವಾ ದಾಶರಥಿಂ ರಾಮಂ ಭವಾನ್ಪ್ರಾಪ್ಸ್ಯತಿ ಮೈಥಿಲೀಮ್ ॥೬೬॥

ಮಹಾರಾಜ! ನೀನು ಮಹಾಶೂರನೂ, ಬುದ್ಧಿವಂತನೂ, ಮಹಾರಥಿಯೂ ಆಗಿರುವೆ. ದಿವ್ಯವಾದ ರಥದಲ್ಲಿ ಕುಳಿತು ಖಡ್ಗಪಾಣಿಯಾಗಿ ಶತ್ರುವಿನೊಡನೆ ಯುದ್ಧವನ್ನು ಮಾಡು. ಯುದ್ಧದಲ್ಲಿ ದಶರಥನ ಮಗನಾದ ರಾಮನನ್ನು ಸಂಹರಿಸಿದನಂತರ ಸೀತೆಯನ್ನು ಪಡೆದುಕೊಳ್ಳುವೆ."

ದುರಾತ್ಮನಾದ ರಾವಣನು, ಸುಹೃದನು ಹೇಳಿದ ಧರ್ಮಸಮ್ಮತವಾದ

ಮಾತನ್ನು ಅಂಗೀಕರಿಸಿ ಮನೆಗೆ ಹಿಂದಿರುಗಿದನು. ಅನಂತರ ಸುಹೃದರೊಡನೆ ರಾಜಸಭೆಗೆ ಪುನಃ ಹೋದನು.*

೯೨ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೯೩ನೆಯ ಸರ್ಗ

ಶ್ರೀರಾಮನಿಂದ ರಾಕ್ಷಸಸೈನ್ಯದ ಸಂಹಾರ

ಸ ಪ್ರವಿಶ್ಯ ಸಭಾಂ ರಾಜಾ ದೀನಃ ಪರಮದುಃಖಿತಃ ।
ನಿಷಸಾದಾಸನೇ ಮುಖ್ಯೇ ಸಿಂಹಃ ಕ್ರುದ್ಧ ಇವ ಶ್ವಸನ್ ॥೧॥

ದೀನನಾಗಿದ್ದ, ಅತ್ಯಂತದುಃಖಿತನಾಗಿದ್ದ ರಾವಣನು ರಾಜಸಭೆಗೆ ಹೋಗಿ ಕೋಪಗೊಂಡ ಸಿಂಹದಂತೆ ನಿಟ್ಟುಸಿರುಬಿಡುತ್ತಾ ಶ್ರೇಷ್ಠವಾದ ಸಿಂಹಾಸನದಲ್ಲಿ ಕುಳಿತನು.

ಪುತ್ರವ್ಯಸನದಿಂದ ಪೀಡಿತನಾಗಿದ್ದ ಮಹಾಬಲಿಷ್ಠನಾದ ರಾವಣನು ಕೈಜೋಡಿಸಿ ಸೇನಾಪತಿಗಳಿಗೆ ಹೇಳಿದನು :

"ಸೇನಾನಾಯಕರೇ! ಈಗ ನೀವೆಲ್ಲರೂ ನಮ್ಮಲ್ಲಿರುವ ಸಮಸ್ತ ಗಜಾಶ್ವ-ರಥ-ಪದಾತಿಸೈನಿಕರೊಡನೆ ಯುದ್ಧಕ್ಕೆ ಹೊರಡಿರಿ. ರಾಮನೊಬ್ಬ

---

* ವ್ಯಾಖ್ಯಾನಕಾರರೊಬ್ಬರು ಯುದ್ಧದ ವಿವರಣೆಯನ್ನು ಹೀಗೆ ಹೇಳಿದ್ದಾರೆ : **ತತೋಽಸ್ತಮಗಮತ್ಸೂರ್ಯಃ ಸಂಧ್ಯಯಾ ಪ್ರತಿರಞ್ಜಿತಃ । ಪೂರ್ಣಚನ್ದ್ರಪ್ರದೀಪಾ ಚ ಕ್ಷಪಾ ಸಮಭಿವರ್ತತ ॥** ಎಂಬ ವಚನದಂತೆ ಹುಣ್ಣಿಮೆಯ ದಿನ ಸುವೇಲಪರ್ವತ ಪ್ರವೇಶ. ಕೃಷ್ಣಪಕ್ಷದ ಪಾಡ್ಯಮಿಯ ದಿನ ಯುದ್ಧದ ಆರಂಭ. ಅಂದಿನ ರಾತ್ರಿಯೇ ನಾಗಪಾಶದಿಂದ ರಾಮ-ಲಕ್ಷ್ಮಣರ ಬಂಧನ ಮತ್ತು ಗರುಡನಿಂದ ವಿಮೋಕ್ಷಣ. ಬಿದಿಗೆಯ ದಿವಸ ಧೂಮ್ರಾಕ್ಷನ ವಧೆ. ತದಿಗೆಯ ದಿನ ವಜ್ರದಂಷ್ಟ್ರನ ವಧೆ. ಚತುರ್ಥಿಯ ದಿನ ಅಕಂಪನನ ವಧೆ. ಪಂಚಮಿಯಂದು ಪ್ರಹಸ್ತನ ವಧೆ. ಷಷ್ಠಿಯ ದಿನ ರಾವಣಕಿರೀಟಭಂಗ. ಸಪ್ತಮಿಯ ದಿನ ಕುಂಭಕರ್ಣನ ವಧೆ. ಅಷ್ಟಮಿಯ ದಿನ ಅತಿಕಾಯಾದಿಗಳ ಸಂಹಾರ. ನವಮಿಯ ದಿನ ಪುನಃ ಇಂದ್ರಜಿತುವಿನೊಡನೆ ಯುದ್ಧ. ಅಂದಿನ ರಾತ್ರಿಯಲ್ಲಿಯೇ ಕುಂಭ-ನಿಕುಂಭಾದಿಗಳ ವಧೆ. ದಶಮಿಯ ದಿನ ಮಕರಾಕ್ಷನ ವಧೆ. ಏಕಾದಶೀ, ದ್ವಾದಶೀ, ತ್ರಯೋದಶಿಗಳಲ್ಲಿ ಇಂದ್ರಜಿತುವಿ ನೊಡನೆ ಯುದ್ಧ. ತ್ರಯೋದಶಿಯ ದಿನವೇ ಇಂದ್ರಜಿತುವಿನ ವಧೆ. ಚತುರ್ದಶಿಯ ದಿವಸ ಯುದ್ಧಸಿದ್ಧತೆ. ಅಮಾವಾಸ್ಯೆಯ ದಿವಸ ರಾವಣನ ಪ್ರಸ್ಥಾನ.

ನನ್ನು ನೀವೆಲ್ಲರೂ ಸುತ್ತುವರಿದು ವರ್ಷಾಕಾಲದಲ್ಲಿ ಮೇಘಗಳು ಮಳೆಗರೆಯುವಂತೆ ಬಾಣಗಳ ಮಳೆಗರೆಯುತ್ತಾ ಯುದ್ಧದಲ್ಲಿ ಅವನನ್ನು ಸಂಹರಿಸಿರಿ. ಅಥವಾ ನಾನೇ ನಾಳೆಯ ದಿನ ನಿಮ್ಮೊಡನೆ ಸಮರಭೂಮಿಗೆ ಬಂದು ಅಲ್ಲಿ ನಡೆಯುವ ರಾಮ-ರಾವಣರ ಮಹಾಯುದ್ಧದಲ್ಲಿ ರಾಮನನ್ನು ತೀಕ್ಷ್ಣವಾದ ಬಾಣಗಳಿಂದ ಶರೀರಾದ್ಯಂತವಾಗಿ ಗಾಯಗೊಳಿಸಿ ನೀವೆಲ್ಲರೂ ನೋಡುತ್ತಿರುವಂತೆಯೇ ಸಂಹರಿಸುತ್ತೇನೆ."

ರಾವಣನು ಹೀಗೆ ಹೇಳುತ್ತಲೇ ಸೇನಾನಾಯಕರು ನಾನಾಪ್ರಕಾರವಾದ ಸೈನ್ಯಸಮೂಹಗಳಿಂದ ಕೂಡಿದವರಾಗಿ ಲಂಕೆಯಿಂದ ಹೊರಟರು. ವಾನರ-ರಾಕ್ಷಸರ ನಡುವೆ ಘೋರವಾದ ಯುದ್ಧವು ಪ್ರಾರಂಭವಾಯಿತು. ರಾಕ್ಷಸರು ಪರಿಘ-ಪಟ್ಟಿಶ-ಬಾಣ-ಖಡ್ಗ-ಗಂಡುಗೊಡಲಿ—ಇವೇ ಮುಂತಾದ ಶರೀರನಾಶಕವಾದ ಆಯುಧಗಳಿಂದ ವಾನರರನ್ನು ಪ್ರಹರಿಸಿದರು. ಅದಕ್ಕೆ ಪ್ರತಿಯಾಗಿ ವಾನರರು ಕೂಡ ವೃಕ್ಷಗಳನ್ನೂ ಪರ್ವತಶಿಖರಗಳನ್ನೂ ಕಿತ್ತು ರಾಕ್ಷ ಸರ ಮೇಲೆಸೆದರು. ಸೂರ್ಯೋದಯದ ಸಮಯದಿಂದಲೂ ನಡೆಯುತ್ತಿದ್ದ ವಾನರ-ರಾಕ್ಷಸರ ಆ ಯುದ್ಧವು ಭಯಂಕರವಾದ ರೂಪವನ್ನು ತಾಳಿತು. ವಿಚಿತ್ರವಾದ ಗದೆಗಳಿಂದಲೂ, ಪ್ರಾಸಗಳಿಂದಲೂ, ಖಡ್ಗಗಳಿಂದಲೂ, ಗಂಡುಗೊಡಲಿಗಳಿಂದಲೂ, ವೃಕ್ಷ-ಶಿಖರಗಳಿಂದಲೂ ವಾನರ-ರಾಕ್ಷಸರು ಒಬ್ಬರನ್ನೊಬ್ಬರು ಬಡಿದಾಡುತ್ತಿದ್ದರು. ಹೀಗೆ ಭಯಂಕರವಾದ ಯುದ್ಧವು ನಡೆಯುತ್ತಿರುವಾಗ ಬೆಟ್ಟದಂತೆ ಎದ್ದಿದ್ದ ಧೂಳಿಯು ರಾಕ್ಷಸ-ವಾನರರ ಶರೀರಗಳಿಂದ ಹರಿಯುತ್ತಿದ್ದ ರಕ್ತದಿಂದ ಸಂಪೂರ್ಣವಾಗಿ ಉಡುಗಿ ಹೋಯಿತು. ಅದು ಪರಮಾದ್ಭುತವಾಗಿ ಕಂಡಿತು. ರಣಭೂಮಿಯಲ್ಲಿ ಹರಿಯುತ್ತಿದ್ದ ರಕ್ತನದಿಯಲ್ಲಿ—ಕಟ್ಟಿಗೆಗಳು ತೇಲಿಹೋಗುವಂತೆ—ವಾನರ-ರಾಕ್ಷಸರ ಮೃತಶರೀರಗಳೇ ತೇಲಿಹೋಗುತ್ತಿದ್ದುವು. ಸತ್ತುಬಿದ್ದಿದ್ದ ಆನೆಗಳು ಮತ್ತು ಮುರಿದು ಬಿದ್ದಿದ್ದ ರಥಗಳು ಆ ನದಿಯ ತೀರಪ್ರದೇಶದಂತೆ ಕಾಣುತ್ತಿದ್ದುವು. ಬಾಣಗಳು ಮೀನುಗಳಂತೆಯೂ, ಎತ್ತರವಾದ ಧ್ವಜಗಳು ನದಿಯ ದಡಗಳಲ್ಲಿರುವ ವೃಕ್ಷಗಳಂತೆಯೂ ಕಾಣುತ್ತಿದ್ದುವು. ರಕ್ತದಿಂದ ತೋಯ್ದುಹೋಗಿದ್ದ ವಾನರರು ಅಲ್ಲಿಂದಿಲ್ಲಿಗೂ ಇಲ್ಲಿಂದಲ್ಲಿಗೂ ಹಾರುತ್ತಾ ನೆಗೆಯುತ್ತಾ ರಾಕ್ಷಸರ ಧ್ವಜ-ಕವಚ-ರಥಾಶ್ವಗಳನ್ನೂ, ನಾನಾ

ವಿಧವಾದ ಆಯುಧಗಳನ್ನೂ ಧ್ವಂಸಮಾಡತೊಡಗಿದರು. ತೀಕ್ಷ್ಣವಾದ ಹಲ್ಲುಗಳಿಂದಲೂ ಮತ್ತು ಉಗುರುಗಳಿಂದಲೂ ರಾಕ್ಷಸರ ಕೂದಲು-ಕಿವಿ-ಹಣೆ-ಮೂಗುಗಳನ್ನು ಕಚ್ಚುತ್ತಿದ್ದರು ಮತ್ತು ಪರಚುತ್ತಿದ್ದರು. ಹಣ್ಣು ಗಳಿಂದ ತುಂಬಿರುವ ಮರವನ್ನು ನೂರಾರು ಪಕ್ಷಿಗಳು ಮುತ್ತಿಕೊಳ್ಳುವಂತೆ ಒಬ್ಬೊಬ್ಬ ರಾಕ್ಷಸನನ್ನೂ ನೂರಾರು ವಾನರರು ಮುತ್ತಿಕೊಂಡು ಎಡಬಿಡದೇ ಪೀಡಿಸುತ್ತಿದ್ದರು. ಅದಕ್ಕೆ ಪ್ರತಿಯಾಗಿ ಪರ್ವತೋಪಮರಾಗಿದ್ದ ರಾಕ್ಷಸರೂ ಭಾರವಾದ ಗದೆಗಳಿಂದಲೂ ಪ್ರಾಸ-ಖಡ್ಗ-ಪರಶ್ವಧಗಳಿಂದಲೂ ಭಯಂಕರ ರಾದ ವಾನರರನ್ನು ಜಜ್ಜಿ ಪುಡಿ-ಪುಡಿಮಾಡುತ್ತಿದ್ದರು.

ಹೀಗೆ ರಾಕ್ಷಸರಿಂದ ವಧಿಸಲ್ಪಡುತ್ತಿದ್ದ ವಾನರರ ಆ ಮಹಾಸೈನ್ಯದಲ್ಲಿ ಅಳಿದುಳಿದ ವಾನರರು ಶರಣಾಗತವತ್ಸಲನಾದ ಶ್ರೀರಾಮನನ್ನು ಶರಣು ಹೋದರು.

ಒಡನೆಯೇ ಮಹಾತೇಜಸ್ವಿಯಾದ ವೀರ್ಯವಂತನಾದ ಶ್ರೀರಾಮನು ಧನುಸ್ಸನ್ನು ಹಿಡಿದು ರಾಕ್ಷಸರ ಸೈನ್ಯದಲ್ಲಿ ನುಗ್ಗಿ ಬಾಣಗಳ ಮಳೆಗರೆಯಲು ಪ್ರಾರಂಭಿಸಿದನು. ಆಕಾಶದಲ್ಲಿರುವ ಮೇಘಗಳು, ಸೂರ್ಯನನ್ನು ಆಕ್ರಮಿ ಸಲು ಸಾಧ್ಯವಾಗದಿರುವಂತೆ–ರಾಕ್ಷಸಸೈನ್ಯದೊಳಗೆ ನುಗ್ಗಿ ಬಾಣರೂಪವಾದ ಅಗ್ನಿಯಿಂದ ರಾಕ್ಷಸಸೈನ್ಯವನ್ನು ಸುಟ್ಟು ಭಸ್ಮಮಾಡುತ್ತಿದ್ದ ಶ್ರೀರಾಮನನ್ನು ಎದುರಿಸಿ ನಿಲ್ಲಲು ಮಹಾಕ್ರೂರಿಗಳಾಗಿದ್ದ ಯಾವ ರಾಕ್ಷಸರಿಗೂ ಸಾಧ್ಯವಾಗ ಲಿಲ್ಲ. ರಣಾಂಗಣದಲ್ಲಿ ರಾಕ್ಷಸರು ಶ್ರೀರಾಮನ ಅತ್ಯಂತದುಷ್ಕರವಾದ ಮತ್ತು ಘೋರವಾದ ಸಂಹಾರಕಾರ್ಯಗಳನ್ನು ಮಾತ್ರವೇ ಕಾಣುತ್ತಿದ್ದರು. ಅವನ ಸ್ವರೂಪವನ್ನು ನೋಡಲು ಅವರಿಗೆ ಸಾಧ್ಯವೇ ಆಗುತ್ತಿರಲಿಲ್ಲ. ಮಹಾರಣ್ಯ ದಲ್ಲಿ ದೊಡ್ಡ-ದೊಡ್ಡ ವೃಕ್ಷಗಳನ್ನೇ ಕೆಳಗುರುಳಿಸುವ ಬಿರುಗಾಳಿಯನ್ನು ನೋಡಲಾಗದಂತೆ ರಾಕ್ಷಸಮಹಾಸೈನ್ಯವನ್ನು ಅಲ್ಲೋಲ-ಕಲ್ಲೋಲಗೊಳಿ ಸುತ್ತಿದ್ದ ಮತ್ತು ಮಹಾರಥರನ್ನೂ ಧ್ವಂಸಮಾಡುತ್ತಿದ್ದ ಶ್ರೀರಾಮನು ಯಾರಿಗೂ ಕಾಣಿಸುತ್ತಿರಲಿಲ್ಲ. ತಮ್ಮ ಕಡೆಯ ಸೈನ್ಯವು ಛಿನ್ನ-ಭಿನ್ನವಾಗು ತ್ತಿರುವುದನ್ನೂ, ಬಾಣಗಳಿಂದ ಸುಡಲ್ಪಡುತ್ತಿರುವುದನ್ನೂ, ಭಗ್ನವಾಗುತ್ತಿರು ವುದನ್ನೂ ಮತ್ತು ಬಾರಿ-ಬಾರಿಗೂ ಪೀಡಿಸಲ್ಪಡುತ್ತಿರುವುದನ್ನೂ ರಾಕ್ಷಸರು ನೋಡುತ್ತಿದ್ದರು. ಆದರೆ ಬಾಣಗಳ ಆದಾನ-ಸಂಧಾನ-ಪ್ರಯೋಗಗಳನ್ನು

ಬಹಳ ಬೇಗ ಮಾಡುತ್ತಿದ್ದ ಶ್ರೀರಾಮನನ್ನು ಅವರು ಕಾಣಲಿಲ್ಲ. ಶಬ್ದ-ಸ್ಪರ್ಶಾದಿ ಇಂದ್ರಿಯಾರ್ಥಗಳ ಭೋಕ್ತೃವಾಗಿರುವ ಜೀವಾತ್ಮನನ್ನು ಜನರು ಕಾಣದಂತೆ–ಸೈನಿಕರ ಶರೀರಗಳನ್ನು ಬಾಣಗಳಿಂದ ಪ್ರಹರಿಸುತ್ತಿದ್ದ ಶ್ರೀರಾಮನನ್ನು ರಾಕ್ಷಸರು ಕಾಣುತ್ತಿರಲಿಲ್ಲ.

'ಅದೋ ನೋಡಿರಿ! ಅವನು ಗಜಸೈನ್ಯವನ್ನು ಸಂಹರಿಸುತ್ತಿದ್ದಾನೆ. ಅವನೇ ರಾಮನು. ಮಹಾರಥರನ್ನೂ ಸಂಹರಿಸುತ್ತಿದ್ದಾನೆ ; ಅವನೇ ರಾಮನು. ಇಲ್ಲ ; ಇಲ್ಲ! ಪದಾತಿಸೈನಿಕರನ್ನು ಅಶ್ವಸೈನಿಕರೊಡನೆ ಸಂಹರಿಸುತ್ತಿದ್ದಾನೆ ; ಅವನೇ ರಾಮನು.' ಹೀಗೆ ರಾಕ್ಷಸರು ಎಲ್ಲ ಕಡೆಗಳಲ್ಲಿಯೂ ರಾಮನಂತೆ ಕಾಣುತ್ತಿದ್ದವರನ್ನು ರಾಮನೆಂದೇ ಭಾವಿಸುತ್ತಿದ್ದರು. ಕಡೆ-ಕಡೆಗೆ ಅವರ ಭ್ರಮೆಯು ಎಷ್ಟಾಯಿತೆಂದರೆ : ಎಲ್ಲ ರಾಕ್ಷಸರಿಗೂ ಎಲ್ಲ ರಾಕ್ಷಸರೂ ರಾಮನ ಸ್ವರೂಪದಿಂದಲೇ ಕಾಣತೊಡಗಿದರು. ಅದರ ಪರಿಣಾಮವಾಗಿ ರಾಕ್ಷಸರೇ ಒಬ್ಬರನ್ನೊಬ್ಬರು ಸಂಹರಿಸತೊಡಗಿದರು. ಆದರೆ ಶ್ರೀರಾಮನು ರಾಕ್ಷಸಸೈನ್ಯವನ್ನು ದಹಿಸುತ್ತಿದ್ದರೂ ರಾಕ್ಷಸರು ಅವನನ್ನು ನೋಡಲೇ ಇಲ್ಲ. ಅನಂತರ ಮಹಾತ್ಮನಾದ ಶ್ರೀರಾಮನು ಗಾಂಧರ್ವಾಸ್ತ್ರವನ್ನು ಪ್ರಯೋಗಿಸಿ ಎಲ್ಲ ರಾಕ್ಷಸರನ್ನೂ ವಿಮೋಹಗೊಳಿಸಿದನು.

ತೇ ತು ರಾಮಸಹಸ್ರಾಣಿ ರಣೇ ಪಶ್ಯನ್ತಿ ರಾಕ್ಷಸಾಃ ।
ಪುನಃ ಪಶ್ಯನ್ತಿ ಕಾಕುತ್ಸ್ಥಮೇಕಮೇವ ಮಹಾಹವೇ ॥೨೭॥

ಗಾಂಧರ್ವಾಸ್ತ್ರಪ್ರಯೋಗದ ಪರಿಣಾಮವಾಗಿ ರಾಕ್ಷಸರು ಸಾವಿರಾರು ರಾಮರನ್ನು ರಣರಂಗದಲ್ಲಿ ನೋಡತೊಡಗಿದರು. ಮರುಕ್ಷಣದಲ್ಲಿಯೇ ಅವರು ಒಬ್ಬನೇ ರಾಮನು ತಮ್ಮೆಲ್ಲರೊಡನೆ ಯುದ್ಧಮಾಡುತ್ತಿರುವುದನ್ನೂ ನೋಡುತ್ತಿದ್ದರು.

ಗರ-ಗರನೆ ತಿರುಗುತ್ತಿರುವ ಕೊಳ್ಳಿಗಳ ಚಕ್ರದಂತೆ ಕಾಣುತ್ತಿದ್ದ, ಸುವರ್ಣಮಯವಾದ ಶ್ರೀರಾಮನ ಧನುಸ್ಸಿನ ಅಗ್ರಭಾಗವನ್ನು ಮಾತ್ರವೇ ರಾಕ್ಷಸರು ಕಾಣುತ್ತಿದ್ದರು. ರಾಘವನನ್ನು ಮಾತ್ರ ಅವರು ಕಾಣುತ್ತಿರಲಿಲ್ಲ. ರಣಾಂಗಣದಲ್ಲಿ ರಾಕ್ಷಸರನ್ನು ಎಡಬಿಡದೇ ಸಂಹರಿಸುತ್ತಿದ್ದ ಶ್ರೀರಾಮನು ಸಾಕ್ಷಾತ್ ಚಕ್ರದಂತೆಯೇ ಕಾಣುತ್ತಿದ್ದನು. ಶರೀರದ ಮಧ್ಯಭಾಗವು (ನಾಭಿಪ್ರದೇಶವು) ಚಕ್ರದ ಗುಂಭದಂತೆಯೇ ಇದ್ದಿತು. ಶ್ರೀರಾಮನ

ಬಲವೇ ಚಕ್ರದಿಂದ ಹೊರಹೊಮ್ಮುವ ಜ್ವಾಲೆಯಾಗಿದ್ದಿತು. ಅವನು ಬಿಡುತ್ತಿದ್ದ ಬಾಣಗಳು ಶ್ರೀರಾಮರೂಪಚಕ್ರದ ಅರೆಕಾಲುಗಳಾಗಿದ್ದುವು. ಧನುಸ್ಸು ಚಕ್ರದ ಅಂಚಾಗಿದ್ದಿತು. ಧನುಸ್ಸಿನ ಟಂಕಾರ ಮತ್ತು ಅಂಗೈಯಿನ ಧ್ವನಿಯು ಚಕ್ರದ ಗರ್ಗರಶಬ್ದವಾಗಿದ್ದುವು. ತೇಜಸ್ಸು, ಬುದ್ಧಿ ಮತ್ತು ಕಾಂತಿಗಳು ಚಕ್ರದ ಪ್ರಭೆಯ ರೂಪದಲ್ಲಿದ್ದುವು. ದಿವ್ಯಾಸ್ತ್ರಗಳ ಗುಣ-ಪ್ರಭಾವಗಳು ರಾಮರೂಪ ಚಕ್ರದ ಪರ್ಯಂತವಾಗಿದ್ದಿತು. (ಕಡೆಯ ಭಾಗವಾಗಿದ್ದಿತು ; ಅಲುಗಾಗಿದ್ದಿತು.) ಪ್ರಲಯಕಾಲದಲ್ಲಿ ಪ್ರಜೆಗಳು ಕಾಲಚಕ್ರವನ್ನು ನೋಡುವಂತೆ ತಮ್ಮನ್ನು ಅಡಿಗಡಿಗೂ ಧ್ವಂಸಮಾಡುತ್ತಿದ್ದ ರಾಮಚಕ್ರವನ್ನು ರಾಕ್ಷಸರು ನೋಡುತ್ತಿದ್ದರು. ಶ್ರೀರಾಮನು ಏಕಾಕಿಯಾಗಿ ದಿನದ ಎಂಟನೆಯ ಒಂದು ಭಾಗದ ವೇಳೆಯಲ್ಲಿ (ಮಧ್ಯಾಹ್ನ ಒಂದೂವರೆ ಘಂಟೆಯಲ್ಲಿ) ಅಗ್ನಿಯ ಜ್ವಾಲೆಗಳಿಗೆ ಸಮಾನವಾದ ಬಾಣಗಳ ಮೂಲಕವಾಗಿ ವಾಯುವಿಗೆ ಸಮಾನವಾದ ವೇಗದಿಂದ ಕೂಡಿದ್ದ ಹತ್ತು ಸಾವಿರ ರಥಗಳನ್ನೂ, ಕಾಮರೂಪಿಗಳಾದ ರಾಕ್ಷಸರ–ವೇಗಶಾಲಿಗಳಾದ ಹದಿನೆಂಟುಸಾವಿರ ಗಜಸೈನಿಕರನ್ನೂ, ಹದಿನಾಲ್ಕು ಸಾವಿರ ಸವಾರರಿಂದ ಕೂಡಿದ್ದ ಕುದುರೆಗಳನ್ನೂ, ಎರಡು ಲಕ್ಷ ಪದಾತಿಸೈನಿಕರನ್ನೂ ಸಂಹರಿಸಿದನು. ಹೀಗೆ ಅಪಾರ ಸಂಖ್ಯೆಯಲ್ಲಿ ರಥ-ಗಜಾಶ್ವ-ಪದಾತಿಸೈನಿಕರು ಹತರಾಗಲು, ಧ್ವಜಗಳೆಲ್ಲವೂ ಮುರಿದು ಬೀಳಲು ಅಳಿದುಳಿದ ರಾಕ್ಷಸಸೈನಿಕರು ಶಾಂತರಾಗಿ ಲಂಕಾಪಟ್ಟಣದ ಕಡೆಗೆ ಪಲಾಯನಮಾಡಿದರು. ಹತರಾಗಿ ಬಿದ್ದಿದ್ದ ಗಜಾಶ್ವ-ಪದಾತಿಗಳ ದೇಹಗಳಿಂದ ತುಂಬಿಹೋಗಿದ್ದ ಆ ರಣಾಂಗಣವು ಕ್ರುದ್ಧನಾದ ರುದ್ರನ ಆಟದ ಮೈದಾನದಂತೆಯೇ ಕಾಣುತ್ತಿದ್ದಿತು. ಬಳಿಕ ದೇವ-ಗಂಧರ್ವ-ಸಿದ್ಧ-ಪರಮರ್ಷಿಗಳು ಶ್ರೀರಾಮನ ಆ ಅದ್ಭುತಸಂಹಾರಕಾರ್ಯವನ್ನು ನೋಡಿ 'ಸಾಧು! ರಾಮ! ಸಾಧು!'–ಎಂದು ಪ್ರಶಂಸಿಸಿದರು. ಆ ಸಮಯದಲ್ಲಿ ಧರ್ಮಾತ್ಮನಾದ ಶ್ರೀರಾಮನು ತನ್ನ ಸಮೀಪದಲ್ಲಿ ನಿಂತಿದ್ದ ವಿಭೀಷಣ-ಸುಗ್ರೀವರಿಗೂ, ಕಪಿಶ್ರೇಷ್ಠನಾದ ಹನುಮಂತನಿಗೂ, ಜಾಂಬವಂತನಿಗೂ, ಮೈಂದ-ದ್ವಿವಿದರಿಗೂ ಹೇಳಿದನು :

ಏತದಸ್ತ್ರಬಲಂ ದಿವ್ಯಂ ಮಮ ವಾ ತ್ರ್ಯಮ್ಬಕಸ್ಯ ವಾ ॥೩೮॥

"ಗೆಳೆಯರೇ! ಈ ದಿವ್ಯಾಸ್ತ್ರಬಲವು ನನ್ನಲ್ಲಿದೆ ಮತ್ತು ಶಿವನಲ್ಲಿದೆ. ಬೇರೆ ಯಾರಲ್ಲಿಯೂ ಇಲ್ಲ."

ಇಂದ್ರನ ಪರಾಕ್ರಮಕ್ಕೆ ಅನುಗುಣವಾದ ಪರಾಕ್ರಮವನ್ನು ಹೊಂದಿದ್ದ ಮಹಾತ್ಮನಾದ ಶ್ರೀರಾಮನು ಅಸ್ತ್ರ-ಶಸ್ತ್ರಗಳ ಪ್ರಯೋಗದಿಂದ ಸ್ವಲ್ಪವೂ ಆಯಾಸಗೊಂಡಿರಲಿಲ್ಲ. ರಾಕ್ಷಸರಾಜನಾದ ರಾವಣನ ಚತುರಂಗಬಲವನ್ನು ಧ್ವಂಸಮಾಡಿ ಅದರಿಂದ ಪ್ರಹೃಷ್ಟರಾದ ದೇವತೆಗಳ ಪ್ರಶಂಸೆಗೆ ಪಾತ್ರ ನಾದನು.

೯೩ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೯೪ನೆಯ ಸರ್ಗ

ರಾಕ್ಷಸಿಯರ ವಿಲಾಪ

ತಾನಿ ನಾಗಸಹಸ್ರಾಣಿ ಸಾರೋಹಾಣಿ ಚ ವಾಜಿನಾಮ್ ।
ರಥಾನಾಂ ತ್ವಗ್ನಿವರ್ಣಾನಾಂ ಸಧ್ವಜಾನಾಂ ಸಹಸ್ರಶಃ ॥೧॥

ರಾಕ್ಷಸಾನಾಂ ಸಹಸ್ರಾಣಿ ಗದಾಪರಿಘಯೋಧಿನಾಮ್ ।
ಕಾಞ್ಚನಧ್ವಜಚಿತ್ರಾಣಾಂ ಶೂರಾಣಾಂ ಕಾಮರೂಪಿಣಾಮ್ ॥೨॥

ನಿಹತಾನಿ ಶರೈರ್ದೀಪ್ತೈಸ್ತಪ್ತಕಾಞ್ಚನಭೂಷಣೈಃ ।
ರಾವಣೇನ ಪ್ರಯುಕ್ತಾನಿ ರಾಮೇಣಾಕ್ಲಿಷ್ಟಕರ್ಮಣಾ ॥೩॥

ದೃಷ್ಟ್ವಾ ಶ್ರುತ್ವಾ ಚ ಸಂಭ್ರಾನ್ತಾ ಹತಶೇಷಾ ನಿಶಾಚರಾಃ ।
ರಾಕ್ಷಸ್ಯಶ್ಚ ಸಮಾಗಮ್ಯ ದೀನಾಶ್ಚಿನ್ತಾಪರಿಪ್ಲುತಾಃ ॥೪॥

ಅತಿಕಷ್ಟವಾದ ಕಾರ್ಯಗಳನ್ನೂ ಅನಾಯಾಸವಾಗಿ ಮಾಡುವ ಶ್ರೀರಾಮನು–ಪುಟಕ್ಕೆ ಹಾಕಿದ ಚಿನ್ನದಿಂದ ಸಮಲಂಕೃತವಾಗಿದ್ದ, ದೇದೀಪ್ಯ ಮಾನವಾಗಿ ಕಾಣುತ್ತಿದ್ದ ಬಾಣಗಳಿಂದ ರಾವಣನು ಕಳುಹಿಸಿದ ಸಾವಿರಾರು ಆನೆಗಳನ್ನೂ, ಸವಾರರಿಂದ ಕೂಡಿದ್ದ ಸಾವಿರಾರು ಕುದುರೆಗಳನ್ನೂ, ಅಗ್ನಿ ಯಂತೆ ಪ್ರಕಾಶಮಾನವಾಗಿದ್ದ ಮತ್ತು ಧ್ವಜಗಳಿಂದ ಸಮಲಂಕೃತವಾಗಿದ್ದ ಸಾವಿರಾರು ರಥಗಳನ್ನೂ, ಸುವರ್ಣಮಯವಾದ ಧ್ವಜಗಳಿಂದ ಕೂಡಿ ವಿಚಿತ್ರವಾದ ಶೋಭೆಯಿಂದ ಪ್ರಕಾಶಿಸುತ್ತಿದ್ದ, ಗದಾ-ಪರಿಘಗಳಿಂದ ಯುದ್ಧ ಮಾಡುತ್ತಿದ್ದ ಕಾಮರೂಪಿಗಳಾದ, ಸಾವಿರಾರು ರಾಕ್ಷಸಪದಾತಿಸೈನಿಕರನ್ನೂ

ಧ್ವಂಸಮಾಡಿದನು. ಆ ಮಹಾಸಂಹಾರಕಾರ್ಯವನ್ನು ಕೇಳಿ ಅನಂತರ ಪ್ರತ್ಯಕ್ಷವಾಗಿಯೂ ನೋಡಿ ಅಳಿದುಳಿದ ರಾಕ್ಷಸರು ಭ್ರಾಂತರಾಗಿ ಲಂಕೆಗೆ ಹೋಗಿ ಅಲ್ಲಿದ್ದ ರಾಕ್ಷಸಿಯರೊಡನೆ ಸೇರಿ ಗೋಳಾಡುತ್ತಾ ಮುಂದೇನು ಮಾಡಬೇಕೆಂಬ ಚಿಂತೆಯಲ್ಲಿ ಮಗ್ನರಾದರು.

ಪತಿಗಳನ್ನು ಕಳೆದುಕೊಂಡ ರಾಕ್ಷಸವಿಧವೆಯರೂ, ಮಕ್ಕಳನ್ನೂ, ಅಣ್ಣ-ತಮ್ಮಂದಿರನ್ನೂ ಕಳೆದುಕೊಂಡ ರಾಕ್ಷಸಿಯರು ಒಂದೆಡೆಯಲ್ಲಿ ಸೇರಿ ದುಃಖಪೀಡಿತರಾಗಿ ವಿಲಪಿಸತೊಡಗಿದರು :

"ಜೋತುಬಿದ್ದಿರುವ ಹೊಟ್ಟೆಯಿಂದ ಕೂಡಿದ್ದ, ಕರಾಳರೂಪಿಣಿ ಯಾಗಿದ್ದ, ವೃದ್ಧೆಯಾದ ಆ ಶೂರ್ಪಣಖೆಯು ಅರಣ್ಯದಲ್ಲಿ ಮನ್ಮಥನ ರೂಪಕ್ಕೆ ಸಮಾನವಾದ ರೂಪದಿಂದ ಕೂಡಿದ್ದ ರಾಮನ ಬಳಿಗೆ ಕಾಮುಕ ಭಾವದಿಂದ ಹೇಗೆ ತಾನೇ ಹೋದಳು ? ಇಂದಿನ ನಮ್ಮ ದುಃಖಕ್ಕೆ ಅವಳೇ ಮೂಲಕಾರಣಳು. ಶ್ರೀರಾಮನಾದರೋ ಸುಕುಮಾರನು ; ಮಹಾಸತ್ತ್ವ ಸಂಪನ್ನನು ; ಯಾವಾಗಲೂ ಸಮಸ್ತಪ್ರಾಣಿಗಳ ಹಿತದಲ್ಲಿಯೇ ಆಸಕ್ತನಾಗಿರ ತಕ್ಕವನು. ಅಂತಹವನನ್ನು ನೋಡಿ ಕುರೂಪಿಯಾದ ಆ ಶೂರ್ಪಣಖೆಯು ಮೋಹಗೊಂಡಳು. ನಿಶ್ಚಯವಾಗಿಯೂ ಅವಳು ಎಲ್ಲರಿಂದಲೂ ಕೊಲ್ಲಲ್ಪಡ ತಕ್ಕವಳೇ ಸರಿ.

ಕಥಂ ಸರ್ವಗುಣೈರ್ಹೀನಾ ಗುಣವನ್ತಂ ಮಹೌಜಸಮ್ ।
ಸುಮುಖಂ ದುರ್ಮುಖೀ ರಾಮಂ ಕಾಮಯಾಮಾಸ ರಾಕ್ಷಸೀ ॥

ಶೂರ್ಪಣಖೆಯು ಸಮಸ್ತಗುಣಗಳಿಂದಲೂ ಹೀನಳಾದವಳು. ರಾಮ ನಾದರೋ ಸಕಲಸದ್ಗುಣಸಂಪನ್ನನು. ಮಹಾತೇಜಸ್ವಿಯು, ಶೂರ್ಪಣಖೆ ಯಾದರೋ ವಿಕಾರವಾದ ಮುಖವುಳ್ಳವಳು. ರಾಮನು ಸುಂದರವಾದ ಮುಖವುಳ್ಳವನು. ಅಂತಹವನನ್ನು ಆ ದುರುಳರಾಕ್ಷಸಿಯು ಹೇಗೆ ತಾನೇ ಕಾಮಿಸಹೋದಳು ?

ಸುಕ್ಕಾದ ಚರ್ಮದಿಂದಲೂ ಬಿಳಿಗೂದಲಿನಿಂದಲೂ ಕೂಡಿದ್ದ ಆ ಮುದುಕಿಯು ಶ್ರೀರಾಮನಿಗೆ ಯಾವುದರಲ್ಲಿಯೂ ಅನುರೂಪಳಾಗಿರಲಿಲ್ಲ. ಆದರೆ ಲಂಕಾವಾಸಿಗಳ ದೌರ್ಭಾಗ್ಯದ ಕಾರಣದಿಂದ ಅಪಹಾಸ್ಯಕರವೂ ಲೋಕನಿಂದ್ಯವೂ ಆದ ಈ ಅಕಾರ್ಯವನ್ನು ಅವಳು ಮಾಡಿದಳು. ರಾಕ್ಷಸರ

ಮತ್ತು ಖರ-ದೂಷಣರ ವಿನಾಶಕ್ಕಾಗಿ ಅಪ್ರತಿಮವಾದ ಕರಾಳರೂಪವನ್ನು ಹೊಂದಿದ್ದ ಆ ಶೂರ್ಪಣಖೆಯು ಶ್ರೀರಾಮನನ್ನು ಮೋಹಿಸಹೋದಳು. ಅವಳ ಕಾರಣದಿಂದಲೇ ನಮ್ಮ ರಾಜನಾದ ರಾವಣನು ರಾಮನೊಡನೆ ದ್ವೇಷ ವನ್ನು ಕಟ್ಟಿಕೊಂಡು ತನ್ನ ವಧೆಗಾಗಿಯೂ ಮತ್ತು ರಾಕ್ಷಸರ ನಾಶಕ್ಕಾಗಿಯೂ ಸೀತೆಯನ್ನಿಲ್ಲಿಗೆ ಕರೆತಂದನು. ಜನಕನ ಮಗಳಾದ ಸೀತೆಯನ್ನು ರಾವಣನು ಖಂಡಿತವಾಗಿಯೂ ಪಡೆದುಕೊಳ್ಳುವುದಿಲ್ಲ. ಆದರೆ ಬಲಿಷ್ಠನಾದ ರಾಘವ ನೊಡನೆ ತೀರದಿರುವ ವೈರವನ್ನೇ ಕಟ್ಟಿಕೊಂಡಿದ್ದಾನೆ. ವಿರಾಧರಾಕ್ಷಸನೂ ಸೀತೆಯನ್ನು ತನ್ನವಳನ್ನಾಗಿ ಮಾಡಿಕೊಳ್ಳಲು ಯತ್ನಿಸಿದನು. ಆದರೆ ರಾಮ ನೊಬ್ಬನೇ ಅವನನ್ನು ಸಂಹರಿಸಿದನು. ರಾಮನಲ್ಲಿರುವ ಅದ್ಭುತಪರಾಕ್ರಮಕ್ಕೆ ಈ ನಿದರ್ಶನವೊಂದೇ ಸಾಕು. ಜನಸ್ಥಾನದಲ್ಲಿ ಭಯಂಕರಪರಾಕ್ರಮಿಗಳಾದ ರಾಕ್ಷಸರನ್ನು ಅಗ್ನಿಯ ಜ್ವಾಲೆಗಳಿಗೆ ಸಮಾನವಾಗಿದ್ದ ಬಾಣಗಳಿಂದ ರಾಮ ನೊಬ್ಬನೇ ಸಂಹರಿಸಿದನು. ಸೂರ್ಯಸದೃಶವಾದ ಬಾಣಗಳಿಂದ ಖರ-ದೂಷಣ-ತ್ರಿಶಿರಸರನ್ನು ಸಂಹರಿಸಿದನು. ರಾಮನು ಅಜೇಯಪರಾಕ್ರಮಿ ಯೆಂಬುದಕ್ಕೆ ಈ ನಿದರ್ಶನವೇ ಸಾಕಾಗಿದೆ. ಯೋಜನದಷ್ಟು ಉದ್ದವಾದ ತೋಳುಗಳನ್ನು ಹೊಂದಿದ್ದ ರಕ್ತಪಾನಮಾಡುವ ಕಬಂಧನು ಅತ್ಯಂತಕ್ರುದ್ಧನಾಗಿ ಸಿಂಹನಾದಮಾಡುತ್ತಿದ್ದನು. ಅಂತಹ ರಾಕ್ಷಸನನ್ನು ಶ್ರೀರಾಮನು ಸಂಹರಿಸಿದನು. ಶ್ರೀರಾಮನು ಅಜೇಯನೆಂದು ತಿಳಿಯಲು ಈ ನಿದರ್ಶನವೇ ಸಾಕಾಗಿದೆ. ಮೇರುಪರ್ವತದಂತೆ ವಿಶಾಲಕಾಯನಾದ, ಇಂದ್ರನ ಮಗನಾದ ವಾಲಿಯನ್ನು ಶ್ರೀರಾಮನು ಒಂದೇ ಬಾಣದಿಂದ ಸಂಹರಿಸಿದನು. ರಾಮನನ್ನು ಯಾರೂ ಗೆಲ್ಲಲಾರರೆಂಬುದಕ್ಕೆ ಈ ನಿದರ್ಶನವೂ ಸಾಕಾಗಿದ್ದಿತು. ಸುಗ್ರೀವನು ರಾಜ್ಯಭ್ರಷ್ಟನಾಗಿ ಋಶ್ಯಮೂಕಪರ್ವತದಲ್ಲಿ ವಾಸಮಾಡುತ್ತಿದ್ದನು. ಆ ಸಮಯದಲ್ಲವನು ಅತ್ಯಂತದೀನನಾಗಿದ್ದನು. ಅವನ ಮನೋರಥಗಳೊಂದೂ ಕೈಗೂಡಿರಲಿಲ್ಲ. ಹಾಗಿದ್ದ ಸುಗ್ರೀವನು ರಾಮನ ಅನುಗ್ರಹದಿಂದ ಕಿಷ್ಕಿಂಧಾರಾಜ್ಯವನ್ನೇ ಪಡೆದುಕೊಂಡನು. ರಾಮನ ಪ್ರಭಾವವು ಎಷ್ಟೆಂದು ತಿಳಿಯಲು ಈ ನಿದರ್ಶನವೂ ಸಾಕಾಗಿದೆ. ಧರ್ಮಾರ್ಥಗಳಿಂದ ಕೂಡಿ ಸಮಸ್ತರಾಕ್ಷಸರಿಗೆ ಹಿತಕರವೂ ಆಗಿದ್ದ ಮಾತನ್ನು ವಿಭೀಷಣನು ರಾವಣನಿಗೆ ಹೇಳಿದನು. ಆದರೆ ಮೋಹವಶನಾಗಿದ್ದ ನಮ್ಮ ರಾಜನಿಗೆ ಅದು ಹಿಡಿಸಲಿಲ್ಲ.

ಕುಬೇರನ ತಮ್ಮನಾದ ನಮ್ಮ ರಾಜನು ವಿಭೀಷಣನ ಹಿತೋಕ್ತಿಗಳನ್ನೇನಾ ದರೂ ಕೇಳಿದ್ದರೆ-ಲಂಕಾಪಟ್ಟಣವು ಈಗ ಆಗಿರುವಂತೆ ಶ್ಮಶಾನಸದೃಶವೂ ಆಗುತ್ತಿರಲಿಲ್ಲ, ದುಃಖಪೀಡಿತವೂ ಆಗುತ್ತಿರಲಿಲ್ಲ. ರಾಮನು ಮಹಾಬಲನಾದ ಕುಂಭಕರ್ಣನನ್ನು ಸಂಹರಿಸಿದನು. ಅಸಹನಶೀಲನಾದ ಅತಿಕಾಯನನ್ನು ಲಕ್ಷ್ಮಣನು ಸಂಹರಿಸಿದನು. ಅಂತೆಯೇ ನಮ್ಮ ರಾಜನ ಪ್ರಿಯಪುತ್ರನಾದ ಇಂದ್ರಜಿತುವನ್ನೂ ಲಕ್ಷ್ಮಣನು ಸಂಹರಿಸಿದನು. ಇಷ್ಟಾದರೂ ರಾವಣನು ರಾಮನ ಪ್ರಭಾವವೆಷ್ಟೆಂಬುದನ್ನು ತಿಳಿಯಲಿಲ್ಲ."

"ಅಯ್ಯೋ! ಈ ಘೋರಯುದ್ಧದಲ್ಲಿ ನನ್ನ ಮಗನು ಸತ್ತು ಹೋದನು."

"ನಮ್ಮ ದುಃಖವಂತೂ ಹೇಳತೀರದಾಗಿದೆ. ನನಗೆ ಆಶ್ರಯನಾಗಿದ್ದ ನನ್ನ ಸೋದರನು ಈ ಯುದ್ಧದಲ್ಲಿ ಹತನಾದನು."

"ನನ್ನ ವಿಧಿಯನ್ನೇನು ಹೇಳಿಕೊಳ್ಳಲಿ? ನನ್ನ ಗಂಡನನ್ನೇ ಕಳೆದುಕೊಂಡು ನಾನು ವಿಧವೆಯಾಗಿದ್ದೇನೆ."

ಇಂತಹ ಹೃದಯವಿದ್ರಾವಕವಾದ ಮಾತುಗಳು ರಾಕ್ಷಸಿಯರ ಗುಂಪುಗಳಲ್ಲಿ ಕೇಳಿಬರುತ್ತಿದ್ದುವು.

ರಣರಂಗದಲ್ಲಿ ಸಾವಿರಾರು ಸಂಖ್ಯೆಯಲ್ಲಿ ರಥಾಶ್ವ-ಗಜಸೈನಿಕರು ಸತ್ತು ಬಿದ್ದಿದ್ದರು. ಶೂರವೀರನಾದ ಶ್ರೀರಾಮನು ಪದಾತಿಸೈನ್ಯವನ್ನು ಅಪಾರ ಸಂಖ್ಯೆಯಲ್ಲಿ ಸಂಹರಿಸಿದ್ದನು.

ರುದ್ರೋ ವಾ ಯದಿ ವಾ ವಿಷ್ಣುರ್ಮಹೇನ್ದ್ರೋ ವಾ ಶತಕ್ರತುಃ ।
ಹನ್ತಿ ನೋ ರಾಮರೂಪೇಣ ಯದಿ ವಾ ಸ್ವಯಮನ್ತಕಃ ॥೨೪॥

"ಅವನು ರುದ್ರನೇ ಆಗಿರಬಹುದು ; ವಿಷ್ಣುವೇ ಆಗಿರಬಹುದು ; ನೂರು ಯಜ್ಞಗಳನ್ನು ಮಾಡಿರುವ ಮಹೇಂದ್ರನೇ ಆಗಿರಬಹುದು ; ಸ್ವಯಂ ಯಮಧರ್ಮನೇ ಆಗಿರಬಹುದು. ರಾಮನ ರೂಪವನ್ನು ಧರಿಸಿ ನಮ್ಮೆಲ್ಲರನ್ನೂ ಸಂಹರಿಸುತ್ತಿರುವನು.

ನಮ್ಮಲ್ಲಿನ ಮುಖ್ಯ-ಮುಖ್ಯರಾದ ವೀರರೆಲ್ಲರೂ ಹತರಾಗಿ ಹೋದರು. ಈಗ ನಾವು ನಮ್ಮ ಜೀವಿತದಲ್ಲೇ ನಿರಾಶೆಹೊಂದಿದ್ದೇವೆ. ಈ

ಮಹಾಭಯಕ್ಕೆ ಕೊನೆಯನ್ನೇ ಕಾಣದವರಾಗಿದ್ದೇವೆ. ಆದುದರಿಂದ ನಾವೆಲ್ಲರೂ ಅನಾಥರಂತೆ ವಿಲಪಿಸುತ್ತಿದ್ದೇವೆ.

ರಾವಣನು ಶೂರನೇನೋ ಹೌದು. ಬ್ರಹ್ಮನಿಂದ ಮಹಾವರಗಳನ್ನೇ ಪಡೆದಿರುತ್ತಾನೆ. ಆದರಿಂದ ದರ್ಪಿಷ್ಠನಾಗಿರುವ ಅವನು ರಾಮನ ಕಡೆಯಿಂದ ಸನ್ನಿಹಿತವಾಗಿರುವ ಮಹಾಘೋರವಾದ ಈ ಭಯವನ್ನು ತಿಳಿಯುತ್ತಿಲ್ಲ. ಯುದ್ಧದಲ್ಲಿ ಶ್ರೀರಾಮನಿಂದ ಪೀಡಿತನಾದವನನ್ನು ಸಂರಕ್ಷಿಸಲು ದೇವ-ಗಂಧರ್ವ-ಪಿಶಾಚ-ರಾಕ್ಷಸರಲ್ಲಿ ಯಾರೂ ಸಮರ್ಥರಲ್ಲ. ರಾವಣನು ಯುದ್ಧಮಾಡುವಾಗಲೆಲ್ಲಾ ಉತ್ಪಾತಗಳು ಕಾಣುತ್ತಲೇ ಇವೆ. ಈ ಎಲ್ಲ ಉತ್ಪಾತಗಳೂ ರಾಮನ ಮೂಲಕ ರಾವಣನ ವಧೆಯಾಗುವುದೆಂಬುದನ್ನು ಸೂಚಿಸುತ್ತವೆ. ತಪಸ್ಸಿನಿಂದ ಪ್ರಸನ್ನನಾದ ಪಿತಾಮಹನು ರಾವಣನಿಗೆ ದೇವ-ದಾನವ-ರಾಕ್ಷಸರಿಂದ ಮರಣದ ಭಯವಿರುವುದಿಲ್ಲವೆಂದು ಅಭಯವನ್ನಿತ್ತಿದ್ದಾನೆ. ಆದರೆ ರಾವಣನು ಮನುಷ್ಯರಿಂದಲೂ ತನಗೆ ಮರಣವು ಸಂಭವಿಸಬಾರದೆಂಬ ವರವನ್ನು ಕೇಳಲಿಲ್ಲ. ಆದುದರಿಂದ ನಿಸ್ಸಂಶಯವಾಗಿಯೂ ಈಗ ನಮಗೆ ಮನುಷ್ಯರಿಂದಲೇ ಭಯವು ಸನ್ನಿಹಿತವಾಗಿದೆ. ರಾಕ್ಷಸರ ಮತ್ತು ರಾವಣನ ಪ್ರಾಣಗಳನ್ನು ಕೊನೆಗಾಣಿಸುವ ಘೋರವಾದ ಭಯವು ಈಗ ಪ್ರಾಪ್ತವಾಗಿದೆ. ಬಲಿಷ್ಠನಾದ ರಾವಣರಾಕ್ಷಸನು ತನ್ನ ಉಜ್ಜ್ವಲವಾದ ತಪಸ್ಸುಗಳಿಂದಲೂ ಬ್ರಹ್ಮನಿತ್ತ ವರಗಳಿಂದಲೂ ಕೊಬ್ಬಿ ದೇವತೆಗಳನ್ನು ಪೀಡಿಸತೊಡಗಿದನು. ಆಗ ದೇವತೆಗಳು ಬ್ರಹ್ಮನನ್ನು ಸಂಪೂಜಿಸಿ ರಾವಣನ ಪೀಡೆಯನ್ನು ಹೋಗಲಾಡಿಸುವಂತೆ ಪ್ರಾರ್ಥಿಸಿಕೊಂಡರು. ದೇವತೆಗಳ ಸ್ತೋತ್ರದಿಂದ ಸುಪ್ರೀತನಾದ ಬ್ರಹ್ಮನು, ದೇವತೆಗಳ ಹಿತಾರ್ಥವಾಗಿ ಎಲ್ಲ ದೇವತೆಗಳನ್ನೂ ಕುರಿತು ಮಹತ್ತ್ವಪೂರ್ಣವಾದ ಈ ಮಾತುಗಳನ್ನು ಹೇಳಿದನು:

"ಇಂದು ಮೊದಲ್ಗೊಂಡು ಸಮಸ್ತದಾನವ-ರಾಕ್ಷಸರೂ ಭಯದಿಂದ ಕೂಡಿದವರಾಗಿ ನಿತ್ಯ-ನಿರಂತರವಾಗಿ ಮೂರು ಲೋಕಗಳಲ್ಲಿಯೂ ಸಂಚರಿಸುವರು."

ದೇವತೆಗಳಿಗೆ ಹೀಗೆ ಹೇಳಿ ಬ್ರಹ್ಮನು ಇಂದ್ರಸಹಿತರಾದ ದೇವತೆ

ಗಳೊಡನೆ ವೃಷಭಧ್ವಜನಾದ, ತ್ರಿಪುರಹಂತಕನಾದ ಮಹಾದೇವನನ್ನು ಸ್ತೋತ್ರಗಳಿಂದ ಪ್ರಸನ್ನಗೊಳಿಸಿದನು.

ಬ್ರಹ್ಮಾದಿದೇವತೆಗಳ ಸ್ತೋತ್ರದಿಂದ ಪ್ರಸನ್ನನಾದ ಮಹಾದೇವನು ದೇವತೆಗಳಿಗೆ–"ದೇವತೆಗಳೇ! ನಿಮ್ಮ ಹಿತಾರ್ಥವಾಗಿ ಸಮಸ್ತರಾಕ್ಷಸರ ವಿನಾಶಕ್ಕೆ ಕಾರಣಳಾಗುವ ಸ್ತ್ರೀಯೊಬ್ಬಳು ಶೀಘ್ರದಲ್ಲಿಯೇ ಜನ್ಮತಾಳು ವಳು"–ಎಂದು ಹೇಳಿದನು.

ಹಿಂದೆ ದೇವತೆಗಳಿಂದ ಕಳುಹಿಸಲ್ಪಟ್ಟ ಕ್ಷುಧಾದೇವಿಯು ದಾನವ ರೆಲ್ಲರನ್ನೂ ಭಕ್ಷಿಸಿದಂತೆ–ಈಗ ನಿಶಾಚರವಿನಾಶಿನಿಯಾಗಿರುವ ಈ ಸೀತೆಯು ರಾವಣನೊಡನೆ ನಮ್ಮೆಲ್ಲರನ್ನೂ ಭಕ್ಷಿಸುತ್ತಾಳೆ. ಉದ್ಧತನಾದ ಮತ್ತು ದುರ್ಬುದ್ಧಿಯವನಾದ ರಾವಣನ ಅನೀತಿಯಿಂದಾಗಿ ಶೋಕದಿಂದ ಕೂಡಿ ರುವ ಭಯಂಕರವಾದ ಈ ಸರ್ವನಾಶವು ನಮ್ಮೆಲ್ಲರಿಗೂ ಸಂಭವಿಸಿದೆ. ಮಹಾಪ್ರಲಯಕಾಲದಲ್ಲಿ ವಿಶ್ವವನ್ನೇ ನುಂಗಿಹಾಕುವ ಮಹಾಕಾಲನಂತೆ ನಮ್ಮೆಲ್ಲರನ್ನೂ ನುಂಗಿಹಾಕಲು ಸಿದ್ಧನಾಗಿ ನಿಂತಿರುವ ರಾಘವನಿಂದ ನಮ್ಮನ್ನು ರಕ್ಷಿಸುವವರಾರೆಂಬುದನ್ನು ನಾವು ಕಾಣುತ್ತಿಲ್ಲ. ಅರಣ್ಯದಲ್ಲಿ ಕಾಳ್ಗಿಚ್ಚಿನಿಂದ ಸುತ್ತುವರಿಯಲ್ಪಟ್ಟ ಹೆಣ್ಣಾನೆಗಳನ್ನು ಯಾರೂ ರಕ್ಷಿಸಲಾರರು. ಅಂತೆಯೇ ಈ ಮಹಾಭಯದಲ್ಲಿ ಸಿಕ್ಕಿಹಾಕಿಕೊಂಡಿರುವ ನಮ್ಮನ್ನು ರಕ್ಷಿಸುವವರು ಯಾರೂ ಇಲ್ಲ. ಮಹಾತ್ಮನಾದ ವಿಭೀಷಣನು ಸಮಯೋಚಿತವಾದ ಕಾರ್ಯವನ್ನೇ ಮಾಡಿದನು. ಯಾರಿಂದ ಭಯವು ಪ್ರಾಪ್ತವಾಗುತ್ತಿದ್ದಿತೋ–ಅವರನ್ನೇ ಅವನು ಶರಣುಹೋದನು."

ಹೀಗೆ ರಾಕ್ಷಸಸ್ತ್ರೀಯರು ತೋಳುಗಳಿಂದ ಒಬ್ಬರನ್ನೊಬ್ಬರು ತಬ್ಬಿ ಕೊಂಡು ದೀನರಾಗಿ ಭಯಪೀಡಿತರಾಗಿ ವಿಷಾದಿಸುತ್ತಿದ್ದರು. ಭಯಾನಕವಾದ ರೀತಿಯಲ್ಲಿ ಗಟ್ಟಿಯಾಗಿ ಅಳುತ್ತಿದ್ದರು.

೯೪ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೯೫ನೆಯ ಸರ್ಗ

ರಾವಣನು ಮಂತ್ರಿಗಳನ್ನು ಕರೆಯಿಸಿ ಶತ್ರುವಧೆಯಲ್ಲಿ ಉತ್ಸಾಹವನ್ನು ಪ್ರಕಟಿಸಿದುದು : ಸಮಸ್ತರಾಕ್ಷಸರೊಡನೆ ರಣಭೂಮಿಗೆ ಹೋಗಿ ತನ್ನ ಪರಾಕ್ರಮವನ್ನು ಪ್ರದರ್ಶಿಸಿದುದು

ಆರ್ತಾನಾಂ ರಾಕ್ಷಸೀನಾಂ ತು ಲಙ್ಕಾಯಾಂ ವೈ ಕುಲೇ ।
ರಾವಣಃ ಕರುಣಂ ಶಬ್ದಂ ಶುಶ್ರಾವ ಪರಿದೇವನಮ್ ॥೧॥

ರಾವಣನು ಲಂಕಾಪಟ್ಟಣದ ಪ್ರತಿಯೊಂದು ಮನೆಯಲ್ಲಿಯೂ ರಾಕ್ಷಸ ಸ್ತ್ರೀಯರ ಕರುಣಾಜನಕವಾದ ವಿಲಾಪವನ್ನು ಕೇಳಿದನು.

ಅವನು ದೀರ್ಘವಾಗಿ ನಿಟ್ಟುಸಿರುಬಿಡುತ್ತಾ ಸ್ವಲ್ಪಹೊತ್ತು ಚಿಂತಿಸುತ್ತಿದ್ದನು. ಮಗನು ಮೊದಲಾಗಿ ತನ್ನ ಬಂಧುಗಳೆಲ್ಲರೂ ಯುದ್ಧದಲ್ಲಿ ಮೃತರಾದುದನ್ನು ಜ್ಞಾಪಿಸಿಕೊಂಡು ರಾವಣನು ಪರಮಕ್ರುದ್ಧನಾಗಿ ಭಯಂಕರವಾಗಿ ಕಾಣುತ್ತಿದ್ದನು. ಆ ಸಮಯದಲ್ಲವನು ಹಲ್ಲುಗಳಿಂದ ತುಟಿಯನ್ನು ಕಚ್ಚುತ್ತಿದ್ದನು. ಕೋಪದಿಂದಾಗಿ ಅವನು ಕಣ್ಣುಗಳು ಕೆಂಡದಂತಿದ್ದುವು. ಪ್ರವೃದ್ಧನಾದ ಕಾಲಾಗ್ನಿಯಂತೆಯೇ ಕಾಣುತ್ತಿದ್ದ ರಾವಣನನ್ನು ರಾಕ್ಷಸರಿಂದಲೂ ದಿಟ್ಟಿಸಿ ನೋಡಲಾಗುತ್ತಿರಲಿಲ್ಲ. ಕಣ್ಣುಗಳಿಂದಲೇ ಎಲ್ಲವನ್ನೂ ದಹಿಸಿಬಿಡುವನೋ ಎಂಬಂತೆ ಕಾಣುತ್ತಿದ್ದ ರಾವಣನು ಅಸ್ಪಷ್ಟವಾದ ಶಬ್ದದಿಂದ ತನ್ನ ಸಮೀಪದಲ್ಲಿದ್ದ ರಾಕ್ಷಸರಿಗೆ ಹೇಳಿದನು :

"ರಾಕ್ಷಸರೇ! ಮಹೋದರ-ಮಹಾಪಾರ್ಶ್ವ-ವಿರೂಪಾಕ್ಷರಿಗೆ* ನನ್ನ ಆಜ್ಞೆಯಂತೆ ಈಗಲೇ ಯುದ್ಧಕ್ಕಾಗಿ ಸೈನ್ಯವನ್ನು ಹೊರಡಿಸುವಂತೆ ಹೇಳಿರಿ."

ರಾವಣನ ಆ ಮಾತನ್ನು ಕೇಳಿ ಭಯಪೀಡಿತರಾಗಿದ್ದ ಆ ರಾಕ್ಷಸರು ಕರ್ತವ್ಯದಲ್ಲಿ ಅವ್ಯಗ್ರರಾಗಿದ್ದ ಮಹೋದರ-ಮಹಾಪಾರ್ಶ್ವ ವಿರೂಪಾಕ್ಷರಿಗೆ

---

* ಮಹೋದರ ಮಹಾಪಾರ್ಶ್ವರು ಹತರಾದರೆಂದು ಈ ಹಿಂದೆ ೭೦ನೆಯ ಸರ್ಗದಲ್ಲಿ ಬಂದಿದೆ. ಆದುದರಿಂದ ಇವರು ಅದೇ ಹೆಸರಿನ ಬೇರೆಯ ರಾಕ್ಷಸನಾಯಕರೆಂದು ತಿಳಿಯಬೇಕು.

ರಾವಣನ ಆಜ್ಞೆಯಂತೆ ಸೈನ್ಯದೊಡನೆ ಯುದ್ಧಕ್ಕೆ ಹೋಗುವಂತೆ ಪ್ರಚೋದಿಸಿದರು. ಭಯಂಕರದರ್ಶನರಾಗಿದ್ದ ಆ ರಾಕ್ಷಸರೆಲ್ಲರೂ ಹಾಗೆಯೇ ಆಗಲೆಂದು ಹೇಳಿ ಸ್ವಸ್ತಿವಾಚನಪೂರ್ವಕವಾಗಿ ರಣಭೂಮಿಗೆ ತೆರಳಿದರು. ಪ್ರಯಾಣ ಹೊರಡುವ ಮೊದಲು ಸ್ವಾಮಿಗೆ ವಿಜಯವಾಗಬೇಕೆಂಬ ಆಕಾಂಕ್ಷೆಯಿಂದಿದ್ದ ಎಲ್ಲ ಮಹಾರಥರೂ ರಾವಣನನ್ನು ಯಥೋಚಿತವಾಗಿ ಸಮ್ಮಾನಿಸಿ ಕೈಗಳನ್ನು ಜೋಡಿಸಿಕೊಂಡು ನಿಂತರು. ಕ್ರೋಧಮೂರ್ಛಿತನಾಗಿದ್ದ ರಾವಣನು ಗಟ್ಟಿಯಾಗಿ ನಗುತ್ತಾ ಮಹೋದರ-ಮಹಾಪಾರ್ಶ್ವ-ವಿರೂಪಾಕ್ಷರಿಗೆ ಹೇಳಿದನು :

"ರಾಕ್ಷಸಶಿರೋಮಣಿಗಳೇ! ಇಂದು ನಾನು ಈ ಧನುಸ್ಸಿನಿಂದ ಬಿಡಲ್ಪಡುವ ಪ್ರಲಯಕಾಲದ ಸೂರ್ಯನಿಗೆ ಸಮಾನವಾದ ಬಾಣಗಳಿಂದ ರಾಮ-ಲಕ್ಷ್ಮಣರನ್ನು ಯಮನ ಅರಮನೆಗೆ ಕಳುಹಿಸಿಕೊಡುತ್ತೇನೆ. ಈಗ ನಮ್ಮ ಈ ಪ್ರಬಲಶತ್ರುಗಳನ್ನು ಸಂಹರಿಸಿ ಖರ-ಕುಂಭಕರ್ಣ-ಪ್ರಹಸ್ತ-ಇಂದ್ರಜಿತು–ಇವರೇ ಮೊದಲಾದ ನಮ್ಮ ಶ್ರೇಷ್ಠರಾಕ್ಷಸನಾಯಕರನ್ನು ಶತ್ರುಗಳು ಸಂಹರಿಸಿರುವುದಕ್ಕೆ ಪ್ರತೀಕಾರಮಾಡುತ್ತೇನೆ. ಮೇಘರೂಪವಾದ ಬಾಣಗಳಿಂದ ಸಮಾವೃತವಾಗುವ ಈ ಭೂಮಂಡಲದಲ್ಲಿ ಅಂತರಿಕ್ಷವಾಗಲೀ, ದಿಕ್ಕುಗಳಾಗಲೀ, ಆಕಾಶವಾಗಲೀ, ಸಮುದ್ರವಾಗಲೀ ಯಾವುದೊಂದೂ ಕಾಣುವುದಿಲ್ಲ. ನನ್ನ ಧನುಸ್ಸಿನಿಂದ ಹೊರಚಿಮ್ಮುವ, ರೆಕ್ಕೆಗಳನ್ನು ಹೊಂದಿರುವ ತೀಕ್ಷ್ಣವಾದ ಬಾಣಗಳಿಂದ ವಾನರಮುಖ್ಯರ ಸಮೂಹಗಳನ್ನು ಪ್ರತ್ಯೇಕ-ಪ್ರತ್ಯೇಕವಾಗಿಯೇ ಸಂಹರಿಸುತ್ತೇನೆ. ವಾಯುವಿನ ವೇಗಕ್ಕೆ ಸಮಾನವಾದ ಗತಿಯುಳ್ಳ ದಿವ್ಯರಥದಲ್ಲಿ ಕುಳಿತು ಧನುಸ್ಸೆಂಬ ಸಮುದ್ರದಿಂದ ಅಲೆಗಳಂತೆ ಹೊರಬರುವ ಬಾಣಗಳ ಸಮೂಹಗಳಿಂದ ಎಲ್ಲ ವಾನರಸೈನ್ಯಗಳನ್ನೂ ಧ್ವಂಸಮಾಡಿಬಿಡುತ್ತೇನೆ. ಪದ್ಮದ ಎಸಳಿನಂತೆ ಕಾಂತಿಯುಕ್ತರಾಗಿರುವ ಮತ್ತು ವಿಕಸಿತವಾದ ಕಮಲದಂತೆ ಮುಖವುಳ್ಳ ವಾನರರ ಸೈನ್ಯರೂಪವಾದ ಸರೋವರವನ್ನು ಮದಿಸಿದ ಆನೆಯೋಪಾದಿಯಲ್ಲಿ ಧ್ವಂಸಮಾಡಿಬಿಡುತ್ತೇನೆ. ಇಂದು ನನ್ನ ಬಾಣಗಳಿಂದ ಹತರಾಗಿ ಬೀಳುವ ವಾನರದಳಪತಿಗಳು ನನ್ನ ಬಾಣಗಳು ನಾಟಿರುವ ಮುಖಗಳಿಂದ ಕೂಡಿದ್ದು ದಂಟಿನಿಂದ ಯುಕ್ತವಾಗಿರುವ ಕಮಲದಂತೆ ರಣರಂಗವನ್ನು ಸಮಲಂಕರಿಸುತ್ತಾರೆ. ಇಂದಿನ ಯುದ್ಧದಲ್ಲಿ ನನ್ನ ಧನುಸ್ಸಿನಿಂದ ಹೊರಡುವ ಒಂದೊಂದು ಬಾಣದಿಂದಲೂ

ವೃಕ್ಷಯೋಧಿಗಳಾದ ಪ್ರಚಂಡರಾದ ನೂರು-ನೂರು ವಾನರದಳಪತಿಗಳನ್ನು ಸೀಳಿಹಾಕುತ್ತೇನೆ. ಇಂದು ನಾನು ಶತ್ರುಗಳನ್ನು ಸಂಹರಿಸಿ ಮಕ್ಕಳನ್ನು ಕಳೆದುಕೊಂಡು, ಅಣ್ಣ-ತಮ್ಮಂದಿರನ್ನು ಕಳೆದುಕೊಂಡು ಗೋಳಾಡುತ್ತಿರುವ ರಾಕ್ಷಸಸ್ತ್ರೀಯರ ಕಣ್ಣೀರೊರೆಸುತ್ತೇನೆ. ಶತ್ರುಗಳನ್ನು ಸಂಹರಿಸುವುದರಿಂದ ಅವರಿಗೆ ಸಮಾಧಾನವಾಗುತ್ತದೆ. ನನ್ನ ಬಾಣಗಳಿಂದ ಕತ್ತರಿಸಲ್ಪಟ್ಟು ಅಸುನೀಗಿ ಎಲ್ಲೆಡೆಗಳಲ್ಲಿಯೂ ಹರಡಿ ಬೀಳುವ ವಾನರರಿಂದ ಯುದ್ಧಭೂಮಿಯನ್ನು ವಿಶೇಷಪ್ರಯತ್ನದಿಂದ ನೋಡಲು ಸಾಧ್ಯವಾಗುವಂತೆ ಮಾಡುತ್ತೇನೆ.* ಇಂದು ನನ್ನ ಬಾಣಗಳಿಂದ ಮೃತರಾಗುವ ಶತ್ರುಗಳ ಮಾಂಸದಿಂದ ಕಾಗೆಗಳು, ರಣಹದ್ದುಗಳು, ಇತರ ಮಾಂಸಾಶಿಗಳಾದ ಪ್ರಾಣಿಗಳು–ಎಲ್ಲವನ್ನೂ ತೃಪ್ತಿಗೊಳಿಸುತ್ತೇನೆ.

ನಿಶಾಚರರೇ! ಶೀಘ್ರವಾಗಿ ನನ್ನ ರಥವನ್ನು ಸಜ್ಜುಗೊಳಿಸಿರಿ. ಧನುಸ್ಸನ್ನು ಬೇಗ ತನ್ನಿರಿ. ಯುದ್ಧದಲ್ಲಿ ಅಳಿದುಳಿದು ಲಂಕೆಗೆ ಹಿಂದಿರುಗಿರುವ ರಾಕ್ಷಸರು ನನ್ನನ್ನನುಸರಿಸಿ ರಣರಂಗಕ್ಕೆ ಪ್ರಯಾಣಮಾಡಲಿ."

ರಾವಣನ ಆ ಮಾತುಗಳನ್ನು ಕೇಳಿ ಮಹಾಪಾರ್ಶ್ವನು ಅಲ್ಲಿದ್ದ ಬಲಾಧ್ಯಕ್ಷರಿಗೆ ಸೈನಿಕರನ್ನು ರಾವಣನ ಜೊತೆಯಲ್ಲಿ ಯುದ್ಧಕ್ಕೆ ಕಳುಹಿಸುವಂತೆ ಹೇಳಿದನು. ರಾಜಾಜ್ಞೆಯನ್ನು ಶಿರಸಾವಹಿಸಿ ಶೀಘ್ರಪರಾಕ್ರಮಿಗಳಾದ ಬಲಾಧ್ಯಕ್ಷರು ಒಟ್ಟಾಗಿ ಸೇರಿ ಲಂಕಾಪಟ್ಟಣದಲ್ಲಿದ್ದ ಪ್ರತಿಯೊಂದು ಮನೆಗೂ ಹೋಗುತ್ತಾ ಅಲ್ಲಿದ್ದ ರಾಕ್ಷಸರನ್ನು ಯುದ್ಧಕ್ಕೆ ತೆರಳುವಂತೆ ಪ್ರಚೋದಿಸುತ್ತಾ ನಗರದಲ್ಲಿ ಸುತ್ತಾಡಿದರು. ಸ್ವಲ್ಪಹೊತ್ತಿನಲ್ಲಿಯೇ ಭಯಂಕರವಾಗಿ ಕಾಣುತ್ತಿದ್ದ ಭಯಂಕರವಾದ ಮುಖಗಳನ್ನು ಹೊಂದಿದ್ದ ರಾಕ್ಷಸರು ನಾನಾವಿಧವಾದ ಆಯುಧಗಳನ್ನು ಹಿಡಿದು ಗರ್ಜನೆಮಾಡುತ್ತಾ ಆಗಮಿಸಿದರು. ಕತ್ತಿಗಳು, ಪಟ್ಟಿಶಗಳು, ಶೂಲಗಳು, ಗದೆಗಳು, ಒನಕೆಗಳು, ನೇಗಿಲುಗಳು, ತೀಕ್ಷ್ಣವಾದ ಶಕ್ತ್ಯಾಯುಧಗಳು, ದೊಡ್ಡ-ದೊಡ್ಡ ಕೂಟ-

---

* ಅಸುನೀಗಿದ ವಾನರರ ಶರೀರಗಳು ರಾಶಿ-ರಾಶಿಯಾಗಿ ಬಿದ್ದು ಭೂಮಿಯನ್ನು ನೋಡಲೇ ಸಾಧ್ಯವಾಗುವುದಿಲ್ಲ. ಎತ್ತಕಡೆ ನೋಡಿದರೂ ವಾನರರ ಮೃತಶರೀರಗಳೇ ಕಾಣುತ್ತಿದ್ದುವು. ಭೂಮಿಯನ್ನು ಕಾಣಬೇಕಾದರೆ ಮೃತಶರೀರಗಳನ್ನೆಲ್ಲಾ ತೆಗೆದು ಬಹಳ ಕಷ್ಟದಿಂದ ನೋಡಬೇಕಾಗುತ್ತಿತ್ತು.

ಮುದ್ಗರಗಳು, ದಂಡಗಳು, ನಾನಾವಿಧವಾದ ಚಕ್ರಗಳು, ನಿಶಿತವಾದ ಗಂಡು ಗೊಡಲಿಗಳು, ಭಿಂದಿಪಾಲಗಳು, ಶತಘ್ನಿಗಳು–ಇವೇ ಮುಂತಾದ ಶ್ರೇಷ್ಠ ವಾದ ಆಯುಧಗಳನ್ನು ಹಿಡಿದು ರಾಕ್ಷಸಸೈನಿಕರು ಹೊರಟರು. ರಾವಣನ ಆಜ್ಞೆಗೆ ಅನುಸಾರವಾಗಿ ನಾಲ್ವರು ಸೇನಾಪತಿಗಳು ಒಂದು ಲಕ್ಷಕ್ಕಿಂತಲೂ ಹೆಚ್ಚು ರಥಗಳನ್ನೂ, ಮೂರು ಲಕ್ಷ ಗಜಸೈನ್ಯವನ್ನೂ, ಅರುವತ್ತು ಕೋಟಿ ಅಶ್ವಸೈನ್ಯವನ್ನೂ, ಅಷ್ಟೇ ಸಂಖ್ಯೆಯ ಕತ್ತೆ ಮತ್ತು ಒಂಟೆಗಳ ಸೈನ್ಯವನ್ನೂ, ಅಸಂಖ್ಯಾತವಾದ ಪದಾತಿಸೈನ್ಯವನ್ನೂ ತೆಗೆದುಕೊಂಡು ಹೊರಟರು. ಹೀಗೆ ಅಪಾರವಾದ ಸೈನ್ಯದೊಡನೆ ಬಲಾಧ್ಯಕ್ಷರು ರಾವಣನ ಮುಂದೆ ಸಾಗಲು ಸಾರಥಿಯೊಬ್ಬನು ರಥವನ್ನು ತಂದು ನಿಲ್ಲಿಸಿದನು. ಆ ರಥವು ಶ್ರೇಷ್ಠವಾದ ದಿವ್ಯಾಸ್ತ್ರಗಳಿಂದ ಸಂಪನ್ನವಾಗಿದ್ದಿತು. ನಾನಾವಿಧವಾದ ಅಲಂಕಾರವಸ್ತು ಗಳಿಂದ ಅದನ್ನು ಸಿಂಗರಿಸಿದ್ದರು. ಅದರಲ್ಲಿ ನಾನಾವಿಧವಾದ ಆಯುಧಗಳಿ ದ್ದುವು. ಸಣ್ಣ-ಸಣ್ಣ ಗಂಟೆಗಳಿಂದ ಆ ರಥವು ಶೋಭಿಸುತ್ತಿದ್ದು ನಾನಾವಿಧ ವಾದ ರತ್ನಗಳಿಂದಲೂ ಝಟಿತವಾಗಿದ್ದಿತು. ರತ್ನಖಚಿತವಾದ ಕಂಬಗಳಿಂದ ರಾರಾಜಿಸುತ್ತಿದ್ದಿತು. ಸುವರ್ಣಮಯವಾದ ಸಾವಿರಾರು ಕಲಶಗಳು ಆ ರಥದ ಮೇಲ್ಭಾಗದಲ್ಲಿದ್ದುವು. ಅಂತಹ ಅದ್ಭುತವಾದ ರಥವನ್ನು ನೋಡಿ ರಾಕ್ಷಸರು ವಿಸ್ಮಿತರಾದರು. ಕೋಟಿ ಸೂರ್ಯರ ಪ್ರಕಾಶದಿಂದ ಕೂಡಿ ಬೆಳಗುತ್ತಿದ್ದ, ಪ್ರಜ್ವಲಿಸುವ ಅಗ್ನಿಯಂತೆಯೇ ಕಾಣುತ್ತಿದ್ದ, ಸೂತನಿಂದ ಯುಕ್ತವಾಗಿದ್ದ, ಎಂಟು ಕುದುರೆಗಳಿಂದ ಹೂಡಲ್ಪಟ್ಟಿದ್ದ, ಭಯಂಕರವಾಗಿ ಕಾಣುತ್ತಿದ್ದ, ತನ್ನ ತೇಜಸ್ಸಿನಿಂದ ದೇದೀಪ್ಯಮಾನವಾಗಿ ಬೆಳಗುತ್ತಿದ್ದ ರಥವನ್ನು ನೋಡಿದೊಡನೆಯೇ ರಾಕ್ಷಸೇಶ್ವರನಾದ ರಾವಣನು ಮುಂದೆ ಬಂದು ರಥ ವನ್ನು ಹತ್ತಿದನು. ಬಹುಸಂಖ್ಯಾತರಾದ ರಾಕ್ಷಸರಿಂದ ಸಮಾವೃತನಾಗಿ ತನ್ನ ಸತ್ತ್ವದಿಂದಲೂ ಮತ್ತು ಗಾಂಭೀರ್ಯದಿಂದಲೂ ಭೂಮಿಯನ್ನೇ ಸೀಳಿಬಿಡು ತ್ತಿರುವನೋ ಎಂಬಂತೆ ರಾವಣನು ರಣರಂಗಕ್ಕೆ ಬಹಳ ಬೇಗ ಪ್ರಯಾಣ ಮಾಡಿದನು.

ಸೈನ್ಯಸಮೇತವಾಗಿ ರಾವಣನು ಪ್ರಯಾಣಮಾಡುತ್ತಿದ್ದಾಗ ಮೃದಂಗ-ಪಟಹ ಶಬ್ದಗಳಿಂದಲೂ, ಶಂಖಧ್ವನಿಗಳಿಂದಲೂ, ಸೈನಿಕರ ಕೋಲಾಹಲ ಗಳಿಂದಲೂ ಕೂಡಿದ ರಣವಾದ್ಯಗಳ ಮಹಾನಿನಾದವು ಅಲ್ಲಲ್ಲಿ ಕೇಳಿಬರುತ್ತಿ

ದ್ದಿತು. "ಅಲ್ಲಿ ನೋಡಿರಿ! ಛತ್ರ-ಚಾಮರಗಳೊಡನೆ ರಾಕ್ಷಸರಾಜನು ಬರುತ್ತಿದ್ದಾನೆ. ಇವನೇ ಸೀತೆಯನ್ನು ಅಪಹರಿಸಿ ತಂದಿರುವ ಕಳ್ಳನು. ದುರಾಚಾರಿಯು. ಬ್ರಹ್ಮಹತ್ಯೆಮಾಡುವವನು. ದೇವತೆಗಳಿಗೆ ಕಂಟಕಪ್ರಾಯನಾಗಿರತಕ್ಕವನು. ರಾಘವನೊಡನೆ ಯುದ್ಧಮಾಡಲು ಹೋಗುತ್ತಿದ್ದಾನೆ"–ಎಂಬ ಜನರ ಮಾತುಗಳು ಎಲ್ಲ ಕಡೆಗಳಿಂದಲೂ ಕೇಳಿಬರುತ್ತಿದ್ದಿತು. ಅಪಾರವಾದ ಆ ಸೈನ್ಯದ ಮಹಾನಿನಾದದಿಂದಾಗಿ ಭೂಮಿಯೇ ಕಂಪಿಸಿತು. ಅಂತಹ ಭಯಂಕರಶಬ್ದವನ್ನು ಕೇಳಿ ವಾನರಸೈನಿಕರು ರಣರಂಗದಿಂದ ಪಲಾಯನಮಾಡಿದರು. ಮಂತ್ರಿಗಳಿಂದ ಪರಿವೃತನಾಗಿದ್ದ, ಮಹಾತೇಜಸ್ವಿಯಾದ, ಮಹಾಬಾಹುವಾದ ರಾವಣನು ವಿಜಯಗಳಿಸುವ ಸಲುವಾಗಿ ರಣರಂಗಕ್ಕೆ ಆಗಮಿಸಿದನು. ರಾವಣನ ಅನುಮತಿಯನ್ನು ಪಡೆದು ಎದುರಿಸಲು ಅಸಾಧ್ಯರಾಗಿದ್ದ ಮಹಾಪಾರ್ಶ್ವ-ಮಹೋದರ-ವಿರೂಪಾಕ್ಷರು ತಮ್ಮ-ತಮ್ಮ ರಥಗಳನ್ನು ಹತ್ತಿದರು. ವಿಜಯವನ್ನು ಬಯಸಿ ಹೊರಟಿದ್ದ ಆ ಮೂವರೂ ಪರಮಹೃಷ್ಟರಾಗಿ ಗರ್ಜಿಸುತ್ತಾ ಭೂಮಿಯನ್ನೇ ಸೀಳಿಬಿಡುವರೋ ಎಂಬಂತೆ ಭಯಂಕರವಾಗಿ ಸಿಂಹನಾದಮಾಡುತ್ತಾ ಪಟ್ಟಣದಿಂದ ಹೊರಟರು. ಅನಂತರ ಮಹಾಕಾಲನಂತೆಯೂ ಮತ್ತು ಮೃತ್ಯುವಿನಂತೆಯೂ ಕಾಣುತ್ತಿದ್ದ ತೇಜಸ್ವಿಯಾದ ರಾವಣನು ರಾಕ್ಷಸಸೈನಿಕರಿಂದ ಪರಿವೃತನಾಗಿ ಮಹಾಧನುಸ್ಸನ್ನು ಕೈಯಲ್ಲಿ ಹಿಡಿದು ಯುದ್ಧಕ್ಕೆ ಹೊರಟನು. ಮಹಾರಥನಾದ ರಾವಣನು ಬಹಳ ವೇಗವಾಗಿ ಹೋಗುವ ಕುದುರೆಗಳಿಂದ ಹೂಡಲ್ಪಟ್ಟಿದ್ದ ರಥದಲ್ಲಿ ಕುಳಿತು ಯಾವ ದಿಕ್ಕಿನಲ್ಲಿ ರಾಮ-ಲಕ್ಷ್ಮಣರಿದ್ದರೋ ಆ ದಿಕ್ಕಿನ ಮಹಾದ್ವಾರದ ಮೂಲಕವಾಗಿ ಹೊರಹೊರಟನು.

ಆ ಸಮಯದಲ್ಲಿ ಸೂರ್ಯನು ಪ್ರಭೆಯಿಲ್ಲದವನಾದನು. ದಿಕ್ಕುಗಳು ಕತ್ತಲೆಯಿಂದ ಕವಿದುವು. ಪಕ್ಷಿಗಳು ವಿಕಾರವಾದ ಸ್ವರದಿಂದ ಧ್ವನಿಗೈಯ್ಯುತ್ತಿದ್ದುವು. ಭೂಮಿಯು ನಡುಗಿತು. ದೇವೇಂದ್ರನು ರಕ್ತದ ಮಳೆಗರೆದನು. ಕುದುರೆಗಳು ತತ್ತರಿಸಿದುವು. ಧ್ವಜದ ತುದಿಯಲ್ಲಿ ರಣಹದ್ದುಗಳು ಬಿದ್ದುವು. ಗುಳ್ಳೇನರಿಗಳು ಅಮಂಗಳಕರವಾಗಿ ಊಳಿಡತೊಡಗಿದುವು. ರಾವಣನ ಎಡಗಣ್ಣು ಮತ್ತು ಎಡತೋಳು ಅದುರತೊಡಗಿದುವು. ಮುಖವು ವಿವರ್ಣವಾಯಿತು. ಧ್ವನಿಯೂ ಸ್ವಲ್ಪ ಬದಲಾಯಿಸಿತು. ದಶಗ್ರೀವನು

ಯುದ್ಧಮಾಡಲು ಯಾವ ರಣಭೂಮಿಗೆ ಹೋದನೋ ಆ ರಣಭೂಮಿಯಲ್ಲಿಯೇ ಅವನ ನಿಧನಸೂಚಕವಾದ ಶಕುನಗಳು ಪ್ರಕಟವಾಗತೊಡಗಿದುವು. ಸಿಡಿಲಿನ ಶಬ್ದದಂತೆ ಧ್ವನಿಮಾಡುತ್ತಾ ಆಕಾಶದಿಂದ ಉಲ್ಕೆಗಳು ಕೆಳಕ್ಕೆ ಬೀಳುತ್ತಿದ್ದುವು. ರಣಹದ್ದುಗಳು ಕಾಗೆಗಳ ಶಬ್ದದೊಡನೆ ವಿಕಾರಸ್ವರದಲ್ಲಿ ಕೂಗಿಕೊಳ್ಳುತ್ತಿದ್ದುವು. ಕಾಲಚೋದಿತನಾದ ರಾವಣನು ಎದುರಿನಲ್ಲೇ ಉಂಟಾಗುತ್ತಿದ್ದ ಘೋರವಾದ ಈ ಅಶುಭಶಕುನಗಳಾವುದನ್ನೂ ಲೆಕ್ಕಿಸದೇ ಮೋಹವಶನಾಗಿ ರಾಮ-ಲಕ್ಷ್ಮಣರನ್ನು ವಧಿಸುವ ಸಲುವಾಗಿ ಹೊರಟನು. ಮಹಾಕಾಯರಾದ ರಾಕ್ಷಸರ ರಥಗಳ ಗಡ-ಗಡಾಶಬ್ದಗಳನ್ನು ಕೇಳಿ ವಾನರ ಸೈನ್ಯವೂ ಯುದ್ಧಕ್ಕೆ ಸಜ್ಜಾಗಿ ರಾಕ್ಷಸಸೈನ್ಯವನ್ನು ಎದುರಿಸಿ ನಿಂತಿತು. ಕ್ರುದ್ಧರಾಗಿದ್ದ, ಒಬ್ಬರು ಮತ್ತೊಬ್ಬರನ್ನು ಜಯಿಸುವ ಆಶಯವುಳ್ಳವರಾಗಿದ್ದ, ಪರಸ್ಪರವಾಗಿ ಯುದ್ಧಕ್ಕೆ ಆಹ್ವಾನಿಸುತ್ತಿದ್ದ, ವಾನರ-ರಾಕ್ಷಸರ ನಡುವೆ ಮಹಾಭಯಂಕರವಾದ ಯುದ್ಧವು ಪ್ರಾರಂಭವಾಯಿತು.

ಬಳಿಕ ದಶಗ್ರೀವನು ಪರಮಕ್ರುದ್ಧನಾಗಿ ಚಿನ್ನದಿಂದ ಸಮಲಂಕೃತವಾಗಿದ್ದ ಬಾಣಗಳಿಂದ ವಾನರಸೈನ್ಯದಲ್ಲಿ ಮಹತ್ತರವಾದ ಸಂಹಾರಕಾರ್ಯವನ್ನು ಮಾಡಿದನು. ಅವನು ಕೆಲವು ವಾನರರ ತಲೆಗಳನ್ನು ಕತ್ತರಿಸಿದನು. ಕೆಲವರ ಹೃದಯಗಳನ್ನು ಸೀಳಿದನು. ಕೆಲವರ ಕಿವಿಗಳನ್ನು ಕತ್ತರಿಸಿದನು. ಕೆಲವು ವಾನರರು ಉಸಿರಡಗಿ ಪ್ರಾಣಗಳನ್ನು ತೊರೆದರು. ಕೆಲವು ವಾನರರ ಪಕ್ಕೆಗಳು ಸೀಳಿಹೋಗಿದ್ದುವು. ಕೆಲವರ ತಲೆಗಳು ಕತ್ತರಿಸಲ್ಪಟ್ಟಿದ್ದುವು. ಕೆಲವು ವಾನರರ ಕಣ್ಣುಗಳೇ ಇಂಗಿಹೋದುವು. ಕ್ರೋಧದಿಂದ ಅರಳಿದ ಕಣ್ಣುಗಳನ್ನು ಹೊಂದಿದ್ದ ರಾವಣನು ಯುದ್ಧಸಮಯದಲ್ಲಿ ರಥದಲ್ಲಿ ಕುಳಿತು ಯಾವ ಯಾವ ದಿಕ್ಕಿಗೆ ಹೋಗುತ್ತಿದ್ದನೋ ಆಯಾ ದಿಕ್ಕುಗಳಲ್ಲಿದ್ದ ವಾನರ ದಳಪತಿಗಳು ರಾವಣನ ಬಾಣಗಳ ವೇಗವನ್ನು ಸಹಿಸಿಕೊಳ್ಳಲು ಅಸಮರ್ಥರಾದರು.

೯೫ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೯೬ನೆಯ ಸರ್ಗ

ಸುಗ್ರೀವನಿಂದ ರಾಕ್ಷಸಸೈನ್ಯದ ಸಂಹಾರ : ವಿರೂಪಾಕ್ಷನ ವಧೆ

ತಥಾ ತೈಃ ಕೃತ್ತಗಾತ್ರೈಸ್ತು ದಶಗ್ರೀವೇಣ ಮಾರ್ಗಣೈಃ ।
ಬಭೂವ ವಸುಧಾ ತತ್ರ ಪ್ರಕೀರ್ಣಾ ಹರಿಭಿಸ್ತದಾ ॥೧॥

ದಶಗ್ರೀವನು ತನ್ನ ಪ್ರಖರವಾದ ಬಾಣಗಳಿಂದ ವಾನರದಳಪತಿಗಳ ಶರೀರವನ್ನು ಛಿನ್ನ-ಭಿನ್ನಮಾಡುತ್ತಿರಲು ರಣಭೂಮಿಯು ಪ್ರಾಣತೊರೆದು ಬಿದ್ದಿದ್ದ ವಾನರರ ಶರೀರಗಳಿಂದ ತುಂಬಿಹೋಯಿತು.

ಪತಂಗದ ಹುಳುಗಳು ಅಗ್ನಿಯನ್ನು ಆಕ್ರಮಿಸಲು ಸಾಧ್ಯವಾಗದಂತೆ– ಸಹಿಸಲು ಅಸಾಧ್ಯವಾದ ಪ್ರದೀಪ್ತವಾದ ರಾವಣನ ಬಾಣಗಳ ಪ್ರಹಾರವನ್ನು ವಾನರಸೈನಿಕರು ಕ್ಷಣಮಾತ್ರವಾದರೂ ಸಹಿಸಿಕೊಳ್ಳುವಷ್ಟು ಸಮರ್ಥರಾಗಿರ ಲಿಲ್ಲ. ಕಾಳ್ಗಿಚ್ಚಿನಿಂದ ದಹಿಸಲ್ಪಡುತ್ತಿರುವ ಕಾಡಾನೆಗಳಂತೆ ನಿಶಿತವಾದ ಬಾಣಗಳಿಂದ ಪ್ರಹರಿಸಲ್ಪಡುತ್ತಿದ್ದ ವಾನರಯೋಧರು ಚೀತ್ಕಾರಮಾಡುತ್ತಾ ದಿಕ್ಕಾಪಾಲಾಗಿ ಓಡಿಹೋದರು. ಬಿರುಗಾಳಿಯು ಮಹಾಮೇಘಗಳನ್ನು ಚದುರಿಸಿಬಿಡುವಂತೆ ತೀಕ್ಷ್ಣವಾದ ಬಾಣಗಳಿಂದ ರಾವಣನು ವಾನರಸೇನೆ ಯನ್ನು ಧ್ವಂಸಮಾಡುತ್ತಾ ರಣಾಂಗಣದಲ್ಲಿ ಸಂಚರಿಸುತ್ತಿದ್ದನು. ಹೀಗೆ ರಾಕ್ಷಸೇಂದ್ರನಾದ ರಾವಣನು ಬಹಳ ಬೇಗ ವಾನರಸೈನಿಕರನ್ನು ಸಂಹರಿಸಿ ಯುದ್ಧಮಾಡುವ ಸಲುವಾಗಿ ಶ್ರೀರಾಮನ ಬಳಿಗೆ ಧಾವಿಸಿದನು.

ಕಪಿಸೈನಿಕರು ಚದುರಿ ಓಡುತ್ತಿರುವುದನ್ನು ನೋಡಿ ಕಪಿರಾಜನಾದ ಸುಗ್ರೀವನು ಸುಷೇಣನನ್ನು ದಂಡಿನ ಪಾಳೆಯದಲ್ಲಿ ನಿಲ್ಲಿಸಿ ತಾನೇ ಯುದ್ಧ ಮಾಡಲು ಮನಸ್ಸುಮಾಡಿದನು. ಹೀಗೆ ಸುಗ್ರೀವನು ತನ್ನಷ್ಟೇ ಪರಾಕ್ರಮಿ ಯಾದ ಸುಷೇಣನನ್ನು ವಾನರಸೈನ್ಯದ ರಕ್ಷಣಾಭಾರದಲ್ಲಿ ನಿಯೋಜಿಸಿ ವೃಕ್ಷ ವನ್ನೇ ಆಯುಧವನ್ನಾಗಿ ಹಿಡಿದು ಶತ್ರುವಿನ ಕಡೆಗೆ ಧಾವಿಸಿದನು. ಸುಗ್ರೀವನ ಪಾರ್ಶ್ವದಲ್ಲಿ ಮತ್ತು ಹಿಂಬದಿಯಲ್ಲಿ ಸಮಸ್ತವಾನರದಳಪತಿಗಳೂ ವಿಧ-ವಿಧ ವಾದ ವೃಕ್ಷಗಳನ್ನೂ ಪರ್ವತಗಳ ದೊಡ್ಡ-ದೊಡ್ಡ ಶಿಖರಗಳನ್ನೂ ಎತ್ತಿಕೊಂಡು ಧಾವಿಸಿದರು.

ಯುದ್ಧದಲ್ಲಿ ಸುಗ್ರೀವನು ದೊಡ್ಡದಾದ ಧ್ವನಿಯಿಂದ ಗರ್ಜಿಸುತ್ತಿದ್ದನು. ಪ್ರಲಯಕಾಲದಲ್ಲಿ ದೊಡ್ಡ-ದೊಡ್ಡ ವೃಕ್ಷಗಳನ್ನೂ ಬುಡಮೇಲಾಗಿಸುವ ಚಂಡಮಾರುತದಂತೆ–ವಿಶಾಲಕಾಯನಾದ ಸುಗ್ರೀವನು ವಿಧ-ವಿಧವಾದ ಆಕಾರಗಳಿಂದ ಕೂಡಿದ್ದ ವೀರರಾದ ರಾಕ್ಷಸರನ್ನು ಕೆಳಕ್ಕೆ ಬೀಳಿಸಿ ಧ್ವಂಸಮಾಡುತ್ತಿದ್ದನು. ಅರಣ್ಯದಲ್ಲಿರುವ ಪಕ್ಷಿಗಳ ಸಮೂಹದ ಮೇಲೆ ಕಾಳಮೇಘವು ಆಲಿಕಲ್ಲಿನ ಮಳೆಗರೆಯುವಂತೆ–ರಾಕ್ಷಸರ ಸೈನ್ಯದ ಮೇಲೆ ಬಂಡೆಗಳ ಮಳೆಯನ್ನೇ ಸುರಿಸಿದನು. ಇಂದ್ರನ ವಜ್ರಾಯುಧದ ಪ್ರಹಾರಕ್ಕೆ ಸಿಕ್ಕಿದ ಪರ್ವತಗಳು ಚೂರು-ಚೂರುಗಳಾಗಿ ಎಲ್ಲ ಕಡೆಗಳಲ್ಲಿಯೂ ಬಿದ್ದಂತೆ ಕಪಿರಾಜನಿಂದ ಸುರಿಸಲ್ಪಡುತ್ತಿದ್ದ ಬಂಡೆಗಳ ಮಳೆಯಿಂದ ರಾಕ್ಷಸಸೈನಿಕರು ಜಜ್ಜಿಹೋದ ತಲೆಯುಳ್ಳವರಾಗಿ ಕೆಳಕ್ಕೆ ಬೀಳುತ್ತಿದ್ದರು. ಹೀಗೆ ಸುಗ್ರೀವನ ಬಂಡೆಗಳ ಪ್ರಹಾರದಿಂದ ಎಲ್ಲ ಕಡೆಗಳಲ್ಲಿಯೂ ರಾಕ್ಷಸಸೈನಿಕರು ವಿನಾಶಹೊಂದುತ್ತಿರಲು, ಆರ್ತನಾದಮಾಡುತ್ತಾ ಕೆಳಕ್ಕೆ ಬೀಳುತ್ತಿರಲು ವಿರೂಪಾಕ್ಷನೆಂಬ ದುರ್ಜಯನಾದ ರಾಕ್ಷಸನು ತನ್ನ ಹೆಸರನ್ನು ಘೋಷಿಸುತ್ತಾ ಧನುಸ್ಸನ್ನು ಹಿಡಿದು ರಥದಿಂದ ಕೆಳಕ್ಕೆ ಧುಮುಕಿ ಹತ್ತಿರದಲ್ಲಿಯೇ ಇದ್ದ ಆನೆಯ ಮೇಲೆ ಕುಳಿತನು. ಹೀಗೆ ಆನೆಯ ಮೇಲೇರಿದ ಮಹಾಬಲನಾದ ವಿರೂಪಾಕ್ಷನು ಭಯಂಕರವಾಗಿ ಸಿಂಹನಾದಮಾಡುತ್ತಾ ವಾನರಸೈನಿಕರನ್ನು ಆಕ್ರಮಿಸಿದನು. ಉದ್ವಿಗ್ನರಾಗಿದ್ದ ರಾಕ್ಷಸರನ್ನು ತನ್ನ ಸಿಂಹಗರ್ಜನೆಯಿಂದ ಹರ್ಷಗೊಳಿಸುತ್ತಾ ವಿರೂಪಾಕ್ಷನು ಸುಗ್ರೀವನ ಮೇಲೆ ಘೋರವಾದ ಬಾಣಗಳನ್ನು ಪ್ರಯೋಗಿಸಿದನು. ರಾಕ್ಷಸನಿಂದ ಬಹಳವಾಗಿ ಗಾಯಗೊಳಿಸಲ್ಪಟ್ಟ ಸುಗ್ರೀವನು ಅತ್ಯಂತ ಕ್ರುದ್ಧನಾಗಿ ಭೀಕರವಾಗಿ ಗರ್ಜಿಸುತ್ತಾ ವಿರೂಪಾಕ್ಷನನ್ನು ಸಂಹರಿಸಲು ನಿಶ್ಚಯಿಸಿದನು. ಯುದ್ಧಮಾಡುವ ಕಲೆಯನ್ನು ಚೆನ್ನಾಗಿ ತಿಳಿದಿದ್ದ ಸುಗ್ರೀವನು ವೃಕ್ಷವೊಂದನ್ನು ಬುಡಸಹಿತವಾಗಿ ಕಿತ್ತು ಮುಂದೆ ಹೋಗಿ ತನ್ನೆದುರಾಗಿ ನಿಂತಿದ್ದ ವಿರೂಪಾಕ್ಷನು ಕುಳಿತಿದ್ದ ಆನೆಯ ಮುಖವನ್ನು ಆ ವೃಕ್ಷದಿಂದ ಅಪ್ಪಳಿಸಿದನು. ಸುಗ್ರೀವನ ಆ ಪ್ರಹಾರದಿಂದ ಗಾಯಗೊಂಡ ಮಹಾಗಜವು ಧನುಸ್ಸಿನ ಪರಿಮಿತಿಯಷ್ಟು (ನಾಲ್ಕು ಮೊಳಗಳಷ್ಟು) ಹಿಂದೆ ಸರಿದು ಗಟ್ಟಿಯಾಗಿ ಆರ್ತನಾದಮಾಡಿತು. ಪರಾಕ್ರಮಿಯಾದ ವಿರೂಪಾಕ್ಷ ರಾಕ್ಷಸನು ಗಾಯಗೊಂಡಿದ್ದ ಆ ಆನೆಯ ಮೇಲಿಂದ ಕೆಳಕ್ಕೆ ಧುಮುಕಿ ಕತ್ತಿ-

ಗುರಾಣಿಗಳನ್ನು ಹಿಡಿದು ಬಹಳ ಶೀಘ್ರವಾಗಿ ಸುಸ್ಥಿರನಾಗಿ ನಿಂತಿದ್ದ ಸುಗ್ರೀವನನ್ನು ಭಯಪಡಿಸುವ ರೀತಿಯಲ್ಲಿ ಗರ್ಜನೆಮಾಡುತ್ತಾ ಧಾವಿಸಿದನು. ವಿರೂಪಾಕ್ಷನು ತನ್ನ ಮೇಲೆ ಬೀಳಲು ಬರುತ್ತಿರುವುದನ್ನು ಕಂಡು ಕ್ರುದ್ಧನಾದ ಸುಗ್ರೀವನು ಮೇಘದೋಪಾದಿಯಲ್ಲಿ ಕಪ್ಪಾಗಿಯೂ ದೊಡ್ಡದಾಗಿಯೂ ಇದ್ದ ಬಂಡೆಯೊಂದನ್ನೆತ್ತಿಕೊಂಡು ವಿರೂಪಾಕ್ಷನ ಮೇಲೆಸೆದನು. ಆ ದೊಡ್ಡ ಬಂಡೆಯು ತನ್ನ ಮೇಲೆ ಬೀಳಲಿರುವುದನ್ನು ಕಂಡು ರಾಕ್ಷಸಶ್ರೇಷ್ಠನಾದ ಮಹಾಪರಾಕ್ರಮಿಯಾದ ವಿರೂಪಾಕ್ಷನು ಹಿಂದಕ್ಕೆ ಸರಿದು ಅಪಘಾತದಿಂದ ತಪ್ಪಿಸಿಕೊಂಡು ಮರುಕ್ಷಣದಲ್ಲಿಯೇ ಕತ್ತಿಯಿಂದ ಸುಗ್ರೀವನನ್ನು ಪ್ರಹರಿಸಿದನು. ಬಲಿಷ್ಠನಾದ ಆ ರಾಕ್ಷಸನು ಕತ್ತಿಯಿಂದ ಪ್ರಹರಿಸಲು ಸುಗ್ರೀವನು ಬಹಳವಾಗಿ ಗಾಯಗೊಂಡು ಮುಹೂರ್ತಕಾಲ ಎಚ್ಚರದಪ್ಪಿ ಭೂಮಿಯಲ್ಲಿ ಬಿದ್ದಿದ್ದನು. ಅನಂತರ ಎಚ್ಚರಗೊಂಡು ಥಟಗನೆ ಹಾರಿ ಮುಷ್ಟಿಯನ್ನು ತಿರುಗಿಸುತ್ತಾ ಅತ್ಯಂತವೇಗವಾಗಿ ವಿರೂಪಾಕ್ಷರಾಕ್ಷಸನ ವಕ್ಷಃಸ್ಥಳದಲ್ಲಿ ಪ್ರಹರಿಸಿದನು. ಹೀಗೆ ಮುಷ್ಟಿಯಿಂದ ಪ್ರಹರಿಸಲ್ಪಟ್ಟ ವಿರೂಪಾಕ್ಷನು ಮತ್ತೂ ಕ್ರುದ್ಧನಾಗಿ ಕತ್ತಿಯಿಂದ ಸುಗ್ರೀವನ ಕವಚವನ್ನು ಕತ್ತರಿಸಿ ಕಾಲುಗಳನ್ನೂ ಗಾಯಗೊಳಿಸಿದನು. ಒಡನೆಯೇ ಸುಗ್ರೀವನು ಭೂಮಿಯ ಮೇಲೆ ಬಿದ್ದನು. ಮರುಕ್ಷಣದಲ್ಲಿಯೇ ಮೇಲೆದ್ದು ವಜ್ರಾಯುಧಕ್ಕೆ ಸಮಾನವಾಗಿದ್ದ, ಭಯಂಕರವಾದ ಧ್ವನಿಯನ್ನುಂಟುಮಾಡುವುದಾಗಿದ್ದ ಅಂಗೈಯಿಂದ ವಿರೂಪಾಕ್ಷನನ್ನು ಪ್ರಹರಿಸಿದನು. ಸುಗ್ರೀವನ ಅಂಗೈಹೊಡೆತವನ್ನು ರಾಕ್ಷಸನು ನಿಪುಣತೆಯಿಂದ ತಪ್ಪಿಸಿಕೊಂಡು ಮರುಕ್ಷಣದಲ್ಲಿ ಸುಗ್ರೀವನ ವಕ್ಷಃಸ್ಥಳವನ್ನು ಮುಷ್ಟಿಯಿಂದ ಪ್ರಹರಿಸಿದನು. ವಿರೂಪಾಕ್ಷನು ಹೊಡೆತವನ್ನು ತಪ್ಪಿಸಿಕೊಂಡುದೂ ಅಲ್ಲದೇ ತನಗೇ ಮರುಪ್ರಹಾರವನ್ನು ಕೊಟ್ಟುದಕ್ಕಾಗಿ ಸುಗ್ರೀವನಿಗೆ ಅತಿಯಾದ ಕೋಪವೂ ಉಂಟಾಯಿತು. ಅವನು ವಿರೂಪಾಕ್ಷನನ್ನು ಮತ್ತೊಮ್ಮೆ ಪ್ರಹರಿಸಲು ಸಮಯವನ್ನು ಕಾಯುತ್ತಾ ನಿಂತಿದ್ದನು. ಒಂದೆರಡು ಕ್ಷಣಗಳನಂತರ ಸುಗ್ರೀವನು ರಾಕ್ಷಸನ ಹಣೆಯ ಮೂಳೆಯ ಮೇಲೆ ವಜ್ರಾಯುಧಸದೃಶವಾದ ಅಂಗೈಯಿಂದ ಪ್ರಹರಿಸಿದನು. ಮರುಕ್ಷಣದಲ್ಲಿಯೇ ರಕ್ತದಿಂದ ತೋಯ್ದು ಹೋಗಿದ್ದ ವಿರೂಪಾಕ್ಷನು ಭೂಮಿಯ ಮೇಲೆ ಬಿದ್ದನು. ಪರ್ವತದ ಝರಿ

ಗಳಿಂದ ನೀರು ಸುರಿಯುವಂತೆ–ಅವನ ಎಲ್ಲ ಇಂದ್ರಿಯಗಳಿಂದಲೂ ರಕ್ತವು ಸೋರುತ್ತಿದ್ದಿತು. ಹಾಗೆ ನೆಲದ ಮೇಲೆ ಬಿದ್ದಿದ್ದಾಗಲೂ ರಾಕ್ಷಸನ ಕಣ್ಣುಗಳು ಕ್ರೋಧದಿಂದಾಗಿ ಸುತ್ತುತ್ತಿದ್ದುವು. ಅವನ ಬಾಯಲ್ಲಿ ನೊರೆಯು ಸುತ್ತಿ ಕೊಂಡಿದ್ದಿತು. ಅವನು ರಕ್ತದಿಂದ ತೋಯ್ದುಹೋಗಿದ್ದನು. ಮೊದಲೇ ವಿರೂಪವಾದ ಕಣ್ಣುಗಳನ್ನು ಹೊಂದಿದ್ದ ಆ ರಾಕ್ಷಸನು ತಲಪ್ರಹಾರದಿಂದಾಗಿ ಮತ್ತಷ್ಟು ವಿರೂಪವಾದ ಕಣ್ಣುಗಳುಳ್ಳವನಾದನು. ತರತರನೆ ನಡುಗುತ್ತಿದ್ದನು. ಅತ್ತಲಿತ್ತ ಹೊರಳಾಡುತ್ತಿದ್ದನು. ದೀನಸ್ವರದಿಂದ ಕೂಗಿಕೊಳ್ಳುತ್ತಿದ್ದನು. ಅಂತಹ ಅವಸ್ಥೆಯಲ್ಲಿದ್ದ ರಾಕ್ಷಸನನ್ನು ವಾನರಸೈನಿಕರು ನೋಡಿದರು.

ಹೀಗೆ ವೇಗಶಾಲಿಗಳಾದ ವಾನರ-ರಾಕ್ಷಸಸೈನಿಕರು ಮೇರೆ ಮೀರಿ ಉಕ್ಕಿ ಬರುವ ಎರಡು ಮಹಾಸಮುದ್ರಗಳಂತೆ ಯುದ್ಧದಲ್ಲಿ ಒಟ್ಟುಗೂಡಿ ಕೋಲಾ ಹಲಶಬ್ದಗಳನ್ನು ಮಾಡುತ್ತಿದ್ದರು. ವಾನರರಾಜನಾದ ಸುಗ್ರೀವನು ಮಹಾ ಬಲನಾದ ವಿರೂಪಾಕ್ಷನನ್ನು ಸಂಹಾರಮಾಡಿದುದನ್ನು ಕಂಡು ಜೊತೆಗೂಡಿ ನಿಂತಿದ್ದ ವಾನರ-ರಾಕ್ಷಸರ ಆ ಮಹಾಸೈನ್ಯವು ತೀರಪ್ರದೇಶವನ್ನು ಅತಿಕ್ರಮಿಸಿ ಹರಿಯುವ ಗಂಗಾನದಿಯಂತೆಯೇ ಕಾಣುತ್ತಿದ್ದಿತು. ಒಂದು ಕಡೆಯಲ್ಲಿ ಆನಂದಜನಿತವಾದ ಕೋಲಾಹಲವೂ ಮತ್ತೊಂದು ಕಡೆಯಲ್ಲಿ ಶೋಕದಿಂದ ಉಂಟಾದ ಆರ್ತನಾದವೂ ಕೇಳಿಬರುತ್ತಿದ್ದಿತು.

೯೬ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೯೭ನೆಯ ಸರ್ಗ

ಸುಗ್ರೀವನೊಡನೆ ಮಹೋದರನ ಯುದ್ಧ ಮತ್ತು ಅವನ ವಧೆ

ಹನ್ಯಮಾನೇ ಬಲೇ ತೂರ್ಣಮನ್ಯೋನ್ಯಂ ತೇ ಮಹಾಮೃಧೇ ।
ಸರಸೀವ ಮಹಾಘರ್ಮೇ ಸೂಪಕ್ಷೀಣೇ ಬಭೂವತುಃ ॥೧॥

ಆ ಮಹಾಯುದ್ಧದಲ್ಲಿ ವಾನರ-ರಾಕ್ಷಸಸೈನಿಕರು ಪರಸ್ಪರವಾಗಿ ಒಬ್ಬರು ಮತ್ತೊಬ್ಬರನ್ನು ಸಂಹರಿಸುತ್ತಿರಲಾಗಿ ಕಡುಬೇಸಿಗೆಯಲ್ಲಿ ಸರೋವರವು ಒಣಗಿ ಹೋಗುವಂತೆ ಎರಡು ಕಡೆಯ ಸೈನ್ಯಗಳೂ ಕ್ಷೀಣಿಸತೊಡಗಿದುವು.

ತನ್ನ ಸೈನ್ಯಕ್ಕೆ ಆಗುತ್ತಿರುವ ಆಘಾತದಿಂದಲೂ ಮತ್ತು ವಿರೂಪಾಕ್ಷನ ವಧೆಯಿಂದಲೂ ರಾಕ್ಷಸೇಶ್ವರನಾದ ರಾವಣನ ಕೋಪವು ಇಮ್ಮಡಿಯಾಯಿತು. ವಾನರರಿಂದ ಸಂಹರಿಸಲ್ಪಡುತ್ತಿದ್ದು ತನ್ನ ಸೈನ್ಯವು ಕ್ಷಣ-ಕ್ಷಣಕ್ಕೂ ಕ್ಷೀಣಿಸುತ್ತಿರುವುದನ್ನೂ ದೈವದ ವೈಪರೀತ್ಯವನ್ನೂ ಕಂಡು ರಣರಂಗದಲ್ಲಿ ರಾವಣನಿಗೆ ಬಹಳ ವ್ಯಥೆಯಾಯಿತು. ಸಮೀಪದಲ್ಲಿ ನಿಂತಿದ್ದ ಮಹೋದರನಿಗೆ ಹೇಳಿದನು :

ಅಸ್ಮಿನ್ಕಾಲೇ ಮಹಾಬಾಹೋ ಜಯಾಶಾ ತ್ವಯಿ ಮೇ ಸ್ಥಿತಾ ||೪||

"ಮಹಾಭುಜನೇ! ಈ ಸಮಯದಲ್ಲಿ ಶತ್ರುಗಳನ್ನು ಜಯಿಸುವ ಭರವಸೆಯು ನಿನ್ನನ್ನೇ ಅವಲಂಬಿಸಿದೆ. ಮಹೋದರ! ಶತ್ರುಗಳನ್ನು ಸಂಹರಿಸಿ ನಿನ್ನ ಪರಾಕ್ರಮವನ್ನು ತೋರಿಸು. ದಣಿಯ ಅನ್ನವನ್ನು ತಿಂದುದಕ್ಕೆ ಪ್ರತ್ಯುಪಕಾರವನ್ನು ಮಾಡಬೇಕಾಗಿರುವ ಕಾಲವೀಗ ಒದಗಿಬಂದಿದೆ. ಆದುದರಿಂದ ಹೋಗು! ಚೆನ್ನಾಗಿ ಯುದ್ಧಮಾಡು."

ರಾವಣನು ಹೀಗೆ ಹೇಳಲು ರಾಕ್ಷಸೇಂದ್ರನಾದ ಮಹೋದರನು ಪತಂಗದ ಹುಳುಗಳು ಅಗ್ನಿಯಲ್ಲಿ ಬೀಳುವಂತೆ–ಶತ್ರುಸೈನ್ಯದಲ್ಲಿ ನುಗ್ಗಿದನು. ಒಡೆಯನ ಆಜ್ಞೆಯಿಂದಲೂ ಮತ್ತು ತನ್ನ ಶೌರ್ಯ-ವೀರ್ಯಗಳಿಂದಲೂ ಚೋದಿತನಾದ ಮಹಾಬಲನಾದ ಮಹೋದರನು ವಾನರರನ್ನು ಸಂಹರಿಸಲು ತೊಡಗಿದನು. ಮಹಾಸತ್ತ್ವಶಾಲಿಗಳಾದ ವಾನರರು ಕೂಡ ದೊಡ್ಡ-ದೊಡ್ಡ ಬಂಡೆಗಳನ್ನೆತ್ತಿಕೊಂಡು ಭಯಂಕರವಾದ ರಾಕ್ಷಸಸೈನ್ಯದೊಳಗೆ ನುಗ್ಗಿ ರಾಕ್ಷಸರನ್ನು ಸಂಹರಿಸಲು ಪ್ರಾರಂಭಿಸಿದರು. ಅದರಿಂದ ಅತ್ಯಂತಕ್ರುದ್ಧನಾದ ಮಹೋದರನು ಸುವರ್ಣಭೂಷಿತವಾದ ಬಾಣಗಳಿಂದ ವಾನರಸೈನಿಕರ ಕೈ-ಕಾಲುಗಳನ್ನೂ ತೊಡೆಗಳನ್ನೂ ಕತ್ತರಿಸಿದನು. ಹೀಗೆ ಮಹೋದರರಾಕ್ಷಸನಿಂದ ಪೀಡಿಸಲ್ಪಟ್ಟ ವಾನರರು ದಿಕ್ಕಾಪಾಲಾಗಿ ಓಡಿಹೋದರು. ಅವರಲ್ಲಿ ಕೆಲವರು ರಾಜನಾದ ಸುಗ್ರೀವನನ್ನು ಆಶ್ರಯಿಸಿದರು. ವಾನರರ ಮಹಾಸೈನ್ಯವು ಭಗ್ನವಾಗಿ ಹೋದುದನ್ನು ಕಂಡು ಸುಗ್ರೀವನು ಮಹೋದರನ ಕಡೆಗೆ ಧಾವಿಸಿದನು. ಹರೀಶ್ವರನಾದ ಮಹಾತೇಜಸ್ವಿಯಾದ ಸುಗ್ರೀವನು ಪರ್ವತದಂತೆಯೇ ಇದ್ದ ದೊಡ್ಡದಾದೊಂದು ಬಂಡೆಯನ್ನೆತ್ತಿಕೊಂಡು

ಮಹೋದರನನ್ನು ವಧಿಸುವ ಆಶಯದಿಂದ ಅವನ ಮೇಲೆಸೆದನು. ತನ್ನ ಮೇಲೆ ದೊಡ್ಡದಾದೊಂದು ಬಂಡೆಯು ಬೀಳಲಿರುವುದನ್ನು ಕಂಡು ಮಹೋದರನು ಸ್ವಲ್ಪವೂ ಗಾಬರಿಗೊಳ್ಳದೇ ಎದುರಿಸಲು ಅಸಾಧ್ಯವಾಗಿದ್ದ ಆ ಬಂಡೆಯನ್ನು ಬಾಣಗಳಿಂದ ನುಚ್ಚುನೂರುಮಾಡಿದನು. ಬಾಣಗಳಿಂದ ಕತ್ತರಿಸಲ್ಪಟ್ಟ ಆ ಬಂಡೆಯು ಸಾವಿರಾರು ಚೂರುಗಳಾಗಿ ಕೆಳಗೆ ಬಿದ್ದು–ವ್ಯಾಕುಲಗೊಂಡು ಬಿದ್ದಿರುವ ರಣಹದ್ದುಗಳಂತೆ–ಕಾಣುತ್ತಿದ್ದಿತು. ತಾನೆಸೆದ ಬಂಡೆಯು ಭಿನ್ನ-ಭಿನ್ನವಾದುದನ್ನು ಕಂಡು ಕ್ರೋಧಮೂರ್ಛಿತನಾದ ಸುಗ್ರೀವನು ವೃಕ್ಷವೊಂದನ್ನು ಬೇರುಸಹಿತವಾಗಿ ಕಿತ್ತು ಮಹೋದರನ ಮೇಲೆಸೆದನು. ಅದನ್ನು ಕೂಡ ರಾಕ್ಷಸನು ಬಾಣಗಳಿಂದ ಅನೇಕ ಚೂರುಗಳನ್ನಾಗಿ ಮಾಡಿದನು. ಶತ್ರುಗಳ ಬಲವನ್ನು ದಮನಮಾಡುವ ಸಾಮರ್ಥ್ಯವನ್ನು ಹೊಂದಿದ್ದ ಮಹೋದರನು ತೀಕ್ಷ್ಣವಾದ ಬಾಣಗಳಿಂದ ಸುಗ್ರೀವನನ್ನು ಬಹಳವಾಗಿ ಗಾಯಗೊಳಿಸಿದನು. ಆ ಸಮಯದಲ್ಲಿ ಸುಗ್ರೀವನು ಪರಿಘಾಯುಧವೊಂದು ನೆಲದ ಮೇಲೆ ಬಿದ್ದಿರುವುದನ್ನು ಕಂಡನು. ದೇದೀಪ್ಯಮಾನವಾಗಿ ಕಾಣುತ್ತಿದ್ದ ಆ ಪರಿಘಾಯುಧವನ್ನೆತ್ತಿಕೊಂಡು ತಿರುಗಿಸುತ್ತಾ ಮತ್ತು ತನ್ನ ತೋಳ್ಬಲದ ವೇಗವನ್ನು ಶತ್ರುವಿಗೆ ತೋರ್ಪಡಿಸುತ್ತಾ ಮಹೋದರನ ರಥದ ಕುದುರೆಗಳನ್ನು ಅದರಿಂದ ಅಪ್ಪಳಿಸಿ ಸಂಹರಿಸಿದನು. ಕುದುರೆಗಳು ಸತ್ತುಹೋದನಂತರ ಮಹೋದರನು ಮಹಾರಥದಿಂದ ಕೆಳಕ್ಕೆ ಧುಮುಕಿ ಪರಮಕ್ರುದ್ಧನಾಗಿ ಗದೆಯನ್ನೆತ್ತಿಕೊಂಡನು. ಗದಾಪಾಣಿಯಾದ ಮಹೋದರನೂ ಪರಿಘಪಾಣಿಯಾದ ಸುಗ್ರೀವನೂ ರಣರಂಗದಲ್ಲಿ ಎರಡು ಗೂಳಿಗಳಂತೆ ಮತ್ತು ಮಿಂಚಿನಿಂದ ಕೂಡಿದ ಮೇಘಗಳಂತೆ ಗರ್ಜನೆಮಾಡುತ್ತಾ ಯುದ್ಧದಲ್ಲಿ ತೊಡಗಿದರು. ರಜನೀಚರನಾದ ಮಹೋದರನು ಪರಮಕ್ರುದ್ಧನಾಗಿ ಕಾಂತಿಯಿಂದ ಪ್ರಜ್ವಲಿಸುತ್ತಿದ್ದ, ಸೂರ್ಯನ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಕೂಡಿದ್ದ ಗದೆಯನ್ನು ಸುಗ್ರೀವನ ಮೇಲೆ ಪ್ರಯೋಗಿಸಿದನು. ಭಯಂಕರವಾಗಿದ್ದ ಗದೆಯು ತನ್ನ ಮೇಲೆ ಬೀಳಲಿರುವುದನ್ನು ಕಂಡು ಮಹಾಬಲನಾದ ಕೋಪದಿಂದ ಕೆಂಗಣ್ಣನಾಗಿದ್ದ ಸುಗ್ರೀವನು ತನ್ನ ಕೈಲಿದ್ದ ಪರಿಘದಿಂದಲೇ ಆ ಗದೆಯನ್ನು ಅಪ್ಪಳಿಸಿದನು. ಒಡನೆಯೇ ಗದೆಯೂ ಭಿನ್ನವಾಗಿ ಕೆಳಗೆ ಬಿದ್ದಿತು. ಪರಿಘಾಯುಧವೂ ಗದೆಯಿಂದ ಸಮ್ಮರ್ದಿತವಾಗಿ ಭಿನ್ನ-ಭಿನ್ನ

ವಾಗಿ ಭೂಮಿಯ ಮೇಲೆ ಬಿದ್ದಿತು. ಕೂಡಲೇ ಸುಗ್ರೀವನು ನೆಲದ ಮೇಲೆ ಬಿದ್ದಿದ್ದ ಲೋಹಮಯವಾದ ಸುವರ್ಣಭೂಷಿತವಾಗಿದ್ದ ಮುಸಲಾಯುಧವನ್ನು ಕೈಗೆತ್ತಿಕೊಂಡು ಅದರಿಂದಲೇ ಮಹೋದರನನ್ನು ಪ್ರಹರಿಸಿದನು. ಮುಸಲಾಯುಧವು ತನ್ನ ಮೇಲೆ ಬೀಳಲಿರುವುದನ್ನು ಕಂಡು ಮಹೋದರನು ಮತ್ತೊಂದು ಗದೆಯಿಂದ ಮುಸಲಾಯುಧವನ್ನು ಪ್ರಹರಿಸಿದನು. ಎರಡು ಆಯುಧಗಳೂ ಸಂಘರ್ಷಿಸಿ ಛಿನ್ನ-ಭಿನ್ನವಾಗಿ ನೆಲದ ಮೇಲೆ ಬಿದ್ದು ಹೋದುವು. ಗದೆ-ಪರಿಘ-ಮುಸಲಾಯುಧಗಳು ಹೀಗೆ ಭಿನ್ನವಾದನಂತರ ತೇಜಸ್ಸಿನಿಂದಲೂ ಬಲದಿಂದಲೂ ಸಂಪನ್ನರಾಗಿದ್ದ ಪ್ರಜ್ವಲಿಸುವ ಎರಡು ಅಗ್ನಿಗಳಂತೆಯೇ ಕಾಣುತ್ತಿದ್ದ ವಾನರ-ರಾಕ್ಷಸವೀರರು ಮುಷ್ಟಿಯುದ್ಧದಲ್ಲಿ ತೊಡಗಿದರು. ಇಬ್ಬರೂ ಗರ್ಜನೆಮಾಡುತ್ತಾ ಒಬ್ಬರನ್ನೊಬ್ಬರು ಮುಷ್ಟಿಗಳಿಂದ ಗುದ್ದುತ್ತಿದ್ದರು. ಅನಂತರ ಅಂಗೈಗಳಿಂದಲೇ ಒಬ್ಬರನ್ನೊಬ್ಬರು ಹಿಡಿದು ಎಳೆದಾಡುತ್ತಾ ಇಬ್ಬರೂ ಭೂಮಿಯ ಮೇಲೆ ಬಿದ್ದರು. ಮರುಕ್ಷಣದಲ್ಲಿಯೇ ಇಬ್ಬರೂ ಮೇಲೆದ್ದು ಗುದ್ದಾಡತೊಡಗಿದರು. ಇಬ್ಬರಲ್ಲಿ ಯಾರೊಬ್ಬರೂ ಸೋಲುತ್ತಿರಲಿಲ್ಲ. ಭುಜಗಳನ್ನೇ ಮುಂದೆಮಾಡಿಕೊಂಡು ಪರಸ್ಪರವಾಗಿ ಪ್ರಹರಿಸುತ್ತಿದ್ದರು. ಹೀಗೆ ಇಬ್ಬರೂ ಬಹಳ ಹೊತ್ತಿನವರೆಗೂ ಬಾಹುಯುದ್ಧವನ್ನು ಮಾಡುತ್ತಾ ಆಯಾಸಗೊಂಡರು. ಆಗ ಮಹೋದರನು ಸಮೀಪದಲ್ಲಿಯೇ ನೆಲದ ಮೇಲೆ ಬಿದ್ದಿದ್ದ ಕತ್ತಿಯನ್ನು ಗುರಾಣಿಯ ಸಹಿತವಾಗಿ ಕೈಗೆತ್ತಿಕೊಂಡನು. ಅದೇ ರೀತಿಯಲ್ಲಿ ಸಮೀಪದಲ್ಲಿಯೇ ಬಿದ್ದಿದ್ದ ಮತ್ತೊಂದು ಗುರಾಣಿಯಿಂದ ಕೂಡಿದ ಕತ್ತಿಯನ್ನು ಸುಗ್ರೀವನೆತ್ತಿಕೊಂಡನು.

ಶಸ್ತ್ರವಿಶಾರದರಾದ, ಅತ್ಯಂತಕ್ರುದ್ಧರಾಗಿದ್ದ ಮತ್ತು ಪರಮಹೃಷ್ಟರಾಗಿದ್ದ ಮಹೋದರ-ಸುಗ್ರೀವರು ಗರ್ಜನೆಮಾಡುತ್ತಾ ಕತ್ತಿಗಳನ್ನೆತ್ತಿಕೊಂಡು ಯುದ್ಧದಲ್ಲಿ ತೊಡಗಿದರು. ಇಬ್ಬರು ವೀರರೂ ಅತ್ಯಂತಶೀಘ್ರವಾಗಿ ವರಸೆಯಕ್ರಮದಲ್ಲಿ ಪ್ರದಕ್ಷಿಣಕ್ರಮದಲ್ಲಿಯೂ, ಅಪ್ರದಕ್ಷಿಣಕ್ರಮದಲ್ಲಿಯೂ ಮಂಡಲಾಕಾರವಾಗಿ ಸುತ್ತುತ್ತಿದ್ದರು. ಇಬ್ಬರೂ ಅತಿಯಾಗಿ ಕೋಪಗೊಂಡಿದ್ದರು. ಇಬ್ಬರೂ ವಿಜಯದಲ್ಲಿ ಅತ್ಯಂತವಿಶ್ವಾಸವುಳ್ಳವರಾಗಿದ್ದರು. ಮಹಾವೇಗನಾದ, ದುರ್ಮತಿಯಾದ, ಶೌರ್ಯಸಂಪನ್ನನಾಗಿದ್ದ ಮಹೋದರನು ಕತ್ತಿಯಿಂದ ಸುಗ್ರೀವನ ಕವಚವನ್ನು ಪ್ರಹರಿಸಿದನು. ಮಹೋದರನು ಸುಗ್ರೀ

ವನ ಕವಚದಲ್ಲಿ ನೆಟ್ಟುಕೊಂಡಿದ್ದ ಕತ್ತಿಯನ್ನು ಹೊರತೆಗೆಯುತ್ತಿದ್ದಾಗ ಸುಗ್ರೀವನು ಕಿರೀಟದಿಂದಲೂ ಕುಂಡಲಗಳಿಂದಲೂ ಸಮಲಂಕೃತವಾಗಿದ್ದ ರಾಕ್ಷಸನ ತಲೆಯನ್ನು ಕತ್ತಿಯಿಂದ ತುಂಡರಿಸಿದನು. ರಾಕ್ಷಸೇಂದ್ರನಾದ ಮಹೋದರನ ತಲೆಯು ಕೆಳಗೆ ಬೀಳುತ್ತಿದ್ದಂತೆಯೇ ಅದನ್ನು ನೋಡಿದ ರಾಕ್ಷಸಸೈನ್ಯವು ಕ್ಷಣಮಾತ್ರದಲ್ಲಿ ಅದೃಶ್ಯವಾಗಿ ಹೋಯಿತು. ಮಹೋದರ ನನ್ನು ಸಂಹರಿಸಿ ಪರಮಹೃಷ್ಟನಾದ ಸುಗ್ರೀವನು ವಾನರರೊಡನೆ ಜಯ ಘೋಷಗಳನ್ನು ಮಾಡಿದನು. ಅದನ್ನು ಕೇಳಿದ ರಾವಣನು ಕ್ರುದ್ಧನಾದನು. ರಾಘವನು ಪರಮಹೃಷ್ಟನಾದನು. ದೀನವಾದ ಮನಸ್ಸಿನಿಂದ ಕೂಡಿದ್ದ, ವಿಷಣ್ಣಮುಖರಾಗಿದ್ದ ಮತ್ತು ಭಯಗೊಂಡ ಎಲ್ಲ ರಾಕ್ಷಸರೂ ಪಲಾಯನ ಮಾಡಿದರು. ಮಹೋದರನ ಶರೀರವು ಕಳಚಿಬಿದ್ದ ಪರ್ವತದ ಶಿಖರ ದಂತೆಯೇ ಕಾಣುತ್ತಿದ್ದಿತು. ಎದುರಿಸಲು ಅಸಾಧ್ಯನಾದ ಸೂರ್ಯದೇವನು ತನ್ನ ಪ್ರಖರವಾದ ತೇಜಸ್ಸಿನಿಂದ ರಾರಾಜಿಸುವಂತೆ–ಮಹೋದರನನ್ನು ಸಂಹರಿಸಿದ ಸುಗ್ರೀವನು ವಿಜಯಲಕ್ಷ್ಮಿಯ ಕಾಂತಿಯಿಂದ ಕಂಗೊಳಿಸಿದನು. ಯುದ್ಧವನ್ನು ವೀಕ್ಷಿಸುತ್ತಾ ಆಕಾಶದಲ್ಲಿ ನಿಂತಿದ್ದ ಸುರ-ಸಿದ್ಧ-ಯಕ್ಷ-ಗಂಧರ್ವರೂ, ಭೂಮಿಯಲ್ಲಿದ್ದ ಸಮಸ್ತಪ್ರಾಣಿಗಳೂ ಆನಂದತುಂದಿಲರಾಗಿ ವಿಜಯಿಯಾದ ಮಹಾತ್ಮನಾದ ವಾನರೇಂದ್ರನನ್ನು ಸ್ತೋತ್ರಮಾಡಿದರು.

೯೭ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೯೮ನೆಯ ಸರ್ಗ

ಅಂಗದನಿಂದ ಮಹಾಪಾರ್ಶ್ವನ ವಧೆ

ಮಹೋದರೇ ತು ನಿಹತೇ ಮಹಾಪಾರ್ಶ್ವೋ ಮಹಾಬಲಃ ।
ಸುಗ್ರೀವೇಣ ಸಮೀಕ್ಷ್ಯಾಥ ಕ್ರೋಧಾತ್ಸಂರಕ್ತಲೋಚನಃ ।
ಅಙ್ಗದಸ್ಯ ಚಮೂಂ ಭೀಮಾಂ ಕ್ಷೋಭಯಾಮಾಸ ಸಾಯಕೈಃ ॥೧॥

ಸುಗ್ರೀವನು ಮಹೋದರನನ್ನು ಸಂಹರಿಸಿದುದನ್ನು ಕಂಡು ಮಹಾ ಬಲಿಷ್ಠನಾದ ಮಹಾಪಾರ್ಶ್ವನು ಕೋಪದಿಂದ ಕಿಡಿ-ಕಿಡಿಯಾಗಿ ಕೆಂಗಣ್ಣನಾಗಿ ಅಂಗದನ ಭಯಂಕರವಾದ ಕಪಿಸೈನ್ಯವನ್ನು ನಿಶಿತವಾದ ಬಾಣಗಳಿಂದ ಅಲ್ಲೋಲ-ಕಲ್ಲೋಲಗೊಳಿಸಿದನು.

ಗಾಳಿಯು ಹಣ್ಣನ್ನು ತೊಟ್ಟಿನಿಂದ ಕೆಳಕ್ಕೆ ಬೀಳಿಸುವಂತೆ ವಾನರ ಮುಖ್ಯರ ತಲೆಗಳನ್ನು ಶರೀರಗಳಿಂದ ಕೆಳಗುರುಳಿಸಿದನು. ಆ ರಾಕ್ಷಸನು ಬಾಣಗಳಿಂದ ಕೆಲವು ವಾನರಸೈನಿಕರ ತೋಳುಗಳನ್ನೇ ಕತ್ತರಿಸಿದನು. ಕೆಲವು ವಾನರರ ಪಾರ್ಶ್ವಭಾಗಗಳನ್ನು ಗಾಯಗೊಳಿಸಿದನು. ಹೀಗೆ ಮಹಾಪಾರ್ಶ್ವ ನಿಂದ ಪ್ರಹರಿಸಲ್ಪಟ್ಟ ವಾನರರು ವಿಷಣ್ಣವದನರೂ ಮೂರ್ಛಿತರೂ ಆದರು.

ರಾಕ್ಷಸನಿಂದ ಪೀಡಿಸಲ್ಪಡುತ್ತಿರುವ ತನ್ನ ಸೈನ್ಯವು ಉದ್ವಿಗ್ನವಾಗಿರುವು ದೆಂಬ ವಾರ್ತೆಯನ್ನು ಕೇಳಿ ಮಹಾವೇಗನಾದ ಅಂಗದನು–ಪರ್ವಕಾಲದಲ್ಲಿ ಸಮುದ್ರವು ಉಕ್ಕೇರಿಬರುವಂತೆ–ತನ್ನ ಸಮರವೇಗವನ್ನು ಪ್ರದರ್ಶಿಸಿದನು. ಸೂರ್ಯನ ಕಿರಣಗಳಿಗೆ ಸಮಾನವಾದ ಪ್ರಭೆಯಿಂದ ಕೂಡಿದ್ದ, ಲೋಹ ಮಯವಾದ ಪರಿಘಾಯುಧವನ್ನೆತ್ತಿಕೊಂಡು ಮಹಾಪಾರ್ಶ್ವನನ್ನು ಪ್ರಹರಿ ಸಿದನು. ಆ ಪ್ರಹಾರದಿಂದ ಮಹಾಪಾರ್ಶ್ವನು ಬುದ್ಧಿಗೆಟ್ಟು ಸೂತನೊಡನೆ ರಥದಿಂದ ಕೆಳಕ್ಕೆ ಬಿದ್ದನಲ್ಲದೇ ಮೂರ್ಛಿತನೂ ಆದನು. ಆ ಸಮಯಕ್ಕೆ ಸರಿಯಾಗಿ ತೇಜಸ್ವಿಯಾದ, ಕಾಡಿಗೆಯ ಬೆಟ್ಟದಂತೆಯೇ ಇದ್ದ, ಮಹಾ ವೀರ್ಯನಾದ ಜಾಂಬವಂತನು ಮೇಘದಂತೆ ಕಪ್ಪಾಗಿದ್ದ ತನ್ನ ಸೈನ್ಯ ಸಮೂಹದೊಡನೆ ಮುಂದೆಬಂದು ಪರ್ವತದ ಶಿಖರದಂತೆಯೇ ಇದ್ದ ದೊಡ್ಡದಾದೊಂದು ಬಂಡೆಯನ್ನೆತ್ತಿ ಮಹಾಪಾರ್ಶ್ವನ ರಥದ ಕಡೆಗೆಸೆದು ರಥಕ್ಕೆ ಹೂಡಿದ್ದ ಕುದುರೆಗಳನ್ನು ಸಂಹರಿಸಿದನು. ಬಂಡೆಯ ಪ್ರಹಾರದಿಂದ ರಥವೂ ನುಚ್ಚುನೂರಾಗಿ ಹೋಯಿತು. ಮುಹೂರ್ತಕಾಲವು ಕಳೆದನಂತರ ಎಚ್ಚರಗೊಂಡ ಮಹಾಬಲನಾದ ಮಹಾಪಾರ್ಶ್ವನು ಹಲವಾರು ಬಾಣಗಳಿಂದ ಅಂಗದನನ್ನು ಪ್ರಹರಿಸಿದನು. ಜಾಂಬವಂತನ ವಕ್ಷಃಸ್ಥಳವನ್ನು ಮೂರು ಬಾಣಗಳಿಂದ ಪ್ರಹರಿಸಿದನು. ಮರುಕ್ಷಣದಲ್ಲಿಯೇ ಮಹಾಪಾರ್ಶ್ವನು ಜಾಂಬವಂತ-ಗವಾಕ್ಷರಿಬ್ಬರನ್ನೂ ಹಲವಾರು ಬಾಣಗಳಿಂದ ಪ್ರಹರಿಸಿದನು. ಅವರಿಬ್ಬರೂ ಬಾಣಗಳಿಂದ ಗಾಯಗೊಂಡುದನ್ನು ನೋಡಿ ಅಂಗದನು ಪರಮಕ್ರುದ್ಧನಾಗಿ ಭಯಂಕರವಾದ ಪರಿಘಾಯುಧವನ್ನು ಕೈಗೆತ್ತಿಕೊಂಡನು. ಕ್ರೋಧದಿಂದ ರಕ್ತಾಕ್ಷನಾಗಿದ್ದ ವಾಲಿಪುತ್ರನಾದ ಅಂಗದನು ಸೂರ್ಯನ ಕಿರಣಗಳಂತೆ ಪ್ರಭೆಯಿಂದ ಯುಕ್ತವಾಗಿದ್ದ ಪರಿಘಾಯುಧವನ್ನು ಮಹಾಪಾರ್ಶ್ವನನ್ನು ಕೊಲ್ಲುವ ಸಲುವಾಗಿ ಎರಡು ಕೈಗಳಿಂದಲೂ ಗರ-ಗರನೆ

ತಿರುಗಿಸಿ ರಾಕ್ಷಸನ ಮೇಲೆಸೆದನು. ಬಲಿಷ್ಠನಾದ ಅಂಗದನೆಸೆದ ಆ ಪರಿಘಾಯುಧವು ಮಹಾಪಾರ್ಶ್ವನ ಕೈಯಲ್ಲಿದ್ದ ಧನುಸ್ಸನ್ನೂ ತಲೆಯಲ್ಲಿದ್ದ ಕಿರೀಟವನ್ನೂ ಕೆಳಕ್ಕೆ ಬೀಳಿಸಿತು. ಪುನಃ ಪ್ರತಾಪವಂತನಾದ ಅಂಗದನು ಕುಂಡಲದಿಂದ ಕೂಡಿದ್ದ ಮಹಾಪಾರ್ಶ್ವನ ಕಿವಿಯ ಮೂಲಕ್ಕೆ (ಕಪಾಲಕ್ಕೆ) ಅಂಗೈಯಿಂದ ಪ್ರಹರಿಸಿದನು. ಅದರಿಂದ ಕ್ರುದ್ಧನಾದ, ಮಹಾದ್ಯುತಿಯಾದ, ಮಹಾವೇಗನಾದ ರಾಕ್ಷಸನು ಒಂದು ಕೈಯಿಂದ ದೊಡ್ಡದಾದೊಂದು ಗಂಡುಗೊಡಲಿಯನ್ನೆತ್ತಿಕೊಂಡನು. ಎಣ್ಣೆಯನ್ನು ಹಚ್ಚಿ ಹದಮಾಡಿದ್ದ, ಶುಭ್ರವಾಗಿದ್ದ, ಲೋಹಮಯವಾಗಿದ್ದ ಮತ್ತು ದೃಢವಾಗಿದ್ದ ಆ ಗಂಡುಗೊಡಲಿಯನ್ನು ಮಹಾಪಾರ್ಶ್ವನು ವಾಲಿಯ ಮಗನಾದ ಅಂಗದನ ಮೇಲೆ ಪ್ರಯೋಗಿಸಿದನು. ತನ್ನ ಎಡಹೆಗಲಿನ ಮೇಲೆ ಬೀಳಲಿದ್ದ ಗಂಡುಗೊಡಲಿಯ ಪ್ರಹಾರವನ್ನು ರೋಷಭರಿತನಾಗಿದ್ದ, ತಂದೆಯ ಪರಾಕ್ರಮಕ್ಕೆ ಸಮಾನವಾದ ಪರಾಕ್ರಮದಿಂದ ಕೂಡಿದ್ದ ಅಂಗದನು ಹೇಗೋ ತಪ್ಪಿಸಿಕೊಂಡು ಮುಷ್ಟಿಯನ್ನು ಬಿಗಿದನು. ಮರ್ಮಸ್ಥಳಗಳು ಯಾವುವೆಂಬುದನ್ನು ತಿಳಿದಿದ್ದ ಅಂಗದನು ಇಂದ್ರನ ವಜ್ರಾಯುಧಕ್ಕೆ ಸಮಾನವಾಗಿದ್ದ ತನ್ನ ಮುಷ್ಟಿಯಿಂದ ಮಹಾಪಾರ್ಶ್ವನ ವಕ್ಷಃಸ್ಥಳದಲ್ಲಿ ಅತ್ಯಂತವೇಗದಿಂದ ಪ್ರಹರಿಸಿದನು. ಆ ಪ್ರಹಾರದಿಂದ ರಾಕ್ಷಸನ ವಕ್ಷಃಸ್ಥಳವು ಒಡೆದುಹೋಗಿ ನೆಲದ ಮೇಲೆ ಬಿದ್ದನು. ಮಹಾಪಾರ್ಶ್ವನು ಅಸುನೀಗಿ ಕೆಳಗೆ ಬೀಳಲು ಅವನ ಕಡೆಯ ಸೈನಿಕರು ಕಳ ವಳಗೊಂಡರು. ರಾವಣನು ಬಹಳವಾಗಿ ಕೋಪಗೊಂಡನು. ವಾನರರು ಹರ್ಷದಿಂದ ಪುಲಕಿತರಾಗಿ ಸಿಂಹನಾದಗಳನ್ನು ಮಾಡಿದರು. ಅವರ ಆ ಗರ್ಜನೆಗಳ ಶಬ್ದವು ಉಪ್ಪರಿಗೆಗಳಿಂದಲೂ ಗೋಪುರಗಳಿಂದಲೂ ಕೂಡಿದ್ದ ಲಂಕಾಪಟ್ಟಣವನ್ನೇ ಸ್ಫೋಟಿಸುವುದೋ ಎಂಬಂತಿದ್ದಿತು. ಇಂದ್ರನಿಂದ ಕೂಡಿದ ದೇವತೆಗಳೇನಾದರೂ ಹರ್ಷೋತ್ಸಾಹಗಳಿಂದ ಸಿಂಹನಾದಗಳನ್ನು ಮಾಡುತ್ತಿರುವರೋ ಎಂಬಂತೆ ಕಾಣುತ್ತಿದ್ದಿತು.

ಯುದ್ಧಭೂಮಿಯಲ್ಲಿ ದೇವತೆಗಳ ಮತ್ತು ವಾನರಸೈನಿಕರ ಮಹಾಗರ್ಜನೆಯನ್ನು ಕೇಳಿ ಇಂದ್ರಶತ್ರುವಾದ ರಾವಣನು ಪರಮಕ್ರುದ್ಧನಾಗಿ ಪುನಃ ಯುದ್ಧಾಸಕ್ತನಾಗಿ ಸಮರಭೂಮಿಯಲ್ಲಿ ನಿಂತನು.

೯೮ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೯೯ನೆಯ ಸರ್ಗ

ರಾಮ-ರಾವಣರ ಯುದ್ಧ

ಮಹೋದರಮಹಾಪಾರ್ಶ್ವೌ ಹತೌ ದೃಷ್ಟ್ವಾ ತು ರಾಕ್ಷಸೌ ।
ತಸ್ಮಿಂಶ್ಚ ನಿಹತೇ ವೀರೇ ವಿರೂಪಾಕ್ಷೇ ಮಹಾಬಲೇ ॥೧॥

ಆವಿವೇಶ ಮಹಾನ್ಮೋ ಽಧೋ ರಾವಣಂ ತು ಮಹಾಮೃಧೇ ।
ಸೂತಂ ಸಂಚೋದಯಾಮಾಸ ವಾಕ್ಯಂ ಚೇದಮುವಾಚ ಹ ॥೨॥

ಮಹಾಬಲನಾದ ವಿರೂಪಾಕ್ಷನೂ ಮತ್ತು ಮಹೋದರ-ಮಹಾಪಾರ್ಶ್ವರೂ ಯುದ್ಧದಲ್ಲಿ ನಿಧನಹೊಂದಲಾಗಿ ರಾವಣನಿಗೆ ಅತಿಶಯವಾದ ಕೋಪವುಂಟಾಯಿತು. ಸೂತನಿಗೆ ಮುಂದೆ ಹೋಗಲು ಪ್ರೇರಿಸುತ್ತಾ ಹೇಳಿದನು :

"ಸಾರಥಿಯೇ! ಈ ರಾಮ-ಲಕ್ಷ್ಮಣರನ್ನು ಸಂಹರಿಸಿ ಸತ್ತುಹೋಗಿ ರುವ ರಾಕ್ಷಸರ ಮತ್ತು ದಿಗ್ಬಂದನದಲ್ಲಿರುವ ನಗರವಾಸಿಗಳ ದುಃಖವನ್ನು ಹೋಗಲಾಡಿಸುತ್ತೇನೆ. ಸೀತಾರೂಪವಾದ ಪುಷ್ಪದಿಂದ ಫಲಕೊಡುವುದಾಗಿ ರುವ, ಸುಗ್ರೀವ-ಜಾಂಬವಂತ-ಕುಮುದ-ನಲ-ದ್ವಿವಿದ-ಮೈಂದ-ಅಂಗದ-ಗಂಧಮಾದನ-ಹನುಮಂತ-ಸುಷೇಣ ಮತ್ತು ಸಮಸ್ತರಾದ ವಾನರದಳ ನಾಯಕರೇ ರೆಂಬೆಗಳ ರೂಪದಲ್ಲಿರುವ ರಾಮವೃಕ್ಷವನ್ನೀಗಲೇ ನಾನು ಕತ್ತ ರಿಸಿಹಾಕುತ್ತೇನೆ. ಆದುದರಿಂದ ರಾಮನ ಬಳಿಗೆ ನನ್ನ ರಥವನ್ನು ನಡೆಸು."

ಅತಿರಥನಾದ ಮತ್ತು ವೀರನಾದ ರಾವಣನು ಹೀಗೆ ಹೇಳುತ್ತಾ ರಥದ ಗಡ-ಗಡಾಶಬ್ದದಿಂದ ಹತ್ತು ದಿಕ್ಕುಗಳಲ್ಲಿಯೂ ಪ್ರತಿಧ್ವನಿಯನ್ನುಂಟು ಮಾಡುತ್ತಾ ಶ್ರೀರಾಮನ ಬಳಿಗೆ ಧಾವಿಸಿದನು. ರಾವಣನ ರಥದ ಆ ಘೋರ ಶಬ್ದದಿಂದ ನದೀ-ಪರ್ವತ-ವನಗಳಿಂದ ಕೂಡಿದ ಭೂಮಿಯು ತುಂಬಿ ಕಂಪಿಸಿತು. ಭೂಮಿಯ ಮೇಲಿದ್ದ ಎಲ್ಲ ಸಿಂಹ-ಮೃಗ-ಪಕ್ಷಿಗಳೂ ಭಯ ಗೊಂಡುವು. ಆ ಸಮಯದಲ್ಲಿ ರಾವಣನು ಸುದಾರುಣವಾದ ತಾಮಸವೆಂಬ

* ತಾಮಸವೆಂಬ ಅಸ್ತ್ರದ ಅಧಿದೇವತೆಯು ತಮೋಗ್ರಹವಾದ ರಾಹುವೆಂದೂ ಆದುದರಿಂದಲೇ ಆ ಅಸ್ತ್ರಕ್ಕೆ 'ತಾಮಸ'–ಎಂಬ ಹೆಸರು ಬಂದಿತೆಂದೂ ವ್ಯಾಖ್ಯಾನ ಕಾರರು ವಿವರಣೆ ನೀಡಿದ್ದಾರೆ.

ಮಹಾಸ್ತ್ರವನ್ನು ಪ್ರಯೋಗಿಸಿ ಸಮಸ್ತವಾನರರನ್ನೂ ದಹಿಸತೊಡಗಿದನು. ವಾನರರು ಪ್ರಾಣತೊರೆದು ರಣಭೂಮಿಯ ಸುತ್ತಲೂ ಬಿದ್ದಿದ್ದರು. ಮಹಾಸ್ತ್ರದಿಂದ ಭಗ್ನರಾಗಿ ಕೆಳಕ್ಕೆ ಬೀಳುತ್ತಿರಲಾಗಿ ಉಳಿದ ವಾನರರು ಪಲಾಯನ ಮಾಡುತ್ತಿರಲಾಗಿ ದೊಡ್ಡದಾದ ಧೂಳು ಮೇಲೆದ್ದಿತು. ಬ್ರಹ್ಮನೇ ನಿರ್ಮಿಸಿದ್ದ ತಾಮಸಾಸ್ತ್ರದ ವೇಗವನ್ನು ಸಹಿಸಲು ಯಾರಿಂದಲೂ ಸಾಧ್ಯವಿರಲಿಲ್ಲ. ರಾವಣನ ಆ ಶ್ರೇಷ್ಠವಾದ ಬಾಣಗಳಿಂದ ಅನೇಕ ವಾನರಸೈನ್ಯಸಮೂಹಗಳು ಭಗ್ನವಾದುದನ್ನು ಕಂಡು ಶ್ರೀರಾಮನು ಯುದ್ಧಸನ್ನದ್ಧನಾಗಿ ನಿಂತನು. ಹೀಗೆ ರಾವಣನು ತಾಮಸಾಸ್ತ್ರದಿಂದ ವಾನರಸೈನ್ಯವೆಲ್ಲವನ್ನೂ ದಿಕ್ಕಾಪಾಲಾಗಿ ಓಡಿಸಿದನಂತರ ವಿಷ್ಣುವಿನೊಡನಿರುವ ಇಂದ್ರನಂತೆ ಅನುಜನಾದ ಲಕ್ಷ್ಮಣನೊಡನೆ ಯುದ್ಧಸನ್ನದ್ಧನಾಗಿ ನಿಂತಿದ್ದ ಅಪರಾಜಿತನಾದ ಶ್ರೀರಾಮನನ್ನು ನೋಡಿದನು. ಶ್ರೀರಾಮನು ತನ್ನ ಎತ್ತರವಾದ ಧನುಸ್ಸನ್ನು ಹಿಡಿದು ಆಕಾಶದಲ್ಲಿ ಗೆರೆ ಎಳೆಯುತ್ತಿರುವನೋ ಎಂಬಂತೆ ಕಾಣುತ್ತಿದ್ದನು. ತಾವರೆಯ ದಳದಂತೆ ವಿಶಾಲವಾದ ಕಣ್ಣುಗಳಿಂದ ಕಂಗೊಳಿಸುತ್ತಿದ್ದ, ನೀಳವಾದ ತೋಳುಗಳಿಂದ ಶೋಭಿಸುತ್ತಿದ್ದ, ಶತ್ರುದಮನನಾದ ಶ್ರೀರಾಮನನ್ನು ರಾವಣನು ನೋಡಿದನು. ಲಕ್ಷ್ಮಣನೊಡನಿದ್ದ, ಬಲಿಷ್ಠನಾದ, ಮಹಾತೇಜಸ್ವಿಯಾದ ಶ್ರೀರಾಮನು ಯುದ್ಧದಲ್ಲಿ ವಾನರಸೈನಿಕರೆಲ್ಲರೂ ಭಗ್ನರಾದುದನ್ನೂ ರಾವಣನು ತನ್ನ ಮೇಲೆ ಬೀಳಲು ಬರುತ್ತಿರುವುದನ್ನೂ ಕಂಡು ಪರಮಹೃಷ್ಟನಾಗಿ ಧನುಸ್ಸಿನ ಮಧ್ಯಭಾಗವನ್ನು ಹಿಡಿದುಕೊಂಡನು. ಮಹಾವೇಗಯುಕ್ತವಾಗಿದ್ದ ಮತ್ತು ಮಹಾನಾದಯುಕ್ತವಾಗಿದ್ದ ಆ ಮಹಾಧನುಸ್ಸನ್ನು ಶ್ರೀರಾಮನು ಭೂಮಿಯನ್ನೇ ಸೀಳಿಬಿಡುವನೋ ಎಂಬಂತೆ ಟೇಂಕರಿಸತೊಡಗಿದನು. ರಾವಣನು ಬಿಟ್ಟ ಬಾಣಸಮೂಹಗಳ ಶಬ್ದದಿಂದಲೂ ಶ್ರೀರಾಮನ ಧನುಷ್ಟೇಂಕಾರಶಬ್ದದಿಂದಲೂ ಆತಂಕಗೊಂಡ ನೂರಾರು ರಾಕ್ಷಸರು ಮೂರ್ಛಿತರಾಗಿ ಕೆಳಗೆ ಬಿದ್ದರು. ರಾಜಪುತ್ರರಾದ ರಾಮ-ಲಕ್ಷ್ಮಣರ ಬಾಣಗಳ ಗುರಿಗೆ ಎದುರಾಗಿ ಬಂದ ರಾವಣನು ಚಂದ್ರ-ಸೂರ್ಯರ ಸಮೀಪಕ್ಕೆ ಹೋದ ರಾಹುವಿನಂತೆಯೇ ಪ್ರಕಾಶಿಸುತ್ತಿದ್ದನು. ಲಕ್ಷ್ಮಣನು ನಿಶಿತವಾದ ಬಾಣಗಳಿಂದ ರಾವಣನೊಡನೆ ಮೊದಲು ಯುದ್ಧ ಮಾಡಲು ಅಪೇಕ್ಷಿಸಿ, ಧನುಸ್ಸನ್ನು ಬಗ್ಗಿಸಿ ನಾಣನ್ನು ಸೆಳೆದು ಕಟ್ಟಿ

ಅಗ್ನಿಯ ಜ್ವಾಲೆಗಳಿಗೆ ಸಮಾನವಾದ ಬಾಣಗಳನ್ನು ರಾವಣನ ಮೇಲೆ ಪ್ರಯೋಗಿಸಿದನು. ಧನುಷ್ಮಂತನಾದ ಲಕ್ಷ್ಮಣನು ಬಿಟ್ಟ ಆ ಬಾಣಗಳನ್ನು ಮಹಾತೇಜಸ್ವಿಯಾದ ರಾವಣನು ಪ್ರತಿಬಾಣಗಳ ಪ್ರಯೋಗದಿಂದ ಆಕಾಶ ದಲ್ಲಿಯೇ ತಡೆದು ನಿಲ್ಲಿಸಿದನು. ರಾವಣನು ಬಾಣಬಿಡುವುದರಲ್ಲಿ ತನ್ನ ಕೈಚಳಕವನ್ನು ಪ್ರಕಟಿಸುತ್ತಾ ಲಕ್ಷ್ಮಣನು ಬಿಡುತ್ತಿದ್ದ ಒಂದು ಬಾಣವನ್ನು ಒಂದು ಬಾಣದಿಂದಲೂ, ಮೂರು ಬಾಣಗಳನ್ನು ಮೂರು ಬಾಣ ಗಳಿಂದಲೂ, ಹತ್ತು ಬಾಣಗಳನ್ನು ಹತ್ತು ಬಾಣಗಳಿಂದಲೂ ಕತ್ತರಿಸಿಹಾಕು ತ್ತಿದ್ದನು. ಅನಂತರ ರಾವಣನು ಲಕ್ಷ್ಮಣನನ್ನು ಅತಿಕ್ರಮಿಸಿ ಮುಂದೆ ಹೋಗಿ ಪರ್ವತದಂತೆ ಸುಸ್ಥಿರನಾಗಿ ನಿಂತಿದ್ದ ಶ್ರೀರಾಮನನ್ನು ಎದುರಿಸಿ ನಿಂತನು. ಮರುಕ್ಷಣದಲ್ಲಿಯೇ ಕೋಪದಿಂದ ಕೆಂಗಣ್ಣನಾಗಿದ್ದ ರಾಕ್ಷಸೇಶ್ವರನಾದ ರಾವಣನು ಶ್ರೀರಾಮನ ಮೇಲೆ ಬಾಣಗಳ ಮಳೆಯನ್ನೇ ಸುರಿಸಿದನು. ರಾವಣನ ಧನುಸ್ಸಿನಿಂದ ಹೊರಬರುತ್ತಿದ್ದ ಶರಪ್ರವಾಹವನ್ನು ನೋಡುತ್ತಲೇ ಶ್ರೀರಾಮನು ಶೀಘ್ರಾತಿಶೀಘ್ರವಾಗಿ ಭಲ್ಲಗಳೆಂಬ ಬಾಣಗಳನ್ನು ಬತ್ತಳಿಕೆ ಯಿಂದ ತೆಗೆದು ತೀಕ್ಷ್ಣವಾಗಿದ್ದ ಆ ಬಾಣಗಳಿಂದ ಪ್ರಕಾಶಮಾನವಾಗಿದ್ದ, ಅತ್ಯಂತಭಯಂಕರವಾಗಿ ಕಾಣುತ್ತಿದ್ದ, ವಿಷಸರ್ಪಗಳಿಗೆ ಸದೃಶವಾಗಿದ್ದ ರಾವಣನು ಬಿಟ್ಟ ಬಾಣಗಳ ಸಮೂಹಗಳನ್ನು ಕತ್ತರಿಸಿಹಾಕಿದನು. ಶ್ರೀರಾಮನು ರಾವಣನನ್ನೂ–ರಾವಣನು ಶ್ರೀರಾಮನನ್ನೂ ಲಕ್ಷ್ಯವನ್ನಾ ಗಿಟ್ಟುಕೊಂಡು ವಿಧ-ವಿಧವಾದ ಮತ್ತು ತೀಕ್ಷ್ಣವಾದ ಬಾಣಗಳನ್ನು ಒಬ್ಬರು ಮತ್ತೊಬ್ಬರ ಮೇಲೆ ಸುರಿಸುತ್ತಿದ್ದರು. ಹೀಗೆ ರಾಮ-ರಾವಣರಿಬ್ಬರೂ ಬಹಳ ಹೊತ್ತಿನವರೆಗೆ ಎಡಕ್ಕೂ ಬಲಕ್ಕೂ ವಿಚಿತ್ರವಾದ ಮಂಡಲಾಕಾರದಲ್ಲಿ ಸುತ್ತುತ್ತಾ ಯುದ್ಧಮಾಡುತ್ತಿದ್ದರು. ಬಾಣಗಳ ವೇಗದಿಂದ ಒಬ್ಬರು ಮತ್ತೊಬ್ಬರನ್ನು ಗಾಯಗೊಳಿಸುತ್ತಿದ್ದರು. ಅವರಲ್ಲಿ ಯಾರೊಬ್ಬರೂ ಸೋಲುತ್ತಿರಲಿಲ್ಲ. ಇಬ್ಬರೂ ಪರಸ್ಪರವಾಗಿ ಯುದ್ಧಮಾಡುತ್ತಾ ಒಬ್ಬರ ಮೇಲೆ ಮತ್ತೊಬ್ಬರು ಬಾಣಗಳನ್ನು ಸುರಿಸುತ್ತಿದ್ದಾಗ ಯಮ ಮತ್ತು ಅಂತಕರಂತೆಯೇ ಬಹಳ ಭಯಂಕರವಾಗಿ ಕಾಣುತ್ತಿದ್ದರು. ಆ ಸಮಯದಲ್ಲಿ ಅವರನ್ನು ಕಂಡ ಪ್ರಾಣಿಗಳು ಭಯದಿಂದ ನಡುಗಿದುವು. ವರ್ಷರ್ತುವಿನಲ್ಲಿ ಮಿಂಚಿನಿಂದ ಕೂಡಿದ ಮೇಘಗಳು ಆಕಾಶದಲ್ಲಿ ವ್ಯಾಪಿಸುವಂತೆ ರಾಮ-

ರಾವಣರು ಬಿಡುತ್ತಿದ್ದ ಅಪರಿಮಿತವಾದ ಬಾಣಗಳಿಂದ ಆಕಾಶವು ತುಂಬಿ ಹೋಯಿತು. ರಣಹದ್ದಿನ ಸುಂದರವಾದ ರೆಕ್ಕೆಗಳಿಂದ ಸುಶೋಭಿತವಾಗಿದ್ದ, ಮಹಾವೇಗವುಳ್ಳ ಬಾಣಗಳ ಸತತವಾದ ವೃಷ್ಟಿಯಿಂದಾಗಿ ಆಕಾಶವು ಗವಾಕ್ಷಗಳಿಂದ ತುಂಬಿರುವುದೋ ಎಂಬಂತೆ ಕಾಣುತ್ತಿದ್ದಿತು. ಮಹಾಮೇಘ ಗಳಂತೆಯೇ ನಿಂತಿದ್ದ ರಾಮ-ರಾವಣರು ಆಕಾಶವನ್ನು ಬಾಣಗಳ ವೃಷ್ಟಿ ಯಿಂದ ಅಂಧಕಾರಮಯವನ್ನಾಗಿ ಮಾಡಿದರು. ಸೂರ್ಯನು ಅಸ್ತಂಗತ ನಾದರೂ ಅವರು ಯುದ್ಧಮಾಡುತ್ತಲೇ ಇದ್ದರು. ಒಬ್ಬರು ಮತ್ತೊಬ್ಬರನ್ನು ಸಂಹರಿಸಬೇಕೆಂಬ ಆಕಾಂಕ್ಷೆಯಿಂದಿದ್ದ ರಾಮ-ರಾವಣರ ನಡುವೆ ಮಹಾಭಯಂಕರವಾದ ಯುದ್ಧವು ನಡೆಯುತ್ತಿದ್ದಿತು. ಇಂದ್ರನಿಗೂ ಮತ್ತು ವೃತ್ರಾಸುರನಿಗೂ ನಡೆದ ಯುದ್ಧದಂತೆ ರಾಮ-ರಾವಣರ ಯುದ್ಧವು ಹೊಂದಲು ಅಸಾಧ್ಯವೂ, ಚಿಂತಿಸಲು ಅಸದೃಶವೂ ಆಗಿದ್ದಿತು. ಇಬ್ಬರೂ ಮಹಾಧನುರ್ಧರರೂ, ಯುದ್ಧವಿಶಾರದರೂ, ಅಸ್ತ್ರವಿದರಲ್ಲಿ ಶ್ರೇಷ್ಠರೂ ಆಗಿ ದ್ದರು. ಆದುದರಿಂದಲೇ ಅವರು ಅತಿಯಾದ ಉತ್ಸಾಹದಿಂದ ಯುದ್ಧ ಮಾಡುತ್ತಾ ರಣಭೂಮಿಯಲ್ಲಿ ಸಂಚರಿಸುತ್ತಿದ್ದರು. ಇಬ್ಬರೂ ಯಾವ ಮಾರ್ಗದಲ್ಲಿ ಹೋಗುತ್ತಿದ್ದರೋ ಆ ಮಾರ್ಗದಲ್ಲಿ ಗಾಳಿಯ ಬಡಿತದಿಂದ ಸಮುದ್ರದಲ್ಲಿ ಅಲೆಗಳು ಏಳುವಂತೆ ಬಾಣಗಳ ಅಲೆಗಳು ಒಂದಾದಮೇಲೆ ಮತ್ತೊಂದರಂತೆ ಎದ್ದುಬರುತ್ತಿದ್ದುವು. ಬಾಣದೊಡನೆಯೇ ಸೇರಿಕೊಂಡಿರು ವುದೋ ಎಂಬಂತಿದ್ದ ಕೈಯಿಂದ ಕೂಡಿದ್ದ, ಸಮಸ್ತಲೋಕಗಳನ್ನೂ ಕೂಗಿಕೊಳ್ಳುವಂತೆ ಮಾಡುತ್ತಿದ್ದ ರಾವಣನು ಶ್ರೀರಾಮನ ಹಣೆಯನ್ನು ಬಾಣಗಳ ಮಾಲೆಯಿಂದ ಸಮಲಂಕರಿಸಿದನು. ಭಯಂಕರವಾದ ಧನುಸ್ಸಿ ನಿಂದ ಬಿಡಲ್ಪಟ್ಟ ಕನ್ನೈದಿಲೆಯ ದಳದಂತೆ ಶ್ಯಾಮಲವರ್ಣದಿಂದ ಕಂಗೊಳಿ ಸುತ್ತಿದ್ದ ನಾರಾಚಗಳ ಮಾಲೆಯನ್ನು ಶ್ರೀರಾಮನು ಸ್ವಲ್ಪವೂ ವ್ಯಥೆಯಿಲ್ಲದೇ ತಲೆಯಲ್ಲಿ ಧರಿಸಿದನು. ಅನಂತರ ಶ್ರೀರಾಮನು ಅತ್ಯಂತಕ್ರುದ್ಧನಾಗಿ ಹಲವಾರು ಬಾಣಗಳನ್ನು ಬತ್ತಳಿಕೆಯಿಂದ ತೆಗೆದು ಮಂತ್ರಗಳ ಪುನಶ್ಚರಣೆ ಮಾಡುತ್ತಾ ಒಂದೊಂದು ಬಾಣವನ್ನೂ ರೌದ್ರಾಸ್ತ್ರವನ್ನಾಗಿ ಪರಿವರ್ತಿಸಿ ರಾವಣನ ಮೇಲೆ ಪ್ರಯೋಗಿಸಿದನು. ಮಹಾತೇಜಸ್ವಿಯಾದ, ಮಹಾಪರಾ ಕ್ರಮಿಯಾದ ಮತ್ತು ಬಿಡುವಿಲ್ಲದೇ ಬಾಣಗಳ ಮಳೆಗರೆಯಲು ಸಮರ್ಥ

ನಾದ ಶ್ರೀರಾಮನು ಧನುಸ್ಸನ್ನು ಕಿವಿಯವರೆಗೂ ಸೆಳೆದು ಬತ್ತಳಿಕೆಯಿಂದ ಹೊರತೆಗೆದಿದ್ದ ಎಲ್ಲ ಬಾಣಗಳನ್ನೂ ರಾಕ್ಷಸನ ಮೇಲೆ ಪ್ರಯೋಗಿಸಿದನು.

ಆ ಬಾಣಗಳೆಲ್ಲವೂ ಮಹಾಮೇಘಸದೃಶವಾಗಿದ್ದ ರಾವಣನ ಅಭೇದ್ಯ ವಾದ ಕವಚದ ಮೇಲೆ ಬಿದ್ದುವು. ರಾವಣನಿಗೆ ಆ ಬಾಣಗಳು ಯಾವ ವಿಧ ವಾದ ವ್ಯಥೆಯನ್ನೂ ಉಂಟುಮಾಡಲಿಲ್ಲ. ಪುನಃ ಸರ್ವಾಸ್ತ್ರಕುಶಲನಾದ ಶ್ರೀರಾಮನು ರಥದಲ್ಲಿ ಕುಳಿತಿದ್ದ ರಾವಣನ ಹಣೆಯನ್ನು ಶ್ರೇಷ್ಠವಾದೊಂದು ಅಸ್ತ್ರದಿಂದ ಪ್ರಹರಿಸಿದನು. ಹಾಗೆ ಶ್ರೀರಾಮನಿಂದ ಪ್ರಯೋಗಿಸಲ್ಪಟ್ಟ ಪರಮಾಸ್ತ್ರವು ಬಾಣಗಳ ರೂಪವನ್ನು ತಳೆದು ರಾವಣನಿಂದ ಬಿಡಲ್ಪಟ್ಟ ಬಾಣಗಳನ್ನು ಕತ್ತರಿಸಿ ಮುಂದೆ ಹೋಗುತ್ತಿದ್ದಾಗ ಪುನಃ ರಾವಣನ ಬಾಣ ಗಳಿಂದ ತಡೆಯಲ್ಪಟ್ಟು ಐದು ಹೆಡೆಗಳುಳ್ಳ ಸರ್ಪಗಳು ಬುಸುಗುಟ್ಟುವಂತೆ ಧ್ವನಿಮಾಡುತ್ತಾ ಭೂಮಿಯೊಳಗೆ ಸೇರಿಕೊಂಡುವು. ಕ್ರೋಧಮೂರ್ಛಿತ ನಾದ ರಾವಣನು ಹೀಗೆ ಶ್ರೀರಾಮನ ಅಸ್ತ್ರವನ್ನು ವ್ಯರ್ಥಗೊಳಿಸಿ ಅತಿಘೋರ ವಾದ ಆಸುರಾಸ್ತ್ರವನ್ನು ಪ್ರಕಟಪಡಿಸಿದನು. ಅದರಿಂದ ಸಿಂಹ-ಹುಲಿ-ಹದ್ದು-ಚಕ್ರವಾಕ-ರಣಹದ್ದು-ಗಿಡಗ-ಗುಳ್ಳೇನರಿ-ಹಂದಿ-ನಾಯಿ-ಕೋಳಿ-ಮೊಸಳೆ-ಐದು ಹೆಡೆಯ ವಿಷಸರ್ಪಗಳು—ಇವೇ ಮುಂತಾದ ಪ್ರಾಣಿಗಳ ಮುಖಗಳನ್ನು ಹೊಂದಿರುವ ಭಯಂಕರವಾದ ಬಾಣಗಳು ಹುಟ್ಟಿದುವು. ರಾವಣನು ಕೋಪಗೊಂಡ ವಿಷಸರ್ಪದಂತೆ ನಿಟ್ಟುಸಿರುಬಿಡುತ್ತಾ ರಾಮನ ಮೇಲೆ ಆ ಎಲ್ಲ ಬಾಣಗಳನ್ನೂ ಪ್ರಯೋಗಿಸಿದನು. ಆಸುರಾಸ್ತ್ರದಿಂದ ಸಮಾ ವೃತನಾದ ಅಗ್ನಿಸದೃಶನಾದ ಶ್ರೀರಾಮನು ಅತ್ಯುತ್ಸಾಹದೊಡನೆ ಪಾವಕಾಸ್ತ್ರ ವನ್ನು ಪ್ರಕಟಿಸಿದನು. ಅದರ ಮೂಲಕವಾಗಿ ಚಂದ್ರ-ಅರ್ಧಚಂದ್ರ-ಧೂಮ ಕೇತು-ಮಹೋಲ್ಕೆಗಳ ಮುಖಗಳನ್ನು ಹೊಂದಿದ್ದ, ಗ್ರಹ-ನಕ್ಷತ್ರಗಳ ವರ್ಣಗಳಿಂದ ಪರಿಶೋಭಿಸುತ್ತಿದ್ದ, ಮಿಂಚಿನಂತೆ ಥಳ-ಥಳಿಸುತ್ತಿದ್ದ ನಾನಾ ಪ್ರಕಾರವಾದ ಬಾಣಗಳು ಹೊರಬಂದುವು. ಅವೆಲ್ಲವನ್ನೂ ಶ್ರೀರಾಮನು ರಾವಣನ ಮೇಲೆ ಪ್ರಯೋಗಿಸಿದನು. ಶ್ರೀರಾಮನ ಆ ಆಗ್ನೇಯಾಸ್ತ್ರದಿಂದ ಪ್ರಹರಿಸಲ್ಪಟ್ಟ ರಾವಣನ ಭಯಂಕರವಾದ ಆಸುರಾಸ್ತ್ರವು ಆಕಾಶದಲ್ಲಿಯೇ ಲೀನವಾಗಿ ಹೋಯಿತು. ಆದರೆ ಅಷ್ಟರಲ್ಲಿಯೇ ಆಸುರಮಹಾಸ್ತ್ರಗಳಿಂದ ಹೊರಟ ಸಿಂಹ-ವ್ಯಾಘ್ರಗಳೇ ಮೊದಲಾದ ಪ್ರಾಣಿಗಳ ಮುಖಗಳಿಂದ

ಕೂಡಿದ್ದ ಅಸಂಖ್ಯಾತವಾದ ಬಾಣಗಳು ಸಾವಿರಾರು ಕಪಿಸೈನಿಕರನ್ನು ಸಂಹರಿಸಿಬಿಟ್ಟಿದ್ದುವು. ಅನಾಯಾಸವಾಗಿ ಅತಿಕಷ್ಟವಾದ ಕಾರ್ಯವನ್ನು ಮಾಡುವ ಶ್ರೀರಾಮನು ಆಸುರಾಸ್ತ್ರವನ್ನು ನಿರರ್ಥಕಗೊಳಿಸಿದುದನ್ನು ಕಂಡು ಕಾಮರೂಪಿಗಳಾದ ಸುಗ್ರೀವನೇ ಮೊದಲಾದ ವಾನರಪುಂಗವರು ಶ್ರೀರಾಮನನ್ನು ಸುತ್ತುವರಿದು ಹರ್ಷಧ್ವನಿಗಳನ್ನು ಮಾಡಿದರು.

ದಶರಥಪುತ್ರನಾದ ಮಹಾತ್ಮನಾದ ಶ್ರೀರಾಮನು ರಾವಣನಿಂದ ಬಿಡಲ್ಪಟ್ಟ ಆಸುರಾಸ್ತ್ರವನ್ನು ಬಲಪೂರ್ವಕವಾಗಿ ವಿನಾಶಗೊಳಿಸಿ ಸಂತೃಪ್ತನಾದನು. ವಾನರದಳಪತಿಗಳೂ ಆನಂದತುಂದಿಲರಾಗಿ ಸಿಂಹನಾದಗಳನ್ನು ಮಾಡಿದರು.

೯೯ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೧೦೦ನೆಯ ಸರ್ಗ

ರಾಮ-ರಾವಣರ ಯುದ್ಧ: ಶಕ್ತ್ಯಾಯುಧದಿಂದ ರಾವಣನು ಲಕ್ಷ್ಮಣನನ್ನು ಮೂರ್ಛೆಗೊಳಿಸಿದುದು : ಯುದ್ಧದಿಂದ ರಾವಣನ ಪಲಾಯನ

ತಸ್ಮಿನ್ಪ್ರತಿಹತೇಽಸ್ತ್ರೇ ತು ರಾವಣೋ ರಾಕ್ಷಸಾಧಿಪಃ ।
ಕ್ರೋಧಂ ಚ ದ್ವಿಗುಣಂ ಚಕ್ರೇ ಕ್ರೋಧಾಚ್ಚಾಸ್ತ್ರಮನನ್ತರಮ್ ॥೧॥

ಮಯೇನ ವಿಹಿತಂ ರೌದ್ರಮನ್ಯದಸ್ತ್ರಂ ಮಹಾದ್ಯುತಿಃ ।
ಉತ್ಸ್ರಷ್ಟುಂ ರಾವಣೋ ಘೋರಂ ರಾಘವಾಯ ಪ್ರಚಕ್ರಮೇ ॥೨॥

ತಾನು ಪ್ರಯೋಗಿಸಿದ ಆಸುರಾಸ್ತ್ರವು ಧ್ವಂಸವಾಗಲು ರಾಕ್ಷಸಾಧಿಪ ನಾದ ರಾವಣನ ಕೋಪವು ಇಮ್ಮಡಿಯಾಯಿತು. ಕ್ರೋಧವಶನಾದ ರಾವಣನು ಮಯನಿರ್ಮಿತವಾದ ಅತಿಭಯಂಕರವಾದ ಮತ್ತೊಂದು ಅಸ್ತ್ರವನ್ನು ಶ್ರೀರಾಮನ ಮೇಲೆ ಬಿಡಲು ಉದ್ಯುಕ್ತನಾದನು.

ಆ ಮಹಾಸ್ತ್ರವನ್ನು ಧನುಸ್ಸಿಗೆ ಹೂಡುತ್ತಲೇ ಅದರ ಪ್ರಭಾವದಿಂದ ವಜ್ರಾಯುದ್ಧಕ್ಕೆ ಸಮಾನವಾದ, ದೇದೀಪ್ಯಮಾನವಾಗಿ ಪ್ರಕಾಶಿಸುತ್ತಿದ್ದ, ಅತ್ಯಂತದೃಢವಾಗಿದ್ದ ಶೂಲ-ಗದೆ-ಮುದ್ಗರ-ಕೂಟ-ಪಾಶ-ಮುಸಲಗಳೂ

ಪ್ರದೀಪ್ತವಾದ ಸಿಡಿಲುಗಳೂ–ಪ್ರಳಯಕಾಲದಲ್ಲಿ ವಿಧ-ವಿಧವಾದ ಚಂಡ ಮಾರುತಗಳು ಹೊರಬರುವಂತೆ ಹೊರಬರತೊಡಗಿದುವು. ಶ್ರೇಷ್ಠರಾದ ಅಸ್ತ್ರವಿದರಲ್ಲಿ ಅಗ್ರಗಣ್ಯನಾಗಿದ್ದ ಮಹಾದ್ಯುತಿಮಂತನಾದ ಶ್ರೀರಾಮನು ಗಾಂಧರ್ವವೆಂಬ ಶ್ರೇಷ್ಠವಾದ ಅಸ್ತ್ರದಿಂದ, ರಾವಣನಿಂದ ಬಿಡಲ್ಪಟ್ಟಿದ್ದ ಮಯನಿರ್ಮಿತವಾದ ರೌದ್ರಾಸ್ತ್ರವನ್ನು ಪ್ರಹರಿಸಿದನು. ತಾನು ಬಿಟ್ಟಿದ್ದ ಅಂತಹ ಮಹಾಸ್ತ್ರವೂ ಮಹಾತ್ಮನಾದ ರಾಮನು ಬಿಟ್ಟ ಗಂಧರ್ವಾಸ್ತ್ರ ದಿಂದ ವಿನಾಶಹೊಂದಲು ಕೋಪದಿಂದ ಕೆಂಗಣ್ಣನಾಗಿದ್ದ ರಾವಣನು ಸೌರಾಸ್ತ್ರವನ್ನು ಪ್ರಯೋಗಿಸಿದನು. ಸೌರಾಸ್ತ್ರವನ್ನು ಧನುಸ್ಸಿಗೆ ಹೂಡುತ್ತಲೇ ಭೀಮವೇಗನಾದ ಧೀಮಂತನಾದ ರಾವಣನ ಧನುಸ್ಸಿನಿಂದ ಪ್ರಕಾಶ ಮಾನವಾದ ಮತ್ತು ದೊಡ್ಡ-ದೊಡ್ಡದಾದ ಚಕ್ರಗಳು ಹೊರಬರತೊಡಗಿ ದುವು. ಸೂರ್ಯ-ಚಂದ್ರರೇ ಮೊದಲಾದ ಗ್ರಹಗಳ ಆಕಾರವನ್ನು ಹೊಂದಿದ್ದ ದೇದೀಪ್ಯಮಾನವಾದ ಆ ಚಕ್ರಗಳು ಎಲ್ಲ ಕಡೆಗಳಲ್ಲೂ ಪ್ರಕಟವಾದುವು. ಅಸಂಖ್ಯಾತವಾದ ಆ ಚಕ್ರಗಳ ಬೆಳಕಿನಿಂದ ಆಕಾಶ ಮತ್ತು ದಿಕ್ಕುಗಳು ಬೆಳಗತೊಡಗಿದುವು. ಶ್ರೀರಾಮನು ತನ್ನ ಬಾಣಗಳ ಮೂಲಕವಾಗಿ ಆ ಚಕ್ರಗಳನ್ನೂ ಮತ್ತು ಚಿತ್ರ-ವಿಚಿತ್ರವಾದ ಆಯುಧಗಳನ್ನೂ ಕತ್ತರಿಸಿಹಾಕಿ ದನು. ತಾನು ಬಿಟ್ಟ ಸೌರಾಸ್ತ್ರವೂ ವಿನಾಶಹೊಂದಲು ರಾವಣನು ಪುನಃ ಹತ್ತು ಬಾಣಗಳಿಂದ ಶ್ರೀರಾಮನ ಮರ್ಮಸ್ಥಾನಗಳನ್ನು ಗಾಯಗೊಳಿಸಿ ದನು. ಮಹಾಧನುಸ್ಸಿನಿಂದ ಹೊರಟ ಆ ಬಾಣಗಳಿಂದ ಗಾಯಗೊಂಡ ರಾಘವನು ಸ್ವಲ್ಪವಾದರೂ ವಿಚಲಿತನಾಗಲಿಲ್ಲ. ಅದರಿಂದ ಪರಮಕ್ರುದ್ಧ ನಾದ, ಸಮರವಿಜಯಿಯಾದ ಶ್ರೀರಾಮನು ಹಲವಾರು ಬಾಣಗಳನ್ನು ಪ್ರಯೋಗಿಸಿ ರಾವಣನ ಅಂಗಾಂಗಗಳನ್ನೂ ಗಾಯಗೊಳಿಸಿದನು. ಈ ಮಧ್ಯ ದಲ್ಲಿ ಲಕ್ಷ್ಮಣನು ಏಳು ಬಾಣಗಳನ್ನು ಬತ್ತಳಿಕೆಯಿಂದ ತೆಗೆದನು. ಮಹಾ ವೇಗಯುಕ್ತವಾಗಿದ್ದ ಆ ಏಳು ಬಾಣಗಳಿಂದ ಮಹಾದ್ಯುತಿಯಾದ ಲಕ್ಷ್ಮಣನು ಮನುಷ್ಯನ ತಲೆಯನ್ನು ಚಿಹ್ನೆಯನ್ನಾಗಿ ಹೊಂದಿದ್ದ ರಾವಣನ ರಥದ ಮೇಲಿದ್ದ ಧ್ವಜವನ್ನು ಅನೇಕಭಾಗಗಳಾಗಿ ಕತ್ತರಿಸಿಬಿಟ್ಟನು. ಪುನಃ ಶ್ರೀಮಂತನಾದ ಲಕ್ಷ್ಮಣನು ಮತ್ತೊಂದು ಬಾಣವನ್ನು ಪ್ರಯೋಗಿಸಿ ಪ್ರಜ್ವಲಿಸುವ ಕುಂಡಲಗಳಿಂದ ಸಮಲಂಕೃತವಾಗಿದ್ದ ಸಾರಥಿಯ ತಲೆಯನ್ನು

ಕತ್ತರಿಸಿದನು. ಇಷ್ಟು ಮಾತ್ರವಲ್ಲ ; ಲಕ್ಷ್ಮಣನು ನಿಶಿತವಾದ ಐದು ಬಾಣಗಳಿಂದ ರಾವಣರಾಕ್ಷಸನ ಆನೆಯ ಸೊಂಡಿಲಿಗೆ ಸಮಾನವಾಗಿದ್ದ ಧನುಸ್ಸನ್ನು ಕತ್ತರಿಸಿದನು. ಆ ಸಮಯಕ್ಕೆ ಸರಿಯಾಗಿ ವಿಭೀಷಣನು ಹಾರಿಬಂದು ನೀಲಮೇಘಸದೃಶವಾಗಿದ್ದ, ಪರ್ವತಾಕಾರದ, ಸುಶಿಕ್ಷಿತವಾದ, ರಾವಣನ ರಥದಲ್ಲಿದ್ದ ಕುದುರೆಗಳನ್ನು ಗದೆಯಿಂದ ಅಪ್ಪಳಿಸಿದನು. ಕುದುರೆಗಳೂ ಸತ್ತುಹೋದನಂತರ ರಾವಣನು ತನ್ನ ಮಹಾರಥದಿಂದ ಕೆಳಗಿಳಿ ದನು. ತಮ್ಮನಾದ ವಿಭೀಷಣನ ಮೇಲೆ ರಾವಣನಿಗೆ ಮಹಾಕೋಪ ವುಂಟಾಯಿತು. ಮಹಾಶಕ್ತಿವಂತನಾದ, ಪ್ರತಾಪಶಾಲಿಯಾದ, ರಾಕ್ಷಸೇಂದ್ರ ನಾದ ರಾವಣನು ಪ್ರದೀಪ್ತವಾದ ವಜ್ರಾಯುಧದಂತೆಯೇ ಇದ್ದ ಶಕ್ತ್ಯಾ ಯುಧವನ್ನು ವಿಭೀಷಣನ ಮೇಲೆ ಪ್ರಯೋಗಿಸಿದನು. ಆ ಶಕ್ತ್ಯಾಯುಧವು ವಿಭೀಷಣನ ಬಳಿಗೆ ಬರುವ ಮೊದಲೇ ಲಕ್ಷ್ಮಣನು ಮೂರು ಬಾಣಗಳಿಂದ ಆ ಶಕ್ತ್ಯಾಯಧವನ್ನು ಕತ್ತರಿಸಿದನು. ಅದನ್ನು ನೋಡಿ ವಾನರಸೈನಿಕರು ಹರ್ಷೋತ್ಸಾಹಗಳಿಂದ ಗರ್ಜನೆಮಾಡಿದರು. ಕಿಡಿಗಳಿಂದ ಕೂಡಿದ, ಜಾಜ್ವಲ್ಯಮಾನವಾದ ಉಲ್ಕೆಯು ಆಕಾಶದಿಂದ ಭೂಮಿಗೆ ಬೀಳುವಂತೆ– ಕಾಂಚನಮಾಲೆಯಿಂದ ಸಮಲಂಕೃತವಾಗಿದ್ದ , ಲಕ್ಷ್ಮಣನಿಂದ ಕತ್ತರಿಸಲ್ಪಟ್ಟ ಆ ಶಕ್ತ್ಯಾಯುಧವು ಮೂರು ಭಾಗಗಳಾಗಿ ಕೆಳಕ್ಕೆ ಬಿದ್ದಿತು.

ಅನಂತರ ರಾವಣನು ವಿಭೀಷಣನನ್ನು ಪ್ರಹರಿಸುವ ಸಲುವಾಗಿ ಅಮೋಘವಾದುದೆಂದು ಸುವಿಖ್ಯಾತವಾಗಿದ್ದ, ಮಹಾಕಾಲನಿಂದಲೂ ಎದುರಿಸಲು ಅಸಾಧ್ಯವಾಗಿದ್ದ, ತನ್ನ ತೇಜಸ್ಸಿನಿಂದಲೇ ದೇದೀಪ್ಯಮಾನವಾಗಿ ಬೆಳಗುತ್ತಿದ್ದ ದೊಡ್ಡದಾದೊಂದು ಶಕ್ತ್ಯಾಯುಧವನ್ನು ಕೈಗೆತ್ತಿಗೊಂಡನು. ದುರಾತ್ಮನಾದ ಮತ್ತು ಬಲಿಷ್ಠನಾದ ರಾವಣನು ಹಿಡಿದಿದ್ದ ಆ ಶಕ್ತ್ಯಾ ಯುಧವು ಅತಿವೇಗವುಳ್ಳದ್ದಾಗಿದ್ದಿತು. ಮಹಾತೇಜಸ್ಸಿನಿಂದ ಕೂಡಿದ್ದ, ಪ್ರದೀಪ್ತವಾದ ವಜ್ರಾಯುಧದ ಪ್ರಭೆಗೆ ಸಮಾನವಾದ ಪ್ರಭೆಯಿಂದ ಕೂಡಿದ್ದ ಆ ಶಕ್ತ್ಯಾಯುಧವು ರಾವಣನ ಕೈಯಲ್ಲಿ ಪ್ರಜ್ವಲಿಸುತ್ತಿದ್ದಿತು. ರಾವಣನ ಆ ಶಕ್ತ್ಯಾಯುಧದ ಪ್ರಯೋಗದಿಂದ ವಿಭೀಷಣನು ತಪ್ಪಿಸಿಕೊಳ್ಳುವ ಮತ್ತು ಪ್ರಾಣದಿಂದುಳಿಯುವ ಸಂಭವವಿರಲಿಲ್ಲ. ಹೀಗೆ ವಿಭೀಷಣನು ಪ್ರಾಣಸಂಕಟದಲ್ಲಿದ್ದುದನ್ನು ಕಂಡು ವೀರನಾದ ಲಕ್ಷ್ಮಣನು ವಿಭೀಷಣ

ನನ್ನು ಹಿಂದಕ್ಕೆ ಸರಿಸಿ ಶಕ್ತ್ಯಾಯುಧಕ್ಕೆ ಅಭಿಮುಖವಾಗಿ ತಾನೇ ನಿಂತುಕೊಂಡನು. ವಿಭೀಷಣನನ್ನು ರಕ್ಷಿಸುವ ಸಲುವಾಗಿ ಲಕ್ಷ್ಮಣನು ಧನುಸ್ಸಿನ ನಾಣನ್ನು ಸುದೀರ್ಘವಾಗಿ ಸೆಳೆದು ಶಕ್ತಿಯನ್ನು ಹಿಡಿದಿದ್ದ ರಾವಣನನ್ನು ಬಾಣಗಳ ವರ್ಷದಿಂದ ಮುಚ್ಚಿಬಿಟ್ಟನು. ಮಹಾತ್ಮನಾದ ಲಕ್ಷ್ಮಣನು ಬಿಟ್ಟ ಆ ಬಾಣಗಳ ವರ್ಷದಿಂದ ಮುಚ್ಚಿಹೋದ ರಾವಣನು ತಮ್ಮನಾದ ವಿಭೀಷಣನನ್ನು ಆ ಶಕ್ತ್ಯಾಯುಧದಿಂದ ಪ್ರಹರಿಸದಿರಲು ನಿಶ್ಚಯಿಸಿದನು. ಲಕ್ಷ್ಮಣನು ಮುಂದೆ ಬಂದು ತಮ್ಮನನ್ನು ರಕ್ಷಿಸಿದುದನ್ನು ಕಂಡು ರಾವಣನು ಲಕ್ಷ್ಮಣನಿಗೆ ಅಭಿಮುಖನಾಗಿ ನಿಂತು ಹೇಳಿದನು :

"ಬಲಶ್ಲಾಘಿಯೇ! ಲಕ್ಷ್ಮಣ! ನೀನು ಬಹಳ ಪ್ರಯಾಸದಿಂದ ವಿಭೀಷಣನನ್ನು ಪಾರುಮಾಡಿರುವೆ. ಆದುದರಿಂದ ನಾನು ಇವನನ್ನು ಕೊಲ್ಲ ಹೋಗದೇ ಅವನನ್ನು ರಕ್ಷಿಸಲು ಮುಂದೆ ಬಂದಿರುವ ನಿನ್ನ ಮೇಲೆಯೇ ಈ ಅಮೋಘವಾದ ಶಕ್ತ್ಯಾಯುಧವನ್ನು ಪ್ರಯೋಗಿಸುತ್ತೇನೆ. ರಕ್ತಸಿಕ್ತ ವಾಗಿರುವ ಪರಿಘೋಪಮವಾದ ನನ್ನ ತೋಳುಗಳಿಂದ ಬಿಡಲ್ಪಡುವ ಈ ಶಕ್ತ್ಯಾಯುಧವು ನಿನ್ನ ಹೃದಯವನ್ನು ಭೇದಿಸಿ ಒಳಹೊಕ್ಕು ನಿನ್ನ ಪ್ರಾಣಗಳನ್ನು ಕಸಿದುಕೊಂಡು ಹೊರಬರುತ್ತದೆ."

ರಾವಣನು ಹೀಗೆ ಹೇಳಿ ಎಂಟು ಘಂಟೆಗಳಿಂದ ಭೂಷಿತವಾಗಿದ್ದ, ಮಹಾನಿನಾದದಿಂದ ಕೂಡಿದ್ದ, ಮಯನ ಮಾಯೆಯಿಂದ ನಿರ್ಮಿತವಾಗಿದ್ದ, ಶತ್ರುಘಾತಿಯಾದ, ಅಮಿತವಾದ ತೇಜಸ್ಸಿನಿಂದ ಕೂಡಿ ಪ್ರಜ್ವಲಿಸುತ್ತಿರುವಂತೆ ಕಾಣುತ್ತಿದ್ದ ಶಕ್ತ್ಯಾಯುಧವನ್ನು ಪರಮಕ್ರುದ್ಧನಾಗಿ ಲಕ್ಷ್ಮಣನ ಮೇಲೆಸೆದು ಗಟ್ಟಿಯಾಗಿ ಗರ್ಜಿಸಿದನು. ರಣಭೂಮಿಯಲ್ಲಿ ವಜ್ರಾಯುಧ ಮತ್ತು ಸಿಡಿಲುಗಳ ಶಬ್ದಕ್ಕೆ ಅನುರೂಪವಾಗಿ ಶಬ್ದಮಾಡುತ್ತಿದ್ದ ಆ ಶಕ್ತ್ಯಾಯುಧವು ಭಯಂಕರವಾದ ವೇಗದಿಂದ ಹೋಗಿ ಲಕ್ಷ್ಮಣನ ಮೇಲೆ ಬಿದ್ದಿತು.

ಲಕ್ಷ್ಮಣನ ಮೇಲೆ ಬೀಳಲು ರಭಸದಿಂದ ಬರುತ್ತಿದ್ದ ಶಕ್ತ್ಯಾಯುಧವನ್ನು ಉದ್ದೇಶಿಸಿ ಶ್ರೀರಾಮನು ಹೇಳಿದನು :

ಸ್ವಸ್ತ್ಯಸ್ತು ಲಕ್ಷ್ಮಣಾಯೇತಿ ಮೋಘಾ ಭವ ಹತೋದ್ಯಮಾ ॥೩೩॥

"ಲಕ್ಷ್ಮಣನಿಗೆ ಮಂಗಳವಾಗಲಿ ; ನಿನ್ನ ಪ್ರಾಣಹರಣಪ್ರಯತ್ನವು ವ್ಯರ್ಥವಾಗಲಿ."

ರಾವಣನಿಂದ ಬಿಡಲ್ಪಟ್ಟ ಸರ್ಪೋಪಮವಾದ ಆ ಶಕ್ತ್ಯಾಯುಧವು ಬಹಳ ಬೇಗ ಭಯರಹಿತನಾಗಿ ನಿಂತಿದ್ದ ಲಕ್ಷ್ಮಣನ ಎದೆಯಲ್ಲಿ ಮುಳುಗಿ ಹೋಯಿತು. ನಾಗರಾಜನಾದ ವಾಸುಕಿಯ ನಾಲಿಗೆಯಂತೆ ದೇದೀಪ್ಯ ಮಾನವಾಗಿಯೂ-ಮಹಾತೇಜಸ್ಸಿನಿಂದ ಕೂಡಿಯೂ ಇದ್ದ, ಮಹಾವೇಗ ಯುಕ್ತವಾಗಿದ್ದ ಆ ಶಕ್ತ್ಯಾಯುಧವು ಲಕ್ಷ್ಮಣನ ವಕ್ಷಃಸ್ಥಳದಲ್ಲಿ ಬಿದ್ದಿತು. ರಾವಣನ ವೇಗವಾದ ಪ್ರಹಾರದಿಂದಾಗಿ ಅದು ಲಕ್ಷ್ಮಣನ ಹೃದಯಲ್ಲಿ ಬಹಳ ಆಳದವರೆಗೂ ನೆಟ್ಟುಕೊಂಡಿತು. ಅದರಿಂದ ಲಕ್ಷ್ಮಣನು ಎದೆಯೊಡೆದು ನೆಲದ ಮೇಲೆ ಬಿದ್ದನು. ಅಂತಹ ಅವಸ್ಥೆಯನ್ನು ಹೊಂದಿದ ಲಕ್ಷ್ಮಣನನ್ನು ನೋಡಿ ಮಹಾತೇಜಸ್ವಿಯಾದ ಶ್ರೀರಾಮನು ಭ್ರಾತೃಸ್ನೇಹದ ಕಾರಣದಿಂದ ಮನಸ್ಸಿನಲ್ಲಿ ವಿಷಾದವನ್ನು ಹೊಂದಿದನು. ಕಂಬನಿದುಂಬಿದ ಕಣ್ಣುಗಳಿಂದ ಕೂಡಿದ್ದ ಶ್ರೀರಾಮನು ಮುಹೂರ್ತಕಾಲ ಚಿಂತಿಸುತ್ತಲೇ ಇದ್ದನು. ಲಕ್ಷ್ಮಣನಿಗಾದ ಸ್ಥಿತಿಯನ್ನು ಚಿಂತಿಸುತ್ತಿದ್ದಂತೆ ಪ್ರಳಯಕಾಲದ ಅಗ್ನಿಯೋ ಪಾದಿಯಲ್ಲಿ ಪರಮಕ್ರುದ್ಧನಾದನು. ಇದು ವಿಷಾದಿಸುತ್ತಾ ಕುಳಿತು ಕೊಳ್ಳಲು ತಕ್ಕುದಾದ ಕಾಲವಲ್ಲವೆಂದು ಚಿಂತಿಸಿದ ಶ್ರೀರಾಮನು ಸರ್ವ ಪ್ರಯತ್ನದಿಂದಲೂ ರಾವಣನನ್ನು ವಧಿಸಬೇಕೆಂದು ನಿಶ್ಚಯಿಸಿ ಲಕ್ಷ್ಮಣನ ಕಡೆಗೆ ನೋಡುತ್ತಾ ರಾವಣನೊಡನೆ ಭಯಂಕರವಾದ ಯುದ್ಧದಲ್ಲಿ ತೊಡ ಗಿದನು. ಶ್ರೀರಾಮನು ಪುನಃ ಲಕ್ಷ್ಮಣನ ಕಡೆಗೆ ನೋಡಿದಾಗ ಅವನು ವಿಚಲಿತನಾಗಿಯೇ ಬಿದ್ದಿರುವುದನ್ನು ಗಮನಿಸಿದನು. ಶಕ್ತ್ಯಾಯುಧದಿಂದ ಎದೆಯೊಡೆದು, ರಕ್ತದಲ್ಲಿ ತೋಯ್ದುಹೋಗಿ, ವಾಸುಕಿಯಿಂದ ಕೂಡಿದ ಮಂದರಪರ್ವತದಂತಿದ್ದ ಲಕ್ಷ್ಮಣನನ್ನು ನೋಡಿದನು. ಮಹಾಬಲಿಷ್ಠನಾದ ರಾವಣನಿಂದ ಬಿಡಲ್ಪಟ್ಟಿದ್ದ ಆ ಶಕ್ತ್ಯಾಯುಧವನ್ನು ಲಕ್ಷ್ಮಣನ ವಕ್ಷಃಸ್ಥಳದಿಂದ ಹೊರತೆಗೆಯಲು ಕಪಿವೀರರೆಲ್ಲರೂ ಸೇರಿ ಮಾಡಿದ ಪ್ರಯತ್ನಗಳೆಲ್ಲವೂ ವ್ಯರ್ಥವಾಯಿತು. ಹಾಗೆ ಲಕ್ಷ್ಮಣನ ವಕ್ಷಃಸ್ಥಳದಿಂದ ಶಕ್ತ್ಯಾಯುಧವನ್ನು ತೆಗೆಯುವ ಪ್ರಯತ್ನದಲ್ಲಿದ್ದಾಗ ಆ ವಾನರರೆಲ್ಲರೂ ರಾಕ್ಷಸಶ್ರೇಷ್ಠನಾದ ರಾವಣನ ಬಾಣಗಳಿಂದ ಬಹಳವಾಗಿ ಪೀಡಿತರಾದರು. ಆ ಶಕ್ತ್ಯಾಯುಧವು

ಲಕ್ಷ್ಮಣನ ವಕ್ಷಃಸ್ಥಳವನ್ನು ಭೇದಿಸಿತ್ತಲ್ಲದೇ ಅದರ ಸ್ವಲ್ಪಭಾಗವು ಭೂಮಿಯೊಳಗೂ ಸರಿದಿದ್ದಿತು. ಮಹಾಬಲಿಷ್ಠನಾದ ಶ್ರೀರಾಮನು ಸ್ವಲ್ಪಹೊತ್ತು ಯುದ್ಧವನ್ನು ನಿಲ್ಲಿಸಿ ಭಯಂಕರವಾಗಿದ್ದ ಆ ಶಕ್ತ್ಯಾಯುಧವನ್ನು ತನ್ನೆರಡು ಕೈಗಳಿಂದಲೂ ಹಿಡಿದು ಲಕ್ಷ್ಮಣನ ವಕ್ಷಃಸ್ಥಳದಿಂದ ಕಿತ್ತು ರಣಭೂಮಿಯಲ್ಲಿಯೇ ಮುರಿದುಹಾಕಿದನು. ಶ್ರೀರಾಮನು ಶಕ್ತ್ಯಾಯುಧವನ್ನು ಲಕ್ಷ್ಮಣನ ವಕ್ಷಃಸ್ಥಳದಿಂದ ಕೀಳುತ್ತಿದ್ದಾಗ ಬಲಿಷ್ಠನಾದ ರಾವಣನು ಮರ್ಮಭೇದಿಗಳಾದ ಬಾಣಗಳನ್ನು ಶ್ರೀರಾಮನ ಅಂಗಾಂಗಗಳಲ್ಲಿಯೂ ಪ್ರಯೋಗಿಸಿದನು. ಹಾಗೆ ತನ್ನ ಮೇಲೆ ಬೀಳುತ್ತಿದ್ದ ರಾವಣನ ಆ ಬಾಣಗಳನ್ನು ಲೆಕ್ಕಿಸದೆ ಶ್ರೀರಾಮನು ಲಕ್ಷ್ಮಣನನ್ನು ತಬ್ಬಿಕೊಂಡು ಸಮೀಪದಲ್ಲಿದ್ದ ಹನುಮಂತನಿಗೂ ಮಹಾಕಪಿಯಾದ ಸುಗ್ರೀವನಿಗೂ ಹೇಳಿದನು :

"ವಾನರಶ್ರೇಷ್ಠರೇ! ನೀವೆಲ್ಲರೂ ಲಕ್ಷ್ಮಣನನ್ನು ಸುತ್ತುವರಿದು ನಿಲ್ಲಿರಿ. ನಾನು ಬಹಳ ಕಾಲದಿಂದ ನಿರೀಕ್ಷಿಸಿದ್ದ ನನ್ನ ಪರಾಕ್ರಮವನ್ನು ತೋರಬೇಕಾದ ಕಾಲವೀಗ ಸನ್ನಿಹಿತವಾಗಿದೆ.

ಅಸ್ಮಿನ್ಮುಹೂರ್ತೇ ನ ಚಿರಾತ್ಸತ್ಯಂ ಪ್ರತಿಶೃಣೋಮಿ ವಃ ।
ಅರಾವಣಮರಾಮಂ ವಾ ಜಗದ್ದ್ರಕ್ಷ್ಯಥ ವಾನರಾಃ ॥೪೫॥

ಈ ಮುಹೂರ್ತದಲ್ಲಿಯೇ ನಾನು ನಿಮಗೆ ಸತ್ಯಪ್ರತಿಜ್ಞೆಮಾಡಿ ಹೇಳುತ್ತೇನೆ. ಅತ್ಯಲ್ಪಸಮಯದಲ್ಲಿ ಈ ಜಗತ್ತಿನಲ್ಲಿ ರಾವಣನಿಲ್ಲದಿರುವುದನ್ನಾದರೂ ನೋಡುವಿರಿ ಅಥವಾ ರಾಮನಿಲ್ಲದಿರುವುದನ್ನಾದರೂ ಕಾಣುವಿರಿ.

ರಾಜ್ಯನಾಶಂ ವನೇ ವಾಸಂ ದಣ್ಡಕೇ ಪರಿಧಾವನಮ್ ।
ವೈದೇಹ್ಯಾಶ್ಚ ಪರಾಮರ್ಶಂ ರಕ್ಷೋಭಿಶ್ಚ ಸಮಾಗಮಮ್ ॥೪೯॥

ಪ್ರಾಪ್ತಂ ದುಃಖಂ ಮಹದ್ಘೋರಂ ಕ್ಲೇಶಂ ಚ ನಿರಯೋಪಮಮ್ ।
ಅದ್ಯ ಸರ್ವಮಹಂ ತ್ಯಕ್ಷ್ಯೇ ನಿಹತ್ವಾ ರಾವಣಂ ರಣೇ ॥೫೦॥

ರಾಜ್ಯಭ್ರಂಶ, ಅರಣ್ಯದಲ್ಲಿ ವಾಸ, ದಂಡಕಾರಣ್ಯದಲ್ಲಿ ಸಂಚಾರ, ರಾಕ್ಷಸನಿಂದ ವೈದೇಹಿಯ ಅಪಹರಣ, ರಾಕ್ಷಸರೊಡನೆ ಸಂಗ್ರಾಮ–ನರಕ ಸದೃಶವಾದ ಈ ಘೋರದುಃಖಗಳೆಲ್ಲವೂ ನನಗೆ ಒಂದಾದ ಮೇಲೆ

ಒಂದರಂತೆ ಒದಗಿದುವು. ಯುದ್ಧದಲ್ಲಿ ಈ ರಾವಣನನ್ನು ಸಂಹರಿಸಿ ಈಗಲೇ ನನ್ನ ಈ ದುಃಖಗಳೆಲ್ಲವನ್ನೂ ನಿವಾರಿಸಿಕೊಳ್ಳುವೆನು.

ಯಾವನ ಕಾರಣದಿಂದ ವಾನರಸೈನ್ಯವನ್ನು ಇಲ್ಲಿಗೆ ಕರೆತಂದಿರುವೆನೋ, ಯಾವನ ಕಾರಣದಿಂದ ವಾಲಿಯನ್ನು ಸಂಹರಿಸಿ ಸುಗ್ರೀವನನ್ನು ಕಿಷ್ಕಿಂಧೆಗೆ ರಾಜನನ್ನಾಗಿ ಮಾಡಿದೆನೋ, ಯಾವನ ಕಾರಣದಿಂದ ಅಪಾರವಾದ ಸಮುದ್ರಕ್ಕೆ ಸೇತುವೆಯನ್ನು ಕಟ್ಟಿ ಮಹಾಸಾಗರವನ್ನು ದಾಟಿ ಇಲ್ಲಿಗೆ ಬಂದಿರುವೆನೋ–ಅಂತಹ ಪಾಪಿಷ್ಠನಾದ ರಾವಣನಿಂದು ನನ್ನ ಕಣ್ಣೆದುರಿನಲ್ಲಿ ನಿಂತಿದ್ದಾನೆ. ನನ್ನ ಕಣ್ಣುಗಳಿಗೆ ಗೋಚರನಾದನಂತರ ಖಂಡಿತವಾಗಿಯೂ ಇವನು ಜೀವಿಸಿರಲು ಯೋಗ್ಯನಲ್ಲ. ನೋಡಿದ ಮಾತ್ರದಿಂದಲೇ ವಿಷವನ್ನು ಹೊರಚೆಲ್ಲಿ ಎದುರಾಳಿಯನ್ನು ಸಂಹರಿಸುವ ಸಾಮರ್ಥ್ಯದಿಂದ ಕೂಡಿರುವ, ವಿಷಸರ್ಪದ ದೃಷ್ಟಿಯಂತಿರುವ ನನ್ನ ದೃಷ್ಟಿಗೆ ರಾವಣನಿಂದು ಬಿದ್ದಿದ್ದಾನೆ. ಗರುಡನ ದೃಷ್ಟಿಗೆ ಗೋಚರವಾದ ಸರ್ಪವು ಜೀವಸಹಿತವಾಗಿ ಹೋಗಲು ಸಾಧ್ಯವಾಗದಂತೆ–ನನ್ನ ಕಣ್ಣಿಗೆ ಬಿದ್ದ ಇವನು ಖಂಡಿತವಾಗಿಯೂ ಹಿಂದಿರುಗಲಾರನು. ವಾನರಶ್ರೇಷ್ಠರೇ! ನೀವೆಲ್ಲರೂ ಪರ್ವತದ ಶಿಖರಗಳಲ್ಲಿ ಸುಖವಾಗಿ ಕುಳಿತು ನನ್ನ ಮತ್ತು ರಾವಣನ ಯುದ್ಧವನ್ನು ನೋಡುತ್ತಿರಿ.

ಅದ್ಯ ರಾಮಸ್ಯ ರಾಮತ್ವಂ ಪಶ್ಯನ್ತು ಮಮ ಸಂಯುಗೇ ।
ತ್ರಯೋ ಲೋಕಾಃ ಸಗನ್ಧರ್ವಾಃ ಸದೇವಾಃ ಸರ್ಷಿಚಾರಣಾಃ ॥೫೫॥

ಈಗ ರಾವಣನೊಡನೆ ಮಾಡಲಿರುವ ಯುದ್ಧದಲ್ಲಿ ದೇವ-ಗಂಧರ್ವ-ಸಿದ್ಧ-ಚಾರಣರೂ, ಮಹರ್ಷಿಗಳೂ, ಮೂರು ಲೋಕಗಳೂ ರಾಮನ ರಾಮತ್ವವನ್ನು* ಕಂಡುಕೊಳ್ಳಲಿ.

ಎಂದಿನವರೆಗೆ ಈ ಭೂಮಂಡಲವಿರುವುದೋ ಅಂದಿನವರೆಗೂ ಸ್ಥಾವರ-ಜಂಗಮಗಳಿಂದ ಕೂಡಿರುವ ಸಕಲಲೋಕಗಳೂ ಮತ್ತು ದೇವತೆಗಳೂ ಪ್ರಶಂಸಿಸಲು ಯೋಗ್ಯವಾದ ಅದ್ಭುತಯುದ್ಧಕರ್ಮವನ್ನು ನಾನೀಗ

---

* ರಾಮತ್ವ–ಎಂದರೆ ವಿಶ್ವೇಶ್ವರತ್ವ. ಶ್ರೀರಾಮನು ವಿಶ್ವಕ್ಕೆ ಈಶ್ವರನೆಂಬುವುದನ್ನು ಬ್ರಹ್ಮವೈವರ್ತದಲ್ಲಿ ಹೀಗೆ ನಿರೂಪಿಸಿದ್ದಾರೆ : ರಾಶಬ್ದೋ ವಿಶ್ವಜನೋ ಮಶ್ಚಾಪೀಶ್ವರವಾಚಕಃ। ವಿಶ್ವಾನಾಮೀಶ್ವರೋ ಯೋ ಹಿ ತೇನ ರಾಮಃ ಪ್ರಕೀರ್ತಿತಃ ॥

ಮಾಡಿ ತೋರಿಸುತ್ತೇನೆ. ಸರ್ವಕಾಲದಲ್ಲಿಯೂ ಈ ಲೋಕದಲ್ಲಿರುವ ಮನುಷ್ಯರು ಕಲೆತು ರಾಮ-ರಾವಣರ ಯುದ್ಧವು ಹೇಗೆ ನಡೆಯಿತೆಂಬುದನ್ನು ಮಾತನಾಡಿಕೊಳ್ಳುತ್ತಿರುತ್ತಾರೆ."

ಏಕಾಗ್ರಚಿತ್ತನಾದ ಶ್ರೀರಾಮನು ಹೀಗೆ ಹೇಳಿ ಸುವರ್ಣಭೂಷಿತವಾದ ಮತ್ತು ನಿಶಿತವಾದ ಬಾಣಗಳಿಂದ ದಶಗ್ರೀವನನ್ನು ಪ್ರಹರಿಸಿದನು. ಅದೇ ರೀತಿಯಲ್ಲಿ ರಾವಣನು ಕೂಡ ಪ್ರದೀಪ್ತವಾದ ನಾರಾಚಗಳನ್ನೂ, ಮುಸಲಗಳನ್ನೂ ಮೇಘಗಳು ಜಲಧಾರೆಯನ್ನು ಸುರಿಸುವಂತೆ–ರಾಮನ ಮೇಲೆ ಸುರಿಸಿದನು. ರಾಮ-ರಾವಣರು ಒಬ್ಬರ ಮೇಲೆ ಮತ್ತೊಬ್ಬರು ಬಿಡುತ್ತಿದ್ದ ಶ್ರೇಷ್ಠವಾದ ಬಾಣಗಳ ಪರಸ್ಪರಘರ್ಷಣೆಯಿಂದಾಗಿ ಭಯಂಕರವಾದ ಶಬ್ದವು ಸರ್ವತ್ರ ಕೇಳಿಬರುತ್ತಿದ್ದಿತು. ರಾಮ-ರಾವಣರು ಪ್ರಯೋಗಿಸುತ್ತಿದ್ದ ಬಾಣ ಗಳು ಒಂದನ್ನೊಂದು ಸಂಘರ್ಷಿಸಿ ಛಿನ್ನ-ಭಿನ್ನವಾಗಿ ಭೂಮಿಯ ಮೇಲೆ ಬೀಳುತ್ತಿದ್ದುವು. ಹಾಗೆ ಬೀಳುವಾಗ ಅವುಗಳ ಅಗ್ರಭಾಗಗಳು ದೇದೀಪ್ಯಮಾನವಾಗಿ ಕಾಣುತ್ತಿದ್ದುವು. ರಾಮ-ರಾವಣರ ಧನುಸ್ಸುಗಳಲ್ಲಿದ್ದ ನಾಣುಗಳ ಸೆಳೆತದಿಂದ ಹೊರಬರುತ್ತಿದ್ದ ಮಹಾಧ್ವನಿಯು ಸಮಸ್ತಪ್ರಾಣಿಗಳಿಗೂ ಭಯವನ್ನುಂಟುಮಾಡುತ್ತಾ ಪರಮಾದ್ಭುತವಾಗಿರುವಂತೆ–ಕಾಣುತ್ತಿದ್ದಿತು. ಗಾಳಿಯ ಬಡಿತದಿಂದ ಮೇಘಗಳು ಚದುರಿಹೋಗುವಂತೆ ದೇದೀಪ್ಯಮಾನವಾದ ಧನುಸ್ಸನ್ನು ಹೊಂದಿದ್ದ ಮಹಾತ್ಮನಾದ ಶ್ರೀರಾಮನು ಎಡಬಿಡದೇ ಸುರಿಸುತ್ತಿದ್ದ ಬಾಣಗಳ ಸಮೂಹಗಳಿಂದ ಮುಚ್ಚಲ್ಪಟ್ಟ ರಾವಣನು ಭಯಗೊಂಡು ತನ್ನ ಸೈನಿಕರೊಡನೆ ಲಂಕೆಗೆ ಪಲಾಯನಮಾಡಿದನು.

೧೦೦ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೧೦೧ನೆಯ ಸರ್ಗ

ಲಕ್ಷ್ಮಣನ ಮೂರ್ಛೆ : ಶ್ರೀರಾಮನ ವಿಲಾಪ : ಹನುಮಂತನು ತಂದ ಓಷಧಿಲತೆಗಳಿಂದ ಸುಷೇಣನು ಲಕ್ಷ್ಮಣನಿಗೆ ಚಿಕಿತ್ಸೆಮಾಡಿದುದು : ಲಕ್ಷ್ಮಣನು ಎಚ್ಚರಗೊಂಡುದು

ಶಕ್ತ್ಯಾ ನಿಪಾತಿತಂ ದೃಷ್ಟ್ವಾ ರಾವಣೇನ ಬಲೀಯಸಾ ।
ಲಕ್ಷ್ಮಣಂ ಸಮರೇ ಶೂರಂ ಶೋಣಿತೌಘಪರಿಪ್ಲುತಮ್ ॥೧॥

ಸ ದತ್ವಾ ತುಮುಲಂ ಯುದ್ಧಂ ರಾವಣಸ್ಯ ದುರಾತ್ಮನಃ ।
ವಿಸೃಜನ್ನೇವ ಬಾಣೌಘಾನ್ಸುಷೇಣಂ ವಾಕ್ಯಮಬ್ರವೀತ್ ॥೨॥

ಬಲಿಷ್ಠನಾದ ರಾವಣನು ಶಕ್ತ್ಯಾಯುಧದಿಂದ ಕೆಳಕ್ಕೆ ಕೆಡವಲ್ಪಟ್ಟ ಮತ್ತು ರಕ್ತದಿಂದ ತೋಯ್ದುಹೋಗಿದ್ದ ಶೂರನಾದ ಲಕ್ಷ್ಮಣನನ್ನು ಶ್ರೀರಾಮನು ನೋಡಿದನು. ತನ್ನ ಎಲ್ಲ ವಿಧವಾದ ಕಷ್ಟಗಳಿಗೂ ಕಾರಣನಾದ ದುರಾತ್ಮನಾದ ರಾವಣನನ್ನು ಸಂಹರಿಸಲು ನಿಶ್ಚಯಿಸಿ ಅವನೊಡನೆ ಯುದ್ಧಮಾಡುತ್ತಾ ಬಾಣಗಳ ಸಮೂಹಗಳನ್ನು ಪುಂಖಾನುಪುಂಖವಾಗಿ ಸುರಿಸುತ್ತಿದ್ದಾಗಲೇ ಶ್ರೀರಾಮನು ಸುಷೇಣನಿಗೆ ಹೇಳಿದನು :

"ಸುಷೇಣ! ರಾವಣನ ಪರಾಕ್ರಮದ ಫಲವಾಗಿ ಶಕ್ತ್ಯಾಯುಧದಿಂದ ಪ್ರಹರಿಸಲ್ಪಟ್ಟ ಲಕ್ಷ್ಮಣನು ಭೂಮಿಯಲ್ಲಿ ಬಿದ್ದಿದ್ದಾನೆ. ಅವನೀಗ ಸರ್ಪದಂತೆ ನೆಲದ ಮೇಲೆ ಅತ್ತಲಿತ್ತ ಹೊರಳಾಡುತ್ತಾ ನನ್ನ ಶೋಕವನ್ನು ಹೆಚ್ಚಿಸುತ್ತಿದ್ದಾನೆ. ಪ್ರಾಣಗಳಿಗಿಂತಲೂ ಪ್ರಿಯತರನಾದ ಈ ನನ್ನ ತಮ್ಮ ಲಕ್ಷ್ಮಣನು ರಕ್ತದಲ್ಲಿ ತೋಯ್ದುಹೋಗಿದ್ದಾನೆ. ಇವನನ್ನು ನೋಡಿ ನನ್ನ ಮನಸ್ಸು ಬಹಳವಾಗಿ ವ್ಯಾಕುಲಗೊಂಡಿದೆ. ಇಂತಹ ಸ್ಥಿತಿಯಲ್ಲಿರುವ ಇವನನ್ನು ನೋಡುತ್ತಿದ್ದರೆ ನನಗೆ ಯುದ್ಧಮಾಡಲು ಶಕ್ತಿಯು ಹೇಗೆ ತಾನೇ ಬಂದೀತು? ಶುಭಲಕ್ಷಣಸಂಪನ್ನನಾದ ಸಮರಶ್ಲಾಘಿಯಾದ ಈ ನನ್ನ ತಮ್ಮ ಲಕ್ಷ್ಮಣ ನೇನಾದರೂ ಅಸುನೀಗದರೆ–ನಾನು ಪ್ರಾಣವುಳಿಸಿಕೊಂಡಿರುವುದರಲ್ಲಾಗಲೀ ಸುಖವನ್ನು ಉಪಭೋಗಿಸುವುದರಲ್ಲಾಗಲೀ ಪ್ರಯೋಜನವೇನಿದೆ? ನನ್ನ ತಮ್ಮನು ಈ ಅವಸ್ಥೆಯಲ್ಲಿರಲು ಅವಕಾಶವಾಗಿರುವುದಕ್ಕೆ ನನ್ನ ಪರಾಕ್ರಮವೇ ನಾಚಿಕೆಪಡುತ್ತಿದೆ. ಕೈಯಿಂದ ಧನುಸ್ಸು ಜಾರಿಹೋಗುತ್ತಿದೆ. ಬಾಣಗಳು ಶಿಥಿಲಗೊಳ್ಳುತ್ತಿವೆ. ದೃಷ್ಟಿಯು ಕಂಬನಿಯ ವಶವಾಗಿದೆ. ಸ್ವಪ್ನದಲ್ಲಿ ಮನುಷ್ಯರ ಶರೀರವು ಶಿಥಿಲಗೊಳ್ಳುವಂತೆ ನನ್ನ ಅಂಗಾಂಗಗಳೂ ಶಿಥಿಲಗೊಳ್ಳುತ್ತಿವೆ. ಚಿಂತೆಯು ಅಧಿಕವಾಗುತ್ತಿದೆ. ದುರಾತ್ಮನಾದ ರಾವಣ ನಿಂದ ಪ್ರಹರಿಸಲ್ಪಟ್ಟು ಬಹಳವಾಗಿ ಗಾಯಗೊಂಡಿರುವ, ವಿಲಿ-ವಿಲಿಗುಟ್ಟುತ್ತಾ ಒದ್ದಾಡುತ್ತಿರುವ, ಮರ್ಮಸ್ಥಾನಗಳಲ್ಲಿ ಗಾಯಗೊಂಡು ದುಃಖಪೀಡಿತನಾಗಿರುವ ಲಕ್ಷ್ಮಣನನ್ನು ನೋಡಿದರೆ ನನಗೂ ಸತ್ತುಹೋಗಬೇಕೆನ್ನಿಸುತ್ತಿದೆ."

ಲಕ್ಷ್ಮಣನು ಶ್ರೀರಾಮನಿಗೆ ಹೊರಗೆ ಸಂಚರಿಸುವ ಪ್ರಾಣಗಳಂತೆ ಪರಮಪ್ರಿಯನಾಗಿದ್ದನು. ಅಂತಹವನು ಆ ಅವಸ್ಥೆಯಲ್ಲಿರುವುದನ್ನು ಕಂಡು ಶ್ರೀರಾಮನು ಹೆಚ್ಚು ವ್ಯಾಕುಲಗೊಂಡನು. ಚಿಂತೆ ಮತ್ತು ಶೋಕಗಳಲ್ಲಿ ಮುಳುಗಿಹೋದನು. ರಣಭೂಮಿಯ ಧೂಳಿನಲ್ಲಿ ಗಾಯಗೊಂಡು ಬಿದ್ದಿರುವ ಲಕ್ಷ್ಮಣನನ್ನು ನೋಡಿ ವ್ಯಾಕುಲಗೊಂಡ ಇಂದ್ರಿಯಗಳುಳ್ಳವನಾಗಿ ಅತ್ಯಂತ ವಿಷಣ್ಣನಾಗಿ ವಿಲಪಿಸತೊಡಗಿದನು.

ವಿಜಯೋಽಪಿ ಹಿ ಮೇ ಶೂರ ನ ಪ್ರಿಯಾಯೋಪಕಲ್ಪತೇ ।
ಅಚಕ್ಷುರ್ವಿಷಯಶ್ಚನ್ದ್ರಃ ಕಾಂ ಪ್ರೀತಂ ಜನಯಿಷ್ಯತಿ ॥೧೧॥

"ಶೂರವೀರನೇ! ಈಗ ಯುದ್ಧದಲ್ಲಿ ನಾನು ವಿಜಯಿಯಾದರೂ ನನ್ನ ಮನಸ್ಸಿಗೆ ಪ್ರಸನ್ನತೆಯುಂಟಾಗುವುದಿಲ್ಲ. ಕಣ್ಣಿಲ್ಲದವನಿಗೆ ಚಂದ್ರನ ಬೆಳದಿಂಗಳೂ ಹೇಗೆ ತಾನೇ ಆಹ್ಲಾದವನ್ನುಂಟುಮಾಡುತ್ತದೆ?

ಈಗ ನನಗೆ ಈ ಯುದ್ಧದಿಂದಾಗಲೀ ನನ್ನ ಪ್ರಾಣಗಳನ್ನು ರಕ್ಷಿಸಿ ಕೊಳ್ಳುವುದರಿಂದಾಗಲೀ ಪ್ರಯೋಜನವೇನಿದೆ? ನನ್ನ ಪ್ರಾಣಪ್ರಿಯನಾದ ಲಕ್ಷ್ಮಣನು ಈ ರಣಭೂಮಿಯಲ್ಲಿ ಮೂರ್ಛಿತನಾಗಿ ಬಿದ್ದಿರುವುದರಿಂದ ನನಗೆ ಮುಂದೆ ಯುದ್ಧಮಾಡುವ ಅಗತ್ಯವೇ ಇಲ್ಲ. ಯಾರಿಗಾಗಿ, ಯಾವ ಸಂತೋಷಕ್ಕಾಗಿ ಯುದ್ಧಮಾಡಲಿ?

ಯಥೈವ ಮಾಂ ವನಂ ಯಾನ್ತಮನುಯಾತಿ ಮಹಾದ್ಯುತಿಃ ।
ಅಹಮಪ್ಯನುಯಾಸ್ಯಾಮಿ ತಥೈವೈನಂ ಯಮಕ್ಷಯಮ್ ॥೧೩॥

ಮಹಾದ್ಯುತಿಯಾದ ಈ ಲಕ್ಷ್ಮಣನು ಅರಣ್ಯಕ್ಕೆ ಹೊರಟ ನನ್ನನ್ನು ಅನುಸರಿಸಿ ಹೇಗೆ ಬಂದನೋ–ಹಾಗೆಯೇ ನಾನೂ ಕೂಡ ಯಮನ ಅರ ಮನೆಗೆ ಹೊರಟಿರುವ ಇವನನ್ನು ಅನುಸರಿಸಿ ಹೋಗುತ್ತೇನೆ.

ಯಾವನು ಸದಾ ನನ್ನನ್ನೇ ಅನುಸರಿಸಿಕೊಂಡಿರುತ್ತಾ ನನಗೆ ಅತ್ಯಂತ ಪ್ರಿಯನಾದ ಬಂಧುವಾಗಿದ್ದನೋ ಅಂತಹವನನ್ನು ಕಪಟಯೋಧಿಗಳಾದ ರಾಕ್ಷಸರು ಇಂತಹ ದುರವಸ್ಥೆಗೆ ಗುರಿಮಾಡಿದ್ದಾರೆ.

ದೇಶೇ ದೇಶೇ ಕಲತ್ರಾಣಿ ದೇಶೇ ದೇಶೇ ಚ ಬಾನ್ಧವಾಃ ।
ತಂ ತು ದೇಶಂ ನ ಪಶ್ಯಾಮಿ ಯತ್ರ ಭ್ರಾತಾ ಸಹೋದರಃ ॥೧೪॥

ಭಾರ್ಯೆಯರು ದೇಶ-ದೇಶಗಳಲ್ಲಿಯೂ ಸಿಕ್ಕಬಹುದು. ಬಂಧು ಗಳೂ ದೇಶ-ದೇಶಗಳಲ್ಲಿಯೂ ಒದಗಬಹುದು. ಒಬ್ಬಳು ಕನ್ಯೆಯನ್ನು ಮದುವೆಯಾದೊಡನೆಯೇ ಮಾವ-ಅತ್ತೆ-ಭಾವಮೈದುನ-ನಾದಿನಿ–ಮುಂತಾಗಿ ಬಂಧುಗಳು ಒದಗಿಬರುತ್ತಾರೆ. ಆದರೆ ಸಹೋದರರಾದ ಅಣ್ಣ-ತಮ್ಮಂದಿರು ಮಾತ್ರ ಯಾವ ದೇಶದಲ್ಲಿಯೂ ದೊರಕುವುದಿಲ್ಲ.

ದುರ್ಧರ್ಷನಾದ ವೀರಲಕ್ಷ್ಮಣನಿಲ್ಲದೇ ನನಗೆ ರಾಜ್ಯದಿಂದೇನಾಗ ಬೇಕಾಗಿದೆ? ಪುತ್ರವತ್ಸಲೆಯಾದ ಸುಮಿತ್ರೆಯು ಲಕ್ಷ್ಮಣನೆಲ್ಲಿ? ಎಂದು ಕೇಳಿ ದರೆ ಅವಳಿಗೆ ನಾನೇನು ಹೇಳಲಿ? ಸುಮಿತ್ರಾದೇವಿಯ ನಿಂದೆಯನ್ನು ನಾನು ಖಂಡಿತವಾಗಿಯೂ ಸಹಿಸಿಕೊಳ್ಳಲಾರೆನು. ತಾಯಿಯಾದ ಕೌಸಲ್ಯೆಗಾಗಲೀ ಕೈಕೇಯಿಗಾಗಲೀ ಏನು ಹೇಳಲಿ? 'ಲಕ್ಷ್ಮಣನೊಡನೆ ಅರಣ್ಯಕ್ಕೆ ಹೋದವನು ಅವನಿಲ್ಲದೇ ನೀನು ಹೇಗೆ ತಾನೇ ಅಯೋಧ್ಯೆಗೆ ಬಂದೆ?'–ಎಂದು ಭರತ-ಶತ್ರುಘ್ನರು ಕೇಳಿದರೆ ಅವರಿಗೆ ಯಾವ ಉತ್ತರ ನೀಡಲಿ? ಆದುದ ರಿಂದ ನಾನು ಇಲ್ಲಿಯೇ ಮರಣಹೊಂದುವುದು ಉಚಿತವಾಗಿದೆ. ಬಂಧುಗಳ ನಿಂದೆಯನ್ನು ಕೇಳುವುದು ಉಚಿತವಾಗಿ ಕಾಣುವುದಿಲ್ಲ. ನಾನು ಈ ಹಿಂದೆ ಯಾವುದೋ ಜನ್ಮದಲ್ಲಿ ಮಾಡಿದ್ದ ದುಷ್ಕೃತ್ಯಕ್ಕಾಗಿ ಧಾರ್ಮಿಕನಾದ ನನ್ನ ಸಹೋದರನು ನನ್ನೆದುರಿನಲ್ಲೇ ಸತ್ತುಬಿದ್ದಿದ್ದಾನೆ.

ಹಾ ಭ್ರಾತರ್ಮನುಜಶ್ರೇಷ್ಠ ಶೂರಾಣಾಂ ಪ್ರವರ ಪ್ರಭೋ ।
ಏಕಾಕೀ ಕಿಂ ನು ಮಾಂ ತ್ಯಕ್ತ್ವಾ ಪರಲೋಕಾಯ ಗಚ್ಛಸಿ ॥೨೦॥

ಅಯ್ಯೋ ಸಹೋದರನೇ! ನರಶ್ರೇಷ್ಠನೇ! ಶೂರಪ್ರವರನೇ! ಪ್ರಭುವೇ! ಲಕ್ಷ್ಮಣ! ನನ್ನನ್ನು ಬಿಟ್ಟು ನೀನೊಬ್ಬನೇ ಪರಲೋಕಕ್ಕೆ ಹೋಗುತ್ತಿರುವೆಯಾ?

ವಿಲಪನ್ತಂ ಚ ಮಾಂ ಭ್ರಾತಃ ಕಿಮರ್ಥಂ ನಾವಭಾಷಸೇ ।
ಉತ್ತಿಷ್ಠ ಪಶ್ಯ ಕಿಂ ಶೇಷೇ ದೀನಂ ಮಾಂ ಪಶ್ಯ ಚಕ್ಷುಷಾ ॥೨೧॥

ಗೋಳಾಡುತ್ತಿರುವ ನನ್ನೊಡನೆ ನೀನೇಕೆ ಮಾತನಾಡುತ್ತಿಲ್ಲ? ಎದ್ದೇಳು! ಏಕೆ ಮಲಗಿರುವೆ? ದೀನನಾಗಿರುವ ನನ್ನನ್ನು ಕಣ್ಣುಬಿಟ್ಟು ನೋಡು.

ಶೋಕಾರ್ತಸ್ಯ ಪ್ರಮತ್ತಸ್ಯ ಪರ್ವತೇಷು ವನೇಷು ಚ ।
ವಿಷಣ್ಣಸ್ಯ ಮಹಾಬಾಹೋ ಸಮಾಶ್ವಾಸಯಿತಾ ಮಮ ॥೨೨॥

ನಾನು ಶೋಕಪೀಡಿತನಾಗಿದ್ದಾಗ, ಹುಚ್ಚನಂತೆ ಕಾಡು-ಮೇಡುಗಳಲ್ಲಿ ಅಲೆದಾಡುತ್ತಿದ್ದಾಗ, ವಿಷಣ್ಣನಾಗಿದ್ದಾಗ ನೀನೇ ನನ್ನನ್ನು ಸಮಾಧಾನ ಗೊಳಿಸುತ್ತಿದ್ದೆ. ಈಗೇಕೆ ನೀನು ಹಾಗೆ ಮಾಡುತ್ತಿಲ್ಲ?"

ಶೋಕದಿಂದ ವ್ಯಾಕುಲಗೊಂಡ ಇಂದ್ರಿಯಗಳುಳ್ಳವನಾಗಿದ್ದ, ಲಕ್ಷ್ಮಣನ ಸಲುವಾಗಿ ಹೀಗೆಲ್ಲಾ ಹೇಳಿಕೊಂಡು ವಿಲಪಿಸುತ್ತಿದ್ದ ಶ್ರೀರಾಮನನ್ನು ಸುಷೇಣನು ಸಮಾಧಾನಗೊಳಿಸುತ್ತಾ ಶ್ರೇಷ್ಠವಾದ ಈ ಮಾತನ್ನು ಹೇಳಿದನು:

"ನರಶ್ರೇಷ್ಠನೇ! ವ್ಯಾಕುಲತೆಯನ್ನುಂಟುಮಾಡುತ್ತಿರುವ ಈ ನಿನ್ನ ಬುದ್ಧಿಯನ್ನು ಪರಿತ್ಯಜಿಸು. ಯುದ್ಧಭೂಮಿಯಲ್ಲಿ ತೀಕ್ಷ್ಣವಾದ ಬಾಣಗಳ ಆಘಾತಗಳಿಗೆ ಸಮಾನವಾದ ಮತ್ತು ಸದಾ ಶೋಕವನ್ನೇ ಉಂಟು ಮಾಡುವ ಈ ನಿನ್ನ ಚಿಂತೆಯನ್ನು ದೂರಮಾಡು.* ಕಾಂತಿವರ್ಧನನಾದ ನಿನ್ನ ತಮ್ಮ ಲಕ್ಷ್ಮಣನು ಖಂಡಿತವಾಗಿಯೂ ಮರಣಹೊಂದಿರುವುದಿಲ್ಲ. ಇವನ ಮುಖವು ವಿಕಾರವಾಗಿಯೂ ಇಲ್ಲ, ಕಪ್ಪಾಗಿಯೂ ಇಲ್ಲ. ನೋಡು ರಾಮ! ಲಕ್ಷ್ಮಣನ ಮುಖವು ಒಳ್ಳೆಯ ಕಾಂತಿಯಿಂದಲೂ ಕೂಡಿದೆ. ಪ್ರನ್ನವಾಗಿಯೂ ಇದೆ. ಇವನ ಅಂಗೈಗಳು ಕಮಲದಂತೆ ಕೋಮಲವಾಗಿವೆ. ಕಣ್ಣುಗಳು ಪ್ರಸನ್ನವಾಗಿವೆ. ಮಹಾರಾಜ! ಪ್ರಾಣತೊರೆದವರ ರೂಪ-ಲಕ್ಷಣಗಳು ಹೀಗೆ ಖಂಡಿತವಾಗಿಯೂ ಇರುವುದಿಲ್ಲ. ಪರಂತಪನೇ! ರಾಘವ! ನೀನು ವಿಷಾದಿಸಬೇಡ. ಲಕ್ಷ್ಮಣನು ಜೀವಂತನಾಗಿದ್ದಾನೆ.

---

* ಚಿಂತೆಯು ಎಷ್ಟು ದಾರುಣವಾದುದೆಂಬುದಕ್ಕೆ ಸುಭಾಷಿತಕಾರರು ಒಂದು ಶ್ಲೋಕವನ್ನು ಹೇಳಿದ್ದಾರೆ : **ಚಿನ್ತಾಯಾಶ್ಚ ಚಿತಾಯಾಶ್ಚ ಬಿನ್ದುಮಾತ್ರಂ ವಿಶೇಷತಾ । ಚಿತಾ ದಹತಿ ನಿರ್ಜೀವಂ ಚಿನ್ತಾ ದಹತಿ ಜೀವಿನಮ್ ॥** ಚಿತೆಗೂ ಚಿಂತೆಗೂ ಬಿಂದುಮಾತ್ರ ವ್ಯತ್ಯಾಸವಿದೆ. ಬಿಂದುವಿಲ್ಲದ ಚಿತೆಯು ಜೀವವಿಲ್ಲದ ವಸ್ತುವನ್ನು ಸುಡಬಹುದಾದರೆ ಬಿಂದುವಿನಿಂದೊಡಗೂಡಿದ ಚಿಂತೆಯು ಜೀವಂತವಾಗಿರುವವನನ್ನೇ ಸುಟ್ಟುಹಾಕುತ್ತದೆ.

ಅಂಗಾಂಗಗಳೆಲ್ಲವೂ ಶಿಥಿಲವಾಗಿರುವುದರಿಂದ ಇವನು ನೆಲದ ಮೇಲೆ ಮಲಗಿದ್ದಾನೆ. ಇವನ ಉಚ್ಛ್ವಾಸ-ನಿಃಶ್ವಾಸಗಳ ಕ್ರಿಯೆಯೂ ಸತತವಾಗಿ ನಡೆಯುತ್ತಿದ್ದು ಬಾರಿ-ಬಾರಿಗೂ ಕಂಪಿಸುತ್ತಿದೆ. ಲಕ್ಷ್ಮಣನು ಜೀವಂತ ನಾಗಿರುವನೆಂಬುದನ್ನು ಇದೇ ಸೂಚಿಸುತ್ತದೆ."

ಮಹಾಪ್ರಾಜ್ಞನಾದ ಸುಷೇಣನು ಶ್ರೀರಾಮನಿಗೆ ಹೀಗೆ ಹೇಳಿ ಸಮೀಪದಲ್ಲಿದ್ದ ಹನುಮಂತನಿಗೆ ಹೇಳಿದನು :

"ಸೌಮ್ಯನೇ! ನೀನೀಗಲೇ ಶೀಘ್ರವಾಗಿ ಮಹೋದಯಪರ್ವತಕ್ಕೆ ಹೋಗು. ಅಲ್ಲಿಗೆ ಹೋಗುವ ದಾರಿಯನ್ನು ಈ ಮೊದಲೇ ನಿನಗೆ ಜಾಂಬವಂತನು ಹೇಳಿದ್ದಾನೆ. ಆ ಪರ್ವತದ ದಕ್ಷಿಣಶಿಖರಕ್ಕೆ ಹೋಗಿ ವೀರ ನಾದ ಲಕ್ಷ್ಮಣನ ಜೀವವನ್ನುಳಿಸಲು ವಿಶಲ್ಯಕರಣೀ, ಸಾವರ್ಣ್ಯಕರಣೀ, ಸಂಜೀವಕರಣೀ ಮತ್ತು ಸಂಧಾನಕರಣೀ* ಎಂಬ ಮಹೌಷಧಿಲತೆಗಳನ್ನು ತೆಗೆದುಕೊಂಡು ಬಾ."

ಸುಷೇಣನು ಹೀಗೆ ಹೇಳುತ್ತಲೇ ಹನುಮಂತನು ಮಹೋದಯ ಪರ್ವತಕ್ಕೆ ಹೊರಟುಹೋದನು. ಆದರೆ ಸುಷೇಣನು ಹೇಳಿದ ಓಷಧಿಲತೆ ಗಳು ಯಾವುದೆಂಬುದು ತಿಳಿಯದೇ ಇದ್ದುದರಿಂದ ಚಿಂತಾಕ್ರಾಂತನಾದನು. ಸ್ವಲ್ಪಹೊತ್ತು ಯೋಚಿಸಿದನಂತರ ಮಹಾತೇಜಸ್ವಿಯಾದ ಹನುಮಂತನಿಗೆ ಬುದ್ಧಿಯಲ್ಲಿ ಈ ವಿಚಾರವು ಹೊಳೆಯಿತು :

ಇದಮೇವ ಗಮಿಷ್ಯಾಮಿ ಗೃಹೀತ್ವಾ ಶಿಖರಂ ಗಿರೇಃ ॥೩೪॥

"ಇಲ್ಲಿ ಓಷಧಿಲತೆಯನ್ನು ಹುಡುಕುತ್ತಾ ಕಾಲಹರಣಮಾಡುವುದ ಕ್ಕಿಂತಲೂ ಈ ಶಿಖರವನ್ನೇ ಎತ್ತಿಕೊಂಡು ಅಲ್ಲಿಗೆ ಒಯ್ದುಬಿಡುತ್ತೇನೆ. ಈ ಶಿಖರದಲ್ಲಿ ಸುಖದಾಯಕವಾದ ಆ ಓಷಧಿಲತೆಗಳು ಇದ್ದೇ ಇವೆ. ಇದನ್ನು

* ವಿಶಲ್ಯಕರಣೀ–ಶರೀರದಲ್ಲಿ ನೆಟ್ಟುಕೊಂಡಿರುವ ಬಾಣಗಳನ್ನು ಹೊರತೆಗೆಯಲು ಉಪಯೋಗಿಸುವುದು. ಸಾವರ್ಣ್ಯಕರಣೀ–ಶರೀರಕ್ಕೆ ಹಿಂದಿದ್ದ ಬಣ್ಣವೇ ಬರುವಂತೆ ಮಾಡುವ ಲತೆ. ಸಂಜೀವಕರಣೀ–ಮೂರ್ಛೆಯನ್ನು ಹೋಗಲಾಡಿಸಿ ಚೈತನ್ಯವನ್ನು ತುಂಬುವ ವನಸ್ಪತಿ. ಸಂಧಾನಕರಣೀ–ಮುರಿದುಹೋಗಿರುವ ಮೂಳೆಗಳನ್ನು ಸೇರಿಸುವ ವನಸ್ಪತಿ.

ನಾನು ತರ್ಕಬುದ್ಧಿಯಿಂದ ನಿಶ್ಚಯಿಸಿದ್ದೇನೆ. ಮೇಲಾಗಿ ಈ ಪರ್ವತದ ದಕ್ಷಿಣಶಿಖರದಲ್ಲಿ ಆ ಲತೆಗಳು ಇರುವುವೆಂದು ಸುಷೇಣನೂ ಹೇಳಿದ್ದನು. ಒಂದು ವೇಳೆ ಅದರ ಅರಿವಾಗಲಿಲ್ಲವೆಂಬ ಕಾರಣದಿಂದ ನಾನು ವಿಶಲ್ಯಕರಣಿಯನ್ನು ತೆಗೆದುಕೊಳ್ಳದೆಯೇ ಹಿಂದಿರುಗಿಬಿಟ್ಟರೆ ಹೊತ್ತುಮೀರಿದ ದೋಷವುಂಟಾಗುತ್ತದೆ. ಎಲ್ಲರಿಗೂ ಮಹತ್ತರವಾದ ವ್ಯಾಕುಲವೂ ಉಂಟಾಗುತ್ತದೆ."

ಹನುಮಂತನು ಹೀಗೆ ಯೋಚಿಸಿ ಶ್ರೇಷ್ಠವಾದ ಆ ಪರ್ವತದ ಬಳಿಗೆ ಹೋದನು. ಶಿಖರವನ್ನು ಮೂರು ಬಾರಿ ಅಳ್ಳಾಡಿಸಿ ಅದನ್ನು ಬುಡಸಹಿತವಾಗಿ ಕಿತ್ತುಬಿಟ್ಟನು. ಆ ಶಿಖರದ ಮೇಲೆ ವಿಕಸಿತವಾದ ಚಿಗುರುಗಳಿಂದ ಕೂಡಿದ್ದ ನಾನಾವಿಧವಾದ ವೃಕ್ಷಗಳಿದ್ದುವು. ಅನಂತರ ಹನುಮಂತನು ಆ ಶಿಖರವನ್ನು ತನ್ನೆರಡು ಕೈಗಳಿಂದಲೂ ಮೇಲೆತ್ತಿ ಹಿಡಿದುಕೊಂಡನು.

ನೀರಿನಿಂದ ತುಂಬಿರುವ ಮೇಘದಂತಿದ್ದ ಆ ಪರ್ವತಶಿಖರವನ್ನೆತ್ತಿಕೊಂಡು ಮಾರುತಿಯು ಆಕಾಶದಲ್ಲಿ ಹಾರಿದನು. ಮಹಾವೇಗವಂತನಾದ ಹನುಮಂತನು ಬಹಳ ವೇಗವಾಗಿ ಪರ್ವತದೊಡನೆ ಹಾರಿಕೊಂಡು ರಣಭೂಮಿಗೆ ಬಂದು ಸುಷೇಣನ ಸಮೀಪದಲ್ಲಿ ಪರ್ವತಶಿಖರವನ್ನಿಟ್ಟು ಸ್ವಲ್ಪ ಹೊತ್ತು ವಿಶ್ರಮಿಸಿಕೊಂಡು ವಾನರವೈದ್ಯನಿಗೆ ಹೇಳಿದನು :

"ಹರಿಶ್ರೇಷ್ಠನೇ! ನನಗೆ ನೀನು ಹೇಳಿದ ಓಷಧಿಲತೆಗಳು ಯಾವುವೆಂಬುದು ತಿಳಿಯದು. ಆದುದರಿಂದ ಆ ಪರ್ವತದ ದಕ್ಷಿಣಶಿಖರವನ್ನೇ ಸಮಗ್ರವಾಗಿ ಕಿತ್ತುತಂದುಬಿಟ್ಟಿದ್ದೇನೆ."

ಸುಷೇಣನು ಹೀಗೆ ಹೇಳಿದ ಹನುಮಂತನನ್ನು ಶ್ಲಾಘನೆಮಾಡುತ್ತಾ ಆ ಶಿಖರದಲ್ಲಿ ತನಗೆ ಬೇಕಾಗಿದ್ದ ಓಷಧಿಲತೆಗಳೆಲ್ಲವನ್ನೂ ಕಿತ್ತುಕೊಂಡನು. ದೇವತೆಗಳಿಂದಲೂ ಮಾಡಲು ಅಸಾಧ್ಯವಾದ, ಹನುಮಂತನು ಮಾಡಿದ ಆ ದುಷ್ಕರವಾದ ಕಾರ್ಯವನ್ನು ನೋಡಿ ವಾನರಶ್ರೇಷ್ಠರೆಲ್ಲರೂ ವಿಸ್ಮಿತರಾದರು. ಅನಂತರ ವಾನರಶ್ರೇಷ್ಠನಾದ ಸುಷೇಣನು ಆ ಓಷಧಿಲತೆಯನ್ನು ಚೆನ್ನಾಗಿ ಅರೆದು ಅದನ್ನು ಲಕ್ಷ್ಮಣನಿಗೆ ಮೂಸಿಸಿದನು. ಶತ್ರುವೀರಹಂತಕನಾದ, ಬಾಣಗಳಿಂದ ವ್ಯಾಪ್ತನಾಗಿದ್ದ ಲಕ್ಷ್ಮಣನು ಅದನ್ನು ಆಘ್ರಾಣಿಸುತ್ತಲೇ

ಅವನ ಶರೀರದಲ್ಲಿದ್ದ ಬಾಣಗಳೆಲ್ಲವೂ ಕ್ಷಣಮಾತ್ರದಲ್ಲಿ ಹೊರಬಂದುವು. ಗಾಯಗಳೂ ಮಾಯ್ದುಹೋದುವು. ಬಹಳ ಶೀಘ್ರವಾಗಿ ಲಕ್ಷ್ಮಣನು ಮೇಲೆದ್ದು ಕುಳಿತನು. ಅದನ್ನು ನೋಡಿ ಪರಮಪ್ರೀತರಾದ ವಾನರರು 'ಸಾಧು! ಸುಷೇಣ! ಸಾಧು'–ಎಂದು ಸುಷೇಣನನ್ನು ಬಹಳವಾಗಿ ಪ್ರಶಂಸಿ ಸಿದರು. ಶತ್ರುವೀರಹಂತಕನಾದ ಶ್ರೀರಾಮನು ಆನಂದಬಾಷ್ಪಗಳನ್ನು ಸುರಿಸುತ್ತಾ–'ಬಾ ಲಕ್ಷ್ಮಣ! ಬೇಗ ಬಾ'–ಎಂದೆನ್ನುತ್ತಾ ಅವನು ಬರುವುದನ್ನೂ ಕಾಯದೇ ತಾನೇ ಅವಸರದಿಂದ ಮುಂದೆ ಹೋಗಿ ಎರಡು ತೋಳುಗಳಿಂದಲೂ ಬಾಚಿ ತಬ್ಬಿಕೊಂಡನು. ಹಾಗೆ ಆಲಿಂಗಿಸಿಕೊಂಡೇ ನೆತ್ತಿಯನ್ನು ಸವರುತ್ತಾ ಹೇಳಿದನು:

ದಿಷ್ಟ್ಯಾ ತ್ವಾಂ ವೀರ ಪಶ್ಯಾಮಿ ಮರಣಾತ್ಪುನರಾಗತಮ್ ।
ನ ಹಿ ಮೇ ಜೀವಿತೇನಾರ್ಥಃ ಸೀತಯಾ ಚಾಪಿ ಲಕ್ಷ್ಮಣ ।
ಕೋ ಹಿ ಮೇ ವಿಜಯೇನಾರ್ಥಸ್ತ್ವಯಿ ಪಞ್ಚತ್ವಮಾಗತೇ ॥೪೯॥

"ಲಕ್ಷ್ಮಣ! ಸೌಭಾಗ್ಯದ ಕಾರಣದಿಂದ ಮರಣೋನ್ಮುಖನಾಗಿದ್ದ ನೀನು ಹಿಂದಿರುಗಿ ಬಂದುದನ್ನು ಕಾಣುತ್ತಿದ್ದೇನೆ. ನೀನಿಲ್ಲದೇ ನನ್ನ ಜೀವಿತದ ರಕ್ಷಣೆಯಿಂದಾಗಲೀ, ಸೀತೆಯಿಂದಾಗಲೀ, ಯಾವ ಪ್ರಯೋಜನವೂ ಇಲ್ಲ. ನೀನು ಮರಣಹೊಂದಿದೆಯಾದರೆ ನಾನಾದರೂ ವಿಜಯವನ್ನು ಗಳಿಸಿ ಏನು ಮಾಡಬೇಕಾಗಿದೆ?"

ಮಹಾತ್ಮನಾದ ಶ್ರೀರಾಮನು ಹೀಗೆ ಹೇಳಲು ಲಕ್ಷ್ಮಣನು ಖಿನ್ನನಾಗಿ ಗದ್ಗದಧ್ವನಿಯಿಂದ ಹೇಳಿದನು :

ತಾಂ ಪ್ರತಿಜ್ಞಾಂ ಪ್ರತಿಜ್ಞಾಯ ಪುರಾ ಸತ್ಯಪರಾಕ್ರಮ ।
ಲಘುಃ ಕಶ್ಚಿದಿವಾಸತ್ತ್ವೋ ನೈವ ತ್ವಂ ವಕ್ತುಮರ್ಹಸಿ ॥೫೦॥

"ಸತ್ಯಪರಾಕ್ರಮನೇ! ನೀನು ಈ ಹಿಂದೆ ರಾವಣನನ್ನು ಸಂಹರಿಸುವುದಾಗಿಯೂ ವಿಭೀಷಣನಿಗೆ ಪಟ್ಟಗಟ್ಟುವುದಾಗಿಯೂ ಪ್ರತಿಜ್ಞೆಮಾಡಿರುವೆ. ಅಂತಹ ಪ್ರತಿಜ್ಞೆಯನ್ನು ಮಾಡಿರುವ ನೀನಿಂದು ಅಲ್ಪನಂತೆ ಅಥವಾ ಬಲಹೀನನಂತೆ ಮಾತನಾಡುವುದು ಉಚಿತವಲ್ಲ.

ನ ಹಿ ಪ್ರತಿಜ್ಞಾಂ ಕುರ್ವನ್ತಿ ವಿತಥಾಂ ಸತ್ಯವಾದಿನಃ ।
ಲಕ್ಷಣಂ ಹಿ ಮಹತ್ತ್ವಸ್ಯ ಪ್ರತಿಜ್ಞಾಪರಿಪಾಲನಮ್ ॥೫೨॥

ನೈರಾಶ್ಯಮುಪಗನ್ತುಂ ತೇ ತದಲಂ ಮತ್ಪ್ರತೇಽನಘ ।
ವಧೇನ ರಾವಣಸ್ಯಾದ್ಯ ಪ್ರತಿಜ್ಞಾಮನುಪಾಲಯ ॥೫೩॥

ಅಣ್ಣ! ಸತ್ಯವಂತರಾದವರು ಮಿಥ್ಯಾಪ್ರತಿಜ್ಞೆಯನ್ನು ಎಂದಿಗೂ ಮಾಡುವುದಿಲ್ಲ. ಪ್ರತಿಜ್ಞೆಯ ಪರಿಪಾಲನೆಯೇ ಮಹಾತ್ಮರ ಲಕ್ಷಣವಾಗಿದೆ. ನನ್ನ ಸಲುವಾಗಿ ನೀನು ಇಷ್ಟೊಂದು ನಿರಾಶನಾಗಬಾರದು. ಈಗಲಾದರೂ ನೀನು ರಾವಣನನ್ನು ಸಂಹರಿಸಿ ನಿನ್ನ ಪ್ರತಿಜ್ಞೆಯನ್ನು ಪೂರ್ಣಗೊಳಿಸು.

ತೀಕ್ಷ್ಣವಾದ ಕೋರೆಹಲ್ಲುಗಳನ್ನು ಹೊಂದಿ ಗರ್ಜಿಸುತ್ತಿರುವ ಸಿಂಹದ ಮುಂದೆ ಬಂದ ಆನೆಯು ಅದರಿಂದ ತಪ್ಪಿಸಿಕೊಂಡು ಹೋಗಲು ಸಾಧ್ಯವಾಗುವುದಿಲ್ಲ. ಹಾಗೆಯೇ ನಿನ್ನ ಬಾಣಗಳ ಲಕ್ಷ್ಯಕ್ಕೆ ಸಿಕ್ಕಿದ ಯಾವ ಶತ್ರುವೂ ಖಂಡಿತವಾಗಿಯೂ ಜೀವಂತನಾಗಿ ಹೋಗಲಾರನು.

ಸೂರ್ಯದೇವನು ತನ್ನ ದೈನಂದಿನಕಾರ್ಯವನ್ನು ಮುಗಿಸಿ ಅಸ್ತಾಚಲವನ್ನು ಸೇರುವುದಕ್ಕಿಂತಲೂ ಮೊದಲೇ ದುರಾತ್ಮನಾದ ರಾವಣನ ವಧೆಯಾಗುವುದನ್ನು ನಾನು ಬಯಸುತ್ತೇನೆ.

ಆರ್ಯನೇ! ವೀರಶ್ರೇಷ್ಠನೇ! ನೀನು ಯುದ್ಧದಲ್ಲಿ ರಾವಣನನ್ನು ಸಂಹರಿಸಲು ಇಚ್ಛಿಸಿದ್ದರೆ, ನೀನು ಮಾಡಿರುವ ಪ್ರತಿಜ್ಞೆಯನ್ನು ಪೂರ್ಣಗೊಳಿಸುವ ಇಚ್ಛೆಯುಳ್ಳವನಾಗಿದ್ದರೆ, ಸೀತೆಯನ್ನು ಹಿಂದಕ್ಕೆ ಪಡೆಯುವ ಅಭಿಲಾಷೆಯುಳ್ಳವನಾಗಿದ್ದರೆ–ಶೀಘ್ರಾತಿಶೀಘ್ರವಾಗಿ ನಾನು ಹೇಳಿದಂತೆ ಮಾಡು.”

ಕಂಕನೆಯ ಸರ್ಗವು ಮುಗಿಯಿತು.

ಶ್ರೀರಾಮನು ಇಂದ್ರನು ಕಳುಹಿಸಿದ ರಥದಲ್ಲಿ ಕುಳಿತು ರಾವಣನೊಡನೆ ಯುದ್ಧಮಾಡಿದುದು

ಲಕ್ಷ್ಮಣೇನ ತು ತದ್ವಾಕ್ಯಮುಕ್ತಂ ಶ್ರುತ್ವಾ ಸ ರಾಘವಃ ।
ಸಂದಧೇ ಪರವೀರಘ್ನೋ ಧನುರಾದಾಯ ವೀರ್ಯವಾನ್ ॥೧॥

ಶತ್ರುವೀರಹಂತಕನಾದ ವೀರನಾದ ಶ್ರೀರಾಮನು ಲಕ್ಷ್ಮಣನು ಹೇಳಿದ ಮಾತನ್ನು ಕೇಳಿ ಧನುಸ್ಸನ್ನು ಹಿಡಿದು ಬಾಣವನ್ನು ಅನುಸಂಧಾನ ಮಾಡಿದನು.

ರಣರಂಗದಲ್ಲಿ ಶ್ರೀರಾಮನು ಘೋರವಾದ ಬಾಣಗಳನ್ನು ಪುಂಖಾನು ಪುಂಖವಾಗಿ ರಾವಣನ ಮೇಲೆ ಪ್ರಯೋಗಿಸತೊಡಗಿದನು. ರಾಕ್ಷಸಾಧಿಪತಿ ಯಾದ ರಾವಣನಾದರೋ ಮತ್ತೊಂದು ರಥದಲ್ಲಿ ಕುಳಿತು ರಾಹುವು ಸೂರ್ಯನ ಕಡೆಗೆ ಧಾವಿಸುವಂತೆ ಶ್ರೀರಾಮನ ಕಡೆಗೆ ಧಾವಿಸಿದನು. ಮೇಘವು ಜಲಧಾರೆಗಳಿಂದ ಮಹಾಪರ್ವತವನ್ನು ಮುಚ್ಚಿಬಿಡುವಂತೆ ರಾವಣನು ವಜ್ರಸದೃಶವಾದ ಬಾಣಗಳಿಂದ ಶ್ರೀರಾಮನನ್ನು ಮುಚ್ಚಿಬಿಟ್ಟನು. ಅದಕ್ಕೆ ಪ್ರತಿಯಾಗಿ ಶ್ರೀರಾಮನೂ ಏಕಾಗ್ರಚಿತ್ತನಾಗಿ ಉರಿಯುತ್ತಿರುವ ಅಗ್ನಿಗೆ ಸಮಾನವಾಗಿದ್ದ ಸುವರ್ಣಭೂಷಿತವಾಗಿದ್ದ ಬಾಣಗಳಿಂದ ರಾವಣನನ್ನು ಪ್ರಹರಿಸಿದನು. ಶ್ರೀರಾಮನು ಭೂಮಿಯ ಮೇಲೆ ನಿಂತು–ರಾವಣನು ರಥದಲ್ಲಿ ಕುಳಿತು ಮಾಡುವ ಯುದ್ಧವು ಸರಿಯಲ್ಲವೆಂದು ದೇವ-ಗಂಧರ್ವ-ದಾನವರು ಹೇಳತೊಡಗಿದರು. ದೇವತೆಗಳ ಅಮೃತೋಪಮವಾದ ಆ ಮಾತನ್ನು ಕೇಳಿ ತೇಜಸ್ವಿಯಾದ ದೇವಶ್ರೇಷ್ಠನಾದ ಇಂದ್ರನು ಮಾತಲಿ ಯನ್ನು ಕರೆದು ಹೇಳಿದನು :

"ಸಾರಥಿಯೇ! ರಘುಕುಲತಿಲಕನಾದ ಶ್ರೀರಾಮನು ಭೂಮಿಯ ಮೇಲೆ ನಿಂತು ಯುದ್ಧಮಾಡುತ್ತಿರುವನು. ನನ್ನ ರಥವನ್ನು ತೆಗೆದುಕೊಂಡು ಈಗಲೇ ನೀನು ಅವನ ಬಳಿಗೆ ಹೋಗಿ–ಈ ರಥವನ್ನು ದೇವರಾಜನು ನಿನ್ನ ಉಪಯೋಗಕ್ಕಾಗಿ ಕಳುಹಿಸಿಕೊಟ್ಟಿರುವನೆಂದು ಶ್ರೀರಾಮನಿಗೆ ಹೇಳು. ಶ್ರೀರಾಮನು ರಥದಲ್ಲಿ ಕುಳಿತು ರಾವಣನೊಡನೆ ಯುದ್ಧಮಾಡಲಿ. ದೇವತೆ ಗಳಿಗೆ ಹಿತಕರವಾದ ಈ ಮಹಾಕಾರ್ಯವನ್ನು ನೀನು ಮಾಡಬೇಕು."

ದೇವೇಂದ್ರನು ಹೀಗೆ ಹೇಳಲು ದೇವೇಂದ್ರನ ಸಾರಥಿಯಾದ ಮಾತಲಿಯು ಇಂದ್ರದೇವನಿಗೆ ನಮಸ್ಕರಿಸಿ ಹೇಳಿದನು :

"ದೇವೇಂದ್ರನೇ! ನಿನ್ನ ಆಜ್ಞೆಯಂತೆ ನಾನೀಗಲೇ ಶ್ರೇಷ್ಠವಾದ ನಿನ್ನ ರಥಕ್ಕೆ ಹಸಿರುಬಣ್ಣದ ಕುದುರೆಗಳನ್ನು ಹೂಡಿಕೊಂಡು ಶ್ರೀರಾಮನ ಬಳಿಗೆ ಹೋಗಿ ಅವನನ್ನು ಆ ದಿವ್ಯರಥದಲ್ಲಿ ಕುಳ್ಳಿರಿಸಿಕೊಂಡು ಸಾರಥ್ಯವನ್ನೂ ಮಾಡುವೆನು."

ಸಾರಥಿಯು ಹೀಗೆ ಹೇಳಿ ದೇವರಾಜನ ರಥವನ್ನು ಸಜ್ಜುಗೊಳಿಸಿ ದನು. ಆ ರಥವು ಸುವರ್ಣದಿಂದ ಚಿತ್ರಿತವಾಗಿದ್ದು ನೂರಾರು ಸಣ್ಣ-ಸಣ್ಣ ಗಂಟೆಗಳಿಂದಲೂ ಭೂಷಿತವಾಗಿದ್ದು ಬಾಲಸೂರ್ಯನಂತೆ ಪ್ರಕಾಶಮಾನ ವಾಗಿದ್ದಿತು. ಅದರ ಮೂಕಿಯು ವೈಡೂರ್ಯಮಯವಾಗಿದ್ದಿತು. ಆ ರಥವು ಸುವರ್ಣಾಭರಣಗಳಿಂದ ಸಮಲಂಕೃತವಾಗಿಯೂ, ಸೂರ್ಯಸದೃಶವಾದ– ಸುವರ್ಣಮಯವಾದ ಜಾಲರಿಗಳಿಂದ ವಿಭೂಷಿತವಾಗಿಯೂ, ಬಿಳಿಯ ಚಾಮರಗಳಿಂದ ಶೋಭಾಯಮಾನವಾಗಿಯೂ ಕಾಣುತ್ತಿದ್ದು ಹಸಿರು ಕುದುರೆಗಳಿಂದ ಯುಕ್ತವಾಗಿದ್ದಿತು. ದೇವರಾಜನಿಂದ ಆಜ್ಞಪ್ತನಾದ ಮಾತಲಿಯು ಅಂತಹ ದಿವ್ಯರಥವನ್ನು ಹತ್ತಿಕೊಂಡು ಸ್ವರ್ಗಲೋಕ ದಿಂದಿಳಿದು ಶ್ರೀರಾಮನ ಬಳಿಗೆ ಬಂದನು. ಚಾವಟಿಯನ್ನು ಹಿಡಿದು ರಥದಲ್ಲಿ ಕುಳಿತಿದ್ದ ಮಾತಲಿಯು ಕೈಮುಗಿದುಕೊಂಡು ಶ್ರೀರಾಮನಿಗೆ ಹೇಳಿದನು :

"ಮಹಾಸತ್ವನೇ! ಶತ್ರುನಾಶಕನೇ! ಕಾಕುತ್ಸ್ಥ! ನಾನು ಕುಳಿತಿರುವ ನೀನು ರಾವಣನೊಡನೆ ಮಾಡುತ್ತಿರುವ ಯುದ್ಧದಲ್ಲಿ ವಿಜಯಗಳಿಸಬೇಕೆಂಬ ಆಶಯದಿಂದ ಇಂದ್ರನು ಈ ರಥವನ್ನು ನಿನಗಾಗಿ ಕಳುಹಿಸಿಕೊಟ್ಟಿರುವನು. ಇದೋ ನೋಡು ರಾಘವ! ಇದು ಇಂದ್ರನ ಮಹಾಧನುಸ್ಸು, ಅಗ್ನಿಯ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಕೂಡಿರುವ ಕವಚವೂ ಈ ರಥದಲ್ಲಿದೆ. ಸೂರ್ಯಸದೃಶವಾದ ಬಾಣಗಳಿವೆ. ಮಂಗಳಕರವಾದ ಮತ್ತು ಶುಭ್ರವಾದ ಶಕ್ತ್ಯಾಯುಧವೂ ಈ ರಥದಲ್ಲಿದೆ. ವೀರನೇ! ಎಲ್ಲ ಯುದ್ಧಸಾಮಗ್ರಿಗಳಿಂದಲೂ ಸಂಪನ್ನವಾಗಿರುವ ಈ ರಥದಲ್ಲಿ ಕುಳಿತು ನನ್ನ ಸಾರಥ್ಯದಲ್ಲಿ ಮಹೇಂದ್ರನು ದಾನವರನ್ನು ಸಂಹರಿಸಿದಂತೆ ನೀನು ರಾವಣ ನನ್ನು ಸಂಹರಿಸು."

ಮಾತಲಿಯು ಹೀಗೆ ಹೇಳಲು ಶ್ರೀರಾಮನು ಇಂದ್ರನ ರಥಕ್ಕೆ ಪ್ರದಕ್ಷಿಣೆಮಾಡಿ ಅಭಿವಾದನಪೂರ್ವಕವಾಗಿ ನಮಸ್ಕರಿಸಿ ತನ್ನ ದೇಹಕಾಂತಿ ಯಿಂದ ಸಮಸ್ತಲೋಕಗಳನ್ನೂ ಬೆಳಗುತ್ತಾ ಇಂದ್ರನ ರಥದಲ್ಲಿ ಕುಳಿತನು.



ಅನಂತರ ಮಹಾಬಾಹುವಾದ ಶ್ರೀರಾಮನಿಗೂ ರಾವಣರಾಕ್ಷಸನಿಗೂ ಅದ್ಭುತವಾದ ದ್ವೈರಥಯುದ್ಧವು ಪ್ರಾರಂಭವಾಯಿತು. ಪರಮಶ್ರೇಷ್ಠವಾದ ಅಸ್ತ್ರಗಳನ್ನೂ ತಿಳಿದಿದ್ದ ಶ್ರೀರಾಮನು ರಾವಣನು ಬಿಡುತ್ತಿದ್ದ ಗಾಂಧರ್ವಾಸ್ತ್ರವನ್ನು ಗಾಂಧರ್ವಾಸ್ತ್ರದಿಂದಲೂ–ದೈವಾಸ್ತ್ರವನ್ನು ದೈವಾಸ್ತ್ರದಿಂದಲೂ ನಿರಸನಗೊಳಿಸುತ್ತಿದ್ದನು. ಅನಂತರ ರಾಕ್ಷಸರಾಜನು ಅತಿಕ್ರುದ್ಧನಾಗಿ ಪುನಃ ಅತ್ಯಂತಭಯಂಕರವಾದ ರಾಕ್ಷಸಾಸ್ತ್ರವನ್ನು ಪ್ರಯೋಗಿಸಿದನು. ರಾವಣನ ಧನುಸ್ಸಿನಿಂದ ಹೊರಬಂದ ಸುವರ್ಣಮಂಡಿತವಾದ ಬಾಣಗಳು

ಮಹಾವಿಷದಿಂದ ಕೂಡಿದ ಸರ್ಪಗಳಾಗಿ ಪರಿವರ್ತನೆಹೊಂದಿ ರಾಮನನ್ನು ಸುತ್ತಿಕೊಂಡುವು. ಮುಖಗಳು ಬೆಂಕಿಯಂತೆ ಪ್ರಜ್ವಲಿಸುತ್ತಿದ್ದು ಬಾಯಿ ಗಳಿಂದ ಜ್ವಾಲೆಗಳನ್ನು ಉಗುಳುತ್ತಾ ಭಯಂಕರವಾಗಿದ್ದ ಆ ಸರ್ಪಗಳು ಶ್ರೀರಾಮನನ್ನು ಸುತ್ತುವರಿದುವು. ಅವುಗಳ ಸ್ಪರ್ಶವು ವಾಸುಕಿಯ ಸ್ಪರ್ಶ ದಂತೆ ಸಹಿಸಲು ಅಸಾಧ್ಯವಾಗಿದ್ದಿತು. ಪ್ರದೀಪ್ತವಾಗಿದ್ದ ಹೆಡೆಗಳಿಂದಲೂ ಮಹಾವಿಷಗಳಿಂದಲೂ ಕೂಡಿದ್ದ ಆ ಸರ್ಪಗಳಿಂದ ಸಮಸ್ತವಾದ ದಿಕ್ಕುಗಳೂ ಮತ್ತು ಉಪದಿಕ್ಕುಗಳೂ ಮುಚ್ಚಿಹೋದುವು.

ಘೋರವಾದ ಆ ವಿಷಸರ್ಪಗಳು ತನ್ನ ಮೇಲೆ ಬೀಳುತ್ತಿರುವುದನ್ನು ಕಂಡು ಶ್ರೀರಾಮನು ಘೋರವಾದ ಮತ್ತು ಭಯಂಕರವಾದ ಗಾರುಡಾಸ್ತ್ರ ವನ್ನು ಪ್ರಕಟಿಸಿದನು. ರಾಘವನ ಧನುಸ್ಸಿನಿಂದ ಹೊರಬಂದ, ಸುವರ್ಣ ಮಯವಾದ ರೆಕ್ಕೆಗಳನ್ನು ಹೊಂದಿದ್ದ, ಅಗ್ನಿಯ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಕಂಗೊಳಿಸುತ್ತಿದ್ದ ಬಾಣಗಳು ಸರ್ಪಗಳಿಗೆ ಶತ್ರುವಾದ ಸುವರ್ಣಮಯವಾದ ಗರುಡಪಕ್ಷಿಗಳಾಗಿ ಎಲ್ಲೆಡೆಗಳಲ್ಲಿಯೂ ಹಾರಾಡ ತೊಡಗಿದುವು. ಇಚ್ಛಾನುಸಾರವಾಗಿ ರೂಪಗಳನ್ನು ತಾಳುವ ಗರುಡಪಕ್ಷಿಗಳ ರೂಪಗಳಲ್ಲಿದ್ದ ಶ್ರೀರಾಮನ ಬಾಣಗಳು ಸರ್ಪಾಕಾರಗಳಲ್ಲಿದ್ದ ರಾವಣನ ಸಮಸ್ತಬಾಣಗಳನ್ನೂ ಧ್ವಂಸಮಾಡಿಬಿಟ್ಟುವು.

ತಾನು ಬಿಟ್ಟ ರಾಕ್ಷಸಾಸ್ತ್ರವು ಶ್ರೀರಾಮನು ಬಿಟ್ಟ ಗಾರುಡಾಸ್ತ್ರದಿಂದ ವಿನಾಶಹೊಂದಲಾಗಿ ಕ್ರುದ್ಧನಾದ ರಾವಣನು ಶ್ರೀರಾಮನ ಮೇಲೆ ಭಯಂಕರವಾದ ಬಾಣಗಳನ್ನು ಸುರಿಸಿದನು. ಅತಿಕಷ್ಟವಾದ ಕಾರ್ಯಗಳನ್ನು ಅನಾಯಾಸವಾಗಿ ಮಾಡುವ ಶ್ರೀರಾಮನನ್ನು ರಾವಣನು ಸಾವಿರಾರು ಬಾಣಗಳ ಸಮೂಹಗಳಿಂದ ಗಾಯಗೊಳಿಸಿ ಸಾರಥಿಯಾದ ಮಾತಲಿ ಯನ್ನೂ ಬಾಣಗಳ ಸಮೂಹಗಳಿಂದ ಪ್ರಹರಿಸಿದನು. ಅನಂತರ ರಾವಣನು ರಥದ ಮೇಲಿದ್ದ ಧ್ವಜಕ್ಕೆ ಗುರಿಯಿಟ್ಟು ಒಂದೇ ಬಾಣವನ್ನು ಪ್ರಯೋಗಿಸಿ ಅದನ್ನು ಕೆಳಕ್ಕೆ ಕೆಡವಿದನು. ರಥದ ಮೇಲ್ಭಾಗದಲ್ಲಿ ಸುವರ್ಣಮಯವಾಗಿದ್ದ ಆ ಧ್ವಜವನ್ನು ಬೀಳಿಸಿದನಂತರ ತನ್ನ ಶರಜಾಲಗಳಿಂದ ಇಂದ್ರನ ಕುದುರೆ ಗಳನ್ನೂ ಗಾಯಗೊಳಿಸಿದನು. ಹೀಗೆ ರಥಾಶ್ವ-ಧ್ವಜಗಳೊಡನೆ ರಾವಣನಿಂದ ರಾಮನು ಪೀಡಿಸಲ್ಪಡುತ್ತಿದ್ದುದನ್ನು ನೋಡಿ ದೇವ-ಗಂಧರ್ವ-ಚಾರಣ-

ದಾನವರೂ-ಸಿದ್ಧರೂ-ಮಹರ್ಷಿಗಳೂ ವಾನರದಳಪತಿಗಳೂ ವಿಭೀಷಣ ನೊಡನೆ ಬಹಳವಾಗಿ ವಿಷಾದಿಸಿದರು. ಚಂದ್ರಸದೃಶನಾದ ರಾಮಚಂದ್ರನನ್ನು ರಾಹುಸದೃಶನಾದ ರಾವಣನು ಆಕ್ರಮಿಸುತ್ತಿರುವುದನ್ನು ಕಂಡು ಬುಧಗ್ರಹವು ಪ್ರಜಾಪತಿದೇವತಾತ್ಮಕವಾದ, ಚಂದ್ರನಿಗೆ ಅತಿಪ್ರಿಯವಾದ ರೋಹಿಣೀ ನಕ್ಷತ್ರವನ್ನು ಆಕ್ರಮಿಸುತ್ತಾ ಪ್ರಜೆಗಳಿಗೆ ಅಹಿತವನ್ನುಂಟುಮಾಡಲು ಉಪ ಕ್ರಮಿಸಿತು. ಆ ಸಮಯದಲ್ಲಿ ಸಮುದ್ರವು ಪ್ರಜ್ವಲಿಸುತ್ತಿರುವಂತೆ ಕಾಣ ತೊಡಗಿತು. ಅದರ ಅಲೆಗಳು ಹೊಗೆಯಿಂದ ಸಮಾವೃತವಾಗಿದ್ದುವು. ಸಮುದ್ರನು ಕುಪಿತನಾಗಿ ಸೂರ್ಯನನ್ನೇ ಮುಟ್ಟಿಬಿಡುವನೋ ಎಂಬಂತೆ ಅಲೆಗಳ ರೂಪದಲ್ಲಿ ಮೇಲಕ್ಕೆ ಹಾರುತ್ತಿದ್ದನು. ಸೂರ್ಯನ ಕಿರಣಗಳ ಕಾಂತಿಯು ಕುಂದಿತು. ಅವನ ಬಣ್ಣವು ಶಸ್ತ್ರದ ಬಣ್ಣದಂತಿದ್ದಿತು. ಆ ಸಮಯದಲ್ಲವನು ಧೂಮಕೇತುವಿನಿಂದ ಕೂಡಿದ್ದು ಕಬಂಧದ (ಮುಂಡದ) ಚಿಹ್ನೆಯೊಡನೆ ಅತಿಕ್ರೂರನಾಗಿ ಕಾಣುತ್ತಿದ್ದನು. ಆಕಾಶದಲ್ಲಿ ಇಕ್ಷ್ವಾಕು ವಂಶೀಯರ ನಕ್ಷತ್ರವಾದ ಇಂದ್ರಾಗ್ನಿದೇವತಾತ್ಮಕವಾದ ವಿಶಾಖಾನಕ್ಷತ್ರ ವನ್ನು ಅಂಗಾರಕನು ಆಕ್ರಮಿಸಿಕೊಂಡಿದ್ದನು. ಆ ಸಮಯದಲ್ಲಿ ರಾವಣನು ಹತ್ತು ತಲೆಗಳನ್ನೂ ಇಪ್ಪತ್ತು ಕೈಗಳನ್ನೂ ಹೊಂದಿದವನಾಗಿ ಧನುಷ್ಪಾಣಿಯಾಗಿ ಮೈನಾಕಪರ್ವತದಂತೆಯೇ ಕಾಣಿಸಿಕೊಂಡನು. ದಶಗ್ರೀವನು ಬಾಣಗಳನ್ನು ಪುಂಖಾನುಪುಂಖವಾಗಿ ಎಡೆಬಿಡದೇ ಬಿಡುತ್ತಿದ್ದುದರಿಂದ ಶ್ರೀರಾಮನಿಗೆ ಯುದ್ಧದಲ್ಲಿ ಬಾಣಗಳ ಆದಾನ-ಸಂಧಾನ-ಪ್ರಯೋಗಗಳನ್ನು ಮಾಡಲು ಸಾಧ್ಯವೇ ಆಗಲಿಲ್ಲ.

ಮರುಕ್ಷಣದಲ್ಲಿಯೇ ಶ್ರೀರಾಮನ ಹುಬ್ಬುಗಳು ಗಂಟಿಕ್ಕಿದುವು. ಕಣ್ಣು ಗಳು ಕೆಂಪಾಗತೊಡಗಿದುವು. ಎಲ್ಲ ರಾಕ್ಷಸರನ್ನೂ ಸುಟ್ಟುಬಿಡುವನೋ ಎಂಬಂತಹ ಕೋಪವು ಶ್ರೀರಾಮನನ್ನು ಆವರಿಸಿತು. ಅಷ್ಟು ಕ್ರುದ್ಧನಾಗಿದ್ದ ಧೀಮಂತನಾದ ಶ್ರೀರಾಮನ ಮುಖವನ್ನು ನೋಡಿ ಸಮಸ್ತಪ್ರಾಣಿಗಳು ಭಯಗೊಂಡುವು. ಭೂಮಿಯೂ ನಡುಗಿತು. ಸಿಂಹ-ಹುಲಿಗಳಿಂದ ಕೂಡಿದ್ದ ಪರ್ವತವು ಅಳ್ಳಾಡತೊಡಗಿತು. ವೃಕ್ಷಗಳೆಲ್ಲವೂ ಕಂಪಿಸತೊಡ ಗಿದುವು. ಸರಿತ್ಪತಿಯಾದ ಸಮುದ್ರವು ಉಕ್ಕಿ ಹರಿಯತೊಡಗಿತು. ಆಕಾಶದ ಎಲ್ಲ ಕಡೆಗಳಲ್ಲಿಯೂ ಉತ್ಪಾತಸೂಚಕವಾದ ಕತ್ತೆಗಳ ಆಕಾರದ ಮತ್ತು

ಕತ್ತೆಗಳಂತೆಯೇ ಕಿರುಚುತ್ತಿದ್ದ ಮೇಘಗಳು ಸರ್ವತ್ರ ಚಲಿಸತೊಡಗಿದುವು. ಶ್ರೀರಾಮನು ಕ್ರುದ್ಧನಾದುದನ್ನೂ ಅದರ ಪರಿಣಾಮವಾಗಿ ದಾರುಣವಾದ ಉತ್ಪಾತಗಳು ಕಾಣಿಸಿಕೊಂಡುದನ್ನೂ ನೋಡಿದ ಸಮಸ್ತಪ್ರಾಣಿಗಳೂ ಭಯದಿಂದ ನಡುಗತೊಡಗಿದುವು. ಆಗಿನ ವಾತಾವರಣವನ್ನು ನೋಡಿ ರಾವಣನಿಗೂ ಭಯವಾಯಿತು.

ಆ ಸಮಯದಲ್ಲಿ ವಿಮಾನಗಳ ಮೇಲೆ ಕುಳಿತಿದ್ದ ದೇವ-ಗಂಧ ರ್ವರೂ, ಮಹಾ-ಮಹಾಸರ್ಪಗಳೂ, ಋಷಿಗಳೂ, ದೈತ್ಯ-ದಾನವರೂ, ಗರುತ್ಮಂತರೂ-ಸಮಸ್ತಲೋಕಗಳ ಪ್ರಲಯವೇ ಆಗಿಬಿಡುವುದೋ ಎಂಬಂತೆ ಕಾಣುತ್ತಿದ್ದ, ಭಯಂಕರವಾದ ನಾನಾವಿಧವಾದ ಆಯುಧಗಳಿಂದ ಪರಸ್ಪರವಾಗಿ ಸೆಣೆಸಾಡುತ್ತಿದ್ದ, ಶೂರರಾದ ರಾಮ-ರಾವಣರ ಅತ್ಯದ್ಭುತ ವಾದ ಯುದ್ಧವನ್ನು ನೋಡುತ್ತಿದ್ದರು.

ಆ ಮಹಾಯುದ್ಧವನ್ನು ನೋಡಲು ಬಂದಿದ್ದ ಅಸುರರೂ ಮತ್ತು ಸುರರೂ ಭಕ್ತಿಭಾವದಿಂದ ಹರ್ಷಪೂರ್ವಕವಾಗಿ ಹೀಗೆ ಹೇಳುತ್ತಿದ್ದರು :

ದಶಗ್ರೀವಂ ಜಯೇತ್ಯಾಹುರಸುರಾಃ ಸಮುಪಸ್ಥಿತಾಃ ।
ದೇವಾ ರಾಮಮಥೋಚುಸ್ತೇ ತ್ವಂ ಜಯೇತಿ ಪುನಃ ಪುನಃ ॥೪೬॥

ಅಲ್ಲಿ ನಿಂತಿದ್ದ ಅಸುರರು-'ರಾವಣನಿಗೆ ಜಯವಾಗಲಿ'–ಎಂದು ಹೇಳುತ್ತಿದ್ದರು. ಅಂತೆಯೇ ಅಲ್ಲಿ ಉಪಸ್ಥಿತರಾಗಿದ್ದ ದೇವತೆಗಳು–'ರಘು ನಂದನ! ನಿನಗೆ ಜಯವಾಗಲಿ'–ಎಂದು ಪುನಃ ಪುನಃ ಹೇಳುತ್ತಿದ್ದರು.

ಆ ಸಮಯದಲ್ಲಿ ಪರಮಕ್ರುದ್ಧನಾದ ದುಷ್ಟಾತ್ಮನಾದ ರಾವಣನು ಶ್ರೀರಾಮನನ್ನು ಪ್ರಹರಿಸುವ ಆಶಯದಿಂದ ದೊಡ್ಡದಾದೊಂದು ಶೂಲಾ ಯುಧವನ್ನೆತ್ತಿಕೊಂಡನು. ಅದು ವಜ್ರಮಯವಾಗಿದ್ದಿತು. ಭಯಂಕರವಾಗಿ ಶಬ್ದಮಾಡುತ್ತಿದ್ದಿತು. ಸಮಸ್ತಶತ್ರುಗಳನ್ನೂ ಸಂಹರಿಸುವ ಸಾಮರ್ಥ್ಯವನ್ನು ಹೊಂದಿದ್ದಿತು. ಪರ್ವತದ ಶಿಖರಕ್ಕೆ ಸಮಾನವಾದ ಅಗ್ರಭಾಗಗಳಿಂದ ಕೂಡಿದ್ದಿತು. ಮನಸ್ಸಿಗೂ ಮತ್ತು ಕಣ್ಣುಗಳಿಗೂ ಭಯವನ್ನುಂಟು ಮಾಡುತ್ತಿದ್ದಿತು. ಆ ಶೂಲಾಯುಧವನ್ನು ಕಣ್ಣುಗಳಿಂದ ನೋಡಲು ಕೂಡಾ ಸಾಧ್ಯವಾಗುತ್ತಿರಲಿಲ್ಲ. ತೀಕ್ಷ್ಣವಾದ ಅಗ್ರಭಾಗವನ್ನು ಹೊಂದಿ

ದ್ದಿತು. ಹೊಗೆಯಿಂದ ಕೂಡಿದ ಪ್ರಲಯಕಾಲದ ಅಗ್ನಿಯ ರಾಶಿಯಂತೆಯೇ ಕಾಣುತ್ತಿದ್ದಿತು. ಅತಿಘೋರವಾಗಿದ್ದು ಅದರ ಸಮೀಪಕ್ಕೂ ಯಾರಿಂದಲೂ ಹೋಗಲು ಸಾಧ್ಯವಾಗುತ್ತಿರಲಿಲ್ಲ. ಮಹಾಕಾಲನಿಗೂ ಅದರ ಬಳಿಗೆ ಸುಳಿಯ ಲಾಗುತ್ತಿರಲಿಲ್ಲ. ಅದು ಸಮಸ್ತಪ್ರಾಣಿಗಳನ್ನೂ ಭಯಪಡಿಸುವ ಮತ್ತು ಭೇದನಮಾಡುವ ಸಾಮರ್ಥ್ಯವನ್ನು ಹೊಂದಿದ್ದಿತು. ರೋಷದಿಂದ ಪ್ರಜ್ವಲಿ ಸುತ್ತಿದ್ದ ರಾವಣನು ಅಂತಹ ಮಹಾಭಯಂಕರವಾದ ಶೂಲವನ್ನು ಕೈಗೆತ್ತಿ ಕೊಂಡನು. ಶೂರರಾದ ರಾಕ್ಷಸಸೈನಿಕರಿಂದ ಪರಿವೃತನಾಗಿದ್ದ, ವೀರ್ಯ ವಂತನಾದ, ಮಹಾಕಾಯನಾದ ರಾವಣರಾಕ್ಷಸನು ಯುದ್ಧದಲ್ಲಿ ಪರಮ ಕ್ರುದ್ಧನಾಗಿ ಶೂಲಾಯುಧವನ್ನು ಮೇಲೆತ್ತಿ ಸೈನಿಕರನ್ನು ಹರ್ಷಗೊಳಿಸುತ್ತಾ ಭಯಂಕರವಾಗಿ ಗರ್ಜಿಸಿದನು. ರಾಕ್ಷಸೇಂದ್ರನ ದಾರುಣವಾದ ಆ ಗರ್ಜನೆಯು ಭೂಮ್ಯಾಕಾಶಗಳನ್ನೂ, ದಿಕ್ಕುಗಳನ್ನೂ, ಉಪದಿಕ್ಕುಗಳನ್ನೂ ನಡುಗಿಸಿಬಿಟ್ಟಿತು. ಮಹಾಕಾಯನಾದ ಮತ್ತು ದುರಾತ್ಮನಾದ ರಾವಣನ ಭಯಂಕರವಾದ ಆ ಘೋರಧ್ವನಿಯಿಂದ ಸಮಸ್ತಪ್ರಾಣಿಗಳೂ ಭಯ ಗೊಂಡುವು. ಸಮುದ್ರವೂ ಅಲ್ಲೋಲ-ಕಲ್ಲೋಲವಾಯಿತು. ಮಹಾಶೂಲ ವನ್ನು ಮೇಲೆತ್ತಿ ನಿಂತಿದ್ದ ರಾವಣನು ಪುನಃ ಭಯಂಕರವಾಗಿ ಗರ್ಜಿಸುತ್ತಾ ಕಠೋರವಾದ ಮಾತುಗಳನ್ನು ಶ್ರೀರಾಮನಿಗೆ ಹೇಳಿದನು :

ಶೂಲೋಽಯಂ ವಜ್ರಸಾರಸ್ತೇ ರಾಮ ರೋಷಾನ್ಮಯೋದ್ಯತಃ ।
ತವ ಭ್ರಾತೃಸಹಾಯಸ್ಯ ಸದ್ಯಃ ಪ್ರಾಣಾನ್ಹರಿಷ್ಯತಿ ॥೫೬॥

"ರಾಮ! ಕ್ರುದ್ಧನಾಗಿ ನಾನೆತ್ತಿಹಿಡಿದಿರುವ ಈ ಶೂಲಾಯುಧವು ವಜ್ರಾಯುಧಕ್ಕೆ ಸಮಾನವಾದ ಸತ್ತ್ವವುಳ್ಳದ್ದು. ತಮ್ಮನ ಸಹಾಯವನ್ನು ಪಡೆದು ಯುದ್ಧಮಾಡುತ್ತಿರುವ ನಿನ್ನ ಪ್ರಾಣಗಳನ್ನು ಈ ಕ್ಷಣದಲ್ಲಿಯೇ ಇದು ಅಪಹರಿಸಿಬಿಡುತ್ತದೆ.

ರಕ್ಷಸಾಮದ್ಯ ಶೂರಾಣಾಂ ನಿಹತಾನಾಂ ಚಮೂಮುಖೇ ।
ತ್ವಾಂ ನಿಹತ್ಯ ರಣಶ್ಲಾಘಿನ್ಕರೋಮಿ ತರಸಾ ಸಮಮ್ ॥೫೭॥

ಯುದ್ಧಾಭಿಮಾನಿಯೇ! ರಾಘವ! ಈ ಶೂಲಾಯುಧದಿಂದ ನಿನ್ನನ್ನು ಈಗಲೇ ಸಂಹರಿಸಿ ಈ ರಣರಂಗದಲ್ಲಿ ನೀನು ಸಂಹರಿಸಿರುವ ಶೂರರಾದ

ರಾಕ್ಷಸರಿಗೆ ಸಮವಾಗಿ ನಿನ್ನನ್ನೂ ಮಾಡಿಬಿಡುತ್ತೇನೆ. ನೀನು ಅವರನ್ನು ಪರಲೋಕಕ್ಕೆ ಕಳುಹಿಸಿದಂತೆಯೇ ನಾನು ನಿನ್ನನ್ನೂ ಪರಲೋಕಕ್ಕೆ ಕಳುಹಿಸು ತ್ತೇನೆ.

ತಿಷ್ಠೇದಾನೀಂ ನಿಹನ್ಮಿ ತ್ವಾಮೇಷ ಶೂಲೇನ ರಾಘವ ।

ರಾಘವ! ನಿಲ್ಲು! ಈಗಲೇ ನಿನ್ನನ್ನು ಈ ಶೂಲದಿಂದ ಸಂಹರಿಸಿ ಬಿಡುತ್ತೇನೆ."

ಎಂದೆನ್ನುತ್ತಾ ರಾವಣನು ಆ ಮಹಾಶೂಲವನ್ನು ಶ್ರೀರಾಮನ ಮೇಲೆಸೆ ದನು. ರಾವಣನಿಂದ ಬಿಡಲ್ಪಟ್ಟ, ಮಿಂಚಿನ ಮಾಲೆಯಿಂದ ಸಮಾವೃತ ವಾಗಿದ್ದ, ಎಂಟು ಗಂಟೆಗಳಿಂದ ಕೂಡಿದ್ದ, ಮಹಾನಾದವುಳ್ಳ ಆ ಶೂಲವು ಆಕಾಶದ ಮಧ್ಯಭಾಗದಲ್ಲಿ ಶೋಭಾಯಮಾನವಾಗಿ ಕಾಣುತ್ತಿದ್ದಿತು.

ಭಯಂಕರವಾಗಿ ಕಾಣುತ್ತಿದ್ದ ಜಾಜ್ವಲ್ಯಮಾನವಾಗಿದ್ದ ಆ ಮಹಾ ಶೂಲವು ತನ್ನೆದುರಾಗಿ ಬರುತ್ತಿರುವುದನ್ನು ಕಂಡು ಶ್ರೀರಾಮನು ಧನು ಸ್ಸನ್ನೆಳೆದು ಆ ಶೂಲದ ಮೇಲೆ ಬಾಣಗಳ ಮಳೆಗರೆದನು. ಆಕಾಶದ ಕಡೆಗೆ ಬರುತ್ತಿರುವ ಪ್ರಲಯಾಗ್ನಿಯನ್ನು ಇಂದ್ರನು ಜಲಪ್ರವಾಹಗಳಿಂದ ಶಮನ ಗೊಳಿಸುವಂತೆ–ತನ್ನ ಮೇಲೆ ಬೀಳಲಿದ್ದ ಮಹಾಶೂಲವನ್ನು ಬಾಣಗಳ ಸಮೂಹಗಳಿಂದ ಶಮನಗೊಳಿಸಲು ಪ್ರಯತ್ನಿಸಿದನು. ಆದರೆ ಶ್ರೀರಾಮನು ಬಿಟ್ಟ ಎಲ್ಲ ಬಾಣಗಳನ್ನೂ ರಾವಣಪ್ರಮುಕ್ತವಾದ ಆ ಮಹಾಶೂಲವು ಅಗ್ನಿಯು ಪತಂಗದ ಹುಳುಗಳನ್ನು ಸುಟ್ಟುಬಿಡುವಂತೆ ಸುಟ್ಟುಹಾಕಿತು. ತಾನು ಬಿಟ್ಟ ಬಾಣಗಳು ಅಂತರಿಕ್ಷದಲ್ಲಿ ಮಹಾಶೂಲವನ್ನು ಸ್ಪರ್ಶಿಸು ತ್ತಿದ್ದಂತೆಯೇ ಭಸ್ಮವಾಗುತ್ತಿರುವುದನ್ನು ಕಂಡು ಶ್ರೀರಾಮನು ಬಹಳವಾಗಿ ಕೋಪಗೊಂಡನು. ಕ್ರುದ್ಧನಾದ ಶ್ರೀರಾಮನು ಇಂದ್ರನ ರಥದಲ್ಲಿ ಮಾತ ಲಿಯು ತಂದಿದ್ದ ಇಂದ್ರನಿಂದ ಸಮ್ಮಾನಿತವಾಗಿದ್ದ ಶಕ್ತ್ಯಾಯುಧವನ್ನು ಕೈಗೆತ್ತಿಕೊಂಡನು. ಶ್ರೀರಾಮನು ಆ ಶಕ್ತ್ಯಾಯುಧವನ್ನೆಸೆಯಲು ಹಿಂದಕ್ಕೂ ಮುಂದಕ್ಕೂ ಓಲಾಡಿಸುತ್ತಿದ್ದಾಗ ಪ್ರಲಯಕಾಲದಲ್ಲಿ ಪ್ರಜ್ವಲಿಸುವ ಉಲ್ಕೆಯಂತೆಯೇ ಅದು ಕಾಣಿಸುತ್ತಿದ್ದಿತು. ಅದು ಸಮಗ್ರವಾದ ಆಕಾಶವನ್ನೂ ತನ್ನ ಪ್ರಭೆಯಿಂದ ಬೆಳಗುತ್ತಿದ್ದಿತು. ಅದರಲ್ಲಿದ್ದ ಗಂಟೆಗಳು

ಶಬ್ದಮಾಡುತ್ತಿದ್ದುವು. ಶ್ರೀರಾಮನಿಂದ ವೇಗವಾಗಿ ಎಸೆಯಲ್ಪಟ್ಟ ಆ ಮಹಾಶಕ್ತ್ಯಾಯುಧವು ರಾವಣನ ಶೂಲವನ್ನಪ್ಪಳಿಸಿತು. ಕ್ಷಣಮಾತ್ರ ದಲ್ಲಿಯೇ ಆ ಶೂಲವು ಛಿನ್ನ-ಭಿನ್ನವಾಗಿ ತನ್ನ ತೇಜಸ್ಸನ್ನು ಕಳೆದುಕೊಂಡು ಕೆಳಕ್ಕೆ ಬಿದ್ದಿತು.

ಅನಂತರ ಶ್ರೀರಾಮನು ತೀಕ್ಷ್ಣವಾಗಿಯೂ, ಮಹಾವೇಗಯುಕ್ತ ವಾಗಿಯೂ, ವಜ್ರಾಯುಧಸದೃಶವಾಗಿಯೂ ಇದ್ದ ನೇರವಾಗಿ ಹೋಗುವ ಬಾಣಗಳಿಂದ ರಾವಣನ ಮಹಾವೇಗಶಾಲಿಗಳಾಗಿದ್ದ ಕುದುರೆಗಳನ್ನು ಗಾಯ ಗೊಳಿಸಿದನು. ಬಳಿಕ ರಾಘವನು ಮೂರು ಬಾಣಗಳಿಂದ ರಾವಣನ ವಕ್ಷಃ ಸ್ಥಳವನ್ನೂ ಮತ್ತು ರೆಕ್ಕೆಗಳಿಂದ ಕೂಡಿರುವ ಮೂರು ಬಾಣಗಳಿಂದ ಅವನ ಹಣೆಯನ್ನೂ ಪ್ರಯತ್ನಪೂರ್ವಕವಾಗಿ ಪ್ರಹರಿಸಿದನು.

ಹೀಗೆ ರಾಕ್ಷಸಸೈನ್ಯಗಳ ಸಮೂಹದಲ್ಲಿದ್ದ ರಾಕ್ಷಸೇಂದ್ರನಾದ ರಾವಣನು ಶ್ರೀರಾಮನ ಬಾಣಗಳಿಂದ ಅಂಗಾಂಗಗಳಲ್ಲಿಯೂ ಗಾಯಗೊಳಿ ಸಲ್ಪಟ್ಟವನಾಗಿ ಹೂವರಳಿದ ಅಶೋಕವೃಕ್ಷದಂತೆಯೇ ಕಾಣುತ್ತಿದ್ದನು.

ರಣಭೂಮಿಯಲ್ಲಿ ಶ್ರೀರಾಮನ ಬಾಣಗಳಿಂದ ಬಹಳ ಆಳದವರೆಗೂ ಗಾಯಗೊಳಿಸಲ್ಪಟ್ಟ ಶರೀರವುಳ್ಳವನಾಗಿದ್ದ ರಾವಣನು ರಕ್ತದಿಂದ ತೋಯ್ದು ಬಹಳವಾಗಿ ದುಃಖಿಸಿದನು. ಮರುಕ್ಷಣದಲ್ಲಿಯೇ ದಾರುಣವಾದ ಕೋಪವು ರಾವಣನನ್ನು ಆವರಿಸಿತು. ಅವನು ಪರಮಕ್ರುದ್ಧನಾದನು.

೧೦೨ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೧೦೩ನೆಯ ಸರ್ಗ

ಶ್ರೀರಾಮನಿಂದ ರಾವಣನ ನಿಂದೆ : ಗಾಯಗೊಂಡಿದ್ದ ರಾವಣನನ್ನು ಸಾರಥಿಯು ರಣರಂಗದಿಂದ ಹೊರಕ್ಕೆ ಒಯ್ದುದು

ಸ ತೇನ ತು ತಥಾ ಕ್ರೋಧಾತ್ಕಾಕುತ್ಸ್ಥೇನಾರ್ದಿತೋ ಭೃಶಮ್ ।
ರಾವಣಃ ಸಮರಶ್ಲಾಘೀ ಮಹಾಕ್ರೋಧಮುಪಾಗಮತ್ ॥೧॥

ಕ್ರೋಧಾಭಿಭೂತನಾಗಿದ್ದ, ಶ್ರೀರಾಮನಿಂದ ಬಹಳವಾಗಿ ಪೀಡಿಸಲ್ಪಟ್ಟ ಯುದ್ಧವನ್ನು ಶ್ಲಾಘಿಸುವ ರಾವಣನು ಅತ್ಯಂತಕ್ರುದ್ಧನಾದನು.

ಅವನ ಕಣ್ಣುಗಳು ಅಗ್ನಿಯಂತೆ ಪ್ರಜ್ವಲಿಸತೊಡಗಿದುವು. ವೀರ್ಯವಂತನಾದ ರಾವಣನು ಕೋಪದಿಂದ ಧನುಸ್ಸನ್ನೆತ್ತಿ ಶ್ರೀರಾಮನನ್ನು ಬಾಣಗಳಿಂದ ಬಹಳವಾಗಿ ಪೀಡಿಸತೊಡಗಿದನು. ಮೇಘವು ಆಕಾಶದಿಂದ ಮಳೆಗರೆದು ಭೂಮಿಯ ಮೇಲಿರುವ ಕೆರೆ-ಕಟ್ಟೆಗಳನ್ನು ತುಂಬುವಂತೆ– ರಾವಣನು ಬಾಣರೂಪವಾದ ಸಾವಿರಾರು ಜಲಧಾರೆಗಳಿಂದ ಶ್ರೀರಾಮನನ್ನು ತುಂಬಿಬಿಟ್ಟನು. ರಾವಣನು ಬಿಟ್ಟ ಬಾಣಗಳ ಸಮೂಹಗಳಿಂದ ವ್ಯಾಪ್ತ ನಾಗಿದ್ದ ಶ್ರೀರಾಮನು ಸ್ವಲ್ಪವಾದರೂ ವಿಚಲಿತನಾಗಲಿಲ್ಲ. ಮಹಾಪರ್ವತ ದಂತೆ ಅಚಲನಾಗಿ ನಿಂತಿದ್ದನು. ರಣರಂಗದಲ್ಲಿ ಶ್ರೀರಾಮನು ತನ್ನ ಬಾಣಗಳ ಸಮೂಹಗಳಿಂದ ಶತ್ರುವಿನ ಬಾಣಗಳನ್ನು ನಿವಾರಣೆ ಮಾಡಿಕೊಳ್ಳುತ್ತಿದ್ದನು. ಸೂರ್ಯನ ಕಿರಣಗಳನ್ನು ಪ್ರತಿಗ್ರಹಿಸುವಂತೆ ಶ್ರೀರಾಮನು ಕಿರಣಗಳ ರೂಪವಾದ ಶತ್ರುವಿನ ಬಾಣಗಳನ್ನು ಸಹಿಸುತ್ತಿದ್ದನು. ಬಳಿಕ ಅತಿಶೀಘ್ರವಾಗಿ ಬಾಣಗಳನ್ನು ಬಿಡುವ ಕೈಚಳಕದಿಂದ ಕೂಡಿದ್ದ ರಾವಣನು ಮಹಾತ್ಮನಾದ ಶ್ರೀರಾಮನ ವಕ್ಷಃಸ್ಥಳವನ್ನು ಸಾವಿರಾರು ಬಾಣಗಳಿಂದ ಪ್ರಹರಿಸಿದನು. ಆದರಿಂದುಟಾದ ಗಾಯಗಳಿಂದ ಹೊರಬಂದ ರಕ್ತದಿಂದ ತೋಯ್ದು ಹೋಗಿದ್ದ ಶ್ರೀರಾಮನು ಅರಣ್ಯದಲ್ಲಿ ಹೂವುಗಳಿಂದ ತುಂಬಿರುವ ದೊಡ್ಡ ಮುತ್ತುಗದ ಮರದಂತೆ ಕಾಣುತ್ತಿದ್ದನು. ಬಾಣಗಳ ಗಾಯಗಳಿಂದ ಅತ್ಯಂತ ಕುಪಿತನಾದ ಶ್ರೀರಾಮನು ಪ್ರಲಯಕಾಲದ ಸೂರ್ಯನ ತೇಜಸ್ಸಿಗೆ ಸಮಾನ ವಾದ ತೇಜಸ್ಸಿನಿಂದ ಬೆಳಗುತ್ತಿದ್ದ ಬಾಣಗಳನ್ನು ಬತ್ತಳಿಕೆಯಿಂದ ಹೊರತೆಗೆದನು. ಅನಂತರ ರಾಮ-ರಾವಣರಿಬ್ಬರೂ ರೋಷಾವೇಶಪೂರಿತರಾಗಿ ಯುದ್ಧಮಾಡತೊಡಗಿದರು. ಬಾಣಗಳಿಂದುಂಟಾದ ಕತ್ತಲಿನಿಂದ ವ್ಯಾಪ್ತ ವಾಗಿದ್ದ ಆ ಸಮರಭೂಮಿಯಲ್ಲಿ ಯುದ್ಧಮಾಡುತ್ತಿದ್ದ ರಾಮ-ರಾವಣರಲ್ಲಿ ಯಾರೊಬ್ಬರೂ ಕಾಣುತ್ತಲೇ ಇರಲಿಲ್ಲ. ಆ ಸಮಯದಲ್ಲಿ ಕ್ರೋಧಾಭಿಭೂತನಾಗಿದ್ದ ದಾಶರಥಿಯು ಗಹ-ಗಹಸಿ ನಗುತ್ತಾ ಕಠೋರವಾಗಿದ್ದ ಈ ಮಾತುಗಳನ್ನು ಹೇಳಿದನು :

ಮಮ ಭಾರ್ಯಾ ಜನಸ್ಥಾನಾದಜ್ಞಾನಾದ್ರಾಕ್ಷಸಾಧಮ ।
ಹೃತಾ ತೇ ವಿವಶಾ ಯಸ್ಮಾತ್ತಸ್ಮಾತ್ತ್ವಂನಾಸಿ ವೀರ್ಯವಾನ್ ॥

"ರಾಕ್ಷಸಾಧಮನೇ! ನೀನು ಜನಸ್ಥಾನದಲ್ಲಿದ್ದ ನನ್ನ ಭಾರ್ಯೆಯನ್ನು

ರಕ್ಷಕರಾರೂ ಇಲ್ಲದಿದ್ದಾಗ ಅಜ್ಞಾನದಿಂದ ಅಪಹರಿಸಿದೆ. ಈ ಕಾರಣದಿಂದಲೇ ನೀನು ಬಲಿಷ್ಠನೂ ಅಲ್ಲ ; ಪರಾಕ್ರಮಿಯೂ ಅಲ್ಲ.

ಮಯಾ ವಿರಹಿತಾಂ ದೀನಾಂ ವರ್ತಮಾನಾಂ ಮಹಾವನೇ ।
ವೈದೇಹೀಂ ಪ್ರಸಭಂ ಹೃತ್ವಾ ಶೂರೋಽಹಮಿತಿ ಮನ್ಯಸೇ ॥೧೨॥

ಮಹಾರಣ್ಯದಲ್ಲಿ ದೈನ್ಯಾವಸ್ಥೆಯಲ್ಲಿದ್ದ ವೈದೇಹಿಯನ್ನು ನಾನಿಲ್ಲದಾಗ ಬಲಾತ್ಕಾರವಾಗಿ ಅಪಹರಿಸಿ ತಂದಿರುವ ನೀನು–ನಾನೇ ಮಹಾಶೂರ ನೆಂದು–ಭಾವಿಸಿಕೊಂಡಿರುವೆ.

ಸ್ತ್ರೀಷು ಶೂರ ವಿನಾಥಾಸು ಪರದಾರಾಭಿಮರ್ಶಕ ।
ಕೃತ್ವಾ ಕಾಪುರುಷಂ ಕರ್ಮ ಶೂರೋಽಹಮಿತಿ ಮನ್ಯಸೇ ॥೧೩॥

ಪರಸ್ತ್ರೀಯರನ್ನು ನಾಚಿಕೆಯಿಲ್ಲದೇ ಮುಟ್ಟಲು ಹೋಗುವವನೇ! ವೀರನೇ! ಅನಾಥೆಯರಾದ ಸ್ತ್ರೀಯರ ವಿಷಯದಲ್ಲಿ ಹೇಡಿಗಳಾದವರು ಎಸಗುವ ಅತಿಕುತ್ಸಿತವಾದ ಕಾರ್ಯವನ್ನು ಮಾಡಿಯೂ ನೀನು–ನಾನೇ ಮಹಾಶೂರನೆಂದು–ಭಾವಿಸಿಕೊಂಡಿರುವೆ.

ಭಿನ್ನಮರ್ಯಾದ ನಿರ್ಲಜ್ಜ ಚಾರಿತ್ರೇಷ್ವನವಸ್ಥಿತ ।
ದರ್ಪಾನ್ಮೃತ್ಯುಮುಪಾದಾಯ ಶೂರೋಽಹಮಿತಿ ಮನ್ಯಸೇ ॥೧೪॥

ಮರ್ಯಾದೆಗೆಟ್ಟವನೇ! ಲಜ್ಜೆಗೆಟ್ಟವನೇ! ಸದಾಚಾರಶೂನ್ಯನೇ! ರಾಕ್ಷಸಾಧಮನೇ! ದರ್ಪದ ಕಾರಣದಿಂದ ನೀನು ಮೃತ್ಯುರೂಪಳಾದ ವೈದೇಹಿಯನ್ನು ಅಪಹರಿಸಿ ತಂದಿರುವೆ. ಆದರೂ ನೀನು–ನಾನೇ ಮಹಾ ಶೂರನೆಂದು–ಭಾವಿಸಿಕೊಂಡಿರುವೆ.

ಶೂರೇಣ ಧನದಭ್ರಾತ್ರಾ ಬಲೈಃ ಸಮುದಿತೇನ ಚ ।
ಶ್ಲಾಘನೀಯಂ ಮಹತ್ಕರ್ಮ ಯಶಸ್ಯಂ ಚ ಕೃತಂ ತ್ವಯಾ ॥೧೫॥

ನೀನು ಮಹಾಶೂರನು ; ಬಲಸಂಪನ್ನನು ; ಮೇಲಾಗಿ ಕುಬೇರನ ತಮ್ಮನು. ಶ್ಲಾಘನೀಯವಾದ, ಯಶಸ್ಕರವಾದ ಮಹಾಕಾರ್ಯವನ್ನೇ ಮಾಡಿರುವೆ ; ಭಲೇ ರಾಕ್ಷಸ!

ಉತ್ಸೇಕೇನಾಭಿಪನ್ನಸ್ಯ ಗರ್ಹಿತಸ್ಯಾಹಿತಸ್ಯ ಚ ।
ಕರ್ಮಣಃ ಪ್ರಾಪ್ನುಹೀದಾನೀಂ ತಸ್ಯಾದ್ಯ ಸುಮಹತ್ಫಲಮ್ ॥೧೬॥

ದುರಭಿಮಾನದಿಂದ ಕೊಬ್ಬಿ ಮದೋನ್ಮತ್ತನಾಗಿ ಮಾಡಿರುವ ಅತಿ ನಿಂದ್ಯವಾದ ಮತ್ತು ಅಹಿತಕರವಾದ ನಿನ್ನ ಕುತ್ಸಿತವಾದ ಕಾರ್ಯಕ್ಕೆ ಈಗಲೇ ನೀನು ಮಹಾಫಲವನ್ನು ಪಡೆಯಲಿರುವೆ.

ಶೂರೋಽಹಮಿತಿ ಚಾತ್ಮಾನಮವಗಚ್ಛಸಿ ದುರ್ಮತೇ ।
ನೈವ ಲಜ್ಜಾಸ್ತಿ ತೇ ಸೀತಾಂ ಚೋರವದ್ವ್ಯಪಕರ್ಷತಃ ॥೧೭॥

ದುರ್ಮತಿಯೇ! ಶೌರ್ಯಸಂಪನ್ನನೆಂದು ನಿನ್ನನ್ನು ಭಾವಿಸಿ ಕೊಂಡಿರುವೆ. ಆದರೆ ಸೀತೆಯನ್ನು ಕಳ್ಳತನದಿಂದ ಅಪಹರಿಸಿಕೊಂಡು ಬರಲು ನಿನಗೆ ಸ್ವಲ್ಪವಾದರೂ ನಾಚಿಕೆಯಾಗಲಿಲ್ಲವೇ?

ನಾನಿದ್ದಾಗ ನೀನೇನಾದರೂ ಸೀತೆಯನ್ನು ಬಲಾತ್ಕಾರವಾಗಿ ಅಪ ಹರಿಸಲು ಬಂದಿದ್ದೆಯಾದರೆ–ಆಗಲೇ ನಿನ್ನನ್ನು ನನ್ನ ಬಾಣಗಳಿಂದ ಸಂಹರಿಸಿ ನಿನ್ನ ತಮ್ಮನಾದ ಖರನನ್ನು ನೋಡಲು ಕಳುಹಿಸಿಬಿಡುತ್ತಿದ್ದೆನು. ಮಂದ ಬುದ್ಧಿಯವನೇ! ಅದೃಷ್ಟವಶದಿಂದ ನೀನೀಗ ನನ್ನ ಕಣ್ಣುಗಳಿಗೆ ಗೋಚರ ನಾಗಿರುವೆ. ಈಗಲೇ ನಿನ್ನನ್ನು ತೀಕ್ಷ್ಣವಾದ ಬಾಣಗಳ ಮೂಲಕ ಯಮನ ಅರಮನೆಗೆ ಕಳುಹಿಸಿಕೊಡುತ್ತೇನೆ. ಇಂದು ನನ್ನ ಬಾಣಗಳಿಂದ ಕತ್ತರಿಸಲ್ಪಟ್ಟು ರಣರಂಗದ ಧೂಳಿನಲ್ಲಿ ಬೀಳಲಿರುವ, ಜಾಜ್ವಲ್ಯಮಾನವಾದ ಕುಂಡಲ ಗಳಿಂದ ಕೂಡಿರುವ ನಿನ್ನ ತಲೆಯನ್ನು ಮಾಂಸಾಶಿಗಳಾದ ಪ್ರಾಣಿಗಳು ಕಿತ್ತಾಡಲಿ. ನಿನ್ನ ದೇಹವು ಕೆಳಗೆ ಬಿದ್ದೊಡನೆಯೇ ರಣಹದ್ದುಗಳು ನಿನ್ನ ಮೇಲೆ ಕುಳಿತುಕೊಳ್ಳಲಿ. ಬಾಣಗಳ ಮೊನಚಿನಿಂದಾದ ಗಾಯಗಳಿಂದ ಹೊರಬರುತ್ತಿರುವ ನಿನ್ನ ರಕ್ತವನ್ನು ಆಶೆಯಿಂದ ಯಥೇಚ್ಛವಾಗಿ ಕುಡಿಯಲಿ. ಈಗ ನಾನು ಬಿಡಲಿರುವ ಬಾಣಗಳಿಂದ ಛಿನ್ನ-ಭಿನ್ನನಾಗಿ ಪ್ರಾಣಗಳನ್ನು ತೊರೆದು ಕೆಳಕ್ಕೆ ಬೀಳುವ ನಿನ್ನ ಶರೀರದ ಕರುಳುಗಳನ್ನು ಪಕ್ಷಿಗಳು–ಗರುಡನು ಹಾವುಗಳನ್ನು ಕೊಕ್ಕಿನಿಂದ ಕುಕ್ಕಿ ಎಳೆದಾಡುವಂತೆ–ಎಳೆದಾಡಲಿ."

ಶತ್ರುಸಂಹಾರಕನಾದ ಶ್ರೀರಾಮನು ಹೀಗೆ ಹೇಳುತ್ತಾ ತನ್ನ ಸಮೀಪ ದಲ್ಲಿಯೇ ಇದ್ದ ಅವನನ್ನು ಬಾಣಗಳ ಸಮೂಹಗಳಿಂದ ಮುಚ್ಚಿಬಿಟ್ಟನು. ಆ ಸಮಯದಲ್ಲಿ ಶತ್ರುವಿನ ವಧೆಯನ್ನು ಅಭಿಲಾಷಿಸಿದ್ದ ಶ್ರೀರಾಮನ

ಬಲ, ವೀರ್ಯ, ಹರ್ಷ ಮತ್ತು ಅಸ್ತ್ರಬಲಗಳು ಇಮ್ಮಡಿಯಾದುವು. ಆತ್ಮಜ್ಞಾನಿಯಾದ ಶ್ರೀರಾಮನಿಗೆ ಎಲ್ಲ ಮಹಾಸ್ತ್ರಗಳೂ ಕಾಣಿಸಿಕೊಂಡುವು. ಹರ್ಷೋತ್ಸಾಹಗಳಿಂದ ಶ್ರೀರಾಮನು ತನ್ನ ಕೈಚಳಕವನ್ನು ಶೀಘ್ರಾತಿಶೀಘ್ರವಾಗಿ ತೋರತೊಡಗಿದನು. ಇದ್ದಕ್ಕಿದ್ದಂತೆಯೇ ತನ್ನಲ್ಲಿ ಈ ಎಲ್ಲ ಶುಭಲಕ್ಷಣಗಳೂ ಪ್ರಾದುರ್ಭವಿಸಿದುದನ್ನು ಮನಗಂಡು ರಾಕ್ಷಸಾಂತಕನಾದ ಶ್ರೀರಾಮನು ಪುನಃ ರಾವಣನನ್ನು ತೀಕ್ಷ್ಣವಾದ ಬಾಣಗಳಿಂದ ಪ್ರಹರಿಸತೊಡಗಿದನು. ವಾನರವೀರರು ಎಸೆಯುತ್ತಿದ್ದ ಬಂಡೆಗಳ ಪ್ರಹಾರಗಳಿಂದಲೂ ರಾಘವನ ಬಾಣಗಳ ವರ್ಷದಿಂದಲೂ ರಾವಣನ ಮನಸ್ಸು ವ್ಯಾಕುಲಗೊಂಡಿತು.

ವ್ಯಾಕುಲವಾದ ಅಂತಃಕರಣದಿಂದ ಕೂಡಿದ್ದ ರಾವಣನು ಆ ಸಮಯದಲ್ಲಿ ಪ್ರತ್ಯಸ್ತ್ರಗಳನ್ನು ಬಿಡಲು ಪ್ರಯತ್ನಿಸಲಿಲ್ಲ. ಧನುಸ್ಸಿನ ನಾಣನ್ನು ಸೆಳೆಯಲಿಲ್ಲ. ಶ್ರೀರಾಮನ ಪರಾಕ್ರಮಕ್ಕೆ ಅನುಗುಣವಾದ ಪರಾಕ್ರಮವನ್ನು ತೋರಲೂ ಪ್ರಯತ್ನಿಸಲಿಲ್ಲ. ಆದರೆ ಶ್ರೀರಾಮನ ಬಾಣಗಳೂ ವಿಧ-ವಿಧವಾದ ಶಸ್ತ್ರಗಳೂ ರಾವಣನ ಮೇಲೆ ಮೃತ್ಯುರೂಪವಾಗಿ ಪುಂಖಾನುಪುಂಖವಾಗಿ ಬಂದು ಬೀಳುತ್ತಿದ್ದುವು. ರಾವಣನಿಗೆ ಮೃತ್ಯುಕಾಲವು ಸನ್ನಿಹಿತವಾಗಿದ್ದಿತು. ಆ ಸಮಯದಲ್ಲಿ ರಥವನ್ನು ನಡೆಸುತ್ತಿದ್ದ ಸೂತನು ರಾವಣನ ಅವಸ್ಥೆಯನ್ನು ಸಮೀಕ್ಷಿಸಿ ಸ್ವಲ್ಪವೂ ಭ್ರಾಂತನಾಗದೇ ರಣರಂಗದಿಂದ ರಥವನ್ನು ಹೊರಕ್ಕೊಯ್ದನು. ರಾಜನು ಶಕ್ತಿಹೀನನಾಗಿ ರಥದಲ್ಲಿ ಬಿದ್ದಿರುವುದನ್ನು ಗಮನಿಸಿದ ಸಾರಥಿಯು, ಮೇಘದಂತೆ ಗಡ-ಗಡಾಶಬ್ದದಿಂದ ಕೂಡಿದ್ದ ಭಯಂಕರವಾಗಿದ್ದ ಮಹಾರಥದ ಮೂಲಕವಾಗಿ ರಾಕ್ಷಸ ರಾಜನನ್ನು ಯುದ್ಧಭೂಮಿಯಿಂದ ಶೀಘ್ರವಾಗಿ ಕರೆದೊಯ್ದನು.

೧೦೩ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೧೦೪ನೆಯ ಸರ್ಗ

ರಣರಂಗದಿಂದ ಹಿಂದಿರುಗಿದುದಕ್ಕಾಗಿ ರಾವಣನು ಸಾರಥಿಯನ್ನು ನಿಂದಿಸಿದುದು : ಸಾರಥಿಯು ರಾವಣನನ್ನು ಸಮಾಧಾನಗೊಳಿಸಿ ರಥವನ್ನು ಪುನಃ ರಣಭೂಮಿಗೊಯ್ದುದು

ಸ ತು ಮೋಹಾತ್ಸುಸಂಕ್ರುದ್ಧಃ ಕೃತಾನ್ತಬಲಚೋದಿತಃ ।
ಕ್ರೋಧಸಂರಕ್ತನಯನೋ ರಾವಣಃ ಸೂತಮಬ್ರವೀತ್ ॥೧॥

ಯಮರಾಜನ ಬಲದಿಂದ ಪ್ರೇರಿತನಾಗಿದ್ದ, ಮೋಹವಶನಾಗಿದ್ದ ಮತ್ತು ಅತ್ಯಂತಕುಪಿತನಾಗಿದ್ದ ರಾವಣನು ಕೋಪದಿಂದ ಕೆಂಗಣ್ಣನಾಗಿ ಸೂತನಿಗೆ ಹೇಳಿದನು :

ಹೀನವೀರ್ಯಮಿವಾಶಕ್ತಂ ಪೌರುಷೇಣ ವಿವರ್ಜಿತಮ್ ।
ಭೀರುಂ ಲಘುಮಿವಾಸತ್ತ್ವಂ ವಿಹೀನಮಿವ ತೇಜಸಾ ॥೨॥

ವಿಮುಕ್ತಮಿವ ಮಾಯಾಭಿರಸ್ತ್ರೈರಿವ ಬಹಿಷ್ಕೃತಮ್ ।
ಮಾಮವಜ್ಞಾಯ ದುರ್ಬುದ್ಧೇ ಸ್ವಯಾ ಬುದ್ಧ್ಯಾ ವಿಚೇಷ್ಟಸೇ ॥೩॥

“ದುರ್ಬುದ್ಧಿಯವನೇ! ನೀನೇನು ನನ್ನನ್ನು ಪರಾಕ್ರಮಶೂನ್ಯನೆಂದೂ, ಅಸಮರ್ಥನೆಂದೂ, ಪೌರುಷಶೂನ್ಯನೆಂದೂ, ಹೇಡಿಯೆಂದೂ, ಅಲ್ಪನೆಂದೂ, ಧೈರ್ಯವಿಲ್ಲದವನೆಂದೂ, ತೇಜೋಹೀನನೆಂದೂ, ಮಾಯಾವಿದ್ಯೆಯಿಂದ ರಹಿತನಾದವನೆಂದೂ, ಅಸ್ತ್ರಜ್ಞಾನದಿಂದ ವಂಚಿತನಾದವನೆಂದೂ ಭಾವಿಸಿಬಿಟ್ಟೆಯೇನು? ನನ್ನನ್ನು ಅವಹೇಳನಮಾಡುತ್ತಾ ಸ್ವಬುದ್ಧಿಯಿಂದ ನಿನಗೆ ತೋಚಿದಂತೆ ನೀನು ಕಾರ್ಯಮಾಡುತ್ತಿರುವೆಯಲ್ಲವೇ?

ನನ್ನ ಅಭಿಪ್ರಾಯವೇನೆಂಬುದನ್ನೇ ತಿಳಿದುಕೊಳ್ಳಲು ಪ್ರಯತ್ನಿಸದೇ ನನ್ನನ್ನು ಅವಹೇಳನಮಾಡಿ ಶತ್ರುವಿನ ಎದುರಿನಲ್ಲಿಯೇ ಸ್ವೇಚ್ಛೆಯಿಂದ ನನ್ನ ರಥವನ್ನೇಕೆ ಹಿಂದಿರುಗಿಸಿದೆ? ಅನಾರ್ಯನೇ! ನಿನ್ನ ಈ ಸ್ವೇಚ್ಛಾಚಾರದಿಂದಾಗಿ ನಾನು ಬಹಳ ಕಾಲದಿಂದ ಕಷ್ಟಪಟ್ಟು ಸಂಪಾದಿಸಿದ ಯಶಸ್ಸು, ವೀರ್ಯ, ತೇಜಸ್ಸು, ವಿಶ್ವಾಸ–ಎಲ್ಲವನ್ನೂ ಹಾಳುಮಾಡಿಬಿಟ್ಟೆ. ನನ್ನ ಶತ್ರುವಿನ ಬಲ-ಪರಾಕ್ರಮಗಳು ಪ್ರಖ್ಯಾತವಾಗಿವೆ. ನನ್ನ ಪರಾಕ್ರಮ

ದಿಂದ ಅವನನ್ನು ಅನುರಂಜಿಸುವುದು ನನ್ನ ಕರ್ತವ್ಯವಾಗಿದ್ದಿತು. ನಾನು ಯುದ್ಧಲೋಭಿಯು. (ಯುದ್ಧದಲ್ಲಿಯೇ ಆಸಕ್ತನಾದವನು.) ಅಂತಹ ನನ್ನನ್ನು ಶತ್ರುವಿನ ಕಣ್ಣೆದುರಿನಲ್ಲಿಯೇ ಯುದ್ಧಭೂಮಿಯಿಂದ ಹಿಂದಕ್ಕೆ ಕರೆತಂದು ಅವನ ದೃಷ್ಟಿಯಿಂದ ನನ್ನನ್ನು ಹೇಡಿಯನ್ನಾಗಿ ಮಾಡಿಬಿಟ್ಟೆ. ನೀನೇನಾದರೂ ಈ ರಥವನ್ನು ಪುನಃ ಶತ್ರುವಿನ ಬಳಿಗೆ ಒಯ್ಯದಿದ್ದರೆ ಶತ್ರುಗಳ ಪುರಸ್ಕಾರದ ಲೋಭಕ್ಕೊಳಗಾಗಿ ನೀನು ಈ ಕಾರ್ಯವನ್ನು ಮಾಡಿರುವೆಯೆಂಬ ನನ್ನ ಊಹೆಯು ಸತ್ಯವಾಗುತ್ತದೆ.

ನ ಹಿ ತದ್ವಿದ್ಯತೇ ಕರ್ಮ ಸುಹೃದೋ ಹಿತಕಾಂಕ್ಷಿಣಃ ।
ರಿಪೂಣಾಂ ಸದೃಶಂ ಚೈತನ್ನ ತ್ವಯೈತತ್ಸ್ವನುಷ್ಠಿತಮ್ ॥೮॥

ಹಿತಾಪೇಕ್ಷಿಗಳಾದ ಸುಹೃದರೆಂದಿಗೂ ಇಂತಹ ಕಾರ್ಯವನ್ನು ಮಾಡುವುದಿಲ್ಲ. ನೀನೀಗ ಮಾಡಿರುವ ಕಾರ್ಯವು ಶತ್ರುಗಳಾದವರು ಮಾಡುವ ಕಾರ್ಯಕ್ಕೆ ಅನುರೂಪವಾಗಿದೆ. ಈ ವಿಷಯದಲ್ಲಿ ನೀನು ಒಳ್ಳೆಯ ಕಾರ್ಯವನ್ನು ಮಾಡಲಿಲ್ಲ.

ನೀನು ಬಹಳ ದಿವಸಗಳಿಂದ ನನ್ನ ಸೇವೆಯಲ್ಲಿಯೇ ನಿರತನಾಗಿದ್ದು ನನ್ನ ಗುಣಗಳೇನೆಂಬುದನ್ನು ಸ್ಮರಿಸುವೆಯಾದರೆ–ನನ್ನ ಶತ್ರುವು ರಣಭೂಮಿಯನ್ನು ಬಿಟ್ಟುಹೋಗುವುದರೊಳಗಾಗಿ ಈ ನನ್ನ ರಥವನ್ನು ಯುದ್ಧ ಭೂಮಿಗೆ ಹಿಂದಿರುಗಿಸು.”

ಮೂರ್ಖನಾದ ರಾವಣನು ಹಿತಬುದ್ಧಿಯವನಾದ ಸಾರಥಿಗೆ ಇಂತಹ ಕಠಿನವಾದ ಮಾತುಗಳನ್ನು ಹೇಳಲು ಸಾರಥಿಯು ರಾವಣನಿಗೆ ವಿನಯದಿಂದ ಕೂಡಿದ ಹಿತವಾದ ಮಾತುಗಳನ್ನು ಹೇಳಿದನು :

ನ ಭೀತೋಽಸ್ಮಿ ನ ಮೂಢೋಽಸ್ಮಿ ನೋಪಜಪ್ತೋಽಸ್ಮಿ ಶತ್ರುಭಿಃ ।
ನ ಪ್ರಮತ್ತೋ ನ ನಿಃಸ್ನೇಹೋ ವಿಸ್ಮೃತಾ ನ ಚ ಸತ್ಕ್ರಿಯಾ ॥೧೧॥

“ಪ್ರಭುವೇ! ನೀನು ಭಾವಿಸಿರುವಂತೆ ನಾನು ಭಯಗೊಂಡಿಲ್ಲ. ಮೂಢನೂ ಆಗಿಲ್ಲ. ಶತ್ರುಗಳು ನಮ್ಮ ನಡುವೆ ಭೇದೋಪಾಯವನ್ನೂ ಕಲ್ಪಿಸಿಲ್ಲ ಅಥವಾ ಶತ್ರುಗಳಿಗೂ ನಾನು ವಶನಾಗಿರುವುದಿಲ್ಲ. ನಾನು ಪ್ರಮತ್ತನೂ ಅಲ್ಲ. ನಿನ್ನಲ್ಲಿ ವಿಶ್ವಾಸವಿಲ್ಲದವನೂ ಅಲ್ಲ. ನೀನು ಬಹಳ ಹಿಂದಿನಿಂದಲೂ ನನಗೆ ಮಾಡುತ್ತಿರುವ ಸತ್ಕಾರವನ್ನು ನಾನು ಮರೆತಿಲ್ಲ.

ಮಯಾ ತು ಹಿತಕಾಮೇನ ಯಶಶ್ಚ ಪರಿರಕ್ಷತಾ ।
ಸ್ನೇಹಪ್ರಸ್ಕನ್ನಮನಸಾ ಪ್ರಿಯಮಿತ್ಯಪ್ರಿಯಂ ಕೃತಮ್ ॥೧೨॥

ನಾನು ಯಾವಾಗಲೂ ನಿನ್ನ ಹಿತವನ್ನೇ ಬಯಸುತ್ತೇನೆ. ನಿನ್ನ ಯಶಸ್ಸನ್ನು ರಕ್ಷಿಸಲು ಯಾವಾಗಲೂ ಪ್ರಯತ್ನಿಸುತ್ತಿರುತ್ತೇನೆ. ನಿನ್ನ ಮೇಲಿನ ಸ್ನೇಹದಿಂದ ಯಾವಾಗಲೂ ನನ್ನ ಮನಸ್ಸು ಪ್ರಸನ್ನವಾಗಿದೆ. ಈ ಕಾರ್ಯದಿಂದ ನಿನಗೆ ಹಿತವಾಗುವುದೆಂದು ಭಾವಿಸಿ ನಿನಗೆ ಅಪ್ರಿಯವಾದ ಈ ಕಾರ್ಯವನ್ನು ನಾನು ಮಾಡಿದೆನು.

ನಾಸ್ಮಿನ್ನರ್ಥೇ ಮಹಾರಾಜ ತ್ವಂ ಮಾಂ ಪ್ರಿಯಹಿತೇ ರತಮ್ ।
ಕಶ್ಚಿಲ್ಲಘುರಿವಾನಾರ್ಯೋ ದೋಷತೋ ಗನ್ತುಮರ್ಹಸಿ ॥೧೩॥

ಮಹಾರಾಜ! ನಾನು ಯಾವಾಗಲೂ ನಿನಗೆ ಪ್ರಿಯವನ್ನು ಮತ್ತು ಹಿತವನ್ನು ಮಾಡುವುದರಲ್ಲಿಯೇ ನಿರತನಾಗಿರುವೆನು. ಆದುದರಿಂದ ನಾನು ಈ ಕಾರ್ಯವನ್ನು ಮಾಡಿದುದಕ್ಕಾಗಿ ಅಲ್ಪಬುದ್ಧಿಯುಳ್ಳ ಅನಾರ್ಯನಂತೆ ದೋಷಗಳನ್ನು ನನ್ನ ಮೇಲೆ ಆರೋಪಿಸಬೇಡ.

ಚಂದ್ರೋದಯವಾದೊಡನೆಯೇ ಸಮುದ್ರವು ಉಕ್ಕಿಬಂದು ಅದಕ್ಕೆ ಬಂದು ಸೇರುವ ನದಿಗಳ ಪ್ರವಾಹಗಳನ್ನು ಹಿಮ್ಮುಖವಾಗಿ ಮಾಡುವಂತೆ (ಎತ್ತರವಾದ ಪ್ರದೇಶಗಳಲ್ಲಿ ಹರಿಯುವ ನದಿಗಳು ಹಿಮ್ಮುಖವಾಗುವಂತೆ) ನಾನು ಯುದ್ಧಸಮಯದಲ್ಲಿ ರಥವನ್ನು ಯಾವ ಕಾರಣದಿಂದ ಹಿಂದಿರುಗಿಸಿದೆ ನೆಂಬುದಕ್ಕೆ ಉತ್ತರವನ್ನು ಹೇಳುವೆನು ; ಕೇಳು.

ಆ ಸಮಯದಲ್ಲಿ ನೀನು ಶತ್ರುವಿನೊಡನೆ ಪ್ರಬಲವಾದ ಯುದ್ಧವನ್ನು ಮಾಡಿ ಆಯಾಸಗೊಂಡಿರುವುದನ್ನು ನಾನು ಗಮನಿಸಿದೆನು. ಅಲ್ಲದೇ ನಿನ್ನಲ್ಲಿ ವಿಶೇಷವಾದ ಯುದ್ಧೋತ್ಸಾಹವನ್ನಾಗಲೀ ಸುಮುಖತೆಯನ್ನಾಗಲೀ ಕಾಣ ಲಿಲ್ಲ. ನಮ್ಮ ರಥಕ್ಕೆ ಹೂಡಿದ್ದ ಕುದುರೆಗಳೂ ರಥವನ್ನು ಸತತವಾಗಿ ಎಳೆದು ಬಳಲಿದ್ದುವು. ಮುಂದೆ ಹೋಗಲು ತತ್ತರಿಸುತ್ತಿದ್ದುವು. ಬಿಸಿಲಿನಿಂದಲೂ ಬಳಲಿದ್ದ ಕುದುರೆಗಳು ಮಳೆಗೆ ಸಿಕ್ಕಿದ ಹಸುಗಳಂತೆ ಬಹಳ ದೀನ ವಾಗಿದ್ದುವು. ಆ ಸಮಯದಲ್ಲಿ ಅನೇಕ ಶಕುನಗಳು ಕಾಣಿಸಿಕೊಳ್ಳುತ್ತಿದ್ದುವು. ಅವೆಲ್ಲವೂ ಸಫಲವಾದಲ್ಲಿ ನಮಗೆ ಅನಿಷ್ಟವಾಗುವುದೆಂಬುದನ್ನೇ ಆ ಶಕುನ

ಗಳು ಸೂಚಿಸುತ್ತಿದ್ದುವು. ಎಲ್ಲ ಪ್ರಾಣಿಗಳೂ ನಮಗೆ ಅಪ್ರದಕ್ಷಿಣವಾಗಿ ಸುತ್ತುತ್ತಿದ್ದು ನಮಗೆ ವಿನಾಶವು ಸನ್ನಿಹಿತವಾಗಿರುವುದೆಂಬುದನ್ನು ಸೂಚಿಸುತ್ತಿದ್ದುವು.

ದೇಶಕಾಲೌ ಚ ವಿಜ್ಞೇಯೌ ಲಕ್ಷಣಾನೀಙ್ಗಿತಾನಿ ಚ ।
ದೈನ್ಯಂ ಖೇದಶ್ಚ ಹರ್ಷಶ್ಚ ರಥಿನಶ್ಚ ಬಲಾಬಲಮ್ ॥೧೮॥

ಸಾರಥಿಯಾದವನು ದೇಶ-ಕಾಲ, ಶುಭಾಶುಭನಿಮಿತ್ತಗಳು, ಯುದ್ಧ ಮಾಡುತ್ತಿರುವವನ ಮುಖದ ಪ್ರಸನ್ನತೆ, ಖೇದ-ಹರ್ಷ, ಬಲಾಬಲಗಳು–ಇವೆಲ್ಲವನ್ನೂ ತಿಳಿದಿರಬೇಕು.

ಸ್ಥಲನಿಮ್ನಾನಿ ಭೂಮೇಶ್ಚ ಸಮಾನಿ ವಿಷಮಾಣಿ ಚ ।
ಯುದ್ಧಕಾಲಶ್ಚ ವಿಜ್ಞೇಯಃ ಪರಸ್ಯಾನ್ತರದರ್ಶನಮ್ ॥೧೯॥

ಭೂಮಿಯಲ್ಲಿರುವ ಹಳ್ಳ-ತಿಟ್ಟು ಪ್ರದೇಶಗಳು, ಸಮ-ವಿಷಮಸ್ಥಾನಗಳು, ಯುದ್ಧಮಾಡಬೇಕಾದ ಕಾಲ, ಶತ್ರುವಿನ ದೌರ್ಬಲ್ಯ–ಇವೆಲ್ಲವನ್ನೂ ಸಾರಥಿಯಾದವನು ತಿಳಿದಿರಬೇಕು.

ಉಪಯಾನಾಪಯಾನೇ ಚ ಸ್ಥಾನಂ ಪ್ರತ್ಯಪಸರ್ಪಣಮ್ ।
ಸರ್ವಮೇತದ್ರಥಸ್ಥೇನ ಜ್ಞೇಯಂ ರಥಕುಟುಮ್ಬಿನಾ ॥೨೦॥

ಶತ್ರುವಿನ ಬಳಿಗೆ ಯಾವಾಗ ಹೋಗಬೇಕು, ಶತ್ರುವಿನ ಪಾರ್ಶ್ವಕ್ಕೆ ಯಾವಾಗ ಹೋಗಬೇಕು, ಯುದ್ಧದಲ್ಲಿ ಯಾವಾಗ ಸುಸ್ಥಿರನಾಗಿ ನಿಲ್ಲಬೇಕು, ಯುದ್ಧಭೂಮಿಯಿಂದ ಯಾವಾಗ ರಥವನ್ನು ಹಿಂದಿರುಗಿಸಬೇಕು–ಈ ಎಲ್ಲ ವಿಷಯಗಳೂ ರಥನಿರ್ವಾಹಕನಾದ ಸಾರಥಿಗೆ ಅಗತ್ಯವಾಗಿ ತಿಳಿದಿರಬೇಕು.

ಮಹಾರಾಜ! ನಿನ್ನ ಮತ್ತು ನಮ್ಮ ಕುದುರೆಗಳ ಸ್ವಲ್ಪಹೊತ್ತಿನ ವಿಶ್ರಾಂತಿಗಾಗಿ ಮತ್ತು ನಿನ್ನ ದುಃಖವನ್ನೂ ಖೇದವನ್ನೂ ದೂರೀಕರಿಸುವ ಸಲುವಾಗಿ ನಾನು ಮಾಡಿದ ಈ ಕಾರ್ಯವು ಸರ್ವಥಾ ಉಚಿತವಾಗಿಯೇ ಇದೆ.

ಪ್ರಭುವೇ! ನನ್ನ ಮನಬಂದಂತೆ ವಿವೇಚನಾರಹಿತನಾಗಿ ನಾನು ಈ ಕಾರ್ಯವನ್ನು ಮಾಡಲಿಲ್ಲ. ಒಡೆಯನ ಸ್ನೇಹದಿಂದ ಬಂಧಿಸಲ್ಪಟ್ಟಿರುವ ನಾನು ನಿನ್ನ ರಕ್ಷಣೆಯ ಸಲುವಾಗಿಯೇ ರಥವನ್ನು ಯುದ್ಧಭೂಮಿಯಿಂದ

ಹಿಂದಿರುಗಿಸಿದೆನು. ಶತ್ರುಹಂತಕನೇ! ಈಗ ನೀನು ನನಗೆ ಯಥಾವತ್ತಾಗಿ ಆಜ್ಞಾಪಿಸು. ದಣಿಯ ಋಣವನ್ನು ತೀರಿಸಬೇಕೆಂಬ ದೃಢಮನಸ್ಸಿನಿಂದ ನೀನು ಹೇಳಿದಂತೆ ಮಾಡುವೆನು."

ಸಾರಥಿಯು ಹೀಗೆ ಹೇಳಲು ರಣಾಸಕ್ತನಾದ ರಾವಣನು ಬಹಳ ಸಂತುಷ್ಟನಾಗಿ ಅವನನ್ನು ಬಹಳವಾಗಿ ಪ್ರಶಂಸೆಮಾಡಿ ಹೇಳಿದನು :

ರಥಂ ಶೀಘ್ರಮಿಮಂ ಸೂತ ರಾಘವಾಭಿಮುಖಂ ಕುರು ।
ನಾಹತ್ವಾ ಸಮರೇ ಶತ್ರೂನ್ನಿವರ್ತಿಷ್ಯತಿ ರಾವಣಃ ॥೨೫॥

"ಸೂತನೇ! ನೀನು ರಥವನ್ನು ಬಹಳ ಬೇಗ ರಾಘವನ ಎದುರಿನಲ್ಲಿ ನಿಲ್ಲಿಸು. ರಾವಣನು ಯುದ್ಧದಲ್ಲಿ ಶತ್ರುಗಳನ್ನು ಸಂಹರಿಸದೇ ರಣಭೂಮಿಯಿಂದ ಹಿಂದಿರುಗುವುದಿಲ್ಲ."

ರಾಕ್ಷಸೇಶ್ವರನಾದ ರಾವಣನು ಸಾರಥಿಗೆ ಹೀಗೆ ಹೇಳಿ ಪುರಸ್ಕಾರರೂಪವಾಗಿ ತನ್ನ ಕೈಯಲ್ಲಿದ್ದ ಸುಂದರವಾದ ಕಡಗವನ್ನು ತೆಗೆದು ಕೊಟ್ಟನು. ರಾವಣನು ಹೇಳಿದ ಮಾತುಗಳನ್ನು ಕೇಳಿ ಸಾರಥಿಯು ರಥವನ್ನು ರಣರಂಗದ ಕಡೆಗೆ ವೇಗವಾಗಿ ತಿರುಗಿಸಿದನು.

ರಾವಣನ ಮಾತಿನಿಂದ ಪ್ರಚೋದಿತನಾದ ಸಾರಥಿಯು ಬಹಳ ಬೇಗ ಕುದುರೆಗಳನ್ನು ರಣರಂಗದ ಕಡೆಗೆ ಹೋಗುವಂತೆ ಪ್ರಚೋದಿಸಿದನು. ರಾಕ್ಷಸೇಂದ್ರನ ಆ ಮಹಾರಥವು ರಣರಂಗದಲ್ಲಿದ್ದ ಶ್ರೀರಾಮನಿಗೆ ಅಭಿಮುಖವಾಗಿ ನಿಂತಿತು.

೧೦೪ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೧೦೫ನೆಯ ಸರ್ಗ

ವಿಜಯಪ್ರಾಪ್ತಿಗಾಗಿ ಅಗಸ್ತ್ಯರಿಂದ ಶ್ರೀರಾಮನಿಗೆ ಆದಿತ್ಯಹೃದಯದ ಉಪದೇಶ

ತತೋ ಯುದ್ಧಪರಿಶ್ರಾನ್ತಂ ಸಮರೇ ಚಿನ್ತಯಾ ಸ್ಥಿತಮ್ ।
ರಾವಣಂ ಚಾಗ್ರತೋ ದೃಷ್ಟ್ವಾ ಯುದ್ಧಾಯ ಸಮುಪಸ್ಥಿತಮ್ ॥೧॥

ದೈವತೈಶ್ಚ ಸಮಾಗಮ್ಯ ದ್ರಷ್ಟುಮಭ್ಯಾಗತೋ ರಣಮ್ ।
ಉಪಗಮ್ಯಾಬ್ರವೀದ್ರಾಮಮಗಸ್ತ್ಯೋ ಭಗವಾನೃಷಿಃ ॥೨॥

ಅನಂತರ ರಾಮ-ರಾವಣರ ಯುದ್ಧವನ್ನು ನೋಡಲು ದೇವತೆಗಳೊಡನೆ ಆಗಮಿಸಿದ್ದ ಪೂಜ್ಯರಾದ ಅಗಸ್ತ್ಯಮಹರ್ಷಿಗಳು ಯುದ್ಧಮಾಡಿ ಬಹಳವಾಗಿ ಬಳಲಿ ಚಿಂತೆಗೊಂಡಿದ್ದ ರಾವಣನು ಯುದ್ಧಕ್ಕಾಗಿ ಮುಂದೆ ಬಂದು ಉಪಸ್ಥಿತನಾಗಿರುವುದನ್ನು ನೋಡಿದರು. ಆಗ ಅವರು ಶ್ರೀರಾಮನ ಬಳಿಗೆ ಬಂದು ಹೇಳಿದರು :*

ರಾಮ ರಾಮ ಮಹಾಬಾಹೋ ಶೃಣು ಗುಹ್ಯಂ ಸನಾತನಮ್ ।
ಯೇನ ಸರ್ವಾನರೀನ್ವತ್ಸ ಸಮರೇ ವಿಜಯಿಷ್ಯಸಿ ॥೩॥

“ಮಹಾಬಾಹುವೇ! ರಾಮ! ಸನಾತನವಾದ ಈ ರಹಸ್ಯಮಂತ್ರವನ್ನು ಕೇಳು. ಈ ಮಂತ್ರದ ಪುನಶ್ಚರಣೆಯಿಂದ ನೀನು ಯುದ್ಧದಲ್ಲಿ ಸಮಸ್ತಶತ್ರುಗಳನ್ನೂ ಪರಾಜಯಗೊಳಿಸಿ ವಿಜಯಿಯಾಗುವೆ.

ಆದಿತ್ಯಹೃದಯಂ ಪುಣ್ಯಂ ಸರ್ವಶತ್ರುವಿನಾಶನಮ್ ।
ಜಯಾವಹಂ ಜಪೇನ್ನಿತ್ಯಮಕ್ಷಯ್ಯಂ ಪರಮಂ ಶಿವಮ್ ॥೪॥

ಸರ್ವಮಙ್ಗಲಮಾಙ್ಗಲ್ಯಂ ಸರ್ವಪಾಪಪ್ರಣಾಶನಮ್ ।
ಚಿನ್ತಾಶೋಕಪ್ರಶಮನಮಾಯುರ್ವರ್ಧನಮುತ್ತಮಮ್ ॥೫॥

ರಹಸ್ಯವಾದ ಆ ಸ್ತೋತ್ರಕ್ಕೆ ಆದಿತ್ಯಹೃದಯವೆಂದು ಹೆಸರು. ಆದಿತ್ಯನ ಮನಸ್ಸನ್ನು ಪ್ರಸನ್ನಗೊಳಿಸುವ ಸ್ತೋತ್ರವಿದು. ಇದನ್ನು ಪಠಿಸುವವರಿಗೆ ಪುಣ್ಯವು ಲಭಿಸುತ್ತದೆ. ಈ ಮಹಾಮಂತ್ರವು ಸಮಸ್ತಶತ್ರುಗಳನ್ನೂ ವಿನಾಶ

---

* **ತತೋ ಯುದ್ಧಪರಿಶ್ರಾನ್ತಂ**–ಎಂಬ ಶ್ಲೋಕಕ್ಕೆ ಹೀಗೂ ಅರ್ಥಮಾಡಬಹುದು. **ರಾವಣಂ ಯುದ್ಧಾಯ ಸಮುಪಸ್ಥಿತಂ ಅಗ್ರತಃ ದೃಷ್ಟ್ವಾ ಯುದ್ಧಪರಿಶ್ರಾನ್ತಂ ಸಮರೇ ಚಿನ್ತಯಾ ಸ್ಥಿತಂ ರಾಮಂ**= ಯುದ್ಧಮಾಡುವ ಸಲುವಾಗಿ ಬಂದು ನಿಂತಿರುವ ರಾವಣನನ್ನು ಮುಂಭಾಗದಲ್ಲಿ ನೋಡಿ, ಯುದ್ಧದಿಂದ ಬಳಲಿದ್ದ ಮತ್ತು ಚಿಂತಾವಿಶಿಷ್ಟ ನಾಗಿದ್ದ ಶ್ರೀರಾಮನ ಬಳಿಗೆ ಬಂದು ಅಗಸ್ತ್ಯರು ಹೇಳಿದರು–ಹೀಗೆ ಗೀತಾಪ್ರೆಸ್ ನವರು ಪ್ರಕಟಿಸಿರುವ ರಾಮಾಯಣದಲ್ಲಿ ಅರ್ಥಮಾಡಿದ್ದಾರೆ. **ಉಧರ್ ಶ್ರೀರಾಮಚನ್ದ್ರಜೀ ಯುದ್ಧಸೇ ಥಕಕರ್ ಚಿಂತಾ ಕರತೇ ಹುಎ ರಣಭೂಮೀಮೇ ಖಡೇ ಥೇ।** ತಿಲಕ ವ್ಯಾಖ್ಯಾನಕಾರರೂ ಹೀಗೆಯೇ ವ್ಯಾಖ್ಯಾನಿಸಿದ್ದಾರೆ. **ಯುದ್ಧಪರಿಶ್ರಾನ್ತಂ**= ಅನೇಕಾ

ಮಾಡುವ ಸಾಮರ್ಥ್ಯವನ್ನು ಹೊಂದಿದೆ. ಇದನ್ನು ಅನುದಿನವೂ ಜಪಿಸಬೇಕು. ಹೀಗೆ ಜಪಿಸುವುದರಿಂದ ವಿಜಯವು ಲಭಿಸುತ್ತದೆ. ಅಕ್ಷಯವಾದ ಫಲವನ್ನು ಕೊಡುತ್ತದೆ ಈ ಸ್ತೋತ್ರ. ಈ ಸ್ತೋತ್ರವು ಪರಮಪಾವನವಾದುದು. ಸಮಸ್ತವಾದ ಮಂಗಳಕಾರ್ಯಗಳಿಗೂ ಈ ಸ್ತೋತ್ರವು ಮಂಗಳ ವನ್ನುಂಟುಮಾಡುತ್ತದೆ. ಸಮಸ್ತಪಾಪಗಳನ್ನೂ ವಿನಾಶಗೊಳಿಸುತ್ತದೆ. ಚಿಂತೆ ಮತ್ತು ಶೋಕಗಳನ್ನು ವಿನಾಶಗೊಳಿಸುತ್ತದೆ. ಆಯುಷ್ಯವನ್ನು ಹೆಚ್ಚಿಸಿ ಕೊಳ್ಳುವುದಕ್ಕೆ ಇದು ಉತ್ತಮಸಾಧನವಾಗಿದೆ.

ರಶ್ಮಿಮನ್ತಂ ಸಮುದ್ಯನ್ತಂ ದೇವಾಸುರನಮಸ್ಕೃತಮ್ ।
ಪೂಜಯಸ್ವ ವಿರಸ್ವನ್ತಂ ಭಾಸ್ಕರಂ ಭುವನೇಶ್ವರಮ್ ॥೬॥

ಅನೇಕಕಿರಣಗಳಿಂದ ಕೂಡಿರುವ, ಪಂಚೇಂದ್ರಿಯಗಳ ಮೂಲಕವಾಗಿ ಅನೇಕಜ್ಞಾನರಶ್ಮಿಗಳಿಂದ ಕೂಡಿರುವ, ಜ್ಯೋತಿಸ್ವರೂಪವಾದ ಕಿರಣಗಳಿಂದ ಕೂಡಿರುವ, ಸುವರ್ಣವರ್ಣದ ಪ್ರಶಸ್ತವಾದ ಕಿರಣಗಳಿಂದ ಕೂಡಿರುವ, ಚೆನ್ನಾಗಿ ಉದಯಿಸಿರುವ–ಸಾತ್ತ್ವಿಕವೃತ್ತಿಯುಳ್ಳ ದೇವತೆಗಳಿಂದಲೂ ರಾಜಸ-ತಾಮಸವೃತ್ತಿಯುಳ್ಳ ಅಸುರರಿಂದಲೂ ನಮಸ್ಕರಿಸಲ್ಪಡುವ, ಸಕಲ ವ್ಯವಹಾರಗಳ ಪ್ರವರ್ತಕನಾಗಿರುವುದರಿಂದ 'ವಿವಸ್ವಂತ'–ಎಂಬ ಹೆಸರನ್ನು

ಹೋರಾತ್ರ ಯುದ್ಧಪರಿಶ್ರಾನ್ತಂ ತಮಿವ ಸ್ಥಿತಂ ಸಮರೇ ಸಮರವಿಷಯೇ ಚಿನ್ತಯಾ=ಪ್ರಬಲೋಽಯಮರಿಃ ಕಥಂ ಜೇತವ್ಯ ಇತಿ ಚಿನ್ತಯಾ ಯುಕ್ತಂ ರಾಮಂ ॥ ಹೀಗೆ ವ್ಯಾಖ್ಯಾನಿಸಲು ಕಾರಣವೇನೆಂದರೆ : ಇದೇ ಸರ್ಗದ ೨೮ನೆಯ ಶ್ಲೋಕದಲ್ಲಿ ಏತಚ್ಛ್ರುತ್ವಾ ಮಹಾತೇಜಾ ನಷ್ಟಶೋಕೋಽಭವತ್ತದಾ ॥ ಎಂಬುದಾಗಿದೆ. ಆದರೆ ಈ ಹಿಂದಿನ ೧೦೩ನೆಯ ಸರ್ಗದಲ್ಲಿ ಯುದ್ಧಸಮಯದಲ್ಲಿ ಶ್ರೀರಾಮನ ಬಲ-ವೀರ್ಯ-ಹರ್ಷಗಳು ಎರಡು ಪಟ್ಟಾದುವೆಂದು ಹೇಳಿದೆ. ಬಭೂವ ದ್ವಿಗುಣಂ ವೀರ್ಯಂ ಬಲಂ ಹರ್ಷಶ್ಚ ಸಂಯುಗೇ ॥೨೪॥ ಆದುದರಿಂದ ಶ್ರೀರಾಮನ ಚಿಂತೆಗೆ ಕಾರಣವೇ ಇಲ್ಲ. ಅವನು ಚಿಂತಿಸುವುದೂ ಇಲ್ಲ. ಆದುದರಿಂದ ಇಲ್ಲಿ ರಾವಣನೇ ಚಿಂತಾವಿಶಿಷ್ಟ ನಾಗಿದ್ದನೆಂದು ಅರ್ಥಮಾಡುವುದೇ ಸಮಂಜಸವಾಗಿ ಕಾಣುತ್ತದೆ.

ಈ ಸ್ತೋತ್ರವು ಮಹತ್ತ್ವಪೂರ್ಣವಾದುದು. ಅನುದಿನವೂ ಮೂರು ಬಾರಿ ಜಪಿ ಸುತ್ತಾ ೪೮ ದಿವಸಗಳು ಪಾರಾಯಣಮಾಡಿದರೆ ಸಮಸ್ತಕಷ್ಟಗಳೂ ಪರಿಹಾರವಾಗು ತ್ತವೆ.

ಪಡೆದಿರುವ, ಕಾಂತಿಯನ್ನು ಉತ್ಪತ್ತಿಮಾಡುವುದರಿಂದ ಭಾಸ್ಕರನೆಂಬ ಹೆಸರನ್ನು ಪಡೆದಿರುವ, ಸಕಲಭುವನಗಳಿಗೂ ಈಶ್ವರನಾದ, ಮಳೆ ಮತ್ತು ಬಿಸಿಲುಗಳಿಂದ* ಸಮಸ್ತಭುವನಗಳನ್ನೂ ನಿಯಂತ್ರಿಸುವ ಭುವನೇಶ್ವರನನ್ನು ಆದಿತ್ಯಹೃದಯಸ್ತೋತ್ರದ ಮೂಲಕವಾಗಿ ಪೂಜಿಸು.

ಸರ್ವದೇವಾತ್ಮಕೋ ಹ್ಯೇಷ ತೇಜಸ್ವೀ ರಶ್ಮಿಭಾವನಃ ।
ಏಷ ದೇವಾಸುರಗಣಾನ್ ಲೋಕಾನ್ಪಾತಿ ಗಭಸ್ತಿಭಿಃ ॥೭॥

ಸೂರ್ಯ ಆತ್ಮಾ ಜಗತಃ–ಎಂಬ ಶ್ರುತಿವಾಕ್ಯದಂತೆ ಇವನು ಸಮಸ್ತದೇವತೆಗಳಿಗೂ ಜಗತ್ತಿಗೂ ಆತ್ಮಸ್ವರೂಪನು. ಸಮಸ್ತವನ್ನೂ ಬೆಳಗುವ ತೇಜಸ್ಸಿನಿಂದ ಕೂಡಿರುವವನು. ಕಿರಣಗಳಿಂದ ಜಗತ್ತಿಗೆ ಸ್ಫೂರ್ತಿಯನ್ನುಂಟುಮಾಡುವವನು. ಕಿರಣಗಳಿಂದ ಯೋಗಿಗಳನ್ನು ಬ್ರಹ್ಮಲೋಕಕ್ಕೆ ಕಳುಹಿಸುವವನು. ರಶ್ಮಿಗಳಿಂದ ಲೋಕಗಳನ್ನು ರಕ್ಷಿಸತಕ್ಕವನು. ಕಿರಣಗಳಿಂದ ದೇವಾಸುರಗಣಗಳನ್ನೂ ಲೋಕಗಳನ್ನೂ ರಕ್ಷಿಸುವವನು.*

ಏಷ ಬ್ರಹ್ಮಾ ಚ ವಿಷ್ಣುಶ್ಚ ಶಿವಃ ಸ್ಕನ್ದಃ ಪ್ರಜಾಪತಿಃ ।
ಮಹೇನ್ದ್ರೋ ಧನದಃ ಕಾಲೋ ಯಮಃ ಸೋಮೋ ಹ್ಯಪಾಂಪತಿಃ ॥೮॥

ಪಿತರೋ ವಸವಃ ಸಾಧ್ಯಾ ಹ್ಯಶ್ವಿನೌ ಮರುತೋ ಮನುಃ ।
ವಾಯುರ್ವಹ್ನಿಃ ಪ್ರಜಾ ಪ್ರಾಣ ಋತುಕರ್ತಾ ಪ್ರಭಾಕರಃ ॥೯॥

ಇವನೇ ಬ್ರಹ್ಮನು ; ಇವನೇ ವಿಷ್ಣುವು ; ಇವನೇ ಶಿವನು. ಸ್ಕಂದನೂ ಈ ಆದಿತ್ಯನೇ ಆಗಿದ್ದಾನೆ. ಪ್ರಜಾಪತಿಯೂ ಇವನೇ. ಮಹೇಂದ್ರ, ಧನದ (ಕುಬೇರ), ಕಾಲ, ಯಮ, ಸೋಮ, ಅಪಾಂಪತಿ (ವರುಣ), ಪಿತೃ

---

* ಸೂರ್ಯನು ತನ್ನ ಕಿರಣಗಳಿಂದ ಮಳೆ-ಬೆಳೆಗಳನ್ನು ಉಂಟುಮಾಡುತ್ತಾನೆಂಬುದಕ್ಕೆ ಶ್ರುತಿವಾಕ್ಯವು ಹೀಗಿದೆ : ಯಾಭಿರಾದಿತ್ಯಸ್ತಪತಿ ರಶ್ಮಿಭಿಸ್ತಾಭಿಃ ಪರ್ಜನ್ಯೋ ವರ್ಷತಿ ।

* ಇಲ್ಲಿ ಬರುವ ಹೆಸರುಗಳ ಚತುರ್ಥ್ಯಂತಕ್ಕೆ ನಮಃ ಎಂದು ಸೇರಿಸಿಕೊಂಡು ಸೂರ್ಯನಮಸ್ಕಾರಮಾಡುವ ಪದ್ಧತಿಯೂ ಇದೆ. ರಶ್ಮಿಮತೇ ನಮಃ । ಸಮುದ್ಯತೇ ನಮಃ । ದೇವಾಸುರನಮಸ್ಕೃತಾಯ ನಮಃ । ವಿವಸ್ವತೇ ನಮಃ । ಭಾಸ್ಕರಾಯ ನಮಃ । ಭುವನೇಶ್ವರಾಯ ನಮಃ । ಸರ್ವದೇವಾತ್ಮಕಾಯ ನಮಃ । ತೇಜಸ್ವಿನೇ ನಮಃ । ರಶ್ಮಿಭಾವನಾಯ ನಮಃ । ದೇವಾಸುರಗಣಲೋಕಪಾಲಾಯ ನಮಃ ।

ದೇವತೆಗಳು, ಅಷ್ಟವಸುಗಳು, ಸಾಧ್ಯರು, ಅಶ್ವಿನೀದೇವತೆಗಳು, ಸಪ್ತ ಮರುತ್ತುಗಳು, ಮನು, ವಾಯು, ಅಗ್ನಿ, ಪ್ರಜೆಗಳು, ಪ್ರಾಣಗಳು, ಋತು ಕರ್ತನು ಮತ್ತು ಪ್ರಭಾಕರನು–ಎಲ್ಲವೂ ಆದಿತ್ಯನೇ ಆಗಿದ್ದಾನೆ.[1]

ಆದಿತ್ಯಃ ಸವಿತಾ ಸೂರ್ಯಃ ಖಗಃ ಪೂಷಾ ಗಭಸ್ತಿಮಾನ್ ।
ಸುವರ್ಣಸದೃಶೋ ಭಾನುಃ ಸ್ವರ್ಣರೇತಾ ದಿವಾಕರಃ ॥೧೦॥

ಹರಿದಶ್ವಃ ಸಹಸ್ರಾರ್ಚಿಃ ಸಪ್ತಸಪ್ತಿರ್ಮರೀಚಿಮಾನ್ ।
ತಿಮಿರೋನ್ಮಥನಃ ಶಂಭುಸ್ತ್ವಷ್ಟಾ ಮಾರ್ತಾಣ್ಡಕೋಽಂಶುಮಾನ್ ॥೧೧॥

ಹಿರಣ್ಯಗರ್ಭಃ ಶಿಶಿರಸ್ತಪನೋ ಭಾಸ್ಕರೋ ರವಿಃ ।
ಅಗ್ನಿಗರ್ಭೋಽದಿತೇಃ ಪುತ್ರಃ ಶಙ್ಖಃ ಶಿಶಿರನಾಶನಃ ॥೧೨॥

ವ್ಯೋಮನಾಥಸ್ತಮೋಭೇದೀ ಋಗ್ಯಜುಃಸಾಮಪಾರಗಃ ।
ಘನವೃಷ್ಟಿರಪಾಂ ಮಿತ್ರಂ ವಿನ್ಧ್ಯವೀಥೀಪ್ಲವಂಗಮಃ ॥೧೩॥

ಆತಪೀ ಮಣ್ಡಲೀ ಮೃತ್ಯುಃ ಪಿಙ್ಗಲಃ ಸರ್ವತಾಪನಃ ।
ಕವಿರ್ವಿಶ್ವೋ ಮಹಾತೇಜಾ ರಕ್ತಃ ಸರ್ವಭವೋದ್ಭವಃ ॥೧೪॥

ನಕ್ಷತ್ರಗ್ರಹತಾರಾಣಾಮಧಿಪೋ ವಿಶ್ವಭಾವನಃ ।
ತೇಜಸಾಮಪಿ ತೇಜಸ್ವೀ ದ್ವಾದಶಾತ್ಮನ್ನಮೋಽಸ್ತು ತೇ* ॥೧೫॥

ಆದಿತ್ಯಃ–ಅದಿತಿಯ ಮಗನು. (ಯಸ್ಮಾತ್ಸರ್ವಮಾದತ್ತೇ ಏತಸ್ಮಾದಾದಿತ್ಯಃ–ಎಂಬ ಉಪನಿಷತ್ತಿನ ವಾಕ್ಯದಂತೆ ಸಮಸ್ತವನ್ನೂ

---

1 ನಮಸ್ಕಾರಮಾಡುವಾಗ ಹೇಳಿಕೊಳ್ಳಬೇಕಾದ ನಾಮಗಳು : ಬ್ರಹ್ಮಣೇ ನಮಃ । ವಿಷ್ಣವೇ ನಮಃ । ಶಿವಾಯ ನಮಃ । ಸ್ಕನ್ದಾಯ ನಮಃ । ಪ್ರಜಾಪತಯೇ ನಮಃ । ಮಹೇನ್ದ್ರಾಯ ನಮಃ । ಧನದಾಯ ನಮಃ । ಕಾಲಾಯ ನಮಃ । ಯಮಾಯ ನಮಃ । ಸೋಮಾಯ ನಮಃ । ಅಪಾಂಪತಯೇ ನಮಃ । ಪಿತೃದೇವತಾಯೈ ನಮಃ । ವಸುಮೂರ್ತಯೇ ನಮಃ । ಸಾಧ್ಯಮೂರ್ತಯೇ ನಮಃ । ಅಶ್ವಿಮೂರ್ತಯೇ ನಮಃ । ಮರುನ್ಮೂರ್ತಯೇ ನಮಃ । ಮನವೇ ನಮಃ । ವಾಯವೇ ನಮಃ । ವಹ್ನಯೇ ನಮಃ । ಪ್ರಜಾರೂಪಾಯ ನಮಃ । ಪ್ರಾಣಾಯ ನಮಃ । ಋತುಕರ್ತ್ರೇ ನಮಃ । ಪ್ರಭಾಕರಾಯ ನಮಃ

* ನಮಸ್ಕಾರಮಾಡುವಾಗ ಹೇಳುವ ಇದೇ ನಾಮಗಳು : ಆದಿತ್ಯಾಯ ನಮಃ । ಸವಿತ್ರೇ ನಮಃ । ಸೂರ್ಯಾಯ ನಮಃ । ಖಗಾಯ ನಮಃ । ಪೂಷ್ಣೇ ನಮಃ ।

ಭುಂಜಿಸುವವನು.) **ಸವಿತಾ**–ಜಗತ್ತಿನ ಉತ್ಪತ್ತಿಗೆ ಕಾರಣನಾದವನು. **ಸೂರ್ಯಃ**–ಸರ್ವವ್ಯಾಪಕನು. (**ಸೂರ್ಯ ಏಕಾಕೀ ಚರತಿ** ಎಂಬ ಶ್ರುತಿವಾಕ್ಯದಂತೆ ಏಕಾಕಿಯಾಗಿ ಸರ್ವತ್ರ ಸಂಚರಿಸುವವನು. ಕರ್ಮಗಳ ಪ್ರೇರಕನು.) **ಖಗಃ**–ಆಕಾಶದಲ್ಲಿ ಸಂಚರಿಸುವವನು. ಹೃದಯಾಕಾಶ ದಲ್ಲಿರುವವನು. **ಪೂಷಾ**–ಪೋಷಿಸುವವನು. **ಗಭಸ್ತಿಮಾನ್**–ಬೆಳ ಗಿಸುವವನು. **ಸುವರ್ಣಸದೃಶಃ**–ಸುವರ್ಣಸದೃಶಮೂರ್ತಿಯು. (**ಆಪ್ರಣ ಖಾತ್ಸರ್ವ ಏವ ಸುವರ್ಣಃ** ಎಂಬ ಶ್ರುತಿವಚನದಂತೆ ಸುವರ್ಣಮಯನು.) **ದ್ವಾಸುಪರ್ಣೌ** ಎಂಬ ಶ್ರುತಿವಚನದಂತೆ ಬ್ರಹ್ಮನಿಗೂ ಸುವರ್ಣತ್ವವುಂಟು. **ಭಾನುಃ**–ಪ್ರಕಾಶಕನು. **ಸ್ವರ್ಣರೇತಾಃ** –ಬ್ರಹ್ಮಾಂಡದ ಉತ್ಪತ್ತಿಗೆ ಬೀಜ ಸ್ವರೂಪನಾದವನು. **ದಿವಾಕರಃ**–ರಾತ್ರಿಯ ಅಂಧಕಾರವನ್ನು ಹೋಗಲಾಡಿಸಿ ಹಗಲನ್ನು ಉಂಟುಮಾಡುವವನು. **ಹರಿದಶ್ವಃ**–ಎಲ್ಲ ದಿಕ್ಕುಗಳನ್ನೂ ವ್ಯಾಪಿಸಿರುವವನು ಅಥವಾ ಹಸಿರುಬಣ್ಣದ ಕುದುರೆಗಳನ್ನು ಹೊಂದಿರುವವನು. **ಸಹಸ್ರಾರ್ಚಿಃ**–ಸಾವಿರ ಕಿರಣಗಳುಳ್ಳವನು. **ಸಪ್ತ ಸಪ್ತಿಃ** -ಏಳು ಕುದುರೆಗಳುಳ್ಳವನು. **ಮರೀಚಿಮಾನ್** –ಕಿರಣಗಳಿಂದ ಸುಶೋಭಿತನಾದವನು. **ತಿಮಿರೋನ್ಮಥನಃ**-ಅಜ್ಞಾನವೆಂಬ ಕತ್ತಲೆಯನ್ನು ಧ್ವಂಸಮಾಡುವವನು ಅಥವಾ ಕತ್ತಲೆಯನ್ನು ಧ್ವಂಸಮಾಡುವವನು. **ಶಂಭುಃ**-ಸುಖದಾಯಕನು. ಕಲ್ಯಾಣಕ್ಕೆ ಉಗಮಸ್ಥಾನನು. **ತ್ವಷ್ಟಾ**–ಭಕ್ತರ ದುಃಖವನ್ನು ಹೋಗಲಾಡಿಸುವವನು. **ಮಾರ್ತಾಂಡಕಃ** –ಅಚೇತನ ವಾದ ಬ್ರಹ್ಮಾಂಡಕ್ಕೆ ಜೀವತುಂಬುವವನು. **ಅಂಶುಮಾನ್** -ಸರ್ವವ್ಯಾಪ ಕನು; ಕಿರಣಗಳುಳ್ಳವನು. **ಹಿರಣ್ಯಗರ್ಭಃ**–ಸಕಲಜಗತ್ತಿನ ಉತ್ಪತ್ತಿ-ಸ್ಥಿತಿ-ಲಯಗಳನ್ನು ಮಾಡುವವನು. ಬ್ರಹ್ಮ-ವಿಷ್ಣು-ರುದ್ರರೂಪನು. ಬ್ರಹ್ಮನು. **'ಭಗವತೇ ಹಿರಣ್ಯಗರ್ಭಾಯ ನಮಃ'** –ಎಂಬ ಸೂರ್ಯ ದ್ವಾದಶಾಕ್ಷರೀಮಂತ್ರದ ಅಧಿದೇವತೆಯು. **ಶಿಶಿರಃ**–ಸ್ವಭಾವದಿಂದಲೇ ಸುಖ ದಾಯಕನು. **ತಪನಃ**–ತಾಪವನ್ನುಂಟುಮಾಡುವವನು. **ಭಾಸ್ಕರಃ**–

ಗಭಸ್ತಿಮತೇ ನಮಃ । ಸುವರ್ಣಸದೃಶಾಯ ನಮಃ । ಭಾನವೇ ನಮಃ । ಸ್ವರ್ಣ ರೇತಸೇ ನಮಃ । ದಿವಾಕರಾಯ ನಮಃ। ಹರಿದಶ್ವಾಯ ನಮಃ। ಸಹಸ್ರಾರ್ಚಿಷೇ ನಮಃ। ಸಪ್ತಸಪ್ತಯೇ ನಮಃ । ಮರೀಚಿಮತೇ ನಮಃ । ತಿಮಿರೋನ್ಮಥನಾಯ

ಬೆಳಕನ್ನುಂಟುಮಾಡುವವನು. **ರವಿಃ**–ಸಮಸ್ತರ ಸ್ತುತಿಗೂ ಪಾತ್ರನಾದವನು. **ಅಗ್ನಿಗರ್ಭಃ** –ಅಗ್ನಿಯನ್ನು ಗರ್ಭದಲ್ಲಿ ಧರಿಸಿರುವವನು. **ಅದಿತೇಃಪುತ್ರಃ** –ಅದಿತಿಯ ಮಗನು. **ಶಂಖಃ**–ಆನಂದಸ್ವರೂಪನು ಮತ್ತು ವ್ಯಾಪಕನು. **ಶಿಶಿರನಾಶನಃ**–ಶೀತವನ್ನು ನಾಶಮಾಡುವವನು. ಮಂದಬುದ್ಧಿಯನ್ನು ನಾಶಮಾಡುವವನು. **ವ್ಯೋಮನಾಥಃ**–ಆಕಾಶಕ್ಕೆ ಸ್ವಾಮಿಯಾದವನು. **ತಮೋಭೇದೀ**–ಅಂಧಕಾರವನ್ನು ನಾಶಗೊಳಿಸುವವನು. **ಋಗ್ಯಜುಃಸಾಮಪಾರಗಃ**–ಋಗ್ವೇದ-ಯಜುರ್ವೇದ-ಸಾಮ ವೇದಗಳಲ್ಲಿ ಪ್ರತಿಪಾದ್ಯನು. **ಘನವೃಷ್ಟಿಃ**–ಸಂಪೂರ್ಣವಾದ ಮಳೆಗರೆಯುವವನು. **ಅಪಾಂಮಿತ್ರಃ**–ನೀರಿನ ಉತ್ಪತ್ತಿಗೆ ಕಾರಣನಾದವನು ; ಸಾತ್ತ್ವಿಕರಿಗೆ ಮಿತ್ರನಾದವನು. **ವಿಂಧ್ಯವೀಥೀಪ್ಲವಂಗಮಃ**–ಆಕಾಶ ಮಾರ್ಗದಲ್ಲಿ ಶೀಘ್ರವಾಗಿ ಚಲಿಸುವವನು. **ಆತಪೀ**–ಬಿಸಿಲನ್ನು ಉತ್ಪತ್ತಿ ಮಾಡುವವನು. **ಮಂಡಲೀ**–ಕಿರಣಸಮೂಹವನ್ನು ಮಂಡಲರೂಪದಲ್ಲಿ ಧರಿಸಿರುವವನು. **(ಮೃತ್ಯುಃ**–ಅಮುಮಾಹುಃ ಪರಂ ಮೃತ್ಯುಂ ಎಂಬ ಶ್ರುತಿವಚನದಂತೆ ಮಹಾಮೃತ್ಯುಸ್ವರೂಪನು.) **ಪಿಂಗಲಃ**–ಪಿಂಗಲನಾಡೀ ಪ್ರವರ್ತಕನಾಗಿದ್ದು ಕರ್ಮಮಾರ್ಗಪ್ರವರ್ತಕನು ; ಪಿಂಗಲವರ್ಣನು. **ಸರ್ವತಾಪನಃ** –ಸಮಸ್ತರಿಗೂ ತಾಪವನ್ನುಂಟುಮಾಡುವವನು. **ಕವಿಃ**– ತ್ರಿಕಾಲದರ್ಶಿಯು; ಸರ್ವಜ್ಞನು ; ಕವಿತೆಗಳನ್ನು ಮಾಡುವವನು. **ವಿಶ್ವಃ**–ವಿಶ್ವರೂಪನು. **ಮಹಾತೇಜಾಃ**–ಮಹಾತೇಜಃಸ್ವರೂಪನು. **ರಕ್ತಃ** –ರಕ್ತ ವರ್ಣದವನು. ಪಾಲನೆಮಾಡುತ್ತಾ ಎಲ್ಲರನ್ನೂ ಅನುರಂಜಿಸುವವನು. **ಸರ್ವಭವೋದ್ಭವಃ** –ಸಮಸ್ತಚರಾಚರಗಳ ಉತ್ಪತ್ತಿಗೂ ಕಾರಣನಾದವನು. **ನಕ್ಷತ್ರಗ್ರಹತಾರಾಣಾಮಧಿಪಃ**–ನಕ್ಷತ್ರಗಳು-ಗ್ರಹಗಳು-ತಾರೆಗಳು ಎಲ್ಲರಿಗೂ ಸ್ವಾಮಿಯು. **ವಿಶ್ವಭಾವನಃ**–ಜಗತ್ತನ್ನು ರಕ್ಷಿಸುವವನು. **ತೇಜಸಾಮಪಿ ತೇಜಸ್ವೀ**–ಅಗ್ನಿಯೇ ಮೊದಲಾದ ತೇಜೋರಾಶಿಗಳೆಲ್ಲಕ್ಕೂ ತೇಜ

ನಮಃ । ಶಂಭವೇ ನಮಃ । ತ್ವಷ್ಟ್ರೇ ನಮಃ । ಮಾರ್ತಾಣ್ಡಕಾಯ ನಮಃ । ಅಂಶುಮತೇ ನಮಃ ।ಹಿರಣ್ಯಗರ್ಭಾಯ ನಮಃ। ಶಿಶಿರಾಯ ನಮಃ । ತಪನಾಯ ನಮಃ । ಭಾಸ್ಕರಾಯ ನಮಃ । ರವಯೇ ನಮಃ । ಅಗ್ನಿಗರ್ಭಾಯ ನಮಃ । ಆದಿತೇಃ ಪುತ್ರಾಯ ನಮಃ। ಶಂಖಾಯ ನಮಃ। ಶಿಶಿರನಾಶನಾಯ ನಮಃ। ವ್ಯೋಮ

ಸ್ಸನ್ನು ದಯಪಾಲಿಸುವವನು. ದ್ವಾದಶಾತ್ಮಾ-ಹನ್ನೆರಡು ಮಾಸಗಳ ಸ್ವರೂಪನು. ಧಾತಾ, ಮಿತ್ರ, ಅರ್ಯಮಾ, ರುದ್ರ, ವರುಣ, ಸೂರ್ಯ, ಭಗ, ವಿವಸ್ವಂತ, ಪೂಷಾ, ಸವಿತಾ, ತ್ವಷ್ಟಾ ಮತ್ತು ವಿಷ್ಣುಗಳೆಂಬ ಹನ್ನೆರಡು ಸ್ವರೂಪಗಳಲ್ಲಿರುವವನು. ಈ ಎಲ್ಲ ಸ್ವರೂಪಗಳಲ್ಲಿಯೂ ಇರುವ ನಿನಗೆ ನಮಸ್ಕಾರವು.

ನಮಃ ಪೂರ್ವಾಯ ಗಿರಯೇ ಪಶ್ಚಿಮಾಯಾದ್ರಯೇ ನಮಃ ।
ಜ್ಯೋತಿರ್ಗಣಾನಾಂ ಪತಯೇ ದಿನಾಧಿಪತಯೇ ನಮಃ ॥೧೬॥

ಉದಯಾಚಲ-ಅಸ್ತಾಚಲಸ್ವರೂಪನಾಗಿರುವ ನಿನಗೆ ನಮಸ್ಕಾರವು. ಗ್ರಹ-ತಾರಾ-ನಕ್ಷತ್ರಗಳಿಗೆ ಸ್ವಾಮಿಯಾಗಿರುವ ನಿನಗೆ ನಮಸ್ಕಾರವು. ದಿನಗಳಿಗೆ ಅಧಿಪತಿಯಾಗಿರುವ ನಿನಗೆ ನಮಸ್ಕಾರವು.

ಜಯಾಯ ಜಯಭದ್ರಾಯ ಹರ್ಯಶ್ವಾಯ ನಮೋ ನಮಃ ।
ನಮೋ ನಮಃ ಸಹಸ್ರಾಂಶೋ ಆದಿತ್ಯಾಯ ನಮೋ ನಮಃ ॥೧೭॥

ನೀನು ಜಯಸ್ವರೂಪನಾಗಿರುವೆ. ನಿನಗೆ ನಮಸ್ಕಾರವು. ವಿಜಯ ಮತ್ತು ಮಂಗಳಸ್ವರೂಪನಾಗಿರುವ ನಿನಗೆ ನಮಸ್ಕಾರವು. ಹರಿದ್ವರ್ಣದ ಕುದುರೆಗಳನ್ನು ಹೊಂದಿರುವ ನಿನಗೆ ನಮಸ್ಕಾರವು. ಸಾವಿರ ಕಿರಣಗಳಿಂದ ಶೋಭಿತನಾಗಿರುವವನೇ! ನಿನಗೆ ಪುನಃ ಪುನಃ ನಮಸ್ಕಾರವು. ಅದಿತಿಯ ಮಗನಾಗಿ ಆದಿತ್ಯನೆಂಬ ಹೆಸರಿನಿಂದ ಪ್ರಸಿದ್ಧನಾಗಿರುವ ನಿನಗೆ ಪುನಃ ಪುನಃ ನಮಸ್ಕಾರಮಾಡುತ್ತೇನೆ.

ನಮ ಉಗ್ರಾಯ ವೀರಾಯ ಸಾರಙ್ಗಾಯ ನಮೋ ನಮಃ ।
ನಮಃ ಪದ್ಮಪ್ರಬೋಧಾಯ ಮಾರ್ತಾಣ್ಡಾಯ ನಮೋ ನಮಃ ॥೧೮॥

ಇಂದ್ರಿಯಗಳನ್ನು ನಿಗ್ರಹಿಸಿರುವ ನಿನಗೆ ನಮಸ್ಕಾರವು. ದುಷ್ಟರಿಗೆ ಭಯಂಕರನಾಗಿರುವ ನಿನಗೆ ನಮಸ್ಕಾರವು. ರುದ್ರರೂಪನಾಗಿರುವ ನಿನಗೆ

ನಾಥಾಯ ನಮಃ । ತಮೋಭೇದಿನೇ ನಮಃ । ಋಗ್ಯಜುಃಸಾಮಪಾರಗಾಯ ನಮಃ । ಘನವೃಷ್ಟಯೇ ನಮಃ । ಅಪಾಂಮಿತ್ರಾಯ ನಮಃ । ವಿಂಧ್ಯವೀಥೀಪ್ಲವಙ್ಗಮಾಯ ನಮಃ । ಆತಪಿನೇ ನಮಃ । ಮಣ್ಡಲಿನೇ ನಮಃ । ಮೃತ್ಯವೇ ನಮಃ । ಪಿಂಗಲಾಯ ನಮಃ । ಸರ್ವತಾಪನಾಯ ನಮಃ । ಕವಯೇ ನಮಃ । ವಿಶ್ವಸ್ಮೈ ನಮಃ । ಮಹಾ ತೇಜಸೇ ನಮಃ । ರಕ್ತಾಯ ನಮಃ । ಸರ್ವಭವೋದ್ಭವಾಯ ನಮಃ । ನಕ್ಷತ್ರಗ್ರಹ

ನಮಸ್ಕಾರವು. ವೀರನಾಗಿರುವ ನಿನಗೆ ನಮಸ್ಕಾರವು. ಶಕ್ತಿಸಂಪನ್ನನಾದ ನಿನಗೆ ನಮಸ್ಕಾರವು. ಸಾರಂಗನಿಗೆ ನಮಸ್ಕಾರವು. ಸಾರ ಎಂದರೆ ಪ್ರಣವ. ಅದನ್ನು ಪ್ರತಿಪಾದಿಸುವವನಿಗೆ ನಮಸ್ಕಾರವು. ಪ್ರಕಾಶಸ್ವರೂಪನಾದ ನಿನಗೆ ನಮಸ್ಕಾರವು. ಶೀಘ್ರಸ್ವಾಮಿಯಾದ ನಿನಗೆ ನಮಸ್ಕಾರವು.* ಪದ್ಮ ಪ್ರಬೋಧನಿಗೆ, ಕಮಲವನ್ನು ಅರಳಿಸುವ ನಿನಗೆ ನಮಸ್ಕಾರವು. ಮೃತವಾದ ಅಂಡದಲ್ಲಿ ಹುಟ್ಟಿದ ಮಾರ್ತಾಂಡನಿಗೆ ನಮಸ್ಕಾರವು.

ಬ್ರಹ್ಮೇಶಾನಾಚ್ಯುತೇಶಾಯ ಸೂರ್ಯಾಯಾದಿತ್ಯವರ್ಚಸೇ ।
ಭಾಸ್ವತೇ ಸರ್ವಭಕ್ಷಾಯ ರೌದ್ರಾಯ ವಪುಷೇ ನಮಃ ॥೧೯॥

ಬ್ರಹ್ಮ, ಈಶಾನ ಮತ್ತು ಅಚ್ಯುತ-ಈ ತ್ರಿಮೂರ್ತಿಗಳಿಗೂ ಈಶನಾದ ನಿನಗೆ ನಮಸ್ಕಾರವು. ಆದಿತ್ಯನ (ಮಹಾವಿಷ್ಣುವಿನ[1]) ತೇಜಸ್ಸನ್ನು ಹೊಂದಿರುವ ಸೂರ್ಯನಾಮಕನಾದ ನಿನಗೆ ನಮಸ್ಕಾರವು. ಅತ್ಯಂತ ಪ್ರಕಾಶಮಾನನಾಗಿರುವ ನಿನಗೆ ನಮಸ್ಕಾರವು. ಸರ್ವಭಕ್ಷಕನಾದ ಅಗ್ನಿ ಸ್ವರೂಪನಾಗಿರುವ ನಿನಗೆ ನಮಸ್ಕಾರವು. ಭಯಂಕರವಾದ ರೂಪವುಳ್ಳ ನಿನಗೆ ನಮಸ್ಕಾರವು.

ತಮೋಘ್ನಾಯ ಹಿಮಘ್ನಾಯ ಶತ್ರುಘ್ನಾಯಾಮಿತಾತ್ಮನೇ ।
ಕೃತಘ್ನಘ್ನಾಯ ದೇವಾಯ ಜ್ಯೋತಿಷಾಂ ಪತಯೇ ನಮಃ ॥೨೦॥

ಅಜ್ಞಾನಾಂಧಕಾರವನ್ನು ಹೋಗಲಾಡಿಸುವ ನಿನಗೆ ನಮಸ್ಕಾರವು. ಜಡತೆಯನ್ನು ಅಥವಾ ಹಿಮವನ್ನು ನಿವಾರಿಸುವ ನಿನಗೆ ನಮಸ್ಕಾರವು.

ತಾರಾಣಾಮಧಿಪಾಯ ನಮಃ । ವಿಶ್ವಭಾವನಾಯ ನಮಃ । ತೇಜಸಾಮಪಿ ತೇಜಸ್ವಿನೇ ನಮಃ । ದ್ವಾದಶಾತ್ಮನೇ ನಮಃ । ಪೂರ್ವಾಯ ಗಿರಯೇ ನಮಃ । ಪಶ್ಚಿಮಾ ಯಾದ್ರಯೇ ನಮಃ । ಜ್ಯೋತಿರ್ಗಣಾನಾಂ ಪತಯೇ ನಮಃ । ದಿನಾಧಿಪತಯೇ ನಮಃ।ಜಯಾಯ ನಮಃ ।ಜಯಭದ್ರಾಯ ನಮಃ ।ಹರ್ಯಶ್ವಾಯ ನಮಃ ।ಸಹಸ್ರಾಂಶವೇ ನಮಃ। ಆದಿತ್ಯಾಯ ನಮಃ। ಉಗ್ರಾಯ ನಮಃ। ವೀರಾಯ ನಮಃ। ಸಾರಂಗಾಯ ನಮಃ। ಪದ್ಮಪ್ರಬೋಧಾಯ ನಮಃ। ಮಾರ್ತಾಣ್ಡಾಯ

* ನಿಮಿಷಾರ್ಧದಲ್ಲಿ ಸೂರ್ಯನು ಎರಡು ಸಾವಿರ ಯೋಜನಗಳಷ್ಟು ದೂರ ಪ್ರಯಾಣಮಾಡುವನೆಂದು ಪುರಾಣಗಳು ಹೇಳುತ್ತವೆ.

1 ಸ್ವಯಮ್ಭೂಃ ಶಮ್ಭುರಾದಿತ್ಯಃ (ವಿಷ್ಣು ಸಹಸ್ರನಾಮ)

ಆಶ್ರಿತರ ಶತ್ರುಗಳನ್ನು ಸಂಹರಿಸುವ ನಿನಗೆ ನಮಸ್ಕಾರವು. ಅಪ್ರಮೇಯಾತ್ಮನಾದ, ಅಳತೆಗೆ ಸಿಕ್ಕದ, ಮಹಾತ್ಮನಾದ ನಿನಗೆ ನಮಸ್ಕಾರವು. ಮಾಡಿದ ಉಪಕಾರವನ್ನು ಸ್ಮರಿಸದಿರುವವರನ್ನು ನಾಶಮಾಡುವ ನಿನಗೆ ನಮಸ್ಕಾರವು. ದೇವತಾಸ್ವರೂಪನಾದ ನಿನಗೆ ನಮಸ್ಕಾರವು. ಗ್ರಹ-ನಕ್ಷತ್ರ-ತಾರೆಗಳಿಗೆ ಒಡೆಯನಾದ ನಿನಗೆ ನಮಸ್ಕಾರವು.

ತಪ್ತಚಾಮೀಕರಾಭಾಯ ವಹ್ನಯೇ ವಿಶ್ವಕರ್ಮಣೇ ।
ನಮಸ್ತಮೋಭಿನಿಘ್ನಾಯ ರವಯೇ ಲೋಕಸಾಕ್ಷಿಣೇ ॥೨೦॥

ಪುಟಕ್ಕೆ ಹಾಕಿದ ಚಿನ್ನದ ಕಾಂತಿಯಂತೆ ಕಾಂತಿಯಿಂದ ಕೂಡಿರುವ ನಿನಗೆ ನಮಸ್ಕಾರವು. ಅಗ್ನಿಸ್ವರೂಪನಾದ ನಿನಗೆ ನಮಸ್ಕಾರವು. ಜಗತ್ತಿನ ಸೃಷ್ಟಿ-ಸ್ಥಿತಿ-ಲಯಗಳೆಂಬ ಕರ್ಮಗಳೇ ಯಾವನಿಗೆ ಕರ್ತವ್ಯರೂಪವಾಗಿವೆಯೋ ಅಂತಹ ಸರ್ವಜಗತ್ಕರ್ತೃವಾದ ವಿಶ್ವಕರ್ಮನಿಗೆ ನಮಸ್ಕಾರವು. ಭಕ್ತರ ಅಜ್ಞಾನವನ್ನು ಧ್ವಂಸಮಾಡುವ ನಿನಗೆ ನಮಸ್ಕಾರವು. ಸರ್ವರ ಪ್ರೀತಿಗೂ ವಿಷಯನಾಗಿರುವ ನಿನಗೆ ನಮಸ್ಕಾರವು. ಪಾಪ-ಪುಣ್ಯಕರ್ಮಗಳಿಗೆ ಸಾಕ್ಷಿಯಾದ ನಿನಗೆ ನಮಸ್ಕಾರವು. ಲೋಕಕ್ಕೇ ಸಾಕ್ಷಿಯಾಗಿರುವ ನಿನಗೆ ನಮಸ್ಕಾರವು.

ನಾಶಯತ್ಯೇಷ ವೈ ಭೂತಂ ತದೇವ ಸೃಜತಿ ಪ್ರಭುಃ ।
ಪಾಯತ್ಯೇಷ ತಪತ್ಯೇಷ ವರ್ಷತ್ಯೇಷ ಗಭಸ್ತಿಭಿಃ ॥೨೨॥

ಈ ಸೂರ್ಯಭಗವಂತನೇ ಎಲ್ಲ ಪ್ರಾಣಿಗಳನ್ನೂ ನಾಶಮಾಡುತ್ತಾನೆ. ಪುನಃ ಅದನ್ನೇ ಪ್ರಭುವಾದ ಸೂರ್ಯನು ಸೃಷ್ಟಿಸುತ್ತಾನೆ. ಈ ಜಗತ್ತನ್ನು

ನಮಃ । ಬ್ರಹ್ಮೇಶಾನಾಚ್ಯುತೇಶಾಯ ನಮಃ । ಸೂರ್ಯಾಯ ನಮಃ । ಆದಿತ್ಯವರ್ಚಸೇ ನಮಃ । ಭಾಸ್ವತೇ ನಮಃ । ಸರ್ವಭಕ್ಷಾಯ ನಮಃ । ರೌದ್ರಾಯ ವಪುಷೇ ನಮಃ । ತಮೋಘ್ನಾಯ ನಮಃ । ಹಿಮಘ್ನಾಯ ನಮಃ । ಶತ್ರುಘ್ನಾಯ ನಮಃ । ಅಮಿತಾತ್ಮನೇ ನಮಃ । ಕೃತಘ್ನಘ್ನಾಯ ನಮಃ । ದೇವಾಯ ನಮಃ । ಜ್ಯೋತಿಷಾಂ ಪತಯೇ ನಮಃ । ತಪ್ತಚಾಮೀಕರಾಭಾಯ ನಮಃ । ವಹ್ನಯೇ ನಮಃ । ವಿಶ್ವಕರ್ಮಣೇ ನಮಃ । ತಮೋಭಿನಿಘ್ನಾಯ ನಮಃ । ರವಯೇ ನಮಃ । ಲೋಕಸಾಕ್ಷಿಣೇ ನಮಃ । ಭೂತನಾಶನಾಯ ನಮಃ । ಭೂತಸ್ರಷ್ಟ್ರೇ ನಮಃ । ಪ್ರಭವೇ ನಮಃ । ಪಾಯತೇ ನಮಃ । ತಪತೇ ನಮಃ । ವರ್ಷತೇ

ಅವನೇ ರಕ್ಷಿಸುತ್ತಾನೆ. ಅವನೇ ಪರಿತಾಪಗೊಳಿಸುತ್ತಾನೆ. ತನ್ನ ಕಿರಣಗಳಿಂದ ಮಳೆಗರೆಯುತ್ತಾನೆ.

ಏಷ ಸುಪ್ತೇಷು ಜಾಗರ್ತಿ ಭೂತೇಷು ಪರಿನಿಷ್ಠಿತಃ ।
ಏಷ ಏವಾಗ್ನಿಹೋತ್ರಂ ಚ ಫಲಂ ಚೈವಾಗ್ನಿಹೋತ್ರಿಣಾಮ್ ॥೨೩॥

ಇವನೇ ಪ್ರಾಣಿಗಳ ಅಂತರ್ಯಾಮಿಯಾಗಿದ್ದುಕೊಂಡು ಪ್ರಾಣಿಗಳು ಮಲಗಿದ್ದಾಗಲೂ ತಾನು ಎಚ್ಚರವಾಗಿಯೇ ಇರುತ್ತಾನೆ. ಇವನೇ ಅಗ್ನಿಹೋತ್ರನು. ಅಗ್ನಿಹೋತೃಗಳಿಗೆ ಫಲವನ್ನು ಕೊಡುವವನೂ ಈ ಸೂರ್ಯಭಗವಂತನೇ ಆಗಿದ್ದಾನೆ.

ವೇದಾಶ್ಚ ಕ್ರತವಶ್ಚೈವ ಕ್ರತೂನಾಂ ಫಲಮೇವ ಚ ।
ಯಾನಿ ಕೃತ್ಯಾನಿ ಲೋಕೇಷು ಸರ್ವ ಏಷ ರವಿಃ ಪ್ರಭುಃ ॥೨೪॥

ಯಜ್ಞದಲ್ಲಿ ಹವಿರ್ಭಾಗವನ್ನು ತೆಗೆದುಕೊಳ್ಳುವ ದೇವತೆಯೂ, ಯಜ್ಞಗಳೂ ಮತ್ತು ಯಜ್ಞಗಳ ಫಲವೂ ಈ ಸೂರ್ಯನೇ ಆಗಿದ್ದಾನೆ. ಮೂರು ಲೋಕಗಳಲ್ಲಿ ಯಾವ ಯಾವ ಕರ್ಮಗಳಿವೆಯೋ ಆ ಎಲ್ಲ ಕರ್ಮಗಳಿಗೂ ಅನುಗುಣವಾದ ಫಲಗಳನ್ನು ದಯಪಾಲಿಸಲು ಈ ರವಿಯೊಬ್ಬನೇ ಸಮರ್ಥನು.

ಏನ ಮಾಪತ್ಸು ಕೃಚ್ಛ್ರೇಷು ಕಾನ್ತಾರೇಷು ಭಯೇಷು ಚ ।
ಕೀರ್ತಯನ್ಪುರುಷಃ ಕಶ್ಚಿನ್ನಾವಸೀದತಿ ರಾಘವ ॥೨೫॥

ರಾಘವ! ವಿಪತ್ತುಗಳಲ್ಲಿ, ಕಷ್ಟಗಳಲ್ಲಿ, ದುರ್ಗಮವಾದ ಕಾಡುದಾರಿಗಳಲ್ಲಿ, ಮಹಾಭಯದ ಸಂದರ್ಭಗಳಲ್ಲಿ ಯಾವ ಮನುಷ್ಯನಾಗಲೀ ಆದಿತ್ಯನ ಈ ಪವಿತ್ರಸ್ತೋತ್ರವನ್ನು ಕೀರ್ತನಮಾಡಿದರೆ–ವಿನಾಶಹೊಂದುವುದಿಲ್ಲ. ವಿಪತ್ತುಗಳಿಂದಲೂ ಕಷ್ಟಗಳಿಂದಲೂ ಪಾರಾಗುತ್ತಾನೆ.

ನಮಃ ಛ ಸುಪ್ತೇಷು ಜಾಗ್ರತೇ ನಮಃ ಛ ಭೂತೇಷು ಪರಿನಿಷ್ಠಿತಾಯ ನಮಃ ಛ ಅಗ್ನಿಹೋತ್ರಾಯ ನಮಃ । ಅಗ್ನಿಹೋತ್ರಿಣಾಂ ಫಲದಾಯಕಾಯ ನಮಃ । ಪರಮಸಮರ್ಥಾಯ ಭಗವತೇ ಬ್ರಹ್ಮಣೇ ನಮಃ - ಹೀಗೆ ಈ ೧೨೫ ಭಗವತ್ಪೂಜಾರಹಸ್ಯದ ನಾಮಮಂತ್ರಗಳಾಗಿವೆ. ಸರ್ವದೇವಾತ್ಮಕೋ ಹ್ಯೇಷಃ....ಎಂಬುದರಿಂದ ಲೋಕಸಾಕ್ಷಿಣೇ... ಎಂಬ ಪವಿತ್ರನಾಮದವರೆಗಿರುವ ೧೦೮ ನಾಮಗಳು ಆದಿತ್ಯಹೃದಯಸ್ತೋತ್ರದ ನಾಮಮಂತ್ರಗಳೆಂದು ಮತ್ತೊಬ್ಬ ವ್ಯಾಖ್ಯಾನಕಾರರ ಅಭಿಪ್ರಾಯವಾಗಿದೆ.

ಪೂಜಯಸ್ವೈನಮೇಕಾಗ್ರೋ ದೇವದೇವಂ ಜಗತ್ಪತಿಮ್ ।
ಏತತ್ತ್ರಿಗುಣಿತಂ ಜಪ್ತ್ವಾ ಯುದ್ಧೇಷು ವಿಜಯಿಷ್ಯಸಿ ॥೨೬॥

ರಾಘವ! ಆದುದರಿಂದ ನೀನು ಏಕಾಗ್ರಚಿತ್ತನಾಗಿ ದೇವದೇವನಾದ ಸೂರ್ಯನನ್ನು ಪೂಜಿಸು. ಈ ಆದಿತ್ಯಹೃದಯಸ್ತೋತ್ರವನ್ನು ನೀನು ಮೂರು ಬಾರಿ ಏಕಾಗ್ರಚಿತ್ತನಾಗಿ ಜಪಿಸಿದರೆ ಯುದ್ಧದಲ್ಲಿ ಜಯಶಾಲಿಯಾಗುವೆ.

ಅಸ್ಮಿನ್ ಕ್ಷಣೇ ಮಹಾಬಾಹೋ ರಾವಣಂ ತ್ವಂ ವಧಿಷ್ಯತಿ ।
ಏವಮುಕ್ತ್ವಾ ತದಾಗಸ್ತ್ಯೋ ಜಗಾಮ ಚ ಯಥಾಗತಮ್ ॥೨೭॥

ಮಹಾಬಾಹುವೇ! ನೀನು ಈ ಕ್ಷಣದಲ್ಲಿಯೇ ರಾವಣನನ್ನು ಸಂಹರಿಸುವೆ."

ಅಗಸ್ತ್ಯರು ಹೀಗೆ ಹೇಳಿ ಬಂದಲ್ಲಿಗೇ ಹಿಂದಿರುಗಿದರು.

ಏತಚ್ಛ್ರುತ್ವಾ ಮಹಾತೇಜಾ ನಷ್ಟಶೋಕೋಽಭವತ್ತದಾ ।
ಧಾರಯಾಮಾಸ ಸುಪ್ರೀತೋ ರಾಘವಃ ಪ್ರಯತಾತ್ಮವಾನ್ ॥೨೮॥

ತ್ರಿರಾಚಮ್ಯ ಶುಚಿರ್ಭೂತ್ವಾ ಧನುರಾದಾಯ ವೀರ್ಯವಾನ್ ।
ಆದಿತ್ಯಂ ಪ್ರೇಕ್ಷ್ಯ ಜಪ್ತ್ವಾ ತು ಪರಂ ಹರ್ಷಮವಾಪ್ತವಾನ್ ॥೨೯॥

ರಾವಣಂ ಪ್ರೇಕ್ಷ್ಯ ಹೃಷ್ಟಾತ್ಮಾ ಯುದ್ಧಾಯ ಸಮುಪಾಗಮತ್ ।
ಸರ್ವಯತ್ನೇನ ಮಹತಾ ವಧೇ ತಸ್ಯ ಧೃತೋಽಭವತ್ ॥೩೦॥

ಅಗಸ್ತ್ಯರು ಉಪದೇಶಿಸಿದ ಆದಿತ್ಯಹೃದಯಮಂತ್ರವನ್ನು ಕೇಳಿ ಮಹಾತೇಜಸ್ವಿಯಾದ ಶ್ರೀರಾಮನ ಶೋಕವು ದೂರವಾಯಿತು. ಅವನು ಪ್ರಸನ್ನಚಿತ್ತನಾಗಿ ಶುದ್ಧವಾದ ಮನಸ್ಸಿನಿಂದ ಆದಿತ್ಯಹೃದಯವನ್ನು ಅಗಸ್ತ್ಯರಿಂದ ಸ್ವೀಕರಿಸಿದನು. ಅನಂತರ ರಾಘವನು ಮೂರು ಬಾರಿ ಶುದ್ಧಾಚಮನಮಾಡಿ ಸೂರ್ಯನನ್ನೇ ನೋಡುತ್ತಾ ಮೂರು ಬಾರಿ ಈ ಸ್ತೋತ್ರವನ್ನು ಜಪಮಾಡಿ ಪರಮಾನಂದವನ್ನು ಪಡೆದನು. ಪರಾಕ್ರಮಿಯಾದ ಶ್ರೀರಾಮನು ಧನುಸ್ಸನ್ನು ಹಿಡಿದು ಯುದ್ಧಸನ್ನದ್ಧನಾಗಲು, ಯುದ್ಧಮಾಡಲೆಂದೇ ಬಂದ ರಾವಣನನ್ನು ನೋಡಿ ಮತ್ತೂ ಸಂತೋಷಿಸಿದನು. ಸರ್ವ

ಪ್ರಯತ್ನದಿಂದಲೂ ರಾವಣನನ್ನು ವಧಿಸಬೇಕೆಂದು ದೃಢನಿಶ್ಚಯವನ್ನು ಮಾಡಿದನು.

ಅಥ ರವಿರವದನ್ನಿರೀಕ್ಷ್ಯ ರಾಮಂ
ಮುದಿತಮನಾಃ ಪರಮಂ ಪ್ರಹೃಷ್ಯಮಾಣಃ ।
ನಿಶಿಚರಪತಿಸಂಕ್ಷಯಂ ವಿದಿತ್ವಾ
ಸುರಗಣಮಧ್ಯಗತೋ ವಚಸ್ತ್ವರೇತಿ ॥೩೧॥

ಆ ಸಮಯದಲ್ಲಿ ದೇವತೆಗಳ ಮಧ್ಯದಲ್ಲಿದ್ದ ಸೂರ್ಯದೇವನು ಪ್ರಸನ್ನನಾಗಿ ಶ್ರೀರಾಮಚಂದ್ರನನ್ನೇ ನೋಡುತ್ತಾ ನಿಶಾಚರರಾಜನಾದ ರಾವಣನಿಗೆ ಮರಣಕಾಲವು ಸನ್ನಿಹಿತವಾಗಿರುವುದೆಂಬುದನ್ನು ತಿಳಿದು ಹರ್ಷಪೂರ್ವಕವಾಗಿ 'ತ್ವರ! ರಾವಣನನ್ನು ಸಂಹರಿಸಲು ತ್ವರೆಮಾಡು'–ಎಂದು ರಾಘವನಿಗೆ ಹೇಳಿದನು.

೧೦೫ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೧೦೬ನೆಯ ಸರ್ಗ

ಶ್ರೀರಾಮನು ಮಾತಲಿಗೆ ಎಚ್ಚರವಾಗಿರುವಂತೆ ಹೇಳಿದುದು : ರಾವಣನಿಗೆ ಪರಾಜಯಸೂಚಕವಾಗಿ ಮತ್ತು ಶ್ರೀರಾಮನಿಗೆ ವಿಜಯಸೂಚಕವಾಗಿ ಸಂಭವಿಸಿದ ಶಕುನಗಳು

ಸ ರಥಂ ಸಾರಥಿರ್ಹೃಷ್ಟಃ ಪರಸೈನ್ಯಪ್ರಧರ್ಷಣಮ್ ।
ಗನ್ಧರ್ವನಗರಾಕಾರಂ ಸಮುಚ್ಛ್ರಿತಪತಾಕಿನಮ್ ॥೧॥

ಯುಕ್ತಂ ಪರಮಸಂಪನ್ನೈರ್ವಾಜಿಭಿರ್ಹೇಮಮಾಲಿಭಿಃ ।
ಯುದ್ಧೋಪಕರಣೈಃ ಪೂರ್ಣಂ ಪತಾಕಾಧ್ವಜಮಾಲಿನಮ್ ॥೨॥

ಗ್ರಸನ್ತಮಿವ ಚಾಕಾಶಂ ನಾದಯನ್ತಂ ವಸುಂಧರಾಮ್ ।
ಪ್ರಣಾಶಂ ಪರಸೈನ್ಯಾನಾಂ ಸ್ವಸೈನ್ಯಾನಾಂ ಪ್ರಹರ್ಷಣಮ್ ।
ರಾವಣಸ್ಯ ರಥಂ ಕ್ಷಿಪ್ರಂ ಚೋದಯಾಮಾಸ ಸಾರಥಿಃ ॥೩॥

ರಾವಣನ ಸಾರಥಿಯು ಪರಮಹೃಷ್ಟನಾಗಿ ರಾವಣನ ರಥವನ್ನು ಬಹಳ ಶೀಘ್ರವಾಗಿ ರಣರಂಗಕ್ಕೆ ನಡೆಸಿಕೊಂಡು ಹೋದನು . ಆ ಮಹಾರಥವು

ಶತ್ರುಸೈನ್ಯವನ್ನು ಆಕ್ರಮಿಸಲು ಸಮರ್ಥವಾಗಿದ್ದಿತು. ಗಂಧರ್ವನಗರದಂತೆ ಆಶ್ಚರ್ಯಕರವಾಗಿದ್ದಿತು. ಅದರ ಮೇಲೆ ಎತ್ತರವಾದ ಪತಾಕೆಗಳು ಹಾರಾಡುತ್ತಿದ್ದುವು. ಸುವರ್ಣದ ಮಾಲೆಗಳಿಂದ ಸಮಲಂಕೃತವಾಗಿದ್ದ ಕುದುರೆಗಳನ್ನು ಆ ರಥಕ್ಕೆ ಹೂಡಿದ್ದರು. ಅದು ಸಮಸ್ತವಾದ ಯುದ್ಧ ಸಾಮಗ್ರಿಗಳಿಂದಲೂ ಸಂಪನ್ನವಾಗಿದ್ದಿತು. ಧ್ವಜ-ಪತಾಕೆಗಳ ಮಾಲೆಯಿಂದ ಸಮಲಂಕೃತವಾಗಿದ್ದಿತು. ಆಕಾಶವನ್ನೇ ನುಂಗುತ್ತಾ ಹೋಗುತ್ತಿರುವಂತೆ ಭೂಮಿಯನ್ನು ಗಡ-ಗಡಾಶಬ್ದಗಳಿಂದ ನಿನಾದಿಸುತ್ತಿರುವುದೋ ಎಂಬಂತೆ ಕಾಣುತ್ತಿದ್ದಿತು. ಆ ಮಹಾರಥವು ಶತ್ರುಸೈನ್ಯಗಳ ನಾಶಕವೂ ತನ್ನ ಸೈನ್ಯಕ್ಕೆ ಹರ್ಷದಾಯಕವೂ ಆಗಿದ್ದಿತು. ಹೀಗಿದ್ದ ರಥವನ್ನು ರಾವಣನ ಸಾರಥಿಯು ರಣರಂಗಕ್ಕೊಯ್ದನು.

ದೊಡ್ಡದಾದ ಧ್ವಜದಿಂದ ಸಮಲಂಕೃತವಾಗಿದ್ದ, ಶೀಘ್ರವಾಗಿ ತನ್ನ ಕಡೆಗೇ ಬರುತ್ತಿದ್ದ, ಗಟ್ಟಿಯಾಗಿ ಶಬ್ದಮಾಡುತ್ತಿದ್ದ ರಾಕ್ಷಸರಾಜನಾದ ರಾವಣನ ರಥವನ್ನು ನರರಾಜನಾದ ಶ್ರೀರಾಮನು ನೋಡಿದನು. ರಾವಣನ ಆ ರಥವು ಕಪ್ಪುಕುದುರೆಗಳಿಂದ ಹೂಡಲ್ಪಟ್ಟಿದ್ದಿತು. ಅದರ ಕಾಂತಿಯು ಭಯಂಕರವಾಗಿದ್ದಿತು. ಆಕಾಶದಲ್ಲಿ ದೇದೀಪ್ಯಮಾನವಾಗಿ ಕಾಣುವ ಸೂರ್ಯನ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಕೂಡಿರುವ ವಿಮಾನ ದಂತೆಯೇ ರಾವಣನ ಆ ರಥವು ಕಂಗೊಳಿಸುತ್ತಿದ್ದಿತು. ರಥದ ಮೇಲಿದ್ದ ಪತಾಕೆಗಳು ಮಿಂಚಿನಂತೆಯೇ ಕಾಣುತ್ತಿದ್ದುವು. ಅದರಲ್ಲಿದ್ದ ರಾವಣನ ಧನುಸ್ಸು ಇಂದ್ರನ ಧನುಸ್ಸಿನಂತೆ ಮಹಾಪ್ರಭೆಯಿಂದ ಕೂಡಿದ್ದು ಬಾಣಗಳ ಮಳೆಗರೆಯುತ್ತಾ ಜಲಧಾರೆಗಳನ್ನು ಸುರಿಸುವ ಕಾರ್ಮುಗಿಲಿನಂತೆಯೇ ಕಾಣುತ್ತಿದ್ದಿತು. ವಜ್ರಾಯುಧದಿಂದ ಪ್ರಹರಿಸಲ್ಪಟ್ಟು ಸೀಳಿಹೋಗಿ ಕೆಳಕ್ಕೆ ಬೀಳುತ್ತಿರುವ ಪರ್ವತದಂತೆ ಶಬ್ದಮಾಡುತ್ತಿದ್ದ ಮೇಘಸದೃಶವಾದ ಶತ್ರುವಿನ ರಥವು ವೇಗವಾಗಿ ತನ್ನ ಕಡೆಗೇ ಬರುತ್ತಿರುವುದನ್ನು ಕಂಡು ಬಾಲ ಚಂದ್ರನಂತೆ (ಬಿದಿಗೆಯ ಚಂದ್ರನಂತೆ) ಬಗ್ಗಿದ್ದ ತನ್ನ ಧನುಸ್ಸನ್ನು ಟೇಂಕರಿಸುತ್ತಾ ಶ್ರೀರಾಮನು ಇಂದ್ರನ ಸಾರಥಿಯಾದ ಮಾತಲಿಗೆ ಹೇಳಿದನು :

“ಮಾತಲಿಯೇ! ಶತ್ರುವಾದ ರಾವಣನ ರಥವು ಬಹಳ ವೇಗದಿಂದ ಬರುತ್ತಿರುವುದನ್ನು ನೋಡು. ರಾವಣನು ಬಹಳ ವೇಗವಾಗಿ ಬಲಪಾರ್ಶ್ವ

ದಿಂದ ನನ್ನನ್ನು ಆಕ್ರಮಿಸಲು ಬರುತ್ತಿರುವುದನ್ನು ನೋಡಿದರೆ ಈ ಯುದ್ಧ ದಲ್ಲಿ ತನ್ನನ್ನು ಸಂಹರಿಸಿಕೊಳ್ಳಬೇಕೆಂದು ಮನಸ್ಸಿನಲ್ಲಿ ದೃಢಪಡಿಸಿಕೊಂಡು ಸಮರಾಂಗಣಕ್ಕೆ ಬಂದಂತಿದೆ. ಆದುದರಿಂದ ನೀನು ಅಪ್ರಮತ್ತನಾಗಿ ಕುಳಿತುಕೊ. ನಮ್ಮ ರಥವನ್ನು ಶತ್ರುವಿಗೆ ಎದುರಾಗಿ ನಿಲ್ಲಿಸು. ಆಕಾಶದಲ್ಲಿ ಗಾಢವಾಗಿ ಕವಿದಿರುವ ಮೇಘವನ್ನು ಬಿರುಗಾಳಿಯು ಚದುರಿಸಿಬಿಡು ವಂತೆ–ಶತ್ರುವನ್ನು ಧ್ವಂಸಮಾಡಲು ಉದ್ದೇಶಿಸಿದ್ದೇನೆ. ಭಯವನ್ನೂ ಭ್ರಾಂತಿಯನ್ನೂ ತೊರೆದು, ಮನಸ್ಸನ್ನೂ ಕಣ್ಣುಗಳನ್ನೂ ಲಕ್ಷ್ಯದ ಮೇಲೆ ಸ್ಥಿರಗೊಳಿಸಿ ಕಡಿವಾಣಗಳಿಂದ ಕುದುರೆಗಳನ್ನು ನಿಯಂತ್ರಿಸುತ್ತಾ ರಥವನ್ನು ಬಹಳ ಬೇಗ ಮುನ್ನಡೆಸು. ರಥದಲ್ಲಿ ದೇವೇಂದ್ರನು ಕುಳಿತಿರುವಾಗ ಇದನ್ನು ನಡೆಸಿದ ಅಭ್ಯಾಸವು ನಿನಗಿದೆ. ಆದುದರಿಂದ ನಿನಗೆ ನಾನು ಈ ರಥವನ್ನು ಹೇಗೆ ನಡೆಸಬೇಕೆಂಬುದರ ವಿಷಯವಾಗಿ ಶಿಕ್ಷಣಕೊಡುವ ಅಗತ್ಯವಿಲ್ಲ. ನಾನು ಏಕಾಗ್ರಚಿತ್ತನಾಗಿ ಯುದ್ಧಮಾಡಲು ಬಯಸಿದ್ದೇನೆ. ಆದುದರಿಂದ ನಿನ್ನ ಕರ್ತವ್ಯವೇನೆಂಬುದನ್ನು ಜ್ಞಾಪಕಕ್ಕೆ ತರುತ್ತಿದ್ದೇನೆ. ಅಷ್ಟೇ ಹೊರತು ಶಿಕ್ಷಣಕೊಡುತ್ತಿಲ್ಲ.”

ಶ್ರೀರಾಮನ ಆ ಮಾತನ್ನು ಕೇಳಿ ಶ್ರೇಷ್ಠನಾದ, ದೇವಸಾರಥಿಯಾದ ಮಾತಲಿಯು ಸಂತುಷ್ಟನಾಗಿ ರಾವಣನ ಮಹಾರಥವನ್ನು ಬಲಕ್ಕೆ ಬಿಟ್ಟು ಕೊಂಡು ಮುಂದೆಹೋದನು. ಹಾಗೆ ರಥವನ್ನು ಮಾತಲಿಯು ಓಡಿಸಿದಾಗ ಚಕ್ರಗಳಿಂದ ಹೊರಬಂದ ಪರ್ವತೋಪಮವಾದ ಧೂಳಿಯು ರಾವಣನನ್ನು ನಡುಗಿಸಿಬಿಟ್ಟಿತು. ಅದರಿಂದ ಕ್ರುದ್ಧನಾದ ರಾವಣನ ಕಣ್ಣುಗಳು ಕೆಂಪಾ ದುವು. ಕಣ್ಣುಗಳನ್ನರಳಿಸಿಕೊಂಡು ತನ್ನೆದುರಾಗಿ ರಥದಲ್ಲಿ ಕುಳಿತಿದ್ದ ಶ್ರೀರಾಮನನ್ನು ಅವನು ಬಾಣಗಳಿಂದ ಪ್ರಹರಿಸಿದನು. ಆ ಆಕ್ರಮಣದಿಂದ ಶ್ರೀರಾಮನಿಗೆ ಮಹಾಕೋಪವುಂಟಾಯಿತು. ಕೋಪದೊಡನೆ ಧೈರ್ಯವನ್ನೂ ಆಶ್ರಯಿಸಿ ಅತ್ಯಂತವೇಗಯುಕ್ತವಾಗಿದ್ದ ಇಂದ್ರನ ಧನುಸ್ಸನ್ನು ಕೈಗೆತ್ತಿಕೊಂಡನು. ಜೊತೆಯಲ್ಲಿಯೇ ಸೂರ್ಯಕಿರಣಗಳ ಪ್ರಭೆಯಂತೆ ಮಹಾಪ್ರಭೆಯಿಂದ ಕೂಡಿದ್ದ ಮಹಾವೇಗವುಳ್ಳ ಬಾಣಗಳನ್ನು ಕೈಗೆತ್ತಿಕೊಂಡನು. ಒಬ್ಬರು ಮತ್ತೊಬ್ಬರನ್ನು ಸಂಹರಿಸಬೇಕೆಂದಿದ್ದ ರಾಮ-ರಾವಣರಿಬ್ಬರ ನಡುವೆ ಭಯಂಕರವಾದ ಯುದ್ಧವು ಪ್ರಾರಂಭ

ವಾಯಿತು. ಇಬ್ಬರೂ ಮದಿಸಿದ ಎರಡು ಸಿಂಹಗಳಂತೆ ಎದುರು-ಬದುರಾಗಿ ರಣಾಂಗಣದಲ್ಲಿ ನಿಂತಿದ್ದರು. ರಾವಣನ ವಿನಾಶವನ್ನೇ ಬಯಸಿದ್ದ ಗಂಧರ್ವ ಸಹಿತರಾದ ದೇವತೆಗಳೂ, ಸಿದ್ಧರೂ, ಮಹರ್ಷಿಗಳೂ ರಾಮ-ರಾವಣರ ದ್ವೈರಥಯುದ್ಧವನ್ನು ನೋಡಲು ಒಂದೆಡೆಯಲ್ಲಿ ಸೇರಿದರು. ಆ ಸಮಯದಲ್ಲಿ ರಾವಣನ ವಿನಾಶವನ್ನೂ ಶ್ರೀರಾಮನ ಅಭ್ಯುದಯವನ್ನೂ ಸೂಚಿಸುವ ಭಯಂಕರವಾದ ಮತ್ತು ರೋಮಾಂಚವನ್ನುಂಟುಮಾಡುವ ಉತ್ಪಾತಗಳು ಕಾಣಿಸಿಕೊಂಡುವು.

ಮೇಘಗಳು ರಾವಣನ ರಥದ ಮೇಲೆ ರಕ್ತಧಾರೆಯನ್ನು ಸುರಿಸುತ್ತಿದ್ದುವು. ವೇಗವಾಗಿ ಸುತ್ತುತ್ತಿದ್ದ ಸುಂಟರಗಾಳಿಗಳು ಅವನಿಗೆ ಎಡಮುಖವಾಗಿ ಬೀಸುತ್ತಿದ್ದುವು. ಆಕಾಶದಲ್ಲಿ ಹಾರಾಡುತ್ತಿದ್ದ ರಣಹದ್ದುಗಳು ರಾವಣನ ರಥವು ಹೋಗುತ್ತಿದ್ದ ಮಾರ್ಗವನ್ನೇ ಅನುಸರಿಸಿ ಹೋಗುತ್ತಿದ್ದುವು. ಕೆಂಪುದಾಸವಾಳದಂತೆ ಕೆಂಪಾದ ಛಾಯೆಯುಳ್ಳ ಸಂಧ್ಯಾಕಾಲದಿಂದ ಲಂಕೆಯು ಸಮಾವೃತವಾಯಿತು. ಲಂಕಾಪಟ್ಟಣದ ಸುತ್ತಮುತ್ತಲ ಪ್ರದೇಶಗಳು ರಾತ್ರಿಯಂತೆ ಹಗಲಿನಲ್ಲಿಯೂ ದೀಪಗಳಿಂದ ಬೆಳಗುತ್ತಿರುವುದೋ ಎಂಬಂತೆ ಕಾಣುತ್ತಿದ್ದುವು. ರಾವಣನಿಗೆ ಅಶುಭಸೂಚಕವಾದ ಮಹೋಲ್ಕೆಗಳು ಸಿಡಿಲಿನ ಶಬ್ದದೊಡನೆ ಗಟ್ಟಿಯಾಗಿ ಧ್ವನಿಮಾಡುತ್ತಾ ರಾವಣನ ಮುಂಭಾಗದಲ್ಲಿ ಬೀಳುತ್ತಿದ್ದುವು. ಅದನ್ನು ನೋಡಿದ ರಾಕ್ಷಸರು ವಿಷಣ್ಣರಾದರು. ರಾವಣನು ರಥದಲ್ಲಿ ಕುಳಿತು ಮುನ್ನಡೆಯುತ್ತಿದ್ದಂತೆ ಭೂಮಿಯೂ ಕಂಪಿಸುತ್ತಿದ್ದಿತು. ವಾನರರೊಡನೆ ಯುದ್ಧಮಾಡುತ್ತಿದ್ದ ರಾಕ್ಷಸರ ತೋಳುಗಳನ್ನು ಯಾರೋ ಹಿಡಿದುಕೊಂಡಿರುವಂತೆ ಭಾಸವಾಗುತ್ತಿದ್ದಿತು. ಪರ್ವತದಿಂದ ಗೈರಿಕಾದಿ ಧಾತುಗಳು ಹರಿದು ಬರುವಂತೆ–ರಾವಣನ ಅಂಗಗಳಲ್ಲಿ ಕೆಂಪು-ಹಳದಿ-ಬಿಳುಪು ಮತ್ತು ಕಪ್ಪುಬಣ್ಣಗಳಿಂದ ಕೂಡಿದ ಸೂರ್ಯನ ಕಿರಣಗಳು ಕಾಣಿಸಿಕೊಂಡುವು. ಹೆಣ್ಣುನರಿಗಳು ರೋಷಾವೇಶದಿಂದ ಕೂಡಿದ ರಾವಣನ ಮುಖವನ್ನೇ ನೋಡುತ್ತಾ, ಮುಖಗಳಿಂದ ಬೆಂಕಿಯನ್ನು ಕಕ್ಕುತ್ತಾ ಅಮಂಗಲಸೂಚಕವಾಗಿ ಧ್ವನಿಮಾಡುತ್ತಾ ಹೋಗುತ್ತಿದ್ದುವು. ಅವುಗಳ ಹಿಂದೆ ರಣಹದ್ದುಗಳೂ ಗುಂಪು-ಗುಂಪಾಗಿ ಹೋಗುತ್ತಿದ್ದುವು. ರಣರಂಗದಲ್ಲಿ ಬೀಸುತ್ತಿದ್ದ ಗಾಳಿಯು ಧೂಳನ್ನೆಬ್ಬಿಸಿ

ರಾವಣನ ಕಣ್ಣುಗಳು ಕಾಣದಂತೆ ಮಾಡಿ ಪ್ರತಿಕೂಲವಾಗಿಯೂ ಬೀಸುತ್ತಿದ್ದಿತು. ಆಕಾಶದಲ್ಲಿ ಮೋಡಗಳೇ ಇಲ್ಲದಿದ್ದರೂ ರಾವಣನ ಸೈನ್ಯದ ಸುತ್ತಲೂ ದುಃಸಹವಾದ ಮತ್ತು ಕಠೋರವಾದ ಸಿಡಿಲುಗಳು ಬೀಳತೊಡಗಿದುವು. ದಿಕ್ಕುಗಳಲ್ಲಿಯೂ ಮತ್ತು ಉಪದಿಕ್ಕುಗಳಲ್ಲಿಯೂ ಮಹತ್ತರವಾದ ಕತ್ತಲು ಕವಿಯಿತು. ದೊಡ್ಡದಾದ ಧೂಳಿನ ಮಳೆಯೇ ಬೀಳುತ್ತಿದ್ದುದರಿಂದ ಆಕಾಶವನ್ನು ನೋಡಲೂ ಸಾಧ್ಯವಾಗುತ್ತಿರಲಿಲ್ಲ. ಭಯಂಕರವಾಗಿ ಶಬ್ದಮಾಡು ತ್ತಿದ್ದ ದಾರುಣವಾದ ಸಾರಿಕಾಪಕ್ಷಿಗಳು ಆಕಾಶದಲ್ಲಿ ಪರಸ್ಪರವಾಗಿ ಜಗಳವಾಡುತ್ತಾ ರಾವಣನ ರಥದ ಮೇಲೆ ಬೀಳುತ್ತಿದ್ದುವು. ರಾವಣನ ಕುದುರೆಗಳು ಕಟಿಪ್ರದೇಶಗಳಿಂದ ಬೆಂಕಿಯ ಕಿಡಿಗಳನ್ನೂ ಕಣ್ಣುಗಳಿಂದ ನೀರನ್ನೂ ಸತತವಾಗಿ ಸುರಿಸುತ್ತಿದ್ದುವು. ಹೀಗೆ ಆ ಕುದುರೆಗಳು ಬೆಂಕಿಯನ್ನೂ ಮತ್ತು ನೀರನ್ನೂ ಏಕಕಾಲದಲ್ಲಿ ಹೊರಗೆಡಹುತ್ತಿದ್ದುವು. ಇಂತಹುದೇ ಅನೇಕ ಪ್ರಕಾರವಾದ, ಭಯಾವಹವಾದ, ದಾರುಣವಾದ ಉತ್ಪಾತಗಳು ರಾವಣನ ವಿನಾಶವನ್ನು ಸೂಚಿಸಲೋ ಎಂಬಂತೆ ಕಾಣಿಸಿಕೊಂಡುವು. ರಾಮನ ಸುತ್ತಲೂ ಅನೇಕ ಪ್ರಕಾರವಾದ, ಸೌಮ್ಯವಾದ, ಮಂಗಳಸೂಚಕವಾದ ಮತ್ತು ವಿಜಯಸೂಚಕವಾದ ಶುಭಶಕುನಗಳು ಕಾಣಿಸಿಕೊಂಡುವು. ಶ್ರೀರಾಮನು ತನ್ನ ವಿಜಯಕ್ಕೆ ಸೂಚಕವಾದ ಆ ಶುಭಶಕುನಗಳನ್ನು ನೋಡಿ ಪರಮಸಂತುಷ್ಟನಾದನಲ್ಲದೇ ಶತ್ರುವಾದ ರಾವಣನು ಹತನಾದನೆಂದೇ ಭಾವಿಸಿದನು.

ಶಕುನಶಾಸ್ತ್ರದಲ್ಲಿ ಮಹಾಪಂಡಿತನಾಗಿದ್ದ ಶ್ರೀರಾಮನು ತನಗೆ ಸಂಬಂಧಿಸಿದಂತೆ ಕಾಣಿಸಿಕೊಳ್ಳುತ್ತಿದ್ದ ಶುಭಶಕುನಗಳನ್ನು ವೀಕ್ಷಿಸಿ ಪರಮ ಹೃಷ್ಟನಾದನು. ಅವನ ಮನಸ್ಸಿಗೂ ಪರಮಾನಂದವಾಯಿತು. ಯುದ್ಧದಲ್ಲಿ ಇನ್ನೂ ಅಧಿಕವಾದ ಪರಾಕ್ರಮವನ್ನು ತೋರತೊಡಗಿದನು.

ತಿ೦೬ನೆಯ ಸರ್ಗವು ಮುಗಿಯಿತು.

ರಾಮ-ರಾವಣರ ಘೋರಯುದ್ಧ

ತತಃ ಪ್ರವೃತ್ತಂ ಸುಕ್ರೂರಂ ರಾಮರಾವಣಯೋಸ್ತದಾ ।
ಸುಮಹದ್ದ್ವೈರಥಂ ಯುದ್ಧಂ ಸರ್ವಲೋಕಭಯಾವಹಮ್ ॥೧॥

ಬಳಿಕ ರಾಮನಿಗೂ ಮತ್ತು ರಾವಣನಿಗೂ ಸಮಸ್ತಲೋಕಗಳಿಗೂ ಭಯಾವಹವಾಗಿದ್ದ ಅತ್ಯಂತಕ್ರೂರವಾದ ದೊಡ್ಡ ದ್ವಂದ್ವಯುದ್ಧವು ಪ್ರಾರಂಭವಾಯಿತು.

ರಾಕ್ಷಸರ ಮತ್ತು ವಾನರರ ಮಹಾಸೈನ್ಯಗಳು ಕೈಗಳಲ್ಲಿ ಆಯುಧಗಳನ್ನು ಹಿಡಿದುಕೊಂಡಿದ್ದರೂ ನಿಶ್ಚೇಷ್ಟವಾಗಿದ್ದುವು. ಯುದ್ಧಮಾಡಲು ತೊಡಗಲಿಲ್ಲ. ಮಹಾಬಲಿಷ್ಠರಾದ ನರ-ರಾಕ್ಷಸರು ಯುದ್ಧಮಾಡುತ್ತಿರುವುದನ್ನು ನೋಡಿ ಎಲ್ಲರ ಮನಸ್ಸುಗಳೂ ಅತ್ತಕಡೆಗೇ ಸಾಗಿದುವು. ಎಲ್ಲರೂ ಆಶ್ಚರ್ಯಚಕಿತರಾಗಿ ರಾಮ-ರಾವಣರ ಯುದ್ಧವನ್ನು ನೋಡುತ್ತಿದ್ದರು. ವಾನರ-ರಾಕ್ಷಸಸೈನಿಕರು ನಾನಾವಿಧವಾದ ಆಯುಧಗಳನ್ನು ಕೈಗಳಲ್ಲಿ ಹಿಡಿದಿದ್ದರೂ ಯುದ್ಧಮಾಡುವುದರಲ್ಲಿ ಅವರಿಗೆ ಮನಸ್ಸೇ ಇರಲಿಲ್ಲ. ಅವರ ಬುದ್ಧಿಯು ರಾಮ-ರಾವಣರ ಯುದ್ಧವನ್ನು ನೋಡಿ ವಿಸ್ಮಯಗೊಂಡಿದ್ದಿತು. ಅವರು ಒಬ್ಬರು ಮತ್ತೊಬ್ಬರ ಮೇಲೆ ಬೀಳಹೋಗದೇ ನರ-ರಾಕ್ಷಸರ ಯುದ್ಧವನ್ನೇ ರಾಕ್ಷಸ-ವಾನರಸೈನಿಕರು ನೋಡುತ್ತಾ ನಿಂತರು. ವಿಸ್ಮಿತವಾದ ಕಣ್ಣುಗಳಿಂದ ರಾಕ್ಷಸರು ರಾವಣನನ್ನೂ ವಾನರರು ಶ್ರೀರಾಮನನ್ನೂ ಕಕ್ಕಾಬಿಕ್ಕಿಯಾಗಿ ನೋಡುತ್ತಿದ್ದರು. ಅವರ ಕೈ-ಕಾಲುಗಳಾಗಲೀ ಕಣ್ಣುಗಳಾಗಲೀ ಸ್ವಲ್ಪವಾದರೂ ಅಲುಗಾಡುತ್ತಲೇ ಇರಲಿಲ್ಲ. ಎಲ್ಲರೂ ರಾಮ-ರಾವಣರ ಕಡೆಗೇ ನೆಟ್ಟದೃಷ್ಟಿಯುಳ್ಳವರಾಗಿದ್ದರು. ಆದುದರಿಂದ ವಾನರ-ರಾಕ್ಷಸಸೈನ್ಯವು ಚಿತ್ರಪಟದಲ್ಲಿರುವಂತೆಯೇ ಕಾಣುತ್ತಿದ್ದಿತು. ರಾಮ-ರಾವಣರಿಬ್ಬರೂ ಆ ಸಮಯದಲ್ಲಿ ಕಂಡುಬಂದ ನಿಮಿತ್ತಗಳನ್ನು ನೋಡಿ ಅದರಿಂದ ಮುಂದೆ ಒದಗುವ ಫಲವೇನೆಂಬುದನ್ನು ನಿಶ್ಚಯಿಸಿಕೊಂಡು ಯುದ್ಧಮಾಡುವುದರಲ್ಲಿಯೇ ಸ್ಥಿರವಾದ ಬುದ್ಧಿಯುಳ್ಳವರಾದರು. ಇಬ್ಬರೂ

ಕೋಪಾವಿಷ್ಟರಾಗಿ ಭಯವೆಂಬುದನ್ನೇ ಕಾಣದವರಂತೆ ಯುದ್ಧದಲ್ಲಿ ತೊಡಗಿದ್ದರು.

ಜೇತವ್ಯಮಿತಿ ಕಾಕುತ್ಸ್ಥೋ ಮರ್ತವ್ಯಮಿತಿ ರಾವಣಃ ।
ಧೃತೌ ಸ್ವವೀರ್ಯಸರ್ವಸ್ವಂ ಯುದ್ಧೇऽದರ್ಶಯತಾಂ ತದಾ ॥೭॥

ಜಯಿಸಬೇಕೆಂಬ ನಿಶ್ಚಯದಿಂದ ಶ್ರೀರಾಮನು ಯುದ್ಧಮಾಡುತ್ತಿದ್ದನು. ಮರಣಹೊಂದಬೇಕೆಂಬ ನಿಶ್ಚಯದಿಂದ ರಾವಣನು ಯುದ್ಧಮಾಡುತ್ತಿದ್ದನು. ಅವರಿಬ್ಬರೂ ತಮ್ಮ ಪರಾಕ್ರಮವೆಲ್ಲವನ್ನೂ ಪರಸ್ಪರವಾಗಿ ಯುದ್ಧದಲ್ಲಿ ಪ್ರದರ್ಶಿಸುತ್ತಿದ್ದರು.

ಹೀಗೆ ಒಬ್ಬೊಬ್ಬರೂ ತಮ್ಮ ಅತುಲಪರಾಕ್ರಮವನ್ನು ತೋರುತ್ತಾ ಯುದ್ಧಮಾಡುತ್ತಿದ್ದಾಗ ವೀರ್ಯವಂತನಾದ ದಶಗ್ರೀವನು ಪರಮಕ್ರುದ್ಧನಾಗಿ ಶ್ರೀರಾಮನ ರಥದಲ್ಲಿದ್ದ ಧ್ವಜವನ್ನೇ ಲಕ್ಷ್ಯವನ್ನಾಗಿಟ್ಟುಕೊಂಡು ಅನೇಕ ಬಾಣಗಳನ್ನು ಪ್ರಯೋಗಿಸಿದನು. ಆದರೆ ರಾವಣನು ಬಿಟ್ಟ ಬಾಣಗಳು ಇಂದ್ರನ ರಥದ ಮಧ್ಯಭಾಗದಲ್ಲಿದ್ದ ಧ್ವಜದ ಬಳಿಗೆ ಹೋಗಲಾಗದೇ ರಥದ ಅದ್ಭುತವಾದ ಶಕ್ತಿಯನ್ನು ಪರಾಮರ್ಶಿಸಿ ನೆಲದ ಮೇಲೆ ಬಿದ್ದುಹೋದುವು. ಅದರಿಂದ ರಾಮನೂ ಕ್ರುದ್ಧನಾಗಿ ಪ್ರತೀಕಾರಮಾಡಬೇಕೆಂಬ ಛಲದಿಂದ ಬಾಣವನ್ನು ಧನುಸ್ಸಿನಲ್ಲಿ ಹೂಡಿ ಕಿವಿಯವರೆಗೂ ನಾಣನ್ನು ಸೆಳೆದನು. ಮಹಾಸರ್ಪದಂತೆ ಸಹಿಸಲು ಅಸಾಧ್ಯವಾಗಿದ್ದ, ತನ್ನದೇ ಆದ ತೇಜಸ್ಸಿನಿಂದ ಪ್ರಜ್ವಲಿಸುತ್ತಿದ್ದ ಆ ಬಾಣವನ್ನು ರಾವಣನ ರಥದಲ್ಲಿದ್ದ ಧ್ವಜಕ್ಕೆ ಗುರಿಯಿಟ್ಟು ಪ್ರಹರಿಸಿದನು. ಅತ್ಯಂತನಿಶಿತವಾಗಿದ್ದ ಆ ಬಾಣವು ರಾವಣನ ರಥದಲ್ಲಿದ್ದ ಧ್ವಜವನ್ನು ಕತ್ತರಿಸಿ ಭೂಮಿಯಲ್ಲಿ ಬಿದ್ದಿತು.

ರಥದ ಮೇಲಿದ್ದ ಧ್ವಜವು ರಾಮನ ಬಾಣದಿಂದ ಕತ್ತರಿಸಲ್ಪಟ್ಟುದನ್ನು ನೋಡಿ ಮಹಾಬಲಿಷ್ಠನಾದ ರಾವಣನು ಕ್ರೋಧದಿಂದಲೂ ಅಸಹನೆಯಿಂದಲೂ ಶತ್ರುಪಕ್ಷವನ್ನು ಸುಟ್ಟುಬಿಡುವನೋ ಎಂಬಂತೆ ಪ್ರಜ್ವಲಿಸಿದನು. ಬಳಿಕ ರೋಷಾವಿಷ್ಟನಾದ ರಾವಣನು ಬಾಣಗಳ ಮಳೆಯನ್ನೇ ಶ್ರೀರಾಮನ ಮೇಲೆ ಸುರಿಸಿದನು. ಶ್ರೀರಾಮನ ರಥದಲ್ಲಿದ್ದ ಕುದುರೆಗಳನ್ನು ಪ್ರದೀಪ್ತವಾದ ಬಾಣಗಳಿಂದ ಪ್ರಹರಿಸಿದನು. ಆದರೆ ಆ ದಿವ್ಯಾಶ್ವಗಳು

ನಿಂತ ಜಾಗದಿಂದ ಕದಲಲೂ ಇಲ್ಲ ; ಗಾಬರಿಗೊಂಡು ಭ್ರಾಂತವೂ ಆಗಲಿಲ್ಲ. ತಾವರೆಯ ದಂಟುಗಳಿಂದ ಪ್ರಹರಿಸಲ್ಪಟ್ಟುವೋ ಎಂಬಂತೆ ಸ್ವಸ್ಥವಾದ ಮನಸ್ಸಿನಿಂದಿದ್ದುವು. ತನ್ನ ಬಾಣಗಳ ಪ್ರಹಾರದಿಂದ ಶ್ರೀರಾಮನ ರಥದಲ್ಲಿದ್ದ ಕುದುರೆಗಳು ಸ್ವಲ್ಪವಾದರೂ ಗಾಬರಿಗೊಳ್ಳದೇ ಇದ್ದುದನ್ನು ಕಂಡು ರಾವಣನು ಪರಮಕ್ರುದ್ಧನಾಗಿ ಪುನಃ ಅವುಗಳ ಮೇಲೆ ಬಾಣಗಳ ಮಳೆಗರೆದನು. ಅಷ್ಟು ಮಾತ್ರವಲ್ಲ ; ಗದೆಗಳನ್ನೂ, ಪರಿಘಾಯುಧಗಳನ್ನೂ, ಚಕ್ರಗಳನ್ನೂ, ಮುಸಲಗಳನ್ನೂ, ಗಿರಿಶಿಖರಗಳನ್ನೂ, ವೃಕ್ಷಗಳನ್ನೂ, ಶೂಲಗಳನ್ನೂ, ಗಂಡುಗೊಡಲಿಗಳನ್ನೂ, ಮಾಯೆಯಿಂದ ನಿರ್ಮಿಸಲ್ಪಟ್ಟ ಹಲವು ಬಗೆಯ ಅಸ್ತ್ರ-ಶಸ್ತ್ರಗಳನ್ನೂ ರಾವಣನು ಸ್ವಲ್ಪವಾದರೂ ಆಯಾಸಗೊಳ್ಳದೇ ಸಾವಿರಾರು ಸಂಖ್ಯೆಯಲ್ಲಿ ಕುದುರೆಗಳ ಮೇಲೆ ಪ್ರಯೋಗಿಸಿದನು. ಯುದ್ಧಭೂಮಿಯಲ್ಲಿ ಹಲವಾರು ಅಸ್ತ್ರ-ಶಸ್ತ್ರಗಳ ವರ್ಷವು ಭಯಾನಕವೂ ಭಯಂಕರಶಬ್ದವುಳ್ಳದ್ದೂ, ಪೀಡಾಜನಕವೂ, ಸಂಕುಲವೂ ಆಗಿದ್ದಿತು. ಆ ಶರವರ್ಷವು ಶ್ರೀರಾಮನ ರಥವನ್ನು ಬಿಟ್ಟು ಉಳಿದ ಎಲ್ಲ ಕಡೆಗಳಲ್ಲಿಯೂ ಬೀಳತೊಡಗಿತು. ವಾನರಸೈನಿಕರನ್ನೂ ಆವರಿಸಿತು. ಆಕಾಶವನ್ನೂ ತುಂಬಿಬಿಟ್ಟಿತು. ದಶಗ್ರೀವನು ಪ್ರಾಣದ ಹಂಗನ್ನು ತೊರೆದು ಸತತವಾಗಿ ಬಾಣಪ್ರಯೋಗವನ್ನು ಮಾಡುತ್ತಲೇ ಇದ್ದನು. ರಾವಣನು ವಿಶೇಷಪ್ರಯತ್ನದಿಂದ ಬಾಣಗಳನ್ನು ನಿರಂತರವಾಗಿ ಬಿಡುತ್ತಿರುವುದನ್ನು ಕಂಡು ಶ್ರೀರಾಮನು ನಗುತ್ತಿರುವನೋ ಎಂಬ ಮುಖಭಾವದಿಂದ ಕೂಡಿದವನಾಗಿ ನಿಶಿತವಾದ ಬಾಣಗಳನ್ನು ಧನುಸ್ಸಿನಲ್ಲಿ ಅನುಸಂಧಾನಮಾಡಿ ನೂರಾರು-ಸಾವಿರಾರು ಬಾಣಗಳನ್ನು ಎಡೆಬಿಡದೇ ರಾವಣನ ಮೇಲೆ ಬಿಡತೊಡಗಿದನು. ಹಾಗೆ ಸತತವಾಗಿ ಬಾಣಗಳನ್ನು ಬಿಡುತ್ತಿದ್ದುದನ್ನು ಕಂಡು ರಾವಣನು ಪುನಃ ಬಾಣಗಳ ಪ್ರಯೋಗದಿಂದ ಆಕಾಶವನ್ನು ತುಂಬಿದನು. ಅವರಿಬ್ಬರೂ ಬಿಡುತ್ತಿದ್ದ ಜಾಜ್ವಲ್ಯಮಾನವಾದ ಬಾಣಗಳಿಂದ ಆಕಾಶವು ಬಾಣಗಳಿಂದಲೇ ಬಂಧಿಸಲ್ಪಟ್ಟಿರುವುದೋ ಎಂಬಂತೆ ಕಾಣುತ್ತಿದ್ದು ಬಾಣಗಳ ಆ ಸಮೂಹವು ಎರಡನೆಯ ಆಕಾಶದಂತೆಯೇ ಕಾಣುತ್ತಿದ್ದಿತು. ಅವರು ಬಿಡುತ್ತಿದ್ದ ಬಾಣಗಳು ಲಕ್ಷ್ಯದ ಕಡೆಗೆ ಹೋಗದೇ ಇರುತ್ತಿರಲಿಲ್ಲ. ಲಕ್ಷ್ಯವನ್ನು ಭೇದಿಸದೇ–ವಿನಾಶಗೊಳಿಸದೇ ಇರುತ್ತಿರಲಿಲ್ಲ.

ಹೀಗೆ ರಾಮ-ರಾವಣರು ಬಿಡುತ್ತಿದ್ದ ಬಾಣಗಳು ಆಕಾಶದಲ್ಲಿ ಪರಸ್ಪರವಾಗಿ ಸಂಘರ್ಷಿಸಿ ಕೆಳಗೆ ಬೀಳುತ್ತಿದ್ದುವು. ಇಬ್ಬರು ಯೋಧರೂ ಎಡಗೈಯಿಂದಲೂ ಬಲಗೈಯಿಂದಲೂ ಬಾಣಗಳನ್ನು ಬಿಡುತ್ತಾ ನಿರಂತರವಾಗಿ ಯುದ್ಧಮಾಡುತ್ತಿದ್ದರು. ಉಸಿರಾಡುವುದಕ್ಕೂ ಆಗದ ರೀತಿಯಲ್ಲಿ ರಾಮ-ರಾವಣರು ಘೋರವಾದ ಬಾಣಗಳಿಂದ ಆಕಾಶವನ್ನು ತುಂಬಿಬಿಟ್ಟರು. ರಾವಣನ ಕುದುರೆಗಳನ್ನು ಶ್ರೀರಾಮನೂ, ಶ್ರೀರಾಮನ ಕುದುರೆಗಳನ್ನು ರಾವಣನೂ ಪ್ರಹರಿಸುತ್ತಾ, ಮಾಡಿದುದಕ್ಕೆ ಪ್ರತಿಮಾಡುತ್ತಾ ಪರಸ್ಪರವಾಗಿ ಬಡಿದಾಡುತ್ತಿದ್ದರು. ಹೀಗೆ ಇಬ್ಬರೂ ಅತಿಕ್ರುದ್ಧರಾಗಿ ಉತ್ತಮರೀತಿಯಲ್ಲಿ (ಯುದ್ಧನಿಯಮಗಳಿಗೆ ಅನುಗುಣವಾಗಿ) ಯುದ್ಧಮಾಡುತ್ತಿದ್ದರು. ಮುಹೂರ್ತಕಾಲದವರೆಗೆ ಅವರಿಬ್ಬರ ಯುದ್ಧವು ಭಯಂಕರವೂ ರೋಮಾಂಚಕಾರಕವೂ ಆಗಿದ್ದಿತು. ಹೀಗೆ ಅದ್ಭುತವಾದ ರೀತಿಯಲ್ಲಿ ಯುದ್ಧಮಾಡುತ್ತಿದ್ದ ರಾಮ-ರಾವಣರನ್ನು ಸಮಸ್ತಪ್ರಾಣಿಗಳೂ ಅಚ್ಚರಿಗೊಂಡು ನೋಡುತ್ತಿದ್ದುವು. ಶ್ರೇಷ್ಠವಾದ ರಥಗಳಲ್ಲಿದ್ದ ರಾಮ-ರಾವಣರು ಒಬ್ಬರ ಮೇಲೆ ಮತ್ತೊಬ್ಬರು ಕೋಪಗೊಳ್ಳುತ್ತಾ ಪರಸ್ಪರವಾಗಿ ಆಕ್ರಮಿಸುತ್ತಾ , ಕೋಪಗೊಳ್ಳುತ್ತಾ ಒಬ್ಬರನ್ನೊಬ್ಬರು ಪರಸ್ಪರವಾಗಿ ವಧಿಸಲು ಪ್ರಯತ್ನಿಸುತ್ತಿದ್ದ ಅವರು ಘೋರರೂಪರಾಗಿ ಕಾಣುತ್ತಿದ್ದರು. ಅವರಿಬ್ಬರ ರಥಗಳಲ್ಲಿದ್ದ ಸಾರಥಿಗಳು ಕೆಲವು ವೇಳೆ ರಥವನ್ನು ಸುತ್ತಾಡಿಸುತ್ತಿದ್ದರು. ಕೆಲವು ವೇಳೆ ನೇರವಾಗಿ ಹೋಗಿಬಿಡುತ್ತಿದ್ದರು. ಹೀಗೆ ಸಾರಥಿಗಳಿಬ್ಬರೂ ರಥವನ್ನು ನಡೆಸುವುದರಲ್ಲಿ ತಮಗಿದ್ದ ಕೌಶಲ್ಯವನ್ನು ಪ್ರದರ್ಶಿಸುತ್ತಿದ್ದರು. ರಾವಣನು ರಾಮನನ್ನು ಪೀಡಿಸುತ್ತಿದ್ದನು. ರಾಮನು ರಾವಣನನ್ನು ಪೀಡಿಸುತ್ತಿದ್ದನು. ಮುನ್ನುಗ್ಗುವುದರಲ್ಲಿ ಮತ್ತು ಹಿಂದಕ್ಕೆ ಸರಿಯುವುದರಲ್ಲಿ ಇಬ್ಬರೂ ಅದಕ್ಕೆ ಅನುಗುಣವಾದ ಗತಿವೇಗವನ್ನು ಆಶ್ರಯಿಸುತ್ತಿದ್ದರು. ಇಬ್ಬರ ಆ ಎರಡು ಶ್ರೇಷ್ಠವಾದ ರಥಗಳು ಬಾಣಗಳನ್ನು ಮಳೆಯ ರೂಪದಲ್ಲಿ ಸುರಿಸುತ್ತಾ ನೀರಿನಿಂದ ಕೂಡಿದ ಮೇಘಗಳಂತೆ ರಣರಂಗದಲ್ಲಿ ಸಂಚರಿಸುತ್ತಿದ್ದುವು. ರಾಮ-ರಾವಣರ ಶ್ರೇಷ್ಠವಾದ ರಥಗಳು ರಣಭೂಮಿಯಲ್ಲಿ ನಾನಾಪ್ರಕಾರವಾದ ಬಹುವಿಧವಾದ ಸಂಚಾರಗತಿಯನ್ನು

ಪ್ರದರ್ಶಿಸುತ್ತಾ ಪುನಃ ಒಂದಕ್ಕೊಂದು ಎದುರು-ಬದುರಾಗಿ ನಿಂತು ಕೊಂಡುವು. ಆ ಸಮಯದಲ್ಲಿ ಎರಡು ರಥಗಳ ಮೂಕಿಗಳೂ ಒಂದ ನ್ನೊಂದು ಸೇರಿಕೊಂಡುವು. ಕುದುರೆಗಳ ಮುಖಗಳೂ ಒಂದನ್ನೊಂದು ಸೇರಿಕೊಂಡುವು. ಪತಾಕೆಗಳೂ ಪರಸ್ಪರವಾಗಿ ಕಲೆತುವು. ಅನಂತರ ಧನುಸ್ಸಿ ನಿಂದ ಬಿಡಲ್ಪಟ್ಟ ನಿಶಿತವಾದ ನಾಲ್ಕು ಬಾಣಗಳಿಂದ ಶ್ರೀರಾಮನು ದೇದೀಪ್ಯ ಮಾನವಾಗಿ ಕಾಣುತ್ತಿದ್ದ ರಾವಣನ ನಾಲ್ಕು ಕುದುರೆಗಳನ್ನೂ ಹಿಂದಕ್ಕೆ ಸರಿಯುವಂತೆ ಮಾಡಿದನು. ಹೀಗೆ ಶ್ರೀರಾಮನು ಬಾಣಪ್ರಹಾರಗಳಿಂದ ತನ್ನ ಕುದುರೆಗಳನ್ನು ಹಿಂದಕ್ಕಟ್ಟಲು ಕ್ರೋಧಾಭಿಭೂತನಾದ ರಾವಣನು ನಿಶಿತ ವಾದ ಬಾಣಗಳನ್ನು ಶ್ರೀರಾಮನ ಮೇಲೆ ಪ್ರಯೋಗಿಸಿದನು. ಬಲಿಷ್ಠನಾದ ರಾವಣನು ರಾಘವನನ್ನು ಹಾಗೆ ನಿಶಿತವಾದ ಬಾಣಗಳಿಂದ ಪ್ರಹರಿಸಿದರೂ ಶ್ರೀರಾಮನ ಮುಖವು ವಿಕಾರವಾಗಲಿಲ್ಲ. ಅವನು ವ್ಯಥೆಪಡಲೂ ಇಲ್ಲ.

ಅನಂತರ ರಾವಣನು ಇಂದ್ರನ ಸಾರಥಿಯಾದ ಮಾತಲಿಯನ್ನು ಲಕ್ಷ್ಯ ವನ್ನಾಗಿಟ್ಟುಕೊಂಡು ಸಿಡಿಲಿನಂತೆ ಶಬ್ದಮಾಡುತ್ತಿದ್ದ ನಿಶಿತವಾದ ಬಾಣ ಗಳನ್ನು ಪ್ರಯೋಗಿಸಿದನು. ಮಾತಲಿಯ ಶರೀರದ ಮೇಲೆ ಬಿದ್ದ ಮಹಾ ವೇಗಯುಕ್ತವಾಗಿದ್ದ ರಾವಣನ ಬಾಣಗಳು ಮಾತಲಿಗೆ ಅತ್ಯಲ್ಪವಾದ ಮೂರ್ಛೆಯನ್ನಾಗಲೀ ವ್ಯಥೆಯನ್ನಾಗಲೀ ಉಂಟುಮಾಡಲು ಸಮರ್ಥ ವಾಗಲಿಲ್ಲ. ರಾವಣನು ಮಾತಲಿಯ ಮೇಲೆ ಬಾಣಗಳನ್ನು ಪ್ರಯೋಗಿಸಿದುದ ರಿಂದ ಉಂಟಾದ ಮಹಾಕೋಪವು ಶ್ರೀರಾಮನಿಗೆ, ತನ್ನ ಮೇಲೆ ರಾವಣನು ಬಾಣಪ್ರಯೋಗಿಸಿದಾಗಲೂ ಉಂಟಾಗಿರಲಿಲ್ಲ. ಮಾತಲಿಯ ಮೇಲಿನ ಆಕ್ರ ಮಣದಿಂದ ಶ್ರೀರಾಮನು ಪರಮಕ್ರುದ್ಧನಾಗಿ ಬಾಣಗಳ ಸಮೂಹಗಳಿಂದ ಶತ್ರುವನ್ನು ಹಿಮ್ಮೆಟ್ಟಿಸಿಬಿಟ್ಟನು. ವೀರನಾದ ರಾಘವನು ಶತ್ರುವಿನ ರಥದ ಮೇಲೆ ಇಪ್ಪತ್ತು-ಮೂವತ್ತು-ಅರುವತ್ತು-ನೂರಾರು-ಸಾವಿರಾರು ಬಾಣ ಗಳನ್ನು ಪುಂಖಾನುಪುಂಖವಾಗಿ ಬಿಡತೊಡಗಿದನು. ರಥದಲ್ಲಿ ಕುಳಿತಿದ್ದ ರಾಕ್ಷಸರಾಜನಾದ ರಾವಣನು ಕೂಡ ಕ್ರುದ್ಧನಾಗಿ ಗದಾ-ಮುಸಲಗಳ ವೃಷ್ಟಿ ಯಿಂದ ಶ್ರೀರಾಮನನ್ನು ಪೀಡಿಸಿದನು. ಹೀಗೆ ಪುನಃ ಅವರಿಬ್ಬರಿಗೂ ಭಯಂಕರವಾದ ಮತ್ತು ರೋಮಾಂಚನವನ್ನುಂಟುಮಾಡುವ ಯುದ್ಧವು ಪ್ರಾರಂಭವಾಯಿತು. ಗದಾ-ಮುಸಲ-ಪರಿಘಾಯುಧಗಳ ಘೋರಶಬ್ದ

ಗಳಿಂದಲೂ ಬಾಣಗಳಲ್ಲಿದ್ದ ರೆಕ್ಕೆಗಳ ಗಾಳಿಯಿಂದಲೂ ಸಪ್ತಸಮುದ್ರಗಳೂ ಅಲ್ಲೋಲ-ಕಲ್ಲೋಲವಾದುವು. ಸಮುದ್ರಗಳ ಪಾತಾಳಪ್ರದೇಶದಲ್ಲಿ ವಾಸ ಮಾಡುತ್ತಿದ್ದ ಸಮಸ್ತದಾನವರೂ ಸಾವಿರಾರು ಪನ್ನಗರೂ ವ್ಯಥೆಗೊಂಡರು. ಶೈಲ-ವನ-ಕಾನನಗಳಿಂದ ಸಂಪನ್ನವಾದ ಸಮಗ್ರವಾದ ಭೂಮಂಡಲವೂ ಕಂಪಿಸಿತು. ಸೂರ್ಯನು ನಿಸ್ತೇಜನಾದನು. ಗಾಳಿಬೀಸುವುದೂ ನಿಂತು ಹೋಯಿತು. ಗಂಧರ್ವರಿಂದ ಕೂಡಿದ ದೇವತೆಗಳೂ, ಸಿದ್ಧರೂ, ಪರ ಮರ್ಷಿಗಳೂ, ಕಿನ್ನರ-ಮಹೋರಗರೂ ಭಯಂಕರವಾದ ಆ ವಾತಾವರಣ ದಿಂದ ಚಿಂತಾಮಗ್ನರಾದರು.

ಸ್ವಸ್ತಿ ಗೋಬ್ರಾಹ್ಮಣೇಭ್ಯಸ್ತು ಲೋಕಾಸ್ತಿಷ್ಠನ್ತು ಶಾಶ್ವತಾಃ ।
ಜಯತಾಂ ರಾಘವಃ ಸಂಖ್ಯೇ ರಾವಣಂ ರಾಕ್ಷಸೇಶ್ವರಮ್ ॥೪೯॥

"ಗೋ-ಬ್ರಾಹ್ಮಣರಿಗೆ ಶುಭವಾಗಲಿ. ಲೋಕಗಳು ಶಾಶ್ವತವಾಗಿ ಉಳಿದುಕೊಳ್ಳಲಿ. ಯುದ್ಧದಲ್ಲಿ ಶ್ರೀರಾಮನು ರಾಕ್ಷಸೇಶ್ವರನಾದ ರಾವಣ ನನ್ನು ಜಯಿಸಲಿ."

ಹೀಗೆ ದೇವತೆಗಳೂ ಮಹರ್ಷಿಗಳೂ ಹೇಳುತ್ತಾ ಶ್ರೀರಾಮನಿಗೂ ರಾವಣನಿಗೂ ನಡೆಯುತ್ತಿದ್ದ ರೋಮಾಂಚಕಾರಕವೂ ಭಯಂಕರವೂ ಆಗಿದ್ದ ಮಹಾಯುದ್ಧವನ್ನು ನೋಡುತ್ತಿದ್ದರು. ಗಂಧರ್ವಾಪ್ಸರೆಯರು ಅನುಪಮ ವಾದ ಆ ಯುದ್ಧವನ್ನು ನೋಡುತ್ತಾ ಉದ್ಗರಿಸಿದರು :

ಗಗನಂ ಗಗನಾಕಾರಂ ಸಾಗರಃ ಸಾಗರೋಪಮಃ ।
ರಾಮರಾವಣಯೋರ್ಯುದ್ಧಂ ರಾಮರಾವಣಯೋರಿವ ॥೫೧॥

"ಆಕಾಶವು ಆಕಾಶದಂತಿದೆ. ಸಾಗರವು ಸಾಗರದಂತಿದೆ. ಹಾಗೆಯೇ ರಾಮ-ರಾವಣರ ಯುದ್ಧವು ರಾಮ-ರಾವಣರ ಯುದ್ಧದಂತೆಯೇ ಇದೆ."*

ಹೀಗೆ ಹೇಳುತ್ತಾ ಗಂಧರ್ವಾಪ್ಸರೆಯರು ರಾಮ-ರಾವಣರ ಯುದ್ಧ ವನ್ನು ನೋಡುತ್ತಿದ್ದರು.

---

* ಲೋಕದಲ್ಲಿ ಕೆಲವು ವಸ್ತುಗಳಿವೆ. ಆ ವಸ್ತುಗಳಿಗೆ ಸದೃಶವಾದುದು ಮತ್ತೊಂದು ವಸ್ತುವಿರುವುದಿಲ್ಲ. ಆಕಾಶವನ್ನು ಹೋಲುವ ಮತ್ತೊಂದು ವಸ್ತುವಿಲ್ಲ. ಸಮುದ್ರ ವನ್ನು ಹೋಲುವ ಮತ್ತೊಂದು ವಸ್ತುವಿಲ್ಲ. ಆದುದರಿಂದ ಆಕಾಶಕ್ಕೆ ಆಕಾಶವೇ

ಅನಂತರ ರಘುವಂಶೀಯರ ಕೀರ್ತಿವರ್ಧನನಾದ, ಮಹಾಬಾಹುವಾದ ಶ್ರೀರಾಮನು ಅತ್ಯಂತಕ್ರುದ್ಧನಾಗಿ ಸರ್ಪಸದೃಶವಾಗಿದ್ದ ಬಾಣವೊಂದನ್ನು ಬತ್ತಳಿಕೆಯಿಂದ ತೆಗೆದು ಧನುಸ್ಸಿನಲ್ಲಿ ಅನುಸಂಧಾನಮಾಡಿ ಜಾಜ್ವಲ್ಯಮಾನವಾದ ಕುಂಡಲಗಳಿಂದ ಸಮಲಂಕೃತವಾಗಿದ್ದ ರಾವಣನ ತಲೆಯನ್ನು ಕತ್ತರಿಸಿದನು. ರಾವಣನ ಆ ತಲೆಯು ಭೂಮಿಯಲ್ಲಿ ಬಿದ್ದುದನ್ನು ಮೂರು ಲೋಕಗಳವರೂ ನೋಡಿದರು. ಆದರೆ ಅಂತಹುದೇ ಆದ ಮತ್ತೊಂದು ತಲೆಯು ಒಡನೆಯೇ ಹುಟ್ಟಿಕೊಂಡಿತು. ಕ್ಷಿಪ್ರವಾಗಿ ಕಾರ್ಯ ಮಾಡುವ, ಕ್ಷಿಪ್ರಹಸ್ತನಾದ ಶ್ರೀರಾಮನು ಆ ಎರಡನೆಯ ತಲೆಯನ್ನೂ ಬಾಣಗಳ ಪ್ರಹಾರದಿಂದ ಕ್ಷಣಮಾತ್ರದಲ್ಲಿ ಕೆಳಕ್ಕುರುಳಿಸಿದನು. ಕತ್ತರಿಸುತ್ತಿದ್ದಂತೆಯೇ ಮತ್ತೊಂದು ತಲೆಯು ಹುಟ್ಟಿಕೊಳ್ಳುತ್ತಿದ್ದಿತು. ಮರುಕ್ಷಣದಲ್ಲಿಯೇ ಶ್ರೀರಾಮನು ವಜ್ರಸದೃಶವಾದ ಬಾಣಗಳಿಂದ ಆ ತಲೆಗಳನ್ನೂ ಕತ್ತರಿಸಿಹಾಕುತ್ತಿದ್ದನು. ಹೀಗೆ ಒಂದಾದ ಮೇಲೊಂದರಂತೆ ಶ್ರೀರಾಮನು ರಾವಣನ ಒಂದೇ ಸಮನಾದ ತೇಜಸ್ಸಿನಿಂದ ಕೂಡಿದ್ದ ನೂರು ತಲೆಗಳನ್ನು ಕತ್ತರಿಸಿದನು. ಆದರೆ ಅದರಿಂದ ರಾವಣನ ಆಯುಷ್ಯವೂ ಮುಗಿಯಲಿಲ್ಲ. ತಲೆಗಳೂ ಒಂದಾದಮೇಲೆ ಮತ್ತೊಂದರಂತೆ ಹುಟ್ಟಿಕೊಳ್ಳುತ್ತಲೇ ಇದ್ದುವು.

ಕೌಸಲ್ಯೆಯ ಆನಂದವನ್ನು ಹೆಚ್ಚಿಸುವ ವೀರನಾದ ಶ್ರೀರಾಮನು ಸಮಸ್ತವಾದ ಅಸ್ತ್ರಗಳನ್ನೂ ತಿಳಿದಿದ್ದನು. ಅನೇಕವಿಧವಾದ ಬಾಣಗಳೂ ಅವನಲ್ಲಿದ್ದುವು. ಆದರೆ ರಾವಣನನ್ನು ಅಂತ್ಯಗೊಳಿಸುವುದು ಸಾಧ್ಯವಾಗಲಿಲ್ಲ. ಅಂತೆಯೇ ರಾಘವನು ಚಿಂತಿಸತೊಡಗಿದನು :

ಮಾರೀಚೋ ನಿಹತೋ ಯೈಸ್ತು ಖರೋ ಯೈಸ್ತು ಸದೂಷಣಃ ।
ಕ್ರೌಞ್ಚಾರಣ್ಯೇ ವಿರಾಧಸ್ತು ಕಬನ್ಧೋ ದಣ್ಡಕಾವನೇ ।
ಯೈಃ ಸಾಲಾ ಗಿರಯೋ ಭಗ್ನಾ ವಾಲೀ ಚ ಕ್ಷುಭಿತೋಽಮ್ಬುಧಿಃ ॥೬೦॥

ಹೋಲಿಕೆ, ಸಮುದ್ರಕ್ಕೆ ಸಮುದ್ರವೇ ಹೋಲಿಕೆ. ಹಾಗೆಯೇ ರಾಮ-ರಾವಣರ ಯುದ್ಧಕ್ಕೆ ಬೇರೆ ಹೋಲಿಕೆಯೇ ಇಲ್ಲ. ಇಂದ್ರ-ವೃತ್ರರ ಯುದ್ಧಕ್ಕಿಂತಲೂ ಮಿಗಿಲಾದುದು ರಾಮ-ರಾವಣರ ಯುದ್ಧ. ಆದುದರಿಂದ ರಾಮ-ರಾವಣರ ಯುದ್ಧವು ಹೇಗಿತ್ತೆಂದರೆ ರಾಮ-ರಾವಣರ ಯುದ್ಧದಂತೆಯೇ ಇದ್ದಿತು. ಅನನ್ವಯಾಲಂಕಾರಕ್ಕೆ ಇದು ಪ್ರಸಿದ್ಧವಾದ ಉದಾಹರಣೆ.

ತ ಇಮೇ ಸಾಯಕಾಃ ಸರ್ವೇ ಯುದ್ಧೇ ಪ್ರಾತ್ಯಾಯಿಕಾ ಮಮ ।
ಕಿಂ ನು ತತ್ಕಾರಣಂ ಯೇನ ರಾವಣೇ ಮನ್ದತೇಜಸಃ ॥೬೧॥

"ನನ್ನ ಈ ಬಾಣಗಳು ಮಾರೀಚ-ಖರ-ದೂಷಣರನ್ನು ಜನಸ್ಥಾನದಲ್ಲಿ ಸಂಹರಿಸಿದುವು. ಕ್ರೌಂಚವನದಲ್ಲಿ ವಿರಾಧನನ್ನು ಸಂಹರಿಸಿದುವು. ದಂಡ ಕಾರಣ್ಯದಲ್ಲಿ ಕಬಂಧನನ್ನು ಸಂಹರಿಸಿದುವು. ಈ ನನ್ನ ಬಾಣಗಳೇ ಸಪ್ತಸಾಲ ವೃಕ್ಷಗಳನ್ನೂ ಪರ್ವತಗಳನ್ನೂ ಕತ್ತರಿಸಿದುವು. ವಾಲಿಯ ಪ್ರಾಣಹರಣಮಾಡಿ ದುವು. ಸಮುದ್ರವನ್ನು ಅಲ್ಲೋಲ-ಕಲ್ಲೋಲಗೊಳಿಸಿಬಿಟ್ಟುವು. ಅನೇಕ ಯುದ್ಧಗಳಲ್ಲಿ ಈ ನನ್ನ ಬಾಣಗಳು ಅಪ್ರತಿಹತಗಳೆಂಬ-ಲಕ್ಷ್ಯಭೇದಿಗಳೆಂಬ ವಿಶ್ವಾಸವನ್ನು ಹುಟ್ಟಿಸಿವೆ. ಆದರೆ ರಾವಣನ ಪ್ರಾಣವನ್ನು ಅಪಹರಿಸುವುದ ರಲ್ಲಿ ಇವು ತೇಜೋಹೀನವಾಗಿವೆಯಲ್ಲಾ! ಕಾರಣವೇನಿರಬಹುದು?"

ಹೀಗೆ ಚಿಂತಿಸುತ್ತಲೇ ಶ್ರೀರಾಮನು ಅಪ್ರಮತ್ತನಾಗಿ ರಾವಣನ ವಕ್ಷಃ ಸ್ಥಳದ ಮೇಲೆ ಬಾಣಗಳ ಮಳೆಯನ್ನೇ ಸುರಿಸಿದನು. ರಥದಲ್ಲಿ ಕುಳಿತಿದ್ದ ರಾಕ್ಷಸೇಶ್ವರನಾದ ರಾವಣನೂ ಪರಮಕ್ರುದ್ಧನಾಗಿ ಗದಾ-ಮುಸಲಗಳ ವೃಷ್ಟಿಯಿಂದ ಶ್ರೀರಾಮನನ್ನು ಪೀಡಿಸತೊಡಗಿದನು. ಸ್ವಲ್ಪಹೊತ್ತಿನಲ್ಲಿಯೇ ಆ ಮಹಾಯುದ್ಧವು ಭಯಂಕರರೂಪವನ್ನು ತಾಳಿ ಪ್ರೇಕ್ಷಕರ ರೋಮ ಕೋಟಿಗಳನ್ನು ನಿಮಿರಿ ನಿಲ್ಲುವಂತೆ ಮಾಡಿತು. ರಾಮ-ರಾವಣರ ಆ ಮಹಾ ಯುದ್ಧವು ಕೆಲವು ವೇಳೆ ಅಂತರಿಕ್ಷದಲ್ಲಿಯೂ, ಕೆಲವು ವೇಳೆ ಭೂಮಿ ಯಲ್ಲಿಯೂ, ಕೆಲವು ವೇಳೆ ಪರ್ವತಗಳ ಶಿಖರಗಳಲ್ಲಿಯೂ ನಡೆಯುತ್ತಿದ್ದಿತು. ದೇವ-ದಾನವ-ಯಕ್ಷರೂ, ಪಿಶಾಚೋರಗ-ರಾಕ್ಷಸರೂ ಎವೆಯಿಕ್ಕದೇ ನೋಡುತ್ತಿದ್ದ ಆ ಮಹಾಯುದ್ಧವು ರಾತ್ರಿಯೆಲ್ಲಾ ನಡೆಯುತ್ತಿದ್ದಿತು.

ರಾಮ-ರಾವಣರ ಆ ಮಹಾಯುದ್ಧವು ರಾತ್ರಿಯಲ್ಲೂ ನಿಲ್ಲುತ್ತಿರ ಲಿಲ್ಲ; ಹಗಲಿನಲ್ಲೂ ನಿಲ್ಲುತ್ತಿರಲಿಲ್ಲ. ಒಂದು ಮುಹೂರ್ತವಾಗಲೀ ಒಂದು ಕ್ಷಣವಾಗಲೀ ಆ ಯುದ್ಧಕ್ಕೆ ವಿರಾಮವೇ ಇರಲಿಲ್ಲ.

ದಶರಥನ ಮಗನಾದ ಶ್ರೀರಾಮನಿಗೂ ಮತ್ತು ರಾಕ್ಷಸೇಂದ್ರನಾದ ರಾವಣನಿಗೂ ನಡೆಯುತ್ತಿದ್ದ ಆ ಮಹಾಸಮರದಲ್ಲಿ ಬಹಳ ಕಾಲವು ಕಳೆದು ಹೋದರೂ ಶ್ರೀರಾಮನಿಗೆ ವಿಜಯವು ಲಭಿಸದೇ ಇದ್ದುದನ್ನು ಗಮನಿಸಿ

ಇಂದ್ರನ ಸಾರಥಿಯಾದ ಮಹಾತ್ಮನಾದ ಮಾತಲಿಯು ಯುದ್ಧಪರಾಯಣ ನಾಗಿದ್ದ ಶ್ರೀರಾಮನಿಗೆ ಅವಸರದಿಂದ ಹೇಳಿದನು.

೧೦೭ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೧೦೮ನೆಯ ಸರ್ಗ

ಶ್ರೀರಾಮನಿಂದ ರಾವಣನ ವಧೆ

ಅಥ ಸಂಸ್ಮಾರಯಾಮಾಸ ಮಾತಲೀ ರಾಘವಂ ತದಾ ।
ಅಜಾನನ್ನಿವ ಕಿಂ ವೀರ ತ್ವಮೇನಮನುವರ್ತಸೇ ॥೧॥

ಮಾತಲಿಯು ಶ್ರೀರಾಮನಿಗೆ ಹಿಂದಿನದನ್ನು ಜ್ಞಾಪಿಸುತ್ತಾ ಹೇಳಿದನು: "ವೀರನೇ! ಏನೂ ತಿಳಿಯದವನಂತೆ ರಾವಣನ ಜಾಡನ್ನೇ ಹಿಡಿದು ನೀನೂ ಏಕೆ ಹೋಗುತ್ತಿರುವೆ? ಬಾಣಕ್ಕೆ ಪ್ರತಿಬಾಣವನ್ನು ಬಿಡುವುದರಿಂದ ಮಾತ್ರವೇ ಏಕೆ ತೃಪ್ತನಾಗಿರುವೆ?

ವಿಸೃಜಾಸ್ಮೈ ವಧಾಯ ತ್ವಮಸ್ತ್ರಂ ಪೈತಾಮಹಂ ಪ್ರಭೋ ।
ವಿನಾಶಕಾಲಃ ಕಥಿತೋ ಯಃ ಸುರೈಃ ಸೋಽದ್ಯ ವರ್ತತೇ ॥೨॥

ಪ್ರಭುವೇ! ಇವನನ್ನು ಸಂಹರಿಸಲು ಬ್ರಹ್ಮಾಸ್ತ್ರವನ್ನು ಪ್ರಯೋಗಿಸು. ದೇವತೆಗಳು ಹೇಳಿದ್ದ ರಾವಣನ ವಿನಾಶಕಾಲವು ಇದೀಗ ಸನ್ನಿಹಿತವಾಗಿದೆ."

ಹೀಗೆ ಮಾತಲಿಯು ಬ್ರಹ್ಮಾಸ್ತ್ರದ ವಿಷಯವನ್ನು ಜ್ಞಾಪಿಸಿಕೊಟ್ಟ ಕೂಡಲೇ ಶ್ರೀರಾಮನು ಸರ್ಪದಂತೆ ಬುಸುಗುಟ್ಟುತ್ತಿದ್ದ ದೇದೀಪ್ಯಮಾನ ವಾಗಿದ್ದ ಬಾಣವೊಂದನು ಬತ್ತಳಿಕೆಯಿಂದ ತೆಗೆದನು. ಆ ಬಾಣವನ್ನು ಹಿಂದೆ ಪೂಜ್ಯರಾದ ಅಗಸ್ತ್ಯರು ಶ್ರೀರಾಮನಿಗೆ ಕೊಟ್ಟಿದ್ದರು. ಮೊದಲು ಬ್ರಹ್ಮನಿಂದ ಇಂದ್ರನಿಗೆ ಕೊಡಲ್ಪಟ್ಟಿದ್ದ ಆ ವೀರ್ಯವತ್ತಾದ ಬಾಣವು ಯುದ್ಧದಲ್ಲಿ ಅಪ್ರತಿಹತವಾಗಿದ್ದಿತು. ಮಹಾತೇಜಸ್ವಿಯಾದ ಬ್ರಹ್ಮನೇ ಆ ಮಹಾಬಾಣವನ್ನು ಮೊದಲು ಇಂದ್ರನ ಸಲುವಾಗಿ ನಿರ್ಮಿಸಿದ್ದನು. ಮೂರು ಲೋಕಗಳನ್ನೂ ಜಯಿಸಲು ಅಪೇಕ್ಷಿಸಿದ್ದ ಇಂದ್ರನಿಗೆ ಬ್ರಹ್ಮನು ಆ ದಿವ್ಯಾಸ್ತ್ರ ವನ್ನು ಕೊಟ್ಟಿದ್ದನು. ಆ ಮಹಾಸ್ತ್ರದ ವೇಗದಲ್ಲಿ ವಾಯುದೇವನು ಪ್ರತಿಷ್ಠಿತ

ನಾಗಿದ್ದನು. ಅಲುಗಿನಲ್ಲಿ ಅಗ್ನಿ-ಸೂರ್ಯರು ಪ್ರತಿಷ್ಠಿತರಾಗಿದ್ದರು. ಶರೀರವು ಆಕಾಶಮಯವಾಗಿದ್ದಿತು. ಭಾರಕ್ಕಾಗಿ ಮೇರು-ಮಂದರಪರ್ವತಗಳನ್ನೇ ಬಾಣದಲ್ಲಿ ಪ್ರತಿಷ್ಠಿಸಲಾಗಿತ್ತು. ಆ ಮಹಾಸ್ತ್ರವು ಸಕಲಪ್ರಾಣಿಗಳ ತೇಜಸ್ಸಿನಿಂದ ಮಾಡಲ್ಪಟ್ಟಿದ್ದಿತು. ಸೂರ್ಯನ ತೇಜಸ್ಸಿಗೆ ಸಮಾನವಾದ ತೇಜಸ್ಸು ಆ ಬಾಣದಿಂದ ಹೊರಸೂಸುತ್ತಿದ್ದಿತು. ಅದು ಸುವರ್ಣಭೂಷಿತವಾಗಿದ್ದು ಸುಂದರವಾದ ರೆಕ್ಕೆಗಳಿಂದ ಕೂಡಿದ್ದಿತು. ಪ್ರಳಯಕಾಲದ ಹೊಗೆಯಿಂದ ಕೂಡಿದ ಅಗ್ನಿಯಂತೆ ಭಯಂಕರವಾಗಿದ್ದಿತು. ಪ್ರಕಾಶಮಾನವಾಗಿದ್ದು ವಿಷಸರ್ಪದಂತೆಯೇ ಕಾಣುತ್ತಿದ್ದಿತು. ನರ-ನಾಗಾಶ್ವಸಮೂಹಗಳನ್ನು ಒಂದೇ ಬಾರಿಗೆ ವಿನಾಶಗೊಳಿಸುವ ಸಾಮರ್ಥ್ಯವನ್ನು ಹೊಂದಿದ್ದು ಅತ್ಯಂತ ಕ್ಷಿಪ್ರವಾಗಿ ಲಕ್ಷ್ಯವನ್ನು ಭೇದಿಸುತ್ತಿದ್ದಿತು. ಗೋಪುರಗಳನ್ನೂ, ಪ್ರಾಕಾರ ಗಳನ್ನೂ, ಪರ್ವತಗಳನ್ನೂ ಭೇದಿಸುತ್ತಿದ್ದಿತು. ಅದರ ಸ್ವರೂಪವು ನಾನಾ ಪ್ರಕಾರವಾದ ರಕ್ತದಿಂದಲೂ ಮೇದಸ್ಸಿನಿಂದಲೂ ತೋಯ್ದುಹೋಗಿದ್ದು ಅತ್ಯಂತದಾರುಣವಾಗಿ ಕಾಣುತ್ತಿದ್ದಿತು. ವಜ್ರದಂತೆ ಕಠೋರವಾಗಿದ್ದಿತು. ಮಹಾನಾದದಿಂದ ಕೂಡಿದ್ದಿತು. ಅನೇಕಯುದ್ಧಗಳಲ್ಲಿ ಶತ್ರುಗಳನ್ನು ಭಯ ಗೊಳಿಸಿದ್ದಿತು . ಎಲ್ಲರಿಗೂ ತ್ರಾಸವನ್ನುಂಟುಮಾಡುತ್ತಿದ್ದಿತು. ಬುಸು ಗುಟ್ಟುವ ಸರ್ಪದಂತೆಯೇ ಇದ್ದಿತು. ಯಮಸ್ವರೂಪವೂ ಭಯಪ್ರದವೂ ಆಗಿದ್ದ ಆ ಮಹಾಸ್ತ್ರವು ಯುದ್ಧಸಮಯದಲ್ಲಿ ಹದ್ದು-ರಣಹದ್ದು-ಬಕ ಇವೇ ಮುಂತಾದ ಪಕ್ಷಿಗಳಿಗೂ, ಗುಳ್ಳೇನರಿಯೇ ಮುಂತಾದ ಪ್ರಾಣಿಗಳಿಗೂ, ರಾಕ್ಷಸರಿಗೂ ಸದಾ ಭೋಜನವನ್ನು ಸಿದ್ಧಗೊಳಿಸುತ್ತಿದ್ದಿತು. ವಾನರನಾಯಕ ರಿಗೆ ಆ ಮಹಾಸ್ತ್ರವು ಆನಂದದಾಯಕವಾಗಿದ್ದಿತು. ಗರುಡಪಕ್ಷಿಯ ಸುಂದರ ವಾದ ರೆಕ್ಕೆಗಳಿಂದಲೂ ಇತರ ಪಕ್ಷಿಗಳ ರೆಕ್ಕೆಗಳಿಂದಲೂ ಕೂಡಿದ್ದು ಚಿತ್ರಿತ ವಾಗಿ ಕಾಣುತ್ತಿದ್ದಿತು.

ಸಮಸ್ತಲೋಕಗಳಿಗೂ ಮತ್ತು ಇಕ್ಷ್ವಾಕುವಂಶಸ್ಥರಿಗೂ ಭಯನಾಶಕ ವಾದ, ಶತ್ರುಗಳ ಕೀರ್ತಿನಾಶಕವಾದ, ತನಗೆ ಹರ್ಷವನ್ನುಂಟುಮಾಡುವು ದಾಗಿದ್ದ, ಉತ್ತಮೋತ್ತಮವಾದ ಆ ಮಹಾಬ್ರಹ್ಮಾಸ್ತ್ರವನ್ನು ಮಹಾಬಲನಾದ ಶ್ರೀರಾಮನು ವೇದೋಕ್ತವಾದ ವಿಧಿಯಿಂದ ಅಭಿಮಂತ್ರಿಸಿ ಧನುಸ್ಸಿನಲ್ಲಿ

ಅನುಸಂಧಾನಮಾಡಿದನು. ರಾಘವನು ಆ ಮಹಾಸ್ತ್ರವನ್ನು ಧನುಸ್ಸಿನಲ್ಲಿ ಹೂಡುತ್ತಿದ್ದಾಗಲೇ ಸಮಸ್ತಪ್ರಾಣಿಗಳೂ ಹೆದರಿದುವು. ಭೂಮಿಯೂ ಕಂಪಿಸಿತು. ಆ ಸಮಯದಲ್ಲಿ ಕ್ರುದ್ಧನಾಗಿದ್ದ ಶ್ರೀರಾಮನು ಪರಮಯತ್ನದಿಂದ ನಾಣನ್ನು ಸೆಳೆಯುವುದರ ಮೂಲಕ ಧನುಸ್ಸನ್ನು ಸಂಪೂರ್ಣವಾಗಿ ಬಗ್ಗಿಸಿ ಮರ್ಮವನ್ನು ಭೇದಿಸುವ ಆ ಮಹಾಸ್ತ್ರವನ್ನು ರಾವಣನ ಮೇಲೆ ಪ್ರಯೋಗಿಸಿದನು. ವಜ್ರಾಯುಧಧರನಾದ ಇಂದ್ರನ ವಜ್ರಾಯುಧದಂತೆ ಆ ಮಹಾಸ್ತ್ರವು ಎದುರಿಸಲು ಅಸಾಧ್ಯವಾಗಿದ್ದಿತು. ಮೃತ್ಯುವಿನಂತೆ ಅನಿ ವಾರ್ಯವಾಗಿದ್ದ ಅದು ರಾವಣನ ವಕ್ಷಃಸ್ಥಳದಲ್ಲಿ ಬಿದ್ದಿತು. ಮಹಾವೇಗ ಯುಕ್ತವಾದ, ಶರೀರಾಂತಕರವಾದ, ಅತ್ಯಂತಶ್ರೇಷ್ಠವಾದ, ಶ್ರೀರಾಮನಿಂದ ಬಿಡಲ್ಪಟ್ಟ ಆ ಮಹಾಸ್ತ್ರವು ದುರಾತ್ಮನಾದ ರಾವಣನ ಹೃದಯವನ್ನು ಭೇದಿಸಿ ವೇಗದಿಂದ ವಕ್ಷಃಸ್ಥಳವನ್ನು ಹೊಕ್ಕು ರಕ್ತದಿಂದ ನೆನೆದು ಕೆಂಪಾಗಿ ರಾವಣನ ಪ್ರಾಣಗಳನ್ನು ಅಪಹರಿಸಿಕೊಂಡು ಹೊರಬಂದು ಭೂಮಿಯಲ್ಲಿ ಬಿದ್ದಿತು. ಹೀಗೆ ಆ ಬಾಣವು ರಾವಣನನ್ನು ಸಂಹರಿಸಿ ರಕ್ತದಿಂದ ತೋಯ್ದು ಶೋಭಾಯಮಾನವಾಗಿ ಕಾಣುತ್ತಾ ಸ್ವಾಮಿಯ ಕಾರ್ಯವನ್ನು ಪೂರೈಸಿ ವಿನೀತನಂತೆ ಪುನಃ ಶ್ರೀರಾಮನ ಬತ್ತಳಿಕೆಯಲ್ಲಿ ಸೇರಿಕೊಂಡಿತು. ಶ್ರೀರಾಮನ ಬಾಣದಿಂದ ಹತನಾಗಿ ಪ್ರಾಣಗಳಿಂದಲೂ ಮತ್ತು ಜೀವನ ದಿಂದಲೂ ಭ್ರಷ್ಟನಾದ ರಾವಣನ ಬಾಣಸಹಿತವಾದ ಧನುಸ್ಸು ಜಾರಿ ಕೆಳಕ್ಕೆ ಬಿದ್ದಿತು. ಭಯಂಕರವೇಗನಾದ, ಮಹಾದ್ಯುತಿಯಾದ, ರಾಕ್ಷಸೇಂದ್ರ ನಾದ ರಾವಣನು ವಜ್ರಾಯುಧದಿಂದ ಹತನಾದ ವೃತ್ರಾಸುರನಂತೆ–ಅಸುನೀಗಿ ರಥದಿಂದ ಕೆಳಕ್ಕೆ ಬಿದ್ದನು. ಅವನು ಬಿದ್ದುದನ್ನು ನೋಡಿ ಅಳಿದುಳಿದಿದ್ದ, ಒಡೆಯನನ್ನು ಕಳೆದುಕೊಂಡ ರಾಕ್ಷಸರು ಭಯಭೀತರಾಗಿ ದಿಕ್ಕು-ದಿಕ್ಕುಗಳಿಗೂ ಓಡಿಹೋದರು. ದಶಗ್ರೀವನು ಹತನಾದುದನ್ನು ಕಂಡು ವಿಜಯದಿಂದ ಪ್ರಕಾಶಮಾನರಾಗಿ ಕಾಣುತ್ತಿದ್ದ ವೃಕ್ಷಯೋಧಿಗಳಾದ ವಾನರರು ಗರ್ಜನೆಮಾಡುತ್ತಾ ಪಲಾಯನಮಾಡುತ್ತಿದ್ದ ರಾಕ್ಷಸರ ಮೇಲೆ ದಾಳಿನಡೆಸಿದರು. ಹರ್ಷೋಲ್ಲಸಿತರಾದ ವಾನರರಿಂದ ಪೀಡಿಸಲ್ಪಡುತ್ತಿದ್ದ ರಾಕ್ಷಸರು ಆಶ್ರಯಹೀನರಾಗಿದ್ದ ಕಾರಣ ಭಯಪಟ್ಟುಕೊಂಡು ಕರುಣಾ

ಜನಕವಾದ ಕಣ್ಣೀರಿನ ಧಾರೆಗಳಿಂದ ಕೂಡಿದ ಮುಖಗಳನ್ನು ಹೊತ್ತು ಲಂಕಾ ಪಟ್ಟಣದ ಕಡೆಗೆ ಪಲಾಯನಮಾಡಿದರು.

ವಿಜಯಲಕ್ಷ್ಮಿಯಿಂದ ಸುಶೋಭಿತರಾಗಿದ್ದ ವಾನರರು ಶ್ರೀರಾಮನ ವಿಜಯವನ್ನೂ ರಾವಣನ ವಧೆಯನ್ನೂ ಘೋಷಣೆಮಾಡುತ್ತಾ ಪರಮಹೃಷ್ಟ ರಾಗಿ ಸಿಂಹನಾದಗಳನ್ನು ಮಾಡಿದರು. ಆ ಸಮಯದಲ್ಲಿ ಆಕಾಶದಲ್ಲಿ ಸೌಮ್ಯ ವಾಗಿಯೂ ಮಧುರಸ್ವರದಿಂದಲೂ ದೇವದುಂದುಭಿಗಳು ಮೊಳಗಿದುವು. ವಾಯುವು ದಿವ್ಯಗಂಧವನ್ನು ಹೊತ್ತು ಸುಖಾವಹನಾಗಿ ಬೀಸತೊಡಗಿದನು. ದುರ್ಲಭವಾದ ಮತ್ತು ಮನೋಹರವಾದ ಪುಷ್ಪವೃಷ್ಟಿಯು ಅಂತರಿಕ್ಷದಿಂದ ಶ್ರೀರಾಮನ ರಥವನ್ನೇ ಮುಚ್ಚುವ ರೀತಿಯಲ್ಲಿ ಭೂಮಿಯ ಮೇಲೆ ಸುರಿ ಯಿತು. ಶ್ರೀರಾಮನ ಸ್ತುತಿಯುಕ್ತವಾದ 'ಸಾಧು! ರಾಘವ! ಸಾಧು!' ಎಂಬ ಮಹಾತ್ಮರಾದ ದೇವತೆಗಳ ಶ್ರೇಷ್ಠವಾದ ಮಾತುಗಳು ಅಂತರಿಕ್ಷದಲ್ಲಿ ಕೇಳಿಬಂದುವು. ಸರ್ವಲೋಕಭಯಂಕರನಾದ ರೌದ್ರನಾದ ರಾವಣನು ಹತನಾಗಲು ದೇವತೆಗಳಿಗೂ ಚಾರಣರಿಗೂ ಹೆಚ್ಚು ಹರ್ಷವುಂಟಾಯಿತು. ರಾಘವನು ರಾಕ್ಷಸಶ್ರೇಷ್ಠನಾದ ರಾವಣನನ್ನು ಸಂಹರಿಸಿ ಸುಗ್ರೀವಾಂಗದ ರನ್ನೂ ವಿಭೀಷಣನನ್ನೂ ಕೈಗೂಡಿದ ಇಷ್ಟಾರ್ಥವುಳ್ಳವರನ್ನಾಗಿ ಮಾಡಿದುದ ಲ್ಲದೇ ತಾನು ಅತಿಪ್ರಸನ್ನನಾದನು. ರಾವಣನ ಸಂಹಾರವಾದನಂತರ ದೇವತೆ ಗಳೆಲ್ಲರೂ ಪರಮಶಾಂತಿಯನ್ನು ಹೊಂದಿದರು. ಎಲ್ಲ ದಿಕ್ಕುಗಳೂ ಪ್ರಸನ್ನ ವಾದುವು. ಆಕಾಶವು ನಿರ್ಮಲವಾಯಿತು. ಭೂಮಿಯ ಕಂಪನವು ಸ್ಥಗಿತ ವಾಯಿತು. ಗಾಳಿಯು ಮೆಲ್ಲ-ಮೆಲ್ಲನೆ ಬೀಸತೊಡಗಿತು. ಸೂರ್ಯನೂ ಸ್ಥಿರವಾದ ಪ್ರಭೆಯುಳ್ಳವನಾದನು. ಲಕ್ಷ್ಮಣನಿಂದ ಕೂಡಿದ ಸುಗ್ರೀ ವಾಂಗದ-ವಿಭೀಷಣರು ತಮ್ಮ ಸುಹೃದರೊಡನೆ ರಾಘವನ ವಿಜಯ ದಿಂದ ಪರಮಹೃಷ್ಟರಾದರು. ಅನಂತರ ಅವರೆಲ್ಲರೂ ಸೇರಿ ನಯನಾಭಿ ರಾಮನಾದ ಶ್ರೀರಾಮನನ್ನು ವಿಧಿವತ್ತಾಗಿ ಪೂಜಿಸಿದರು. ಶತ್ರುವನ್ನು ಸಂಹರಿಸಿ ಪ್ರತಿಜ್ಞೆಯನ್ನು ಪೂರೈಸಿದ, ಸ್ವಜನರಿಂದಲೂ ವಾನರಸೈನಿಕ ರಿಂದಲೂ ಪರಿವೃತನಾಗಿದ್ದ, ಮಹಾತೇಜಸ್ವಿಯಾದ, ರಘುಕುಲರಾಜ

ಕುಮಾರನಾದ ಶ್ರೀರಾಮನು ಮಹಾತೇಜಸ್ವಿಯಾದ ದೇವತೆಗಳಿಂದ ಪರಿವೃತನಾದ ಮಹೇಂದ್ರನಂತೆಯೇ ರಣಭೂಮಿಯಲ್ಲಿ ರಾರಾಜಿಸಿದನು.

೧೧೦ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೧೧೧ನೆಯ ಸರ್ಗ

ವಿಭೀಷಣನ ದುಃಖ : ಶ್ರೀರಾಮನಿಂದ ಸಮಾಧಾನ : ರಾವಣನ ಸಂಸ್ಕಾರವನ್ನು ಮಾಡುವಂತೆ ಶ್ರೀರಾಮನು ವಿಭೀಷಣನಿಗೆ ಆದೇಶವನ್ನಿತ್ತುದು

ಭ್ರಾತರಂ ನಿಹತಂ ದೃಷ್ಟ್ವಾ ಶಯಾನಂ ನಿರ್ಜಿತಂ ರಣೇ ।
ಶೋಕವೇಗಪರೀತಾತ್ಮಾ ವಿಲಲಾಪ ವಿಭೀಷಣಃ ॥೧॥

ಪರಾಜಿತನಾದ ಅಣ್ಣನು ರಣರಂಗದಲ್ಲಿ ಸತ್ತುಬಿದ್ದಿರುವುದನ್ನು ನೋಡಿ ವಿಭೀಷಣನು ಶೋಕದ ವೇಗದಿಂದ ವ್ಯಾಕುಲನಾಗಿ ವಿಲಪಿಸತೊಡಗಿದನು.

"ವೀರನೇ! ವಿಖ್ಯಾತಪರಾಕ್ರಮಿಯೇ! ಸಮರಪ್ರವೀಣನೇ! ನೀತಿವಿಶಾರದನೇ! ನೀನು ಹೆಚ್ಚು ಬೆಲೆಬಾಳುವ ಹಂಸತೂಲಿಕಾತಲ್ಪದಲ್ಲಿ ಮಲಗುತ್ತಿದ್ದೆ. ಆದರೆ ಈಗ ಮರಣಹೊಂದಿ ಭೂಮಿಯ ಮೇಲೇಕೆ ಮಲಗಿರುವೆ! ವೀರನೇ! ತೋಳ್ಬಳೆಗಳಿಂದ ಸಮಲಂಕೃತವಾಗಿರುವ, ದೀರ್ಘವಾಗಿರುವ, ಚಲನೆಯೇ ಇಲ್ಲದ ತೋಳುಗಳನ್ನು ಹರಡಿಕೊಂಡೇಕೆ ಮಲಗಿರುವೆ? ಸೂರ್ಯನ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಕೂಡಿರುವ ನಿನ್ನ ಕಿರೀಟವು ಸರಿದು ಬಿದ್ದಿದೆ. ವೀರನೇ! ಈಗ ನಿನಗೆ ಯಾವುದು ಒದ ಗಿದೆಯೋ ಅದನ್ನು ನಾನು ಬಹಳ ಹಿಂದೆಯೇ ನಿನಗೆ ಹೇಳಿದ್ದೆನು. ಆದರೆ ಕಾಮ-ಮೋಹಗಳಿಂದ ಕೂಡಿದ್ದ ನಿನಗೆ ನನ್ನ ಮಾತುಗಳು ರುಚಿಸಲಿಲ್ಲ. ದರ್ಪದ ಕಾರಣದಿಂದ ಪ್ರಹಸ್ತನಾಗಲೀ, ಇಂದ್ರಜಿತುವಾಗಲೀ, ಕುಂಭಕರ್ಣನಾಗಲೀ, ಅತಿರಥನಾದ ಅತಿಕಾಯನಾಗಲೀ, ನರಾಂತಕನಾಗಲೀ, ಸ್ವತಃ ನೀನೇ ಆಗಲೀ–ನನ್ನ ಮಾತುಗಳಿಗೆ ಮಹತ್ತ್ವವನ್ನು ಕೊಡಲಿಲ್ಲ. ಅದರ ಫಲವೇ ಈಗ ಪ್ರಾಪ್ತವಾಗಿದೆ.

ಗತಃ ಸೇತುಃ ಸುನೀತಾನಾಂ ಗತೋ ಧರ್ಮಸ್ಯ ವಿಗ್ರಹಃ ।
ಗತಃ ಸತ್ತ್ವಸ್ಯ ಸಂಕ್ಷೇಪಃ ಸುಹಸ್ತಾನಾಂ ಗತಿರ್ಗತಾ ॥೬॥

ಆದಿತ್ಯಃ ಪತಿತೋ ಭೂಮೌ ಮಗ್ನಸ್ತಮಸಿ ಚನ್ದ್ರಮಾಃ ।
ಚಿತ್ರಭಾನುಃ ಪ್ರಶಾನ್ತಾರ್ಚಿರ್ವ್ಯವಸಾಯೋ ನಿರುದ್ಯಮಃ ।
ಅಸ್ಮಿನ್ನಿಪತಿತೇ ಭೂಮೌ ವೀರೇ ಶಸ್ತ್ರಭೃತಾಂ ವರೇ ॥೭॥

ಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ ವೀರನಾದ ರಾವಣನು ಪ್ರಾಣಗಳನ್ನು ತೊರೆದು ಭೂಮಿಯಲ್ಲಿ ಬೀಳಲಾಗಿ–ಒಳ್ಳೆಯ ನೀತಿವಂತರಿಗೆ ನೀತಿ ಮಾರ್ಗದ ಸೇತುವೆಯೇ ಕುಸಿದುಬಿದ್ದಂತಾಗಿದೆ. ಧರ್ಮದ ಮೂರ್ತಿಯೇ ಇಂದು ವಿನಾಶಹೊಂದಿದಂತಾಗಿದೆ. ಸತ್ತ್ವವೆಂಬುದೇ ಎಲ್ಲೆಲ್ಲಿಯೂ ಉಡುಗಿ ಹೋದಂತಾಗಿದೆ. ವೀರರಾದವರಿಗೆ ಆಶ್ರಯವೇ ಇಲ್ಲದಾಗಿದೆ. ಉತ್ತಮ ವಾದ ಸ್ತುತಿಗೆ ಯೋಗ್ಯನಾದವನೇ ಇಲ್ಲದಂತಾಗಿದೆ. ಸೂರ್ಯದೇವನೇ ಭೂಮಿಗೆ ಬಿದ್ದಂತಾಗಿದೆ. ಚಂದ್ರನು ಕತ್ತಲಿನಲ್ಲಿ ಮುಳುಗಿಹೋದಂತಾಗಿದೆ.

ಅಗ್ನಿಯು ಜ್ವಾಲೆಗಳಿಂದ ರಹಿತನಾದಂತಾಗಿದೆ. ಉತ್ಸಾಹವೆಂಬುದೇ ನಿರರ್ಥಕ ವಾದಂತಾಗಿದೆ.

ರಣರಂಗದ ಧೂಳಿನಲ್ಲಿ ರಾಕ್ಷಸಶ್ರೇಷ್ಠನಾದ ರಾವಣನು ಗಾಢನಿದ್ರೆ ಯಲ್ಲಿರುವವನಂತೆ ಪ್ರಾಣತೊರೆದು ಮಲಗಿರುವಾಗ ಸತ್ತ್ವಹೀನವಾದ ಲಂಕೆ ಯಲ್ಲಿ ಅಲ್ಲಿಯ ಜನರಿಗೆ ಯಾವುದು ತಾನೇ ಉಳಿದಿದೆ? ಲಂಕೆಯಲ್ಲಿರುವ ಪ್ರಜೆಗಳೆಲ್ಲರೂ ನಿರಾಶ್ರಿತರೇ ಆಗಿಬಿಟ್ಟಿದ್ದಾರೆ.

ಅಯ್ಯೋ! ರಾಕ್ಷಸರಾಜವೃಕ್ಷಕ್ಕೆ ಧೈರ್ಯವೆಂಬುದೇ ಚಿಗುರಾಗಿದ್ದಿತು. ಧಾರ್ಷ್ಟ್ಯವೆಂಬುದೇ ಸುಂದರವಾದ ಹೂವಾಗಿದ್ದಿತು. ತಪಸ್ಸೆಂಬುದೇ ಬಲ ವಾಗಿದ್ದಿತು. ಶೌರ್ಯವೆಂಬುದೇ ಬೇರಾಗಿದ್ದಿತು. ಅಂತಹ ಮಹಾವೃಕ್ಷ ವಿಂದು ರಾಘವನೆಂಬ ಬಿರುಗಾಳಿಯಿಂದ ಬುಡಮೇಲಾಗಿ ಮಾಡಲ್ಪಟ್ಟಿತು. ರಾವಣನೆಂಬ ಗಂಧಹಸ್ತಿಗೆ ತೇಜಸ್ಸೆಂಬುದೇ ದಂತವಾಗಿದ್ದಿತು. ವಂಶ ಪರಂಪರೆಯೆಂಬುದೇ ಅದರ ಪೃಷ್ಠಭಾಗವಾಗಿದ್ದಿತು. ಕೋಪವೇ ಕೆಳಗಿನ ಅಂಗವಾಗಿದ್ದಿತು. ಪ್ರಸಾದವೆಂಬುದೇ ಸೊಂಡಿಲಾಗಿದ್ದಿತು. ಅಂತಹ ರಾವಣ ರೂಪಿಯಾದ ಮದವೇರಿದ ಆನೆಯು ಇಕ್ಷ್ವಾಕುವಂಶದ ರಾಮರೂಪಿಯಾದ ಸಿಂಹದಿಂದ ಸೀಳಲ್ಪಟ್ಟು ಅಸುನೀಗಿ ರಣರಂಗದಲ್ಲಿ ಮಲಗಿದೆ. ಪರಾಕ್ರಮೋ ತ್ಸಾಹಗಳು ಯಾವ ರಾವಣರೂಪನಾದ ಅಗ್ನಿಯ ವೃದ್ಧಿಸುತ್ತಿರುವ ಜ್ವಾಲೆಗಳಿಗೆ ಸಮಾನವಾಗಿದ್ದುವೋ, ನಿಃಶ್ವಾಸವೆಂಬುದೇ ಹೊಗೆಯಂತಿದ್ದಿತೋ, ಸ್ವಬಲವೆಂಬುದೇ ದಾಹಶಕ್ತಿಯಾಗಿದ್ದಿತೋ–ಅಂತಹ ಪ್ರತಾಪವಂತನಾದ ರಾವಣರಾಕ್ಷಸರೂಪನಾದ ಅಗ್ನಿಯು ಯುದ್ಧಭೂಮಿಯಲ್ಲಿ ರಾಮರೂಪ ನಾದ ಮೇಘದಿಂದ ಆರಿಸಲ್ಪಟ್ಟಿದ್ದಾನೆ. ರಾವಣರೂಪನಾದ ಯಾವ ಗೂಳಿಗೆ ರಾಕ್ಷಸಸೈನಿಕರೇ ಬಾಲ, ಹಿಳಲು ಮತ್ತು ಕೋಡುಗಳ ರೂಪದಲ್ಲಿದ್ದರೋ, ಎದುರಾಳಿಯಾಗಿ ಬಂದ ಶತ್ರುರೂಪಿಯಾದ ಗೂಳಿಯನ್ನು ಯಾವನು ಮರ್ದನಮಾಡಿ ವಿಜಯಿಯಾಗುತ್ತಿದ್ದನೋ, ಉತ್ಸಾಹಾದಿಗಳನ್ನು ಪ್ರಕಟಿ ಸುವುದರಲ್ಲಿ ವಾಯುವೇ ಪ್ರಾಣರೂಪನಾಗಿದ್ದನೋ, ಚಾಪಲ್ಯವೆಂಬುದೇ ಕಣ್ಣು-ಕಿವಿಗಳಾಗಿದ್ದುವೋ–ಅಂತಹ ಗೂಳಿಯು ಶ್ರೀರಾಮರೂಪಿಯಾದ ವ್ಯಾಘ್ರದಿಂದ ಕೊಲ್ಲಲ್ಪಟ್ಟು ವಿನಾಶಹೊಂದಿತು."

ಚೆನ್ನಾಗಿ ಯೋಚಿಸಿ ನಿರ್ಣಯಿಸಿದ ಮತ್ತು ಯುಕ್ತಿಯುಕ್ತವಾದ

ಮಾತನ್ನು ಹೇಳುತ್ತಿದ್ದ ಮತ್ತು ಅಣ್ಣನ ಮರಣದಿಂದ ಶೋಕಮಗ್ನನಾಗಿದ್ದ ವಿಭೀಷಣನಿಗೆ ಶ್ರೀರಾಮನು ಹೇಳಿದನು :

ನಾಯಂ ವಿನಷ್ಟೋ ನಿಶ್ಚೇಷ್ಟಃ ಸಮರೇ ಚಣ್ಡವಿಕ್ರಮಃ ।
ಅತ್ಯುನ್ನತಮಹೋತ್ಸಾಹಃ ಪತಿತೋಽಯಮಶಙ್ಕಿತಃ ॥೧೪॥

"ವಿಭೀಷಣ! ನಿನ್ನ ಅಣ್ಣನಾದ ರಾವಣನು ರಣರಂಗದಲ್ಲಿ ಅಸಮರ್ಥನಾಗಿ ಸಾಯಲಿಲ್ಲ. ಯುದ್ಧದಲ್ಲಿವನು ಪ್ರಚಂಡವಾದ ಪರಾಕ್ರಮವನ್ನೇ ತೋರಿದನು. ಇವನ ಉತ್ಸಾಹವೂ ಅತ್ಯುನ್ನತವಾದ ಮಟ್ಟದಲ್ಲಿದ್ದಿತು. ತನ್ನ ವಿಜಯದಲ್ಲಿ ಇವನಿಗೆ ಸಂದೇಹವೇ ಇರಲಿಲ್ಲ. ಆದರೂ ದೈವಯೋಗದಿಂದ ಇವನು ಪ್ರಾಣವನ್ನು ತೊರೆದು ಭೂಮಿಯಲ್ಲಿ ಬಿದ್ದನು.

ನೈವಂ ವಿನಿಷ್ಟಾಃ ಶೋಚ್ಯನ್ತೇ ಕ್ಷತ್ರಧರ್ಮಮವಸ್ಥಿತಾಃ ।
ವೃದ್ಧಿಮಾಶಂಸಮಾನಾ ಯೇ ನಿಪತನ್ತಿ ರಣಾಜಿರೇ ॥೧೫॥

ಯಾರು ತಮ್ಮ ಅಭ್ಯುದಯದ ಆಕಾಂಕ್ಷೆಯಿಂದ ಕ್ಷತ್ರಧರ್ಮದಲ್ಲಿ ಸುಪ್ರತಿಷ್ಠಿತರಾಗಿದ್ದು ಯುದ್ಧಮಾಡುತ್ತಾ ರಣಭೂಮಿಯಲ್ಲಿ ಪ್ರಾಣ ತೊರೆಯುವರೋ–ಅಂತಹವರ ವಿಷಯದಲ್ಲಿ ಹೀಗೆ ಯಾರೂ ಶೋಕಪಡುವುದಿಲ್ಲ.

ಯೇನ ಸೇನ್ದ್ರಾಸ್ತ್ರಯೋ ಲೋಕಾಸ್ತ್ರಾಸಿತಾ ಯುಧಿ ಧೀಮತಾ ।
ತಸ್ಮಿನ್ಕಾಲಸಮಾಯುಕ್ತೇ ನ ಕಾಲಃ ಪರಿಶೋಚಿತುಮ್ ॥೧೬॥

ಯಾವ ಧೀಮಂತನಾದ ವೀರರಾವಣನು ಇಂದ್ರಸಹಿತವಾದ ಮೂರು ಲೋಕಗಳನ್ನೂ ಯುದ್ಧದಲ್ಲಿ ಭಯಗೊಳಿಸುತ್ತಿದ್ದನೋ–ಅಂತಹವನಿಂದು ಕಾಲದ ವಶನಾದರೆ ಇವನ ವಿಷಯದಲ್ಲಿ ಶೋಕಪಡಲು ಇದು ಸಮಯವಲ್ಲ.

ನೈಕಾನ್ತವಿಜಯೋ ಯುದ್ಧೇ ಭೂತಪೂರ್ವಃ ಕದಾಚನ ।
ಪರೈರ್ವಾ ಹನ್ಯತೇ ವೀರಃ ಪರಾನ್ವಾ ಹನ್ತಿ ಸಂಯುಗೇ ॥೧೭॥

ಯುದ್ಧದಲ್ಲಿ ಯಾರಿಗೇ ಆಗಲೀ ಎಲ್ಲ ಕಾಲದಲ್ಲಿಯೂ ವಿಜಯವೇ ಲಭಿಸುವುದೆಂಬುದು ಹಿಂದೆಂದೂ ಕೇಳಿಬಂದಿಲ್ಲ. ವೀರಪುರುಷನು ಯುದ್ಧಗಳಲ್ಲಿ ಶತ್ರುಗಳನ್ನು ಸಂಹರಿಸುತ್ತಾನೆ. ಅಥವಾ ಶತ್ರುಗಳಿಂದ ಕೊಲ್ಲಲ್ಪಡುತ್ತಾನೆ. ಇವೆರಡರಲ್ಲಿ ಯಾವುದಾದರೂ ಒಂದು ಯಾವಾಗಲಾದರೂ ಆಗಲೇಬೇಕಾಗಿದೆ.

ಇಯಂ ಹಿ ಪೂರ್ವೈಃ ಸಂದಿಷ್ಟಾ ಗತಿಃ ಕ್ಷತ್ರಿಯಸಂಮತಾ ।
ಕ್ಷತ್ರಿಯೋ ನಿಹತಃ ಸಂಖ್ಯೇ ನ ಶೋಚ್ಯ ಇತಿ ನಿಶ್ಚಯಃ ॥೧೮॥

ಈಗ ರಾವಣನಿಗೆ ಯಾವ ಗತಿಯು ಪ್ರಾಪ್ತವಾಗಿರುವುದೋ–ಇದು ಹಿಂದಿನ 'ಮಹಾಪುರುಷರಿಂದ ನಿಶ್ಚಯಿಸಲ್ಪಟ್ಟಿರುವ ಉತ್ತಮಗತಿಯೇ ಆಗಿದೆ. ಕ್ಷತ್ರಿಯಧರ್ಮಕ್ಕೆ ಇದು ಸಮ್ಮತವಾಗಿಯೇ ಇದೆ. ಯುದ್ಧದಲ್ಲಿ ಮಡಿದ ಕ್ಷತ್ರಿಯನಿಗಾಗಿ ಶೋಕಿಸಬಾರದೆಂಬುದು ಶಾಸ್ತ್ರದ ಸಿದ್ಧಾಂತವಾಗಿದೆ. ಶಾಸ್ತ್ರದಲ್ಲಿಯೇ ಇಂತಹ ನಿಶ್ಚಯವಿರುವುದೆಂಬುದನ್ನು ಕಂಡುಕೊಂಡು ಪಾರಮಾರ್ಥಿಕಬುದ್ಧಿಯನ್ನವಲಂಬಿಸಿ ನಿಶ್ಚಿಂತನಾಗಿ ಮುಂದೆ ಮಾಡಬೇಕಾಗಿ ರುವ ಪ್ರೇತಸಂಸ್ಕಾರವೇ ಮೊದಲಾದ ಕಾರ್ಯಗಳ ವಿಷಯವಾಗಿ ಸಮಾ ಲೋಚಿಸು."

ಮಹಾಪರಾಕ್ರಮಿಯಾದ ರಾಜಪುತ್ರನಾದ ಶ್ರೀರಾಮನು ಹೀಗೆ ಹೇಳಲು–ಅಣ್ಣನ ಮರಣದಿಂದ ಶೋಕತಪ್ತನಾಗಿದ್ದ ವಿಭೀಷಣನು ಅಣ್ಣನಿಗೆ ಮುಂದೆ ಹಿತವಾಗುವಂತಹ ಮಾತನ್ನು ಹೇಳಿದನು :

"ರಾಘವ! ಈ ನಮ್ಮ ಅಣ್ಣನಾದ ರಾವಣನು ಈ ಹಿಂದೆ ನಡೆದ ಅನೇಕ ಯುದ್ಧಗಳಲ್ಲಿ ಇಂದ್ರನಿಂದಾಗಲೀ ಸಮಸ್ತದೇವತೆಗಳಿಂದಾಗಲೀ ಪರಾ ಜಿತನಾಗಿರಲಿಲ್ಲ. ಸಮುದ್ರವು ತೀರಪ್ರದೇಶದವರೆಗೂ ಬಂದು ಶಾಂತವಾಗು ವಂತೆ–ನಿನ್ನೊಡನೆ ಯುದ್ಧದಲ್ಲಿ ತೊಡಗಿ ಭಗ್ನನಾಗಿಹೋದನು.

ಇವನು ಬದುಕಿದ್ದಾಗ ಯಾಚಕರಿಗೆ ಹೇರಳವಾಗಿ ದಾನಮಾಡಿದ್ದನು. ಸಮಸ್ತವಾದ ಸುಖೋಪಭೋಗಗಳನ್ನೂ ಅನುಭವಿಸಿದ್ದನು. ಸೇವಕರ ಭರಣ-ಪೋಷಣೆಗಳನ್ನು ಮಾಡಿದ್ದನು. ಮಿತ್ರರಿಗೆ ಧನ-ಕನಕ-ವಸ್ತುಗಳನ್ನು ಸಮರ್ಪಿಸಿದ್ದನು. ಶತ್ರುಗಳಲ್ಲಿ ವೈರಭಾವವನ್ನು ಸಫಲಗೊಳಿಸಿದ್ದನು. (ಸಮಯನೋಡಿ ಶತ್ರುಗಳನ್ನು ದಂಡಿಸುತ್ತಿದ್ದನು.)

ಏಷೋಽಹಿತಾಗ್ನಿಶ್ಚ ಮಹಾತಪಾಶ್ಚ
ವೇದಾನ್ತಗಃ ಕರ್ಮಸು ಚಾಗ್ರ್ಯವೀರ್ಯಃ ।
ಏತಸ್ಯ ಯತ್ಪ್ರೇತಗತಸ್ಯ ಕೃತ್ಯಂ
ತತ್ಕರ್ತುಮಿಚ್ಛಾಮಿ ತವ ಪ್ರಸಾದಾತ್ ॥೨೩॥

ನನ್ನ ಅಣ್ಣನಾದ ಈ ರಾವಣನು ಅಗ್ನಿಹೋತ್ರಿಯೂ, ಮಹಾ

ತಪಸ್ವಿಯೂ, ವೇದಗಳನ್ನು ಸಂಪೂರ್ಣವಾಗಿ ಕೊನೆಯವರೆಗೂ ತಿಳಿದವನೂ, ಯಜ್ಞ-ಯಾಗಾದಿಕರ್ಮಗಳನ್ನು ಮಾಡುವುದರಲ್ಲಿ ಶ್ರೇಷ್ಠನೂ, ಶೂರನೂ ಆಗಿದ್ದನು. (ಅತ್ಯಂತ ಕರ್ಮಠನಾಗಿದ್ದನು.) ಮರಣಾನಂತರದಲ್ಲಿ ಇವನು ಪ್ರೇತಭಾವವನ್ನು ಹೊಂದಿದ್ದಾನೆ. ಈಗ ನಾನೇ ಇವನಿಗೆ ನಿನ್ನ ಕೃಪೆಯಿಂದ ಪ್ರೇತಕಾರ್ಯಗಳನ್ನು ಮಾಡಲು ಬಯಸಿದ್ದೇನೆ."

ವಿಭೀಷಣನ ಕರುಣಾಜನಕವಾದ ಮಾತುಗಳ ಮೂಲಕವಾಗಿ ಚೆನ್ನಾಗಿ ಬೋಧಿಸಲ್ಪಟ್ಟ ಉದಾರಚಿತ್ತನಾದ, ನರೇಂದ್ರಪುತ್ರನಾದ ಶ್ರೀರಾಮನು ರಾವಣನಿಗೆ ಸ್ವರ್ಗಲೋಕಪ್ರಾಪಕವಾದ ಅಂತ್ಯೇಷ್ಟಿಕರ್ಮಗಳನ್ನು ಮಾಡುವಂತೆ ಆಜ್ಞಾಪಿಸಿದನು.

ಮರಣಾನ್ತಾನಿ ವೈರಾಣಿ ನಿರ್ವೃತ್ತಂ ನಃ ಪ್ರಯೋಜನಮ್ ।
ಕ್ರಿಯತಾಮಸ್ಯ ಸಂಸ್ಕಾರೋ ಮಮಾಪ್ಯೇಷ ಯಥಾ ತವ ॥೨೫॥

"ವಿಭೀಷಣ! ಸಾಯುವವರೆಗೂ ವೈರವೆಂಬುದಿರುತ್ತದೆ. ಸತ್ತ ನಂತರ ಆ ವೈರದ ಅಂತ್ಯವೂ ಆಗಿಬಿಡುತ್ತದೆ. ನಮ್ಮ ಕಾರ್ಯವೀಗ ನೆರ ವೇರಿದೆ. ಆದುದರಿಂದ ನೀನೀಗ ಇವನ ಅಂತ್ಯಸಂಸ್ಕಾರವನ್ನು ಯಥಾವಿಧಿ ಯಾಗಿ ಮಾಡು. ರಾವಣನು ನಿನಗೆ ಹೇಗೆ ಸ್ನೇಹಪಾತ್ರನೋ ಹಾಗೆಯೇ ನನಗೂ ಸ್ನೇಹಪಾತ್ರನಾಗಿದ್ದಾನೆ."

೧೦೯ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೧೧೦ನೆಯ ಸರ್ಗ

ರಾವಣನ ಅಂತಃಪುರಸ್ತ್ರೀಯರ ವಿಲಾಪ

ರಾವಣಂ ನಿಹತಂ ಶ್ರುತ್ವಾ ರಾಘವೇಣ ಮಹಾತ್ಮನಾ ।
ಅನ್ತಃಪುರಾದ್ವಿನಿಷ್ಪೇತೂ ರಾಕ್ಷಸ್ಯಃ ಶೋಕಕರ್ಶಿತಾಃ ॥೧॥

ಮಹಾತ್ಮನಾದ ಶ್ರೀರಾಮನಿಂದ ರಾವಣನು ಹತನಾದನೆಂಬುದನ್ನು ಕೇಳಿ ಶೋಕಪೀಡಿತರಾದ ಸ್ತ್ರೀಯರು ಗೋಳಾಡುತ್ತಾ ಅಂತಃಪುರದಿಂದ ಹೊರಗೆ ಬಂದರು.

ಸೇವಕಿಯರು ಪುನಃ ಪುನಃ ತಡೆಯುತ್ತಿದ್ದರೂ ಆ ಸ್ತ್ರೀಯರು ನೆಲದ

ಧೂಳಿನಲ್ಲಿ ಬಿದ್ದು ಹೊರಳಾಡುತ್ತಿದ್ದರು. ತಲೆಗೆದರಿಕೊಂಡಿದ್ದ ಅವರೆಲ್ಲರೂ ಕರುಗಳನ್ನು ಕಳೆದುಕೊಂಡ ಹಸುಗಳಂತೆ ಶೋಕಪೀಡಿತರಾಗಿದ್ದರು. ಅನಂತರ ಅವರೆಲ್ಲರೂ ರಾಕ್ಷಸರೊಡನೆ ಲಂಕಾಪಟ್ಟಣದ ಉತ್ತರದ ಬಾಗಿಲಿನ ಮೂಲಕವಾಗಿ ಹೊರಹೊರಟು ಭಯಂಕರವಾದ ರಣಭೂಮಿಗೆ ಹೋಗಿ ಹತನಾದ ತಮ್ಮ ಪತಿಯನ್ನು ಅರಸತೊಡಗಿದರು. 'ಅಯ್ಯೋ! ಆರ್ಯಪುತ್ರ! ಎಲ್ಲಿರುವೆ? ಹಾ ನಾಥ! ಎಲ್ಲಿ ಬಿದ್ದಿರುವೆ? ಮಾತನಾಡೆಯಾ!' ಮುಂತಾಗಿ ಕೂಗಿಕೊಳ್ಳುತ್ತಾ ರಕ್ತದ ಕೆಸರಿನಿಂದ ಕೂಡಿದ್ದ, ಎಲ್ಲೆಲ್ಲಿಯೂ ರುಂಡಗಳಿಲ್ಲದ ಮುಂಡಗಳೇ ಇದ್ದ ರಣಭೂಮಿಯಲ್ಲಿ ಬೀಳುತ್ತೇಳುತ್ತಾ ಹುಡುಕಾಡುತ್ತಿದ್ದರು. ಎಲ್ಲರ ಕಣ್ಣುಗಳೂ ಕಣ್ಣೀರಿನಿಂದ ತುಂಬಿಹೋಗಿದ್ದುವು. ಪತಿಯನ್ನಗಲಿದ ಶೋಕದಿಂದ ಅತ್ತು-ಅತ್ತು ಸೋತು ಹೋಗಿದ್ದ ಅಂತಃಪುರದ ಸ್ತ್ರೀಯರು ಸಲಗವು ಸತ್ತುಹೋದನಂತರ ಕೂಗಿಕೊಂಡು ಅಲೆದಾಡುವ ಹೆಣ್ಣಾನೆಗಳಂತೆ ರಣಭೂಮಿಯಲ್ಲಿ ಕರುಣಾಜನಕವಾಗಿ ರೋದನಮಾಡುತ್ತಾ ಅಲೆದಾಡುತ್ತಿದ್ದರು. ಹೀಗೆ ಅಲೆದಾಡುತ್ತಿದ್ದಾಗ ಮಹಾಕಾಯನೂ, ಮಹಾವೀರ್ಯನೂ, ಮಹಾದ್ಯುತಿಮಂತನೂ, ಕಾಡಿಗೆಯ ರಾಶಿಯಂತೆ ನೀಲವರ್ಣನೂ ಆಗಿದ್ದ, ಹತನಾಗಿ ಬಿದ್ದಿದ್ದ ರಾವಣನನ್ನು ನೋಡಿದರು. ರಣಭೂಮಿಯ ಧೂಳಿನಲ್ಲಿ ಮಲಗಿದ್ದ ಪತಿಯನ್ನು ನೋಡಿದೊಡನೆಯೇ ಅವನ ಪತ್ನಿಯರೆಲ್ಲರೂ–ಕತ್ತರಿಸಿ ಹಾಕಿದ ಕಾಡಿನ ಬಳ್ಳಿಗಳಂತೆ–ರಾವಣನ ಅಂಗಾಂಗಗಳ ಮೇಲೂ ಬಿದ್ದರು. ಅವರಲ್ಲಿ ಕೆಲವರು ಹತನಾಗಿ ಬಿದ್ದಿದ್ದ ರಾವಣನ ಶರೀರವನ್ನು ಆದರದಿಂದ ಆಲಿಂಗಿಸಿಕೊಂಡರು. ಕೆಲವರು ಕಾಲುಗಳನ್ನು ಹಿಡಿದುಕೊಂಡರು. ಕೆಲವರು ಕುತ್ತಿಗೆಯನ್ನು ಬಿಗಿದಪ್ಪಿ ರೋದಿಸುತ್ತಿದ್ದರು ಕೆಲವರು ಭುಜಗಳನ್ನು ಮೇಲೆತ್ತಿಕೊಂಡು ಭೂಮಿಯಲ್ಲಿ ಹೊರಳಾಡುತ್ತಿದ್ದರು. ಕೆಲವರು ಹತನಾಗಿದ್ದ ರಾವಣನ ಮುಖವನ್ನು ನೋಡಿ ಮೂರ್ಛೆಹೊಂದಿದರು. ಕೆಲವರು ಪತಿಯ ತಲೆಯನ್ನು ತೊಡೆಗಳ ಮೇಲಿಟ್ಟುಕೊಂಡು ಅವನ ಮುಖವನ್ನೇ ವೀಕ್ಷಿಸುತ್ತಾ ರೋದನ ಮಾಡುತ್ತಿದ್ದರು. ಹಿಮದ ಬಿಂದುಗಳಿಂದ ಕಮಲಪುಷ್ಪಗಳು ತೋಯಿಸಲ್ಪಡುವಂತೆ–ರಾವಣನ ಮಹಿಷಿಯರು ಕಣ್ಣೀರುಗಳಿಂದ ರಾವಣನ ಮುಖವನ್ನು ತೊಳೆಯುತ್ತಿದ್ದರು.

ಹೀಗೆ ಅಂತಃಪುರದ ಸ್ತ್ರೀಯರು ಪತಿಯಾದ ರಾವಣನು ಹತನಾಗಿ ರಣರಂಗದಲ್ಲಿ ಬಿದ್ದಿರುವುದನ್ನು ನೋಡಿ ಶೋಕದಿಂದ ಕೂಗಿಕೊಳ್ಳುತ್ತಾ ನಾನಾಪ್ರಕಾರವಾಗಿ ವಿಲಾಪಮಾಡುತ್ತಿದ್ದರು.

"ಅಯ್ಯೋ! ನಮ್ಮ ಪತಿಯಾದ ರಾವಣನು ದೇವರಾಜನನ್ನೂ ಯಮನನ್ನೂ ಭಯದಲ್ಲಿಟ್ಟಿದ್ದನು. ನಮ್ಮ ಪತಿಯ ಪರಾಕ್ರಮದ ಪ್ರಭಾವದಿಂದ ಕುಬೇರನು ಪುಷ್ಪಕವಿಮಾನವನ್ನು ಕಳೆದುಕೊಳ್ಳಬೇಕಾಯಿತು. ಯುದ್ಧ ಸಮಯದಲ್ಲಿ ವೀಕ್ಷಿಸುತ್ತಿದ್ದ ಗಂಧರ್ವರಿಗೂ, ಋಷಿಗಳಿಗೂ ಮತ್ತು ದೇವತೆಗಳಿಗೂ ಯಾವನು ಭಯವನ್ನುಂಟುಮಾಡುತ್ತಿದ್ದನೋ–ಅಂತಹವನೇ ಈಗ ಹತನಾಗಿ ರಣಭೂಮಿಯಲ್ಲಿ ಮಲಗಿದ್ದಾನೆ. ಅಸುರರಿಂದಾಗಲೀ, ಸುರರಿಂದಾಗಲೀ, ಪನ್ನಗರಿಂದಾಗಲೀ ಭಯವುಂಟಾಗುವುದೆಂದು ಯಾವನು ಭಾವಿಸಿಯೇ ಇರಲಿಲ್ಲವೋ–ಅಂತಹವನಿಗೆ ಮನುಷ್ಯಮಾತ್ರದವನಿಂದ ಭಯವು ಸನ್ನಿಹಿತವಾಯಿತು. ಅಯ್ಯೋ! ಎಂತಹ ವಿಪರ್ಯಾಸವಿದು? ದೇವತೆಗಳಿಂದಲೂ, ದಾನವರಿಂದಲೂ ಮತ್ತು ರಾಕ್ಷಸರಿಂದಲೂ ಯಾವನು ಅವಧ್ಯನಾಗಿದ್ದನೋ–ಅವನೀಗ ಪದಾತಿಯಾದ ಮನುಷ್ಯನೊಬ್ಬನಿಂದ ಕೊಲ್ಲಲ್ಪಟ್ಟು ಭೂಮಿಯಲ್ಲಿ ಮಲಗಿದ್ದಾನೆ. ಯಾವನನ್ನು ಸಂಹರಿಸಲು ಸುರಾಸುರರಿಂದಾಗಲೀ ಯಕ್ಷರಿಂದಾಗಲೀ ಸಾಧ್ಯವೇ ಇರಲಿಲ್ಲವೋ–ಅಂತಹವನಿಂದು ಬಲಹೀನವಾದೊಂದು ಪ್ರಾಣಿಯಂತೆ ಮನುಷ್ಯನಿಂದ ಮೃತ್ಯುವನ್ನಪ್ಪಿದ್ದಾನೆ."

ಹೀಗೆಲ್ಲಾ ಹೇಳಿಕೊಂಡು ರೋದನಮಾಡುತ್ತಿದ್ದ ಅತ್ಯಂತದುಃಖಿತರಾಗಿದ್ದ ರಾವಣನ ಸ್ತ್ರೀಯರು ಪುನಃ ದುಃಖಪೀಡಿತರಾಗಿ ಪುನಃ ಪುನಃ ವಿಲಪಿಸುತ್ತಲೇ ಇದ್ದರು.

"ಪ್ರಾಣನಾಥ! ಯಾವಾಗಲೂ ಹಿತವಾದ ಮಾತುಗಳನ್ನೇ ಹೇಳುತ್ತಿದ್ದ ಸುಹೃದರ ಮಾತನ್ನು ಕೇಳದೆ ನಿನ್ನ ಮೃತ್ಯುವಿಗಾಗಿಯೇ ಸೀತೆಯನ್ನು ಕರೆತಂದೆ. ಅದರ ಫಲವಾಗಿ ಈ ಎಲ್ಲ ರಾಕ್ಷಸರೂ ಮರಣಹೊಂದಿದರು. ಈ ನಿಶಾಚರರೊಡನೆ ನೀನೂ ಯುದ್ಧಭೂಮಿಯಲ್ಲಿ ಬಿದ್ದುಹೋದೆ. ನಮ್ಮನ್ನೂ ದುಃಖಸಾಗರದಲ್ಲಿ ಮುಳುಗಿಸಿಬಿಟ್ಟೆ. ನಿನಗೆ ಅತ್ಯಂತಪ್ರಿಯನಾಗಿದ್ದ ನಿನ್ನ ತಮ್ಮನಾದ ವಿಭೀಷಣನು ನಿನಗೆ ಹಿತಕರವಾದ ಮಾತುಗಳನ್ನು ಹೇಳುತ್ತಲೇ ಇದ್ದನು. ಆತ್ಮವಧೆಯನ್ನು ಬಯಸಿದ್ದ ನೀನು ಮೋಹವಶನಾಗಿ ಅವ

ನೊಡನೆ ಕಠಿನವಾದ ಮಾತುಗಳನ್ನಾಡಿದೆ. ಅದರ ಫಲವೇನೆಂಬುದು ಈಗ ಪ್ರತ್ಯಕ್ಷವಾಗಿಯೇ ಕಾಣುತ್ತಿದೆ.

ಯದಿ ನಿರ್ಯಾತಿತಾ ತೇ ಸ್ಯಾತ್ಸೀತಾ ರಾಮಾಯ ಮೈಥಿಲೀ ।
ನ ನಃ ಸ್ಯಾದ್ವ್ಯಸನಂ ಘೋರಮಿದಂ ಮೂಲಹರಂ ಮಹತ್ ॥೨೦॥

ವಿಭೀಷಣನ ಹಿತೋಪದೇಶದಂತೆ ನೀನೇನಾದರೂ ಮೈಥಿಲಿಯನ್ನು ರಾಮನಿಗೆ ಒಪ್ಪಿಸಿಬಿಟ್ಟಿದ್ದರೆ–ನಮ್ಮ ವಂಶದ ವಿನಾಶವೂ ಆಗುತ್ತಿರಲಿಲ್ಲ; ಇಂತಹ ಘೋರವಾದ ಮೂಲಹಾನಿಕರವಾದ ವ್ಯಸನವೂ ನಮಗುಂಟಾಗುತ್ತಿರಲಿಲ್ಲ.

ವೃತ್ತಕಾಮೋ ಭವೇದ್ಭ್ರಾತಾ ರಾಮೋ ಮಿತ್ರಕುಲಂ ಭವೇತ್ ।
ವಯಂ ಚಾವಿಧವಾಃ ಸರ್ವಾಃ ಸಕಾಮಾ ನ ಚ ಶತ್ರವಃ ॥೨೧॥

ಸೀತೆಯನ್ನು ಶ್ರೀರಾಮನಲ್ಲಿಗೆ ಕಳುಹಿಸಿಕೊಟ್ಟಿದ್ದರೆ–ವಿಭೀಷಣನ ಮನೋರಥವೂ ಈಡೇರುತ್ತಿದ್ದಿತು. ಶ್ರೀರಾಮನೂ ನಮ್ಮ ಮಿತ್ರಪಕ್ಷದಲ್ಲಿರುತ್ತಿದ್ದನು. ನಾವೂ ಅವಿಧವೆಯರಾಗಿಯೇ ಇರುತ್ತಿದ್ದೆವು. ನಮ್ಮ ಶತ್ರುಗಳ ಮನೋರಥಗಳೂ ಈಡೇರುತ್ತಿರಲಿಲ್ಲ.

ತ್ವಯಾ ಪುನರ್ನೃಶಂಸೇನ ಸೀತಾಂ ಸಂರುನ್ಧತಾ ಬಲಾತ್ ।
ರಾಕ್ಷಸಾ ವಯಮಾತ್ಮಾ ಚ ತ್ರಯಂ ತುಲ್ಯಂ ನಿಪಾತಿತಮ್ ॥೨೨॥

ಆದರೆಕ್ರೂರಿಯಾದ ನೀನು ಸೀತೆಯನ್ನು ಬಲಪೂರ್ವಕವಾಗಿ ಬಂಧನದಲ್ಲಿರಿಸಿದೆ. ಅದರ ಪರಿಣಾಮವಾಗಿ ನೀನೂ ವಿಪತ್ತಿಗೊಳಗಾದೆ. ನಮ್ಮನ್ನೂ ಮತ್ತು ನಿನ್ನ ಅನುಯಾಯಿಗಳಾದ ರಾಕ್ಷಸರನ್ನೂ ವಿಪತ್ತಿನಲ್ಲಿ ತಳ್ಳಿದೆ.

ನ ಕಾಮಕಾರಃ ಕಾಮಂ ವಾ ತವ ರಾಕ್ಷಸಪುಙ್ಗವ ।
ದೈವಂ ಚೇಷ್ಟಯತೇ ಸರ್ವಂ ಹತಂ ದೈವೇನ ಹನ್ಯತೇ ॥೨೩॥

ರಾಕ್ಷಸಶ್ರೇಷ್ಠನೇ! ನಿನ್ನ ಸ್ವೇಚ್ಛಾಚಾರವೇ ನಮ್ಮ ವಿನಾಶಕ್ಕೆ ಕಾರಣವೆಂದು ಹೇಳುವುದೂ ಸರಿಯಲ್ಲ. ದೈವವೇ ಎಲ್ಲವನ್ನೂ ಮಾಡಿಸುತ್ತದೆ. ದೈವೋಪಹತನಾದವನು ಮಾತ್ರವೇ ಕೊಲ್ಲಲ್ಪಡುತ್ತಾನೆ.

ವಾನರಾಣಾಂ ವಿನಾಶೋಽಯಂ ರಾಕ್ಷಸಾನಾಂ ಚ ತೇ ರಣೇ ।
ತವ ಚೈವ ಮಹಾಬಾಹೋ ದೈವಯೋಗಾದುಪಾಗತಃ ॥೨೪॥

ಯುದ್ಧದಲ್ಲಿ ಈ ವಾನರ-ರಾಕ್ಷಸರ ಮತ್ತು ನಿನ್ನ ವಿನಾಶವು ದೈವ ಯೋಗದಿಂದಲೇ ಆಗಿದೆ.

ನೈವಾರ್ಥೇನ ಚ ಕಾಮೇನ ವಿಕ್ರಮೇಣ ನ ಚಾಜ್ಞಯಾ ।
ಶಕ್ಯಾ ದೈವಗತಿರ್ಲೋಕೇ ನಿವರ್ತಯಿತುಮುದ್ಯತಾ ॥೨೫॥

ಕಾರ್ಯೋನ್ಮುಖವಾದ ದೈವಗತಿಯನ್ನು ಅರ್ಥದಿಂದಾಗಲೀ, ಕಾಮ ದಿಂದಾಗಲೀ, ಪರಾಕ್ರಮದಿಂದಾಗಲೀ ಅಥವಾ ಶಾಸನದಿಂದಾಗಲೀ ಬದ ಲಾಯಿಸಲು ಸಾಧ್ಯವಿಲ್ಲ. ದೈವಗತಿಯು ಅಪ್ರತಿಹತವಾದುದು."

ದುಃಖಪೀಡಿತರಾಗಿದ್ದ, ಕಂಬನಿದುಂಬಿದ ಕಣ್ಣುಗಳುಳ್ಳವರಾಗಿದ್ದ, ದೀನೆಯರಾಗಿದ್ದ, ರಾಕ್ಷಸಾಧಿಪತಿಯಾದ ರಾವಣನ ಸ್ತ್ರೀಯರು ಈ ಪರಿ ಯಲ್ಲಿ ಹೆಣ್ಣುಕುರರಪಕ್ಷಿಗಳಂತೆ ವಿಲಪಿಸುತ್ತಿದ್ದರು.

೧೧೦ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೧೧೧ನೆಯ ಸರ್ಗ

ಮಂಡೋದರಿಯ ವಿಲಾಪ : ರಾವಣನ ದಹನಸಂಸ್ಕಾರ

ತಾಸಾಂ ವಿಲಪಮಾನಾನಾಂ ತದಾ ರಾಕ್ಷಸಯೋಷಿತಾಮ್ ।
ಜ್ಯೇಷ್ಠಾ ಪತ್ನೀ ಪ್ರಿಯಾ ದೀನಾ ಭರ್ತಾರಂ ಸಮುದೈಕ್ಷತ ॥೧॥

ಹೀಗೆ ರಾವಣನ ಸಲುವಾಗಿ ವಿಲಾಪಮಾಡುತ್ತಿದ್ದ ರಾಕ್ಷಸಸ್ತ್ರೀಯರ ಮಧ್ಯದಲ್ಲಿದ್ದ, ರಾವಣನ ಜ್ಯೇಷ್ಠಪತ್ನಿಯಾದ, ಅವನಿಗೆ ಅತ್ಯಂತ ಪ್ರಿಯಳಾಗಿದ್ದ ಮಂಡೋದರಿಯು ದೀನೆಯಾಗಿ ಪತಿಯನ್ನು ನೋಡಿದಳು.

ಅಚಿಂತ್ಯಕರ್ಮನಾದ ಶ್ರೀರಾಮನಿಂದ ತನ್ನ ಪತಿಯು ಹತನಾಗಿ ಬಿದ್ದಿರುವುದನ್ನು ಕಂಡು ದೀನೆಯಾದ ಮಂಡೋದರಿಯು ವಿಲಪಿಸತೊಡ ಗಿದಳು.

"ಕುಬೇರನ ಅನುಜನೇ! ಮಹಾಬಾಹುವೇ! ಪತಿದೇವ! ಕ್ರುದ್ಧನಾದ ನಿನ್ನ ಎದುರಿನಲ್ಲಿ ನಿಲ್ಲಲು ಇಂದ್ರನು ಕೂಡ ಭಯಪಡುತ್ತಿದ್ದನು. ಮಹಾ-ಮಹಾಋಷಿಗಳೂ, ಯಶೋವಂತರಾದ ಗಂಧರ್ವರೂ, ಚಾರಣರೂ ನಿನ್ನ ಭಯದಿಂದಾಗಿ ದಿಕ್ಕಾಪಾಲಾಗಿ ಓಡಿಹೋಗುತ್ತಿದ್ದರಲ್ಲವೇ? ಅಂತಹ

ಅತುಲಪರಾಕ್ರಮಿಯಾದ ನೀನಿಂದು ಮನುಷ್ಯಮಾತ್ರನಾದ ರಾಮನಿಂದ ಪರಾಜಿತನಾದೆ. ಮಹಾರಾಜ! ಇದರಿಂದ ನಿನಗೆ ನಾಚಿಕೆಯಾಗುತ್ತಿಲ್ಲವೇ? ಹೇಳು ; ಪ್ರಾಣೇಶ್ವರ! ಏಕೆ ಹೀಗಾಯಿತು? ನೀನು ಮೂರು ಲೋಕಗಳನ್ನೂ ಜಯಿಸಿ ಸಂಪತ್ತಿನಿಂದಲೂ ಸಂಪನ್ನನಾದೆ. ಮಹಾಪರಾಕ್ರಮಿಯೆಂಬ ಕೀರ್ತಿಯನ್ನೂ ಗಳಿಸಿದೆ. ನಿನ್ನ ಪರಾಕ್ರಮದ ವೇಗವನ್ನು ಸಹಿಸಿಕೊಳ್ಳಲು ಯಾರಿಂದಲೂ ಸಾಧ್ಯವಾಗುತ್ತಿರಲಿಲ್ಲ. ಅಂತಹ ನಿನ್ನನ್ನಿಂದು ವನವಾಸಿಯಾದ ಮನುಷ್ಯನೊಬ್ಬನು ಹೇಗೆ ಕೊಂದನು? ನೀನು ಮನುಷ್ಯರ ಪ್ರವೇಶಕ್ಕೂ ಅವಕಾಶವಿಲ್ಲದ ಸ್ಥಳಗಳಲ್ಲಿಯೇ ಸಂಚರಿಸುತ್ತಿದ್ದೆ. ಇಚ್ಛಾನುಸಾರವಾಗಿ ರೂಪಗಳನ್ನು ಬದಲಾಯಿಸಿಕೊಳ್ಳುತ್ತಿದ್ದೆ. ಅಂತಹವನ ವಿನಾಶವು ಯುದ್ಧದಲ್ಲಿ ಮನುಷ್ಯಮಾತ್ರದವನಾದ ರಾಮನಿಂದಾಯಿತೆಂದರೆ ಇದು ವಿಶ್ವಾಸಾರ್ಹವಾದ ವಿಷಯವಲ್ಲವೆಂದೇ ಕಾಣುತ್ತದೆ. ಎಲ್ಲ ರಣರಂಗಗಳಲ್ಲಿಯೂ ಜಯಗಳಿಸುತ್ತಿದ್ದ ನೀನು ರಾಮನಿಂದ ಪರಾಜಯಗೊಂಡೆಯೆಂಬ ಮಾತನ್ನು ನಾನು ಖಂಡಿತವಾಗಿಯೂ ನಂಬುವುದಿಲ್ಲ. ಇದು ಮನುಷ್ಯಮಾತ್ರದವನಾಗಿ ಕಾಣುವ ರಾಮನ ಕಾರ್ಯವಿರಲಾರದು.

ಅಥ ವಾ ರಾಮರೂಪೇಣ ಕೃತಾನ್ತಃ ಸ್ವಯಮಾಗತಃ ।
ಮಾಯಾಂ ತವ ವಿನಾಶಾಯ ವಿಧಾಯಾಪ್ರತಿತರ್ಕಿತಾಮ್ ॥೯॥

ಅಥವಾ ಸಾಕ್ಷಾತ್ ಕಾಲಪುರುಷನೇ ಊಹೆಗೆ ನಿಲುಕದ ಮಾಯೆಯನ್ನು ರಚಿಸಿ ನಿನ್ನ ವಿನಾಶಕ್ಕಾಗಿ ಶ್ರೀರಾಮನ ರೂಪದಲ್ಲಿ ಇಲ್ಲಿ ಆಗಮಿಸಿರಬಹುದು.

ಅಥ ವಾ ವಾಸವೇನ ತ್ವಂ ಧರ್ಷಿತೋಽಸಿ ಮಹಾಬಲ ।
ವಾಸವಸ್ಯ ಕುತಃ ಶಕ್ತಿಸ್ತ್ವಾಂ ದ್ರಷ್ಟುಮಪಿ ಸಂಯುಗೇ ।
ಮಹಾಬಲಂ ಮಹಾವೀರ್ಯಂ ದೇವಶತ್ರುಂ ಮಹೌಜಸಮ್ ॥೧೦॥

ಅಥವಾ ಇಂದ್ರನೇ ಶ್ರೀರಾಮನ ರೂಪವನ್ನು ಧರಿಸಿ ನಿನ್ನನ್ನು ಆಕ್ರಮಿಸಿರಬಹುದು. ಆದರೆ ಇದು ಅಸಂಭವ. ಏಕೆಂದರೆ : ಮಹಾಬಲನಾದ, ಮಹಾವೀರ್ಯನಾದ, ದೇವಶತ್ರುವಾದ, ಮಹಾತೇಜಸ್ವಿಯಾದ ನಿನ್ನನ್ನು ರಣರಂಗದಲ್ಲಿ ದಿಟ್ಟಿಸಿ ನೋಡಲು ಕೂಡ ಇಂದ್ರನಿಗೆ ಶಕ್ತಿಯೆಲ್ಲಿ ಬಂತು?

ವ್ಯಕ್ತಮೇಷ ಮಹಾಯೋಗೀ ಪರಮಾತ್ಮಾ ಸನಾತನಃ ।
ಅನಾದಿಮಧ್ಯನಿಧನೋ ಮಹತಃ ಪರಮೋ ಮಹಾನ್ ॥೧೧॥

ತಮಸಃ ಪರಮೋ ಧಾತಾ ಶಙ್ಖಚಕ್ರಗದಾಧರಃ ।
ಶ್ರೀವತ್ಸವಕ್ಷಾ ನಿತ್ಯಶ್ರೀರಜಯ್ಯಃ ಶಾಶ್ವತೋ ಧ್ರುವಃ ॥೧೨॥

ಮಾನುಷಂ ರೂಪಮಾಸ್ಥಾಯ ವಿಷ್ಣುಃ ಸತ್ಯಪರಾಕ್ರಮಃ ।
ಸರ್ವೈಃ ಪರಿವೃತೋ ದೇವೈರ್ವಾನರತ್ವಮುಪಾಗತೈಃ ॥೧೩॥

ಸರ್ವಲೋಕೇಶ್ವರಃ ಸಾಕ್ಷಾಲ್ಲೋಕಾನಾಂ ಹಿತಕಾಮ್ಯಯಾ ।
ಸರಾಕ್ಷಸಪರೀವಾರಂ ಹತವಾಂಸ್ತ್ವಾಂ ಮಹಾದ್ಯುತಿಃ ॥೧೪॥

ಇದರಿಂದ ಶ್ರೀರಾಮನು ಮನುಷ್ಯಮಾತ್ರದವನಲ್ಲವೆಂಬುದು ಸ್ಪಷ್ಟವಾಗಿದೆ. ಶ್ರೀರಾಮನು ಮಹಾಯೋಗಿಯು. ಸನಾತನನಾದ ಪರಮಾತ್ಮನು. ಇವನಿಗೆ ಆದಿ-ಮಧ್ಯ-ಅಂತ್ಯಗಳಾವುವೂ ಇಲ್ಲ. ಅವನು ಮಹತೋ ಮಹೀಯನು. ಅಜ್ಞಾನಾಂಧಕಾರದಿಂದ ಆಚೆ ಇರತಕ್ಕವನು. ಸಮಸ್ತರನ್ನೂ ಧರಿಸಿರುವ ಪರಮೇಶ್ವರನು. ಕೈಗಳಲ್ಲಿ ಶಂಖ-ಚಕ್ರ-ಗದೆಗಳನ್ನು ಹಿಡಿದಿರತಕ್ಕವನು. ವಕ್ಷಃಸ್ಥಳದಲ್ಲಿ ಶ್ರೀವತ್ಸದ ಚಿಹ್ನೆಯನ್ನು ಹೊಂದಿರುವವನು. ನಿತ್ಯವೂ ಮಹಾಲಕ್ಷ್ಮಿಯೊಡನೆಯೇ ಇರತಕ್ಕವನು. ಯಾರಿಂದಲೂ ಜಯಿಸಲು ಅಸಾಧ್ಯನಾದವನು. ಶಾಶ್ವತನು. ಸಮಸ್ತಲೋಕಗಳಿಗೂ ಅಧೀಶ್ವರನಾಗಿರತಕ್ಕವನು. ಸತ್ಯಪರಾಕ್ರಮಿಯಾದ ದ್ಯುತಿಮಂತನಾದ ಭಗವಾನ್ ಮಹಾವಿಷ್ಣುವೇ ಲೋಕಗಳ ಹಿತಾರ್ಥವಾಗಿ ಸಾಕ್ಷಾತ್ತಾಗಿ ಮನುಷ್ಯರೂಪವನ್ನು ಆಶ್ರಯಿಸಿ ವಾನರರೂಪಿಗಳಾಗಿರುವ ದೇವತೆಗಳಿಂದ ಪರಿವೃತನಾಗಿ ಮಹಾದ್ಯುತಿಮಂತನಾದ ಶ್ರೀರಾಮನು ರಾಕ್ಷಸಪರಿವಾರದಿಂದ ಕೂಡಿದ ನಿನ್ನನ್ನು ಸಂಹರಿಸಿದ್ದಾನೆ. ಏಕೆಂದರೆ :

ಇನ್ದ್ರಿಯಾಣಿ ಪುರಾ ಜಿತ್ವಾ ಜಿತಂ ತ್ರಿಭುವನಂ ತ್ವಯಾ ।
ಸ್ಮರದ್ಭಿರಿವ ತದ್ವೈರಮಿನ್ದ್ರಿಯೈರೇವ ನಿರ್ಜಿತಃ ॥೧೫॥

ಹಿಂದೆ ನೀನು ಇಂದ್ರಿಯಗಳನ್ನು ಜಯಿಸಿ (ತಪಸ್ಸುಮಾಡಿ) ಮೂರು ಲೋಕಗಳನ್ನೂ ಜಯಿಸಿದ್ದೆ. ಅದೇ ಇಂದ್ರಿಯಗಳು ಹಿಂದೆ ತಮ

ಗಾದ ಪರಾಜಯವನ್ನು ಸ್ಮರಿಸುತ್ತಾ ವೈರವನ್ನು ಸಾಧಿಸಿ ನಿನ್ನನ್ನೀಗ ಜಯಿಸಿಬಿಟ್ಟುವು.

ಜನಸ್ಥಾನದಲ್ಲಿ ಬಹುಸಂಖ್ಯಾತರಾದ ರಾಕ್ಷಸರಿಂದ ಸಮಾವೃತನಾಗಿದ್ದ ನಿನ್ನ ಸಹೋದರನಾದ ಖರನು ರಾಮನಿಂದ ಹತನಾದಾಗಲೇ ನಾವು ರಾಮನು ಸಾಮಾನ್ಯಮನುಷ್ಯನಲ್ಲವೆಂಬುದನ್ನು ತಿಳಿಯಬಹುದಾಗಿದ್ದಿತು. ದೇವತೆಗಳಿಂದಲೂ ಪ್ರವೇಶಿಸಲು ಅಸಾಧ್ಯವಾಗಿದ್ದ ಈ ಲಂಕಾಪಟ್ಟಣವನ್ನು ಹನುಮಂತನು ಬಲಪೂರ್ವಕವಾಗಿ ಪ್ರವೇಶಿಸಿದನು. ಮುಂದಿನ ಅನಿಷ್ಟವನ್ನು ಯೋಚಿಸುತ್ತಾ ಆಗಲೇ ನಾವು ವ್ಯಥಿತರಾದೆವು. 'ರಾಘವನೊಡನೆ ವಿರೋಧವನ್ನು ಕಟ್ಟಿಕೊಳ್ಳಬೇಡ'–ಎಂದು ಹಲವಾರು ಬಾರಿ ನಾನು ಹೇಳಿದರೂ ನನ್ನ ಮಾತನ್ನು ನೀನು ಅಂಗೀಕರಿಸಲಿಲ್ಲ. ಅದರ ಫಲವೇ ಈಗ ನಮಗೆ ಪ್ರಾಪ್ತವಾಗಿದೆ. ನೀನು ನಿನ್ನ ಐಶ್ವರ್ಯದ, ಶರೀರದ ಮತ್ತು ಸ್ವಜನರ ವಿನಾಶಕ್ಕಾಗಿಯೇ ಆಕಸ್ಮಿಕವಾಗಿ ಸೀತೆಯನ್ನು ಮೋಹಿಸಿದೆ.

ಅರುನ್ಧತ್ಯಾ ವಿಶಿಷ್ಟಾಂ ತಾಂ ರೋಹಿಣ್ಯಾಶ್ಚಾಪಿ ದುರ್ಮತೇ ।
ಸೀತಾಂ ಧರ್ಷಯತಾ ಮಾನ್ಯಾಂ ತ್ವಯಾ ಹ್ಯಸದೃಶಂ ಕೃತಮ್ ।
ವಸುಧಾಯಾಶ್ಚ ವಸುಧಾಂ ಶ್ರಿಯಾಃ ಶ್ರೀಂ ಭರ್ತೃವತ್ಸಲಾಮ್ ॥

ಮತಿಗೆಟ್ಟವನೇ! ಸೀತಾದೇವಿಯು ಅರುಂಧತೀ ಮತ್ತು ರೋಹಿಣೀಯರಿಗಿಂತಲೂ ವಿಶಿಷ್ಟಳಾದ ಪತಿವ್ರತೆಯು. ಭರ್ತೃವಾತ್ಸಲ್ಯದಿಂದ ಕೂಡಿರುವ ಅವಳು ಕ್ಷಮಾಗುಣದಲ್ಲಿ ಭೂದೇವಿಯನ್ನೂ ಮೀರಿಸಿರುವವಳು. ಸಂಪತ್ತಿನಲ್ಲಿ ಮಹಾಲಕ್ಷ್ಮಿಗೂ ಮಿಗಿಲಾದವಳು. ಅಂತಹ ಸರ್ವಮಾನ್ಯಳಾದ ಸೀತೆಯನ್ನು ಕಾಮಿಸಲು ಹೋದ ನೀನು ನಿಶ್ಚಯವಾಗಿಯೂ ನಿನಗೆ ತಕ್ಕುದಲ್ಲದ ಕಾರ್ಯವನ್ನೇ ಮಾಡಿದೆ.

ಸರ್ವಾಂಗಸುಂದರಿಯಾದ ಶುಭಲಕ್ಷಣಸಂಪನ್ನೆಯಾದ ಸೀತೆಯು ನಿರ್ಜನವಾದ ವನದಲ್ಲಿ ವಾಸಮಾಡುತ್ತಿದ್ದಳು. ದೀನೆಯಾಗಿದ್ದ ಅವಳನ್ನು ಮೋಸದಿಂದ ಇಲ್ಲಿಗೆ ಕರೆತಂದು ಅತ್ಯಂತಕಳಂಕಿತವಾದ ಕಾರ್ಯವನ್ನೇ ಮಾಡಿದೆ. ಮಿಥಿಲೇಶಕುಮಾರಿಯಾದ ಸೀತೆಯೊಡನೆ ಸಮಾಗಮಮಾಡಬೇಕೆಂದಿದ್ದ ಆಸೆಯನ್ನೂ ಪೂರೈಸಿಕೊಳ್ಳಲು ನಿನಗೆ ಸಾಧ್ಯವಾಗಲಿಲ್ಲ. ಅದಕ್ಕೆ

ಬದಲಾಗಿ ಪತಿವ್ರತೆಯಾದ ಆ ಸೀತಾದೇವಿಯ ತಪಸ್ಸಿನಿಂದಲೇ ನೀನು ಭಸ್ಮವಾದೆ. ಇದು ನಿಶ್ಚಯ. ತೆಳುವಾದ ನಡುಪ್ರದೇಶವುಳ್ಳ ಸೀತಾದೇವಿಯನ್ನು ನೀನು ಅಪಹರಿಸಿದ ಸಮಯದಲ್ಲಿಯೇ ಅವಳ ತಪಃಪ್ರಭಾವದಿಂದ ಭಸ್ಮವಾಗಬೇಕಾಗಿದ್ದಿತು. ಹಾಗಾಗದೇ ಇದ್ದುದು ಆಶ್ಚರ್ಯದ ವಿಷಯವೇ ಆಗಿದೆ. ಆ ಸಮಯದಲ್ಲಿ ಅಗ್ನಿಪ್ರಮುಖರಾದ ಇಂದ್ರಾದಿ ಸಮಸ್ತದೇವತೆಗಳೂ ನಿನಗೆ ಭಯಪಡುತ್ತಿದ್ದರು.

ಅವಶ್ಯಮೇವ ಲಭತೇ ಫಲಂ ಪಾಪಸ್ಯ ಕರ್ಮಣಃ ।
ಘೋರಂ ಪರ್ಯಾಗತೇ ಕಾಲೇ ಕರ್ತಾ ನಾಸ್ತ್ಯತ್ರ ಸಂಶಯಃ ॥೨೫॥

ಪತಿದೇವನೇ! ಕಾಲವು ಬಂದಿತೆಂದರೆ ಕರ್ತೃವು ತಾನು ಮಾಡಿದ ಪಾಪಕರ್ಮದ ಘೋರವಾದ ಫಲವನ್ನು ಹೊಂದಿಯೇ ತೀರುತ್ತಾನೆ. ಇದ ರಲ್ಲಿ ಸಂಶಯವೇ ಇಲ್ಲ.

ಶುಭಕೃಚ್ಛುಭಮಾಪ್ನೋತಿ ಪಾಪಕೃತ್ಪಾಪಮಶ್ನುತೇ ।
ವಿಭೀಷಣಃ ಸುಖಂ ಪ್ರಾಪ್ತಸ್ತ್ವಂ ಪ್ರಾಪ್ತಃ ಪಾಪಮೀದೃಶಮ್ ॥೨೬॥

ಶುಭಕಾರ್ಯಗಳನ್ನು ಮಾಡಿದವನು ಶುಭದ ಫಲಗಳನ್ನೇ ಹೊಂದು ತ್ತಾನೆ. ಪಾಪಕಾರ್ಯಮಾಡಿದವನು ಪಾಪದ ಫಲವನ್ನೇ ಅನುಭವಿಸುತ್ತಾನೆ. ತಾನು ಮಾಡಿದ ಒಳ್ಳೆಯ ಕಾರ್ಯದಿಂದಲೇ ವಿಭೀಷಣನಿಗೆ ಸುಖವು ಲಭಿಸಿತು. ನೀನಾದರೋ ಪಾಪಕರ್ಮದ ಫಲವಾಗಿ ಈ ದುರವಸ್ಥೆಯನ್ನು ಅನುಭವಿಸಬೇಕಾಯಿತು.

ನಿನ್ನ ಅರಮನೆಯಲ್ಲಿ ಸೀತಾದೇವಿಗಿಂತಲೂ ಹೆಚ್ಚು ಸೌಂದರ್ಯವುಳ್ಳ ಬೇರೆ ಯುವತಿಯರು ಅನೇಕರಿದ್ದರು. ಕಾಮವಶನಾಗಿದ್ದ ನೀನು ಭ್ರಾಂತಿ ಯಿಂದ ಈ ವಿಷಯವನ್ನು ಮನಸ್ಸಿಗೆ ತೆಗೆದುಕೊಳ್ಳಲಿಲ್ಲ.

ನ ಕುಲೇನ ನ ರೂಪೇಣ ನ ದಾಕ್ಷಿಣ್ಯೇನ ಮೈಥಿಲೀ ।
ಮಯಾಧಿಕಾ ವಾ ತುಲ್ಯಾ ವಾ ತ್ವಂ ತು ಮೋಹಾನ್ನ ಬುಧ್ಯಸೇ ॥

ಕುಲದಿಂದಾಗಲೀ, ರೂಪದಿಂದಾಗಲೀ, ದಾಕ್ಷಿಣ್ಯಾದಿಗುಣಗಳಿಂದಾ ಗಲೀ, ದಕ್ಷತೆಯಿಂದ ಕಾರ್ಯಗಳನ್ನು ನಿರ್ವಹಿಸುವುದರಲ್ಲಾಗಲೀ–

ಸೀತೆಯು ನನಗಿಂತಲೂ ಅಧಿಕಳೂ ಅಲ್ಲ ; ನನಗೆ ಸಮಾನಳೂ ಆಗಿರಲಿಲ್ಲ. ಆದರೆ ನೀನು ಮಾತ್ರ ಮೋಹವಶನಾಗಿ ಇದನ್ನು ತಿಳಿದುಕೊಳ್ಳಲಿಲ್ಲ.

ಸರ್ವದಾ ಸರ್ವಭೂತಾನಾಂ ನಾಸ್ತಿ ಮೃತ್ಯುರಲಕ್ಷಣಃ ।
ತವ ತಾವದಯಂ ಮೃತ್ಯುರ್ಮೈಥಿಲೀಕೃತಲಕ್ಷಣಃ ॥೨೯॥

ಎಲ್ಲ ಪ್ರಾಣಿಗಳಿಗೂ ಎಲ್ಲ ಕಾಲಗಳಲ್ಲಿಯೂ ಮೃತ್ಯುವು ವಿಲಕ್ಷಣವಾಗಿ ನೋಡಲು ಕರಾಳರೂಪವಾಗಿಯೇ ಇರುವುದಿಲ್ಲ. ಅದರಂತೆ ನಿನಗೆ ಮೃತ್ಯುವು ಮೈಥಿಲಿಯೆಂಬ ಸುಂದರರೂಪದಲ್ಲಿದ್ದಿತು.

ಸೀತಾನಿಮಿತ್ತಜೋ ಮೃತ್ಯುಸ್ತ್ವಯಾ ದೂರಾದುಪಾಹೃತಃ ।
ಮೈಥಿಲೀ ಸಹ ರಾಮೇಣ ವಿಶೋಕಾ ವಿಹರಿಷ್ಯತಿ ।
ಅಲ್ಪಪುಣ್ಯಾ ತ್ವಹಂ ಘೋರೇ ಪತಿತಾ ಶೋಕಸಾಗರೇ ॥೩೦॥

ಸೀತೆಯೆಂಬ ನಿಮಿತ್ತದಿಂದ ಸಾಕ್ಷಾತ್ ಮೃತ್ಯುವನ್ನು ಬಹಳ ದೂರ ದಿಂದ ನೀನು ಮನೆಗೇ ಕರೆತಂದೆ. ಇದರ ಫಲವಾಗಿ ಸೀತೆಯು ಶೋಕ ರಹಿತಳಾಗಿ ಶ್ರೀರಾಮನೊಡನೆ ವಿಹರಿಸುವಳು. ಅಲ್ಪಭಾಗ್ಯಳಾದ ನಾನು ಘೋರವಾದ ಶೋಕಸಾಗರದಲ್ಲಿ ಬಿದ್ದೆನು.

ವಿಚಿತ್ರವಾದ ವಸ್ತ್ರಾಭರಣಗಳನ್ನು ಧರಿಸಿ, ಅನುಪಮವಾದ ಶೋಭೆ ಯಿಂದ ಕೂಡಿ ಉಲ್ಲಾಸಗೊಳಿಸುವ ವಿಮಾನದಲ್ಲಿ ಕುಳಿತು ನಿನ್ನೊಡನೆ ಕೈಲಾಸ, ಮಂದರಾಚಲ, ಮೇರುಪರ್ವತ, ಚೈತ್ರರಥವನಗಳಲ್ಲಿಯೂ, ಸಮಗ್ರವಾದ ದೇವೋದ್ಯಾನಗಳಲ್ಲಿಯೂ ವಿಹರಿಸುತ್ತಾ ನಾನಾವಿಧವಾದ ದೇಶಗಳಲ್ಲಿಯೂ ಸಂಚರಿಸುತ್ತಾ ಮತ್ತು ಆ ದೇಶಗಳ ಸೊಬಗನ್ನು ನೋಡುತ್ತಾ ಆನಂದದಿಂದ ಕಾಲಕಳೆಯುತ್ತಿದ್ದೆನು. ಆದರೆ ಈಗ ನಿನ್ನ ವಧೆಯ ಪರಿಣಾಮವಾಗಿ ನಾನಿಂದು ಆ ಎಲ್ಲ ಸುಖೋಪಭೋಗ ಗಳಿಂದಲೂ ವಂಚಿತಳಾದೆನು.

ಈಗಲೂ ನಾನು ಅದೇ ಮಂಡೋದರಿಯೇ ಹೌದು. ಆದರೆ ನಿನ್ನನ್ನು ಕಳೆದುಕೊಂಡನಂತರ ನಾನು ಬೇರೊಬ್ಬ ಸಾಮಾನ್ಯ ಸ್ತ್ರೀಗೆ ಸಮಾನಳಾದೆನು. ರಾಜರ ಚಂಚಲವಾದ ಐಶ್ವರ್ಯಕ್ಕೆ ಧಿಕ್ಕಾರವಿರಲಿ! **ಧಿಕ್ ರಾಜ್ಞಾಂ ಚಞ್ಚಲಾಃ ಶ್ರಿಯಃ।**

ಅಯ್ಯೋ! ಮಹಾರಾಜ! ನಿನ್ನನ್ನು ಈ ಅವಸ್ಥೆಯಲ್ಲಿ ನೋಡಲೂ ಸಾಧ್ಯವಿಲ್ಲವಾಗಿದೆ. ನಿನ್ನ ಸುಂದರವಾದ ಮುಖಮಂಡಲವು ಸುಂದರವಾದ ಹುಬ್ಬುಗಳಿಂದಲೂ, ಮನೋಹರವಾದ ಚರ್ಮದಿಂದಲೂ, ಎತ್ತರವಾದ ಮೂಗಿನಿಂದಲೂ ಸಂಪನ್ನವಾಗಿದ್ದಿತು. ಕಾಂತಿ-ಶೋಭೆ ಮತ್ತು ತೇಜಸ್ಸುಗಳ ಮೂಲಕವಾಗಿ ನಿನ್ನ ಮುಖಮಂಡಲವು ಚಂದ್ರ-ಪದ್ಮ-ಸೂರ್ಯರನ್ನೂ ಲಜ್ಜೆಗೊಳ್ಳುವಂತೆ ಮಾಡುತ್ತಿದ್ದಿತು. ನಿನ್ನ ಮುಖವು ಕಿರೀಟಗಳ ಸಮೂಹದ ಕಾಂತಿಯಿಂದ ಉಜ್ವಲವಾಗಿ ಕಾಣುತ್ತಿದ್ದಿತು. ಕೆಂದುಟಿಯಿಂದ ಪರಿ ಶೋಭಿಸುತ್ತಿದ್ದಿತು. ದೀಪ್ತವಾದ ಕುಂಡಲಗಳಿಂದ ಸಮಲಂಕೃತವಾಗಿದ್ದಿತು. ಪಾನಭೂಮಿಗಳಲ್ಲಿ ಮದಿರೆಯನ್ನು ಸವಿದ ಮದದಿಂದ ಚಂಚಲವಾದ ಕಣ್ಣು ಗಳನ್ನು ಹೊಂದಿದ್ದಿತು. ವಿಧ-ವಿಧವಾದ ಮಾಲೆಗಳನ್ನು ಧರಿಸಿ ಅತ್ಯಂತ ಸುಂದರವಾಗಿ ಕಾಣುತ್ತಿದ್ದಿತು. ಮುಗುಳ್ನಗೆಯೊಡನೆ ಸುಮಧುರವಾದ ಮಾತುಗಳನ್ನಾಡುತ್ತಿದ್ದಿತು. ಹಾಗಿದ್ದ ನಿನ್ನ ಮುಖವು ಈಗ ಶೋಭಾಯ ಮಾನವಾಗಿ ಕಾಣುತ್ತಿಲ್ಲ. ರಾಮನ ಬಾಣಗಳಿಂದ ಭಿನ್ನವಾಗಿ ರಕ್ತದ ಧಾರೆ ಗಳಿಂದ ತೋಯ್ದುಹೋಗಿದೆ. ಮೇದಸ್ಸು ಮತ್ತು ಮಸ್ತಿಷ್ಕಗಳು ಛಿನ್ನ- ಭಿನ್ನವಾಗಿ ಹೋಗಿವೆ. ಮುಖವು ರಥದ ಧೂಳಿನಿಂದ ಕೂಡಿದ್ದು ಸುಕ್ಕಿ ಹೋಗಿದೆ.

ಹಾ ಪಶ್ಚಿಮಾ ಮೇ ಸಂಪ್ರಾಪ್ತಾ ದಶಾ ವೈಧವ್ಯಕಾರಿಣೀ ।
ಯಾ ಮಯಾಸೀನ್ನ ಸಂಬುದ್ಧಾ ಕದಾಚಿದಪಿ ಮನ್ದಯಾ ॥೩೮॥

ಮಂದಮತಿಯಾದ ನಾನು ಯಾವ ಈ ಅವಸ್ಥೆಯನ್ನು ಎಂದೂ ಯೋಚಿಸಿಯೇ ಇರಲಿಲ್ಲವೋ–ಅಂತಹ ವೈಧವ್ಯವನ್ನುಂಟುಮಾಡುವ ಅಧೋಗತಿಯಿಂದು ನನಗೆ ಪ್ರಾಪ್ತವಾಗಿದೆ.

ನನ್ನ ಸ್ಥಾನ-ಮಾನಗಳನ್ನು ಏನೆಂದು ಹೇಳಿಕೊಳ್ಳಲಿ?

ಪಿತಾ ದಾನವರಾಜೋ ಮೇ ಭರ್ತಾ ಮೇ ರಾಕ್ಷಸೇಶ್ವರಃ ।
ಪುತ್ರೋ ಮೇ ಶಕ್ರನಿರ್ಜೇತಾ ಇತ್ಯಹಂ ಗರ್ವಿತಾ ಭೃಶಮ್ ॥೩೯॥

‘ದಾನವರಾಜನಾದ ಮಯನೇ ನನ್ನ ತಂದೆ. ರಾಕ್ಷಸರಾಜನಾದ ರಾವಣನೇ ನನ್ನ ಪತಿ. ಇಂದ್ರನನ್ನೂ ಜಯಿಸಿದ ಅನ್ವರ್ಥನಾಮನಾದ

ಇಂದ್ರಜಿತುವೇ ನನ್ನ ಮಗ'–ಹೀಗೆ ಭಾವಿಸಿಕೊಂಡು ನಾನು ಅತಿಗರ್ವಿಷ್ಠೆಯಾಗಿದ್ದೆನು.

'ಕೊಬ್ಬಿದ ಶತ್ರುಗಳನ್ನು ಮಥಿಸುವವರು ; ಶತ್ರುವಿನ ವಿಷಯದಲ್ಲಿ ಮಹಾಕ್ರೂರರು ; ಬಲ-ಪೌರುಷಗಳಲ್ಲಿ ಪ್ರಖ್ಯಾತರಾದವರು ; ಯಾರಿಂದಲೂ ಭಯವೆಂಬುದನ್ನೇ ಕಾಣದವರು–ಅಂತಹವರು ನನಗೆ ನಾಥರಾಗಿದ್ದಾರೆ'–ಎಂದು ನಾನು ದೃಢವಾಗಿ ನಂಬಿದ್ದೆನು.

ರಾಕ್ಷಸಶಿರೋಮಣಿಯೇ! ಹೀಗೆ ಅತ್ಯಂತಪ್ರಭಾವಶಾಲಿಯಾಗಿದ್ದ ನಿನಗೆ ಮನುಷ್ಯಮಾತ್ರದವರಿಂದ ತಿಳಿಯದೇ ಇರುವ ಈ ಭಯವು ಹೇಗೆ ಪ್ರಾಪ್ತವಾಯಿತು?

ಮನೋಹರವಾದ ಇಂದ್ರನೀಲಮಣಿಯಂತೆ ಶ್ಯಾಮಲವಾಗಿದ್ದ, ಪರ್ವತದ ಶಿಖರದಂತೆ ಎತ್ತರವಾಗಿದ್ದ, ಕೇಯೂರಾಂಗದಗಳಿಂದಲೂ–ಮುಕ್ತಾಹಾರಗಳಿಂದಲೂ–ಪುಷ್ಪಹಾರಗಳಿಂದಲೂ ಉಜ್ಜ್ವಲಿಸುತ್ತಿದ್ದ, ವಿಹರಿಸುವ ಸ್ಥಾನಗಳಲ್ಲಿ ಅಧಿಕಕಾಂತಿಯಿಂದ ಬೆಳಗುತ್ತಿದ್ದ, ಸಂಗ್ರಾಮ ಭೂಮಿಗಳಲ್ಲಿ ದೇದೀಪ್ಯಮಾನವಾಗಿ ಕಾಣುತ್ತಿದ್ದ, ತೊಟ್ಟಿದ್ದ ಆಭರಣಗಳ ಪ್ರಭೆಯಿಂದ ಮಿಂಚಿನಮಾಲೆಗಳಿಂದ ಸಮಲಂಕೃತವಾದ ಮೇಘಮಂಡಲದಂತೆಯೇ ಕಾಣುತ್ತಿದ್ದ ನಿನ್ನ ಈ ಶರೀರವು ತೀಕ್ಷ್ಣವಾದ ಅನೇಕಬಾಣಗಳಿಂದ ತುಂಬಿಹೋಗಿದೆ. ಇನ್ನು ಮುಂದೆ ಇಂತಹ ಶರೀರವನ್ನು ಸ್ಪರ್ಶಿಸಲು ಸಾಧ್ಯವಿಲ್ಲವಾದರೂ ಒಮ್ಮೆಯಾದರೂ ಆಲಿಂಗಿಸಿಕೊಳ್ಳಲೂ ನನ್ನಿಂದ ಸಾಧ್ಯವಾಗುತ್ತಿಲ್ಲ. ಮುಳ್ಳುಹಂದಿಯು ಮುಳ್ಳುಗಳಿಂದ ತುಂಬಿಹೋಗಿರುವಂತೆ– ನಿನ್ನ ಶರೀರವು ಬಾಣಗಳಿಂದ ತುಂಬಿಹೋಗಿದೆ. ಒಂದು ಅಂಗುಲದಷ್ಟು ಶರೀರವಾದರೂ ಬಾಣದಿಂದ ರಹಿತವಾಗಿಲ್ಲ. ಬಾಣಮಯವೇ ಆಗಿಹೋಗಿದೆ. ಬಾಣಗಳು ಮರ್ಮಸ್ಥಾನಗಳಲ್ಲಿ ಬಹಳ ಆಳದವರೆಗೂ ನೆಟ್ಟುಕೊಂಡಿವೆ. ಸ್ನಾಯುಬಂಧನವು* ಭಿನ್ನ-ಭಿನ್ನವಾಗಿ ಹೋಗಿದೆ. ರಕ್ತದಿಂದ ನಸುಗೆಂಪಿನ ಛಾಯೆಯನ್ನು ಹೊಂದಿರುವ ನಿನ್ನ ಈ ಶ್ಯಾಮಲವರ್ಣದ ಶರೀರವು ವಜ್ರಾ

---

* ಸ್ನಾಯುಃ : ದೇಹದಲ್ಲಿ ಅಂಗ-ಪ್ರತ್ಯಂಗಗಳ ಸಂಧಿಗಳನ್ನು ಸೇರಿಸುವ ರಜ್ಜು ; ವಾಯುವನ್ನು ಒಯ್ಯುವ ನಾಡಿ.

ಯುಧದ ಪ್ರಹಾರದಿಂದ ಛಿನ್ನ-ಭಿನ್ನವಾಗಿ ಭೂಮಿಯ ಮೇಲೆ ಬಿದ್ದಿರುವ ಪರ್ವತದಂತೆಯೇ ಕಾಣುತ್ತಿದೆ.

ಹಾ ಸ್ವಪ್ನಃ ಸತ್ಯಮೇವೇದಂ ತ್ವಂ ರಾಮೇಣ ಕಥಂ ಹತಃ ।
ತ್ವಂ ಮೃತ್ಯೋರಪಿ ಮೃತ್ಯುಃ ಸ್ಯಾಃ ಕಥಂ ಮೃತ್ಯುವಶಂ ಗತಃ ॥೪೭॥

ಅಯ್ಯೋ! ನಾನೀಗ ಕಾಣುತ್ತಿರುವುದು ಕನಸಿರಬಹುದೇ? ಅಥವಾ ಸತ್ಯವಾಗಿಯೇ ನಾನಿದೆಲ್ಲವನ್ನೂ ಕಾಣುತ್ತಿರುವೆನೇ? ಪತಿದೇವನೇ! ಇದೆ ಲ್ಲವೂ ಕನಸೇ ಆಗಿರಬಹುದು. ನಾನೀಗ ಕನಸನ್ನೇ ಕಾಣುತ್ತಿರಬಹುದು. ಏಕೆಂದರೆ : ನೀನು ರಾಮನಿಂದ ಹೇಗೆ ಹತನಾದೆ? ನೀನಿದುವರೆಗೂ ಮೃತ್ಯು ವಿಗೂ ಮೃತ್ಯುವಾಗಿದ್ದವನು. ಮೃತ್ಯುವೇ ನಿನ್ನನ್ನು ನೋಡಿ ಭಯಪಟ್ಟು ಓಡುತ್ತಿದ್ದಿತು. ಹೀಗಿರುವಾಗ ನೀನು ಮೃತ್ಯುವಿಗೆ ಹೇಗೆ ವಶನಾದೆ?

ಪ್ರಾಣನಾಥನೇ! ನೀನು ಮೂರು ಲೋಕಗಳ ಐಶ್ವರ್ಯವನ್ನೂ ಉಪ ಭೋಗಿಸುತ್ತಿದ್ದವನು. ಮೂರು ಲೋಕಗಳ ಪ್ರಾಣಿಗಳನ್ನೂ ಭಯದಿಂದ ಉದ್ವೇಗಗೊಳಿಸುತ್ತಿದ್ದವನು. ಲೋಕಪಾಲರನ್ನೂ ಜಯಿಸಿದವನು. ಭಗವಾನ್ ಶಂಕರನನ್ನೇ ಕೈಲಾಸಪರ್ವತದೊಡನೆ ಮೇಲಕ್ಕೆತ್ತಿದವನು. ದರ್ಪದಿಂದ ಕೊಬ್ಬಿದ್ದ ಶತ್ರುಗಳನ್ನು ಯುದ್ಧಗಳಲ್ಲಿ ಬಂಧಿಸಿ ಪರಾಕ್ರಮವನ್ನು ಪ್ರದರ್ಶಿಸುತ್ತಿದ್ದವನು. ಲೋಕಗಳನ್ನು ಅಲ್ಲೋಲ-ಕಲ್ಲೋಲಗೊಳಿಸು ತ್ತಿದ್ದವನು. ಸಾಧು-ಸತ್ಪುರುಷರನ್ನು ಹಿಂಸಿಸುತ್ತಿದ್ದವನು. ಶತ್ರುಗಳ ಸಮ್ಮುಖದಲ್ಲಿ ಕೆಚ್ಚಿನಿಂದ ಅಹಂಕಾರಪೂರ್ಣವಾದ ಮಾತುಗಳನ್ನು ಹೇಳು ತ್ತಿದ್ದವನು. ನಿನ್ನ ಕಡೆಯ ಸೈನಿಕರನ್ನೂ ಸೇವಕರನ್ನೂ ರಕ್ಷಿಸುತ್ತಾ ಭಯಂಕರ ಪರಾಕ್ರಮಿಗಳಾದ ಶತ್ರುಗಳನ್ನು ಸಂಹರಿಸುತ್ತಿದ್ದವನು. ಸಾವಿರಾರು ಸಂಖ್ಯೆಯಲ್ಲಿ ದಾನವಶ್ರೇಷ್ಠರನ್ನೂ ಯಕ್ಷರನ್ನೂ ಸಂಹರಿಸುತ್ತಿದ್ದವನು. ಯುದ್ಧದಲ್ಲಿ ನಿವಾತ-ಕವಚರೆಂಬ ರಾಕ್ಷಸರನ್ನು ನಿಗ್ರಹಿಸಿದವನು. ಹಲವಾರು ಯಜ್ಞಗಳನ್ನು ಧ್ವಂಸಮಾಡಿದವನು. ಸ್ವಜನರ ರಕ್ಷಕನಾಗಿದ್ದವನು. ಧರ್ಮದ ವ್ಯವಸ್ಥೆಯನ್ನು ಹಾಳುಮಾಡುತ್ತಿದ್ದವನು. ಯುದ್ಧಗಳಲ್ಲಿ ಮಾಯೆ ಗಳನ್ನು ಸೃಷ್ಟಿಸುತ್ತಿದ್ದವನು. ಅಲ್ಲಲ್ಲಿರುತ್ತಿದ್ದ ದೇವತೆಗಳ, ಅಸುರರ ಮತ್ತು ಮನುಷ್ಯರ ಕನ್ಯೆಯರನ್ನು ಅಪಹರಿಸುತ್ತಿದ್ದವನು. ಶತ್ರುಗಳ ಕಡೆಯ ಸ್ತ್ರೀಯರಿಗೆ ದುಃಖವನ್ನುಂಟುಮಾಡುತ್ತಿದ್ದವನು. ಸ್ವಜನರಿಗೆ

ನಾಯಕನಾಗಿದ್ದವನು. ಲಂಕಾಪಟ್ಟಣವನ್ನು ರಕ್ಷಿಸುತ್ತಿದ್ದವನು. ಭಯಂಕರವಾದ ಕಾರ್ಯಗಳನ್ನು ಮಾಡುತ್ತಿದ್ದವನು. ನಮ್ಮೆಲ್ಲರಿಗೂ ಕಾಮೋಪಭೋಗಗಳನ್ನು ಒದಗಿಸಿಕೊಡುತ್ತಿದ್ದವನು. ರಥಿಗಳಲ್ಲಿ ಶ್ರೇಷ್ಠನಾಗಿದ್ದವನು. ಇಂತಹ ನೀನು ರಾಮನಿಂದ ಹತನಾದುದನ್ನು ನೋಡಿ ನಾನಿನ್ನೂ ಸ್ಥಿರವಾಗಿಯೇ ಉಳಿದಿದ್ದೇನೆ. ಪತಿಗೆ ಪ್ರಿಯತಮೆಯಾಗಿದ್ದ ನಾನು ಈ ದೇಹವನ್ನಿನ್ನೂ ಧರಿಸಿಕೊಂಡೇ ಇದ್ದೇನೆ. ನಿಶ್ಚಯವಾಗಿಯೂ ನನ್ನ ಹೃದಯವು ಕಲ್ಲಾಗಿದೆ.

ರಾಕ್ಷಸೇಶ್ವರನೇ! ಹೆಚ್ಚು ಬೆಲೆಯ ಹಂಸತೂಲಿಕಾತಲ್ಪಗಳಲ್ಲಿ ಮಲಗುತ್ತಿದ್ದ ನೀನು ಈಗೇಕೆ ಈ ಭೂಮಿಯಲ್ಲಿ ಧೂಳಿನಿಂದ ಧೂಸರಿತನಾಗಿ ಮಲಗಿರುವೆ?

ನನ್ನ ಮಗನಾದ ಇಂದ್ರಜಿತುವನ್ನು ಲಕ್ಷ್ಮಣನು ಸಂಹರಿಸಿದಾಗಲೇ ನನಗೆ ದೊಡ್ಡ ಆಘಾತವಾಯಿತು. ಈಗ ನೀನು ಸತ್ತಮೇಲಂತೂ ನಾನು ಸತ್ತವಳಂತೆಯೇ ಆಗಿದ್ದೇನೆ.

ನಾನೀಗ ಬಂಧುಜನರಿಂದಲೂ ವಿಹೀನಳಾಗಿದ್ದೇನೆ. ನಾಥನಾದ ನಿನ್ನಿಂದಲೂ ವಿಹೀನಳಾಗಿದ್ದೇನೆ. ನಿನ್ನ ಮರಣದ ಕಾರಣದಿಂದಾಗಿ ಸಮಸ್ತ ಕಾಮೋಪಭೋಗಗಳಿಂದಲೂ ವಂಚಿತಳಾಗಿದ್ದೇನೆ. ಅನಂತಕಾಲದವರೆಗೂ ನಾನು ಹೀಗೆಯೇ ಶೋಕಪಡುತ್ತಲೇ ಇರಬೇಕಾಗಿದೆ. ಮಹಾರಾಜ! ನೀನೀಗ ಅತ್ಯಂತದುರ್ಗಮವಾದ ಅತಿದೀರ್ಘವಾದ ಹಾದಿಯನ್ನು ಹಿಡಿದು ಹೊರಟಿರುವೆಯಲ್ಲವೇ? ದುಃಖಪೀಡಿತೆಯಾಗಿರುವ ನನ್ನನ್ನೂ ನಿನ್ನ ಜೊತೆಯಲ್ಲಿಯೇ ಕರೆದುಕೊಂಡು ಹೋಗು. ನಿನ್ನನ್ನು ಬಿಟ್ಟು ನಾನು ಖಂಡಿತವಾಗಿಯೂ ಬದುಕಿರಲಾರೆನು. ಅಸಹಾಯಕಳಾದ ನನ್ನನ್ನು ಇಲ್ಲಿಯೇ ಬಿಟ್ಟು ನೀನೊಬ್ಬನೇ ಹೊರಟುಹೋಗಲು ಏಕೆ ಬಯಸಿರುವೆ? ದೀನೆಯಾಗಿರುವ, ನಿನಗಾಗಿ ವಿಲಪಿಸುತ್ತಿರುವ, ಮಂದಭಾಗ್ಯಳಾದ ನನ್ನೊಡನೆ ಮಾತನ್ನೇಕೆ ಆಡುತ್ತಿಲ್ಲ? ಮುಖದ ತೆರೆಯೂ ಇಲ್ಲದೇ ನಗರದ್ವಾರದಿಂದ ಹೊರಟು ಕಾಲ್ನಡಿಗೆಯಲ್ಲಿಯೇ ಇಲ್ಲಿಗೆ ಬಂದಿರುವ ನನ್ನನ್ನು ನೋಡಿ ಕೋಪಗೊಂಡಿಲ್ಲ ತಾನೇ?

ಪತ್ನಿಯರಲ್ಲಿ ವಿಶೇಷವಾದ ಅನುರಾಗದಿಂದಿದ್ದವನೇ! ಪ್ರಾಣೇಶ್ವರನೇ! ಇದೋ ಇಲ್ಲಿ ನೋಡು ; ನಿನ್ನ ಪ್ರಿಯತಮೆಯರೆಲ್ಲರೂ ಲಜ್ಜೆಯನ್ನೂ ಬಿಟ್ಟು ಮುಖದ ತೆರೆಯೂ ಇಲ್ಲದೇ ಅಂತಃಪುರದಿಂದ ಹೊರಬಂದಿದ್ದಾರೆ. ನಿನ್ನ ಪ್ರೇಯಸಿಯರು ಹೀಗೆ ಬಂದಿರುವುದನ್ನು ನೋಡಿಯೂ ನೀನು ಕೋಪಿಸಿಕೊಳ್ಳುತ್ತಿಲ್ಲವೇಕೆ? ನಿನ್ನ ಕ್ರೀಡಾವಿಹಾರಗಳಲ್ಲಿ ಸಹಕರಿಸುತ್ತಿದ್ದ ಈ ಅಂತಃಪುರದ ರಮಣಿಯರು ಅನಾಥೆಯರಾಗಿ ವಿಲಪಿಸುತ್ತಿದ್ದಾರೆ. ಈ ನಾರೀ ಜನಕ್ಕೆ ನೀನು ಆಶ್ವಾಸನೆಯನ್ನು ಕೊಡುವುದಿಲ್ಲವೇ? ಇವರನ್ನು ಸಮಾದರಿಸುವುದಿಲ್ಲವೇ?

ಮಹಾರಾಜ! ನೀನು ಮಾಡಿದ ಪಾಪದ ಫಲವನ್ನು ಈಗ ನಾವೆಲ್ಲರೂ ಹಂಚಿಕೊಳ್ಳಬೇಕಾಗಿದೆ. ಪತಿವ್ರತೆಯರಾದ, ಧರ್ಮಪರಾಯಣೆಯರಾದ, ಅತ್ತೆ-ಮಾವಂದಿರ ಶುಶ್ರೂಷೆಯಲ್ಲಿ ಸದಾ ನಿರತರಾಗಿರುತ್ತಿದ್ದ ಅನೇಕಾನೇಕ ಕುಲಸ್ತ್ರೀಯರನ್ನು ನೀನು ವಿಧವೆಯರನ್ನಾಗಿ ಮಾಡಿರುವೆ. ಇಷ್ಟು ಮಾತ್ರ ವಲ್ಲ. ಅವರನ್ನು ಅವಮಾನಿಸುತ್ತಲೂ ಇದ್ದೆ. ಆ ಸಮಯದಲ್ಲವರು ಶೋಕಪೀಡಿತರಾಗಿ ನಿನ್ನನ್ನು ಶಪಿಸುತ್ತಿದ್ದರು. ಅದರ ಫಲವಾಗಿಯೇ ನೀನೂ ಶತ್ರುವಶನಾಗಿ ಮೃತಿಹೊಂದಿದೆ. ಅವರಂತೆಯೇ ನಾವೂ ವಿಧವೆಯರಾಗ ಬೇಕಾಯಿತು.

ಪತಿವ್ರತಾನಾಂ ನಾಕಸ್ಮಾತ್ಪತನ್ತ್ಯಶ್ರೂಣಿ ಭೂತಲೇ ॥೬೮॥

'ಪತಿವ್ರತೆಯರ ಕಣ್ಣೀರು ನಿಷ್ಕಾರಣವಾಗಿ ಭೂಮಿಯ ಮೇಲೆ ಬೀಳುವುದಿಲ್ಲ'–ಎಂಬ ಈ ಲೋಕೋಕ್ತಿಯು ನಿನ್ನ ವಿಷಯದಲ್ಲಿ ಪ್ರಾಯಶಃ ಸತ್ಯವಾಗಿಯೇ ಪರಿಣಮಿಸಿದೆ.

ಮಹಾರಾಜ! ನೀನಾದರೋ ನಿನ್ನ ತೇಜಃಪ್ರಭಾವದಿಂದ ಮೂರು ಲೋಕಗಳನ್ನೂ ಆಕ್ರಮಿಸಿ ಮಹಾಶೂರನೆಂಬ ಅಭಿಮಾನವನ್ನು ಹೊಂದಿದ್ದೆ. ಅಂತಹ ನೀನು ಹೆಂಗಸನ್ನು ಕದ್ದುತಂದು ಅತ್ಯಂತಕ್ಷುದ್ರವಾದ ಕಾರ್ಯವನ್ನೇಕೆ ಮಾಡಿದೆ? ಮಾಯಾಮೃಗದ ವ್ಯಾಜದಿಂದ ರಾಮನನ್ನೂ ಅನಂತರ ಲಕ್ಷ್ಮಣ ನನ್ನೂ ಆಶ್ರಮದಿಂದ ದೂರಸರಿಯುವಂತೆ ಮಾಡಿ ರಾಮನ ಪತ್ನಿಯಾದ ಸೀತೆಯನ್ನು ಅಪಹರಿಸಿ ತಂದೆ. ನೀನು ಯುದ್ಧದಲ್ಲಿ ಹೇಡಿಯಂತೆ ವರ್ತಿಸಿರು

ವುದು ನನ್ನ ಸ್ಮರಣೆಯಲ್ಲಿಲ್ಲ. ಆದರೆ ಭಾಗ್ಯದ ವಿಪರ್ಯಾಸದಿಂದ ಅಂದು ನೀನು ಸೀತೆಯನ್ನು ಕದ್ದುತರುವಾಗ ಹೇಡಿಯಂತೆಯೇ ವರ್ತಿಸಿದೆ. ಅದೇ ನಿನ್ನ ವಿನಾಶವು ಸನ್ನಿಹಿತವಾಗಿರುವುದಕ್ಕೆ ಸೂಚನೆಯಾಗಿತ್ತು.

ನನ್ನ ಮೈದುನನಾದ ವಿಭೀಷಣನು ಸತ್ಯವಾದಿಯು. ಭೂತ-ಭವಿಷ್ಯ ಗಳನ್ನೂ ತಿಳಿದವನು. ವರ್ತಮಾನದ ವ್ಯವಹಾರದಲ್ಲಿಯೂ ಕುಶಲನು. ನೀನು ಮೈಥಿಲಿಯನ್ನು ಅಪಹರಿಸಿ ತಂದುದನ್ನು ನೋಡಿ ದೀರ್ಘವಾಗಿ ಸಮಾಲೋಚಿಸಿ ನಿಟ್ಟುಸಿರುಬಿಡುತ್ತಾ ಹೇಳಿದನು :

ಸೋಽಯಂ ರಾಕ್ಷಸಮುಖ್ಯಾನಾಂ ವಿನಾಶಃ ಪರ್ಯುಪಸ್ಥಿತಃ ॥೭೧॥

"ಈಗ ರಾಕ್ಷಸಶ್ರೇಷ್ಠರ ವಿನಾಶಕಾಲವು ಸನ್ನಿಹಿತವಾಯಿತು."

ವಿಭೀಷಣನು ಹೇಳಿದುದು ನಿಜವಾಯಿತು.

ಕಾಮ-ಕ್ರೋಧಗಳಿಂದ ಹುಟ್ಟಿದ ವ್ಯಸನದಿಂದಲೂ, ಹೆಂಗಸಿನ ಮೇಲಿನ ವ್ಯಾಮೋಹದಿಂದಲೂ ಸಮಸ್ತವಾದ ಐಶ್ವರ್ಯವೂ ನಷ್ಟವಾಗಿ ಹೋಯಿತು. ಇಷ್ಟು ಮಾತ್ರವಲ್ಲ. ವಂಶವಿನಾಶಕವಾದ ಅನರ್ಥವೂ ಬಂದೊದಗಿತು. ಇಂದು ನೀನು ನಿನ್ನ ದೋಷಗಳಿಂದ ರಾಕ್ಷಸಕುಲವನ್ನೇ ಅನಾಥವನ್ನಾಗಿ ಮಾಡಿಬಿಟ್ಟಿರುವೆ. ನೀನು ಪ್ರಖ್ಯಾತವಾದ ಬಲ-ಪೌರುಷ ಗಳಿಂದ ಸಂಪನ್ನನಾಗಿದ್ದವನು. ಆದುದರಿಂದ ನಿನ್ನ ವಿಷಯದಲ್ಲಿ ನಾನು ಶೋಕಪಡುವುದೂ ಉಚಿತವಲ್ಲ. ಆದರೂ ಸ್ತ್ರೀಸ್ವಭಾವದ ಕಾರಣದಿಂದಾಗಿ ನನ್ನ ಬುದ್ಧಿಯು ದೈನ್ಯದಲ್ಲಿ ಮಾರ್ಪಡುತ್ತಿದೆ. ನೀನಾದರೋ ಮಾಡಿರುವ ಪುಣ್ಯಗಳನ್ನೂ ಪಾಪಗಳನ್ನೂ ಕಟ್ಟಿಕೊಂಡು ವೀರೋಚಿತವಾದ ಗತಿಯನ್ನೇ ಹೊಂದಿರುವೆ. ಆದರೆ ನಿನ್ನ ವಿನಾಶದಿಂದ ನಾನು ಬಹಳ ದುಃಖಿತೆಯಾಗಿ ದ್ದೇನೆ. ಆದುದರಿಂದ ನನಗಾಗಿಯೇ ನಾನು ಪದೇ ಪದೇ ಶೋಕಿಸುತ್ತಿದ್ದೇನೆ. ನಿನ್ನ ಹಿತೈಷಿಗಳಾದ ಸುಹೃದರೂ ಮತ್ತು ಸಹೋದರರೂ ಹೇಳಿದ ಹಿತೋಕ್ತಿಗಳನ್ನು ನೀನು ಸ್ವಲ್ಪವಾದರೂ ಕೇಳಲೇ ಇಲ್ಲ. ವಿಭೀಷಣನು ಹೇಳಿದ ಹಿತೋಕ್ತಿಗಳೂ ಯುಕ್ತಿಯುಕ್ತವಾಗಿದ್ದುವು. ವಿಧಿವತ್ತಾಗಿ ಶ್ರೇಯ ಸ್ಕರವಾದ ಮತ್ತು ಸೌಮ್ಯವಾದ ಮಾತುಗಳನ್ನೇ ವಿಭೀಷಣನು ಹೇಳಿದ್ದನು. ಆದರೆ ಅವನ ಯುಕ್ತಿಯುಕ್ತವಾದ ಮಾತುಗಳನ್ನು ನೀನು ಕೇಳಲಿಲ್ಲ. ವೀರ್ಯದಿಂದ ಮತ್ತನಾದ ನೀನು ಮಾರೀಚ-ಕುಂಭಕರ್ಣರ ಮಾತುಗಳ

ನ್ನಾಗಲೀ ನನ್ನ ತಂದೆಯ ಮಾತುಗಳನ್ನಾಗಲೀ ಕೇಳಲಿಲ್ಲ. ಅದರ ಫಲವೇ ನಿನಗೀಗ ಪ್ರಾಪ್ತವಾಗಿದೆ.

ನೀಲಮೇಘಶ್ಯಾಮನೇ! ಪೀತಾಂಬರಧಾರಿಯೇ! ಶುಭಪ್ರದವಾದ ತೋಳ್ಬಳೆಗಳನ್ನು ಹೊಂದಿರುವವನೇ! ರಕ್ತದಿಂದ ಸಮಾವೃತನಾಗಿರುವ ನೀನು ಅಂಗಾಂಗಗಳನ್ನು ಚಾಚಿಕೊಂಡು ಇಲ್ಲೇಕೆ ಮಲಗಿರುವೆ? ಗಾಢನಿದ್ರೆಯಲ್ಲಿರುವವನಂತೆ ನೀನೀಗ ಮಲಗಿರುವೆ. ನೀನು ಶೋಕಪೀಡಿತಳಾಗಿರುವ ನನ್ನೊಡನೆ ಏಕೆ ಮಾತನಾಡುತ್ತಿಲ್ಲ? ನಾನು ಮಹಾಪರಾಕ್ರಮಿಯಾದ, ದಕ್ಷನಾದ, ಯುದ್ಧಗಳಲ್ಲಿ ಹಿಂದಿರುಗದ 'ಸುಮಾಲೀ' ಎಂಬ ರಾಕ್ಷಸನ ಮಗಳ ಮಗಳಾಗಿರುವೆನು. ನನ್ನೊಡನೆ ನೀನೇಕೆ ಮಾತನಾಡುತ್ತಿಲ್ಲ?

ರಾಕ್ಷಸರಾಜನೇ! ಏಳು ; ಎದ್ದೇಳು. ಪರಾಭವವನ್ನೇ ಕಾಣದಿರುವ ನಿನಗೆ ರಾಮನು ಹೊಸದಾಗಿ ಪರಾಭವವನ್ನುಂಟುಮಾಡಿದ್ದಾನೆ. ಅದನ್ನು ಸಹಿಸಿಕೊಂಡು ನೀನೇಕೆ ಮಲಗಿರುವೆ? ಸೂರ್ಯನ ಕಿರಣಗಳು ಇಂದು ಯಾವ ಭಯವೂ ಇಲ್ಲದೇ ಲಂಕೆಯನ್ನು ಪ್ರವೇಶಿಸುತ್ತಿವೆ. ವೀರವರನೇ! ಸೂರ್ಯನ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಕೂಡಿದ್ದ ಪರಿಘಾಯುಧದಿಂದ ನೀನು ಶತ್ರುಗಳನ್ನು ಸದೆಬಡಿಯುತ್ತಿದ್ದೆ. ವಜ್ರಧರನಾದ ಇಂದ್ರನ ವಜ್ರಾಯುಧದಂತೆ ಅದನ್ನು ನೀನು ಸತತವಾಗಿ ಪೂಜಿಸುತ್ತಿದ್ದೆ. ಆ ಪರಿಘಾಯುಧವು ರಣಭೂಮಿಯಲ್ಲಿ ಅಸಂಖ್ಯಾತರಾದ ಶತ್ರುಗಳ ಪ್ರಾಣಹರಣ ಮಾಡುತ್ತಿದ್ದಿತು. ಸುವರ್ಣದ ಬಲೆಯಿಂದ ಸಮಲಂಕೃತವಾಗಿದ್ದ ಆ ನಿನ್ನ ಪರಿಘಾಯುಧವು ಶ್ರೀರಾಮನ ಬಾಣಗಳಿಂದ ಸಾವಿರಾರು ತುಂಡುಗಳಾಗಿ ರಣರಂಗದ ಎಲ್ಲ ಕಡೆಗಳಲ್ಲಿಯೂ ಬಿದ್ದಿದೆ.

ಪ್ರಾಣನಾಥ! ನೀನು ನಿನ್ನ ಪ್ರೇಯಸಿಯನ್ನು ಆಲಿಂಗಿಸಿಕೊಳ್ಳುವಂತೆ ರಣಭೂಮಿಯನ್ನೇ ಆಲಿಂಗಿಸಿಕೊಂಡು ಏಕೆ ಮಲಗಿರುವೆ? ಯಾವ ಕಾರಣದಿಂದ ನೀನು ನನ್ನನ್ನು ಅಪ್ರಿಯಳೆಂದು ಭಾವಿಸಿ ನನ್ನೊಡನೆ ಮಾತನಾಡಲು ಬಯಸುತ್ತಿಲ್ಲ?

ನೀನು ಮರಣಹೊಂದಿದ್ದರೂ ಶೋಕಪೀಡಿತವಾಗಿರುವ ನನ್ನ ಈ ಹೃದಯವು ಸಾವಿರಾರು ಚೂರುಗಳಾಗಿ ಏಕೆ ಒಡೆದುಹೋಗಿಲ್ಲ? ಪಾಷಾಣ ಹೃದಯಳಾದ ನನಗೆ ಧಿಕ್ಕಾರವಿರಲಿ!"

ಹೀಗೆ ಹೇಳಿಕೊಂಡು ವಿಲಪಿಸುತ್ತಿದ್ದ ಮಂಡೋದರಿಯ ಕಣ್ಣುಗಳಲ್ಲಿ ನೀರು ತುಂಬಿಕೊಂಡಿತು. ಅವಳ ಹೃದಯವು ಪತಿಸ್ನೇಹದಿಂದ ನೆನೆದು ಹೋಯಿತು. ಅಳುತ್ತಳುತ್ತಲೇ ಅವಳು ಮೂರ್ಛಿತಳಾಗಿ ರಾವಣನ ವಕ್ಷಃಸ್ಥಳದಲ್ಲಿ ಬಿದ್ದಳು. ಆ ಸಮಯದಲ್ಲವಳು ಸಂಧ್ಯೆಯ ಕೆಂಪಿನಿಂದ ರಂಜಿಸುವ ಮೇಘದಲ್ಲಿ ಕಾಣಿಸಿಕೊಳ್ಳುವ ಹೊಳೆಯುತ್ತಿರುವ ಮಿಂಚಿನಂತೆಯೇ ಕಾಣುತ್ತಿದ್ದಳು.

ಮಂಡೋದರಿಯ ಸವತಿಯರೂ ಶೋಕಾರ್ತರಾಗಿದ್ದರು. ಮೂರ್ಛಿತಳಾಗಿ ಮಂಡೋದರಿಯು ರಾವಣನ ಮೇಲೆ ಬಿದ್ದುದನ್ನು ನೋಡಿದೊಡನೆಯೇ ಎಲ್ಲರೂ ಅವಳನ್ನು ಹಿಡಿದೆತ್ತಿ ಕುಳ್ಳಿರಿಸಿದರು. ಬಿಕ್ಕಿ-ಬಿಕ್ಕಿ ಅಳುತ್ತಿದ್ದ ಆ ಸವತಿಯರು ಗಟ್ಟಿಯಾಗಿ ಅಳುತ್ತಿದ್ದ ಮಂಡೋದರಿಯನ್ನು ಅತ್ತುಕೊಂಡೇ ಸಮಾಧಾನಗೊಳಿಸಲು ಯತ್ನಿಸುತ್ತಿದ್ದರು.

ನ ತೇ ಸುವಿದಿತಾ ದೇವಿ ಲೋಕಾನಾಂ ಸ್ಥಿತಿರಧ್ರುವಾ ।
ದಶಾವಿಭಾಗಪರ್ಯಾಯೇ ರಾಜ್ಞಾಂ ವೈ ಚಞ್ಚಲಾಃ ಶ್ರಿಯಃ ॥೯೦॥

“ಮಹಾರಾಣಿ! ಪ್ರಪಂಚವು ಅಸ್ಥಿರವೆಂಬುದು ನಿನಗೆ ತಿಳಿಯದೇ? ಭಾಗ್ಯವಿಪರ್ಯಾಯದ ಕಾಲದಲ್ಲಿ ರಾಜರ ಐಶ್ವರ್ಯಗಳೂ ಸ್ಥಿರವಾಗಿ ಉಳಿಯುವುದಿಲ್ಲ.”

ಸವತಿಯರು ಹೀಗೆ ಸಮಾಧಾನದ ಮಾತನ್ನು ಹೇಳುತ್ತಿದ್ದರೂ ಮಂಡೋದರಿಯು ಗಟ್ಟಿಯಾಗಿ ಅಳತೊಡಗಿದಳು. ಹಾಗೆ ಕಂಬನಿಗರೆಯುತ್ತಿದ್ದಾಗ ಅವಳ ಸುಂದರವಾದ ಮುಖವೂ ಸ್ತನಗಳೂ ಕಣ್ಣೀರಿನಿಂದ ಸಂಪೂರ್ಣವಾಗಿ ನೆನೆದುಹೋದುವು.

ಆ ಸಮಯದಲ್ಲಿ ಶ್ರೀರಾಮನು–ಅಣ್ಣನಿಗೆ ಅಂತ್ಯಸಂಸ್ಕಾರಮಾಡುವಂತೆಯೂ, ಅಂತಃಪುರದ ಸ್ತ್ರೀಯರನ್ನು ಸಮಾಧಾನಗೊಳಿಸಿ ಹಿಂದಕ್ಕೆ ಕಳುಹಿಸುವಂತೆಯೂ ವಿಭೀಷಣನಿಗೆ ಹೇಳಿದನು.

ಶ್ರೀರಾಮನ ಮಾತನ್ನು ಕೇಳಿ ಧೀಮಂತನಾದ ವಿಭೀಷಣನು ಶ್ರೀರಾಮನ ಅಭಿಪ್ರಾಯವನ್ನು ತಿಳಿಯುವ ಆಶಯದಿಂದ ಬುದ್ಧಿಯಿಂದ ಚೆನ್ನಾಗಿ ವಿಮರ್ಶಿಸಿ ಧರ್ಮಾರ್ಥಯುಕ್ತವೂ, ವಿನಯಾನ್ವಿತವೂ, ಹಿತಕರವೂ ಆದ ಮಾತನ್ನು ಹೇಳಿದನು :

ತ್ಯಕ್ತಧರ್ಮವ್ರತಂ ಕ್ರೂರಂ ನೃಶಂಸಮನೃತಂ ತಥಾ ।
ನಾಹಮರ್ಹೋಽಸ್ಮಿ ಸಂಸ್ಕರ್ತುಂ ಪರದಾರಾಭಿಮರ್ಶಿನಮ್ ॥೯೩॥

"ಪೂಜ್ಯನೇ! ಯಾವನು ಧರ್ಮವನ್ನೂ ಸದಾಚಾರವನ್ನೂ ಪರಿತ್ಯಜಿಸಿದ್ದನೋ–ಕ್ರೂರನೂ, ನಿರ್ದಯನೂ, ಅಸತ್ಯವಾದಿಯೂ, ಪರಸ್ತ್ರೀಯರ ಸಮಾಗಮಮಾಡುವವನೂ ಆಗಿದ್ದನೋ–ಅಂತಹವನ ದಹನಸಂಸ್ಕಾರವನ್ನು ಮಾಡುವುದು ನನಗೆ ಯೋಗ್ಯವಲ್ಲ.

ಭ್ರಾತೃರೂಪೋ ಹಿ ಮೇ ಶತ್ರುರೇಷ ಸರ್ವಾಹಿತೇ ರತಃ ।
ರಾವಣೋ ನಾರ್ಹತೇ ಪೂಜಾಂ ಪೂಜ್ಯೋಽಪಿ ಗುರುಗೌರವಾತ್ ॥

ಇತರ ಅಹಿತದಲ್ಲಿಯೇ ನಿರತನಾಗಿದ್ದ ಈ ರಾವಣನು ನನಗೆ ಅಣ್ಣನ ರೂಪದ ಶತ್ರುವೇ ಆಗಿದ್ದನು. ಇವನು ಜ್ಯೇಷ್ಠನಾಗಿದ್ದುದರಿಂದ ಗುರು ಜನರಿಗೆ ಉಚಿತವಾದ ಗೌರವಕ್ಕೆ ಪಾತ್ರನಾಗಿದ್ದರೂ ನನ್ನಿಂದ ಸತ್ಕೃತನಾಗಲು ಅವನು ಖಂಡಿತವಾಗಿಯೂ ಯೋಗ್ಯನಲ್ಲ.

ನೃಶಂಸ ಇತಿ ಮಾಂ ಕಾಮಂ ವಕ್ಷ್ಯನ್ತಿ ಮನುಜಾ ಭುವಿ ।
ಶ್ರುತ್ವಾ ತಸ್ಯಾಗುಣಾನ್ಸರ್ವೇ ವಕ್ಷ್ಯನ್ತಿ ಸುಕೃತಂ ಪುನಃ ॥೯೫॥

ನನ್ನ ಈ ಮಾತನ್ನು ಕೇಳಿ ಪ್ರಪಂಚದಲ್ಲಿ ಮಾನವರು ನನ್ನನ್ನು ಕ್ರೂರಿಯೆಂದು ತೆಗಳುತ್ತಾರೆ. ತೆಗಳಿಕೊಳ್ಳಲಿ! ಆದರೆ ಅವರು ನನ್ನ ಅಣ್ಣನಲ್ಲಿದ್ದ ದುರ್ಗುಣಗಳನ್ನು ಕೇಳಿದೊಡನೆಯೇ ನನ್ನ ಅಭಿಪ್ರಾಯವು ಸರಿಯೆಂದು ಮೆಚ್ಚಿಕೊಳ್ಳುತ್ತಾರೆ."

ವಿಭೀಷಣನು ಹೀಗೆ ಹೇಳಿದುದನ್ನು ಕೇಳಿ ಪರಮಪ್ರೀತನಾದ ಧರ್ಮಿಷ್ಠರಲ್ಲಿ ಶ್ರೇಷ್ಠನಾದ ವಾಕ್ಯಕೋವಿದನಾದ ಶ್ರೀರಾಮನು ವಾಕ್ಯಜ್ಞನಾದ ವಿಭೀಷಣನಿಗೆ ಹೇಳಿದನು :

"ರಾಕ್ಷಸೇಶ್ವರನೇ! ನಾನು ನಿನಗೂ ಪ್ರಿಯವಾಗುವಂತಹ ಕಾರ್ಯವನ್ನು ಮಾಡಬೇಕಾಗಿದೆ. ಏಕೆಂದರೆ : ನಾನು ವಿಜಯವನ್ನು ಗಳಿಸಿದ್ದು ನಿನ್ನ ಪ್ರಭಾವದಿಂದಲೇ. ಆದುದರಿಂದ ಈ ಸಮಯಕ್ಕೆ ತಕ್ಕುದಾದ ಮಾತುಗಳನ್ನೇ ನಾನು ಹೇಳಬೇಕಾಗಿದೆ. ನಿನ್ನ ಅಣ್ಣನು ಅಧರ್ಮಿಯೇ ಆಗಿರಲಿ ; ಸುಳ್ಳುಗಾರನೇ ಆಗಿರಲಿ–ಸಂಗ್ರಾಮದಲ್ಲವನು ಮಹಾಪರಾಕ್ರಮಿಯೂ,

ತೇಜಸ್ವಿಯೂ, ಬಲಿಷ್ಠನೂ ಆಗಿದ್ದನು. ಇಂದ್ರನೇ ಮೊದಲಾದ ದೇವತೆಗಳು ಕೂಡ ಇವನನ್ನು ಪರಾಜಯಗೊಳಿಸಲು ಅಸಮರ್ಥರಾಗಿದ್ದರು. ಮೂರು ಲೋಕಗಳನ್ನೂ ಭಯದಿಂದ ಕೂಗಿಕೊಳ್ಳುವಂತೆ ಮಾಡಿದ್ದ ರಾವಣನು ಮಹಾತ್ಮನೂ ಬಲ-ಪರಾಕ್ರಮಸಂಪನ್ನನೂ ಆಗಿದ್ದನು.

ಮರಣಾನ್ತಾನಿ ವೈರಾಣಿ ನಿರ್ವೃತ್ತಂ ನಃ ಪ್ರಯೋಜನಮ್ ।
ಕ್ರಿಯತಾಮಸ್ಯ ಸಂಸ್ಕಾರೋ ಮಮಾಪ್ಯೇಷ ಯಥಾ ತವ ॥೧೦೦॥

ದ್ವೇಷವು ಮರಣದವರೆಗೆ ಮಾತ್ರವೇ ಇರುತ್ತದೆ. ವೈರಿಯು ಮರಣ ಹೊಂದಿದೊಡನೆಯೇ ವೈರದ ಅಂತ್ಯವಾಗುತ್ತದೆ. ನಮ್ಮ ಕಾರ್ಯವೂ ಸಿದ್ಧಿಸಿದೆ. ಆದುದರಿಂದ ಈ ಸಮಯದಲ್ಲಿ ರಾವಣನು ನಿನಗೆ ಹೇಗೆ ಸ್ನೇಹಪಾತ್ರನೋ ನನಗೂ ಹಾಗೆಯೇ.

ಈ ಕಾರಣಗಳಿಂದ ಇವನಿಗೆ ದಹನಸಂಸ್ಕಾರವನ್ನು ಮಾಡು. ಧರ್ಮಾನುಸಾರವಾಗಿ ರಾವಣನು ನಿನ್ನಿಂದ ವಿಧಿಪೂರ್ವಕವಾದ ಸಂಸ್ಕಾರಕ್ಕೆ ಯೋಗ್ಯನಾಗಿದ್ದಾನೆ. ಹೀಗೆ ಮಾಡುವುದರಿಂದ ನೀನು ಕೀರ್ತಿಗೆ ಪಾತ್ರನಾಗುವೆ."*

ಶ್ರೀರಾಮನ ಮಾತುಗಳನ್ನು ಕೇಳಿ ವಿಭೀಷಣನು ಮರುಮಾತ ನಾಡದೇ ಹತನಾದ ರಾವಣನಿಗೆ ದಹನಸಂಸ್ಕಾರಮಾಡಲು ಅವಸರದಿಂದಲೇ ಉಪಕ್ರಮಿಸಿದನು. ರಾಕ್ಷಸೇಂದ್ರನಾದ ವಿಭೀಷಣನು ಲಂಕಾಪಟ್ಟಣಕ್ಕೆ ಹೋಗಿ ರಾವಣನ ಅಗ್ನಿಹೋತ್ರಕ್ರಿಯೆಯು ಬಹಳ ಬೇಗ ವಿಧಿಪೂರ್ವಕವಾಗಿ ನಡೆಯಲು ಏರ್ಪಡಿಸಿದನು.

ಅನಂತರ ಮರದ ಗಾಡಿಗಳನ್ನೂ, ಅಗ್ನಿಹೋತ್ರದ ಅಗ್ನಿಗಳನ್ನೂ, ಯಾಜಕರನ್ನೂ, ಪುರೋಹಿತರನ್ನೂ, ಗಂಧದ ಕಟ್ಟಿಗೆಗಳನ್ನೂ, ಸುಗಂಧ

---

* ಈ ವಿಷಯವು ಈ ಸರ್ಗದಲ್ಲಿ ಬಂದಿರುವುದಕ್ಕೂ ೧೧೯ನೆಯ ಸರ್ಗದಲ್ಲಿ ಬಂದಿರುವುದಕ್ಕೂ ಬಹಳ ವ್ಯತ್ಯಾಸವಿದೆ. ೧೧೯ನೆಯ ಸರ್ಗದಲ್ಲಿ ವಿಭೀಷಣನು ರಾವಣನ ಸಲುವಾಗಿ ವ್ಯಥೆಪಡುತ್ತಾನೆ. ರಾವಣನನ್ನು ಬಗೆ-ಬಗೆಯಾಗಿ ಹೊಗಳುತ್ತಾನೆ. ಅಂತ್ಯಸಂಸ್ಕಾರಮಾಡಲು ಶ್ರೀರಾಮನ ಒಪ್ಪಿಗೆಯನ್ನು ಅಪೇಕ್ಷಿಸುತ್ತಾನೆ. ಶ್ರೀರಾಮನೂ ಅಂತ್ಯಕ್ರಿಯೆಮಾಡಲು ಸಮ್ಮತಿಸುತ್ತಾನೆ. ಈ ಸರ್ಗದಲ್ಲಿ ಶ್ರೀರಾಮನೇ ಅಂತ್ಯಕ್ರಿಯೆಮಾಡಲು ಹೇಳುತ್ತಾನೆ. ವಿಭೀಷಣನು ರಾವಣನ ವಿಷಯದಲ್ಲಿ ಬಹಳ ಕಟುವಾಗಿ ಮಾತನಾಡುತ್ತಾನೆ. (ಶ್ರೀರಾಮನ ಅಭಿಪ್ರಾಯವನ್ನು ತಿಳಿಯುವ ಸಲು

ಯುಕ್ತವಾದ ಅಗುರುಗಳನ್ನೂ, ಇತರ ಸುಗಂಧಯುಕ್ತವಾದ ಪದಾರ್ಥಗಳನ್ನೂ, ಮಣಿ-ಮುತ್ತು-ಪ್ರವಾಳಗಳನ್ನೂ ಒಂದೆಡೆಯಲ್ಲಿ ಸಂಗ್ರಹಿಸಿದನು. ಅವೆಲ್ಲವನ್ನೂ ತೆಗೆಸಿಕೊಂಡು ಪುರೋಹಿತರೊಡನೆಯೂ ಯಾಜಕರೊಡನೆಯೂ ಮುಹೂರ್ತಕಾಲದಲ್ಲಿ ರಣಭೂಮಿಗೆ ಆಗಮಿಸಿದನು. ಬಳಿಕ ಮಾಲ್ಯವಂತನೊಡನೆ ದಹನಸಂಸ್ಕಾರವನ್ನು ಮಾಡಲು ಉಪಕ್ರಮಿಸಿದನು. ಅಶ್ರುಪೂರ್ಣಮುಖರಾದ ರಾಕ್ಷಸಬ್ರಾಹ್ಮಣರು ರೇಷ್ಮೆವಸ್ತ್ರವನ್ನುಟ್ಟಿದ್ದ ರಾಕ್ಷಸಾಧೀಶನಾದ ರಾವಣನನ್ನು ಸುವರ್ಣಮಯವಾದ ಮತ್ತು ದಿವ್ಯವಾದ ಶಿಬಿಕೆಯ ಮೇಲಿರಿಸಿದರು. ಸೈನಿಕರು ವಿಧ-ವಿಧವಾದ ವಾದ್ಯಗಳಿಂದಲೂ ಮತ್ತು ಸ್ತೋತ್ರಗಳಿಂದಲೂ ರಾವಣನಿಗೆ ಕೊನೆಯ ಪ್ರಣಾಮವನ್ನು ಸಲ್ಲಿಸಿದರು.

ಪತಾಕೆಗಳಿಂದಲೂ ಚಿತ್ರ-ವಿಚಿತ್ರವಾಗಿದ್ದ ಪುಷ್ಪಗಳಿಂದಲೂ ಚಿತ್ರಿತವಾಗಿ ಮಾಡಲ್ಪಟ್ಟಿದ್ದ ಶಿಬಿಕೆಯನ್ನು ವಿಭೀಷಣನೇ ಮೊದಲಾದ ರಾಕ್ಷಸರು ಹೆಗಲಮೇಲಿಟ್ಟುಕೊಂಡು ದಕ್ಷಿಣಾಭಿಮುಖವಾಗಿ ಶ್ಮಶಾನಭೂಮಿಗೆ ಸಾಗಿದರು. ಉಳಿದವರು ಕಟ್ಟಿಗೆಗಳನ್ನು ಹೊತ್ತುಕೊಂಡು ಹಿಂದೆ ಹೋಗುತ್ತಿದ್ದರು. ಅಧ್ವರ್ಯುವಿನ ಪ್ರೇರಣೆಯಂತೆ ಮೂರು ವಿಧವಾದ ಅಗ್ನಿಗಳೂ ಜಾಜ್ವಲ್ಯಮಾನವಾಗಿ ಭಾಂಡಗಳಲ್ಲಿ ಉರಿಯುತ್ತಿದ್ದು ಅಗ್ನಿತ್ರಯಗಳೂ ರಾವಣನ ಶಿಬಿಕೆಯ ಮುಂದೆ ಹೋಗುತ್ತಿದ್ದುವು. ಅಂತಃಪುರದ ಸ್ತ್ರೀಯರೆಲ್ಲರೂ ರೋದನಮಾಡುತ್ತಾ ತೂರಾಡುತ್ತಾ ಶಿಬಿಕೆಯ ಹಿಂದೆ ಹೋಗುತ್ತಿದ್ದರು. ಶ್ಮಶಾನಭೂಮಿಗೆ ಬಂದನಂತರ ರಾವಣನ ದೇಹವಿದ್ದ ಶಿಬಿಕೆಯನ್ನು ಪವಿತ್ರವಾದ ಸ್ಥಾನದಲ್ಲಿರಿಸಿದರು. ಅತ್ಯಂತದುಃಖಿತರಾಗಿದ್ದ

ವಾಗಿ.) ಹಿಂದಿನ ಸರ್ಗದಲ್ಲಿ ರಾವಣನು ಮರಣಹೊಂದಿದೊಡನೆಯೇ ವಿಭೀಷಣನು ದುಃಖಿಸುವನು. ಆಗ ಶ್ರೀರಾಮನು ವಿಭೀಷಣನನ್ನು ಸಮಾಧಾನಗೊಳಿಸುವನು. ಅನಂತರ ವಿಭೀಷಣನ ಮನಸ್ಸಿನಲ್ಲಿ 'ನಾನೇ ದುಃಖಪಟ್ಟಿದ್ದರಿಂದ ಕರುಣಾಮಯನಾದ ಶ್ರೀರಾಮನು ನನ್ನನ್ನು ಸಂತೈಸಲು ಹಾಗೆ ಹೇಳಿರಬಹುದು. ಅವನ ಮನಸ್ಸಿನ ಅಭಿಪ್ರಾಯವು ಬೇರೆಯೇ ಇರಬಹುದು'–ಎಂಬ ಸಂಶಯವುಂಟಾಗಿರಬಹುದು. ಹೀಗೆ ಭಾವಿಸಿ ಈ ಪ್ರಕರಣದಲ್ಲಿ ಅವನು ಅಣ್ಣನ ವಿಷಯದಲ್ಲಿ ಕಾಠಿಣ್ಯದಿಂದ ಮಾತನಾಡುತ್ತಾನೆ–ಹೀಗೆ ಈ ಎರಡು ಸರ್ಗಗಳ ಭಿನ್ನವಾಗಿ ತೋರುವ ಅಭಿಪ್ರಾಯಗಳನ್ನು ಸಮನ್ವಯಿಸಬಹುದು.

ವಿಭೀಷಣನೇ ಮೊದಲಾದ ರಾಕ್ಷಸರು ಗಂಧದ ತುಂಡುಗಳಿಂದಲೂ, ಪದ್ಮ ಕೋಶೀರ ಮೂಲಿಕೆಗಳಿಂದಲೂ, ಲಾಮಂಚದ ಬೇರುಗಳಿಂದಲೂ ವಿಧ್ಯುಕ್ತ ವಾಗಿ ಚಿತೆಯನ್ನು ಸಿದ್ಧಪಡಿಸಿದರು. ಅನಂತರ ಆ ಚಿತೆಯ ಮೇಲೆ ದಾಲಕದ ಎಂಬ ಜಾತಿಯ ಜಿಂಕೆಯ ಚರ್ಮವನ್ನು ಹಾಸಿದರು. ಅದರ ಮೇಲೆ ರಾಕ್ಷಸ ರಾಜನ ಶವವನ್ನಿಟ್ಟು ಪಿತೃಮೇಧವಿಧಿಯಿಂದ ದಹನಸಂಸ್ಕಾರವನ್ನು ಮಾಡಿ ದರು. ಚಿತೆಗೆ ಆಗ್ನೇಯದಿಕ್ಕಿನಲ್ಲಿ ವೇದಿಯನ್ನು ಕಲ್ಪಿಸಿ ಅಲ್ಲಿ ಯಥೋಚಿತ ವಾದ ಸ್ಥಾನಗಳಲ್ಲಿ* ಅಗ್ನಿಗಳನ್ನಿಟ್ಟರು. ಅನಂತರ ಮೊಸರಿನಿಂದ ಕೂಡಿದ ತುಪ್ಪದಿಂದ ತುಂಬಿದ ಸ್ರುವವನ್ನು ರಾವಣನ ಕುತ್ತಿಗೆಯ ಮೇಲಿಟ್ಟರು. ಕಾಲು ಗಳ ಮೇಲೆ ಶಕಟವನ್ನೂ (ತಿನಿಶವೃಕ್ಷದ ಸಮಿತ್ತನ್ನೂ) ತೊಡೆಗಳ ಮಧ್ಯದಲ್ಲಿ ಉಲೂಖಲವನ್ನೂ (ಗುಗ್ಗುಳವೃಕ್ಷದ ಸಮಿತ್ತನ್ನೂ) ಇಟ್ಟರು. ಇತರ ಮರದ ಪಾತ್ರೆಗಳನ್ನೂ, ಅರಣಿಯನ್ನೂ, ಉತ್ತರಾರಣಿಯನ್ನೂ ಮುಸಲವೇ ಮುಂತಾದ ಪದಾರ್ಥಗಳನ್ನೂ ಆಯಾಯಾ ಸ್ಥಾನಗಳಲ್ಲಿಟ್ಟರು. ಶಾಸ್ತ್ರದೃಷ್ಟ ವಾದ ವಿಧಿಯಿಂದಲೂ, ಮಹರ್ಷಿಗಳಿಂದ ರಚಿತವಾದ ಸ್ಮೃತ್ಯುಕ್ತವಾದ ವಿಧಾನದಿಂದಲೂ ಪವಿತ್ರವಾದ ಆಡನ್ನು ಬಲಿಗೊಟ್ಟು ಅದರ ವಪೆಯನ್ನು ತುಪ್ಪದಲ್ಲಿ ನೆನೆಸಿ ರಾವಣನ ಮುಖದ ಮೇಲಿಟ್ಟರು. ಅನಂತರ ವಿಭೀಷಣ ನಿಗೆ ಸಹಾಯಮಾಡುತ್ತಿದ್ದ, ದೀನಮನಸ್ಕರಾದ, ಕಂಬನಿದುಂಬಿದ ಕಣ್ಣು ಗಳಿಂದ ಕೂಡಿದ್ದ ರಾಕ್ಷಸರು ರಾವಣನನ್ನು ಗಂಧಗಳಿಂದಲೂ, ಮಾಲೆ ಗಳಿಂದಲೂ, ವಿಧ-ವಿಧವಾದ ವಸ್ತ್ರಗಳಿಂದಲೂ ಅಲಂಕರಿಸಿ ತೊಳೆದ ಅಕ್ಕಿ ಯಿಂದ ಅವನನ್ನು ಮುಚ್ಚುತ್ತಿದ್ದರು. ಅನಂತರ ವಿಭೀಷಣನು ವಿಧಿವತ್ತಾಗಿ ಚಿತೆಗೆ ಬೆಂಕಿಯನ್ನು ಹೊತ್ತಿಸಿದನು. ಬಳಿಕ ಸ್ನಾನಮಾಡಿ ಒದ್ದೆಯ ವಸ್ತ್ರವನ್ನುಟ್ಟು ಎಳ್ಳು-ದರ್ಭೆ ಮತ್ತು ಶುದ್ಧೋದಕಗಳ ಮೂಲಕ ವಿಧಿವತ್ತಾಗಿ ಜಲಾಂಜಲಿಯನ್ನಿತ್ತನು. ಅಂತಃಪುರದ ಸ್ತ್ರೀಯರನ್ನು ಸಮಾಧಾನಗೊಳಿಸುತ್ತಾ ಅವರನ್ನು ಅರಮನೆಗೆ ತೆರಳುವಂತೆ ನಯ-ವಿನಯಗಳಿಂದ ಪ್ರಾರ್ಥಿಸು ತ್ತಿದ್ದನು. ವಿಭೀಷಣನು–'ಗಮ್ಯತಾಂ ಅರಮನೆಗೆ ಹೋಗಿರಿ'–ಎಂದು

* ದಕ್ಷಿಣಪೂರ್ವದೇಹದ ಭಾಗದಲ್ಲಿ (ಆಗ್ನೇಯ) ಆಹವನೀಯಾಗ್ನಿಯನ್ನೂ, ಉತ್ತರಪಶ್ಚಿಮದಲ್ಲಿ (ವಾಯವ್ಯ) ಗಾರ್ಹಪತ್ಯಾಗ್ನಿಯನ್ನೂ, ದಕ್ಷಿಣಪಶ್ಚಿಮದಲ್ಲಿ (ನೈಋತ್ಯ) ದಕ್ಷಿಣಾಗ್ನಿಯನ್ನೂ ಇರಿಸಿದರು.

ವಿನಯಶೀಲನಾಗಿ ಪ್ರಾರ್ಥಿಸುತ್ತಲೇ ಎಲ್ಲ ಸ್ತ್ರೀಯರೂ ಲಂಕೆಗೆ ತೆರಳಿದರು. ಅವರೆಲ್ಲರೂ ಲಂಕಾಪಟ್ಟಣವನ್ನು ಪ್ರವೇಶಿಸಿದನಂತರ ರಾಕ್ಷಸೇಂದ್ರನಾದ ವಿಭೀಷಣನು ಶ್ರೀರಾಮನ ಬಳಿಗೆ ಬಂದು ವಿನಯಭಾವದಿಂದ ನಿಂತು ಕೊಂಡನು. ವೃತ್ರಾಸುರನನ್ನು ಸಂಹರಿಸಿ ಇಂದ್ರನು ಆನಂದವನ್ನನುಭವಿಸಿ ದಂತೆ–ಶ್ರೀರಾಮನು ಶತ್ರುವಾದ ರಾವಣನನ್ನು ಸಂಹರಿಸಿ ಸುಗ್ರೀವ-ಲಕ್ಷ್ಮಣರೊಡನೆಯೂ ವಾನರಸೈನಿಕರೊಡನೆಯೂ ಸಂತೋಷಪಟ್ಟನು. ಅನಂತರ ಶ್ರೀರಾಮನು ಇಂದ್ರನಿಂದ ಕೊಡಲ್ಪಟ್ಟಿದ್ದ ಧನುಸ್ಸನ್ನೂ, ಬಾಣ ವನ್ನೂ, ವಿಶಾಲವಾದ ಕವಚವನ್ನೂ ತೆಗೆದಿಟ್ಟು ಶತ್ರುನಿಗ್ರಹವಾದನಂತರ ಕೋಪವನ್ನು ಪರಿತ್ಯಜಿಸಿ ಶಾಂತಭಾವವನ್ನು ಹೊಂದಿದನು.

೧೧೧ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೧೧೨ನೆಯ ಸರ್ಗ

ವಿಭೀಷಣನ ರಾಜ್ಯಾಭಿಷೇಕ : ಹನುಮಂತನ ಮೂಲಕ ಸೀತಾದೇವಿಗೆ ಸಂದೇಶ

ತೇ ರಾವಣವಧಂ ದೃಷ್ಟ್ವಾ ದೇವಗನ್ಧರ್ವದಾನವಾಃ ।
ಜಗ್ಮುಃ ಸ್ವೈಃ ಸ್ವೈರ್ವಿಮಾನೈಸ್ತೇ ಕಥಯನ್ತಃ ಶುಭಾಃ ಕಥಾಃ ॥೧॥

ದೇವ-ಗಂಧರ್ವ-ದಾನವರು ಶ್ರೀರಾಮನಿಂದ ರಾವಣನ ವಧೆಯಾದು ದನ್ನು ನೋಡಿ ಅದಕ್ಕೆ ಸಂಬಂಧಿಸಿದಂತೆ ಮಂಗಳಕರವಾದ ಕಥೆಗಳನ್ನು ಪರಸ್ಪರವಾಗಿ ಹೇಳಿಕೊಳ್ಳುತ್ತಾ ತಮ್ಮ-ತಮ್ಮ ಸ್ಥಾನಗಳಿಗೆ ತೆರಳಿದರು.

ರಾವಣನ ವಧೆ, ಶ್ರೀರಾಮನ ಭಯಂಕರಪರಾಕ್ರಮ, ವಾನರರ ಶ್ರೇಷ್ಠ ವಾದ ಯುದ್ಧ, ಸುಗ್ರೀವನ ಮಂತ್ರಿತ್ವ, ಹನುಮಂತನಿಗೂ ಲಕ್ಷ್ಮಣನಿಗೂ ಶ್ರೀರಾಮನ ವಿಷಯದಲ್ಲಿರುವ ಭಕ್ತಿ-ವಿಶ್ವಾಸ-ಅನುರಾಗಗಳು, ಹನುಮ-ಲಕ್ಷ್ಮಣರ ಪರಾಕ್ರಮ, ಸೀತೆಯ ಪಾತಿವ್ರತ್ಯ–ಇವೆಲ್ಲದರ ವಿಷಯವಾಗಿಯೂ ಮಾತನಾಡಿಕೊಳ್ಳುತ್ತಾ ಮಹಾಭಾಗ್ಯಶಾಲಿಗಳಾದ ದೇವ-ಗಂಧರ್ವ-ದಾನವರು ಪರಮಹೃಷ್ಟರಾಗಿ ತಾವು ಎಲ್ಲಿಂದ ಬಂದಿದ್ದರೋ ಅಲ್ಲಿಗೇ ಹಿಂದಿ ರುಗಿದರು. ಅನಂತರ ಮಹಾಬಾಹುವಾದ ಶ್ರೀರಾಮನು ಅಗ್ನಿಯ ಜ್ವಾಲೆ ಯಂತೆ ಮಹಾಪ್ರಭೆಯಿಂದ ಕೂಡಿದ್ದ ಇಂದ್ರನಿಂದ ಕೊಡಲ್ಪಟ್ಟಿದ್ದ ದಿವ್ಯರಥ

ವನ್ನು ಹಿಂದಕ್ಕೆ ಕಳುಹಿಸುತ್ತಾ ಸಾರಥಿಯಾದ ಮಾತಲಿಯನ್ನು ಸಮಾದರಿಸಿದನು. ರಾಘವನ ಅನುಮತಿಯನ್ನು ಪಡೆದನಂತರ ಮಾತಲಿಯು ದಿವ್ಯರಥದಲ್ಲಿ ಕುಳಿತು ದೇವಲೋಕಕ್ಕೆ ತೆರಳಿದನು. ದೇವೇಂದ್ರನ ಸಾರಥಿಶ್ರೇಷ್ಠನಾದ ಮಾತಲಿಯು ಹೊರಟುಹೋದನಂತರ ರಥಿಗಳಲ್ಲಿ ಶ್ರೇಷ್ಠನಾದ ಶ್ರೀರಾಮನು ಪರಮಪ್ರೀತನಾಗಿ ಸುಗ್ರೀವನನ್ನು ಆಲಿಂಗಿಸಿಕೊಂಡು, ಲಕ್ಷ್ಮಣನಿಂದ ಅಭಿವಾದನಮಾಡಲ್ಪಟ್ಟು, ವಾನರಸೇನಾದಳಪತಿಗಳಿಂದ ಪೂಜಿಸಲ್ಪಟ್ಟವನಾಗಿ ಸೈನ್ಯದ ಶಿಬಿರಕ್ಕೆ ತೆರಳಿದನು.

ಶಿಬಿರದಲ್ಲಿ ತನ್ನ ಸಮೀಪದಲ್ಲಿಯೇ ಇದ್ದ, ಪ್ರದೀಪ್ತವಾದ ತೇಜಸ್ಸಿನಿಂದ ಕೂಡಿದ್ದ, ಸತ್ತ್ವಸಂಪನ್ನನಾದ ಲಕ್ಷ್ಮಣನಿಗೆ ಹೇಳಿದನು :

"ಸೌಮ್ಯನೇ! ನಮ್ಮಲ್ಲಿಯೇ ಅನುರಕ್ತನಾಗಿಯೂ ಭಕ್ತನಾಗಿಯೂ ಇರುವ ಈ ಹಿಂದೆ ನಮಗೆ ಉಪಕಾರಮಾಡಿರುವ ವಿಭೀಷಣನಿಗೆ ಲಂಕಾ ರಾಜ್ಯದ ಪಟ್ಟಾಭಿಷೇಕವನ್ನು ಮಾಡು. ರಾವಣನ ತಮ್ಮನಾದ ಇವನು ಲಂಕಾರಾಜ್ಯಸಿಂಹಾಸನದಲ್ಲಿ ಪಟ್ಟಾಭಿಷಿಕ್ತನಾದುದನ್ನು ನೋಡಬೇಕೆಂಬುದೇ ನನ್ನ ಬಹಳ ದಿವಸಗಳ ಹೆಬ್ಬಯಕೆಯಾಗಿದೆ."

ಮಹಾತ್ಮನಾದ ಶ್ರೀರಾಮನು ಲಕ್ಷ್ಮಣನಿಗೆ ಹೀಗೆ ಹೇಳಲು ಸೌಮಿತ್ರಿಯು ಪರಮಹೃಷ್ಟನಾಗಿ ಹಾಗೆಯೇ ಆಗಲೆಂದು ಹೇಳಿ ಚಿನ್ನದ ಬಿಂದಿಗೆಯನ್ನು ತರಿಸಿ ಅದನ್ನು ವಾನರನಾಯಕರ ಕೈಗಿತ್ತು ಮನಸ್ಸಿನ ವೇಗದಂತೆ ವೇಗವುಳ್ಳವರಾಗಿದ್ದ ಮಹಾಸತ್ತ್ವಸಂಪನ್ನರಾದ ಅವರಿಗೆ ಸಮುದ್ರದಿಂದ ಶುಭೋದಕವನ್ನು ತರಲು ಆಜ್ಞಾಪಿಸಿದನು. ಮನೋವೇಗ ವುಳ್ಳ ಆ ವಾನರರು ಅತಿಶೀಘ್ರವಾಗಿ ಸಮುದ್ರದಿಂದ ಲಕ್ಷ್ಮಣನು ಕೊಟ್ಟಿದ್ದ ಚಿನ್ನದ ಬಿಂದಿಗೆಗಳಲ್ಲಿ ಶುದ್ಧೋದಕವನ್ನು ತಂದರು. ಅನಂತರ ಲಕ್ಷ್ಮಣನು ವಾನರನಾಯಕರು ತಂದಿದ್ದ ಕಲಶಗಳಲ್ಲಿ ಒಂದು ಕಲಶವನ್ನು ಶ್ರೇಷ್ಠವಾದ ಆಸನದಲ್ಲಿರಿಸಿ ಸಂಪೂಜಿಸಿ ಶ್ರೀರಾಮನ ಆಜ್ಞಾನುಸಾರವಾಗಿ ಆ ಶುಭಜಲದಿಂದ ಲಂಕೆಯ ಸಮಸ್ತರಾಕ್ಷಸರ ಮಧ್ಯದಲ್ಲಿ ರತ್ನಸಿಂಹಾಸನದಲ್ಲಿ ಕುಳಿತಿದ್ದ ವಿಭೀಷಣನಿಗೆ ವಿಧ್ಯುಕ್ತವಾಗಿ ವೇದಮಂತ್ರಗಳಿಂದ ಅಭಿಷೇಕಮಾಡಿ ಲಂಕಾ ರಾಜ್ಯದಲ್ಲಿ ಪಟ್ಟಗಟ್ಟಿದನು. ಹಲವಾರು ಸುಹೃಜ್ಜನರಿಂದ ಸಮಾವೃತನಾಗಿದ್ದ ವಿಭೀಷಣನಿಗೆ ಸಮಸ್ತರಾಕ್ಷಸರೂ ಮತ್ತು ವಾನರರೂ ಉಳಿದ ಕಲಶಗಳ

ಶುಭಜಲದಿಂದ ವಿಧ್ಯುಕ್ತವಾದ ರೀತಿಯಲ್ಲಿ ಅಭಿಷೇಕಮಾಡಿದರು. ರಾಕ್ಷಸೇಂದ್ರನಾದ ವಿಭೀಷಣನು ಲಂಕಾರಾಜ್ಯದ ಸಿಂಹಾಸನದಲ್ಲಿ ಪಟ್ಟಾಭಿಷಿಕ್ತನಾದುದನ್ನು ನೋಡಿ ವಿಭೀಷಣನ ಅಮಾತ್ಯರೂ ಮತ್ತು ಭಕ್ತರೂ ಪರಮ ಸಂತುಷ್ಟರಾದರು. ಸಂತೋಷಾಧಿಕ್ಯದಿಂದ ಅವರೆಲ್ಲರೂ ಶ್ರೀರಾಮನನ್ನೇ ಬಹಳವಾಗಿ ಸ್ತೋತ್ರಮಾಡಿದರು. ಲಂಕಾರಾಜ್ಯಸಿಂಹಾಸನದಲ್ಲಿ ವಿಭೀಷಣನು



ಪಟ್ಟಾಭಿಷಿಕ್ತನಾದುದನ್ನು ನೋಡಿ ಲಕ್ಷ್ಮಣಸಹಿತನಾದ ಶ್ರೀರಾಮನು ಆನಂದಭರಿತನಾದನು. ವಿಭೀಷಣನು ಶ್ರೀರಾಮನಿಂದ ಅನುಗ್ರಹಪೂರ್ವಕವಾಗಿ ಕೊಡಲ್ಪಟ್ಟ ಆ ವಿಶಾಲವಾದ ಲಂಕಾರಾಜ್ಯವನ್ನು ಪಡೆದುಕೊಂಡು ಪ್ರಜೆಗಳನ್ನು ಸಮಾಧಾನಗೊಳಿಸಿ ಶ್ರೀರಾಮನ ಬಳಿಗೆ ಹೋದನು.

ಆ ಸಮಯದಲ್ಲಿ ಪರಮಹೃಷ್ಟರಾಗಿದ್ದ ರಾಕ್ಷಸರು ವಿಭೀಷಣನಿಗೆ

ಅರ್ಪಿಸಲು ಅಕ್ಷತೆ, ಮೋದಕಗಳು, ಭತ್ತದ ಅರಳು, ಪುಷ್ಪಗಳು–ಇವೇ ಮೊದಲಾದ ಮಂಗಳದ್ರವ್ಯಗಳನ್ನು ತಂದರು. ವಿಭೀಷಣನು ಮಂಗಳ ಜನಕವಾದ ಆ ಎಲ್ಲ ಮಂಗಳದ್ರವ್ಯಗಳನ್ನೂ ಪ್ರಜೆಗಳಿಂದ ಸ್ವೀಕರಿಸಿ ಮರು ಕ್ಷಣದಲ್ಲಿಯೇ ಅವೆಲ್ಲವನ್ನೂ ಶ್ರೀರಾಮನಿಗೂ ಮತ್ತು ಲಕ್ಷ್ಮಣನಿಗೂ ಅರ್ಪಿಸಿದನು. ಕೃತಕೃತ್ಯನಾಗಿದ್ದ ಮತ್ತು ಈಡೇರಿದ ಮನೋರಥನಾಗಿದ್ದ ವಿಭೀಷಣನನ್ನು ನೋಡಿ ಅವನಿಗೆ ಸಂತೋಷವನ್ನುಂಟುಮಾಡುವ ಇಚ್ಛೆಯಿಂದ ಆ ಮಂಗಳದ್ರವ್ಯಗಳನ್ನು ಶ್ರೀರಾಮನು ಸ್ವೀಕರಿಸಿದನು.

ಅನಂತರ ಶ್ರೀರಾಮನು ಕೈಜೋಡಿಸಿಕೊಂಡು ವಿನೀತನಾಗಿ ನಿಂತಿದ್ದ ಹನುಮಂತನಿಗೆ ಹೇಳಿದನು :

"ಸೌಮ್ಯನೇ! ನೀನು ವಿಭೀಷಣನಿಂದ ಅನುಮತಿಯನ್ನು ಪಡೆದು, ಲಂಕಾನಗರವನ್ನು ಪ್ರವೇಶಿಸಿ ಮೈಥಿಲಿಯನ್ನು ಕಂಡು ಅವಳ ಕುಶಲವನ್ನು ಕೇಳು. ಅನಂತರ ನಾನು, ಲಕ್ಷ್ಮಣ, ಸುಗ್ರೀವ–ಈ ಎಲ್ಲರೂ ಇಲ್ಲಿ ಕುಶಲಿಗಳಾಗಿರುವ ವಿಷಯವನ್ನೂ ತಿಳಿಸು. ರಾವಣನು ಹತನಾದನೆಂಬ ಪ್ರಿಯ ವಾರ್ತೆಯನ್ನೂ ಅವಳಿಗೆ ಹೇಳು. ಅನಂತರ ಅವಳ ಸಂದೇಶದೊಡನೆ ಹಿಂದಿರುಗಿ ಬಾ."

೧೧೨ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೧೧೩ನೆಯ ಸರ್ಗ

ಹನುಮಂತನು ಶ್ರೀರಾಮನಿಗೆ ಸೀತಾದೇವಿಯ ಸಂದೇಶವನ್ನು ತಿಳಿಸಿದುದು

ಇತಿ ಪ್ರತಿಸಮಾದಿಷ್ಟೋ ಹನುಮಾನ್ಮಾರುತಾತ್ಮಜಃ ।
ಪ್ರವಿವೇಶ ಪುರೀಂ ಲಙ್ಕಾಂ ಪೂಜ್ಯಮಾನೋ ನಿಶಾಚರೈಃ ॥೧॥

ಶ್ರೀರಾಮನಿಂದ ಹೀಗೆ ಆದೇಶಿಸಲ್ಪಟ್ಟ ವಾಯುಪುತ್ರನಾದ ಹನುಮಂತನು ರಾಕ್ಷಸರಿಂದ ಸಮ್ಮಾನಿತನಾಗಿ ಲಂಕಾಪಟ್ಟಣವನ್ನು ಪ್ರವೇಶಿಸಿದನು.

ಮಾರುತಿಯು ಶ್ರೀರಾಮನು ಹೇಳಿದ್ದಂತೆ ವಿಭೀಷಣನ ಅನುಜ್ಞೆಯನ್ನು ಪಡೆದು ಅಶೋಕವೃಕ್ಷಗಳಿದ್ದ ವನಕ್ಕೆ ಹೋದನು. ಸೀತಾದೇವಿಗೆ ನ್ಯಾಯಾನುಸಾರವಾಗಿ ತಾನು ಬಂದಿರುವುದನ್ನು ತಿಳಿಯಪಡಿಸಿದನು.

ಅನಂತರ ಸೀತೆಯ ಬಳಿಗೆ ಹೋಗಿ ಸ್ನಾನಮಾಡದೇ ಧೂಳಿನಿಂದ ಸಮಾವೃತಳಾಗಿದ್ದ, ಆತಂಕಗೊಂಡ ರೋಹಿಣಿಯಂತಿದ್ದ ಸೀತಾದೇವಿಯನ್ನು ನೋಡಿದನು. ಸೀತಾದೇವಿಯು ರಾಕ್ಷಸಿಯರಿಂದ ಪರಿವೃತವಾಗಿ ಆನಂದ ಶೂನ್ಯಳಾಗಿ ವೃಕ್ಷದ ಬುಡದಲ್ಲಿ ಕುಳಿತಿದ್ದಳು. ಹನುಮಂತನು ವಿನೀತನಾಗಿ ಸೀತಾದೇವಿಗೆ ನಮಸ್ಕರಿಸಿ ಸುಮ್ಮನೆ ನಿಂತನು. ಮಹಾಬಲನಾದ ಹನುಮಂತನು ಬಂದುದನ್ನು ನೋಡಿ ಸೀತಾದೇವಿಯು ಸ್ವಲ್ಪಹೊತ್ತು ಸುಮ್ಮನಿದ್ದು ಬಳಿಕ ಅವನಾರೆಂಬುದನ್ನು ಜ್ಞಾಪಿಸಿಕೊಂಡು ಪರಮಹೃಷ್ಟಳಾದಳು. ಅವಳ ಸೌಮ್ಯಭಾವದ ಮತ್ತು ಹೃಷ್ಟವಾದ ಮುಖವನ್ನು ನೋಡಿದನಂತರ ಕಪಿಶ್ರೇಷ್ಠನಾದ ಹನುಮಂತನು ಶ್ರೀರಾಮನು ಹೇಳಿದ್ದ ಎಲ್ಲ ಮಾತು ಗಳನ್ನೂ ಸೀತೆಗೆ ಹೇಳಲು ಉಪಕ್ರಮಿಸಿದನು :

"ವೈದೇಹಿ! ಶ್ರೀರಾಮನು ಸುಗ್ರೀವ-ಲಕ್ಷ್ಮಣರೊಡನೆ ಕುಶಲಿಯಾಗಿರುವನು. ಶತ್ರುವನ್ನು ಸಂಹರಿಸಿ ಸಫಲಮನೋರಥನಾಗಿರುವ ಶ್ರೀರಾಮನು ನಿನ್ನ ಕುಶಲವನ್ನು ಕೇಳಿದ್ದಾನೆ. ವಾನರರಿಂದಲೂ ವೀರ್ಯವಂತನಾದ ಲಕ್ಷ್ಮಣನಿಂದಲೂ ಕೂಡಿ ಶ್ರೀರಾಮನು ವಿಭೀಷಣನ ಸಹಾಯವನ್ನು ಪಡೆದು ರಾವಣನನ್ನು ಸಂಹರಿಸಿದನು. ಧರ್ಮಜ್ಞಳೇ! ಸೀತಾದೇವಿ! ನಾನು ನಿನಗೆ ಇನ್ನೂ ಪ್ರಿಯವಾದ ಮಾತುಗಳನ್ನು ಹೇಳಿ ನಿನ್ನ ಮನಸ್ಸನ್ನು ಮತ್ತಷ್ಟು ಪ್ರಸನ್ನಗೊಳಿಸುತ್ತೇನೆ. ನಿನ್ನ ಪಾತಿವ್ರತ್ಯಧರ್ಮದ ಪ್ರಭಾವದಿಂದಾಗಿ ಯುದ್ಧದಲ್ಲಿ ಶ್ರೀರಾಮನು ಈ ಮಹಾವಿಜಯವನ್ನು ಗಳಿಸಿದನು. ಈಗ ನೀನು ಕೊರಗುವುದನ್ನು ಬಿಟ್ಟು ಸಮಾಧಾನದಿಂದಿರು. ಶತ್ರುವಾದ ರಾವಣನು ಹತನಾಗಿದ್ದಾನೆ. ಇಂದು ಲಂಕೆಯು ನಮ್ಮ ವಶದಲ್ಲಿದೆ. ತಾಯೇ! ಶ್ರೀರಾಮನು ನಿನಗೆ ಈ ಸಂದೇಶವನ್ನು ಕಳುಹಿಸಿದ್ದಾನೆ.

ಮಯಾ ಹ್ಯಲಬ್ಧನಿದ್ರೇಣ ದೃಢೇನ ತವ ನಿರ್ಜಯೇ ।
ಪ್ರತಿಜ್ಞೈಷಾ ವಿನಿಸ್ತೀರ್ಣಾ ಬದ್ಧ್ವಾ ಸೇತುಂ ಮಹೋದಧೌ ॥೧೧॥

"ದೇವಿ! ನಾನು ನಿನ್ನ ಉದ್ಧಾರಕ್ಕಾಗಿ ದೃಢಚಿತ್ತನಾಗಿ ಪ್ರತಿಜ್ಞೆಯನ್ನು ಮಾಡಿದ್ದೆನು. ನನಗೆ ನಿದ್ರೆಯೆಂಬುದೇ ಇರಲಿಲ್ಲ. ಸಮುದ್ರಕ್ಕೂ ಸೇತುವೆಯನ್ನು ಕಟ್ಟಿ ರಾವಣನನ್ನು ಸಂಹರಿಸಿ ಆ ನನ್ನ ಪ್ರತಿಜ್ಞೆಯನ್ನು ಪೂರೈಸಿದೆನು.

ಸಂಭ್ರಮಶ್ಚ ನ ಗನ್ತವ್ಯೋ ವರ್ತನ್ತ್ಯಾ ರಾವಣಾಲಯೇ ।
ವಿಭೀಷಣವಿಧೇಯಂ ಹಿ ಲಙ್ಕೈಶ್ವರ್ಯಮಿದಂ ಕೃತಮ್ ॥೧೨॥

ತದಾಶ್ವಸಿಹಿ ವಿಶ್ವಸ್ತಾ ಸ್ವಗೃಹೇ ಪರಿವರ್ತಸೇ ।
ಅಯಂ ಚಾಭ್ಯೇತಿ ಸಂಹೃಷ್ಟಸ್ತ್ವದ್ದರ್ಶನಸಮುತ್ಸುಕಃ ॥೧೩॥

ಈಗ ನೀನು ರಾವಣನ ಮನೆಯಲ್ಲಿರುವೆನೆಂದು ಭಯಪಡಬೇಕಾಗಿಲ್ಲ. ಏಕೆಂದರೆ : ಲಂಕೆಯ ಸಕಲೈಶ್ವರ್ಯವೂ ಈಗ ವಿಭೀಷಣನ ಅಧೀನದಲ್ಲಿದೆ. ಆದುದರಿಂದ ನೀನೀಗ ನಿನ್ನ ಮನೆಯಲ್ಲಿಯೇ ಇರುವುದಾಗಿ ಭಾವಿಸಿ ನಿಶ್ಚಿಂತಳಾಗಿ ಧೈರ್ಯವನ್ನು ತಾಳು. ವಿಭೀಷಣನು ಕೂಡ ಆನಂದಭರಿತನಾಗಿ ನಿನ್ನನ್ನು ಸಂದರ್ಶಿಸುವ ಉತ್ಕಟೇಚ್ಛೆಯಿಂದ ನಿನ್ನ ಬಳಿಗೆ ಬರುತ್ತಾನೆ."

ಹನುಮಂತನು ಹೇಳಿದ ಶ್ರೀರಾಮನ ಸಂದೇಶವನ್ನು ಕೇಳಿ ಚಂದ್ರ ಮುಖಿಯಾದ ಸೀತಾದೇವಿಗೆ ಅತ್ಯಂತಹರ್ಷವಾಯಿತು. ಹರ್ಷಾಧಿಕ್ಯ ದಿಂದಾಗಿ ಅವಳ ಬಾಯಿಂದ ಮಾತೇ ಹೊರಡದಂತಾಯಿತು.

ಸೀತಾದೇವಿಯು ಮಾತನಾಡದಿದ್ದುದನ್ನು ಕಂಡು ಹನುಮಂತನು ಹೇಳಿದನು :

"ದೇವಿ! ನೀನೇನನ್ನು ಯೋಚಿಸುತ್ತಿರುವೆ? ನನ್ನೊಡನೆ ಏಕೆ ಮಾತ ನಾಡುತ್ತಿಲ್ಲ?"

ಹನುಮಂತನು ಹೀಗೆ ಹೇಳಲು ಧರ್ಮಪರಾಯಣೆಯಾದ ಸೀತಾ ದೇವಿಯು ಪರಮಪ್ರೀತಳಾಗಿ ಆನಂದಬಾಷ್ಪಗಳನ್ನು ಸುರಿಸುತ್ತಾ ಗದ್ಗದ ಸ್ವರದಿಂದ ಹೇಳಿದಳು :

"ಹನುಮಂತ! ನನ್ನ ಪತಿಯ ವಿಜಯಕ್ಕೆ ಸಂಬಂಧಿಸಿದ ಅತ್ಯಂತ ಪ್ರಿಯವಾದ ನಿನ್ನ ಮಾತುಗಳನ್ನು ಕೇಳಿ ಆನಂದತುಂದಿಲಳಾಗಿಬಿಟ್ಟೆನು. ಕ್ಷಣಕಾಲ ನನ್ನ ಬಾಯಿಂದ ಮಾತೇ ಹೊರಡದಾಯಿತು. ವಾನರವೀರನೇ! ಇಂತಹ ಸಂತೋಷದ ಸುದ್ದಿಯನ್ನು ಕೇಳಿದ ನಾನು ನಿನಗೆ ಯಾವುದಾದರೂ ಪುರಸ್ಕಾರವನ್ನು ಕೊಡಲು ಯೋಚಿಸುತ್ತಿದ್ದೇನೆ. ಆದರೆ ಎಷ್ಟೇ ಯೋಚಿಸಿ ದರೂ ಇದಕ್ಕೆ ಅನುರೂಪವಾದ ಪಾರಿತೋಷಿಕವಸ್ತುವು ನನಗೆ ಯಾವುದೂ ಕಾಣುತ್ತಿಲ್ಲ. ಪ್ರಪಂಚದಲ್ಲಿಯೇ ನನಗೆ ಅಂತಹ ವಸ್ತುವು ಕಾಣದಾಗಿದೆ.

ಚಿನ್ನವಾಗಲೀ, ಬೆಳ್ಳಿಯಾಗಲೀ, ವಿಧ-ವಿಧವಾದ ರತ್ನಗಳೇ ಆಗಲೀ, ಮೂರು ಲೋಕಗಳಲ್ಲಿಯೂ ಇರುವ ರಾಜ್ಯಗಳೇ ಆಗಲೀ–ನೀನು ಹೇಳಿರುವ ಪ್ರಿಯವಾರ್ತೆಗೆ ಸಾಟಿಯಾದ ಪಾರಿತೋಷಿಕಗಳಾಗುವುದಿಲ್ಲ."

ಸೀತಾದೇವಿಯು ಹೀಗೆ ಹೇಳಲು ಹನುಮಂತನು ಸೀತೆಯ ಸಮ್ಮುಖ ದಲ್ಲಿ ಕೈಜೋಡಿಸಿ ನಿಂತು ಹರ್ಷದಿಂದ ಹೇಳಿದನು :

"ಪತಿಗೆ ವಿಜಯವನ್ನು ಬಯಸುವವಳೇ! ಪತಿಗೆ ಪ್ರಿಯವನ್ನೂ ಮತ್ತು ಹಿತವನ್ನೂ ಮಾಡಲು ಸದಾ ನಿರತಳಾದವಳೇ! ಅನಿಂದ್ಯಳೇ! ಸೀತಾದೇವಿ! ಇಂತಹ ಸ್ನೇಹಪೂರ್ಣವಾದ ಮಾತುಗಳನ್ನಾಡುವುದು ನಿನಗೆ ಯೋಗ್ಯವಾಗಿಯೇ ಇದೆ. ನಿನ್ನ ಈ ಮಾತಿನಿಂದಲೇ ನನಗೆ ಅನುಪಮವಾದ ಪಾರಿತೋಷಿಕವನ್ನೇ ಕೊಟ್ಟಂತಾಗಿದೆ.

ತವೈತದ್ವಚನಂ ಸೌಮ್ಯೇ ಸಾರವತ್ಸ್ನಿಗ್ಧಮೇವ ಚ ।
ರತ್ನೌಘಾದ್ವಿವಿಧಾಚ್ಚಾಪಿ ದೇವರಾಜ್ಯಾದ್ವಿಶಿಷ್ಯತೇ ॥೨೩॥

ಸಾರವತ್ತಾದ ಮತ್ತು ಸ್ನೇಹಪೂರ್ಣವಾದ ನಿನ್ನ ಈ ಮಾತು ವಿಧ-ವಿಧ ವಾದ ರತ್ನಗಳ ರಾಶಿಗಿಂತಲೂ ಮತ್ತು ದೇವರಾಜ್ಯಕ್ಕಿಂತಲೂ ವಿಶಿಷ್ಟವಾಗಿದೆ.

ಶ್ರೀರಾಮನು ಶತ್ರುವನ್ನು ಸಂಹರಿಸಿ ವಿಜಯವನ್ನು ಪಡೆದು ಕುಶಲಿ ಯಾಗಿರುವುದನ್ನು ನಾನು ಯಾವಾಗ ಕಂಡೆನೋ–ಆಗಲೇ ನನ್ನ ಸರ್ವಾರ್ಥ ಗಳೂ ಸಿದ್ಧಿಸಿದುವೆಂದೂ, ದೇವರಾಜ್ಯವೇ ಮೊದಲಾದ ಉತ್ಕೃಷ್ಟಗುಣ ಗಳಿಂದ ಕೂಡಿರುವ ವಸ್ತುಗಳೂ ಲಭಿಸಿದುವೆಂದೂ ನಾನು ಭಾವಿಸಿ ಕೊಂಡೆನು."

ಮಾರುತಿಯು ಹೇಳಿದ ಆ ಮಾತನ್ನು ಕೇಳಿ ವೈದೇಹಿಯು ಶುಭಕರ ವಾದ ಈ ಮಾತನ್ನು ಹೇಳಿದಳು :

ಅತಿಲಕ್ಷಣಸಮ್ಪನ್ನಂ ಮಾಧುರ್ಯಗುಣಭೂಷಿತಮ್ ।
ಬುದ್ಧ್ಯಾ ಹ್ಯಷ್ಟಾಙ್ಗಯಾ ಯುಕ್ತಂ ತ್ವಮೇವಾರ್ಹಸಿ ಭಾಷಿತುಮ್ ॥೨೬॥

"ವಾನರಶ್ರೇಷ್ಠನೇ! ಉತ್ತಮಲಕ್ಷಣಗಳಿಂದ ಕೂಡಿರುವ, ಮಾಧುರ್ಯಗುಣದಿಂದ ಭೂಷಿತವಾದ, ಎಂಟು ಅಂಗಗಳಿಂದ (ಗುಣ

ಗಳಿಂದ)* ಸಮಲಂಕೃತವಾದ ಬುದ್ಧಿಯಿಂದ ಮಾತನಾಡಲು ನೀನೊಬ್ಬನೇ ಸಮರ್ಥನಾಗಿರುವೆ.

ಶ್ಲಾಘನೀಯೋಽನಿಲಸ್ಯ ತ್ವಂ ಪುತ್ರಃ ಪರಮಧಾರ್ಮಿಕಃ ।
ಬಲಂ ಶೌರ್ಯಂ ಶ್ರುತಂ ಸತ್ತ್ವಂ ವಿಕ್ರಮೋ ದಾಕ್ಷ್ಯಮುತ್ತಮಮ್ ॥೨೭॥
ತೇಜಃ ಕ್ಷಮಾ ಧೃತಿರ್ಧೈರ್ಯಂ ವಿನೀತತ್ವಂ ನ ಸಂಶಯಃ ।
ಏತೇ ಚಾನ್ಯೇ ಚ ಬಹವೋ ಗುಣಾಸ್ತ್ವಯ್ಯೇವ ಶೋಭನಾಃ ॥೨೮॥

ನೀನು ವಾಯುದೇವನಿಗೆ ಶ್ಲಾಘನೀಯನಾದ ಮಗನೂ ಧರ್ಮಾತ್ಮನೂ ಆಗಿರುವೆ. ಶಾರೀರಿಕಬಲ, ಶೌರ್ಯ, ಶಾಸ್ತ್ರಜ್ಞಾನ, ಮಾನಸಿಕಬಲ, ಪರಾಕ್ರಮ, ದಕ್ಷತೆ, ತೇಜಸ್ಸು, ಕ್ಷಮೆ, ಧೈರ್ಯ, ಸ್ಥಿರತೆ, ವಿನಯ–ಇವೇ ಮುಂತಾದ ಅನೇಕವಾದ ಶುಭಗುಣಗಳು ನಿನ್ನಲ್ಲಿಯೇ ಮನೆಮಾಡಿಕೊಂಡಿವೆ. ಇದರಲ್ಲಿ ಸಂಶಯವೇ ಇಲ್ಲ.”

ಸೀತೆಯು ಹೀಗೆ ಹೇಳಲು ಸ್ವಲ್ಪವಾದರೂ ಭ್ರಾಂತನಾಗದ ಹನುಮಂತನು ವಿನೀತನಂತೆ ಕೈಮುಗಿದುಕೊಂಡು ಸೀತೆಯ ಮುಂದೆ ನಿಂತು ಹೇಳಿದನು :

“ದೇವಿ! ನೀನೇನಾದರೂ ಅನುಮತಿಸಿದರೆ ಈ ಹಿಂದೆ ನಿನ್ನನ್ನು ಹೆದರಿಸಿ-ಬೆದರಿಸುತ್ತಿದ್ದ ಈ ಎಲ್ಲ ರಾಕ್ಷಸಿಯರನ್ನೂ ಸಂಹರಿಸುತ್ತೇನೆ. ಪತಿಯನ್ನೇ ದೇವತೆಯೆಂದು ಭಾವಿಸಿರುವ ನೀನು ಈ ಅಶೋಕವನಕ್ಕೆ ಬಂದು ಕ್ಲೇಶಗಳನ್ನನುಭವಿಸುತ್ತಿದ್ದೆ. ಆ ಸಮಯದಲ್ಲಿ ರಾವಣನ ಆಜ್ಞೆಯಂತೆ ಭಯಂಕರವಾದ ರೂಪಗಳನ್ನು ಹೊಂದಿರುವ, ಭಯಂಕರವಾದ ವ್ಯವಹಾರವುಳ್ಳ, ಕ್ರೂರಿಗಳಾದ, ಕ್ರೂರವಾದ ಕಣ್ಣುಗಳನ್ನು ಹೊಂದಿರುವ, ವಿಕಾರ

---

* ಅಷ್ಟಾಂಗಯುಕ್ತವಾದ ಬುದ್ಧಿಯನ್ನು ಹೀಗೆ ವಿವರಿಸಿದ್ದಾರೆ :

ಶುಶ್ರೂಷಾ ಶ್ರವಣಂ ಚೈವ ಗ್ರಹಣಂ ಧಾರಣಂ ತಥಾ ।
(ಗ್ರಹಣಂ ಧಾರಣಂ ಚೈವ ಸ್ಮರಣಂ ಪ್ರತಿಪಾದನಮ್ ।)
ಊಹಾಪೋಹೋಽರ್ಥವಿಜ್ಞಾನಂ ತತ್ತ್ವಜ್ಞಾನಂ ಚ ಧೀಗುಣಾಃ ॥

ಕೇಳುವ ಇಚ್ಛೆ, ಕೇಳುವುದು, ಗ್ರಹಿಸುವುದು, ಧರಿಸುವುದು, ತರ್ಕ-ವಿತರ್ಕ, ಸಿದ್ಧಾಂತದ ನಿಶ್ಚಯ, ಅರ್ಥಜ್ಞಾನ ಮತ್ತು ತತ್ತ್ವಜ್ಞಾನ–ಇವೇ ಬುದ್ಧಿಯ ಎಂಟು ಗುಣಗಳು.

ವಾದ ಮುಖಗಳನ್ನು ಹೊಂದಿರುವ ಈ ರಾಕ್ಷಸಿಯರು ಹಲವಾರು ಬಾರಿ ನಿನ್ನ ವಿಷಯದಲ್ಲಿ ಕಠಿಣವಾದ ಮಾತುಗಳನ್ನಾಡುತ್ತಾ ನಿನ್ನನ್ನು ಪೀಡಿಸುತ್ತಿದ್ದರು. ಅವರ ಎಲ್ಲ ಮಾತುಗಳನ್ನೂ ನಾನು ಇಲ್ಲೇ ಕೇಳಿಸಿಕೊಂಡಿದ್ದೆನು. ವಿಕರಾಳರಾದ, ವಿಕಾರವಾದ ಆಕಾರಗಳನ್ನು ಹೊಂದಿರುವ, ಕ್ರೂರಿಗಳಾದ, ಒರಟಾದ ಕೂದಲುಗಳನ್ನೂ-ಕ್ರೂರವಾದ ಕಣ್ಣುಗಳನ್ನೂ ಹೊಂದಿರುವ ಇವರಿಗೆ ವಿವಿಧರೀತಿಯಲ್ಲಿ ಪ್ರಹಾರಗಳನ್ನು ಕೊಟ್ಟು ಸಂಹರಿಸಬೇಕೆಂದಿದ್ದೇನೆ.

ದೇವಿ! ನನಗೆ ಇದೊಂದು ವರವನ್ನು ದಯಪಾಲಿಸು. ಹಿಂದೆ ಇವರೆಲ್ಲರೂ ಕರ್ಣಕಠೋರವಾದ ಮಾತುಗಳಿಂದ ನಿನ್ನನ್ನು ಪೀಡಿಸುತ್ತಿದ್ದರು. ನಿನ್ನನ್ನು ತಿಂದುಬಿಡುವುದಾಗಿಯೂ ಹೆದರಿಸುತ್ತಿದ್ದರು. ಇವರೆಲ್ಲರನ್ನೂ ನಾನು ಮುಷ್ಟಿಪ್ರಹಾರಗಳಿಂದಲೂ, ಹಿಮ್ಮಡಿಗಳ ಪ್ರಹಾರಗಳಿಂದಲೂ, ನನ್ನ ಈ ವಿಶಾಲವಾದ ತೋಳುಗಳ ಪ್ರಹಾರಗಳಿಂದಲೂ, ಮೊಣಕಾಲು ಮತ್ತು ಮಂಡಿಗಳ ಪ್ರಹಾರಗಳಿಂದಲೂ ಸಂಹರಿಸುತ್ತೇನೆ. ಇವರ ಕಿವಿ-ಮೂಗುಗಳನ್ನೂ ಕತ್ತರಿಸಿಹಾಕುತ್ತೇನೆ. ಇವರ ತಲೆಗೂದಲುಗಳನ್ನು ಒಂದೊಂದನ್ನಾಗಿಯೇ ಕೀಳುತ್ತೇನೆ. ಹೀಗೆ ನಿನಗೆ ಅಪಕಾರವನ್ನೆಸಗಿರುವ ಇವರೆಲ್ಲರನ್ನೂ ಕೆಳಕ್ಕೆ ಬೀಳಿಸಿ ಸಂಹರಿಸಲು ಬಯಸಿದ್ದೇನೆ. ಯಶೋವತಿಯೇ! ಈ ಒಂದು ವರವನ್ನು ನನಗೆ ದಯಪಾಲಿಸು."

ಹನುಮಂತನ ಆ ಮಾತನ್ನು ಕೇಳಿ ಕರುಣಾಮಯಿಯಾದ ದೀನವತ್ಸಲೆಯಾದ ಸೀತಾದೇವಿಯು ಸ್ವಲ್ಪಹೊತ್ತು ಯೋಚಿಸುತ್ತಿದ್ದು ಕಾರ್ಯಾಕಾರ್ಯಗಳನ್ನು ವಿಮರ್ಶಿಸಿ ವಾಯುಪುತ್ರನಿಗೆ ಹೇಳಿದಳು :

"ಕಪಿಶ್ರೇಷ್ಠನೇ! ಇವರೆಲ್ಲರೂ ರಾವಣರಾಜನ ಆಶ್ರಯದಲ್ಲಿದ್ದರು. ಅವನಿಗೆ ವಶರಾಗಿದ್ದರು. ಅವನ ಆಜ್ಞೆಯಂತೆ ನಡೆದುಕೊಳ್ಳುತ್ತಿದ್ದರು. ರಾಜನಿಗೆ ವಿಧೇಯರಾಗಿದ್ದ ದಾಸಿಯರ ವಿಷಯದಲ್ಲಿ ಯಾವನು ತಾನೇ ಕೋಪಿಸಿಕೊಳ್ಳುತ್ತಾನೆ? ನಾನಾದರೋ ಭಾಗ್ಯಹೀನೆಯಾಗಿದ್ದೆನು. ನಾನು ಹಿಂದೆ ಮಾಡಿದ್ದ ದುಷ್ಕರ್ಮವು ನನಗೆ ಅದರ ಫಲವನ್ನು ಕೊಡುತ್ತಿದ್ದಿತು. ಆದುದರಿಂದಲೇ ನಾನು ಇಂತಹ ಕಷ್ಟಗಳೆಲ್ಲವನ್ನೂ ಅನುಭವಿಸಿದೆನು. **ಸ್ವಕೃತಂ ಹ್ಯುಪಭುಜ್ಯತೇ**–ಯಾವುದೇ ಪ್ರಾಣಿಯಾದರೂ ತಾನು ಮಾಡಿದ ಪಾಪ-ಪುಣ್ಯಕರ್ಮಗಳಿಗೆ ಅನುಗುಣವಾದ ಫಲವನ್ನು ಅನುಭವಿಸಲೇಬೇಕು.

ಆದುದರಿಂದ ದಾಸಿಯರಾದ ಈ ರಾಕ್ಷಸಿಯರನ್ನು ಸಂಹರಿಸುವೆನೆಂಬ ಮಾತನ್ನೇ ಹೇಳಬಾರದು. ನನ್ನ ವಿಷಯದಲ್ಲಿ ದೈವದ ಚಿಂತನೆಯೇ ಹೀಗಿದೆ. ಗ್ರಹಗಳ ದಶಾ-ಭುಕ್ತಿಯೋಗಗಳಿಗೆ ಅನುಸಾರವಾಗಿ ನಾನು ಈ ದುಃಖವನ್ನು ಅನುಭವಿಸುವುದು ಅನಿವಾರ್ಯವಾಗಿತ್ತು. ದುರ್ಬಲೆಯಾಗಿರುವ ನಾನು ರಾವಣನ ದಾಸಿಯರು ಮಾಡಿರುವ ಅಪರಾಧಗಳನ್ನು ಕ್ಷಮಿಸಿ ಬಿಡುತ್ತೇನೆ. ಮೇಲಾಗಿ ರಾವಣರಾಕ್ಷಸನಿಂದ ಆಜ್ಞಪ್ತರಾದ ಈ ರಾಕ್ಷಸಿಯರು ನನ್ನನ್ನು ಭಯಪಡಿಸುತ್ತಿದ್ದರು. ಅವನು ಸತ್ತುಹೋದನಂತರ ನನ್ನನ್ನೇಕೆ ಇವರು ಭಯಪಡಿಸುತ್ತಾರೆ? ರಾವಣನ ಆಜ್ಞಾಧಾರಕರಾಗಿ ಇವರು ನನ್ನನ್ನು ಭಯಪಡಿಸುತ್ತಿದ್ದರೇ ಹೊರತು ತಾವಾಗಿಯೇ ಇವರು ನನ್ನನ್ನು ಭಯಪಡಿಸುತ್ತಿರಲಿಲ್ಲ. ರಾವಣನು ಮರಣಹೊಂದಿರುವಾಗ ನನ್ನನ್ನು ಭಯಪಡಿಸುವಂತೆ ಯಾರೂ ಇವರಿಗೆ ಆಜ್ಞೆಮಾಡುವುದಿಲ್ಲ. ಆದುದರಿಂದ ಇವರು ಇನ್ನು ಮುಂದೆ ನನ್ನನ್ನು ಭಯಪಡಿಸುವುದಿಲ್ಲವೆಂಬುದು ಸ್ಪಷ್ಟವಾಗಿಯೇ ಇದೆ. ಆದುದರಿಂದ ಇವರನ್ನು ಸಂಹರಿಸುವುದು ಖಂಡಿತವಾಗಿಯೂ ಉಚಿತವಲ್ಲ.

ಹನುಮಂತ! ಈ ವಿಷಯದಲ್ಲಿ ಕರಡಿಯು ಹುಲಿಗೆ ಹೇಳಿದ ಪುರಾಣ ಶ್ಲೋಕವೊಂದಿದೆ. ಅದನ್ನು ಹೇಳುವೆನು ; ಕೇಳು :

ನ ಪರಃ ಪಾಪಮಾದತ್ತೇ ಪರೇಷಾಂ ಪಾಪಕರ್ಮಣಾಮ್ ।
ಸಮಯೋ ರಕ್ಷಿತವ್ಯಸ್ತು ಸನ್ತಶ್ಚಾರಿತ್ರಭೂಷಣಾಃ ॥೪೪॥

ಬೇರೊಬ್ಬರ ಪ್ರೇರಣೆಯಿಂದ ಒಬ್ಬನು ಮಾಡಿದ ಪಾಪವನ್ನು ಪ್ರಾಜ್ಞರೆಂದಿಗೂ ಗಣನೆಗೆ ತೆಗೆದುಕೊಳ್ಳುವುದಿಲ್ಲ. ಆದುದರಿಂದ ಸತ್ಪುರುಷನಾದವನು ತನ್ನ ಪ್ರತಿಜ್ಞೆಯನ್ನೂ ಮತ್ತು ಸದಾಚಾರವನ್ನೂ ಯಾವಾಗಲೂ ರಕ್ಷಿಸಿಕೊಳ್ಳಬೇಕು. ಸತ್ಪುರುಷರು ಯಾವಾಗಲೂ ಸಚ್ಚರಿತ್ರೆಯನ್ನೇ ಭೂಷಣವನ್ನಾಗಿ ಉಳ್ಳವರು.

ಪಾಪಾನಾಂ ವಾ ಶುಭಾನಾಂ ವಾ ವಧಾರ್ಹಾಣಾಮಥಾಪಿ ವಾ ।
ಕಾರ್ಯಂ ಕಾರುಣ್ಯಮಾರ್ಯೇಣ ನ ಕಶ್ಚಿನ್ನಾಪರಾಧ್ಯತಿ ॥೪೫॥

ಸತ್ಪುರುಷರಾದವರು ಪಾಪಿಷ್ಠರ ವಿಷಯದಲ್ಲೇ ಆಗಲೀ, ಸತ್ಪುರುಷರ ವಿಷಯದಲ್ಲೇ ಆಗಲೀ, ವಧೆಗೆ ಯೋಗ್ಯರಾದವರ ವಿಷಯದಲ್ಲೇ ಆಗಲೀ–

ಕಾರುಣ್ಯಭಾವದಿಂದಲೇ ಇರಬೇಕು. ಏಕೆಂದರೆ : ಅಪರಾಧಮಾಡದೇ ಇರ ತಕ್ಕವನು ಪ್ರಪಂಚದಲ್ಲಿ ಯಾವನೂ ಇಲ್ಲ.

ಲೋಕಹಿಂಸಾವಿಹಾರಾಣಾಂ ಕ್ರೂರಾಣಾಂ ಪಾಪಕರ್ಮಣಾಮ್ ।
ಕುರ್ವತಾಮಪಿ ಪಾಪಾನಿ ನೈವ ಕಾರ್ಯಮಶೋಭನಮ್ ॥೪೬॥

ಜನರನ್ನು ಹಿಂಸಿಸುವುದರಿಂದಲೇ ಯಾರು ಆನಂದಪಡುವರೋ, ಯಾರು ಕ್ರೂರಿಗಳೋ ಮತ್ತು ಪಾಪಕರ್ಮಿಗಳೋ, ಪಾಪಕರ್ಮಗಳನ್ನು ಯಾವಾಗಲೂ ಮಾಡುತ್ತಲೇ ಇರುವರೋ–ಅಂತಹವರಿಗೂ ಕೇಡನ್ನು ಬಯಸಬಾರದು.*

(ಒಂದು ಹುಲಿಯು ವ್ಯಾಧನೊಬ್ಬನನ್ನು ಅಟ್ಟಿಸಿಕೊಂಡು ಬಂದಿತು. ವ್ಯಾಧನು ಕೂಡಲೇ ಮರವನ್ನು ಹತ್ತಿಬಿಟ್ಟನು. ಹುಲಿಯು ಮರವನ್ನು ಹತ್ತಲಾಗದೇ ಕೆಳಗೇ ನಿಲ್ಲಬೇಕಾಯಿತು. ಅದೇ ಮರದಲ್ಲಿಯೇ ಒಂದು ಕರಡಿಯು ಇದ್ದಿತು. ಸ್ವಲ್ಪಹೊತ್ತಿನನಂತರ ವ್ಯಾಧನು ನಿದ್ದೆಹೋದನು. ಆ ಸಮಯದಲ್ಲಿ ಮರದ ಕೆಳಗಿದ್ದ ಹುಲಿಯು ಕರಡಿಗೆ ಹೇಳಿತು. "ಮಿತ್ರನೇ! ವ್ಯಾಧನು ಪ್ರಾಣಿಗಳನ್ನು ಕೊಲ್ಲುವವನು. ಆದುದರಿಂದ ಅವನನ್ನೀಗ ಕೆಳಕ್ಕೆ ತಳ್ಳಿಬಿಡು" ಎಂದಿತು. ಅದಕ್ಕೆ ಕರಡಿಯು "ಹಾಗೆ ನಾನು ವ್ಯಾಧನನ್ನು ಕೆಳಕ್ಕೆ ತಳ್ಳಲಾರೆ. ಅವನು ಈಗ ನನ್ನ ಆಶ್ರಯದಲ್ಲಿರುವನು. ಆಶ್ರಯದಲ್ಲಿರುವವರನ್ನು ಹೊರದೂಡುವುದು ಪಾಪಕರ" ಎಂದಿತು. ಸ್ವಲ್ಪಹೊತ್ತಿನನಂತರ ಕರಡಿಯು ನಿದ್ದೆಹೋಗಲು ವ್ಯಾಧನು ಎಚ್ಚೆತ್ತನು.

---

* ಸೀತೆಯ ಅಭಿಪ್ರಾಯವು ಹೀಗಿರಬಹುದು. ಪಾಪಮಾಡಿದವರು ಶಿಕ್ಷೆಯನ್ನು ಅನುಭವಿಸಿಯೇ ತೀರುತ್ತಾರೆ. ನಾನು ಹಿಂದಿನ ಜನ್ಮದಲ್ಲಿ ಪಾಪಮಾಡಿದ್ದರಿಂದಲೇ ಇಂತಹ ಕಷ್ಟಗಳನ್ನು ಅನುಭವಿಸುತ್ತಿದ್ದೇನೆ. ಅವರವರ ಪಾಪಕ್ಕೆ ತಕ್ಕುದಾದ ಶಿಕ್ಷೆಗಳನ್ನು ಕೊಡಲು ಕರ್ಮಾಧ್ಯಕ್ಷನಿದ್ದಾನೆ. ಅವನು ಪಾಪಿಗೆ ಯಾವ ಸಮಯದಲ್ಲಿ ಶಿಕ್ಷೆಕೊಡಬೇಕೋ ಆ ಸಮಯದಲ್ಲಿ ಕೊಡಬೇಕು. ಅಪರಾಧಿಯನ್ನು ಶಿಕ್ಷಿಸುವುದು ರಾಜನ ಕಾರ್ಯವಾಗಿರುತ್ತದೆ. ಕರ್ಮಾಧ್ಯಕ್ಷನ ಪ್ರೇರಣೆಯಂತೆ ಅವನು ಅಪರಾಧಿಗಳನ್ನು ಶಿಕ್ಷಿಸುತ್ತಾನೆ. ಅಪರಾಧಿಯನ್ನು ಶಿಕ್ಷಿಸುವುದು ಸತ್ಪುರುಷರ ಕೆಲಸವಲ್ಲ. ಸತ್ಪುರುಷರ ದೃಷ್ಟಿಯಲ್ಲಿ ಅಪರಾಧಿ-ನಿರಪರಾಧಿ ಒಂದೇ ಆಗುತ್ತಾರೆ. ಪ್ರಕೃತದಲ್ಲಿ ರಾಕ್ಷಸಿಯರು ಅಪರಾಧಿನಿಯರಲ್ಲ. ಸ್ವಾಮಿಯ ಆಜ್ಞೆಯಂತೆ ನಡೆದುಕೊಂಡವರು. ಅವರ ಅಪರಾಧದಲ್ಲಿ ಅಥವಾ ಪಾಪದಲ್ಲಿ ಸ್ವಾಮಿಯದೆಷ್ಟು ಅವರದ್ದೆಷ್ಟು ಎಂಬು

ಆ ಸಮಯದಲ್ಲಿ ಹುಲಿಯು ವ್ಯಾಧನಿಗೆ ಹೇಳಿತು : "ವ್ಯಾಧನೇ! ಮಲಗಿ ನಿದ್ರಿಸುತ್ತಿರುವ ಕರಡಿಯನ್ನು ಕೆಳಕ್ಕೆ ತಳ್ಳಿಬಿಡು. ಮುಂದೆ ನಾನೇ ನಿನ್ನನ್ನು ರಕ್ಷಿಸುತ್ತೇನೆ." ಹುಲಿಯ ಮಾತನ್ನು ಕೇಳಿದೊಡನೆಯೇ ವ್ಯಾಧನು ಹಿಂದೆ ಮುಂದೆ ನೋಡದೆ ನಿದ್ರಿಸುತ್ತಿದ್ದ ಕರಡಿಯನ್ನು ಕೆಳಕ್ಕೆ ತಳ್ಳಿಬಿಟ್ಟನು. ಆದರೆ ಕರಡಿಯು ಅಭ್ಯಾಸಬಲದಿಂದ ಸರ-ಸರನೆ ಮರದ ಮೇಲಕ್ಕೇ ಹತ್ತಿತು. ಆಗ ಹುಲಿಯು ಪುನಃ ಕರಡಿಗೆ ಹೇಳಿತು. "ಮನುಷ್ಯನನ್ನು ಯಾವಾಗಲೂ ನಂಬಲೇಬಾರದು. ನಿನ್ನನ್ನು ಇವನು ಕೆಳಕ್ಕೆ ತಳ್ಳಿಬಿಟ್ಟನು. ಈಗಲಾದರೂ ನೀನು ಇವನನ್ನು ಕೆಳಕ್ಕೆ ತಳ್ಳಿಬಿಡು." ಹುಲಿಯು ಎಷ್ಟೇ ಹೇಳಿದರೂ ಕರಡಿಯು ವ್ಯಾಧನನ್ನು ಮರದಿಂದ ಕೆಳಕ್ಕೆ ತಳ್ಳಲಿಲ್ಲ. '**ನ ಪರಃ ಪಾಪಮಾದತ್ತೇ**' ಎಂಬ ನೀತಿವಾಕ್ಯವನ್ನು ಹೇಳಿತು.)

ಸೀತಾದೇವಿಯು ಹೀಗೆ ಹೇಳಲು ವಾಕ್ಯವಿಶಾರದನಾದ ಹನು ಮಂತನು ನಿಷ್ಕಳಂಕಿನಿಯಾದ ಸೀತಾದೇವಿಗೆ ಹೇಳಿದನು :

"ತಾಯೇ! ನೀನು ಶ್ರೀರಾಮನಿಗೆ ಅನುರೂಪಳೂ ಸಮಸ್ತಸದ್ಗುಣ ಗಳಿಂದಲೂ ಸಂಪನ್ನಳೂ ಆಗಿರುವ ಧರ್ಮಪತ್ನಿಯಾಗಿರುವೆ. ನಾನೀಗಲೇ ರಾಘವನಲ್ಲಿಗೆ ಹೋಗುತ್ತೇನೆ. ಶ್ರೀರಾಮನ ಸಂದೇಶಕ್ಕೆ ಉತ್ತರರೂಪವಾದ ಸಂದೇಶವನ್ನು ನೀಡು."

ದನ್ನು ನಿಶ್ಚಯಿಸಲು ಕರ್ಮಾಧ್ಯಕ್ಷನಿಗೆ ಮಾತ್ರವೇ ಸಾಧ್ಯ. ಅನ್ಯರಿಂದ ಇದು ಸಾಧ್ಯ ವಿಲ್ಲ. ಒಂದು ದೃಷ್ಟಿಯಲ್ಲಿ ನಿರಪರಾಧಿಗಳಾಗಿರುವ ಅವರನ್ನು ಸಂಹರಿಸಿದರೆ ಪಾಪವೇ ಉಂಟಾಗುತ್ತದೆ. ಆದುದರಿಂದ ನಮಗೆ ಸಂಬಂಧಿಸದ ಶಿಕ್ಷಿಸುವ ಕಾರ್ಯವನ್ನು ನಾವು ಯಾವಾಗಲೂ ಮಾಡಬಾರದು. ಪಾಪಿಯ ವಿಷಯದಲ್ಲೂ ಕರುಣೆಯನ್ನೇ ತೋರಬೇಕು. ಅಥವಾ ಇದನ್ನು ತಾತ್ತ್ವಿಕವಾಗಿ ಹೀಗೂ ವಿವರಿಸಬಹುದಾಗಿದೆ :

ಲೋಕಕಂಟಕರಾದ ಪಾಪಿಷ್ಠರಿಗೆ ಶಿಕ್ಷೆ ಮಾಡಬಾರದು. ಯಾವಾಗಲೂ ಅವರನ್ನು ಕ್ಷಮಿಸುವುದೇ ಎಲ್ಲರ ಕರ್ತವ್ಯ–ಎಂದು ಇದಕ್ಕೆ ಅರ್ಥಮಾಡಬಾರದು. ತಾತ್ತ್ವಿಕವಾಗಿ ವಿಚಾರಮಾಡಿದಾಗ ಎಲ್ಲ ಆತ್ಮರೂ ಸಮರೇ ಆಗಿದ್ದಾರೆ. ಅವರು ಪ್ರಕೃತಿಯಿಂದ ಪ್ರೇರಿತರಾಗಿ ಒಳ್ಳೆಯ ಅಥವಾ ಕೆಟ್ಟ ಕೆಲಸಗಳನ್ನು ಮಾಡುತ್ತಾರೆ. ಆದುದ ರಿಂದ ದುಷ್ಕರ್ಮಿಗಳು ಕೂಡ ಸ್ವರೂಪತಃ ಶುದ್ಧವಾದ ಆತ್ಮಸ್ವರೂಪರೇ ಆಗಿ ರುತ್ತಾರೆ. ಅವರ ದುಷ್ಕರ್ಮವು **ಕಾಮೋಽಕಾರ್ಷಿನ್ಮನ್ಯುರಕಾರ್ಷೀತ್** ಎಂಬಂತೆ ಪ್ರಕೃತಿಸಂಬಂಧವಾದ ಕಾಮ-ಮನ್ಯುಗಳಿಂದ ಉಂಟಾದುದು. ಆದುದರಿಂದ ಸ್ವರೂಪತಃ

ಹನುಮಂತನು ಹೀಗೆ ಹೇಳಲು ಸೀತಾದೇವಿಯು ಹೇಳಿದಳು :

'ದ್ರಷ್ಟುಮಿಚ್ಛಾಮಿ ಭರ್ತಾರಂ ಭಕ್ತವತ್ಸಲಮ್–ಭಕ್ತವತ್ಸಲನಾದ ನನ್ನ ಪತಿಯನ್ನು ಸಂದರ್ಶಿಸಲು ಬಯಸುತ್ತೇನೆ."

ಸೀತಾದೇವಿಯ ಆ ಮಾತನ್ನು ಕೇಳಿ ಮಹಾಮತಿಯಾದ ಹನುಮಂತನು ಸೀತೆಗೆ ಸಂತೋಷವನ್ನುಂಟುಮಾಡುತ್ತಾ ಹೇಳಿದನು :

ಪೂರ್ಣಚನ್ದ್ರಮುಖಂ ರಾಮಂ ದ್ರಕ್ಷ್ಯಸ್ಯದ್ಯ ಸಲಕ್ಷ್ಮಣಮ್ ।
ಸ್ಥಿರಮಿತ್ರಂ ಹತಾಮಿತ್ರಂ ಶಚೀವೇನ್ದ್ರಂ ಸುರೇಶ್ವರಮ್ ॥೫೧॥

"ಶಚೀದೇವಿಯು ದೇವರಾಜನಾದ ಇಂದ್ರನನ್ನು ಸಂದರ್ಶಿಸುವಂತೆ ಪೂರ್ಣಚಂದ್ರನಂತೆ ಮನೋಹರವಾದ ಮುಖವುಳ್ಳ, ಮಿತ್ರರಿಂದ ಕೂಡಿರುವ, ಶತ್ರುಗಳನ್ನು ಸಂಹರಿಸಿರುವ, ಲಕ್ಷ್ಮಣಸಮೇತನಾದ ಶ್ರೀರಾಮನನ್ನು ಈಗಲೇ ನೀನು ಕಾಣಲಿರುವೆ."

ಮಹಾತೇಜಸ್ವಿಯಾದ ಹನುಮಂತನು ಸಾಕ್ಷಾತ್ ಲಕ್ಷ್ಮೀದೇವಿಯಂತೆ ಕಂಗೊಳಿಸುತ್ತಿದ್ದ ಸೀತಾದೇವಿಗೆ ಹೀಗೆ ಹೇಳಿ ರಾಘವನಲ್ಲಿಗೆ ಆಗಮಿಸಿದನು.

ಹನುಮಂತನು ರಾಘವನನ್ನು ಸಂದರ್ಶಿಸಿದೊಡನೆಯೇ ಜಾನಕಿಯು ಹೇಳಿದ ಪ್ರತ್ಯುತ್ತರವನ್ನು ಇಂದ್ರಪ್ರತಿಮನಾದ ಶ್ರೀರಾಮನಿಗೆ ಯಥಾನುಕ್ರಮವಾಗಿ ಹೇಳತೊಡಗಿದನು.

ಅ೧೧೩ನೆಯ ಸರ್ಗವು ಮುಗಿಯಿತು.

ಅವರು ಶುದ್ಧರೆಂದೇ ತಿಳಿದು ಅವರನ್ನು ಪ್ರಕೃತಿದೋಷದಿಂದ ಶುದ್ಧಪಡಿಸಲು ಶಾಸ್ತ್ರೋಕ್ತವಾದ ಶಿಕ್ಷೆಯನ್ನು ಅವರಿಗೆ ಕೊಡಬೇಕು. ಶಿಕ್ಷೆಯು ಶುದ್ಧೀಕರಣಕ್ಕಾಗಿ. ಹೀಗೆ ಶಿಕ್ಷಿಸುವುದರಿಂದ ದುಷ್ಟರಿಗೆ ಒಳ್ಳೆಯದೇ ಆಗುತ್ತದೆ. ಇದರಿಂದ ಅವರಿಗೆ ಶೋಭನವೇ ಆಗುತ್ತದೆಯೇ ಹೊರತು ಅಶೋಭನವಾಗುವುದಿಲ್ಲ ಇದನ್ನು **ರಾಜಭಿರ್ಧೃತದಣ್ಡಾಸ್ತು ಕೃತ್ವಾ ಪಾಪಾನಿ ಮಾನವಾಃ । ನಿರ್ಮಲಾಃ ಸ್ವರ್ಗಮಾಯಾನ್ತಿ ಸನ್ತಃ ಸುಕೃತಿನೋ ಯಥಾ ॥** ಎಂದು ಧರ್ಮಶಾಸ್ತ್ರಗಳು ಹೇಳುತ್ತವೆ. ಶ್ರೀರಾಮನೂ ಇದನ್ನು ವಾಲಿಸಂಭಾಷಣೆಯಲ್ಲಿ ಉದ್ಧರಿಸಿದ್ದಾನೆ. ಆದರೆ ಶಿಕ್ಷೆ ಮಾಡುವ ಅಧಿಕಾರ ಇರುವುದು ರಾಜನಿಗೆ. ರಾಜನು ಅಪರಾಧಿಯ ತಪ್ಪನ್ನು ಪ್ರಮಾಣಪೂರ್ವಕವಾಗಿ ನಿರ್ಧರಿಸಿ ತಕ್ಕ ಶಿಕ್ಷೆಯನ್ನು ಕೊಡಬೇಕು. ಪ್ರಕೃತದಲ್ಲಿ ರಾಕ್ಷಸಿಯರು

ಶ್ರೀರಾಮನ ಆಜ್ಞೆಯಂತೆ ವಿಭೀಷಣನು ಸೀತೆಯನ್ನು ಶ್ರೀರಾಮನ ಬಳಿಗೆ ಕರೆತಂದುದು : ಸೀತೆಯು ಪತಿದೇವನ ಮುಖವನ್ನು ಅವಲೋಕಿಸಿದುದು

ತಮುವಾಚ ಮಹಾಪ್ರಾಜ್ಞಃ ಸೋಽಭಿವಾದ್ಯ ಪ್ಲವಂಗಮಃ ।
ರಾಮಂ ವಚನಮರ್ಥಜ್ಞೋ ವರಂ ಸರ್ವಧನುಷ್ಮತಾಮ್ ॥೧॥

ಅನಂತರ ಮಹಾಬುದ್ಧಿಶಾಲಿಯಾದ ಮತ್ತು ಕಾರ್ಯಾರ್ಥಗಳನ್ನು ಬಲ್ಲವನಾದ ಹನುಮಂತನು ಸಮಸ್ತಧನುರ್ಧಾರಿಗಳಿಗೂ ಶ್ರೇಷ್ಠನಾದ ಶ್ರೀರಾಮನಿಗೆ ನಮಸ್ಕರಿಸಿ ಹೇಳಿದನು :

"ಪೂಜ್ಯನೇ! ಯಾವಳ ಸಲುವಾಗಿ ಸೇತುಬಂಧವೇ ಮೊದಲಾದ ಕಾರ್ಯಗಳು ಆರಂಭವಾದುವೋ ಮತ್ತು ಶತ್ರುನಿರಸನವೆಂಬ ಫಲವು ಲಭಿಸಿತೋ-ಅಂತಹ ಶೋಕತಪ್ತಳಾದ ಸೀತಾದೇವಿಯನ್ನು ನೋಡುವುದು ನಿನಗೆ ಉಚಿತವಾಗಿದೆ. ಶೋಕಮಗ್ನಳಾಗಿದ್ದ ಕಂಬನಿದುಂಬಿದ ಕಣ್ಣುಗಳುಳ್ಳವಳಾಗಿದ್ದ ಮೈಥಿಲಿಯು ನೀನು ವಿಜಯಿಯಾದೆಯೆಂಬ ಶುಭವಾರ್ತೆಯನ್ನು

ರಾಜಪ್ರೇರಿತರಾಗಿ ತಪ್ಪುಕೆಲಸ ಮಾಡಿರುವುದರಿಂದ ಆ ದೋಷವು ಮುಖ್ಯವಾಗಿ ಅವರ ಒಡೆಯನಾಗಿದ್ದ ರಾವಣನದೇ ಹೊರತು ಸೇವಕಿಯರಾಗಿದ್ದ ರಾಕ್ಷಸಿಯರ ದಲ್ಲ. ತಪ್ಪಿತಸ್ಥನಾಗಿದ್ದ ರಾವಣನಿಗೆ ಶಾಸ್ತಿಯಾಗಿಬಿಟ್ಟಿದೆ. (ಅದನ್ನೂ ಅವನಲ್ಲಿ ಕೇವಲ ದ್ವೇಷಬುದ್ಧಿಯಿಂದ ಮಾಡಿಲ್ಲ. ಅವನ ಶುದ್ಧೀಕರಣಕ್ಕಾಗಿ ಅವನಿಗೆ ಒಳ್ಳೆಯದಾಗಲೆಂದೇ ಮಾಡಲಾಗಿದೆ.) ಅಂದರೆ ಅವನಿಗೆ ನಿಗ್ರಹದಂತೆ ಕಾಣುವ ಅನುಗ್ರಹವನ್ನು (ನಿಗ್ರಹಾನುಗ್ರವನ್ನು) ಶ್ರೀರಾಮನು ಮಾಡಿಯಾಗಿದೆ. ನಿರಪ ರಾಧಿನಿಯರಾಗಿರುವ ರಾಕ್ಷಸದಾಸಿಯರು ಆ ನಿಗ್ರಹಾನುಗ್ರಹಕ್ಕೆ ಪಾತ್ರರಲ್ಲ. ಪರಪ್ರೇರಣೆಯಿಂದ ಮಾಡಿರುವ ಅವರ ಅಪರಾಧವು ಕ್ಷಮ್ಯ.

ಇದಲ್ಲದೇ ಕರುಣಾಮಯಿಯಾದ ಸೀತೆಯು-ಭವೇಯಂ ಶರಣಂ ಹಿ ವಃ ।-ಶರಣು ನೀಡುವುದಾಗಿ ಅವರಿಗೆ ಅಭಯವನ್ನು ಕೊಟ್ಟಿದ್ದಳು. ಆದುದರಿಂದ ಅವರ ಮೇಲೆ ನಿಗ್ರಹಾನುಗ್ರಹವನ್ನು ತೋರಿಸದೇ ಅನುಗ್ರಹಾನುಗ್ರಹವನ್ನೇ ತೋರಿಸಬೇಕು. ಅವರನ್ನು ಹಿಂಸಿಸಲು ಅನುಮತಿಯನ್ನು ನೀಡಿದರೆ ಶರಣಾಗತದ್ರೋಹದ ದೋಷವೇ ಒದಗುತ್ತದೆ-ಎಂಬುದು ತತ್ತ್ವಜ್ಞಳೂ ಕರುಣಾಮಯಿಯೂ ಆದ ಸೀತಾದೇವಿಯ ಅಭಿಪ್ರಾಯ.

ಕೇಳಿದೊಡನೆಯೇ ನಿನ್ನನ್ನು ಸಂದರ್ಶಿಸುವ ಆಕಾಂಕ್ಷೆಯನ್ನು ವ್ಯಕ್ತಪಡಿಸಿದಳು. ಪ್ರಭುವೇ! ಈ ಹಿಂದೆ ನಾನು ಸೀತೆಯ ಸಂದೇಶವನ್ನು ತಂದಿದ್ದೆನು. ನಾನು ಸ್ವಾಮಿಯ ವಿಶ್ವಾಸಕ್ಕೆ ಪಾತ್ರನಾದ ಸೇವಕನೆಂಬ ಭರವಸೆಯು ಸೀತಾದೇವಿಯಲ್ಲಿ ಮೂಡಿದೆ. ಈ ಕಾರಣದಿಂದಲೇ ಅವಳು ಕಣ್ಣುಗಳಲ್ಲಿ ನೀರು ತುಂಬಿಕೊಂಡು–'ಭರ್ತಾರಂ ದ್ರಷ್ಟುಮಿಚ್ಛಾಮಿ–ಪತಿಯನ್ನು ನೋಡಲು ಬಯಸಿದ್ದೇನೆ'–ಎಂದು ನನ್ನೊಡನೆ ಹೇಳಿದಳು."

ಹನುಮಂತನು ಹೀಗೆ ಹೇಳುತ್ತಲೇ ಧರ್ಮಾತ್ಮರಲ್ಲಿ ಶ್ರೇಷ್ಠನಾದ ಶ್ರೀರಾಮನು ಕ್ಷಣಕಾಲ ಚಿಂತಾಮಗ್ನನಾದನು.* ಅವನ ಕಣ್ಣುಗಳಲ್ಲಿಯೂ ಸ್ವಲ್ಪ ನೀರು ತುಂಬಿಕೊಂಡಿತು. ನಿಟ್ಟುಸಿರುಬಿಡುತ್ತಾ ಮುಖವನ್ನು ತಗ್ಗಿಸಿ ಭೂಮಿಯ ಕಡೆಗೆ ನೋಡುತ್ತಾ ಬಳಿಯಲ್ಲಿಯೇ ಇದ್ದ ಮೇಘದಂತೆ ಶ್ಯಾಮಲವರ್ಣನಾದ ವಿಭೀಷಣನಿಗೆ ಹೇಳಿದನು :

ದಿವ್ಯಾಙ್ಗರಾಗಾಂ ವೈದೇಹೀಂ ದಿವ್ಯಾಭರಣಭೂಷಿತಾಮ್ ।
ಇಹ ಸೀತಾಂ ಶಿರಃಸ್ನಾತಾಮುಪಸ್ಥಾಪಯ ಮಾ ಚಿರಮ್ ॥೭॥

"ವಿಭೀಷಣ! ಅಭ್ಯಂಜನಸ್ನಾನಮಾಡಿ, ದಿವ್ಯವಾದ ಅಂಗರಾಗಗಳನ್ನು ಪೂಸಿಕೊಂಡು, ದಿವ್ಯಾಭರಣಗಳಿಂದ ಭೂಷಿತೆಯಾದ ಸೀತೆಯನ್ನು ಶೀಘ್ರವಾಗಿ ಇಲ್ಲಿಗೆ ಕರೆದುಕೊಂಡು ಬಾ."

ಶ್ರೀರಾಮನು ಹೀಗೆ ಹೇಳುತ್ತಲೇ ವಿಭೀಷಣನು ಅವಸರದಿಂದಲೇ ಅಂತಃಪುರಕ್ಕೆ ಹೋಗಿ ಪತ್ನಿಯರನ್ನು ಕರೆದುಕೊಂಡು ಸೀತೆಯಿದ್ದ ಅಶೋಕ ವನಕ್ಕೆ ಹೋದನು.

---

* ಚಿಂತಾಮಗ್ನನಾದುದಕ್ಕೆ ಕಾರಣವನ್ನು ವ್ಯಾಖ್ಯಾನಕಾರರು ಹೀಗೆ ವಿವರಿಸಿದ್ದಾರೆ : ಪರಪುರುಷನ ಮನೆಯಲ್ಲಿ ಒಂದು ವರ್ಷ ಇದ್ದವಳನ್ನು ಪರಿಗ್ರಹಿಸಿದರೆ ಲೋಕವೇನನ್ನುತ್ತದೆ? ನಿಷ್ಕಳಂಕವಾದ ಸೀತೆಯನ್ನು ಪರಿತ್ಯಜಿಸಲು ತಾನೇ ಹೇಗೆ ಸಾಧ್ಯವಾದೀತು? ಹೀಗೆ ಎರಡು ಬಗೆಯಾಗಿಯೂ ಶ್ರೀರಾಮನು ಚಿಂತಿಸುತ್ತಿದ್ದನು. **ಪರಗೃಹೋಷಿ- ತಾಯಾಃ ಪರಿಗೃಹೇ ಮಹಾನ್ ಲೋಕಾಪವಾದಃ । ನಿರ್ದೋಷಾಯಾಃ ಪರಿತ್ಯಾಗೇ ಚ ಮಹಾನ್ದೋಷಃ ॥ ಇತಿ ಚಿನ್ತಯಾಮಾಸ.** ಅಥವಾ ಪ್ರಿಯೆಯಾದ ಸೀತಾದೇವಿಯು ಕಣ್ಣೀರುಹರಿಸಿದ ಸಮಾಚಾರವನ್ನು ಕೇಳಿ ಶ್ರೀರಾಮನು ಕಣ್ಣೀರು ಹರಿಸಿದ್ದು ಸಹಜವಾಗಿದೆ.

ಅಲ್ಲಿ ವಿಭೀಷಣನು ಮಹಾಭಾಗ್ಯಶಾಲಿನಿಯಾದ ಸೀತಾದೇವಿಯನ್ನು ನೋಡಿ ಕೈಗಳೆರಡನ್ನೂ ಜೋಡಿಸಿ ತಲೆಯ ಮೇಲಿಟ್ಟುಕೊಂಡು ಅತ್ಯಂತ ವಿನೀತನಾಗಿ ಹೇಳಿದನು :

"ವಿದೇಹರಾಜಕುಮಾರಿ! ನಿನಗೆ ಮಂಗಳವಾಗಲಿ. ಈಗ ನೀನು ಸ್ನಾನಮಾಡಿ ದಿವ್ಯವಾದ ಅಂಗರಾಗಗಳನ್ನು ಹಚ್ಚಿಕೊಂಡು ದಿವ್ಯಾಭರಣ ಭೂಷಿತೆಯಾಗಿ ಪಲ್ಲಕ್ಕಿಯಲ್ಲಿ ಕುಳಿತುಕೊ. ನಿನ್ನ ಪತಿಯು ನಿನ್ನನ್ನು ನೋಡಲು ಬಯಸಿದ್ದಾನೆ."

ವಿಭೀಷಣನು ಹೀಗೆ ಹೇಳಲು ಸೀತೆಯು ಪ್ರತ್ಯುತ್ತರಿಸಿದಳು :

"ರಾಕ್ಷಸೇಶ್ವರನೇ! ನಾನು ಸ್ನಾನಮಾಡದೆಯೇ ನನ್ನ ಪತಿಯನ್ನು ಸಂದರ್ಶಿಸಲು ಬಯಸಿದ್ದೇನೆ."

ಸೀತೆಯ ಆ ಮಾತನ್ನು ಕೇಳಿ ಪುನಃ ವಿಭೀಷಣನು ಹೇಳಿದನು :

"ತಾಯೇ! ನಿನ್ನ ಪತಿಯು ಹೇಗೆ ಆಜ್ಞಾಪಿಸಿರುವನೋ ಹಾಗೆ ನಡೆದು ಕೊಳ್ಳುವುದು ಯೋಗ್ಯವಾಗಿದೆ."

ವಿಭೀಷಣನ ಮಾತನ್ನು ಕೇಳಿ ಪತಿಯೇ ಪರದೈವವೆಂದು ಭಾವಿಸಿದ್ದ, ಭರ್ತೃಭಕ್ತಿಯಿಂದ ಸಂಪನ್ನಳಾಗಿದ್ದ, ಸಾಧ್ವಿಯಾದ ಸೀತಾದೇವಿಯು ಹಾಗೆಯೇ ಆಗಲೆಂದಳು.

ಅನಂತರ ತಲೆಗೆ ಸ್ನಾನಮಾಡಿ, ದಿವ್ಯವಾದ ಅಂಗರಾಗವನ್ನು ಪೂಸಿ ಕೊಂಡು ಬಹುಮೂಲ್ಯಗಳಾದ ಆಭರಣಗಳಿಂದಲೂ ಮತ್ತು ಪೀತಾಂಬರ ಗಳಿಂದಲೂ ಸಮಲಂಕೃತಳಾದ ಸೀತಾದೇವಿಯನ್ನು ಎಲ್ಲ ಕಡೆಗಳಲ್ಲಿಯೂ ರಾಕ್ಷಸಿಯರಿಂದ ರಕ್ಷಿಸಲ್ಪಡುತ್ತಿದ್ದ ಪಲ್ಲಕ್ಕಿಯಲ್ಲಿ ಕುಳ್ಳಿರಿಸಿಕೊಂಡು ವಿಭೀಷಣನು ಶ್ರೀರಾಮನ ಬಳಿಗೆ ಕರೆತಂದನು.

ಆ ಸಮಯದಲ್ಲಿಯೂ ಶ್ರೀರಾಮನು ಚಿಂತಾಮಗ್ನನಾಗಿಯೇ ಇರುವು ದನ್ನು ತಿಳಿದೂ ಸೀತೆಯನ್ನು ಕರೆತಂದುದಕ್ಕಾಗಿ ಅತ್ಯಂತಪ್ರಹೃಷ್ಟನಾಗಿದ್ದ ವಿಭೀಷಣನು ಶ್ರೀರಾಮನಿಗೆ ನಮಸ್ಕರಿಸಿ ಸೀತೆಯನ್ನು ಪಲ್ಲಕ್ಕಿಯಲ್ಲಿ ಕರೆ ತಂದಿರುವ ವಾರ್ತೆಯನ್ನು ಅರುಹಿದನು.

ತಾಮಾಗತಾಮುಪಶ್ರುತ್ಯ ರಕ್ಷೋಗೃಹಚಿರೋಷಿತಾಮ್ ।
ಹರ್ಷೋ ದೈನ್ಯಂ ಚ ರೋಷಶ್ಚ ತ್ರಯಂ ರಾಘವಮಾವಿಶತ್ ॥

ರಾಕ್ಷಸೇಶ್ವರನಾದ ರಾವಣನ ಅಶೋಕವನದಲ್ಲಿ ಬಹಳ ಕಾಲವಿದ್ದ ಸೀತೆಯು ಬಂದಿರುವಳೆಂದು ತಿಳಿದ ಶ್ರೀರಾಮನ ಮನಸ್ಸನ್ನು ಹರ್ಷ, ದೈನ್ಯ, ರೋಷ–ಇವು ಮೂರೂ ಒಂದೇ ಕಾಲದಲ್ಲಿ ಪ್ರವೇಶಿಸಿದುವು.*



ಸೀತೆಯು ಪಲ್ಲಕ್ಕಿಯಲ್ಲಿ ಕುಳಿತಿರುವುದನ್ನು ಕೂಲಂಕಷವಾಗಿ ವಿಚಾರ ಮಾಡುತ್ತಾ ಶ್ರೀರಾಮನು ವಿಭೀಷಣನಿಗೆ ಹೇಳಿದನು :

---

* ಹರ್ಷ, ದೈನ್ಯ ಮತ್ತು ರೋಷಗಳ ಕಾರಣವನ್ನು ವ್ಯಾಖ್ಯಾನಕಾರರು ಹೀಗೆ ಊಹಿಸುತ್ತಾರೆ : ಶತ್ರುವನ್ನು ವಧಿಸಿ ಸೀತೆಯನ್ನು ಪುನಃ ಪಡೆದುಕೊಂಡುದಕ್ಕಾಗಿ ಸಂತೋಷ. ಶತ್ರುವಿನ ವಶದಲ್ಲಿ ಸೀತೆಯು ಸಂಕಟಪಡುತ್ತಾ ಕಾಲಕಳೆದಳೆಂಬುದನ್ನು

"ಸೌಮ್ಯನೇ! ನನ್ನ ವಿಜಯದಲ್ಲಿಯೇ ನಿರತನಾಗಿದ್ದವನೇ! ರಾಕ್ಷಸಾಧಿಪತಿಯೇ! ವೈದೇಹಿಯು ನನ್ನ ಬಳಿಗೆ ಶೀಘ್ರವಾಗಿ ಬರಲಿ."

ರಾಘವನ ಮಾತನ್ನು ಕೇಳಿ ಧರ್ಮಜ್ಞನಾದ ವಿಭೀಷಣನು ಮಹಾರಾಣಿಯಾದ ಸೀತಾದೇವಿಯನ್ನು ಶ್ರೀರಾಮನ ಸನ್ನಿಧಿಗೆ ಕರೆತರುವ ಮೊದಲು ಅಲ್ಲಿದ್ದ ಇತರ ಜನರನ್ನು ದೂರಸರಿದು ನಿಲ್ಲುವಂತೆ ಆಜ್ಞಾಪಿಸಿದನು. ಮುಂಡಾಸುಗಳನ್ನೂ ಸಮವಸ್ತ್ರಗಳನ್ನೂ ಧರಿಸಿದ್ದ ಸಿಪಾಯಿಗಳು ಕೈಗಳಲ್ಲಿ ಬೆತ್ತಗಳನ್ನು ಹಿಡಿದು ತಿರುಗಿಸುತ್ತಾ ರಾಮನ ಸಮೀಪದಲ್ಲಿದ್ದ ಕಪಿಗಳನ್ನೂ, ಕರಡಿಗಳನ್ನೂ, ರಾಕ್ಷಸರನ್ನೂ ದೂರಸರಿದು ನಿಲ್ಲುವಂತೆ ಮಾಡಿ ಶ್ರೀರಾಮನನ್ನು ಸುತ್ತುವರಿದು ನಿಂತರು. ಹೀಗೆ ವಿಭೀಷಣನ ಆಜ್ಞಾನುಸಾರವಾಗಿ ಸಮವಸ್ತ್ರಗಳನ್ನು ಧರಿಸಿದ್ದ ಸಿಪಾಯಿಗಳಿಂದ ದೂರಸರಿಸಲ್ಪಟ್ಟ ಋಕ್ಷ-ವಾನರಸೈನಿಕರು ದೂರಕ್ಕೆ ಹೋಗಿ ನಿಂತರು. ಗಾಳಿಯ ಬಡಿತಕ್ಕೆ ಸಿಕ್ಕಿದ ಸಮುದ್ರದ ಧ್ವನಿಯಂತೆ ಹಾಗೆ ಸಿಪಾಯಿಗಳಿಂದ ದೂರಸರಿಸಲ್ಪಡುತ್ತಿದ್ದ ವಾನರ-ರಾಕ್ಷಸರ ಸಡಗರದ ಶಬ್ದವು ಗಟ್ಟಿಯಾಗಿ ಕೇಳಿಸುತ್ತಿದ್ದಿತು. ಅವರೆಲ್ಲರೂ ಸೀತಾದೇವಿಯನ್ನು ಸಂದರ್ಶಿಸುವ ಆಕಾಂಕ್ಷೆಯಿಂದ ಇದ್ದುದರಿಂದ ಎಲ್ಲರ ಮನಸ್ಸಿನಲ್ಲಿಯೂ ಉದ್ವೇಗವುಂಟಾಗಿದ್ದಿತು. ಅದನ್ನು ಗಮನಿಸಿದ ಶ್ರೀರಾಮನು ಉದಾರತೆಯಿಂದಲೂ ಅಸಹನೆಯಿಂದಲೂ ಸಿಪಾಯಿಗಳ ಕಾರ್ಯವನ್ನು ತಡೆಹಿಡಿದನು. ಯಾರನ್ನೂ ಹಿಂದಕ್ಕೆ ಸರಿಸದಂತೆ ಆಜ್ಞಾಪಿಸಿದನು. ಕಣ್ಣುಗಳಿಂದಲೇ ಸುಟ್ಟುಬಿಡುವನೋ ಎಂಬಂತೆ ಶ್ರೀರಾಮನು ರೋಷವನ್ನು ತಾಳಿ ಮಹಾಪ್ರಾಜ್ಞನಾದ ವಿಭೀಷಣನನ್ನು ತೆಗಳುತ್ತಾ ಹೇಳಿದನು:

ಚಿಂತಿಸಿ ದೈನ್ಯ. ಇಷ್ಟೆಲ್ಲಾ ಹಗರಣಕ್ಕೆ ಸೀತೆಯೇ ಕಾರಣಳೆಂಬ ರೋಷ. ಸೀತೆಯ ವಿಷಯದಲ್ಲಿ ರೋಷವೆಂದರೆ ಮಾಯಾಮೃಗವನ್ನು ಆಶಿಸಿದ್ದು ; ನಿರಪರಾಧಿಯಾದ ಲಕ್ಷ್ಮಣನನ್ನು ಅವಾಚ್ಯವಾದ ಶಬ್ದಗಳಿಂದ ನಿಂದಿಸಿದುದು ; ಆಶ್ರಮದಿಂದ ಲಕ್ಷ್ಮಣನ ನಿರ್ಗಮನವೇ ಸೀತಾಪಹರಣಕ್ಕೆ ಮುಖ್ಯಕಾರಣ ; ಇದಕ್ಕಾಗಿ ಸೀತೆಯ ಮೇಲೆ ಕೋಪ ; ಎಂದು ವ್ಯಾಖ್ಯಾನಕಾರರು ಹೇಳಿದ್ದಾರೆ. ಈ ಸ್ಥಿತಿಯಲ್ಲಿ ಸೀತೆಯನ್ನು ಸ್ವೀಕರಿಸಿದರೆ ತನ್ನ ಕುಲಗೌರವಕ್ಕೆ ಕಳಂಕವು ಬರುವುದೆಂದೂ ಶ್ರೀರಾಮನಿಗೆ ಕೋಪವು ಬಂದಿರಬಹುದು.

ಕಿಮರ್ಥಂ ಮಾಮನಾದೃತ್ಯ ಕ್ಲಿಶ್ಯತೇಽಯಂ ತ್ವಯಾ ಜನಃ ।
ನಿವರ್ತಯ್ಯೈನಮುದ್ಯೋಗಂ ಜನೋಽಯಂ ಸ್ವಜನೋ ಮಮ ॥೨೬॥

"ನನ್ನ ಅಭಿಪ್ರಾಯವೇನೆಂಬುದನ್ನೇ ತಿಳಿಯದೇ ನನ್ನನ್ನು ಅನಾದರಿಸಿ ಈ ನಿನ್ನ ಸೈನಿಕರು ಜನರನ್ನೇಕೆ ಕ್ಲೇಶಗೊಳಿಸುತ್ತಿದ್ದಾರೆ? ಜನರಲ್ಲಿ ಉದ್ವೇಗವನ್ನುಂಟುಮಾಡುವ ಈ ಕಾರ್ಯವನ್ನು ಈಗಲೇ ನಿಲ್ಲಿಸು. ಇಲ್ಲಿರುವವರೆಲ್ಲರೂ ಸ್ವಜನರೇ (ನನ್ನವರೇ) ಆಗಿದ್ದಾರೆ. ಪರಕೀಯರು ಯಾರೂ ಇಲ್ಲ.

ನ ಗೃಹಾಣಿ ನ ವಸ್ತ್ರಾಣಿ ನ ಪ್ರಾಕಾರಾಸ್ತಿರಸ್ಕ್ರಿಯಾಃ ।
ನೇದೃಶಾ ರಾಜಸತ್ಕಾರಾ ವೃತ್ತಮಾವರಣಂ ಸ್ತ್ರಿಯಾಃ ॥೨೭॥

ಮನೆಗಳಾಗಲೀ, ವಸ್ತ್ರಗಳಾಗಲೀ, ಪ್ರಾಕಾರಗಳಾಗಲೀ ಸ್ತ್ರೀಯರಿಗೆ ಆವರಣಗಳಾಗುವುದಿಲ್ಲ. (ಅವಕುಂಠನಗಳಾಗುವುದಿಲ್ಲ.) ಜನಸಾಮಾನ್ಯರನ್ನು ದೂರಕ್ಕಟ್ಟುವ ಈ ವಿಧವಾದ ರಾಜಸತ್ಕಾರಗಳೂ ಸ್ತ್ರೀಯರಿಗೆ ಆವರಣವಾಗುವುದಿಲ್ಲ. ಸ್ತ್ರೀಯರಿಗೆ ಸಚ್ಚಾರಿತ್ರ್ಯವೆಂಬುದೇ ಅಭೇದ್ಯವಾದ ಆವರಣವಾಗಿರುತ್ತದೆ.

ವ್ಯಸನೇಷು ನ ಕೃಚ್ಛ್ರೇಷು ನ ಯುದ್ಧೇಷು ಸ್ವಯಂವರೇ ।
ನ ಕ್ರತೌ ನ ವಿವಾಹೇ ಚ ದರ್ಶನಂ ದುಷ್ಯತೇ ಸ್ತ್ರಿಯಾಃ ॥೨೮॥

ಆಪತ್ತಿನ ಸಮಯಗಳಲ್ಲಿ, ಶಾರೀರಕ ಅಥವಾ ಮಾನಸಿಕಪೀಡೆಯುಂಟಾದಾಗ, ಯುದ್ಧಗಳಲ್ಲಿ, ಸ್ವಯಂವರಗಳಲ್ಲಿ, ಯಜ್ಞಗಳಲ್ಲಿ ಮತ್ತು ವಿವಾಹಕಾಲದಲ್ಲಿ ಸ್ತ್ರೀಯರು ಮತ್ತೊಬ್ಬರನ್ನು ನೋಡಿದರೂ ಅಥವಾ ಇತರ ಸಾಮಾನ್ಯಜನರು ಸ್ತ್ರೀಯರನ್ನು ನೋಡಿದರೂ ದೋಷಭಾಗಿಗಳಾಗುವುದಿಲ್ಲ.

ಸೈಷಾ ವಿಪದ್ಗತಾ ಚೈವ ಕೃಚ್ಛ್ರೇಣ ಚ ಸಮನ್ವಿತಾ ।
ದರ್ಶನೇ ನಾಸ್ತಿ ದೋಷೋಽಸ್ಯಾ ಮತ್ಸಮೀಪೇ ವಿಶೇಷತಃ ॥೨೯॥

ಇವಳೀಗ ಆಪತ್ತಿನಲ್ಲಿದ್ದಾಳೆ. (ಸಮರಭೂಮಿಯಲ್ಲಿದ್ದಾಳೆ.) ಮಾನಸಿಕವಾಗಿಯೂ ಸಂಕಟಪಡುತ್ತಿದ್ದಾಳೆ. ಆದುದರಿಂದ ಇವಳನ್ನು ಇತರರು ನೋಡುವುದರಲ್ಲಿ ಅಥವಾ ಇವಳು ಇತರರನ್ನು ನೋಡುವುದರಲ್ಲಿ

ಯಾವ ದೋಷವೂ ಇಲ್ಲ. ಅದರಲ್ಲಿಯೂ ಇವಳು ನನ್ನ ಬಳಿಗೆ ಬರುತ್ತಿರುವಾಗ ದೋಷವೆಂಬ ವಿಷಯವೇ ಇಲ್ಲ. ಎಲ್ಲರೂ ನೋಡುತ್ತಿರುವಂತೆಯೇ ಸೀತೆಯು ನನ್ನ ಬಳಿಗೆ ಬರಲಿ. ಯಾರನ್ನೂ ದೂರಕ್ಕೆ ಕಳುಹಿಸುವ ಕಾರಣವಿಲ್ಲ.

ವಿಸೃಜ್ಯ ಶಿಬಿಕಾಂ ತಸ್ಮಾತ್ಪದ್ಭ್ಯಾಮೇವಾಪಸರ್ಪತು ।
ಸಮೀಪೇ ಮಮ ವೈದೇಹೀಂ ಪಶ್ಯನ್ತ್ವೇತೇ ವನೌಕಸಃ ॥೩೦॥

ವೈದೇಹಿಯು ಪಲ್ಲಕ್ಕಿಯಿಂದಿಳಿದು ನಡೆದುಕೊಂಡೇ ನನ್ನ ಬಳಿಗೆ ಬರಲಿ. ಹಾಗೆ ಬರುವ ಇವಳನ್ನು ಎಲ್ಲ ವಾನರಸೈನಿಕರೂ ನೋಡಲಿ."

ಶ್ರೀರಾಮನು ಹೀಗೆ ಹೇಳಲು ವಿಭೀಷಣನೂ ಬಹಳವಾಗಿ ಯೋಚಿಸಿ, ಶ್ರೀರಾಮನು ಹೇಳಿದಂತೆ ನಡೆದುಕೊಳ್ಳುವುದೇ ಯುಕ್ತವೆಂದು ಭಾವಿಸಿ ವಿನಯಭಾವದಿಂದ ಸೀತೆಯನ್ನು ಶ್ರೀರಾಮನ ಬಳಿಗೆ ಕರೆದುತಂದನು.

ಆದರೆ ಶ್ರೀರಾಮನ ಮಾತನ್ನು ಕೇಳಿ ಲಕ್ಷ್ಮಣ-ಸುಗ್ರೀವ-ಹನುಮಂತರು ಬಹಳವಾಗಿ ವ್ಯಥೆಗೊಂಡರು.

ಕಲತ್ರನಿರಪೇಕ್ಷೈಶ್ಚ ಇಙ್ಗಿತೈರಸ್ಯ ದಾರುಣೈಃ ।
ಅಪ್ರೀತಮಿವ ಸೀತಾಯಾಂ ತರ್ಕಯನ್ತಿ ಸ್ಮ ರಾಘವಮ್ ॥೩೧॥

ಪತ್ನಿಯ ವಿಷಯದಲ್ಲಿ ಅಪೇಕ್ಷೆಯಿಲ್ಲವೆಂಬುದನ್ನೇ ಸೂಚಿಸುವ ಕ್ರೂರವಾದ ರಾಮನ ಚೇಷ್ಟಾವಿಶೇಷಗಳಿಂದ ಶ್ರೀರಾಮನಿಗೆ ಸೀತೆಯಲ್ಲಿ ಪ್ರೀತಿಯು ಉಳಿದಿಲ್ಲವೆಂದೇ ಸುಗ್ರೀವ-ಲಕ್ಷ್ಮಣ-ಹನುಮಂತರು ಭಾವಿಸಿದರು.

ಶ್ರೀರಾಮನ ಆಜ್ಞೆಯಂತೆ ಸೀತಾದೇವಿಯು ಪಲ್ಲಕ್ಕಿಯಿಂದಿಳಿದು ಮೆಲ್ಲ-ಮೆಲ್ಲನೆ ಮುಂದೆ-ಮುಂದೆ ನಡೆದುಬರುತ್ತಿದ್ದಳು. ಆ ಸಮಯದಲ್ಲವಳು ನಾಚಿಕೆಯಿಂದ ತನ್ನ ಅಂಗಾಂಗಗಳನ್ನು ಅಡಗಿಸಿಕೊಂಡು ನಡೆಯುತ್ತಿರುವಂತೆ ಕಾಣುತ್ತಿದ್ದಳು. ವಿಭೀಷಣನಿಂದ ಅನುಸರಿಸಲ್ಪಡುತ್ತಿದ್ದ ಸೀತೆಯು ಶ್ರೀರಾಮನ ಮುಂದೆ ನಿಂತಳು. ಆ ಸಮಯದಲ್ಲಿ ಸೀತಾದೇವಿಯ ಮುಖವು ಅತ್ಯಂತ ಸೌಮ್ಯಭಾವದಿಂದಿದ್ದಿತು. ಪತಿಯೇ ಪರದೈವವೆಂದು ಭಾವಿಸಿದ್ದ ಜಾನಕಿಯು ವಿಸ್ಮಯದಿಂದಲೂ, ಅತ್ಯಂತಹರ್ಷದಿಂದಲೂ, ಸ್ನೇಹದಿಂದಲೂ ಪತಿಯ ಸುಂದರವಾದ ಮುಖವನ್ನು ನೋಡಿದಳು.

ತನ್ನ ಮನಸ್ಸಿನ ಸಂಕಟವನ್ನು ಪರಿಹರಿಸಿಕೊಳ್ಳುತ್ತಾ ಆಗ ತಾನೇ ಉದಯಿಸಿದ ಬಾಲಚಂದ್ರನ ಕಾಂತಿಗೆ ಸಮಾನವಾದ ಮುಖಕಾಂತಿಯಿಂದ ಬೆಳಗುತ್ತಿದ್ದ, ಬಹಳ ದಿವಸಗಳಿಂದಲೂ ನೋಡದಿದ್ದ ತನ್ನ ಪ್ರಿಯತಮನ ಸುಂದರವಾದ ಮುಖವನ್ನು ನೋಡಿದ ಕೂಡಲೇ ಸೀತಾದೇವಿಯ ಮುಖವು ನಿರ್ಮಲಚಂದ್ರನಂತೆ ಪ್ರಫುಲ್ಲವಾಯಿತು.

೧೧೪ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೧೧೫ನೆಯ ಸರ್ಗ

ಶ್ರೀರಾಮನು ಸೀತೆಯನ್ನು ಪರಿಗ್ರಹಿಸಲು ನಿರಾಕರಿಸಿದುದು

ತಾಂ ತು ಪಾರ್ಶ್ವೇ ಸ್ಥಿತಾಂ ಪ್ರಹ್ವಾಂ
ರಾಮಃ ಸಂಪ್ರೇಕ್ಷ್ಯ ಮೈಥಿಲೀಮ್ ।
ಹೃದಯಾನ್ತರ್ಗತಂ ಭಾವಂ
ವ್ಯಾಹರ್ತುಮುಪಚಕ್ರಮೇ ॥೧॥

ಮಿಥಿಲೇಶಕುಮಾರಿಯು ತನ್ನ ಪಕ್ಕದಲ್ಲಿ ವಿನಯಭಾವದಿಂದ ನಿಂತಿರುವುದನ್ನು ನೋಡಿ ಶ್ರೀರಾಮನು ಹೃದಯಾಂತರಾಳದಲ್ಲಿ ಅಡಗಿದ್ದ ಅಭಿಪ್ರಾಯವನ್ನು ಪ್ರಕಟಿಸತೊಡಗಿದನು :

ಏಷಾಸಿ ನಿರ್ಜಿತಾ ಭದ್ರೇ ಶತ್ರುಂ ಜಿತ್ವಾ ಮಯಾ ರಣೇ ।
ಪೌರುಷಾದ್ಯದನುಷ್ಠೇಯಂ ತದೇತದುಪಪಾದಿತಮ್ ॥೨॥

“ಮಂಗಳಸ್ವರೂಪಳೇ! ರಣರಂಗದಲ್ಲಿ ಶತ್ರುವನ್ನು ಜಯಿಸಿ ನಿನ್ನನ್ನು ಗೆದ್ದುಕೊಂಡಿದ್ದೇನೆ. (ಶತ್ರುವಿನಿಂದ ಬಿಡಿಸಿಕೊಂಡಿದ್ದೇನೆ.) ಪೌರುಷದಿಂದ ಯಾವುದನ್ನು ಸಾಧಿಸಬೇಕಾಗಿದ್ದಿತೋ–ಅದನ್ನು ನಾನು ಸಾಧಿಸಿದ್ದೇನೆ.

ಗತೋಽಸ್ಮ್ಯನ್ತಮಮರ್ಷಸ್ಯ ಧರ್ಷಣಾ ಸಂಪ್ರಮಾರ್ಜಿತಾ ।
ಅವಮಾನಶ್ಚ ಶತ್ರುಶ್ಚ ಯುಗಪನ್ನಿಹತೌ ಮಯಾ ॥೩॥

ನನ್ನಲ್ಲಿ ಹುಟ್ಟಿದ್ದ ಕ್ರೋಧವನ್ನು ಕೊನೆಗೊಳಿಸಿದೆನು. ಭಾರ್ಯಾಪಹರಣರೂಪವಾದ ಅಪಮಾನವನ್ನು ತೊಳೆದುಕೊಂಡೆನು. ನನಗಾಗಿದ್ದ

ಅಪಮಾನವನ್ನೂ ಶತ್ರುವನ್ನೂ ಒಂದೇ ಬಾರಿಗೆ ಕಿತ್ತೆಸೆದೆನು. ಶತ್ರುವಿನ ವಿನಾಶದೊಡನೆ ನನಗಾಗಿದ್ದ ಅಪಮಾನದ ವಿನಾಶವೂ ಆಯಿತು.

ಅದ್ಯ ಮೇ ಪೌರುಷಂ ದೃಷ್ಟಮದ್ಯ ಮೇ ಸಫಲಃ ಶ್ರಮಃ ।
ಅದ್ಯ ತೀರ್ಣಪ್ರತಿಜ್ಞತ್ವಾತ್ಪ್ರಭವಾಮೀಹ ಚಾತ್ಮನಃ ॥೪॥

ಈಗ ನನ್ನ ಪರಾಕ್ರಮವನ್ನು ಎಲ್ಲರೂ ನೋಡಿದ್ದಾರೆ. ಈ ಅವಮಾನವನ್ನು ಪರಿಹರಿಸಿಕೊಳ್ಳಲು ನಾನು ಪಟ್ಟ ಶ್ರಮವು ಫಲವನ್ನಿತ್ತಿದೆ. ನಾನೀಗ ಮಾಡಿದ್ದ ಪ್ರತಿಜ್ಞೆಯನ್ನು ಪೂರೈಸಿ ಆ ಭಾರದಿಂದ ಬಿಡುಗಡೆಹೊಂದಿ ಸ್ವತಂತ್ರನಾಗಿದ್ದೇನೆ.

ಯಾ ತ್ವಂ ವಿರಹಿತಾ ನೀತಾ ಚಲಚಿತ್ತೇನ ರಕ್ಷಸಾ ।
ದೈವಸಂಪಾದಿತೋ ದೋಷೋ ಮಾನುಷೇಣ ಮಯಾ ಜಿತಃ ॥೫॥

ಆಶ್ರಮದಲ್ಲಿ ನಮ್ಮಿಬ್ಬರಿಂದಲೂ ರಹಿತಳಾಗಿದ್ದ ನಿನ್ನನ್ನು ಚಂಚಲ ಚಿತ್ತನಾದ ರಾವಣರಾಕ್ಷಸನು ಅಪಹರಿಸಿದನು. ದೈವಕಲ್ಪಿತವಾದ ಈ ದೋಷವನ್ನು ಮನುಷ್ಯಮಾತ್ರದವನಾದ ನಾನು ಜಯಿಸಿದೆನು.

ಸಂಪ್ರಾಪ್ತಮವಮಾನಂ ಯಸ್ತೇಜಸಾ ನ ಪ್ರಮಾರ್ಜತಿ ।
ಕಸ್ತಸ್ಯ ಪುರುಷಾರ್ಥೋಽಸ್ತಿ ಪುರುಷಸ್ಯಾಲ್ಪತೇಜಸಃ ॥೬॥

ಯಾವ ಮನುಷ್ಯನು ತನಗಾದ ಅವಮಾನವನ್ನು ಬಲ-ಶೌರ್ಯಗಳಿಂದ ತೊಡೆದುಹಾಕುವುದಿಲ್ಲವೋ–ಅಂತಹ ಅಲ್ಪತೇಜಸ್ಸುಳ್ಳ ಮನುಷ್ಯನಿಗೆ ಯಾವ ಪುರುಷಾರ್ಥವು ತಾನೇ ದೊರಕುವುದು?

ಹನುಮಂತನ ಸಮುದ್ರೋಲ್ಲಂಘನ, ಅವನ ಲಂಕಾಪಟ್ಟಣದ ಧ್ವಂಸ ಮುಂತಾದ ಪ್ರಶಂಸನೀಯವಾದ ಕಾರ್ಯಗಳೆಲ್ಲವೂ ಈಗ ಸಫಲವಾದುವು. ಸೇನಾಸಹಿತನಾದ ಸುಗ್ರೀವನು ಯುದ್ಧದಲ್ಲಿ ಅತುಲವಾದ ಪರಾಕ್ರಮವನ್ನು ತೋರಿದನಲ್ಲದೇ ಸಮಯಗಳಲ್ಲಿ ಅವನು ನನಗೆ ಹಿತಕರವಾದ ಸಲಹೆಗಳನ್ನೂ ನೀಡುತ್ತಿದ್ದನು. ಅವನ ಪರಿಶ್ರಮವೂ ಈಗ ಸಾರ್ಥಕವಾಯಿತು. ವಿಭೀಷಣನು ದುರ್ಗುಣಗಳಿಂದ ಕೂಡಿದ್ದ ಅಣ್ಣನನ್ನು ಪರಿತ್ಯಜಿಸಿ ತಾನಾಗಿಯೇ ನನ್ನ ಬಳಿಗೆ ಬಂದು ನನ್ನ ವಿಜಯಕ್ಕಾಗಿ ಶ್ರಮಿಸಿದನು. ಅವನ ಪ್ರಯತ್ನವೂ ಈಗ ಫಲನೀಡಿತು.”

ಇದೇ ಮುಂತಾಗಿ ಹೇಳುತ್ತಿದ್ದ ಶ್ರೀರಾಮನ ಮಾತುಗಳನ್ನು ಕೇಳಿ ಚಿಗರೆಯಂತೆ ವಿಕಸಿತವಾದ ಕಣ್ಣುಗಳನ್ನು ಹೊಂದಿದ್ದ ಸೀತೆಯ ಕಣ್ಣುಗಳಲ್ಲಿ ನೀರು ತುಂಬಿಕೊಂಡಿತು.

ತನ್ನ ಸಮೀಪದಲ್ಲಿಯೇ ತನಗೆ ಅತ್ಯಂತಪ್ರಿಯಳಾಗಿದ್ದ ಸೀತೆಯನ್ನು ನೋಡುತ್ತಿದ್ದಂತೆಯೇ ಜನಾಪವಾದದ ಭಯದಿಂದ ಶ್ರೀರಾಮನ ಮನಸ್ಸು ಡೋಲಾಯಮಾನವಾಯಿತು. ಕಮಲಲೋಚನೆಯಾದ, ಕಪ್ಪಾಗಿಯೂ ಗುಂಗುರುಗಳಿಂದ ಕೂಡಿಯೂ ಇದ್ದ ಕೇಶರಾಶಿಯಿಂದ ಕಡುಚೆಲುವೆ ಯಾಗಿಯೂ ಕಾಣುತ್ತಿದ್ದ ಸೀತಾದೇವಿಗೆ ವಾನರ-ರಾಕ್ಷಸರ ಮಧ್ಯದಲ್ಲಿ ಶ್ರೀರಾಮನು ಹೇಳಿದನು :

ಯತ್ಕರ್ತವ್ಯಂ ಮನುಷ್ಯೇಣ ಧರ್ಷಣಾಂ ಪರಿಮಾರ್ಜತಾ ।
ತತ್ಕೃತಂ ಸಫಲಂ ಸೀತೇ ಶತ್ರುಹಸ್ತಾದಮರ್ಷಣಾತ್ ॥೧೩॥

"ಸೀತೆ! ತನಗಾದ ಅವಮಾನವನ್ನು ತೊಡೆದುಕೊಳ್ಳಲು ಮನುಷ್ಯನು ಯಾವ ಕರ್ತವ್ಯವನ್ನು ಮಾಡಬೇಕಾಗಿದ್ದಿತೋ–ಆ ಕರ್ತವ್ಯವನ್ನು ನಾನು ಮಾಡಿ ಮುಗಿಸಿದ್ದೇನೆ. ಶತ್ರುವಶಳಾಗಿದ್ದ ನಿನ್ನನ್ನು ಬಿಡುಗಡೆಮಾಡಿ ಸಫಲ ನಾದೆನು.

ನಿರ್ಜಿತಾ ಜೀವಲೋಕಸ್ಯ ತಪಸಾ ಭಾವಿತಾತ್ಮನಾ ।
ಅಗಸ್ತ್ಯೇನ ದುರಾಧರ್ಷಾ ಮುನಿನಾ ದಕ್ಷಿಣೇವ ದಿಕ್ ॥೧೪॥

ತಪಸ್ಸಿನಿಂದ ಸಂಭಾವಿತವಾದ ಅಂತಃಕರಣವುಳ್ಳ ಮಹರ್ಷಿಗಳಾದ ಅಗಸ್ತ್ಯರು ದಕ್ಷಿಣದಿಕ್ಕಿನಲ್ಲಿ ವಾಸಮಾಡುತ್ತಿದ್ದ ಜನರ ಹಿತಕ್ಕಾಗಿ ದಕ್ಷಿಣ ದಿಕ್ಕನ್ನು ಸ್ವಾಧೀನಪಡಿಸಿಕೊಂಡಿದ್ದ ಇಲ್ವಲ-ವಾತಾಪಿಗಳನ್ನು ಸಂಹರಿಸಿ ಆ ದಿಕ್ಕನ್ನು ಜಯಿಸಿದಂತೆ–ರಾವಣನನ್ನು ಸಂಹರಿಸಿ ಅವನ ವಶದಲ್ಲಿದ್ದ ನಿನ್ನನ್ನು ಗೆದ್ದುಕೊಂಡಿದ್ದೇನೆ.

ವಿದಿತಶ್ಚಾಸ್ತು ತೇ ಭದ್ರೇ ಯೋಽಯಂ ರಣಪರಿಶ್ರಮಃ ।
ಸಂತೀರ್ಣಃ ಸುಹೃದಾಂ ವೀರ್ಯಾನ್ನ ತ್ವದರ್ಥಂ ಮಯಾ ಕೃತಃ ॥೧೫॥

ಭದ್ರೇ! ನಿನಗೆ ಮಂಗಳವಾಗಲಿ. ಈ ಒಂದು ವಿಷಯವನ್ನು ನೀನು ತಿಳಿದುಕೊಳ್ಳಬೇಕಾಗಿದೆ. ನಾನು ಯುದ್ಧಕ್ಕಾಗಿ ಪರಿಶ್ರಮಿಸಿದ್ದು ಮತ್ತು

ಮಿತ್ರರ ಪರಾಕ್ರಮದ ಸಹಕಾರದಿಂದ ನಾನು ಯುದ್ಧದಲ್ಲಿ ಗೆದ್ದಿದ್ದು–ನಿನ್ನ ಸಲುವಾಗಿ ಅಲ್ಲ.

ರಕ್ಷತಾ ತು ಮಯಾ ವೃತ್ತಮಪವಾದಂ ಚ ಸರ್ವಶಃ ।
ಪ್ರಖ್ಯಾತಸ್ಯಾತ್ಮವಂಶಸ್ಯ ನ್ಯಙ್ಗಂ ಚ ಪರಿರಕ್ಷತಾ ॥೧೬॥

ನನ್ನ ಚಾರಿತ್ರ್ಯವನ್ನು ರಕ್ಷಿಸಿಕೊಳ್ಳುವ ಸಲುವಾಗಿಯೂ 'ಭಾರ್ಯಾಪಹಾರಿಯನ್ನು ಶಿಕ್ಷಿಸಲಾಗದವನು'–ಎಂದು ನನ್ನ ಮೇಲೆ ಬರಬಹುದಾಗಿದ್ದ ಅಪವಾದವನ್ನು ಕಳೆದುಕೊಳ್ಳುವ ಸಲುವಾಗಿಯೂ, ದುಷ್ಟ ಶಿಕ್ಷಕ-ಶಿಷ್ಟಪರಿಪಾಲಕರೆಂದು ವಿಖ್ಯಾತವಾಗಿದ್ದ ನನ್ನ ವಂಶಕ್ಕೆ ಉಂಟಾಗಿದ್ದ ಕಳಂಕವನ್ನು ತೊಡೆದುಹಾಕುವ ಸಲುವಾಗಿಯೂ ನಾನು ರಾವಣನನ್ನು ಸಂಹರಿಸಿ ನಿನ್ನನ್ನು ಬಿಡುಗಡೆ ಮಾಡಿದೆನು.

ಪ್ರಾಪ್ತಚಾರಿತ್ರಸಂದೇಹಾ ಮಮ ಪ್ರತಿಮುಖೇ ಸ್ಥಿತಾ ।
ದೀಪೋ ನೇತ್ರಾತುರಸ್ಯೇವ ಪ್ರತಿಕೂಲಾಸಿ ಮೇ ದೃಢಮ್ ॥೧೭॥

(ಚಿರಕಾಲ ಪರಪುರುಷನ ಮನೆಯಲ್ಲಿದ್ದ ಕಾರಣ) ನೀನು ಸಂದೇಹಿಸಬಹುದಾದ ಚಾರಿತ್ರ್ಯದಿಂದ ಕೂಡಿ ನನ್ನ ಸಮ್ಮುಖದಲ್ಲಿ ನಿಂತಿರುವೆ. ನೇತ್ರರೋಗಿಗೆ ದೀಪವು ಸಹ್ಯವಾಗುವುದಿಲ್ಲ. ಅದರಂತೆಯೇ ನನಗೆ ನೀನು ಪ್ರತಿಕೂಲಳಾಗಿ ಕಾಣುತ್ತಿರುವೆ.*

ತದ್ಗಚ್ಛ ತ್ವಾನುಜಾನೇಽದ್ಯ ಯಥೇಷ್ಟಂ ಜನಕಾತ್ಮಜೇ ।
ಏತಾ ದಶ ದಿಶೋ ಭದ್ರೇ ಕಾರ್ಯಮಸ್ತಿ ನ ಮೇ ತ್ವಯಾ ॥೧೮॥

ಆದುದರಿಂದ ಜಾನಕಿ! ನಿನ್ನ ಇಷ್ಟವಿದ್ದೆಡೆಗೆ ಹೋಗಲು ನಾನು ನಿನಗೆ ಅನುಜ್ಞೆಯನ್ನು ನೀಡುತ್ತಿದ್ದೇನೆ. ಈ ಹತ್ತು ದಿಕ್ಕುಗಳಲ್ಲಿ ಯಾವ ದಿಕ್ಕಿಗೆ

---

* ಇಲ್ಲಿ ವಾಲ್ಮೀಕಿಗಳು ಕೊಟ್ಟಿರುವ ಉಪಮಾನವು ಹೃದಯಂಗಮವಾಗಿದೆ. **ನೇತ್ರಾತುರಸ್ಯ ದೀಪ ಇವ**–ವಸ್ತುತಃ ದೀಪದಲ್ಲಿ ಯಾವ ದೋಷವೂ ಇಲ್ಲ. ಸೀತೆಯಲ್ಲಿಯೂ ಯಾವ ದೋಷವೂ ಇಲ್ಲ. ಇದು ಶ್ರೀರಾಮನಿಗೂ ಚೆನ್ನಾಗಿ ಗೊತ್ತಿದೆ. ಆದರೆ ನೇತ್ರರೋಗಿಗೆ ದೀಪವನ್ನು ನೋಡಲು ಸಾಧ್ಯವಾಗುವುದಿಲ್ಲ. ಅಂತೆಯೇ ಲೋಕಾಪವಾದವೆಂಬ ರೋಗದಿಂದ ಪೀಡಿತನಾಗಿರುವ ಶ್ರೀರಾಮನಿಗೆ ಸೀತೆಯ ಸಾನ್ನಿಧ್ಯವು ಹಿತಕರವಾಗಿ ಕಾಣುತ್ತಿಲ್ಲ. ರಾಮನಿಗೆ ಸೀತೆಯು ದೀಪದಂತೆ ಪರಿಶುದ್ಧಳೆಂದು ತಿಳಿದಿದ್ದರೂ ಜನಾಪವಾದದ ಭೀತಿಯಿಂದ ಅವನು ಹೀಗೆ ಹೇಳಿದ್ದಾನೆ.

ಬೇಕಾದರೂ ನೀನು ಹೋಗಬಹುದು. ಮುಂದೆ ನಿನ್ನಿಂದ ನನಗೆ ಯಾವ ಕಾರ್ಯವೂ ಆಗಬೇಕಾಗಿಲ್ಲ.

ಕಃ ಪುಮಾನ್ಹಿ ಕುಲೇ ಜಾತಃ ಸ್ತ್ರಿಯಂ ಪರಗೃಹೋಷಿತಾಮ್ ।
ತೇಜಸ್ವೀ ಪುನರಾದದ್ಯಾತ್ಸುಹೃಲ್ಲೋಭೇನ ಚೇತಸಾ ॥೧೯॥

ಸತ್ಕುಲಪ್ರಸೂತನಾದ ಮತ್ತು ಪರಾಕ್ರಮಿಯಾದ ಯಾವ ಮನು ಷ್ಯನು ತಾನೇ ಪರಪುರುಷನ ಮನೆಯಲ್ಲಿ ಬಹಳ ದಿವಸಗಳಿದ್ದ ಸ್ತ್ರೀಯನ್ನು 'ಇವಳು ನನ್ನೊಡನೆ ಚಿರಕಾಲವಿದ್ದವಳು. ನನಗೆ ಅತ್ಯಂತ ಪ್ರಿಯಳಾದ ವಳು'–ಎಂಬ ಲೋಭದಿಂದ ಕೂಡಿದ ಮನಸ್ಸಿನಿಂದ ಪರಿಗ್ರಹಿಸುವನು?

ರಾವಣಾಙ್ಕಪರಿಭ್ರಷ್ಟಾಂ ದೃಷ್ಟಾಂ ದುಷ್ಟೇನ ಚಕ್ಷುಷಾ ।
ಕಥಂ ತ್ವಾಂ ಪುನರಾದದ್ಯಾಂ ಕುಲಂ ವ್ಯಪದಿಶನ್ಮಹತ್ ॥೨೦॥

ರಾವಣನ ತೊಡೆಯ ಸಂಪರ್ಕದಿಂದ ದೂಷಿತೆಯಾಗಿ ಅವನ ದುಷ್ಟ ವಾದ ಕಣ್ಣುಗಳಿಂದ ನೋಡಲ್ಪಟ್ಟಿರುವೆ. ನನ್ನ ಕುಲವನ್ನು ಮಹಾಕುಲ ವೆಂದೂ, ನನ್ನನ್ನು ಮಹಾಕುಲಸಂಭೂತನೆಂದೂ–ಹೇಳಿಕೊಳ್ಳುವ ನಾನು ಅಂತಹ ನಿನ್ನನ್ನು ಹೇಗೆ ತಾನೇ ಪುನಃ ಪರಿಗ್ರಹಿಸಲಿ?

ಯದರ್ಥಂ ನಿರ್ಜಿತಾ ಮೇ ತ್ವಂ ಸೋಽಯಮಾಸಾದಿತೋ ಮಯಾ ।
ನಾಸ್ತಿ ಮೇ ತ್ವಯ್ಯಭಿಷ್ವಙ್ಗೋ ಯಥೇಷ್ಟಂ ಗಮ್ಯತಾಮಿತಃ ॥೨೧॥

ನನ್ನ ವಂಶದ ಕಳಂಕವನ್ನು ತೊಡೆದುಹಾಕುವ ಸಲುವಾಗಿ ಮತ್ತು ಅಪಮಾನವನ್ನು ಪರಿಹರಿಸಿಕೊಳ್ಳುವ ಸಲುವಾಗಿ ನಾನು ನಿನ್ನನ್ನು ಶತ್ರುವಿನ ಹಿಡಿತದಿಂದ ಬಿಡುಗಡೆ ಮಾಡಬೇಕಾಗಿದ್ದಿತು. ಶತ್ರುವಿನೊಡನೆ ಯುದ್ಧ ಮಾಡಿ ಅವನನ್ನು ಸಂಹರಿಸಿ ನಿನ್ನನ್ನು ನಾನು ಗೆದ್ದುಕೊಂಡೆನು. ಇದರಿಂದ ನಾನು ನನ್ನ ಪ್ರತಿಜ್ಞೆಯನ್ನು ಪೂರೈಸಿಕೊಂಡೆನು. ಈಗ ನನಗೆ ನಿನ್ನ ಮೇಲೆ ಅನುರಾಗವಾಗಲೀ, ಆಸಕ್ತಿಯಾಗಲೀ ಇರುವುದಿಲ್ಲ. ಆದುದರಿಂದ ನೀನು ಇಷ್ಟಬಂದಲ್ಲಿಗೆ ಹೋಗಬಹುದಾಗಿದೆ.

ತದದ್ಯ ವ್ಯಾಹೃತಂ ಭದ್ರೇ ಮಯೈತತ್ಕೃತಬುದ್ಧಿನಾ ।
ಲಕ್ಷ್ಮಣೇ ಭರತೇ ವಾ ತ್ವಂ ಕುರು ಬುದ್ಧಿಂ ಯಥಾಸುಖಮ್ ॥೨೨॥

ಶತ್ರುಘ್ನೇ ವಾಥ ಸುಗ್ರೀವೇ ರಾಕ್ಷಸೇನ್ದ್ರೇ ವಿಭೀಷಣೇ ।
ನಿವೇಶಯ ಮನಃ ಸೀತೇ ಯಥಾ ವಾ ಸುಖಮಾತ್ಮನಃ ॥೨೩॥

ಮಂಗಳಸ್ವರೂಪಳೇ! ನಾನು ಈ ಮೊದಲೇ ಬುದ್ಧಿಯಲ್ಲಿ ದೃಢವಾಗಿ ನಿಶ್ಚಯಿಸಿ ಈ ವಿಷಯವನ್ನು ನಿನಗೆ ಹೇಳುತ್ತಿದ್ದೇನೆ. ನಿನಗೆ ಸುಖವೆನಿಸುವುದಾಗಿದ್ದರೆ ಲಕ್ಷ್ಮಣನ ಆಶ್ರಯದಲ್ಲಾಗಲೀ, ಭರತ-ಶತ್ರುಘ್ನರ ಆಶ್ರಯದಲ್ಲಾಗಲೀ ನೀನಿರಲು ನಿಶ್ಚಯಿಸಬಹುದಾಗಿದೆ. ನಿನ್ನ ಮನಸ್ಸಿಗೆ ಸುಖವಾಗುವುದಾಗಿದ್ದರೆ–ನೀನು ಸುಗ್ರೀವನ ಆಶ್ರಯದಲ್ಲಾಗಲೀ, ವಿಭೀಷಣನ ಆಶ್ರಯದಲ್ಲಾಗಲೀ ಇರಲು ಮನಸ್ಸುಮಾಡಬಹುದು.

ನ ಹಿ ತ್ವಾಂ ರಾವಣೋ ದೃಷ್ಟ್ವಾ ದಿವ್ಯರೂಪಾಂ ಮನೋರಮಾಮ್ ।
ಮರ್ಷಯೇತ ಚಿರಂ ಸೀತೇ ಸ್ವಗೃಹೇ ಪರ್ಯವಸ್ಥಿತಾಮ್ ॥೨೪॥

ಸೀತೆ! ದಿವ್ಯವಾದ ರೂಪ-ಲಾವಣ್ಯಗಳಿಂದ ಕೂಡಿರುವ, ಮನಸ್ಸಿಗೆ ಆಹ್ಲಾದಕರಳಾಗಿರುವ, ತನ್ನ ಮನೆಯಲ್ಲಿಯೇ ವಾಸವಾಗಿದ್ದ ನಿನ್ನಂತಹ ಅನುಪಮಸುಂದರಿಯನ್ನು ನೋಡುತ್ತಾ ರಾವಣನು ತನಗಾಗುತ್ತಿದ್ದ ಕಾಮೋದ್ರೇಕವನ್ನು ಚಿರಕಾಲದವರೆಗೆ ಸಹಿಸಿಕೊಂಡಿದ್ದಿರಲಾರನು.”

ಆ ಸಮಯದಲ್ಲಿ ಪ್ರಿಯವಾದ ಮಾತುಗಳನ್ನು ಕೇಳಲು ಆಸಕ್ತಿಯಿಂದಿದ್ದ ಮಾನಿನಿಯಾದ ಸೀತಾದೇವಿಯು ಬಹಳ ಕಾಲಾನಂತರ ಪ್ರಿಯ ತಮನ ಬಾಯಿಂದ ಅತ್ಯಂತ ಕಠೋರವಾದ ಇಂತಹ ಮಾತುಗಳನ್ನು ಕೇಳಿ ಆನೆಯ ಸೊಂಡಿಲಿನಿಂದ ಹೊಸಕಿಹಾಕಲ್ಪಟ್ಟ ಬಳ್ಳಿಯಂತೆ ಸೊರಗಿ-ಸೊಪ್ಪಾಗಿ ಕಣ್ಣೀರು ಸುರಿಸಿದಳು.

೧೧೫ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೧೧೬ನೆಯ ಸರ್ಗ

ಸೀತೆಯಿಂದ ಶ್ರೀರಾಮನಿಗೆ ನಿಂದಾಪೂರ್ವಕವಾದ ಉತ್ತರ : ತನ್ನ ಸತೀತ್ವವನ್ನು ಸಿದ್ಧಪಡಿಸಲು ಸೀತೆಯ ಅಗ್ನಿಪ್ರವೇಶ

ಏವಮುಕ್ತಾ ತು ವೈದೇಹೀ ಪರುಷಂ ರೋಮಹರ್ಷಣಮ್ ।
ರಾಘವೇಣ ಸರೋಷೇಣ ಭೃಶಂ ಪ್ರವ್ಯಥಿತಾಭವತ್ ॥೧॥

ಶ್ರೀರಾಮನು ಕುಪಿತನಾಗಿ ಹೇಳಿದ ಅತಿಕಠೋರವೂ ಮೈನವಿರೇಳುವುದೂ ಆದ ಮಾತುಗಳನ್ನು ಕೇಳಿ ವೈದೇಹಿಯು ಅತ್ಯಂತದುಃಖಿತೆಯಾದಳು.

ಅಂತಹ ದೊಡ್ಡ ಜನಸಮುದಾಯದಲ್ಲಿ ಪತಿಯ ಇಂತಹ ಅತಿ ಭಯಂಕರವಾದ ಮಾತನ್ನು ಕೇಳಿ ಸೀತೆಯು ಲಜ್ಜೆಯಿಂದ ತಲೆತಗ್ಗಿಸಿದಳು. ಶ್ರೀರಾಮನ ಬಾಣರೂಪವಾದ ಮಾತುಗಳಿಂದ ಚುಚ್ಚಲ್ಪಟ್ಟ ಅವಳು ಬಾಣಗಳಿಂದಲೇ ಪೀಡಿತಳಾದಂತೆ ತನ್ನ ಅಂಗಾಂಗಗಳಲ್ಲಿಯೇ ಹುದುಗಿ ಹೋದಳು. ಧಾರಾಕಾರವಾಗಿ ಕಣ್ಣೀರು ಸುರಿಸಿದಳು. ಕಣ್ಣೀರಿನಿಂದ ಸಂಪೂರ್ಣವಾಗಿ ನೆನೆದುಹೋಗಿದ್ದ ಮುಖವನ್ನು ಸೆರಗಿನಿಂದ ಒರೆಸಿ ಕೊಳ್ಳುತ್ತಾ ಗದ್ಗದವಾದ ಮಾತುಗಳಿಂದ ಮೆಲ್ಲ-ಮೆಲ್ಲನೆ ಪತಿಯನ್ನು ಕುರಿತು ಹೇಳತೊಡಗಿದಳು :

ಕಿಂ ಮಾಮಸದೃಶಂ ವಾಕ್ಯಮೀದೃಶಂ ಶ್ರೋತ್ರದಾರುಣಮ್ ।
ರೂಕ್ಷಂ ಶ್ರಾವಯಸೇ ವೀರ ಪ್ರಾಕೃತಃ ಪ್ರಾಕೃತಾಮಿವ ॥೫॥

"ವೀರನೇ! ನಿನ್ನಂತಹವನು ಹೇಳಲು ಯೋಗ್ಯವಲ್ಲದ–ಶೋಕವನ್ನುಂಟುಮಾಡತಕ್ಕುದೂ, ಅತಿದಾರುಣವೂ, ಕರ್ಣಕಠೋರವೂ ಆದ ಇಂತಹ ಮಾತುಗಳನ್ನು–ಸಂಸ್ಕೃತಿಯೇ ಇಲ್ಲದ ಅಸಭ್ಯನಾದ ಮನುಷ್ಯನೊಬ್ಬನು ಸಂಸ್ಕಾರಹೀನಳಾದ ಅಸಭ್ಯಳಾದ ಹೆಂಗಸಿಗೆ ಹೇಳುವಂತೆ ಹೇಳುತ್ತಿರುವೆಯೇಕೆ?

ನ ತಥಾಸ್ಮಿ ಮಹಾಬಾಹೋ ಯಥಾ ತ್ವಮವಗಚ್ಛಸಿ ।
ಪ್ರತ್ಯಯಂ ಗಚ್ಛ ಮೇ ಯೇನ ಚಾರಿತ್ರೇಣೈವ ತೇ ಶಪೇ ॥೬॥

ಮಹಾಬಾಹುವೇ! ನೀನು ಭಾವಿಸಿಕೊಂಡಿರುವಂತೆ ನಾನಿಲ್ಲ. ನನ್ನಲ್ಲಿ ವಿಶ್ವಾಸವನ್ನಿಡು. ನನ್ನ ಚಾರಿತ್ರ್ಯದ ಮೇಲೆ ಆಣೆಯಿಟ್ಟು ಹೇಳುತ್ತೇನೆ. ನಾನು ಸಂದೇಹಿಸಲು ಖಂಡಿತವಾಗಿಯೂ ಯೋಗ್ಯಳಾದವಳಲ್ಲ.

ಪೃಥಕ್ಸ್ತ್ರೀಣಾಂ ಪ್ರಚಾರೇಣ ಜಾತಿಂ ತಾಂ ಪರಿಶಙ್ಕಸೇ ।
ಪರಿತ್ಯಜೇಮಾಂ ಶಙ್ಕಾಂ ತು ಯದಿ ತೇಽಹಂ ಪರೀಕ್ಷಿತಾ ॥೭॥

ಅಸಭ್ಯಸ್ತ್ರೀಯರ ಆಚರಣೆಯನ್ನೇ ನೋಡಿ ನೀನು ಸ್ತ್ರೀಜಾತಿಯನ್ನೇ ಸಂಶಯದೃಷ್ಟಿಯಿಂದ ನೋಡುವುದು ಉಚಿತವಲ್ಲ. ನೀನು ನನ್ನನ್ನು

ಚೆನ್ನಾಗಿ ಪರೀಕ್ಷಿಸಿರುವುದೇ ಆದರೆ ಹೀಗೆ ಸಂಶಯಿಸಲು ಕಾರಣವೇ ಇಲ್ಲ. ಪುನಃ ನನ್ನ ಆಗಿನ ಪರಿಸ್ಥಿತಿಯನ್ನು ವಿವರಿಸಿ ಹೇಳುತ್ತೇನೆ. ಆಗಲಾದರೂ ನೀನು ನಿನ್ನ ಈ ಸಂದೇಹವನ್ನು ಪರಿತ್ಯಜಿಸು.

ಯದ್ಯಹಂ ಗಾತ್ರಸಂಸ್ಪರ್ಶಂ ಗತಾಸ್ಮಿ ವಿವಶಾ ಪ್ರಭೋ ।
ಕಾಮಕಾರೋ ನ ಮೇ ತತ್ರ ದೈವಂ ತತ್ರಾಪರಾಧ್ಯತಿ ॥೮॥

ಪ್ರಭುವೇ! ರಾವಣನು ನನ್ನನ್ನು ಅಪಹರಿಸಿದ ಸಮಯದಲ್ಲಿ ನಾನು ಅಸ್ವತಂತ್ರಳಾಗಿದ್ದೆನು. ಬಲಾತ್ಕಾರದಿಂದ ಒಯ್ಯಲ್ಪಡುತ್ತಿದ್ದೆನು. ನಾನು ಸ್ವೇಚ್ಛೆಯಿಂದ ರಾವಣನ ವಶಳಾಗಿರಲಿಲ್ಲ. ಪರಪುರುಷನಿಂದ ಶರೀರದ ಸ್ಪರ್ಶವಾದುದು ನಿಶ್ಚಯವಾದರೂ ಇದರಲ್ಲಿ ನನ್ನ ಅಪರಾಧವೇನೂ ಇಲ್ಲ. ಇದು ದೈವದ ಅಪರಾಧ.

ಮದಧೀನಂ ತು ಯತ್ತನ್ಮೇ ಹೃದಯಂ ತ್ವಯಿ ವರ್ತತೇ ।
ಪರಾಧೀನೇಷು ಗಾತ್ರೇಷು ಕಿಂ ಕರಿಷ್ಯಾಮ್ಯನೀಶ್ವರಾ ॥೯॥

ಆ ಸಮಯದಲ್ಲಿ ನನ್ನ ಅಧೀನದಲ್ಲಿದ್ದುದು ನನ್ನ ಮನಸ್ಸು ಮಾತ್ರ. ಅದು ಪರಕೀಯವಾಗಲು ಸಾಧ್ಯವೇ ಇಲ್ಲ. ಆ ನನ್ನ ಮನಸ್ಸನ್ನು ನಿನ್ನಲ್ಲಿಯೇ ಲೀನಗೊಳಿಸಿದ್ದೆನು. ನನ್ನ ಶರೀರವು ಪರಾಧೀನವಾಗಿದ್ದರೆ–ನನ್ನನ್ನು ಬಲಾತ್ಕಾರದಿಂದ ಎತ್ತಿಕೊಂಡು ಒಯ್ಯುತ್ತಿದ್ದರೆ–ಅಬಲೆಯಾದ ಅಸ್ವತಂತ್ರಳಾಗಿದ್ದ ನಾನೇನು ಮಾಡಬಲ್ಲವಳಾಗಿದ್ದೆನು? ಆ ಸಮಯದಲ್ಲಿ ಏನು ಮಾಡಲು ತಾನೇ ನನಗೆ ಸಾಧ್ಯವಿದ್ದಿತು?

ಸಹ ಸಂವೃದ್ಧಭಾವಾಚ್ಚ ಸಂಸರ್ಗೇಣ ಚ ಮಾನದ ।
ಯದ್ಯಹಂ ತೇ ನ ವಿಜ್ಞಾತಾ ಹತಾ ತೇನಾಸ್ಮಿ ಶಾಶ್ವತಮ್ ॥೧೦॥

ಇತರರಿಗೆ ಗೌರವವನ್ನು ತೋರಿಸುವವನೇ! ನನ್ನ ವಿಷಯದಲ್ಲಿ ಮರ್ಯಾದೆಗೆ ಹಾನಿಯನ್ನುಂಟುಮಾಡುತ್ತಿರುವವನೇ! ನಮ್ಮಿಬ್ಬರಲ್ಲಿ ಅನುರಾಗವು ದಿನ-ದಿನಕ್ಕೂ ಹೆಚ್ಚುತ್ತಲೇ ಇದ್ದಿತು. ನಾವಿಬ್ಬರೂ ಜೊತೆ-ಜೊತೆಯಲ್ಲೇ ಇರುತ್ತಿದ್ದೆವು. ಹೀಗಿದ್ದೂ ನೀನು ನನ್ನ ಸಹಜಸ್ವಭಾವ ಗುಣಗಳನ್ನು ತಿಳಿಯದವನಾಗಿದ್ದರೆ–ನಾನು ಶಾಶ್ವತವಾಗಿ ಸತ್ತು ಹೋದಂತೆಯೇ ಸರಿ. ನಾನಿನ್ನು ಬದುಕಿದ್ದೂ ಪ್ರಯೋಜನವಿಲ್ಲ.

ಪ್ರೇಷಿತಸ್ತೇ ಯದಾ ವೀರೋ ಹನುಮಾನವಲೋಕಕಃ ।
ಲಙ್ಕಾಸ್ಥಾಹಂ ತ್ವಯಾ ವೀರ ಕಿಂ ತದಾ ನ ವಿಸರ್ಜಿತಾ ॥೧೧॥

ಲಂಕೆಯಲ್ಲಿದ್ದ ನನ್ನನ್ನು ನೋಡಲು (ನನ್ನ ಗುಣಚರ್ಯೆಗಳನ್ನು ತಿಳಿದು ಬರಲು) ಮಹಾವೀರನಾದ ಮಹಾಮೇಧಾವಿಯಾದ ಹನುಮಂತನನ್ನೇ ನೀನು ಕಳುಹಿಸಿದ್ದೆಯಲ್ಲವೇ? ನಿನಗೇನಾದರೂ ಈ ವಿಧವಾದ ಸಂದೇಹವುಂಟಾಗಿದ್ದಲ್ಲಿ ಆಗಲೇ ನೀನು ನನ್ನನ್ನೇಕೆ ಪರಿತ್ಯಜಿಸಲಿಲ್ಲ?

ಪ್ರತ್ಯಕ್ಷಂ ವಾನರೇನ್ದ್ರಸ್ಯ ತ್ವದ್ವಾಕ್ಯಸಮನನ್ತರಮ್ ।
ತ್ವಯಾ ಸಂತ್ಯಕ್ತಯಾ ವೀರ ತ್ಯಕ್ತಂ ಸ್ಯಾಜ್ಜೀವಿತಂ ಮಯಾ ॥೧೨॥

ಆ ಸಮಯದಲ್ಲಿ ಹನುಮಂತನ ಮೂಲಕ ನೀನು ನನ್ನನ್ನು ಪರಿತ್ಯಜಿಸುವ ವಾರ್ತೆಯನ್ನು ತಿಳಿಸಿದ್ದರೆ–ಆಗಲೇ ಅವನ ಮುಂದೆಯೇ ನಾನು ಪ್ರಾಣಪರಿತ್ಯಾಗಮಾಡುತ್ತಿದ್ದೆನು.

ನ ವೃಥಾ ತೇ ಶ್ರಮೋಽಯಂ ಸ್ಯಾತ್ಸಂಶಯೇ ನ್ಯಸ್ಯ ಜೀವಿತಮ್ ।
ಸುಹೃಜ್ಜನಪರಿಕ್ಲೇಶೋ ನ ಚಾಯಂ ನಿಷ್ಫಲಸ್ತವ ॥೧೩॥

ಹಾಗಾಗಿದ್ದರೆ–ಯುದ್ಧಮಾಡುವುದರ ಮೂಲಕ ನಿನ್ನ ಜೀವನವನ್ನೂ ಸಂಶಯದಲ್ಲಿಟ್ಟು ವ್ಯರ್ಥವಾಗಿ ಶ್ರಮಪಡುವ ಅಗತ್ಯವಿರಲಿಲ್ಲ. ನಿನ್ನ ಸುಹೃದರು ಕ್ಲೇಶಪಡುವ ಅಗತ್ಯವೂ ಇರಲಿಲ್ಲ. ನಾನು ಆಗಲೇ ಜೀವತ್ಯಾಗ ಮಾಡಿದ್ದರೆ ಇದೊಂದಕ್ಕೂ ಅವಕಾಶವಾಗುತ್ತಿರಲಿಲ್ಲ.

ತ್ವಯಾ ತು ನರಶಾರ್ದೂಲ ಕ್ರೋಧಮೇವಾನುವರ್ತತಾ ।
ಲಘುನೇವ ಮನುಷ್ಯೇಣ ಸ್ತ್ರೀತ್ವಮೇವ ಪುರಸ್ಕೃತಮ್ ॥೧೪॥

ನರಶ್ರೇಷ್ಠನೇ! ಕೋಪವನ್ನೇ ಅನುಸರಿಸುತ್ತಿರುವ ನೀನು ಪಾಮರನಾದ ಮನುಷ್ಯನಂತೆ ಸಾಧಾರಣಸ್ತ್ರೀಯೊಬ್ಬಳ ಚಾಪಲ್ಯವನ್ನೇ ಪುರಸ್ಕರಿಸುತ್ತಿರುವೆ.

ಅಪದೇಶೇನ ಜನಕಾನ್ನೋತ್ಪತ್ತಿರ್ವಸುಧಾತಲಾತ್ ।
ಮಮ ವೃತ್ತಂ ಚ ವೃತ್ತಜ್ಞ ಬಹು ತೇನ ಪುರಸ್ಕೃತಮ್ ॥೧೫॥

ಸದಾಚಾರವನ್ನು ತಿಳಿದಿರುವವನೇ! ಯಜ್ಞಭೂಮಿಯಲ್ಲಿ ನಾನು ಜನಕನಿಗೆ ದೊರೆತ ಕಾರಣ ಈ ವ್ಯಾಜದಿಂದ ನಾನು 'ಜಾನಕೀ' ಎಂಬ

ಹೆಸರನ್ನು ಪಡೆದಿದ್ದೇನೆ. ವಾಸ್ತವವಾಗಿ ನಾನು ಭೂಮಿಯಿಂದ ಹುಟ್ಟಿದವಳು. ಅಯೋನಿಜೆ. ಮಾನವಜಾತಿಗಿಂತಲೂ ವಿಲಕ್ಷಣವಾದ ರೀತಿಯಲ್ಲಿ ಹುಟ್ಟಿದವಳು. ಅಂತೆಯೇ ನನ್ನ ಚಾರಿತ್ರ್ಯವೂ ವಿಲಕ್ಷಣವಾದುದು ಮತ್ತು ದಿವ್ಯವಾದುದು. ಇದಾವುದನ್ನೂ ನೀನು ಪುರಸ್ಕರಿಸುತ್ತಿಲ್ಲ.

ನ ಪ್ರಮಾಣೀಕೃತಃ ಪಾಣಿರ್ಬಾಲ್ಯೇ ಮಮ ನಿಪೀಡಿತಃ ।
ಮಮ ಭಕ್ತಿಶ್ಚ ಶೀಲಂ ಚ ಸರ್ವಂ ತೇ ಪೃಷ್ಠತಃ ಕೃತಮ್ ॥೧೬॥

ಬಾಲಕನಾದ ನೀನು ನನ್ನ ಬಾಲ್ಯಾವಸ್ಥೆಯಲ್ಲಿಯೇ ನನ್ನ ಪಾಣಿಗ್ರಹಣಮಾಡಿದೆ. ಅದನ್ನೂ ಈಗ ನೀನು ಪ್ರಮಾಣೀಕರಿಸುತ್ತಿಲ್ಲ. ನನ್ನ ಭಕ್ತಿ, ಶೀಲ ಎಲ್ಲವನ್ನೂ ನೀನು ಕಡೆಗಾಣಿಸಿಬಿಟ್ಟೆ."

ಹೀಗೆ ಹೇಳಿಕೊಂಡು ಸೀತೆಯು ಬಿಕ್ಕಿ-ಬಿಕ್ಕಿ ಅಳುತ್ತಿದ್ದಳು. ಆಕೆಯ ಬಾಯಿಂದ ಮಾತುಗಳೇ ಸರಿಯಾಗಿ ಹೊರಡುತ್ತಿರಲಿಲ್ಲ. ಕಣ್ಣುಗಳಲ್ಲಿ ನೀರು ಧಾರಾಕಾರವಾಗಿ ಸುರಿಯುತ್ತಿದ್ದಿತು. ಅನಂತರ ದುಃಖಿತನೂ ಚಿಂತಾಮಗ್ನನೂ ಆಗಿದ್ದ ಲಕ್ಷ್ಮಣನಿಗೆ ಸೀತೆಯು ಹೇಳಿದಳು :

ಚಿತಾಂ ಮೇ ಕುರು ಸೌಮಿತ್ರೇ ವ್ಯಸನಸ್ಯಾಸ್ಯ ಭೇಷಜಮ್ ।
ಮಿಥ್ಯಾಪವಾದೋಪಹತಾ ನಾಹಂ ಜೀವಿತುಮುತ್ಸಹೇ ॥೧೮॥

"ಲಕ್ಷ್ಮಣ! ನನಗಾಗಿ ಚಿತೆಯನ್ನು ಸಿದ್ಧಪಡಿಸು. ನನ್ನ ಇಂದಿನ ದುಃಖಕ್ಕೆ ಅಗ್ನಿಪ್ರವೇಶವೇ ದಿವ್ಯೌಷಧವಾಗಿದೆ. ಮಿಥ್ಯಾಪವಾದದಿಂದ ಕಳಂಕಿತಳಾಗಿರುವ ನಾನಿನ್ನು ಬದುಕಿರಲಾರೆನು.

ಅಪ್ರೀತೇನ ಗುಣೈರ್ಭರ್ತ್ರಾ ತ್ಯಕ್ತಾಯಾ ಜನಸಂಸದಿ ।
ಯಾ ಕ್ಷಮಾ ಮೇ ಗತಿರ್ಗನ್ತುಂ ಪ್ರವೇಕ್ಷ್ಯೇ ಹವ್ಯವಾಹನಮ್ ॥೧೯॥

ನನ್ನ ಪ್ರಭುವು ನನ್ನ ಗುಣ-ಶೀಲಗಳಿಂದ ಪ್ರಸನ್ನನಾಗಿಲ್ಲ. ಇವನು ನನ್ನನ್ನು ಈ ತುಂಬಿದ ಸಭೆಯಲ್ಲಿ ಪರಿತ್ಯಾಗಮಾಡಿದ್ದಾನೆ. ಈ ಸಮಯದಲ್ಲಿ ನನಗೆ ಯಾವ ಮಾರ್ಗವು ಉಚಿತವಾಗಿದೆಯೋ ಆ ಮಾರ್ಗವನ್ನು ಹಿಡಿದು ನಾನು ಹೋಗುತ್ತೇನೆ. ಈಗ ನನಗೆ ಇರುವ ಮಾರ್ಗವೆಂದರೆ ಅಗ್ನಿಪ್ರವೇಶವೊಂದೇ. ಆದುದರಿಂದ ನಾನು ಅಗ್ನಿಪ್ರವೇಶಮಾಡುತ್ತೇನೆ. ಚಿತೆಯನ್ನು ಸಿದ್ಧಗೊಳಿಸು."

ವೈದೇಹಿಯು ಹೀಗೆ ಹೇಳುತ್ತಲೇ ಶತ್ರುವೀರಹಂತಕನಾದ ಲಕ್ಷ್ಮಣನು ಕೋಪಾವಿಷ್ಟನಾಗಿ ಶ್ರೀರಾಮನ ಕಡೆಗೆ ನೋಡಿದನು. ಸೀತೆಗಾದ ಅವಮಾನವನ್ನು ಅವನಿಗೆ ಸಹಿಸಲಾಗಲಿಲ್ಲ.

ಆದರೆ ಶ್ರೀರಾಮನ ಮುಖಲಕ್ಷಣದಿಂದಲೇ ಅವನ ಮನಸ್ಸಿನಲ್ಲಿರುವುದನ್ನು ತಿಳಿದ ಸೌಮಿತ್ರಿಯು ಶ್ರೀರಾಮನ ಅಭಿಮತದಂತೆಯೇ ಚಿತೆಯನ್ನು ಸಿದ್ಧಪಡಿಸಿದನು.

ನ ಹಿ ರಾಮಂ ತದಾ ಕಶ್ಚಿತ್ಕಾಲಾನ್ತಕಯಮೋಪಮಮ್ ।
ಅನುನೇತುಮಥೋ ವಕ್ತುಂ ದ್ರಷ್ಟುಂ ವಾಪ್ಯಶಕತ್ಸುಹೃತ್ ॥೨೨॥

ಆ ಸಮಯದಲ್ಲಿ ಶ್ರೀರಾಮನು ಪ್ರಲಯಕಾಲದ ಯಮರಾಜನಂತೆಯೇ ಸಮಸ್ತರಿಗೂ ಭಯಂಕರನಾಗಿ ಕಾಣುತ್ತಿದ್ದನು. ಆಗ ಅವನನ್ನು ಸಮಾಧಾನಪಡಿಸುವುದಕ್ಕಾಗಲೀ, ಅವನಿಗೆ ಹಿತವಾದ ಮಾತನ್ನು ಹೇಳುವುದಕ್ಕಾಗಲೀ, ಅವನ ಕಡೆಗೆ ನೋಡುವುದಕ್ಕಾಗಲೀ–ಯಾವ ಮಿತ್ರನಿಗೂ ಸಾಧ್ಯವಿರಲಿಲ್ಲ.

ಸೀತಾದೇವಿಯು ತಲೆತಗ್ಗಿಸಿಕೊಂಡು ನಿಂತಿದ್ದ ಶ್ರೀರಾಮನಿಗೆ ಪ್ರದಕ್ಷಿಣೆಮಾಡಿ ಧಗ-ಧಗನೆ ಉರಿಯುತ್ತಿದ್ದ ಯಜ್ಞೇಶ್ವರನ ಬಳಿಗೆ ಹೋದಳು. ದೇವತೆಗಳಿಗೂ ಬ್ರಾಹ್ಮಣರಿಗೂ ನಮಸ್ಕಾರಮಾಡಿ ಅಗ್ನಿಯ ಬಳಿಯಲ್ಲಿ ಕೈಜೋಡಿಸಿ ನಿಂತು ಹೇಳಿದಳು :

ಯಥಾ ಮೇ ಹೃದಯಂ ನಿತ್ಯಂ ನಾಪಸರ್ಪತಿ ರಾಘವಾತ್ ।
ತಥಾ ಲೋಕಸ್ಯ ಸಾಕ್ಷೀ ಮಾಂ ಸರ್ವತಃ ಪಾತು ಪಾವಕಃ ॥೨೫॥

“ನನ್ನ ಮನಸ್ಸು ಒಂದು ಕ್ಷಣವಾದರೂ ರಾಘವನನ್ನು ಬಿಟ್ಟು ಕದಲಲಿಲ್ಲವೆಂಬುದು ನಿಶ್ಚಯವಾದರೆ–ಲೋಕಸಾಕ್ಷಿಯಾದ ಅಗ್ನಿದೇವನು ನನ್ನನ್ನು ಸರ್ವರೀತಿಗಳಲ್ಲಿಯೂ ಕಾಪಾಡಲಿ.

ಯಥಾ ಮಾಂ ಶುದ್ಧಚಾರಿತ್ರಾಂ ದುಷ್ಟಾಂ ಜಾನಾತಿ ರಾಘವಃ ।
ತಥಾ ಲೋಕಸ್ಯ ಸಾಕ್ಷೀ ಮಾಂ ಸರ್ವತಃ ಪಾತು ಪಾವಕಃ ॥೨೬॥

ಶ್ರೀರಾಮನು ಭಾವಿಸಿರುವಂತೆ ನಾನು ದೂಷಿತಳಾಗಿರದೇ ಶುದ್ಧ ಚಾರಿತ್ರ್ಯವುಳ್ಳವಳಾಗಿದ್ದರೆ–ಲೋಕಸಾಕ್ಷಿಯಾದ ಅಗ್ನಿದೇವನು ನನ್ನನ್ನು ಸರ್ವರೀತಿಗಳಲ್ಲಿಯೂ ರಕ್ಷಿಸಲಿ.

ಕರ್ಮಣಾ ಮನಸಾ ವಾಚಾ ಯಥಾ ನಾತಿಚರಾಮ್ಯಹಮ್ ।
ರಾಘವಂ ಸರ್ವಧರ್ಮಜ್ಞಂ ತಥಾ ಮಾಂ ಪಾತು ಪಾವಕಃ ॥೨೭॥

ಕ್ರಿಯೆಯಿಂದಾಗಲೀ, ಮನಸ್ಸಿನಿಂದಾಗಲೀ, ಮಾತಿನಿಂದಾಗಲೀ, ಸರ್ವಧರ್ಮಜ್ಞನಾದ ಶ್ರೀರಾಮನನ್ನು ಅತಿಕ್ರಮಿಸಿ ನಡೆದಿಲ್ಲವೆಂಬುದು ನಿಶ್ಚಯವಾದರೆ–ಸರ್ವಸಾಕ್ಷಿಯಾದ ಅಗ್ನಿದೇವನು ನನ್ನನ್ನು ಸಂರಕ್ಷಿಸಲಿ.

ಆದಿತ್ಯೋ ಭಗವಾನ್ವಾಯುರ್ದಿಶಶ್ಚನ್ದ್ರಸ್ತಥೈವ ಚ ।
ಅಹಶ್ಚಾಪಿ ತಥಾ ಸಂಧ್ಯೇ ರಾತ್ರಿಶ್ಚ ಪೃಥಿವೀ ತಥಾ ।
ಯಥಾನ್ಯೇಽಪಿ ವಿಜಾನನ್ತಿ ತಥಾ ಚಾರಿತ್ರಸಂಯುತಾಮ್ ॥೨೮॥

ಪೂಜ್ಯನಾದ ಸೂರ್ಯ, ವಾಯು, ದಿಕ್ಕುಗಳು, ಚಂದ್ರ, ಹಗಲು, ರಾತ್ರಿ, ಎರಡು ಸಂಧ್ಯೆಗಳು, ಪೃಥ್ವೀ ಮತ್ತು ಇತರ ಎಲ್ಲ ದೇವತೆಗಳೂ ನನ್ನನ್ನು ಶುದ್ಧವಾದ ಚಾರಿತ್ರ್ಯವಿರುವವಳೆಂದು ತಿಳಿದಿರುವುದಾದರೆ–ಅಗ್ನಿ ದೇವನು ನನ್ನನ್ನು ಎಲ್ಲ ಕಡೆಗಳಿಂದಲೂ ರಕ್ಷಿಸಲಿ.”

ವೈದೇಹಿಯು ಹೀಗೆ ಹೇಳಿ ಅಗ್ನಿದೇವನಿಗೆ ಪ್ರದಕ್ಷಿಣೆಮಾಡಿ ಪ್ರಜ್ವಲಿ ಸುತ್ತಿದ್ದ ಯಜ್ಞೇಶ್ವರನನ್ನು ನಿಶ್ಚಲವಾದ ಮನಸ್ಸಿನಿಂದ ಪ್ರವೇಶಿಸಿದಳು. ಬಾಲಕರಿಂದಲೂ ವೃದ್ಧರಿಂದಲೂ ಸಮಾಕುಲವಾಗಿದ್ದ ಅಲ್ಲಿಯ ಜನಸಮು ದಾಯವೆಲ್ಲವೂ ವೈದೇಹಿಯು ಪ್ರಜ್ವಲಿಸುತ್ತಿದ್ದ ಅಗ್ನಿಯನ್ನು ಪ್ರವೇಶಿಸು ತ್ತಿದ್ದ ಅದ್ಭುತದೃಶ್ಯವನ್ನು ನೋಡಿತು. ಆಗ ತಾನೇ ಪುಟಕ್ಕೆ ಹಾಕಿದ ಚಿನ್ನದಂತೆ ಕಾಂತಿಯುಕ್ತಳಾಗಿದ್ದ, ಪುಟಕ್ಕೆ ಹಾಕಿದ ಚಿನ್ನದ ಆಭರಣಗಳನ್ನು ತೊಟ್ಟಿದ್ದ ಸೀತಾದೇವಿಯು ಸಮಸ್ತಜನರ ಸಮಕ್ಷದಲ್ಲಿಯೇ ಧಗ-ಧಗಿಸಿ ಉರಿಯುತ್ತಿದ್ದ ಬೆಂಕಿಯಲ್ಲಿ ಬಿದ್ದಳು. ಸುವರ್ಣದ ವೇದಿಯಂತೆ ಜಾಜ್ವಲ್ಯಮಾನವಾಗಿ ಪ್ರಕಾಶಿಸುತ್ತಿದ್ದ, ವಿಶಾಲನೇತ್ರೆಯಾದ ಸೀತಾದೇವಿಯು ಬೆಂಕಿಯಲ್ಲಿ ಬೀಳುತ್ತಿರುವುದನ್ನು ಸಮಸ್ತಪ್ರಾಣಿಗಳೂ ಅಚ್ಚರಿಯಿಂದ ವೀಕ್ಷಿಸಿದುವು. ಯಜ್ಞದಲ್ಲಿ ಪೂರ್ಣಾಹುತಿಯು ಯಜಮಾನನ ಕೈಗಳಿಂದ ಅಗ್ನಿಕುಂಡದಲ್ಲಿ ಬೀಳುವಂತೆ–ಮಹಾಭಾಗ್ಯಶಾಲಿನಿಯಾದ ಸೀತಾದೇವಿಯು ಉರಿಯುತ್ತಿ ರುವ ಅಗ್ನಿಯೊಳಗೆ ಪ್ರವೇಶಿಸುತ್ತಿರುವುದನ್ನು ಋಷಿಗಳೂ, ದೇವತೆಗಳೂ, ಗಂಧರ್ವರೂ ವೀಕ್ಷಿಸಿದರು. ಯಜ್ಞದಲ್ಲಿ ಮಂತ್ರಗಳ ಮೂಲಕ

ಸಂಸ್ಕೃತವಾದ ವಸೋರ್ಧಾರೆಯು ಯಜ್ಞೇಶ್ವರನಲ್ಲಿ ಬೀಳುವಂತೆ–ಸೀತಾದೇವಿಯು ಬೆಂಕಿಯಲ್ಲಿ ಬೀಳುತ್ತಿದ್ದುದನ್ನು ನೋಡಿ ಅಲ್ಲಿ ನೆರೆದಿದ್ದ ಎಲ್ಲ ಸ್ತ್ರೀಯರೂ ಗಟ್ಟಿಯಾಗಿ ಕೂಗಿಕೊಂಡರು. ಶಾಪಗ್ರಸ್ತಳಾದ ದೇವತೆಯೊಬ್ಬಳು ಸ್ವರ್ಗದಿಂದ ನರಕಕ್ಕೆ ಬೀಳುವಂತೆ–ಸೀತಾದೇವಿಯು ಬೆಂಕಿಯಲ್ಲಿ ಬೀಳುತ್ತಿರುವುದನ್ನು ಮೂರು ಲೋಕಗಳೂ, ದೇವ-ದಾನವ-ಗಂಧರ್ವರೂ ವೀಕ್ಷಿಸಿದರು. ಸೀತಾದೇವಿಯು ಅಗ್ನಿಯಲ್ಲಿ ಪ್ರವೇಶಿಸುತ್ತಿದ್ದಾಗ ವಾನರ-ರಾಕ್ಷಸರೆಲ್ಲರೂ ಗಟ್ಟಿಯಾಗಿ ಹಾಹಾಕಾರಗಳನ್ನು ಮಾಡಿದರು. ಅವರ ಆ ಅದ್ಭುತವಾದ ಆರ್ತನಾದವು ಎಲ್ಲ ದಿಕ್ಕುಗಳಲ್ಲಿಯೂ ಪ್ರತಿಧ್ವನಿಸಿತು.

೧೧೬ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೧೧೭ನೆಯ ಸರ್ಗ

ದೇವತೆಗಳೆಲ್ಲರೂ ಶ್ರೀರಾಮನ ಬಳಿಗೆ ಬಂದು ಶ್ರೀರಾಮನು ಭಗವಂತನೆಂಬುದನ್ನು ಪ್ರತಿಪಾದಿಸಿ ಸ್ತುತಿಸಿದುದು

ತತೋ ಹಿ ದುರ್ಮನಾ ರಾಮಃ ಶ್ರುತ್ವೈವ ವದತಾಂ ಗಿರಃ ।
ದಧ್ಯೌ ಮುಹೂರ್ತಂ ಧರ್ಮಾತ್ಮಾ ಬಾಷ್ಪವ್ಯಾಕುಲಲೋಚನಃ ॥೧॥

ಅನಂತರ ಧರ್ಮಾತ್ಮನಾದ ಶ್ರೀರಾಮನು ಕೋಲಾಹಲವನ್ನು ಮಾಡುತ್ತಿದ್ದ ವಾನರರ ಮತ್ತು ರಾಕ್ಷಸರ ಧ್ವನಿಗಳನ್ನು ಕೇಳುತ್ತಲೇ ಮನಸ್ಸಿನಲ್ಲಿಯೇ ದುಃಖಪಡುತ್ತಾ ಕಣ್ಣಗಳಲ್ಲಿ ನೀರು ತುಂಬಿಕೊಂಡು ಸ್ವಲ್ಪ ಹೊತ್ತಿನವರೆಗೆ ಯೋಚಿಸುತ್ತಾ ಕುಳಿತಿದ್ದನು.

ಆ ವೇಳೆಗೆ ಸರಿಯಾಗಿ ವಿಶ್ರವಸನ ಮಗನೂ ಮತ್ತು ಯಕ್ಷರಿಗೆ ಅಧಿಪತಿಯೂ ಆದ ಕುಬೇರ, ಪಿತೃದೇವತೆಗಳೊಡನೆ ಯಮಧರ್ಮ, ದೇವತೆಗಳಿಗೆ ಒಡೆಯನಾದ ಸಾವಿರ ಕಣ್ಣಿನ ಇಂದ್ರದೇವ, ನೀರುಗಳಿಗೆ ಈಶ್ವರನಾದ ವರುಣದೇವ, ಮುಕ್ಕಣ್ಣನಾದ ಮತ್ತು ವೃಷಭಧ್ವಜನಾದ ಮಹಾದೇವ, ಬ್ರಹ್ಮವಿದರಲ್ಲಿ ಶ್ರೇಷ್ಠನಾದ ಮತ್ತು ಸಮಸ್ತಲೋಕಗಳ ಸೃಷ್ಟಿಕರ್ತನಾದ ಬ್ರಹ್ಮ–ಇವರೆಲ್ಲರೂ ಸೂರ್ಯನ ಕಾಂತಿಗೆ ಸಮಾನವಾದ ಕಾಂತಿಯನ್ನು ಹೊಂದಿದ್ದ ವಿಮಾನಗಳಲ್ಲಿ ಕುಳಿತು ಲಂಕಾಪಟ್ಟಣಕ್ಕೆ ಬಂದು ಶ್ರೀರಾಮನ

ಬಳಿಗೆ ಬಂದರು. ಅವರೆಲ್ಲರನ್ನೂ ನೋಡಿದೊಡನೆಯೇ ಶ್ರೀರಾಮನು ಕೈ ಮುಗಿದುಕೊಂಡು ಅವರ ಮುಂದೆ ನಿಂತನು. ಬಳಿಕ ಆ ಶ್ರೇಷ್ಠರಾದ ದೇವತೆಗಳೆಲ್ಲರೂ ಆಭರಣಗಳಿಂದ ಸಮಲಂಕೃತವಾಗಿದ್ದ ತಮ್ಮ ನೀಳವಾದ ಭುಜಗಳನ್ನು ಮೇಲೆತ್ತಿ ಶ್ರೀರಾಮನಿಗೆ ಹೇಳಿದರು :

ಕರ್ತಾ ಸರ್ವಸ್ಯ ಲೋಕಸ್ಯ ಶ್ರೇಷ್ಠೋ ಜ್ಞಾನವತಾಂ ವರಃ ।
ಉಪೇಕ್ಷಸೇ ಕಥಂ ಸೀತಾಂ ಪತನ್ತೀಂ ಹವ್ಯವಾಹನೇ ।
ಕಥಂ ದೇವಗಣಶ್ರೇಷ್ಠಮಾತ್ಮಾನಂ ನಾವಬುಧ್ಯಸೇ ॥೬॥

"ಶ್ರೀರಾಮ! ನೀನು ಸಮಸ್ತಜಗತ್ತನ್ನೂ ಸೃಷ್ಟಿಸಿರುವವನು. ಜ್ಞಾನಿಗಳಲ್ಲಿ ಶ್ರೇಷ್ಠನಾದವನು. ಅಂತಹ ನೀನು ಅಗ್ನಿಯಲ್ಲಿ ಬೀಳುತ್ತಿರುವ ಸೀತೆಯನ್ನು ಹೇಗೆ ತಾನೇ ಉಪೇಕ್ಷಿಸುತ್ತಿರುವೆ? ಸಮಸ್ತದೇವತೆಗಳಿಗೂ ಶ್ರೇಷ್ಠನಾದ ಮಹಾವಿಷ್ಣುವು ನೀನೆಂಬುದನ್ನು ಏಕೆ ತಿಳಿಯುತ್ತಿಲ್ಲ?

ಋತಧಾಮ ವಸುಃ ಪೂರ್ವಂ ವಸೂನಾಂ ಚ ಪ್ರಜಾಪತಿಃ ।
ತ್ರಯಾಣಾಂ ತ್ವಂ ಹಿ ಲೋಕಾನಾಮಾದಿಕರ್ತಾ ಸ್ವಯಂಪ್ರಭುಃ ॥೭॥

ಪೂರ್ವಕಾಲದಲ್ಲಿ ಅಷ್ಟವಸುಗಳಲ್ಲಿ ಪ್ರಜಾಪತಿಯಾದ ಋತಧಾಮನೆಂಬ ಹೆಸರಿನ ಯಾವ ಮೊದಲನೆಯ ವಸುವಿದ್ದನೋ–ಅವನೇ ನೀನು. ಮೂರು ಲೋಕಗಳ ಮೊದಲನೆಯ ಸೃಷ್ಟಿಕರ್ತನೇ ಪ್ರಭುವಾದ ನೀನು.

ಇತರರಿಂದ ನಿಯಂತ್ರಿಸಲ್ಪಡದಿರುವ ಸ್ವಯಂ ಪ್ರಭುವೇ ನೀನಾಗಿರುವೆ. ಹನ್ನೊಂದು ಜನ ರುದ್ರರಲ್ಲಿ ಎಂಟನೆಯವನಾದ ಮಹಾದೇವನೆಂಬ ರುದ್ರನು ನೀನು. ಅನೇಕಮಂದಿ ಸಾಧ್ಯರಲ್ಲಿ ಐದನೆಯ ವೀರ್ಯವಂತನೆಂಬ ಸಾಧ್ಯನೂ ನೀನೇ ಆಗಿರುವೆ. ಅಶ್ವಿನೀಕುಮಾರರೇ ಸಹಸ್ರಶೀರ್ಷನಾದ ನಿನ್ನ ಕಿವಿಗಳಾಗಿದ್ದಾರೆ. ಸೂರ್ಯ-ಚಂದ್ರರು ನಿನ್ನೆರಡು ಕಣ್ಣುಗಳಾಗಿದ್ದಾರೆ. ಪರಂತಪನೇ! ಸೃಷ್ಟಿಯ ಆದಿ-ಮಧ್ಯ ಮತ್ತು ಅಂತ್ಯ–ಈ ಮೂರರಲ್ಲಿಯೂ ನೀನೇ ಕಾಣಿಸಿಕೊಳ್ಳುವೆ. ಇಂತಹ ಪರಾತ್ಪರನಾದ ನೀನು ಸಾಮಾನ್ಯ ಮನುಷ್ಯನಂತೆ ವೈದೇಹಿಯನ್ನು ಏಕೆ ಉಪೇಕ್ಷಿಸುತ್ತಿರುವೆ?"

ಲೋಕಪಾಲರು ಹೀಗೆ ಹೇಳಲು ಲೋಕಸ್ವಾಮಿಯಾದ, ಧರ್ಮಾತ್ಮರಲ್ಲಿ ಶ್ರೇಷ್ಠನಾದ ರಾಘವನು ಶ್ರೇಷ್ಠರಾದ ಆ ದೇವತೆಗಳಿಗೆ ಹೇಳಿದನು :

ಆತ್ಮಾನಂ ಮಾನುಷಂ ಮನ್ಯೇ ರಾಮಂ ದಶರಥಾತ್ಮಜಮ್ ।
ಸೋಽಹಂ ಯಸ್ಯ ಯತಶ್ಚಾಹಂ ಭಗವಾಂಸ್ತದ್ಬ್ರವೀತು ಮೇ ॥೧೧॥

"ದೇವತೆಗಳೇ! ನಾನು ಮನುಷ್ಯನೆಂದೂ ದಶರಥನ ಮಗನೆಂದೂ ತಿಳಿದಿರುವೆನು. ನಾನು ಯಾರವನು? ಯಾವ ಪ್ರಯೋಜನಕ್ಕಾಗಿ ಎಲ್ಲಿಂದ ಬಂದಿರುವೆನು? ಎಂಬುದು ನಿಮಗೇನಾದರೂ ತಿಳಿದಿದ್ದರೆ ನೀವೇ ದಯ ಮಾಡಿ ಹೇಳಿರಿ."

ಹೀಗೆ ಹೇಳಿದ ರಾಘವನಿಗೆ ಬ್ರಹ್ಮವಿದರಲ್ಲಿ ಶ್ರೇಷ್ಠನಾದ ಬ್ರಹ್ಮನು ಹೇಳಿದನು :

"ಸತ್ಯಪರಾಕ್ರಮನೇ! ಸತ್ಯವಾದ ಈ ನನ್ನ ಮಾತನ್ನು ಕೇಳು :

ಭವಾನ್ನಾರಾಯಣೋ ದೇವಃ ಶ್ರೀಮಾಂಶ್ಚಕ್ರಾಯುಧೋ ವಿಭುಃ ।
ಏಕಶೃಙ್ಗೋ ವರಾಹಸ್ತ್ವಂ ಭೂತಭವ್ಯಸಪತ್ನಜಿತ್ ॥೧೩॥

ರಾಘವ! ನೀನು ಚಕ್ರಧರನಾದ, ಸರ್ವಸಮರ್ಥನಾದ, ಶ್ರೀಮಂತನಾದ, ಸರ್ವವ್ಯಾಪಕನಾದ ನಾರಾಯಣನೇ ಆಗಿರುವೆ. ಏಕಶೃಂಗನಾದ ವರಾಹನೂ ನೀನೇ ಆಗಿರುವೆ. ದೇವತೆಗಳ ಹಿಂದಿನ ಶತ್ರುಗಳನ್ನು ಜಯಿಸಿದವನೂ ಮುಂದಿನ ಶತ್ರುಗಳನ್ನು ಜಯಿಸುವವನೂ ನೀನೇ ಆಗಿರುವೆ.

ಅಕ್ಷರಂ ಬ್ರಹ್ಮ ಸತ್ಯಂ ಚ ಮಧ್ಯೇ ಚಾನ್ತೇ ಚ ರಾಘವ ।
ಲೋಕಾನಾಂ ತ್ವಂ ಪರೋ ಧರ್ಮೋ ವಿಷ್ವಕ್ಸೇನಶ್ಚತುರ್ಭುಜಃ ॥೧೪॥

ರಘುನಂದನ! ನೀನು ಅವಿನಾಶಿಯಾದ ಪರಬ್ರಹ್ಮನೇ ಆಗಿರುವೆ. ಸೃಷ್ಟಿಯ ಆದಿ-ಮಧ್ಯ ಮತ್ತು ಅಂತ್ಯಗಳಲ್ಲಿ ನೀನು ಸತ್ಯಸ್ವರೂಪನಾಗಿರುವೆ. ಎಲ್ಲ ಲೋಕಗಳಿಗೂ ನೀನು ಶ್ರೇಷ್ಠವಾದ ಧರ್ಮಸ್ವರೂಪನಾಗಿರುವೆ. ವಿಷ್ವಕ್ಸೇನನೂ, ಚತುರ್ಭುಜಧರನಾದ ಶ್ರೀಹರಿಯೂ ನೀನೇ ಆಗಿರುವೆ.

ಶಾರ್ಙ್ಗಧನ್ವಾ ಹೃಷೀಕೇಶಃ ಪುರುಷಃ ಪುರುಷೋತ್ತಮಃ ।
ಅಜಿತಃ ಖಡ್ಗಧೃಗ್ವಿಷ್ಣುಃ ಕೃಷ್ಣಶ್ಚೈವ ಬೃಹದ್ಬಲಃ ॥೧೫॥

ಶಾರ್ಙ್ಗವೆಂಬ ಧನುಸ್ಸನ್ನು ಧರಿಸಿರುವ ಹೃಷೀಕೇಶನೂ, ಅಂತ

ರ್ಯಾಮಿಯಾದ ಪುರುಷನೂ, ಕ್ಷರ-ಅಕ್ಷರರೂಪರಾದ ಎಲ್ಲ ಪುರುಷರಿಗಿಂತಲೂ ಶ್ರೇಷ್ಠನಾದವನೂ ನೀನೇ ಆಗಿರುವೆ. ನೀನು ಯಾರಿಂದಲೂ ಜಯಿಸಲ್ಪಡತಕ್ಕವನಲ್ಲ. ನಂದಕವೆಂಬ ಖಡ್ಗವನ್ನು ಧರಿಸಿರುವ ಮಹಾವಿಷ್ಣುವೂ, ಮಹಾಬಲನಾದ ಕೃಷ್ಣನೂ ನೀನೇ ಆಗಿರುವೆ.

ಸೇನಾನೀರ್ಗ್ರಾಮಣೀಶ್ಚ ತ್ವಂ ಬುದ್ಧಿಃ ಸತ್ತ್ವಂ ಕ್ಷಮಾ ದಮಃ ।
ಪ್ರಭವಶ್ಚಾಪ್ಯಯಶ್ಚ ತ್ವಮುಪೇನ್ದ್ರೋ ಮಧುಸೂದನಃ ॥೧೬॥

ನೀನು ದೇವಸೇನಾಪತಿಯಾದ ಸ್ಕಂದನೂ, ಜನಪದಗಳ ನಾಯಕನೂ, ಪಂಚಭೂತಗಳನ್ನೂ–ಅವುಗಳ ಕಾರ್ಯಗಳನ್ನು ನಡೆಸುವವನೂ ನೀನೇ ಆಗಿರುವೆ. ಬುದ್ಧಿ, ಸತ್ತ್ವ, ಕ್ಷಮೆ, ಇಂದ್ರಿಯನಿಗ್ರಹ–ಇವು ಮೂರ್ತಿಮತ್ತಾಗಿ ನಿನ್ನಲ್ಲಿಯೇ ನೆಲೆಸಿವೆ. ಸೃಷ್ಟಿ ಮತ್ತು ಪ್ರಳಯಗಳಿಗೆ ಕಾರಣನೂ ನೀನೇ ಆಗಿರುವೆ. ಇಂದ್ರನ ತಮ್ಮನಾದ ವಾಮನನೂ ಮತ್ತು ಮಧುವೆಂಬ ರಾಕ್ಷಸನನ್ನು ಸಂಹರಿಸಿದವನೂ ನೀನೇ ಆಗಿರುವೆ.

ಇನ್ದ್ರಕರ್ಮಾ ಮಹೇನ್ದ್ರಸ್ತ್ವಂ ಪದ್ಮನಾಭೋ ರಣಾನ್ತಕೃತ್ ।
ಶರಣ್ಯಂ ಶರಣಂ ಚ ತ್ವಾಮಾಹುರ್ದಿವ್ಯಾ ಮಹರ್ಷಯಃ ॥೧೭॥

ಇಂದ್ರನಂತೆ ಸಮಸ್ತಲೋಕಗಳ ರಕ್ಷಕನೂ ನೀನೇ ಆಗಿರುವೆ. ನಿರತಿಶಯವಾದ ಐಶ್ವರ್ಯದಿಂದ ಸಂಪನ್ನನಾಗಿರುವೆ. ಪದ್ಮವನ್ನೇ ನಾಭಿಯಲ್ಲಿ ಹೊಂದಿರುವ ನೀನು ನನಗೂ ತಂದೆಯಾಗಿರುವೆ. ಯುದ್ಧಗಳಲ್ಲಿ ಶತ್ರುಗಳನ್ನು ಧ್ವಂಸಮಾಡುವವನೂ ನೀನೇ ಆಗಿರುವೆ. ಶರಣುಹೊಂದಲು ನೀನೇ ಯೋಗ್ಯನಾದವನೆಂದೂ ಪರಮಾಶ್ರಯನೆಂದೂ ದಿವಿಯಲ್ಲಿರುವ ಮಹರ್ಷಿಗಳು ಹೇಳುತ್ತಾರೆ.

ಸಹಸ್ರಶೃಙ್ಗೋ ವೇದಾತ್ಮಾ ಶತಶೀರ್ಷೋ ಮಹರ್ಷಭಃ ।
ತ್ವಂ ತ್ರಯಾಣಾಂ ಹಿ ಲೋಕಾನಾಮಾದಿಕರ್ತಾ ಸ್ವಯಂ ಪ್ರಭುಃ ॥೧೮॥

ನೀನು ಸಾವಿರ ಶಾಖೆಗಳುಳ್ಳ ಸಾಮವೇದಸ್ವರೂಪನಾಗಿರುವೆ. ವಿಧಿರೂಪವಾದ ನೂರಾರು ಶಿರಸ್ಸುಗಳನ್ನು ಹೊಂದಿರುವೆ. (ಶತಜಿಹ್ವಃ ಎಂಬ ಪಾಠಾಂತರದ ಪ್ರಕಾರ ಅನೇಕ ವಿಧಿಗಳನ್ನು ಹೊರಪಡಿಸುವ ನೂರಾರು ನಾಲಿಗೆಗಳನ್ನು ಹೊಂದಿರುವೆ.) ಪುರುಷಶ್ರೇಷ್ಠನಾಗಿರುವೆ. ಮೂರು ಲೋಕ

ಗಳ ಮೊಟ್ಟಮೊದಲನೆಯ ಸೃಷ್ಟಿಕರ್ತನೇ ನೀನು. ಎಲ್ಲದರ ಮೇಲೂ ನೀನು ಪ್ರಭುತ್ವವನ್ನು ಪಡೆದಿರುವೆ. ನಿನಗೆ ಯಾರೂ ಪ್ರಭುಗಳಿಲ್ಲ.

ಸಿದ್ಧಾನಾಮಪಿ ಸಾಧ್ಯಾನಾಮಾಶ್ರಯಶ್ಚಾಸಿ ಪೂರ್ವಜಃ ।
ತ್ವಂ ಯಜ್ಞಸ್ತ್ವಂ ವಷಟ್ಕಾರಸ್ತ್ವಮೋಙ್ಕಾರಃ ಪರಂತಪ ॥೧೯॥

ಶತ್ರುತಾಪಕನೇ! ಮುಕ್ತರಿಗೂ, ಮುಕ್ತಿಮಾರ್ಗದಲ್ಲಿರುವವರಿಗೂ ಎಲ್ಲರಿಗಿಂತಲೂ ಮೊದಲು ಹುಟ್ಟಿರುವ ನೀನೇ ಪರಮಾಶ್ರಯನು. ನೀನೇ ಯಜ್ಞನು.* ನೀನೇ ವಷಟ್ಕಾರವೂ,[1] ಓಂಕಾರಸ್ವರೂಪನೂ,[2] ಆಗಿರುವೆ (ಪರಂತಪಃ ಎಂಬ ಪಾಠಾಂತರದ ಪ್ರಕಾರ ಶ್ರೇಷ್ಠನಾದ ತಪಸ್ವಿಯೂ ನೀನೇ ಆಗಿರುವೆ.)

ಪ್ರಭವಂ ನಿಧನಂ ವಾ ತೇ ನ ವಿದುಃ ಕೋ ಭವಾನಿತಿ ।
ದೃಶ್ಯಸೇ ಸರ್ವಭೂತೇಷು ಬ್ರಾಹ್ಮಣೇಷು ಚ ಗೋಷು ಚ ॥೨೦॥

ನಿನ್ನ ಉತ್ಪತ್ತಿಯನ್ನಾಗಲೀ, ವಿಲಯವನ್ನಾಗಲೀ ಮತ್ತು ನೀನು ಯಾರೆಂಬುದನ್ನಾಗಲೀ ಯಾರೂ ಅರಿಯರು. ಗೋವುಗಳಲ್ಲಿಯೂ, ಬ್ರಾಹ್ಮಣರಲ್ಲಿಯೂ, ಸಮಸ್ತಪ್ರಾಣಿಗಳಲ್ಲಿಯೂ ನೀನು ಗೋಚರನಾಗುವೆ.

ದಿಕ್ಷು ಸರ್ವಾಸು ಗಗನೇ ಪರ್ವತೇಷು ವನೇಷು ಚ ।
ಸಹಸ್ರಚರಣಃ ಶ್ರೀಮಾನ್ ಶತಶೀರ್ಷಃ ಸಹಸ್ರದೃಕ್ ॥೨೧॥

ಸಮಸ್ತದಿಕ್ಕುಗಳಲ್ಲಿಯೂ, ಅಂತರಿಕ್ಷದಲ್ಲಿಯೂ, ಪರ್ವತಗಳಲ್ಲಿಯೂ ವನಗಳಲ್ಲಿಯೂ ನೀನೇ ಇರುವೆ. ಶ್ರೀಮಂತನಾದ ನಿನಗೆ ನೂರಾರು ಕಾಲುಗಳೂ, ನೂರಾರು ತಲೆಗಳೂ, ಸಾವಿರಾರು ಕಣ್ಣುಗಳೂ ಇವೆ.

ತ್ವಂ ಧಾರಯಸಿ ಭೂತಾನಿ ವಸುಧಾಂ ಚ ಸಪರ್ವತಾಮ್ ।
ಅನ್ತೇ ಪೃಥಿವ್ಯಾಃ ಸಲಿಲೇ ದೃಶ್ಯಸೇ ತ್ವಂ ಮಹೋರಗಃ ॥೨೨॥

---

* ಯಜ್ಞೋ ವೈ ವಿಷ್ಣುಃ ಎಂಬ ಶ್ರುತಿಯು ಯಜ್ಞವೇ ವಿಷ್ಣುವೆಂದು ಹೇಳುತ್ತದೆ.

1 ದೇವತೆಗಳನ್ನು ಉದ್ದೇಶಿಸಿ ಹವಿಸ್ಸನ್ನು ಅರ್ಪಿಸುವುದಕ್ಕೆ ವಷಟ್ಕಾರವೆಂದು ಹೆಸರು.

2 ಓಮಿತ್ಯೇಕಾಕ್ಷರಂ ಬ್ರಹ್ಮ –ಎಂಬ ಶ್ರುತಿಯಂತೆ ಶ್ರೀರಾಮನು ಏಕಾಕ್ಷರವಾಚ್ಯನಾದ ಪರಬ್ರಹ್ಮವು.

ಸಾವಿರ ಕಾಲುಗಳನ್ನು ಹೊಂದಿದ್ದು ಸಮಸ್ತಪ್ರಾಣಿಗಳನ್ನೂ ಪರ್ವತಗಳಿಂದ ಕೂಡಿರುವ ಪೃಥ್ವಿಯನ್ನೂ ಧರಿಸಿರುವೆ. ಪ್ರಳಯಕಾಲದಲ್ಲಿ ಭೂಮಂಡಲವು ನೀರಿನಲ್ಲಿ ಮುಳುಗಿಹೋದಾಗ ನೀನು ಸಮುದ್ರಜಲದಲ್ಲಿ ಶೇಷಶಾಯಿಯಾಗಿರುವೆ.

ತ್ರೀನ್ ಲೋಕಾನ್ಧಾರಯನ್ರಾಮ ದೇವಗನ್ಧರ್ವದಾನವಾನ್ ।
ಅಹಂ ತೇ ಹೃದಯಂ ರಾಮ ಜಿಹ್ವಾ ದೇವೀ ಸರಸ್ವತೀ ॥೨೬॥

ರಾಘವ! ಮೂರು ಲೋಕಗಳನ್ನೂ ದೇವ-ಗಂಧರ್ವ-ದಾನವರನ್ನೂ ಧರಿಸಿರುವ ಶ್ರೀಮನ್ನಾರಾಯಣನೇ ನೀನಾಗಿರುವೆ. ನಾನು ನಿನ್ನ ಹೃದಯದ ರೂಪದಲ್ಲಿದ್ದೇನೆ. ಸರಸ್ವತೀದೇವಿಯು ನಿನ್ನ ನಾಲಿಗೆಯ ರೂಪದಲ್ಲಿರುವಳು.

ದೇವಾ ಗಾತ್ರೇಷು ರೋಮಾಣಿ ಬ್ರಹ್ಮಣಃ ನಿರ್ಮಿತಾ ಪ್ರಭೋ ।
ನಿಮೇಷಸ್ತೇ ಭವೇದ್ರಾತ್ರಿರುನ್ಮೇಷಸ್ತೇ ಭವೇದ್ದಿವಾ ॥೨೪॥

ಬ್ರಹ್ಮನಿಂದ (ನನ್ನಿಂದ) ಸೃಷ್ಟಿಸಲ್ಪಟ್ಟಿರುವ ದೇವತೆಗಳೇ ನಿನ್ನ ರೋಮಗಳ ರೂಪದಲ್ಲಿದ್ದಾರೆ. ನೀನು ಕಣ್ಮುಚ್ಚುವುದೇ ರಾತ್ರಿ. ಕಣ್ತೆರೆ ಯುವುದೇ ಹಗಲು–ಎನಿಸಿಕೊಳ್ಳುತ್ತದೆ.

ಸಂಸ್ಕಾರಾಸ್ತೇಽಭವನ್ವೇದಾ ನ ತದಸ್ತಿ ತ್ವಯಾ ವಿನಾ ।
ಜಗತ್ಸರ್ವಂ ಶರೀರಂ ತೇ ಸ್ಥೈರ್ಯಂ ತೇ ವಸುಧಾತಲಮ್ ॥೨೫॥

ವೇದಗಳೇ ನಿನ್ನ ಉಚ್ಛ್ವಾಸ-ನಿಃಶ್ವಾಸಗಳಾಗಿವೆ.* ವೇದಗಳು ಪ್ರವೃತ್ತಿ-ನಿವೃತ್ತಿಮಾರ್ಗಬೋಧಕಗಳು. ಆದರೆ ನಿನ್ನನ್ನು ಬಿಟ್ಟರೆ ಇದು ಯಾವುದೂ ಇರುವುದಿಲ್ಲ. ಈ ಜಗತ್ತೇ ನಿನ್ನ ಶರೀರವು. ಈ ಭೂ ಮಂಡಲವೇ ನಿನ್ನ ಸ್ಥೈರ್ಯವು.

ಅಗ್ನಿಃ ಕೋಪಃ ಪ್ರಸಾದಸ್ತೇ ಸೋಮಃ ಶ್ರೀಮತ್ಸಲಕ್ಷಣಃ ।
ತ್ವಯಾ ಲೋಕಾಸ್ತ್ರಯಃ ಕ್ರಾನ್ತಾಪುರಾಣೇ ವಿಕ್ರಮೈಸ್ತ್ರಿಭಿಃ ॥
ಮಹೇನ್ದ್ರಶ್ಚ ಕೃತೋ ರಾಜಾ ಬಲಿಂ ಬದ್ಧ್ವಾ ಸುದಾರುಣಮ್ ।

---

* ಸಂಸ್ಕಾರಾಃ = ಎಂಬುದಕ್ಕೆ ವ್ಯಾಖ್ಯಾನಕಾರರು ಉಚ್ಛ್ವಾಸ-ನಿಃಶ್ವಾಸಗಳೆಂದು ಅರ್ಥಮಾಡಿರುತ್ತಾರೆ. ವೇದಗಳು ಪರಮಾತ್ಮನ ಉಚ್ಛ್ವಾಸ-ನಿಃಶ್ವಾಸಗಳೆಂಬುದಕ್ಕೆ ಶ್ರುತಿವಚನವು ಹೀಗಿದೆ : ಅಸ್ಯ ಮಹತೋ ಭೂತಸ್ಯ ನಿಃಶ್ವಾಸಮೇತದ್ಯದೃಗ್ವೇದಃ

ಅಗ್ನಿಯೇ ನಿನ್ನ ಕೋಪರೂಪವಾಗಿದೆ. ಚಂದ್ರನೇ ನಿನ್ನ ಪ್ರಸನ್ನತೆಯ ರೂಪದಲ್ಲಿದ್ದಾನೆ. ವಕ್ಷಃಸ್ಥಳದಲ್ಲಿ ಶ್ರೀವತ್ಸದ ಚಿಹ್ನೆಯನ್ನು ಧರಿಸಿರುವ ಶ್ರೀಮನ್ನಾರಾಯಣನೇ ನೀನಾಗಿರುವೆ. ಹಿಂದೆ ವಾಮನಾವತಾರದ ಸಮಯ ದಲ್ಲಿ ನೀನು ತ್ರಿವಿಕ್ರಮನಾಗಿ ನಿನ್ನ ಮೂರು ಹೆಜ್ಜೆಗಳಿಂದ ಮೂರು ಲೋಕ ಗಳನ್ನೂ ಅಳೆದು ಮಹಾಭಯಂಕರನಾಗಿದ್ದ ಬಲಿಯನ್ನು ಬಂಧಿಸಿ ಮಹೇಂದ್ರ ನನ್ನು ಪುನಃ ಮೂರು ಲೋಕಗಳಿಗೂ ರಾಜನನ್ನಾಗಿ ಮಾಡಿದೆ.

ಸೀತಾ ಲಕ್ಷ್ಮೀರ್ಭವಾನ್ವಿಷ್ಣುರ್ದೇವಃ ಕೃಷ್ಣಃ ಪ್ರಜಾಪತಿಃ ॥೨೭॥

ವಧಾರ್ಥಂ ರಾವಣಸ್ಯೇಹ ಪ್ರವಿಷ್ಟೋ ಮಾನುಷೀಂ ತನುಮ್ ।
ತದಿದಂ ನಃ ಕೃತಂ ಕಾರ್ಯಂ ತ್ವಯಾ ಧರ್ಮಭೃತಾಂ ವರ ॥೨೮॥

ಸೀತಾದೇವಿಯೇ ಸಾಕ್ಷಾತ್ ಮಹಾಲಕ್ಷ್ಮಿಯು. ನೀನೇ ದೇವ-ದೇವ ನಾದ ಮಹಾವಿಷ್ಣುವು. ಸಚ್ಚಿದಾನಂದಸ್ವರೂಪನಾದ ಶ್ರೀಕೃಷ್ಣನೂ, ಪ್ರಜಾ ಪತಿಯೂ ನೀನೇ ಆಗಿರುವೆ. ರಾವಣನನ್ನು ಸಂಹರಿಸುವ ಸಲುವಾಗಿ ನೀನು ಮಾನವನಾಗಿ ಅವತರಿಸಿರುವೆ. ಧರ್ಮಾತ್ಮರಲ್ಲಿ ಶ್ರೇಷ್ಠನಾದವನೇ! ನಮ್ಮ ಕಾರ್ಯವನ್ನು ನೀನು ಪೂರ್ಣಗೊಳಿಸಿರುವೆ.

ನಿಹತೋ ರಾವಣೋ ರಾಮ ಪ್ರಹೃಷ್ಟೋ ದಿವಮಾಕ್ರಮ ।
ಅಮೋಘಂ ಬಲವೀರ್ಯಂ ತೇ ಅಮೋಘಸ್ತೇ ಪರಾಕ್ರಮಃ ॥೨೯॥

ರಾಘವ! ನೀನು ರಾವಣನನ್ನು ಸಂಹರಿಸಿ ನಮ್ಮ ಕಾರ್ಯವನ್ನು ಪೂರ್ಣಗೊಳಿಸಿರುವೆ. ನೀನಿನ್ನು ಪ್ರಸನ್ನಚಿತ್ತನಾಗಿ ನಿನ್ನ ದಿವ್ಯಧಾಮವನ್ನು ಸೇರು. ದೇವನೇ! ನಿನ್ನ ವೀರ್ಯವು ಅಮೋಘವಾದುದು. ನಿನ್ನ ಪರಾ ಕ್ರಮಗಳು ಎಂದಿಗೂ ವ್ಯರ್ಥವಾಗುವುದಿಲ್ಲ.

ಅಮೋಘಂ ದರ್ಶನಂ ರಾಮ ಅಮೋಘಸ್ತವ ಸಂಸ್ತವಃ ।
ಅಮೋಘಾಸ್ತೇ ಭವಿಷ್ಯನ್ತಿ ಭಕ್ತಿಮನ್ತಶ್ಚ ಯೇ ನರಾಃ ॥೩೦॥

ನಿನ್ನ ದರ್ಶನವು ಅಮೋಘವಾದುದು. ನಿನ್ನ ಸ್ತೋತ್ರವೂ ಅಮೋಘ ವಾದುದು. ನಿನ್ನಲ್ಲಿ ಭಕ್ತಿಯನ್ನಿಟ್ಟಿರುವ ಮನುಷ್ಯರೂ ಈ ಪ್ರಪಂಚದಲ್ಲಿ ಅಮೋಘವಾದ ಫಲಗಳನ್ನು ಬಹಳ ಶೀಘ್ರವಾಗಿ ಪಡೆದುಕೊಳ್ಳುತ್ತಾರೆ.

ಯೇ ತ್ವಾಂ ದೇವಂ ಧ್ರುವಂ ಭಕ್ತಾಃ ಪುರಾಣಂ ಪುರುಷೋತ್ತಮಮ್ ।
ಪ್ರಾಪ್ನುವನ್ತಿ ಸದಾ ಕಾಮಾನಿಹ ಲೋಕೇ ಪರತ್ರ ಚ ॥೩೧॥

ಪುರುಷೋತ್ತಮನಾದ, ಶಾಶ್ವತನಾದ, ಪುರಾಣಪುರುಷನಾದ, ದೇವ ದೇವನಾದ ನಿನ್ನನ್ನು ಯಾರು ಪರಮಭಕ್ತಿಯಿಂದ ಕೂಡಿ ಸ್ತೋತ್ರಮಾಡು ವರೋ–ಅಂತಹವರು ಸಕಲಕಾಮನೆಗಳನ್ನೂ ಈ ಲೋಕದಲ್ಲಿ ಪಡೆದು ಪರಲೋಕದಲ್ಲಿಯೂ ತಮ್ಮ ಇಷ್ಟಾರ್ಥಗಳನ್ನು ಪಡೆಯುತ್ತಾರೆ.

ಇದಮಾರ್ಷಂ ಸ್ತವಂ ದಿವ್ಯಮಿತಿಹಾಸಂ ಪುರಾತನಮ್ ।
ಯೇ ನರಾಃ ಕೀರ್ತಯಿಷ್ಯನ್ತಿ ನಾಸ್ತಿ ತೇಷಾಂ ಪರಾಭವಃ ॥೩೨॥

ಋಷಿಪ್ರೋಕ್ತವಾದ, ಐತಿಹಾಸಿಕವಾದ, ದಿವ್ಯವಾದ, ಪುರಾತನವಾದ ಈ ಸ್ತೋತ್ರವನ್ನು ಯಾವ ಮನುಷ್ಯರು ಅನುದಿನವೂ ಕೀರ್ತನಮಾಡು ವರೋ–ಅಂತಹವರಿಗೆ ಪರಾಜಯವೆಂಬುದೇ ಇರುವುದಿಲ್ಲ.

೧೧೭ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೧೧೮ನೆಯ ಸರ್ಗ

ಅಗ್ನಿಯು ಸೀತಾದೇವಿಯನ್ನೆತ್ತಿಕೊಂಡು ಚಿತೆಯಿಂದ ಹೊರಬಂದು ಶ್ರೀರಾಮನಿಗೆ ಒಪ್ಪಿಸುತ್ತಾ ಸೀತೆಯು ಮಹಾಪತಿವ್ರತೆಯೆಂಬುದನ್ನು ಪ್ರತಿಪಾದಿಸಿದುದು : ಹರ್ಷದೊಡನೆ ಶ್ರೀರಾಮನು ಸೀತೆಯನ್ನು ಪರಿಗ್ರಹಿಸಿದುದು

ಏತಚ್ಛ್ರುತ್ವಾ ಶುಭಂ ವಾಕ್ಯಂ ಪಿತಾಮಹಸಮೀರಿತಮ್ ।
ಅಙ್ಕೇನಾದಾಯ ವೈದೇಹೀಮುತ್ಪಪಾತ ವಿಭಾವಸುಃ ॥೧॥

ಬ್ರಹ್ಮನು ಹೇಳಿದ ಶುಭಕರವಾದ ಮಾತುಗಳನ್ನು ಕೇಳಿ ಅಗ್ನಿದೇವನು ಸೀತಾದೇವಿಯನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಚಿತೆಯಿಂದ ಮೇಲೆದ್ದು ಬಂದನು.

ಚಿತೆಯಲ್ಲಿದ್ದ ಕೊಳ್ಳಿಗಳನ್ನು ಅತ್ತಲಿತ್ತ ಸರಿಸಿ ಅಗ್ನಿದೇವನು ದೇಹ ಧಾರಿಯಾಗಿ ಸೀತೆಯನ್ನೆತ್ತಿಕೊಂಡು ಹೊರಬಂದು ಶ್ರೀರಾಮನ ಸಮೀಪದಲ್ಲಿ

ನಿಂತನು. ಬಾಲಸೂರ್ಯನಂತೆ ನಸುಗೆಂಪಾದ ಕಾಂತಿಯಿಂದ ಪ್ರಕಾಶಿಸುತ್ತಾ ಪುಟಕ್ಕೆ ಹಾಕಿದ ಚಿನ್ನದಿಂದ ಮಾಡಿದ್ದ ಒಡವೆಗಳಿಂದ ಭೂಷಿತಳಾಗಿದ್ದ, ಕೆಂಪಾದ ರೇಷ್ಮೆಯ ಸೀರೆಯನ್ನುಟ್ಟಿದ್ದ, ಕಪ್ಪಾಗಿಯೂ ಗುಂಗುರಿನಿಂದ ಕೂಡಿಯೂ ಇದ್ದ ಕೇಶರಾಶಿಯಿಂದ ರಾರಾಜಿಸುತ್ತಿದ್ದ ಅಗ್ನಿಯ ಸಂಬಂಧ ದಿಂದಲೂ ಬಾಡದಿದ್ದ ಪುಷ್ಪಹಾರಗಳನ್ನೂ–ಆಭರಣಗಳನ್ನೂ ಧರಿಸಿದ್ದ,

ಅಗ್ನಿಯನ್ನು ಪ್ರವೇಶಿಸುವ ಮೊದಲಿದ್ದ ದಿವ್ಯರೂಪವನ್ನೇ ಹೊಂದಿದ್ದ, ಅನಿಂದ್ಯಳಾದ ವೈದೇಹಿಯನ್ನು ಅಗ್ನಿದೇವನು ತೊಡೆಯಿಂದಿಳಿಸಿ ಶ್ರೀರಾಮ ನಿಗೊಪ್ಪಿಸಿದನು.

ಅನಂತರ ಲೋಕಸಾಕ್ಷಿಯಾದ ಅಗ್ನಿದೇವನು ಶ್ರೀರಾಮನಿಗೆ ಹೇಳಿದನು:

ಏಷಾ ತೇ ರಾಮ ವೈದೇಹೀ ಪಾಪಮಸ್ಯಾಂ ನ ವಿದ್ಯತೇ ||೫||

ನೈವ ವಾಚಾ ನ ಮನಸಾ ನೈವ ಬುದ್ಧ್ಯಾ ನ ಚಕ್ಷುಷಾ ।
ಸುವೃತ್ತಾ ವೃತ್ತಶೌಣ್ಡೀರ ನ ತ್ವಾಮತಿಚಚಾರ ಹ ॥೯॥

"ಸದಾಚಾರನಿಷ್ಠನೇ! ನಿನ್ನ ಧರ್ಮಪತ್ನಿಯಾದ ಈ ವಿದೇಹರಾಜ ಕುಮಾರಿಯಲ್ಲಿ ಯಾವ ವಿಧವಾದ ಪಾಪವೂ ಇಲ್ಲ. ಮಾತಿನಿಂದಾಗಲೀ, ಮನಸ್ಸಿನಿಂದಾಗಲೀ, ಬುದ್ಧಿಯಿಂದಾಗಲೀ, ಕಣ್ಣುಗಳಿಂದಾಗಲೀ–ಸಚ್ಚಾರಿತ್ರ್ಯದಿಂದ ಕೂಡಿರುವ ಇವಳು ನಿನ್ನನ್ನು ಅತಿಕ್ರಮಿಸಿ ಬೇರೆಯವರ ಆಶ್ರಯವನ್ನು ಪಡೆದಿರುವುದಿಲ್ಲ.

ಬಲ-ವೀರ್ಯಗಳಿಂದ ದರ್ಪಿತನಾಗಿದ್ದ ರಾವಣನು ಇವಳನ್ನು ಅಪಹರಿಸಿಕೊಂಡು ಹೋದ ಕಾಲದಲ್ಲಿ ನೀನು ಇವಳ ಬಳಿಯಲ್ಲಿರಲಿಲ್ಲ. ನಿರ್ಜನವಾಗಿದ್ದ ಆ ಆಶ್ರಮಪ್ರದೇಶದಲ್ಲಿ ಇವಳು ದೀನೆಯೂ ಅಸ್ವತಂತ್ರಳೂ ಆಗಿದ್ದಳು. ರಾವಣನು ಇವಳನ್ನು ಕದ್ದೊಯ್ದು ತನ್ನ ಅಂತಃಪುರದಲ್ಲಿ ಬಂಧಿಸಿಟ್ಟಿದ್ದನು. ಭಯಂಕರರಾದ, ಭಯಂಕರವಾದ ಬುದ್ಧಿಯಿಂದ ಕೂಡಿದ್ದ ರಾಕ್ಷಸಿಯರು ಇವಳನ್ನು ರಕ್ಷಿಸುತ್ತಿದ್ದರು. ಆ ಸಮಯದಲ್ಲಿಯೂ ಇವಳ ಮನಸ್ಸು ನಿನ್ನಲ್ಲಿಯೇ ಲೀನವಾಗಿದ್ದಿತು. ನಿನ್ನನ್ನೇ ಪರಮಾಶ್ರಯನನ್ನಾಗಿ ಭಾವಿಸಿದ್ದಳು. ಇವಳಲ್ಲಿ ಅನೇಕಪ್ರಕಾರವಾದ ಆಸೆಗಳನ್ನು ಹುಟ್ಟಿಸಲಾಯಿತು. ಅನೇಕವಿಧವಾದ ಆಸೆ-ಆಮಿಷಗಳ ಪ್ರಲೋಭನದಿಂದಲೂ ಇವಳು ಮನಸ್ಸನ್ನು ಬದಲಾಯಿಸದೇ ಇದ್ದಾಗ ಇವಳನ್ನು ಭಯಪಡಿಸಲಾಯಿತು. ಇಷ್ಟಾದರೂ ಈ ಸಾಧ್ವಿಯು ಒಮ್ಮೆಯಾದರೂ ರಾಕ್ಷಸನನ್ನು ಮನಸ್ಸಿನಿಂದ ಕೂಡ ಚಿಂತಿಸಲಿಲ್ಲ. ಇವಳ ಅಂತಃಕರಣವು ನಿನ್ನಲ್ಲಿಯೇ ಲೀನವಾಗಿಹೋಗಿದ್ದಿತು.

ವಿಶುದ್ಧಭಾವಾಂ ನಿಷ್ಪಾಪಾಂ ಪ್ರತಿಗೃಹ್ಣೀಷ್ವ ರಾಘವ ।
ನ ಕಿಂಚಿದಭಿಧಾತವ್ಯಮಹಮಾಜ್ಞಾಪಯಾಮಿ ತೇ ॥೧೦॥

ರಾಘವ! ಇವಳ ಭಾವನೆಯು ಪರಮಶುದ್ಧವಾಗಿದೆ. ಇವಳು ನಿಶ್ಚಯವಾಗಿಯೂ ಪಾಪವಿಲ್ಲದವಳು. ಆದುದರಿಂದ ಇವಳನ್ನು ಆದರಪೂರ್ವಕವಾಗಿ ಸ್ವೀಕರಿಸು. ಈ ವಿಷಯದಲ್ಲಿ ಪ್ರತಿಯಾಗಿ ಏನನ್ನೂ ಹೇಳಬೇಡ. ಇದು ನನ್ನ ಆಜ್ಞೆಯಾಗಿದೆ."

ವಾಗ್ಮಿಗಳಲ್ಲಿ ಶ್ರೇಷ್ಠನಾದ ಧರ್ಮಾತ್ಮನಾದ ಶ್ರೀರಾಮನು ಅಗ್ನಿದೇವನು ಹೇಳಿದ ಆ ಮಾತನ್ನು ಕೇಳಿ ಪ್ರಸನ್ನಚಿತ್ತನಾದನು. ಹರ್ಷದಿಂದ ಹೊರ ಹೊರಟ ಆನಂದಬಾಷ್ಪಗಳಿಂದ ಅವನ ಕಣ್ಣುಗಳು ತುಂಬಿಕೊಂಡುವು. ಕ್ಷಣ ಕಾಲ ಯೋಚಿಸುತ್ತಿದ್ದನು. ಅನಂತರ ಮಹಾತೇಜಸ್ವಿಯಾದ, ಅಮಿತ ಪರಾಕ್ರಮಿಯಾದ, ಧರ್ಮಾತ್ಮರಲ್ಲಿ ಶ್ರೇಷ್ಠನಾದ ಶ್ರೀರಾಮನು ದೇವಶ್ರೇಷ್ಠ ನಾದ ಅಗ್ನಿಗೆ ಹೇಳಿದನು :

ಅವಶ್ಯಂ ತ್ರಿಷು ಲೋಕೇಷು ನ ಸೀತಾ ಪಾಪಮರ್ಹತಿ ।
ದೀರ್ಘಕಾಲೋಷಿತಾ ಹೀಯಂ ರಾವಣಾನ್ತಃಪುರೇ ಶುಭಾ ॥೧೩॥

"ಸೀತೆಯು ಪಾಪಾತ್ಮಳಲ್ಲ. ಪರಮಪಾವನೆ. ಆದರೆ ಮೂರು ಲೋಕ ಗಳಲ್ಲಿಯೂ ವಿಶ್ವಾಸಹುಟ್ಟುವ ಸಲುವಾಗಿ ಈ ಪರೀಕ್ಷೆಯು ಅವಶ್ಯವಾಗಿದ್ದಿತು. ಏಕೆಂದರೆ ಶುಭಾಂಗಿಯಾದ ಇವಳು ಬಹಳ ಕಾಲ ರಾವಣನ ಅಂತಃಪುರದಲ್ಲಿ ಇರಬೇಕಾಯಿತು.

ಬಾಲಿಶಃ ಖಲು ಕಾಮಾತ್ಮಾ ರಾಮೋ ದಶರಥಾತ್ಮಜಃ ।
ಇತಿ ವಕ್ಷ್ಯತಿ ಮಾಂ ಸನ್ತೋ ಜಾನಕೀಮವಿಶೋಧ್ಯ ಹಿ ॥೧೪॥

ಒಂದು ವೇಳೆ ನಾನು ಜಾನಕಿಯು ಪರಿಶುದ್ಧಳೆಂಬುದನ್ನು ಪರೀಕ್ಷಿಸ ದೆಯೇ ಇವಳನ್ನು ಪ್ರತಿಗ್ರಹಿಸಿದ್ದೆನಾದರೆ–ಸತ್ಪುರುಷರು ನನ್ನನ್ನು ಮೂರ್ಖ ನೆಂದೂ ಕಾಮಿಯೆಂದೂ ಹೇಳುತ್ತಿದ್ದರು.

ಅನನ್ಯಹೃದಯಾಂ ಭಕ್ತಾಂ ಮಚ್ಚಿತ್ತಪರಿವರ್ತಿನೀಮ್ ।
ಅಹಮಪ್ಯವಗಚ್ಛಾಮಿ ಮೈಥಿಲೀಂ ಜನಕಾತ್ಮಜಾಮ್ ॥೧೫॥

ಮಿಥಿಲೇಶನಂದಿನಿಯಾದ ಸೀತೆಯು ನನ್ನೊಬ್ಬನಲ್ಲಿಯೇ ನೆಟ್ಟಮನ ಸ್ಸುಳ್ಳವಳೆಂಬುದನ್ನೂ, ಬೇರೆಯವನಲ್ಲಿ ಇವಳ ಮನಸ್ಸು ಕ್ಷಣಕಾಲವೂ ಇರದೆಂಬುದನ್ನೂ, ನನ್ನ ಮನಸ್ಸಿಗೆ ಅನುಸಾರವಾಗಿ ನಡೆದುಕೊಳ್ಳುವಳೆಂಬು ದನ್ನೂ ನಾನು ಚೆನ್ನಾಗಿ ಬಲ್ಲೆನು.

ಇಮಾಮಪಿ ವಿಶಾಲಾಕ್ಷೀಂ ರಕ್ಷಿತಾಂ ಸ್ವೇನ ತೇಜಸಾ ।
ರಾವಣೋ ನಾತಿವರ್ತೇತ ವೇಲಾಮಿವ ಮಹೋದಧಿಃ ॥೧೬॥

ಮಹಾಸಾಗರವು ತೀರವನ್ನು ಅತಿಕ್ರಮಿಸಿ ಹೋಗದಂತೆ–ತನ್ನ ಪಾತಿ

ಪ್ರತ್ಯದ ತೇಜಸ್ಸಿನಿಂದಲೇ ರಕ್ಷಿಸಲ್ಪಡುತ್ತಿದ್ದ ವಿಶಾಲಾಕ್ಷಿಯಾದ ಇವಳನ್ನು ರಾವಣನು ಅತಿಕ್ರಮಿಸಿ ಹೋಗಲು ಸಮರ್ಥನಲ್ಲವೆಂಬುದೂ ನನಗೆ ತಿಳಿದಿತ್ತು.

ಪ್ರತ್ಯಯಾರ್ಥಂ ತು ಲೋಕಾನಾಂ ತ್ರಯಾಣಾಂ ಸತ್ಯಸಂಶ್ರಯಃ ।
ಉಪೇಕ್ಷೇ ಚಾಪಿ ವೈದೇಹೀಂ ಪ್ರವಿಶನ್ತೀಂ ಹುತಾಶನಮ್ ॥೧೭॥

ಮೂರು ಲೋಕಗಳ ಜನರಿಗೂ ಸೀತೆಯು ಪರಮಪಾವನೆಯೆಂಬ ವಿಶ್ವಾಸವನ್ನು ಹುಟ್ಟಿಸುವ ಸಲುವಾಗಿ–ಸತ್ಯವನ್ನೇ ಪರಮಾಶ್ರಯವನ್ನಾಗಿ ಹೊಂದಿರುವ ನಾನು–ಅಗ್ನಿಪ್ರವೇಶಮಾಡುತ್ತಿದ್ದ ಸೀತಾದೇವಿಯನ್ನು ತಡೆಯ ಹೋಗದೇ ಉಪೇಕ್ಷಿಸಿದೆನು.

ನ ಹಿ ಶಕ್ತಃ ಸದುಷ್ಟಾತ್ಮಾ ಮನಸಾಪಿ ಹಿ ಮೈಥಿಲೀಮ್ ।
ಪ್ರಧರ್ಷಯಿತುಮಪ್ರಾಪ್ತಾಂ ದೀಪ್ತಾಮಗ್ನಿಶಿಖಾಮಿವ ॥೧೮॥

ಪ್ರಜ್ವಲಿಸುವ ಅಗ್ನಿಯ ಜ್ವಾಲೆಗೆ ಸಮಾನಳಾಗಿರುವ, ಇತರರಿಂದ ಹೊಂದಲು ಅಸಾಧ್ಯಳಾದ ಸೀತಾದೇವಿಯನ್ನು ದುಷ್ಟಾತ್ಮನಾದ ರಾವಣನು ಮನಸ್ಸಿನಿಂದ ಕೂಡ ಆಕ್ರಮಿಸಲು ಸಮರ್ಥನಲ್ಲ.

ನೇಯಮರ್ಹತಿ ವೈಕ್ಲವ್ಯಂ ರಾವಣಾನ್ತಃಪುರೇ ಶುಭಾ ।
ಅನನ್ಯಾ ಹಿ ಮಯಾ ಸೀತಾ ಭಾಸ್ಕರೇಣ ಪ್ರಭಾ ಯಥಾ ॥೧೯॥

ರಾವಣನ ಅಂತಃಪುರದಲ್ಲಿದ್ದರೂ ಇವಳು ವ್ಯಾಕುಲಳಾಗಿರಲಿಲ್ಲ. ಏಕೆಂದರೆ : ಸೂರ್ಯದೇವನ ಪ್ರಭೆಯಂತೆ ಇವಳು ನನ್ನ ವಿಷಯದಲ್ಲಿ ಅನನ್ಯಳಾಗಿದ್ದಳು. ಸೂರ್ಯನಿಂದ ಪ್ರಭೆಯು ಯಾವಾಗಲೂ ಬಿಟ್ಟಿರಲಾಗದಂತೆ ನನ್ನಿಂದ ಇವಳು ಯಾವಾಗಲೂ ಬೇರೆಯಾಗತಕ್ಕವಳೇ ಅಲ್ಲ.

ಹೃದಯದಲ್ಲಿ ನನ್ನ ಇರುವಿಕೆಯನ್ನು ಇವಳು ಯಾವಾಗಲೂ ಕಾಣುತ್ತಿದ್ದಳು. ಹೊರಗಿನ ಪೀಡೆಗಳನ್ನು ಇವಳು ಪರಿಗಣಿಸುತ್ತಲೇ ಇರಲಿಲ್ಲ.

ಜನಕಕುಮಾರಿಯು ಮೂರು ಲೋಕಗಳಲ್ಲಿಯೂ ಪರಮಪಾವನೆಯಾಗಿದ್ದಾಳೆ. ಮನನಶೀಲನಾದ ಮನುಷ್ಯನಿಗೆ ಕೀರ್ತಿಯನ್ನು ತ್ಯಾಗ ಮಾಡಲು ಸಾಧ್ಯವಾಗದಂತೆ–ನಾನು ಇವಳನ್ನು ಖಂಡಿತವಾಗಿಯೂ ತ್ಯಾಗ ಮಾಡಲಾರೆನು.

ಲೋಕಪಾಲಕರಾದ ನೀವೆಲ್ಲರೂ ನನಗೆ ಹಿತಕರವಾದ ಮಾತುಗಳನ್ನೇ ಹೇಳುತ್ತಿರುವಿರಿ. ನನ್ನ ಮೇಲೆ ನಿಮಗೆ ಅಪಾರವಾದ ಸ್ನೇಹವಿದೆ. ಆದುದರಿಂದ ನಿಮ್ಮೆಲ್ಲರ ಹಿತವಚನದಂತೆ ನಡೆದುಕೊಳ್ಳುವುದು ನನ್ನ ಕರ್ತವ್ಯವಾಗಿದೆ."

ಮಹಾಬಲಿಷ್ಠನಾದ ವಿಜಯಿಯಾದ ಶ್ರೀರಾಮನು ದೇವತೆಗಳಿಗೆ ಹೀಗೆ ಹೇಳಿ ತಾನು ಮಾಡಿದ ಸಾಹಸಕಾರ್ಯದಿಂದ ಎಲ್ಲರ ಪ್ರಶಂಸೆಗೂ ಪಾತ್ರನಾದನು. ಸುಖಪಡಲು ಯೋಗ್ಯನಾದ ಯಶೋವಂತನಾದ ಶ್ರೀರಾಮನು ಪರಮಪಾವನೆಯಾದ ಪ್ರೇಯಸಿಯಾದ ಸೀತಾದೇವಿಯನ್ನು ಸ್ವೀಕರಿಸಿ ಪರಮಸುಖದ ಅನುಭವವನ್ನು ಪಡೆದನು.

೧೧೮ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೧೧೯ನೆಯ ಸರ್ಗ

ಮಹಾದೇವನ ಆಜ್ಞೆಯಂತೆ ವಿಮಾನದಲ್ಲಿ ಬಂದ ದಶರಥನನ್ನು ರಾಮ-ಲಕ್ಷ್ಮಣರು ಸಂದರ್ಶಿಸಿದುದು : ದಶರಥನು ರಾಮ-ಲಕ್ಷ್ಮಣರಿಗೂ ಸೀತೆಗೂ ಸಂದೇಶವನ್ನಿತ್ತು ಸ್ವರ್ಗಕ್ಕೆ ತೆರಳಿದುದು

ಏತಚ್ಛ್ರುತ್ವಾ ಶುಭಂ ವಾಕ್ಯಂ ರಾಘವೇಣಾನುಭಾಷಿತಮ್ ।
ತತಃ ಶುಭತರಂ ವಾಕ್ಯಂ ವ್ಯಾಜಹಾರ ಮಹೇಶ್ವರಃ ॥೧॥

ಶ್ರೀರಾಮನು ಹೇಳಿದ ಶುಭವಾಕ್ಯಗಳನ್ನು ಕೇಳಿ ಮಹೇಶ್ವರನು ಅದಕ್ಕಿಂತಲೂ ಶುಭತರವಾದ ಮಾತುಗಳನ್ನು ಹೇಳಿದನು :

"ಪುಷ್ಕರಾಕ್ಷನೇ! ಮಹಾಬಾಹುವೇ! ವಿಶಾಲವಕ್ಷನೇ! ಪರಂತಪನೇ! ಧರ್ಮಾತ್ಮರಲ್ಲಿ ಶ್ರೇಷ್ಠನಾದವನೇ! ನೀನು ಸೌಭಾಗ್ಯದ ಕಾರಣದಿಂದ ರಾವಣನ ವಧೆಯೆಂಬ ಈ ಮಹಾಕಾರ್ಯವನ್ನು ಮಾಡಿರುವೆ. ರಾವಣನಿಂದ ಲೋಕಕ್ಕೆ ಉಂಟಾಗಿದ್ದ ಭಯವೂ ಮತ್ತು ದುಃಖವೂ ಅಂಧಕಾರರೂಪದಲ್ಲಿದ್ದಿತು. ಸೌಭಾಗ್ಯವಶದಿಂದ ನೀನು ರಾವಣನೊಡನೆ ಯುದ್ಧಮಾಡಿ ಅವನನ್ನು ಸಂಹರಿಸಿ ಆ ಕತ್ತಲೆಯನ್ನು ಹೋಗಲಾಡಿಸಿದೆ. ಮಹಾವೀರನೇ!

ದೀನನಾಗಿರುವ ಭರತನನ್ನು ಸಂತೈಸಿ ಯಶೋವತಿಯಾದ ಕೌಸಲ್ಯೆಯನ್ನೂ, ಕೈಕೇಯಿಯನ್ನೂ, ಲಕ್ಷ್ಮಣನ ತಾಯಿಯಾದ ಸುಮಿತ್ರಾದೇವಿಯನ್ನೂ ಸಂದರ್ಶಿಸು. ಬಳಿಕ ಅಯೋಧ್ಯೆಯ ರಾಜ್ಯಭಾರವನ್ನು ವಹಿಸಿಕೊಂಡು ಸುಹೃದರನ್ನು ಸಂತೋಷಗೊಳಿಸು. ಇಕ್ಷ್ವಾಕುಕುಲದಲ್ಲಿ ನಿನ್ನ ವಂಶವನ್ನು ಪ್ರತಿಷ್ಠಾಪಿಸಿ (ಮಕ್ಕಳನ್ನು ಪಡೆದು) ಅಶ್ವಮೇಧಯಜ್ಞವನ್ನು ಮಾಡಿ ಉತ್ತಮವಾದ ಯಶಸ್ಸನ್ನು ಗಳಿಸು. ಅನಂತರ ಬ್ರಾಹ್ಮಣರಿಗೆ ಯಥೇಚ್ಛವಾಗಿ ಧನವನ್ನು ದಾನಮಾಡಿ ನಿನ್ನ ಧಾಮವಾದ ಸ್ವರ್ಗವನ್ನು ಸೇರು. ರಾಘವ! ಅದೋ ಅಲ್ಲಿ ನೋಡು. ನಿನ್ನ ತಂದೆಯಾದ ದಶರಥರಾಜನು ವಿಮಾನದಲ್ಲಿ ಕುಳಿತಿದ್ದಾನೆ. ಮನುಷ್ಯಲೋಕದಲ್ಲಿ ಅವನು ನಿನಗೆ ಮಹಾ ಯಶೋವಂತನಾದ ಗುರುವಾಗಿದ್ದನು. ಮಗನಾದ ನಿನ್ನಿಂದ ಉದ್ಧರಿಸಲ್ಪಟ್ಟ ಇವನು ಇಂದ್ರಲೋಕಕ್ಕೆ ಹೋಗಿದ್ದನು. ಇವನೀಗ ನಿನ್ನನ್ನು ನೋಡಲು ವಿಮಾನದಲ್ಲಿ ಕುಳಿತು ಇಲ್ಲಿಗೆ ಬಂದಿರುವನು. ನಿನ್ನ ತಮ್ಮನಾದ ಲಕ್ಷ್ಮಣನೊಡನೆ ನೀನು ನಿನ್ನ ತಂದೆಗೆ ನಮಸ್ಕರಿಸು."

ಮಹಾದೇವನ ಆ ಮಾತನ್ನು ಕೇಳಿ ಲಕ್ಷ್ಮಣಸಹಿತನಾದ ಶ್ರೀರಾಮನು ವಿಮಾನದಲ್ಲಿ ಕುಳಿತಿದ್ದ ತಂದೆಗೆ ನಮಸ್ಕರಿಸಿದನು. ತನ್ನ ದಿವ್ಯಶೋಭೆಯಿಂದಲೇ ದೇದೀಪ್ಯಮಾನನಾಗಿ ಕಾಣುತ್ತಿದ್ದ, ನಿರ್ಮಲವಾದ ವಸ್ತ್ರಗಳನ್ನುಟ್ಟಿದ್ದ ತಂದೆಯನ್ನು ಪ್ರಭುವಾದ ಶ್ರೀರಾಮನು ಲಕ್ಷ್ಮಣನೊಡನೆ ನೋಡಿ ದನು. ದಶರಥಮಹಾರಾಜನು ತನ್ನ ಪ್ರಾಣಗಳಿಗಿಂತಲೂ ಪ್ರಿಯನಾದ ಮಗನನ್ನು ನೋಡಿ ಪರಮಹೃಷ್ಟನಾದನು. ಶ್ರೇಷ್ಠವಾದ ಆಸನದಲ್ಲಿ ಕುಳಿತಿದ್ದ ಮಹಾಬಾಹುವಾದ ಪ್ರಭುವಾದ ದಶರಥನು ಶ್ರೀರಾಮನನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಎರಡು ತೋಳುಗಳಿಂದಲೂ ಗಾಢವಾಗಿ ಆಲಿಂಗಿಸಿಕೊಂಡು ಹೇಳಿದನು :

"ರಾಘವ! ಸತ್ಯವಾಗಿ ಹೇಳುತ್ತೇನೆ. ನಿನ್ನನ್ನಗಲಿರುವ ನನಗೆ ಸ್ವರ್ಗದ ಸುಖವಾಗಲೀ, ದೇವತೆಗಳ ಸಮ್ಮಾನವಾಗಲೀ ಸಂತೋಷವನ್ನುಂಟುಮಾಡುತ್ತಿಲ್ಲ. ಈಗ ನೀನು ಶತ್ರುಗಳನ್ನು ನಿಗ್ರಹಿಸಿ ಪೂರ್ಣಮನೋರಥನಾಗಿರುವೆ. ನಿನ್ನ ವನವಾಸದ ಅವಧಿಯೂ ಮುಗಿದಿದೆ. ಇವೆಲ್ಲವನ್ನೂ ನೋಡಿ ನಿನ್ನ ವಿಷಯದಲ್ಲಿ ನನಗೆ ಅತುಲವಾದ ಪ್ರೀತಿಯುಂಟಾಗಿದೆ. ನಿನ್ನನ್ನು ಅರಣ್ಯಕ್ಕೆ

ಕಳುಹಿಸಲು ಕೈಕೇಯಿಯು ನನ್ನೊಡನೆ ಯಾವ ಮಾತುಗಳನ್ನಾಡಿದ್ದಳೋ–ಆ ಎಲ್ಲ ಮಾತುಗಳೂ ನನ್ನ ಹೃದಯವನ್ನು ಕೊರೆಯುತ್ತಿದ್ದುವು. ಇಂದು ಲಕ್ಷ್ಮಣಸಹಿತನಾದ ನೀನು ಕುಶಲಿಯಾಗಿರುವುದನ್ನು ಕಂಡು ನಿನ್ನನ್ನು ಬಾಚಿ ತಬ್ಬಿಕೊಂಡಿರುವ ನನಗೆ ಎಲ್ಲ ದುಃಖಗಳೂ ದೂರವಾಗಿವೆ. ಈಗ ನಾನು ಮಂಜಿನಿಂದ ಹೊರಬಂದ ಸೂರ್ಯನಂತಾಗಿದ್ದೇನೆ. ಅಷ್ಟಾವಕ್ರನು ತನ್ನ

ತಂದೆಯಾದ ಮಹಾತ್ಮನಾದ ಕಹೋಲಬ್ರಾಹ್ಮಣನನ್ನು ಉದ್ಧರಿಸಿದಂತೆ–ಸುಪುತ್ರನಾದ ನೀನು ನನ್ನನ್ನು ಮಿಥ್ಯಾಪ್ರತಿಜ್ಞನಾಗದ ರೀತಿಯಲ್ಲಿ ಉದ್ಧರಿಸಿರುವೆ. ರಾವಣನನ್ನು ವಧಿಸುವ ಸಲುವಾಗಿ ಪುರುಷೋತ್ತಮನಾದ ಮಹಾವಿಷ್ಣುವೇ ನಿನ್ನ ರೂಪದಲ್ಲಿ ಅವತರಿಸಿರುವನೆಂಬ ವಿಷಯವನ್ನು ಈಗ ತಾನೇ ನಾನು ದೇವತೆಗಳಿಂದ ತಿಳಿದುಕೊಂಡೆನು. ಶತ್ರುಸೂದನನಾದ,

ಅರಣ್ಯದಿಂದ ಹಿಂದಿರುಗಿ ಮನೆಯನ್ನು ಸೇರುವ ನಿನ್ನನ್ನು ಪರಮಸಂತೋಷದಿಂದ ನೋಡುವ ಕೌಸಲ್ಯೆಯೇ ನಿಶ್ಚಯವಾಗಿಯೂ ಧನ್ಯಳಲ್ಲವೇ? ಅಯೋಧ್ಯೆಯನ್ನು ಸೇರಿ ರಾಜ್ಯಸಿಂಹಾನದಲ್ಲಿ ಅಭಿಷಿಕ್ತನಾಗುವ ಭೂಪಾಲನಾದ ನಿನ್ನನ್ನು ನೋಡುವ ಪ್ರಜೆಗಳೂ ಕೃತಾರ್ಥರೇ ಸರಿ.

ನಿನ್ನಲ್ಲಿಯೇ ಅನುರಕ್ತನಾಗಿರುವ, ಧರ್ಮಾತ್ಮನಾದ, ಪವಿತ್ರಹೃದಯನಾದ ಮತ್ತು ಬಲಿಷ್ಠನಾದ ಭರತನು ನಿನ್ನೊಡನೆ ಶೀಘ್ರವಾಗಿ ಸೇರುವುದನ್ನು ನಾನು ನೋಡಲು ಬಯಸಿದ್ದೇನೆ. ನನಗೆ ಪ್ರೀತಿಯನ್ನುಂಟುಮಾಡುವ ಸಲುವಾಗಿ ನೀನು ಸೀತೆಯೊಡನೆಯೂ ಲಕ್ಷ್ಮಣನೊಡನೆಯೂ ಹದಿನಾಲ್ಕು ವರ್ಷಗಳನ್ನು ಅರಣ್ಯದಲ್ಲಿ ಕಳೆದೆ. ಈಗ ನಿನ್ನ ವನವಾಸದ ಅವಧಿಯು ಪೂರ್ಣವಾಗಿ ಕಳೆದುಹೋಗಿದೆ. ಅಂತೆಯೇ ನನ್ನ ಪ್ರತಿಜ್ಞೆಯನ್ನೂ ಪೂರ್ಣಗೊಳಿಸಿರುವೆ. ಯುದ್ಧದಲ್ಲಿ ರಾವಣನನ್ನು ಸಂಹರಿಸಿ ದೇವತೆಗಳನ್ನೂ ಸಂತುಷ್ಟಿಗೊಳಿಸಿರುವೆ. ರಾಘವ! ನೀನು ಮಾಡಬೇಕಾಗಿದ್ದ ಎಲ್ಲ ಕಾರ್ಯಗಳನ್ನೂ ಮಾಡಿರುವೆ. ಪರಮಶ್ಲಾಘ್ಯವಾದ ಯಶಸ್ಸನ್ನೂ ಗಳಿಸಿರುವೆ. ನಿನ್ನ ಸಹೋದರರೊಡನೆ ರಾಜ್ಯದ ಪಟ್ಟಾಭಿಷೇಕವನ್ನು ಮಾಡಿಕೊಂಡು ದೀರ್ಘಾಯುಷ್ಮಂತನಾಗಿ ಬಾಳು."

ಹೀಗೆ ಹೇಳಿದ ದಶರಥರಾಜನಿಗೆ ಶ್ರೀರಾಮನು ಕೈಮುಗಿದುಕೊಂಡು ಹೇಳಿದನು : "ಧರ್ಮಜ್ಞನೇ! ಮಹಾರಾಜ! ನೀನು ಕೈಕೇಯೀ ಮತ್ತು ಭರತರ ವಿಷಯದಲ್ಲಿಯೂ ಪ್ರಸನ್ನನಾಗು. ಆ ಸಮಯದಲ್ಲಿ ನೀನು 'ಸಪುತ್ರಾಂ ತ್ವಾಂ ತ್ಯಜಾಮಿ–ಮಗನೊಂದಿಗೆ ನಿನ್ನನ್ನು ತ್ಯಾಗ ಮಾಡುತ್ತೇನೆ'–ಎಂದು ಕೈಕೇಯಿಗೆ ಹೇಳಿದ್ದೆ. ಸುಘೋರವಾದ ಆ ನಿನ್ನ ಶಾಪವು ಪುತ್ರಸಹಿತಳಾದ ಕೈಕೇಯಿಯನ್ನು ಸ್ಪರ್ಶಿಸದಂತೆ ಅನುಗ್ರಹಿಸು."

ಶ್ರೀರಾಮನ ಪ್ರಾರ್ಥನೆಯನ್ನು ದಶರಥನು ಹಾಗೆಯೇ ಆಗಲೆಂದು ಹೇಳಿ ಮನ್ನಿಸಿ, ಕೈಮುಗಿದುಕೊಂಡು ನಿಂತಿದ್ದ ಲಕ್ಷ್ಮಣನನ್ನು ಆಲಿಂಗಿಸಿಕೊಂಡು ಹೇಳಿದನು :

"ಲಕ್ಷ್ಮಣ! ನೀನೂ ವೈದೇಹಿಯೊಡನೆ ರಾಮನನ್ನು ಭಕ್ತಿಯಿಂದ ಶುಶ್ರೂಷೆಮಾಡಿರುವೆ. ಇದರಿಂದ ನಾನು ಪರಮಪ್ರೀತನಾಗಿದ್ದೇನೆ. ಈ

ಶುಶ್ರೂಷೆಯಿಂದ ನಿನಗೆ ಧರ್ಮದ ಫಲವೂ ಲಭಿಸಿದೆ. ಧರ್ಮಜ್ಞನೇ! ಮುಂದೆಯೂ ನೀನು ಧರ್ಮದ ಫಲವನ್ನು ಪಡೆಯುವೆ. ಪ್ರಪಂಚದಲ್ಲಿ ವಿಪುಲವಾದ ಯಶಸ್ಸನ್ನು ಗಳಿಸುವೆ. ಶ್ರೀರಾಮನ ಅನುಗ್ರಹದಿಂದ ನೀನು ಸ್ವರ್ಗವನ್ನೂ ಉತ್ತಮೋತ್ತಮವಾದ ಉತ್ಕರ್ಷವನ್ನೂ ಪಡೆಯುವೆ. ಸುಮಿತ್ರೆಗೆ ಆನಂದವನ್ನುಂಟುಮಾಡುವವನೇ! ಲಕ್ಷ್ಮಣ! ನಿನಗೆ ಮಂಗಳ ವಾಗಲಿ. ರಾಮನನ್ನು ಯಾವಾಗಲೂ ಶುಶ್ರೂಷೆಮಾಡಿಕೊಂಡಿರು. ಶ್ರೀರಾಮನು ಯಾವಾಗಲೂ ಸಮಸ್ತಲೋಕಗಳಿಗೂ ಹಿತವನ್ನುಂಟುಮಾಡುವುದರಲ್ಲಿಯೇ ನಿರತನಾಗಿರತಕ್ಕವನು. ಅದೋ ನೋಡು! ಇಂದ್ರಸಹಿತರಾದ ಮೂರು ಲೋಕಗಳ ಪ್ರಜೆಗಳೂ, ಸಿದ್ಧರೂ, ಮಹರ್ಷಿಗಳೂ ಪುರುಷಶ್ರೇಷ್ಠನಾದ ಮತ್ತು ಮಹಾತ್ಮನಾದ ಶ್ರೀರಾಮನಿಗೆ ಅಭಿವಾದನಮಾಡಿ ಅವನನ್ನು ಪೂಜಿಸುತ್ತಿದ್ದಾರೆ. ಸೌಮ್ಯನೇ! ಶತ್ರುಸಂತಾಪಕನಾದ ಶ್ರೀರಾಮನು ದೇವತೆಗಳ ಹೃದಯವಾಗಿದ್ದಾನೆ. ಪರಮಗುಹ್ಯವಾದ ತತ್ತ್ವವೂ ಆಗಿದ್ದಾನೆ. ವೇದಗಳ ಮೂಲಕ ಪ್ರತಿಪಾದಿಸಲ್ಪಟ್ಟಿರುವ ಅವ್ಯಕ್ತನೂ ಅವಿನಾಶಿಯೂ ಆದ ಬ್ರಹ್ಮನೇ ಇವನಾಗಿದ್ದಾನೆ. ವಿದೇಹನಂದಿನಿಯಾದ ಸೀತೆಯೊಡನೆ ಶ್ರೀರಾಮನನ್ನು ಏಕಾಗ್ರತೆಯಿಂದ ಶುಶ್ರೂಷೆಮಾಡುತ್ತಿರುವ ನೀನು ಧರ್ಮಾ ಚರಣೆಯ ಫಲವನ್ನೂ ಮತ್ತು ಮಹಾಯಶಸ್ಸನ್ನೂ ಪಡೆಯುವೆ."

ದಶರಥರಾಜನು ಲಕ್ಷ್ಮಣನಿಗೆ ಹೀಗೆ ಹೇಳಿ ಕೈಮುಗಿದುಕೊಂಡು ನಿಂತಿದ್ದ ಸೀತಾದೇವಿಯನ್ನು 'ಪುತ್ರಿ!' ಎಂದೇ ಸಂಬೋಧಿಸುತ್ತಾ ಮೆಲ್ಲನೆ ಹೇಳಿದನು :

ಕರ್ತವ್ಯೋ ನ ತು ವೈದೇಹಿ ಮನ್ಯುಸ್ತ್ಯಾಗಮಿಮಂ ಪ್ರತಿ ।
ರಾಮೇಣೇದಂ ವಿಶುದ್ಧ್ಯರ್ಥಂ ಕೃತಂ ವೈ ತ್ವದ್ಧಿತೈಷಿಣಾ ॥೩೫॥

"ಮಗಳೇ! ರಾಮನು ಈ ಸಮಯದಲ್ಲಿ ನಿನ್ನನ್ನು ಪರಿತ್ಯಾಗಮಾಡಿ ದುದಕ್ಕಾಗಿ ಅವನ ಮೇಲೆ ಕೋಪಿಸಿಕೊಳ್ಳುವುದು ಉಚಿತವಲ್ಲ. ನಿನ್ನ ಹಿತ ವನ್ನೇ ಬಯಸಿದ್ದ ಶ್ರೀರಾಮನು ನೀನು ಪರಮಶುದ್ಧಳೆಂಬುದನ್ನು ಬಹಿರಂಗ ಪಡಿಸುವ ಸಲುವಾಗಿ ಈ ಕಾರ್ಯವನ್ನು ಮಾಡಿದನು.

ಆದರೆ ನೀನು ನಿನ್ನ ಸಚ್ಚಾರಿತ್ರ್ಯವನ್ನು ಸಮರ್ಥಿಸಲು ಮಾಡಿದ ಅಗ್ನಿಪ್ರವೇಶರೂಪವಾದ ಕಾರ್ಯವು ಅತಿದುಷ್ಕರವಾದುದು. ನಿನ್ನ ಈ

ಅಚಿಂತ್ಯವಾದ ಕಾರ್ಯವು ಇತರ ಸ್ತ್ರೀಯರ ಯಶಸ್ಸನ್ನು ಮೊಟಕುಗೊಳಿಸುತ್ತದೆ. ಪತಿಶುಶ್ರೂಷೆಯ ವಿಷಯದಲ್ಲಿ ನಿನಗೆ ಯಾವುದೇ ವಿಧವಾದ ಉಪದೇಶವನ್ನೂ ಮಾಡುವ ಅಗತ್ಯವೇನಿಲ್ಲ. ಆದರೆ ಈ ಒಂದು ಮಾತನ್ನು ನಾನು ನಿನ್ನೊಡನೆ ಅವಶ್ಯವಾಗಿ ಹೇಳಲೇಬೇಕಾಗಿದೆ. ಶ್ರೀರಾಮನೇ ನಿನಗೆ ಎಲ್ಲರಿಗಿಂತಲೂ ಮಿಗಿಲಾದ ಪರದೈವಸ್ವರೂಪನಾಗಿರುವನು."

ಹೀಗೆ ದಶರಥಮಹಾರಾಜನು ಇಬ್ಬರು ಮಕ್ಕಳಿಗೂ ಮತ್ತು ಸೊಸೆಗೂ ಸಂದೇಶಗಳನ್ನಿತ್ತು ವಿಮಾನದ ಮೂಲಕ ಇಂದ್ರಲೋಕಕ್ಕೆ ಪ್ರಯಾಣಮಾಡಿದನು.

ನರಶ್ರೇಷ್ಠನಾದ ಮಹಾನುಭಾವನಾದ ದಶರಥನು ಅದ್ಭುತವಾದ ತೇಜಸ್ಸಿನಿಂದ ಸಂಪನ್ನನಾಗಿದ್ದನು. ಅವನ ಶರೀರವು ಆನಂದದಿಂದ ಪುಲಕಿತವಾಗಿದ್ದಿತು. ವಿಮಾನದಲ್ಲಿ ಕುಳಿತು ಇಬ್ಬರು ಮಕ್ಕಳ ಮತ್ತು ಸೊಸೆಯ ಅನುಮತಿಯನ್ನು ಪಡೆದು ದೇವರಾಜನ ಸ್ವರ್ಗಲೋಕಕ್ಕೆ ಧಾವಿಸಿದನು.

೧೧೯ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೧೨೦ನೆಯ ಸರ್ಗ

ಶ್ರೀರಾಮನ ಕೋರಿಕೆಯಂತೆ ಇಂದ್ರನು ಸತ್ತುಹೋಗಿದ್ದ ವಾನರರನ್ನು ಬದುಕಿಸಿದುದು : ದೇವತೆಗಳ ಪ್ರಯಾಣ

ಪ್ರತಿಯಾತೇ ತು ಕಾಕುತ್ಸ್ಥೇ ಮಹೇನ್ದ್ರಃ ಪಾಕಶಾಸನಃ ।
ಅಬ್ರವೀತ್ಪರಮಪ್ರೀತೋ ರಾಘವಂ ಪ್ರಾಞ್ಜಲಿಂ ಸ್ಥಿತಮ್ ॥೧॥

ದಶರಥಮಹಾರಾಜನು ಹೊರಟುಹೋದನಂತರ ಮಹೇಂದ್ರನು ಪರಮಪ್ರೀತನಾಗಿ ಕೈಜೋಡಿಸಿ ನಿಂತಿದ್ದ ಶ್ರೀರಾಮನಿಗೆ ಹೇಳಿದನು :

"ನರಶ್ರೇಷ್ಠನೇ! ರಾಘವ! ನಮ್ಮೆಲ್ಲರ ದರ್ಶನವೂ ಅಮೋಘವಾದುದು. (ವ್ಯರ್ಥವಾಗತಕ್ಕುದಲ್ಲ. ಯಾವುದಾದರೂ ಒಳ್ಳೆಯ ಫಲವನ್ನು ಕೊಟ್ಟೇಕೊಡುವುದು.) ನಾವೆಲ್ಲರೂ ನಿನ್ನ ಕಾರ್ಯದಿಂದ ಸುಪ್ರೀತರಾಗಿದ್ದೇವೆ. ನಿನ್ನ ಮನಸ್ಸಿನಲ್ಲಿ ಯಾವ ಅಪೇಕ್ಷೆಯಿರುವುದೆಂಬುದನ್ನು ಹೇಳು."

ಪ್ರಸನ್ನನಾಗಿದ್ದ ಮಹಾತ್ಮನಾದ ಮಹೇಂದ್ರನು ಹೀಗೆ ಹೇಳಲು

ಸುಪ್ರಸನ್ನವಾದ ಮನಸ್ಸಿನಿಂದ ಕೂಡಿದ್ದ ಸೀತಾ-ಲಕ್ಷ್ಮಣಸಮೇತನಾದ ರಾಘವನು ಪರಮಹೃಷ್ಟನಾಗಿ ಹೇಳಿದನು :

"ವಾಗ್ಮಿಗಳಲ್ಲಿ ಶ್ರೇಷ್ಠನಾದವನೇ! ನನ್ನ ವಿಷಯದಲ್ಲಿ ನೀನು ಪ್ರಸನ್ನನಾಗಿದ್ದರೆ ನಾನೊಂದು ವರವನ್ನು ಕೇಳುವೆನು. ನನ್ನ ಆ ಪ್ರಾರ್ಥನೆ ಯನ್ನು ಸತ್ಯವನ್ನಾಗಿ ಮಾಡಬೇಕು.

ಮಮ ಹೇತೋಃ ಪರಾಕ್ರಾನ್ತಾ ಯೇ ಗತಾ ಯಮಸಾದನಮ್ ।
ತೇ ಸರ್ವೇ ಜೀವಿತಂ ಪ್ರಾಪ್ಯ ಸಮುತ್ತಿಷ್ಠನ್ತು ವಾನರಾಃ ॥೫॥

ನನ್ನ ಸಲುವಾಗಿ ಯುದ್ಧದಲ್ಲಿ ಪರಾಕ್ರಮವನ್ನು ಪ್ರದರ್ಶಿಸುತ್ತಾ ಶತ್ರುಗಳ ಅಸ್ತ್ರ-ಶಸ್ತ್ರಗಳಿಗೆ ಲಕ್ಷ್ಯರಾಗಿ ಯಮಲೋಕವನ್ನು ಸೇರಿರುವ ಆ ಎಲ್ಲ ವಾನರರೂ ಜೀವಂತರಾಗಿ ಮೇಲೇಳಲಿ.

ಮತ್ಕೃತೇ ವಿಪ್ರಯುಕ್ತಾ ಯೇ ಪುತ್ರೈರ್ದಾರೈಶ್ಚ ವಾನರಾಃ ।
ತಾನ್ಪ್ರೀತಮನಸಃ ಸರ್ವಾನ್ದ್ರಷ್ಟುಮಿಚ್ಛಾಮಿ ಮಾನದ ॥೬॥

ಮಾನದನೇ! ನನ್ನ ಸಲುವಾಗಿ ಯಾವ ವಾನರರು ಪತ್ನೀ-ಪುತ್ರರಿಂದ ವಿರಹಿತರಾಗಿರುವರೋ ಯುದ್ಧದಲ್ಲಿ ಪ್ರಾಣತೊರೆದಿರುವ ಅಂತಹ ವಾನರ ರೆಲ್ಲರನ್ನೂ ಸಂತುಷ್ಟವಾದ ಮನಸ್ಸುಳ್ಳವರನ್ನಾಗಿ ನೋಡಲು ಬಯಸುತ್ತೇನೆ.

ವಿಕ್ರಾನ್ತಾಶ್ಚಾಪಿ ಶೂರಾಶ್ಚ ನ ಮೃತ್ಯುಂ ಗಣಯನ್ತಿ ಚ ।
ಕೃತಯತ್ನಾ ವಿಪನ್ನಾಶ್ಚ ಜೀವಯೈತಾನ್ಪುರಂದರ ॥೭॥

ಆ ವಾನರಸೈನಿಕರು ಮಹಾಪರಾಕ್ರಮಿಗಳೂ ಶೂರರೂ ಆಗಿದ್ದರು. ಮರಣವನ್ನು ಗಣನೆಗೇ ತೆಗೆದುಕೊಳ್ಳುತ್ತಿರಲಿಲ್ಲ. ಅವರೆಲ್ಲರೂ ನನ್ನ ಸಲು ವಾಗಿ ಕಡೆಯವರೆಗೂ ನನ್ನ ವಿಜಯಕ್ಕಾಗಿ ಹೋರಾಡುತ್ತಿದ್ದು ಅಸುನೀಗಿ ದರು. ಪುರಂದರ! ಅವರೆಲ್ಲರನ್ನೂ ಬದುಕಿಸಿಕೊಡು.

ಮತ್ಪ್ರಿಯೇಷ್ವಭಿರಕ್ತಾಶ್ಚ ನ ಮೃತ್ಯುಂ ಗಣಯನ್ತಿ ತೇ ।
ತ್ವತ್ಪ್ರಸಾದಾತ್ಸಮೇಯುಸ್ತೇ ವರಮೇತದಹಂ ವೃಣೇ ॥೮॥

ಆ ವಾನರನಾಯಕರು ನನಗೆ ಪ್ರಿಯವನ್ನುಂಟುಮಾಡುವುದರಲ್ಲಿಯೇ

ಸದಾ ಆಸಕ್ತರಾಗಿರುತ್ತಿದ್ದರು. ಮರಣವನ್ನೂ ಪರಿಗಣಿಸುತ್ತಿರಲಿಲ್ಲ. ನಿನ್ನ ಕೃಪೆಯಿಂದಾಗಿ ಅವರೆಲ್ಲರೂ ನನ್ನೊಡನೆ ಪುನಃ ಸೇರುವಂತಾಗಲಿ. ಈ ಒಂದು ವರವನ್ನು ನಾನು ನಿನ್ನಿಂದ ಅಪೇಕ್ಷಿಸುತ್ತೇನೆ.

ನೀರುಜೋ ನಿರ್ವ್ರಣಾಂಶ್ಚೈವ ಸಂಪನ್ನಬಲಪೌರುಷಾನ್ ।
ಗೋಲಾಙ್ಗೂಲಾಂಸ್ತಥೈವರ್ಕ್ಷಾನ್ದ್ರಷ್ಟುಮಿಚ್ಛಾಮಿ ಮಾನದ ॥೯॥

ಮಾನದನೇ! ಗಾಯಗಳಿಲ್ಲದ, ನೀರೋಗದೃಢಕಾಯರಾದ, ಬಲ-ಪೌರುಷಗಳಿಂದ ಸಂಪನ್ನರಾದ, ಗೋವಿನ ಬಾಲದಂತೆ ಬಾಲವಿರುವ ವಾನರರನ್ನೂ, ಕರಡಿಗಳನ್ನೂ, ಕಪಿಸೈನಿಕರನ್ನೂ ನೋಡಲು ಬಯಸುತ್ತೇನೆ.

ಅಕಾಲೇ ಚಾಪಿ ಪುಷ್ಪಾಣಿ ಮೂಲಾನಿ ಚ ಫಲಾನಿ ಚ ।
ನದ್ಯಶ್ಚ ವಿಮಲಾಸ್ತತ್ರ ತಿಷ್ಠೇಯುರ್ಯತ್ರ ವಾನರಾಃ ॥೧೦॥

ನನಗೆ ಸಹಾಯವನ್ನೆಸಗಿರುವ ವಾನರರು ಎಲ್ಲಿಯೇ ಇದ್ದರೂ ಆ ಸ್ಥಳಗಳಲ್ಲಿ ಅಕಾಲದಲ್ಲಿಯೂ ಪುಷ್ಪ-ಫಲಗಳೂ ಕಂದ-ಮೂಲಗಳೂ ಸಿಗುವಂತಾಗಬೇಕು. ನಿರ್ಮಲವಾದ ನದಿಗಳೂ ಹರಿಯುತ್ತಿರಬೇಕು. ದೇವೇಂದ್ರ! ಈ ವರವನ್ನೂ ನೀನು ದಯಪಾಲಿಸಬೇಕು."

ಮಹಾತ್ಮನಾದ ಶ್ರೀರಾಮನ ಮಾತನ್ನು ಕೇಳಿ ಇಂದ್ರನು ಪ್ರೇಮ ವನ್ನು ಸೂಚಿಸುವ ಈ ಮಾತನ್ನು ಹೇಳಿದನು :

ಮಹಾನಯಂ ವರಸ್ತಾತ ತ್ವಯೋಕ್ತೋ ರಘುನನ್ದನ ।
ದ್ವಿರ್ಮಯಾ ನೋಕ್ತಪೂರ್ವಂ ಹಿ ತಸ್ಮಾದೇತದ್ಭವಿಷ್ಯತಿ ॥೧೨॥

"ರಘುಶ್ರೇಷ್ಠನೇ! ನೀನು ಕೇಳುತ್ತಿರುವ ಈ ವರವು ಅತಿಮಹತ್ತ್ವಪೂರ್ಣವಾದುದು. ಆದರೆ ನಾನೆಂದೂ ಇಬ್ಬಗೆಯ ಮಾತನಾಡಿದವನಲ್ಲ. ಆದುದರಿಂದ ನಿನ್ನ ಪ್ರಾರ್ಥನೆಯಂತೆಯೇ ಎಲ್ಲವೂ ನಡೆಯುತ್ತದೆ.

ಸಮುತ್ಥಾಸ್ಯನ್ತಿ ಹರಯೋ ಯೇ ಹತಾ ಯುಧಿ ರಾಕ್ಷಸೈಃ ।
ಋಕ್ಷಾಶ್ಚ ಸಹಗೋಪುಚ್ಛಾ ನಿಕೃತ್ತಾನನಬಾಹವಃ ॥೧೩॥

ಯುದ್ಧದಲ್ಲಿ ರಾಕ್ಷಸರಿಂದ ಯಾರು ಹತರಾಗಿರುವರೋ ಮತ್ತು ಯಾರ ತೋಳುಗಳು ಮತ್ತು ತಲೆಗಳು ರಾಕ್ಷಸರಿಂದ ಕತ್ತರಿಸಲ್ಪಟ್ಟಿವೆಯೋ–ಆ ಎಲ್ಲ ಗೋಲಾಂಗೂಲಗಳೂ, ಕರಡಿಗಳೂ ಮೇಲೇಳುತ್ತಾರೆ.

ನೀರುಜೋ ನಿರ್ವ್ರಣಾಶ್ಚೈವ ಸಮ್ಪನ್ನಬಲಪೌರುಷಾಃ ।
ಸಮುತ್ಥಾಸ್ಯನ್ತಿ ಹರಯಃ ಸುಪ್ತಾ ನಿದ್ರಾಕ್ಷಯೇ ಯಥಾ ॥೧೪॥

ಯುದ್ಧದಲ್ಲಿ ಅಸುನೀಗಿರುವ ಕಪಿ-ಕರಡಿ-ಗೋಪುಚ್ಛ-ವಾನರಸೈನಿಕರೆಲ್ಲರೂ ಯಾವ ಗಾಯಗಳೂ ಇಲ್ಲದೇ ನೀರೋಗದೃಢಕಾಯರಾಗಿ ಬಲ-ಪೌರುಷಸಂಪನ್ನರಾಗಿ-ಮಲಗಿದ್ದವರು ನಿದ್ರೆಯು ತಿಳಿದನಂತರ ಎದ್ದೇಳುವಂತೆ–ಎದ್ದು ಕುಳಿತುಕೊಳ್ಳುತ್ತಾರೆ. ಎಲ್ಲರೂ ಆನಂದಭರಿತರಾಗಿ ಸುಹೃದರೊಡನೆಯೂ, ಜ್ಞಾತಿಗಳೊಡನೆಯೂ, ಸ್ವಜನರೊಡನೆಯೂ ಸೇರಿಕೊಳ್ಳುತ್ತಾರೆ.

ಅಕಾಲೇ ಪುಷ್ಪಶಬಲಾಃ ಫಲವನ್ತಶ್ಚ ಪಾದಪಾಃ ।
ಭವಿಷ್ಯನ್ತಿ ಮಹೇಷ್ವಾಸ ನದ್ಯಶ್ಚ ಸಲಿಲಾಯುತಾಃ ॥೧೬॥

ಮಹಾಧನುರ್ಧರನೇ! ನಿನ್ನ ಅಪೇಕ್ಷೆಯಂತೆಯೇ ವಾನರಸೈನಿಕರು ಎಲ್ಲಿಯೇ ಇದ್ದರೂ ಆ ಸ್ಥಳಗಳಲ್ಲಿ ಅಕಾಲದಲ್ಲಿಯೂ ಫಲ-ಪುಷ್ಪ-ಕಂದ-ಮೂಲಗಳು ಲಭಿಸುತ್ತವೆ. ನದಿಗಳೂ ನೀರಿನಿಂದ ತುಂಬಿ ಹರಿಯುತ್ತಿರುತ್ತವೆ."

ಇಂದ್ರನು ಹೀಗೆ ಹೇಳಿದೊಡನೆಯೇ ಶರೀರಾದ್ಯಂತವಾಗಿ ಗಾಯಗೊಂಡಿದ್ದು ಮೃತರಾಗಿದ್ದ ವಾನರಸೈನಿಕರೆಲ್ಲರೂ ಗಾಯಗಳ ಕುರುಹೂ ಇಲ್ಲದೆ ನಿದ್ರಿಸುತ್ತಿದ್ದವರು ಎಚ್ಚರಗೊಂಡಂತೆ ಎದ್ದು ಕುಳಿತರು.

ಮೃತರಾಗಿದ್ದ ವಾನರರೆಲ್ಲರೂ ಜೀವಂತರಾಗಲು 'ಇದೇನಿದು? ಅತ್ಯದ್ಭುತ'–ಎಂದು ಹೇಳಿಕೊಳ್ಳುತ್ತಾ ವಾನರರೆಲ್ಲರೂ ಆಶ್ಚರ್ಯಚಕಿತರಾಗಿ ಶ್ರೀರಾಮನಿಗೆ ಅಭಿವಾದನಪೂರ್ವಕವಾಗಿ ನಮಸ್ಕರಿಸಿದರು. ಶ್ರೀರಾಮನು ಸಫಲಮನೋರಥನಾದುದನ್ನು ನೋಡಿ ಶ್ರೇಷ್ಠರಾದ ದೇವತೆಗಳು ರಾಮ-ಲಕ್ಷ್ಮಣರನ್ನು ಸ್ತೋತ್ರಮಾಡುತ್ತಾ ಪರಮಪ್ರೀತರಾಗಿ ಶ್ರೀರಾಮನಿಗೆ ಹೇಳಿದರು:

"ಮಹಾರಾಜ! ನೀನಿನ್ನು ಈ ವಾನರಸೈನಿಕರನ್ನು ಬೀಳ್ಕೊಟ್ಟು ಸೀತಾ-ಲಕ್ಷ್ಮಣಸಮೇತನಾಗಿ ಅಯೋಧ್ಯೆಗೆ ಹೊರಡು. ನಿನ್ನಲ್ಲಿಯೇ ಯಾವಾಗಲೂ ಅನುರಕ್ತಳಾಗಿರುವ ಯಶೋವತಿಯಾದ ಸೀತಾದೇವಿಯನ್ನು ಸವಿಮಾತುಗಳಿಂದ ಸಂತೈಸು. ನಿನ್ನ ಅಗಲಿಕೆಯ ಶೋಕದಿಂದ ಪೀಡಿತನಾಗಿ

ಹದಿನಾಲ್ಕು ವರ್ಷಗಳಿಂದಲೂ ವ್ರತನಿಷ್ಠನಾಗಿರುವ ನಿನ್ನ ಅನುಜನಾದ ಭರತನನ್ನೂ, ಮಹಾತ್ಮನಾದ ಶತ್ರುಘ್ನನನ್ನೂ, ಅಂತೆಯೇ ನಿನ್ನ ಎಲ್ಲ ತಾಯಂದಿರನ್ನೂ ಶೀಘ್ರವಾಗಿ ಸಂದರ್ಶಿಸು. ಅನಂತರ ಪಟ್ಟಾಭಿಷಿಕ್ತನಾಗಿ ಪುರಜನರಿಗೆ ಸಂತೋಷವನ್ನುಂಟುಮಾಡು."

ಲಕ್ಷ್ಮಣನೊಡನಿದ್ದ ಶ್ರೀರಾಮನಿಗೆ ದೇವಶ್ರೇಷ್ಠರೆಲ್ಲರೂ ಹೀಗೆ ಹೇಳಿ ಪರಮಹೃಷ್ಟರಾಗಿ ಸೂರ್ಯಸದೃಶವಾದ ವಿಮಾನಗಳಲ್ಲಿ ಕುಳಿತು ದೇವೇಂದ್ರ ನೊಡನೆ ಸ್ವರ್ಗಕ್ಕೆ ತೆರಳಿದರು. ದೇವತೆಗಳು ಹೊರಡುವುದಕ್ಕೆ ಮೊದಲು ಶ್ರೀರಾಮನು ಲಕ್ಷ್ಮಣನೊಡನೆ ಎಲ್ಲ ದೇವತೆಗಳಿಗೂ ಅಭಿವಾದನಮಾಡಿ ಅವರನ್ನು ಬೀಳ್ಕೊಟ್ಟನು. ಅನಂತರ ಎಲ್ಲರೂ ವಿಶ್ರಾಂತಿಯನ್ನು ಪಡೆಯು ವಂತೆ ಆಜ್ಞಾಪಿಸಿದನು.

ರಾಮ-ಲಕ್ಷ್ಮಣರಿಂದ ಪರಿಪಾಲಿಸಲ್ಪಡುತ್ತಿದ್ದ, ಪ್ರಹೃಷ್ಟರಾದ ಜನ ರಿಂದ ಕೂಡಿದ್ದ ಆ ಮಹಾವಾನರಸೈನ್ಯವು ಚಂದ್ರನ ಬೆಳದಿಂಗಳಿನಿಂದ ಪ್ರಕಾಶಗೊಂಡ ರಾತ್ರಿಯಂತೆ–ಅದ್ಭುತವಾದ ಕಾಂತಿಯಿಂದ ಪ್ರಜ್ವಲಿಸುತ್ತಾ ರಾರಾಜಿಸುತ್ತಿದ್ದಿತು.

೧೨೦ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೧೨೧ನೆಯ ಸರ್ಗ

ಅಯೋಧ್ಯೆಗೆ ಹೊರಡಲು ಶ್ರೀರಾಮನ ಸಿದ್ಧತೆ : ವಿಭೀಷಣನು ಪುಷ್ಪಕವಿಮಾನದಲ್ಲಿ ಹೋಗುವಂತೆ ಶ್ರೀರಾಮನನ್ನು ಪ್ರಾರ್ಥಿಸಿದುದು

ತಾಂ ರಾತ್ರಿಮುಷಿತಂ ರಾಮಂ ಸುಖೋತ್ಥಿತಮರಿಂದಮಮ್ ।
ಅಬ್ರವೀತ್ಪ್ರಾಞ್ಜಲಿರ್ವಾಕ್ಯಂ ಜಯಂ ಪೃಷ್ಟ್ವಾ ವಿಭೀಷಣಃ ॥೧॥

ಶತ್ರುಸೂದನನಾದ ಶ್ರೀರಾಮನು ಆ ರಾತ್ರಿಯಲ್ಲಿ ವಿಶ್ರಾಂತಿಯನ್ನು ಪಡೆದು ಮರುದಿನ ಮುಂಜಾನೆ ಎಚ್ಚರಗೊಳ್ಳುತ್ತಲೇ ವಿಭೀಷಣನು 'ಶ್ರೀರಾಮನಿಗೆ ಜಯವಾಗಲಿ'–ಎಂದೆನ್ನುತ್ತಾ ಕೈಮುಗಿದು ಹೇಳಿದನು :

"ರಘುನಂದನ! ಸ್ನಾನಕ್ಕೆ ಸಂಬಂಧಿಸಿದಂತೆ ನೀರು, ಅಂಗರಾಗ,

ವಸ್ತ್ರಗಳು, ಆಭರಣಗಳು, ಚಂದನಗಳು, ದಿವ್ಯವಾದ ವಿಧ-ವಿಧವಾದ ಮಾಲೆಗಳು ಎಲ್ಲವೂ ಸಿದ್ಧವಾಗಿವೆ. ಸಿಂಗರಿಸುವ ಕಲೆಯನ್ನು ಚೆನ್ನಾಗಿ ತಿಳಿದಿರುವ ಕಮಲಾಕ್ಷಿಯರಾದ ಈ ಸ್ತ್ರೀಯರು ನಿನ್ನ ಸೇವೆಮಾಡಲು ಸಿದ್ಧರಾಗಿ ನಿಂತಿರುವರು. ಇವರು ನಿನಗೆ ವಿಧಿವತ್ತಾಗಿ ಸ್ನಾನಮಾಡಿಸುತ್ತಾರೆ. ನನ್ನನ್ನು ಅನುಗ್ರಹಿಸುವ ಸಲುವಾಗಿ ಇವೆಲ್ಲವನ್ನೂ ಸ್ವೀಕರಿಸುವ ಕೃಪೆಮಾಡು."

ವಿಭೀಷಣನು ಹೀಗೆ ಹೇಳಲು ಶ್ರೀರಾಮನು ಪ್ರತ್ಯುತ್ತರಿಸಿದನು :

"ರಾಕ್ಷಸೇಶ್ವರನೇ! ಸುಗ್ರೀವನೇ ಮೊದಲಾದ ವಾನರಶ್ರೇಷ್ಠರನ್ನು ಸ್ನಾನಕ್ಕಾಗಿ ಆಮಂತ್ರಿಸು. ಸುಖಪಡಲು ಯೋಗ್ಯನಾದ, ಸುಕುಮಾರನಾದ, ಸತ್ಯನಿಷ್ಠನಾದ, ಮಹಾಬಾಹುವಾದ ಭರತನು ನನ್ನ ಸಲುವಾಗಿ ಅಯೋಧ್ಯೆಯಲ್ಲಿ ಪರಿತಪಿಸುತ್ತಿದ್ದಾನೆ. ಧರ್ಮಪರಾಯಣನಾದ ಕೈಕೇಯೀಪುತ್ರನನ್ನು ಬಿಟ್ಟು ನನಗೆ ರಾಜೋಚಿತವಾದ ರೀತಿಯಲ್ಲಿ ಸ್ನಾನಮಾಡುವ ಮತ್ತು ರಾಜೋಚಿತವಾದ ವಸ್ತ್ರಾಭರಣಗಳನ್ನು ತೊಡುವ ಅಪೇಕ್ಷೆಯಿಲ್ಲ. ಆದುದರಿಂದ ನಾನಿಲ್ಲಿಂದಲೇ ಅಯೋಧ್ಯೆಗೆ ಶೀಘ್ರವಾಗಿ ಹೊರಡುತ್ತೇನೆ. ನಾವು ಪಾದಚಾರಿಗಳಾಗಿಯೇ ಅಯೋಧ್ಯೆಗೆ ಹೋಗಬೇಕಾದರೆ ಹೆಚ್ಚು ಕಾಲವೂ ಬೇಕಾಗುತ್ತದೆ. ದಾರಿಯೂ ಕೂಡ ಅತಿದುರ್ಗಮವಾಗಿದೆ."

ಶ್ರೀರಾಮನು ಹೀಗೆ ಹೇಳಲು ವಿಭೀಷಣನು ಪ್ರತ್ಯುತ್ತರಿಸಿದನು :

"ರಾಜಕುಮಾರನೇ! ನೀನು ಈ ವಿಷಯವಾಗಿ ಚಿಂತಿಸುವ ಕಾರಣವಿಲ್ಲ. ಒಂದೇ ಹಗಲಿನಲ್ಲಿ ನಿನ್ನನ್ನು ಅಯೋಧ್ಯೆಗೆ ಕಳುಹಿಸಿಕೊಡುವ ವ್ಯವಸ್ಥೆಯನ್ನು ನಾನು ಮಾಡುತ್ತೇನೆ.

ರಾಘವ! ನಿನಗೆ ಮಂಗಳವಾಗಲಿ! ಪುಷ್ಪಕವೆಂಬ ಹೆಸರಿನ ಸೂರ್ಯಸದೃಶವಾದ ವಿಮಾನವು ಇಲ್ಲಿಯೇ ಇದೆ. ಈ ವಿಮಾನವು ಮೊದಲು ನನ್ನ ಅಣ್ಣನಾದ ಕುಬೇರನದಾಗಿದ್ದಿತು. ಬಲಿಷ್ಠನಾದ ರಾವಣನು ಯುದ್ಧದಲ್ಲಿ ಕುಬೇರನನ್ನು ಪರಾಜಯಗೊಳಿಸಿ ಈ ವಿಮಾನವನ್ನು ತಂದಿದ್ದನು. ಈ ವಿಮಾನವು ಇಚ್ಛಾನುಸಾರವಾಗಿ ಹೋಗಬಲ್ಲುದು. ದಿವ್ಯವಾದುದು ಮತ್ತು ಶ್ರೇಷ್ಠವಾದುದು. ನಿನ್ನ ಸಲುವಾಗಿಯೇ ನಾನಿದನ್ನು ರಕ್ಷಣೆಮಾಡುತ್ತಿದ್ದೇನೆ. ನಿನ್ನ ಪ್ರಯಾಣಕ್ಕಾಗಿಯೇ ಈ ವಿಮಾನವು ಸಿದ್ಧವಾಗಿ ನಿಂತಿದೆ. ಮೇಘ

ಸದೃಶವಾದ ವಿಮಾನವು ಇಲ್ಲಿಯೇ ನಿಂತಿದೆ. ಯಾವ ಚಿಂತೆಯೂ ಇಲ್ಲದೇ ಈ ವಿಮಾನದಲ್ಲಿ ಕುಳಿತು ನೀನು ಅಯೋಧ್ಯೆಗೆ ಹೋಗುವೆ.

ರಾಘವ! ನಾನು ನಿನ್ನ ಕೃಪೆಗೆ ಪಾತ್ರನಾಗಿದ್ದರೆ, ನನ್ನಲ್ಲಿರುವ ಗುಣ ಗಳನ್ನು ನೀನು ಗುರುತಿಸುವೆಯಾದರೆ, ನನ್ನ ಮೇಲೆ ನಿನಗೆ ಸ್ನೇಹವಿರುವುದಾದರೆ–ಭಾರ್ಯೆಯಾದ ಸೀತಾದೇವಿಯೊಡನೆಯೂ ತಮ್ಮನಾದ ಲಕ್ಷ್ಮಣನೊಡನೆಯೂ ಸ್ವಲ್ಪದಿವಸಗಳವರೆಗೆ ಇಲ್ಲಿಯೇ ಇರು. ಮನೋವಾಂಛಿತವಾದ ವಸ್ತುಗಳಿಂದ ನಿನ್ನನ್ನು ಸತ್ಕರಿಸಬೇಕೆನ್ನುವ ಅಭಿಲಾಷೆಯಿದೆ. ಆದುದರಿಂದ ನನ್ನ ಸತ್ಕಾರವನ್ನು ಸ್ವೀಕರಿಸಿದನಂತರ ನೀನು ಅಯೋಧ್ಯೆಗೆ ಪ್ರಯಾಣ ಮಾಡಬಹುದಾಗಿದೆ. ಪ್ರೀತಿಯಿಂದ ಮಾಡುವ ನನ್ನ ಈ ಸತ್ಕಾರವನ್ನು ಸುಹೃದರೊಡನೆಯೂ ಸೈನಿಕರೊಡನೆಯೂ ಪ್ರತಿಗ್ರಹಿಸು. ಪ್ರೇಮದಿಂದಲೂ, ಅಭಿಮಾನದಿಂದಲೂ, ಸ್ನೇಹದಿಂದಲೂ ನನ್ನ ಸತ್ಕಾರವನ್ನು ಸ್ವೀಕರಿಸುವಂತೆ ನಿನ್ನನ್ನು ಪ್ರಾರ್ಥಿಸಿಕೊಳ್ಳುತ್ತಿದ್ದೇನೆ. ನಿನ್ನ ಸೇವಕನಾಗಿರುವ ನಾನು ನಿನಗೆ ಆಜ್ಞಾಪಿಸುತ್ತಿಲ್ಲ."

ವಿಭೀಷಣನು ಹೀಗೆ ಹೇಳಲು ಶ್ರೀರಾಮನು ವಾನರಸೈನಿಕರೂ ರಾಕ್ಷಸರೂ ಕೇಳುತ್ತಿರುವಂತೆಯೇ ಹೇಳಿದನು :

"ವೀರನೇ! ವಿಭೀಷಣ! ನೀನು ನನಗೆ ಸಚಿವನೂ ಸ್ನೇಹಿತನೂ ಆಗಿದ್ದು ನಾನಾಪ್ರಕಾರವಾದ ಹಿತವಚನಗಳಿಂದಲೂ ಮತ್ತು ಸಮಯೋಚಿತವಾದ ಕಾರ್ಯಗಳಿಂದಲೂ ನನ್ನನ್ನು ಸಂಪೂಜಿಸಿರುವೆ. ಈ ನಿನ್ನ ಸಹಕಾರವೇ ಎಲ್ಲಕ್ಕೂ ಮಿಗಿಲಾದ ಸತ್ಕಾರವಾಗಿದೆ. ಈಗಲೂ ನಿನ್ನ ಈ ಮಾತನ್ನು ನಡೆಸಿಕೊಡುವುದಿಲ್ಲವೆಂದು ನಾನೆಂದಿಗೂ ಹೇಳಲಾರೆನು. ಆದರೆ ನನ್ನ ತಮ್ಮನನ್ನು ನೋಡಲು ನನ್ನ ಮನಸ್ಸು ಬಹಳವಾಗಿ ತವಕಿಸುತ್ತಿದೆ. ನನ್ನನ್ನು ಹಿಂದಕ್ಕೆ ಕರೆದೊಯ್ಯಲು ಭರತನು ಚಿತ್ರಕೂಟಕ್ಕೂ ಬಂದಿದ್ದನು. ತಲೆಬಾಗಿ ನನ್ನನ್ನು ಹಿಂದಿರುಗುವಂತೆ ಬಹಳವಾಗಿ ಬೇಡಿಕೊಂಡನು. ಆದರೂ ಅವನ ಮಾತನ್ನು ನಾನು ಕೇಳಲಿಲ್ಲ. ಅಯೋಧ್ಯೆಗೆ ಹಿಂದಿರುಗಲಿಲ್ಲ. ಅವನೀಗ ನನ್ನ ಆಗಮನವನ್ನೇ ನಿರೀಕ್ಷಿಸುತ್ತಿದ್ದಾನೆ. ಆದುದರಿಂದ ನಾನು ಶೀಘ್ರವಾಗಿ ಅಯೋಧ್ಯೆಗೆ ಹೋಗಬೇಕಾಗಿದೆ. ಮೇಲಾಗಿ ತಾಯಂದಿರಾದ ಕೌಸಲ್ಯಾ-ಸುಮಿತ್ರಾ-ಕೈಕೇಯಿಯರನ್ನೂ, ಮಿತ್ರಶ್ರೇಷ್ಠನಾದ ಗುಹನನ್ನೂ, ಪಟ್ಟಣಿಗ

ರನ್ನೂ, ಹಳ್ಳಿಗಳಲ್ಲಿನ ಪ್ರಜೆಗಳನ್ನೂ, ಸುಹೃದರನ್ನೂ ನೋಡಲು ನನ್ನ ಮನಸ್ಸು ಬಹಳವಾಗಿ ತವಕಿಸುತ್ತಿದೆ. ಸೌಮ್ಯನೇ! ವಿಭೀಷಣ! ನನಗೆ ಪ್ರಯಾಣಮಾಡಲು ಒಪ್ಪಿಗೆ ಕೊಡು. ನಿನ್ನಿಂದ ಅನೇಕರೀತಿಗಳಲ್ಲಿ ನಾನು ಸಮ್ಮಾನಿತನಾಗಿದ್ದೇನೆ. ನಾನು ಹೀಗೆ ಹೇಳುತ್ತಿರುವುದಕ್ಕೆ ಕೋಪಿಸಿಕೊಳ್ಳಬೇಡ. ನನ್ನನ್ನು ಕಳುಹಿಸಿಕೊಡುವಂತೆ ಪುನಃ ಪುನಃ ಪ್ರಾರ್ಥಿಸುತ್ತೇನೆ. ವಿಮಾನವನ್ನು ಶೀಘ್ರವಾಗಿ ತಂದು ನಿಲ್ಲಿಸು. ನನ್ನ ಕಾರ್ಯಗಳೆಲ್ಲವೂ ಮುಗಿದಿವೆ. ಕಾರ್ಯಗಳೆವೂ ಮುಗಿದನಂತರ ಇಲ್ಲಿರುವುದು ಹೇಗೆ ಸಮ್ಮತವಾದೀತು?"

ಶ್ರೀರಾಮನ ಮಾತನ್ನು ಕೇಳಿ ರಾಕ್ಷಸೇಂದ್ರನಾದ ವಿಭೀಷಣನು ಪುಷ್ಪಕವಿಮಾನವನ್ನು ತೆಗೆದುಕೊಂಡು ಅತಿಶೀಘ್ರವಾಗಿ ಶ್ರೀರಾಮನಿದ್ದೆಡೆಗೆ ಹಿಂದಿರುಗಿ ಬಂದನು.

ಆ ಪುಷ್ಪಕವಿಮಾನದ ಒಂದೊಂದು ಅಂಗಗಳೂ ಚಿನ್ನದಿಂದ ಚಿತ್ರಿಸಲ್ಪಟ್ಟಿದ್ದುವು. ಅದರಲ್ಲಿ ವೈಡೂರ್ಯಗಳಿಂದಲೂ ಮಣಿಗಳಿಂದಲೂ ಮಾಡಲ್ಪಟ್ಟ ವೇದಿಕೆ (ಜಗುಲಿ) ಗಳಿದ್ದುವು. ಅಲ್ಲಲ್ಲಿ ಗುಪ್ತಗೃಹಗಳಿದ್ದುವು. ಎಲ್ಲ ಕಡೆಗಳಲ್ಲಿಯೂ ಆ ವಿಮಾನವು ಬೆಳ್ಳಿಯ ಪ್ರಭೆಯಿಂದ ಶೋಭಿಸುತ್ತಿದ್ದಿತು. ಬಿಳಿಯ ಪತಾಕೆಗಳಿಂದಲೂ ಧ್ವಜಗಳಿಂದಲೂ ಸಮಲಂಕೃತವಾಗಿದ್ದಿತು. ಸುವರ್ಣಮಯವಾದ ಕಮಲಗಳಿಂದ ವಿಭೂಷಿತವಾದ ಸುವರ್ಣಮಯವಾದ ಉಪ್ಪರಿಗೆಗಳಿಂದ ಆ ವಿಮಾನವು ಶೋಭಿಸುತ್ತಿದ್ದಿತು. ಅದರ ಸುತ್ತಲೂ ಸಣ್ಣ-ಸಣ್ಣ ಗಂಟೆಗಳ ಸಾಲುಗಳೇ ಇದ್ದುವು. ಮುತ್ತು ಮತ್ತು ಮಣಿಗಳಿಂದ ಮಾಡಿದ ಕಿಟಕಿಗಳಿದ್ದುವು. ಗಂಟೆಗಳ ಸಮೂಹಗಳಿಂದ ಸಮಲಂಕೃತವಾಗಿದ್ದು ಎಲ್ಲ ಕಡೆಗಳಲ್ಲಿಯೂ ಸುಮಧುರವಾದ ನಿನಾದವು ಕೇಳಿಬರುತ್ತಿದ್ದಿತು. ಮೇರುಶಿಖರದ ಆಕಾರದಲ್ಲಿದ್ದ ಆ ವಿಮಾನವನ್ನು ವಿಶ್ವಕರ್ಮನೇ ರಚಿಸಿದ್ದನು. ಮುತ್ತು ಮತ್ತು ಬೆಳ್ಳಿಗಳಿಂದ ಶೋಭಾಯಮಾನವಾಗಿ ಅಲಂಕರಿಸಲ್ಪಟ್ಟಿದ್ದ ದೊಡ್ಡ-ದೊಡ್ಡ ಪ್ರಾಸಾದಗಳಿಂದ ಆ ವಿಮಾನವು ಭೂಷಿತವಾಗಿದ್ದಿತು. ಅದರ ತಳಭಾಗವು ವಿಚಿತ್ರವಾದ ಸ್ಫಟಿಕಮಣಿಗಳಿಂದ ನಿರ್ಮಿತವಾಗಿದ್ದಿತು. ಬಹುಮೂಲ್ಯವಾದ ಮೇಲುಹೊದ್ದಿಕೆಯನ್ನು ಹೊಂದಿದ್ದ ವೈಡೂರ್ಯಮಯವಾದ ಸಿಂಹಾಸನಗಳಿಂದ

ಅದು ಸಂಪನ್ನವಾಗಿದ್ದಿತು. ಶತ್ರುಗಳಿಂದ ಎದುರಿಸಲು ಅಸಾಧ್ಯವಾಗಿದ್ದ, ಮನೋವೇಗದಿಂದ ಕೂಡಿದ್ದ ಪುಷ್ಪಕವಿಮಾನವು ಪ್ರಯಾಣಕ್ಕೆ ಸಿದ್ಧವಾಗಿರುವುದೆಂದು ವಿಭೀಷಣನು ಶ್ರೀರಾಮನಿಗೆ ಹೇಳಿ ಅಲ್ಲಿಯೇ ನಿಂತುಕೊಂಡನು. ಪರ್ವತಸದೃಶವಾಗಿದ್ದ, ಇಚ್ಛೆಬಂದೆಡೆಗೆ ಹೋಗಲು ಸಮರ್ಥವಾಗಿದ್ದ, ಪ್ರಯಾಣಕ್ಕೆ ಸಿದ್ಧವಾಗಿದ್ದ ಆ ಪುಷ್ಪಕವಿಮಾನವನ್ನು ನೋಡಿ ಉದಾರಸತ್ತ್ವನಾದ ಶ್ರೀರಾಮನೂ ಲಕ್ಷ್ಮಣನೊಡನೆ ಅಚ್ಚರಿಗೊಂಡನು.

೧೨೧ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೧೨೨ನೆಯ ಸರ್ಗ

ಶ್ರೀರಾಮನ ಆಜ್ಞೆಯಂತೆ ವಿಭೀಷಣನಿಂದ ವಾನರಸೈನಿಕರಿಗೆ ಸತ್ಕಾರ : ಸುಗ್ರೀವ-ವಿಭೀಷಣರೊಡನೆಯೂ ವಾನರರೊಡನೆಯೂ ಪುಷ್ಪಕವಿಮಾನದಲ್ಲಿ ಅಯೋಧ್ಯೆಗೆ ಶ್ರೀರಾಮನ ಪ್ರಯಾಣ

ಉಪಸ್ಥಿತಂ ತು ತಂ ದೃಷ್ಟ್ವಾ ಪುಷ್ಪಕಂ ಪುಷ್ಪಭೂಷಿತಮ್ ।
ಅವಿದೂರ ಸ್ಥಿತೋ ರಾಮಂ ಪ್ರತ್ಯುವಾಚ ವಿಭೀಷಣಃ ॥೧॥

ಹೂಗಳಿಂದ ಸಮಲಂಕೃತವಾಗಿದ್ದ ಪುಷ್ಪಕವಿಮಾನವನ್ನು ಸ್ವಲ್ಪದೂರದಲ್ಲಿ ನಿಲ್ಲಿಸಿ ಶ್ರೀರಾಮನ ಬಳಿಗೆ ಬಂದು ವಿಭೀಷಣನು ಹೇಳಿದನು :

ಕೈಮುಗಿದುಕೊಂಡು ವಿನೀತನಾಗಿ ನಿಂತಿದ್ದ ಮುಖದಲ್ಲಿ ಅವಸರವನ್ನು ತೋರ್ಪಡಿಸುತ್ತಿದ್ದ ವಿಭೀಷಣನು ಶ್ರೀರಾಮನನ್ನು ಮುಂದೇನು ಮಾಡಬೇಕೆಂದು ಪ್ರಶ್ನಿಸಿದನು.

ವಿಭೀಷಣನು ಹೀಗೆ ಪ್ರಶ್ನಿಸಲು ಮಹಾತೇಜಸ್ವಿಯಾದ ಶ್ರೀರಾಮನು ಚೆನ್ನಾಗಿ ವಿಮರ್ಶಿಸಿ ಲಕ್ಷ್ಮಣನಿಗೂ ಕೇಳಿಸುವಂತೆ ಸ್ನೇಹಯುಕ್ತವಾದ ಮಾತನ್ನು ಹೇಳಿದನು :

"ವಿಭೀಷಣ! ಈ ಎಲ್ಲ ವಾನರಸೈನಿಕರೂ ನಮ್ಮ ವಿಜಯದ ಸಲುವಾಗಿ ಶತ್ರುಗಳೊಡನೆ ಯುದ್ಧಮಾಡಿ ಶ್ರಮಿಸಿದ್ದಾರೆ. ನೀನು ಇವರೆಲ್ಲರನ್ನೂ

ಧನ-ಕನಕ-ವಸ್ತು-ವಾಹನಾದಿಗಳ ಮೂಲಕ ಸತ್ಕರಿಸು. ರಾಕ್ಷಸೇಶ್ವರನೇ! ಪ್ರಾಣಭಯವನ್ನು ತೊರೆದು ಯುದ್ಧಮಾಡುತ್ತಿದ್ದ ಮತ್ತು ಯಾವುದೇ ಕಾರಣದಿಂದಲೂ ಯುದ್ಧದಿಂದ ಹಿಮ್ಮೆಟ್ಟದಿದ್ದ ಪರಮಹೃಷ್ಟರಾದ ಈ ವಾನರಸೈನಿಕರೊಡನೆ ಸೇರಿಕೊಂಡು ನೀನು ಈ ಲಂಕಾಪಟ್ಟಣವನ್ನು ಗೆದ್ದು ಕೊಂಡಿರುವೆ. ಈ ವಾನರವೀರರೆಲ್ಲರೂ ತಮ್ಮ-ತಮ್ಮ ಕಾರ್ಯಗಳನ್ನು ಮುಗಿಸಿದ್ದಾರೆ. ಆದುದರಿಂದ ಇವರು ಮಾಡಿರುವ ಕಾರ್ಯದ ಸಾಫಲ್ಯ ಕ್ಕಾಗಿ ಇವರಿಗೆ ಧನ-ಕನಕ-ವಸ್ತು-ವಾಹನಗಳನ್ನು ಪಾರಿತೋಷಿಕವಾಗಿ ಕೊಡು. ಇವರು ಮಾಡಿರುವ ಸಹಾಯಕ್ಕೆ ಕೃತಜ್ಞತೆಯನ್ನು ತೋರಿಸ ಬೇಕಾಗಿರುವ ನೀನು ನನ್ನ ಸಲಹೆಯಂತೆ ಇವರನ್ನು ಧನ-ಕನಕಗಳಿಂದ ಸಮ್ಮಾನಿಸಿ ಅಭಿನಂದಿಸಿದ್ದೇ ಆದರೆ ವಾನರಸೈನಿಕರು ಅತ್ಯಂತಸಂತುಷ್ಟರಾಗುವರು. ನೀನು ಹೀಗೆ ಮಾಡಿದೆಯಾದರೆ ಪ್ರಪಂಚದ ಸಮಸ್ತಜನರೂ 'ವಿಭೀಷಣನು ಧನ-ಕನಕ-ವಸ್ತು-ವಾಹನಗಳ ತ್ಯಾಗದಿಂದಾದರೂ ಮಿತ್ರರನ್ನು ಸಂಗ್ರಹಿಸತಕ್ಕವನೆಂದೂ, ದಯಾಪರನೆಂದೂ, ಜಿತೇಂದ್ರಿಯನೆಂದೂ ತಿಳಿಯುತ್ತಾರೆ. ಈ ಕಾರಣದಿಂದಲೇ ನಾನು ನಿನಗೆ ಈ ವಿಷಯವನ್ನು ಹೇಳುತ್ತಿರುವೆನು.

ಹೀನಂ ರತಿಗುಣೈಃ ಸರ್ವೈರಭಿಹನ್ತಾರಮಾಹವೇ ।
ತ್ಯಜನ್ತಿ ನೃಪತಿಂ ಸೈನ್ಯಾಃ ಸಂವಿಗ್ನಾಸ್ತಂ ನರೇಶ್ವರಮ್ ॥೯॥

ಯಾವ ರಾಜನು ಸೇವಕರಲ್ಲಿ ಪ್ರೇಮವನ್ನು ಹುಟ್ಟಿಸುವ ದಾನ-ಬಹು ಮಾನಾದಿ ಉದಾರವಾದ ಗುಣಗಳಿಂದ ಶೂನ್ಯನಾಗಿರುವನೋ–ಅಂತಹವ ನನ್ನು ಉದ್ವಿಗ್ನರಾದ ಸೈನಿಕರು ಯುದ್ಧದ ಸಮಯದಲ್ಲಿ ಪರಿತ್ಯಜಿಸಿ ಹೋಗು ತ್ತಾರೆ. ರಾಜನು ತಮ್ಮನ್ನು ಯುದ್ಧದಲ್ಲಿ ಕೊಲ್ಲಿಸುವನೆಂದೂ ತಮ್ಮ ಭರಣ-ಪೋಷಣೆಗಳ ಯೋಗ-ಕ್ಷೇಮಗಳ ಚಿಂತೆಯೇ ಅವನಿಗಿಲ್ಲವೆಂದೂ ಅವರು ಭಾವಿಸುತ್ತಾರೆ."

ಶ್ರೀರಾಮನು ಹೀಗೆ ಹೇಳಲು ವಿಭೀಷಣನು ಆ ಎಲ್ಲ ವಾನರಸೈನಿಕ ರಿಗೂ ಅಮೂಲ್ಯವಾದ ರತ್ನಗಳನ್ನೂ ಐಶ್ವರ್ಯವನ್ನೂ ಯಥಾಯೋಗ್ಯವಾದ ವಿಭಾಗದಿಂದ ಸತ್ಕರಿಸಿದನು. ವಾನರದಳಪತಿಗಳೆಲ್ಲರೂ ಧನ-ಕನಕ-ರತ್ನಗಳಿಂದ ಸತ್ಕೃತರಾದುದನ್ನು ಕಂಡು ಶ್ರೀರಾಮನು ಲಜ್ಜಾಶೀಲಳಾದ

ಮತ್ತು ಮನಸ್ವಿನಿಯಾದ ಸೀತಾದೇವಿಯನ್ನು ಕಂಕುಳಿನಲ್ಲೆತ್ತಿಕೊಂಡು ಮಹಾ ಪರಾಕ್ರಮಿಯೂ ಶ್ರೇಷ್ಠಧನುರ್ಧಾರಿಯೂ ಆದ ಲಕ್ಷ್ಮಣನೊಡನೆ ಉತ್ತ ಮೋತ್ತಮವಾದ ಆ ಪುಷ್ಪಕವಿಮಾನವನ್ನು ಹತ್ತಿದನು.

ಶ್ರೀರಾಮನು ವಿಮಾನದಲ್ಲಿ ಕುಳಿತನಂತರ ಸಮಸ್ತವಾನರಸೈನಿಕರನ್ನೂ ಸಮಾದರಿಸುತ್ತಾ ಮಹಾವೀರ್ಯನಾದ ಸುಗ್ರೀವನಿಗೂ ರಾಕ್ಷಸೇಶ್ವರನಾದ ವಿಭೀಷಣನಿಗೂ ಹೇಳಿದನು :

"ವಾನರ-ರಾಕ್ಷಸಶ್ರೇಷ್ಠರೇ! ನೀವೆಲ್ಲರೂ ಮಿತ್ರನೊಬ್ಬನ ಕಾರ್ಯ ವನ್ನು ಸಮುಚಿತವಾದ ರೀತಿಯಲ್ಲಿ ಮಾಡಿ ಮುಗಿಸಿರುವಿರಿ. ನನ್ನಿಂದ ಅನುಜ್ಞೆಯನ್ನು ಪಡೆದ ನೀವೆಲ್ಲರೂ ಯಥೇಚ್ಛವಾಗಿ ನಿಮ್ಮ-ನಿಮ್ಮ ನಿವಾಸ ಗಳಿಗೆ ತೆರಳಿರಿ.

ಸುಗ್ರೀವ! ಅಧರ್ಮಕಾರ್ಯವನ್ನು ಮಾಡಲು ಭಯಪಡುವವನೇ! ಹಿತೈಷಿಯಾದ ಮತ್ತು ಸ್ನೇಹಪರನಾದ ಮಿತ್ರನೊಬ್ಬನು ಯಾವ ಕಾರ್ಯವನ್ನು ಮಾಡಬಹುದಾಗಿದ್ದಿತೋ–ಅಂತಹ ಕಾರ್ಯವನ್ನು ನೀನು ಸಂಪೂರ್ಣವಾಗಿ ಮಾಡಿರುವೆ. ನೀನೀಗಲೇ ನಿನ್ನ ಸೈನಿಕರೊಡನೆ ಕಿಷ್ಕಿಂಧೆಗೆ ಪ್ರಯಾಣಮಾಡು.

ವಿಭೀಷಣ! ನೀನು ಕೂಡ ನನ್ನಿಂದ ಕೊಡಲ್ಪಟ್ಟಿರುವ ನಿನ್ನದೇ ಆದ ಲಂಕಾರಾಜ್ಯದ ರಾಜಪದವಿಯಲ್ಲಿ ಸ್ಥಿರನಾಗಿರು. ಇಂದ್ರಸಹಿತರಾದ ದೇವತೆಗಳು ಕೂಡ ಈಗ ನಿನ್ನನ್ನು ಎದುರಿಸಲಾರರು. ನಾನಾದರೋ ನನ್ನ ತಂದೆಯ ರಾಜಧಾನಿಯಾದ ಅಯೋಧ್ಯೆಗೆ ಹೋಗುತ್ತೇನೆ. ನಿಮ್ಮೆಲ್ಲರಿಂದಲೂ ನಾನು ಅಯೋಧ್ಯೆಗೆ ಪ್ರಯಾಣಮಾಡಲು ಅನುಮತಿಯನ್ನು ಪ್ರಾರ್ಥಿಸುತ್ತಿದ್ದೇನೆ."

ಶ್ರೀರಾಮನು ಹೀಗೆ ಹೇಳಲು ಸಮಸ್ತವಾನರಸೇನಾಪತಿಗಳೂ ಮತ್ತು ವಿಭೀಷಣರಾಕ್ಷಸನೂ ಕೈಮುಗಿದುಕೊಂಡು ಶ್ರೀರಾಮನಿಗೆ ಹೇಳಿದರು :

"ರಾಘವ! ನಾವೆಲ್ಲರೂ ಅಯೋಧ್ಯೆಗೆ ಬರಲು ಆಶಿಸಿದ್ದೇವೆ. ನಮ್ಮೆಲ್ಲ ರನ್ನೂ ನೀನು ಕರೆದುಕೊಂಡು ಹೋಗಬೇಕು. ಅಯೋಧ್ಯೆಯ ಸುತ್ತ ಮುತ್ತಲೂ ಇರುವ ವನಗಳಲ್ಲಿಯೂ ಮತ್ತು ಉಪವನಗಳಲ್ಲಿಯೂ ನಾವು ಸಂತೋಷದಿಂದ ಸಂಚರಿಸುತ್ತೇವೆ. ರಾಜ್ಯಾಭಿಷೇಕದ ಸಮಯದಲ್ಲಿ ಮಂತ್ರ

ಪೂರ್ವಕವಾದ ಪುಣ್ಯಜಲದಿಂದ ತೋಯಿಸಲ್ಪಡುವ ನಿನ್ನ ದಿವ್ಯಮಂಗಳ ವಿಗ್ರಹವನ್ನು ಸಂದರ್ಶಿಸಿ ಕೌಸಲ್ಯಾದೇವಿಗೂ ಅಭಿವಾದನಮಾಡಿ ಬಹಳ ಬೇಗ ನಮ್ಮ-ನಮ್ಮ ನಿವಾಸಗಳಿಗೆ ಹಿಂದಿರುಗುತ್ತೇವೆ."

ವಿಭೀಷಣಸಹಿತರಾದ ವಾನರರು ಹೀಗೆ ಹೇಳಲು ಧರ್ಮಾತ್ಮನಾದ ಶ್ರೀರಾಮನು ಸುಗ್ರೀವ-ವಿಭೀಷಣನೇ ಮೊದಲಾದ ವಾನರ-ರಾಕ್ಷಸರಿಗೆ ಹೇಳಿದನು :

"ನನ್ನ ಸುಹೃದರಾದ ನಿಮ್ಮೆಲ್ಲರೊಡನೆ ನಾನು ಅಯೋಧ್ಯೆಗೆ ಹೋಗುವುದೆಂದರೆ ನನಗೆ ಅತ್ಯಂತಪ್ರೀತಿಕರವಾದ ಆನಂದವೇ ಲಭಿಸಿದಂತಾಗಿದೆ. ನಿಮ್ಮೆಲ್ಲರೊಡನೆ ಅಯೋಧ್ಯೆಗೆ ಹೋಗುವ ನಾನು ಪರಮಪ್ರೀತನಾಗುತ್ತೇನೆ.

ಸುಗ್ರೀವ! ನಿನ್ನ ಎಲ್ಲ ವಾನರನಾಯಕರೊಡನೆ ಶೀಘ್ರವಾಗಿ ವಿಮಾನವನ್ನೇರು.

ವಿಭೀಷಣ! ನೀನೂ ಕೂಡ ನಿನ್ನ ಅಮಾತ್ಯರೊಡನೆ ವಿಮಾನಾರೂಢನಾಗು."

ಶ್ರೀರಾಮನು ಹೀಗೆ ಹೇಳುತ್ತಲೇ ಸಮಸ್ತವಾನರನಾಯಕರೊಡನೆ ಸುಗ್ರೀವನೂ ಅಮಾತ್ಯರೊಡನೆ ವಿಭೀಷಣನೂ ದಿವ್ಯವಾದ ಆ ಪುಷ್ಪಕ ವಿಮಾನವನ್ನು ಹತ್ತಿದರು.

ಅವರೆಲ್ಲರೂ ಹತ್ತಿ ಆಸನಾರೂಢರಾದೊಡನೆಯೇ ಕುಬೇರನ ಉತ್ತಮವಾಹನವಾದ ಆ ಪುಷ್ಪಕವಿಮಾನವು ಶ್ರೀರಾಮನ ಅನುಜ್ಞೆಯನ್ನು ಪಡೆದು ಆಕಾಶಕ್ಕೆ ಹಾರಿತು. ಆಕಾಶದ ಕಡೆಗೆ ಹಾರಿದ, ತೇಜೋಮಯವಾಗಿದ್ದ, ಹಂಸಗಳಿಂದ ಯುಕ್ತವಾಗಿದ್ದ ಆ ಪುಷ್ಪಕವಿಮಾನದಲ್ಲಿ ಪ್ರಯಾಣ ಮಾಡುತ್ತಿದ್ದ ಶ್ರೀರಾಮನು ಪ್ರಹೃಷ್ಟನಾಗಿ ಮತ್ತು ಪುಲಕಿತನಾಗಿ ಕುಬೇರನಂತೆಯೇ ಪ್ರಕಾಶಿಸಿದನು.

ಮಹಾಬಲರಾದ ಆ ಎಲ್ಲ ವಾನರ-ಋಕ್ಷ-ರಾಕ್ಷಸರು ಸ್ವಲ್ಪವಾದರೂ ಒತ್ತಡವಿಲ್ಲದೇ ಆ ದಿವ್ಯವಿಮಾನದಲ್ಲಿ ಸುಖವಾಗಿ ಕುಳಿತರು.

೧೨೨ನೆಯ ಸರ್ಗವು ಮುಗಿಯಿತು.

ಅಯೋಧ್ಯೆಗೆ ಹೋಗುತ್ತಿದ್ದಾಗ ಸೀತಾದೇವಿಗೆ ಶ್ರೀರಾಮನು ಮಾರ್ಗವನ್ನು ಪರಿಚಯಿಸಿದುದು

ಅನುಜ್ಞಾತಂ ತು ರಾಮೇಣ ತದ್ವಿಮಾನಮನುತ್ತಮಮ್ ।
ಹಂಸಯುಕ್ತಂ ಮಹಾನಾದಮುತ್ಪಪಾತ ವಿಹಾಯಸಮ್ ॥೧॥

ಶ್ರೀರಾಮನ ಅನುಜ್ಞೆಯನ್ನು ಪಡೆದನಂತರ ಹಂಸಗಳಿಂದ ಯುಕ್ತವಾಗಿದ್ದ ಆ ಶ್ರೇಷ್ಠವಾದ ವಿಮಾನವು ಮಹಾಶಬ್ದದೊಡನೆ ಆಕಾಶಕ್ಕೆ ಹಾರಿತು.

ವಿಮಾನವು ಹಾರಿಕೊಂಡು ಮುಂದೆ ಹೋಗುತ್ತಿದ್ದಾಗ ಶ್ರೀರಾಮನು ಹೊರವಲಯದಲ್ಲಿ ದೃಷ್ಟಿಯನ್ನು ಪ್ರಸರಿಸುತ್ತಾ ಚಂದ್ರಮುಖಿಯಾದ ಸೀತಾದೇವಿಗೆ ಹೇಳಿದನು :

“ವಿದೇಹರಾಜನಂದಿನಿ! ಕೈಲಾಸಶಿಖರದಂತೆ ವಿಶಾಲವಾದ ಮತ್ತು ಸುಂದರವಾದ ತ್ರಿಕೂಟಪರ್ವತದ ಶಿಖರದ ಮೇಲ್ಭಾಗದಲ್ಲಿ ವಿಶ್ವಕರ್ಮನಿಂದಲೇ ನಿರ್ಮಿಸಲ್ಪಟ್ಟಿರುವ ಲಂಕಾಪಟ್ಟಣವನ್ನು ನೋಡು. ಇತ್ತ ನೋಡು; ವೈದೇಹೀ! ಇದೇ ನಾವು ಯುದ್ಧಮಾಡಿದ ಸಮರಭೂಮಿ. ಮಾಂಸ-ರಕ್ತಗಳಿಂದ ಸಮ್ಮಿಶ್ರವಾದ ಕೆಸರಿನಿಂದ ವ್ಯಾಪ್ತವಾಗಿದೆ. ಇಲ್ಲಿ ವಾನರರ ಮತ್ತು ರಾಕ್ಷಸರ ಮಹಾಸಂಹಾರವೇ ಆಯಿತು. ಶತ್ರುಹಿಂಸಕನಾದ ರಾವಣನು ಹತನಾಗಿ ಬಿದ್ದುದು ಇಲ್ಲಿಯೇ. ಇವನು ಬ್ರಹ್ಮನಿಂದಲೂ ವರಗಳನ್ನು ಪಡೆದುಕೊಂಡಿದ್ದನು. ಆದರೂ ನಿನ್ನ ಸಲುವಾಗಿ ನಾನು ಇವನನ್ನು ಸಂಹರಿಸಿದೆನು. ರಾವಣನ ತಮ್ಮನಾದ ಕುಂಭಕರ್ಣನೂ ಪ್ರಹಸ್ತನೂ ಇಲ್ಲಿಯೇ ಹತರಾದರು. ಇಲ್ಲಿಯೇ ಹನುಮಂತನು ಧೂಮ್ರಾಕ್ಷನನ್ನು ಸಂಹರಿಸಿದನು. ಮಹಾತ್ಮನಾದ ಸುಷೇಣನು ವಿದ್ಯುನ್ಮಾಲೀ ಎಂಬ ರಾಕ್ಷಸನನ್ನು ಇಲ್ಲಿಯೇ ಸಂಹರಿಸಿದನು. ರಾವಣನ ಮಗನಾದ ಇಂದ್ರಜಿತುವನ್ನು ಲಕ್ಷ್ಮಣನು ಇಲ್ಲಿ ಸಂಹರಿಸಿದನು. ಇಲ್ಲಿ ವಿಕರ್ಣನೆಂಬ ರಾಕ್ಷಸನನ್ನು ಅಂಗದನು ಸಂಹರಿಸಿದನು. ನೋಡಲು ಕೂಡ ಅಸಾಧ್ಯನಾಗಿದ್ದ ವಿರೂಪಾಕ್ಷನೂ, ಮಹಾಪಾರ್ಶ್ವ-ಮಹೋದರರೂ ಈ ಸ್ಥಳದಲ್ಲಿಯೇ ಅಸುನೀಗಿದರು.

ಅಕಂಪನನೆಂಬ ರಾಕ್ಷಸನೂ ಮತ್ತು ಬಲಿಷ್ಠರಾದ ಇತರ ಅನೇಕರಾಕ್ಷಸರೂ ಈ ಸ್ಥಳದಲ್ಲಿ ಮಡಿದರು. ತ್ರಿಶಿರ-ಅತಿಕಾಯ-ದೇವಾಂತಕ-ನರಾಂತಕರೂ ಇಲ್ಲಿಯೇ ನಮ್ಮ ಅಜೇಯಸೈನಿಕರಿಂದ ಹತರಾದರು. ಯುದ್ಧೋನ್ಮತ್ತ- ಮತ್ತ ಎಂಬ ರಾಕ್ಷಸರಿಬ್ಬರೂ ರಾಕ್ಷಸಶ್ರೇಷ್ಠರು. ಮಹಾಬಲಿಷ್ಠರು. ಅವರೂ ಇಲ್ಲಿ ಹತರಾದರು. ನಿಕುಂಭ ಮತ್ತು ಕುಂಭರೆಂಬ ಕುಂಭಕರ್ಣನ ಇಬ್ಬರು ಮಕ್ಕಳೂ ಈ ಸ್ಥಳದಲ್ಲಿ ಯುದ್ಧಮಾಡುತ್ತಾ ಮರಣಹೊಂದಿದರು. ವಜ್ರದಂಷ್ಟ್ರ , ದಂಷ್ಟ್ರ ಇವರೇ ಮುಂತಾದ ಅನೇಕ ರಾಕ್ಷಸವೀರರು ಇಲ್ಲಿ ಹತರಾದರು. ದುರ್ಧರ್ಷನಾದ ಮಕರಾಕ್ಷನನ್ನು ನಾನೇ ಇಲ್ಲಿ ಸಂಹರಿಸಿದೆನು. ಅಕಂಪನ, ವೀರನಾದ ಶೋಣಿತಾಕ್ಷ, ಮಹಾಬಲರಾದ ಯೂಪಾಕ್ಷ-ಪ್ರಜಂಘರು, ಭಯಂಕರಾಕಾರನಾದ ವಿದ್ಯುಜ್ಜಿಹ್ವ, ಯಜ್ಞಶತ್ರು, ಮಹಾ ಬಲನಾದ ಸುಪ್ತಘ್ನ, ಸೂರ್ಯಶತ್ರು, ಬ್ರಹ್ಮಶತ್ರು–ಇವರೇ ಮುಂತಾದ ರಾಕ್ಷಸಶ್ರೇಷ್ಠರು ಈ ಮಹಾಸಮರಾಂಗಣದಲ್ಲಿ ಯುದ್ಧಮಾಡುತ್ತಾ ಅಸು ನೀಗಿದರು.

ಇದೋ ನೋಡು ದೇವಿ! ಈ ಸ್ಥಳದಲ್ಲಿಯೇ ರಾವಣನು ಸತ್ತುಬಿದ್ದಿದ್ದನು. ಮಂದೋದರಿ ಎಂಬ ಹೆಸರಿನ ಅವನ ಪತ್ನಿಯು ಅವನಿಗಾಗಿ ಗೋಳಾಡುತ್ತಿದ್ದಳು. ಸಾವಿರಾರು ಮಂದಿ ಅವಳ ಸವತಿಯರು ಮಂದೋದರಿಯನ್ನು ಸುತ್ತುವರಿದು ಕುಳಿತು ರೋದನಮಾಡುತ್ತಿದ್ದರು."

ವಿಮಾನವು ಮುಂದುವರಿದಂತೆ ರಾಮನು ದೃಶ್ಯಗಳನ್ನು ಸೀತಾದೇವಿಗೆ ವಿವರಿಸುತ್ತಿದ್ದನು.

"ವರಾನನೆಯೇ! ಇತ್ತಲಾಗಿ ಕಾಣುತ್ತಿರುವುದೇ ಸಮುದ್ರತೀರ್ಥ. ಸಮುದ್ರವನ್ನು ದಾಟಿದ ರಾತ್ರಿಯಲ್ಲಿ ನಾವು ಇಲ್ಲಿಯೇ ತಂಗಿದ್ದೆವು. ಇದೋ ನೋಡು ವೈದೇಹಿ! ಇಲ್ಲಿ ಕಾಣುತ್ತಿರುವುದೇ ನಾವು ದಾಟಿಬಂದ ಸಮುದ್ರ ಸೇತು. ಅಪಾರವಾದ ಈ ಲವಣಸಮುದ್ರದಲ್ಲಿ ನಾನೇ ಈ ಸೇತುವೆಯನ್ನು ನಿರ್ಮಿಸಿದೆ. ಇದಕ್ಕೆ ನಲಸೇತು ಎಂದು ಹೆಸರು. ಅತಿದುಷ್ಕರವಾದುದು. ಸಾಮಾನ್ಯರಿಂದ ಇಂತಹ ಸೇತುವೆಯನ್ನು ನಿರ್ಮಿಸುವ ಸಾಧ್ಯತೆಯಿಲ್ಲ. ವಿಶಾಲಾಕ್ಷಿ! ಇದು ನಿನ್ನ ಸಲುವಾಗಿಯೇ ಕಟ್ಟಿಸಿದ ಸೇತುವೆ ; ತಿಳಿಯಿತೆ?

ಅಕ್ಷೋಭ್ಯವಾದ, ವರುಣನ ವಾಸಸ್ಥಾನವಾದ ಈ ಸಾಗರವನ್ನು ನೋಡು, ವೈದೇಹಿ! ಪಾರವೇ ಇಲ್ಲವೋ ಎಂಬಂತೆ ಇದು ಕಾಣುತ್ತಿದೆ. ಎಷ್ಟು ದೂರದವರೆಗೆ ನೋಡಿದರೂ ನೀರೇ ಕಾಣುತ್ತದೆಯೇ ಹೊರತು ಭೂಮಿಯು ಕಾಣುತ್ತಿಲ್ಲ. ಶಂಖ ಮತ್ತು ಕಪ್ಪೇಚಿಪ್ಪುಗಳಿಂದ ತುಂಬಿರುವ ಈ ಮಹಾಸಮುದ್ರವು ಗರ್ಜಿಸುತ್ತಿರುವುದನ್ನಾದರೂ ನೋಡು."

ವಿಮಾನವು ಮುಂದೆ-ಮುಂದೆ ಹೋಗುತ್ತಿದ್ದಿತು. ಶ್ರೀರಾಮನೂ ಮುಂದು-ಮುಂದಿನ ದೃಶ್ಯಗಳನ್ನು ಸೀತಾದೇವಿಗೆ ವಿವರಿಸುತ್ತಲೇ ಇದ್ದನು.

ಅದೋ ಅಲ್ಲಿ ಕಾಣುತ್ತಿರುವ ಸುವರ್ಣಮಯನಾದ, ಪರ್ವತಶ್ರೇಷ್ಠ ನಾದ ಹಿರಣ್ಯನಾಭನನ್ನು ನೋಡು. ಹಾರಿಕೊಂಡು ಬರುತ್ತಿದ್ದಾಗ ಹನು ಮಂತನಿಗೆ ವಿಶ್ರಾಂತಿಯ ಅವಕಾಶವನ್ನು ಕಲ್ಪಿಸಿಕೊಡುವ ಆಶಯದಿಂದ ಈ

ಹಿರಣ್ಯನಾಭನು (ಮೈನಾಕನು) ಸಮುದ್ರವನ್ನೇ ಭೇದಿಸಿಕೊಂಡು ಮೇಲಕ್ಕೆ ಬಂದನು. ಇಲ್ಲಿ ನೋಡು, ವೈದೇಹಿ! ಸಮುದ್ರದ ತೀರಪ್ರದೇಶವು ಕಾಣಿಸುತ್ತಿದೆ. ಇಲ್ಲಿ ಸಮುದ್ರದ ನಡುಗಡ್ಡೆಯಲ್ಲಿಯೇ ನಾನು ಸೈನ್ಯವನ್ನು ಸಂಗ್ರಹಿಸಿದ್ದೆನು. ಹಿಂದೆ (ಸೇತುವೆಯನ್ನು ಕಟ್ಟುವ ಮೊದಲು) ನಾನು ಮಾಡಿದ ಪೂಜೆಯಿಂದ ಪ್ರಭುವಾದ ಮಹಾದೇವನು ಇಲ್ಲಿ ಪ್ರಸನ್ನನಾದನು. ಅಗೋ ಅಲ್ಲಿ ನೋಡು! ಅಲ್ಲಿ ಮಹಾತ್ಮನಾದ ಸಮುದ್ರರಾಜನ ತೀರ್ಥವು ಕಾಣುತ್ತಿರುವುದಲ್ಲವೇ! ಆ ತೀರ್ಥವು ಸೇತುಬಂಧತೀರ್ಥವೆಂಬ ಹೆಸರಿನಿಂದಲೇ ವಿಖ್ಯಾತವಾಗಿದೆ. ಮೂರು ಲೋಕಗಳವರೂ ಆ ತೀರ್ಥವನ್ನು ಪೂಜಿಸುತ್ತಾರೆ.

ಏತತ್ಪವಿತ್ರಂ ಪರಮಂ ಮಹಾಪಾತಕನಾಶನಮ್ ।
ಅತ್ರ ರಾಕ್ಷಸರಾಜೋऽಯಮಾಜಗಾಮ ವಿಭೀಷಣಃ ॥೨೧॥

ಈ ಸೇತುಬಂಧತೀರ್ಥವು ಪರಮಪಾವನವಾದುದು. ಮಹಾಪಾಪಗಳನ್ನೂ ಹೋಗಲಾಡಿಸತಕ್ಕುದು. ಇಲ್ಲಿಯೇ ರಾಕ್ಷಸರಾಜನಾದ ಈ ವಿಭೀಷಣನು ಬಂದು ನನ್ನೊಡನೆ ಸೇರಿದನು."

ವಿಮಾನವು ಮುಂದೆ ಹೋಯಿತು. ಕಿಷ್ಕಿಂಧೆಯು ಕಾಣಿಸತೊಡಗಿತು. ಶ್ರೀರಾಮನು ವಿವರಣೆಯನ್ನೂ ಮುಂದುವರಿಸಿದನು.

"ಅಲ್ಲಿ ನೋಡು ಸೀತೇ! ವಿಚಿತ್ರವಾದ ಅರಣ್ಯಪ್ರದೇಶಗಳಿಂದ ಸಮಾವೃತವಾಗಿರುವುದೇ ಕಿಷ್ಕಿಂಧೆ. ಅದೇ ಸುಗ್ರೀವನ ಸುಂದರವಾದ ಪಟ್ಟಣ. ಅಲ್ಲಿಯೇ ನಾನು ವಾಲಿಯನ್ನು ಸಂಹರಿಸಿದ್ದು."

ವಾಲಿಯಿಂದ ಪರಿಪಾಲಿಸಲ್ಪಡುತ್ತಿದ್ದ ಕಿಷ್ಕಿಂಧಾಪಟ್ಟಣವನ್ನು ನೋಡಿದ ನಂತರ ಸುಗ್ರೀವ-ವಿಭೀಷಣರ ಮಧ್ಯದಲ್ಲಿ ಪ್ರಣಯದ ಮಾತುಗಳನ್ನಾಡಲು ಭಯಗೊಂಡಿದ್ದ ಸೀತೆಯು ವಿನಯಪೂರ್ವಕವಾಗಿ ಹೇಳಿದಳು :

"ಮಹಾರಾಜ! ತಾರೆಯೇ ಮೊದಲಾದ ಪ್ರಮುಖರಾದ ಸುಗ್ರೀವನ ಪ್ರೇಯಸಿಯರಿಂದಲೂ, ಇತರ ವಾನರಶ್ರೇಷ್ಠರ ಪತ್ನಿಯರಿಂದಲೂ ಪರಿವೃತಳಾಗಿ ನಾನು ನಿನ್ನೊಡನೆ ಅಯೋಧ್ಯೆಗೆ ಹೋಗಲು ಬಯಸಿದ್ದೇನೆ."

ವೈದೇಹಿಯು ಹೀಗೆ ಹೇಳಲು ರಾಘವನು ಹಾಗೆಯೇ ಆಗಲೆಂದು

ಸೀತಾದೇವಿಗೆ ಪ್ರತ್ಯುತ್ತರಿಸಿ, ಕಿಷ್ಕಿಂಧೆಯು ಸಿಕ್ಕಿದೊಡನೆಯೇ ವಿಮಾನವನ್ನು ನಿಲ್ಲಿಸಿ, ಸುಗ್ರೀವನಿಗೆ ಹೇಳಿದನು :

"ವಾನರಶ್ರೇಷ್ಠನೇ! ಎಲ್ಲ ವಾನರಶ್ರೇಷ್ಠರೂ ಹೆಂಡತಿ-ಮಕ್ಕಳೊಡನೆ ಸೀತೆಯ ಜೊತೆಯಲ್ಲಿಯೇ ಅಯೋಧ್ಯೆಗೆ ಬರುವಂತೆ ಎಲ್ಲರಿಗೂ ತಿಳಿಸು. ನೀನೂ ಕೂಡ ನಿನ್ನೆಲ್ಲ ಭಾರ್ಯೆಯರೊಡನೆ ಶೀಘ್ರವಾಗಿ ಆಗಮಿಸು. ಎಲ್ಲರೂ ಒಟ್ಟಾಗಿ ಸೇರಿ ಮುಂದೆ ನಾವು ಪ್ರಯಾಣಮಾಡೋಣ."

ಮಹಾತೇಜಸ್ವಿಯಾದ ಶ್ರೀರಾಮನು ಹೀಗೆ ಹೇಳಲು ವಾನರನಾಯಕನಾದ ಸುಗ್ರೀವನು ಸಮಸ್ತವಾನರರಿಂದಲೂ ಪರಿವೃತನಾಗಿ ವಿಮಾನದಿಂದ ಇಳಿದು ಅಂತಃಪುರಕ್ಕೆ ಹೋಗಿ ತಾರೆಯನ್ನು ಕಂಡು ಹೇಳಿದನು :

"ಪ್ರಿಯೆ! ಸೀತಾದೇವಿಗೆ ಪ್ರಿಯವನ್ನುಂಟುಮಾಡುವ ಇಚ್ಛೆಯಿಂದ ರಾಘವನು ನಿಮ್ಮೆಲ್ಲರನ್ನೂ ಅಯೋಧ್ಯೆಗೆ ಬರುವಂತೆ ಆಜ್ಞಾಪಿಸಿದ್ದಾನೆ. ಆದುದರಿಂದ ಮಹಾತ್ಮರಾದ ವಾನರಪುಂಗವರ ಭಾರ್ಯೆಯರೊಡನೆ ನೀನೀಗಲೇ ಹೊರಡಬೇಕಾಗಿದೆ. ತ್ವರೆಮಾಡು. ವಾನರಸ್ತ್ರೀಯರೆಲ್ಲರನ್ನೂ ಕರೆದುಕೊಂಡು ನಾವೀಗಲೇ ಪುಷ್ಪಕವಿಮಾನದಲ್ಲಿ ಕುಳಿತು ಅಯೋಧ್ಯೆಗೆ ಹೋಗೋಣ. ನಿಮಗೆ ಅಯೋಧ್ಯಾಪಟ್ಟಣವನ್ನು ತೋರಿಸುತ್ತೇವೆ. ಅಂತೆಯೇ ದಶರಥನ ಪತ್ನಿಯರನ್ನೂ ತೋರಿಸುತ್ತೇವೆ."

ಸುಗ್ರೀವನ ಮಾತನ್ನು ಕೇಳಿ ಸರ್ವಾಂಗಸುಂದರಿಯಾದ ತಾರೆಯು ಎಲ್ಲ ವಾನರಸ್ತ್ರೀಯರನ್ನೂ ಅಂತಃಪುರಕ್ಕೆ ಆಹ್ವಾನಿಸಿ ಹೇಳಿದಳು :

"ಸಖಿಯರೇ! ಸುಗ್ರೀವನ ಆಜ್ಞಾನುಸಾರವಾಗಿ ಸಮಸ್ತವಾನರರೊಡನೆ ನಾವೆಲ್ಲರೂ ಅಯೋಧ್ಯೆಗೆ ಹೋಗಬೇಕಾಗಿದೆ. ಹೊರಡಲು ಬೇಗ ಸಿದ್ಧಮಾಡಿಕೊಳ್ಳಿರಿ. ಅಯೋಧ್ಯೆಯನ್ನು ಸಂದರ್ಶಿಸಲು ಬರುವ ನೀವು ನನಗೂ ಪ್ರಿಯವಾದ ಕಾರ್ಯವನ್ನೇ ಮಾಡಿಕೊಟ್ಟಂತಾಗುತ್ತದೆ. ಸಮಸ್ತ ಪ್ರಜೆಗಳೊಡನೆ ಶ್ರೀರಾಮನು ಅಯೋಧ್ಯಾಪಟ್ಟಣವನ್ನು ಪ್ರವೇಶಿಸುವ ನೇತ್ರಾನಂದಕರವಾದ ಉತ್ಸವವನ್ನು ನೋಡಬಹುದಾಗಿದೆ. ಅಂತೆಯೇ ದಶರಥನ ರಾಣಿಯರ ವೈಭವವನ್ನೂ ಕಾಣಬಹುದಾಗಿದೆ."

ತಾರೆಯ ಆಜ್ಞಾನುಸಾರವಾಗಿ ವಾನರಪತ್ನಿಯರು ಸಿಂಗರಿಸಿಕೊಂಡು ವಿಮಾನಕ್ಕೆ ಪ್ರದಕ್ಷಿಣೆಮಾಡಿ ಸೀತಾದೇವಿಯನ್ನು ಸಂದರ್ಶಿಸುವ ಆಕಾಂಕ್ಷೆ ಯಿಂದ ವಿಮಾನವನ್ನು ಹತ್ತಿದರು. ಅವರೆಲ್ಲರನ್ನೂ ಕುಳ್ಳಿರಿಸಿಕೊಂಡು ವಿಮಾನವು ಪುನಃ ಶೀಘ್ರವಾಗಿ ಮೇಲೇರಿತು. ಮುಂದುವರಿದ ವಿಮಾನವು ಋಶ್ಯಮೂಕಪರ್ವತದ ಸಮೀಪಕ್ಕೆ ಬಂದುದನ್ನು ನೋಡಿ ಶ್ರೀರಾಮನು ಸೀತಾದೇವಿಗೆ ಹೇಳಿದನು :

"ಅದೋ ನೋಡು, ಸೀತೇ! ಮಿಂಚಿನಿಂದ ಹೊಳೆಯುತ್ತಿರುವ ಮೇಘದಂತೆ ಸುವರ್ಣಮಯವಾದ ಧಾತುಗಳಿಂದ ಸಮಲಂಕೃತವಾಗಿರುವ ಪರ್ವತವು ಕಾಣುತ್ತಿರುವುದಲ್ಲವೇ? ಇದೇ ಶ್ರೇಷ್ಠವಾದ ಋಶ್ಯಮೂಕ ಪರ್ವತ. ಇಲ್ಲಿಯೇ ನಾನು ಸುಗ್ರೀವನೊಡನೆ ಸೇರಿದೆನು. ವಿಧಿಪೂರ್ವಕವಾಗಿ ನಮ್ಮಿಬ್ಬರಿಗೂ ಸಖ್ಯವಾದನಂತರ ಇಲ್ಲಿಯೇ ನಾನು ವಾಲಿಯನ್ನು ಸಂಹರಿ ಸುವುದಾಗಿ ಪ್ರತಿಜ್ಞೆಯನ್ನು ಮಾಡಿದೆನು.

ಅದೋ ಅಲ್ಲಿ ನೋಡು! ವಿಚಿತ್ರವಾದ ಅರಣ್ಯಗಳಿಂದ ಸಮಾವೃತ ವಾಗಿರುವ ಪಂಪಾಸರೋವರವು ಕಾಣುತ್ತಿದೆ. ಇಲ್ಲಿಯೇ ನಾನು ನಿನ್ನ ವಿರಹ ದಿಂದ ಅತ್ಯಂತದುಃಖಿತನಾಗಿ ವಿಲಪಿಸುತ್ತಿದ್ದೆನು. ಈ ಪಂಪಾಸರೋವರದ ತೀರದಲ್ಲಿಯೇ ನಾನು ಧರ್ಮಚಾರಿಣಿಯಾದ ಶಬರಿಯನ್ನು ಸಂದರ್ಶಿಸಿದೆನು. ಯೋಜನದಷ್ಟು ನೀಳವಾದ ತೋಳುಗಳನ್ನು ಹೊಂದಿದ್ದ ಕಬಂಧನನ್ನು ನಾನು ಇಲ್ಲಿಯೇ ಸಂಹರಿಸಿದೆನು."

ವಿಮಾನವು ಜನಸ್ಥಾನದ ಮೇಲೆ ಹೋಗುತ್ತಿದ್ದಿತು. ಶ್ರೀರಾಮನು ಮಾರ್ಗದ ವಿವರಣೆಯನ್ನು ಮುಂದುವರಿಸುತ್ತಾ ಸೀತೆಗೆ ಹೇಳಿದನು :

"ವಿಲಾಸಿನಿಯೇ! ವೈದೇಹಿ! ಇದೇ ಜನಸ್ಥಾನ. ಅಲ್ಲೊಂದು ವಿಶಾಲವಾದ ವೃಕ್ಷವು ಕಾಣುತ್ತಿರುವುದಲ್ಲವೇ? ಅಲ್ಲಿಯೇ ಬಲಿಷ್ಠನಾದ ಮತ್ತು ಪರಮತೇಜಸ್ವಿಯಾದ ಪಕ್ಷಿಶ್ರೇಷ್ಠನಾದ ಜಟಾಯುವು ನಿನ್ನನ್ನು ರಾವಣನಿಂದ ರಕ್ಷಿಸಲು ಹೋಗಿ ಹತನಾದನು. ಇಲ್ಲಿಯೇ ನಾನು ಖರ-ದೂಷಣರನ್ನೂ, ತ್ರಿಶಿರಸನನ್ನೂ ನೇರವಾಗಿ ಹೋಗುವ ಬಾಣಗಳಿಂದ

ಸಂಹರಿಸಿದೆನು. ವರವರ್ಣಿನಿಯೇ! ಶುಭದರ್ಶನಳೇ! ಅದೋ ನೋಡು ; ಅದೇ ನಾವಿದ್ದ ಆಶ್ರಮ. ಆ ಪರ್ಣಶಾಲೆಯು ಈಗಲೂ ಚಿತ್ರಿತವಾಗಿರುವಂತೆ ಕಾಣುತ್ತಿದೆ. ಅಲ್ಲಿಂದಲೇ ನಿನ್ನನ್ನು ರಾಕ್ಷಸರಾಜನಾದ ರಾವಣನು ಬಲಾತ್ಕಾರವಾಗಿ ಅಪಹರಿಸಿಕೊಂಡು ಹೋದನು. ಅದೋ ನೋಡು ; ಅಲ್ಲಿ ಕಾಣುತ್ತಿರುವುದೇ ಸ್ವಚ್ಛವಾದ ನೀರಿನಿಂದ ತುಂಬಿ ಹರಿಯುತ್ತಿರುವ ರಮ್ಯವಾದ ಗೋದಾವರೀನದಿಯು. ಅದರ ತೀರದಲ್ಲಿಯೇ ಬಾಳೆಯ ಗಿಡಗಳಿಂದ ಸಮಾವೃತವಾಗಿರುವ ಅಗಸ್ತ್ಯರ ಆಶ್ರಮವೂ ಕಾಣುತ್ತಿದೆ. ದೇದೀಪ್ಯಮಾನವಾಗಿ ಪ್ರಕಾಶಿಸುತ್ತಿರುವ ಆ ಆಶ್ರಮವು ಮಹಾತ್ಮರಾದ ಸುತೀಕ್ಷ್ಣರದ್ದು. ಶರಭಂಗಮಹರ್ಷಿಗಳ ಆಶ್ರಮವೂ ಅಲ್ಲಿಯೇ ಕಾಣುತ್ತಿದೆ. ನಾವಲ್ಲಿಗೆ ಹೋಗಿದ್ದಾಗ ಸಹಸ್ರಾಕ್ಷನಾದ ಇಂದ್ರನೂ ಅವರ ದರ್ಶನಕ್ಕಾಗಿ ಬಂದಿದ್ದನು. ಆ ಸ್ಥಳದಲ್ಲಿಯೇ ನಾನು ಮಹಾಕಾಯನಾದ ವಿರಾಧನನ್ನು ಸಂಹರಿಸಿದೆನು. ಅದೋ ನೋಡು! ಅಂದು ನಾವು ಸಂದರ್ಶಿಸಿದ್ದ ತಪಸ್ವಿಗಳೇ ಅಲ್ಲಿ ಕಾಣುತ್ತಿದ್ದಾರೆ. ಸೂರ್ಯಾಗ್ನಿಗಳ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಬೆಳಗುತ್ತಿರುವ ಅತ್ರಿಮಹರ್ಷಿಗಳು ಇಲ್ಲಿಯೇ ಇದ್ದಾರೆ. ನೀನು ಧರ್ಮಚಾರಿಣಿಯಾದ ತಪಸ್ವಿನಿಯಾದ ಅನಸೂಯಾದೇವಿಯನ್ನು ಇಲ್ಲೇ ಸಂದರ್ಶಿಸಿದ್ದು. ಅದೋ ನೋಡು! ಶ್ರೇಷ್ಠವಾದ ಚಿತ್ರಕೂಟಪರ್ವತವು ಕಾಣಿಸುತ್ತಿದೆ. ಅಲ್ಲಿಗೇ ಕೈಕೇಯಿಯ ಮಗನಾದ ಭರತನು ನನ್ನನ್ನು ಪ್ರಸನ್ನಗೊಳಿಸಿ ಅಯೋಧ್ಯೆಗೆ ಕರೆದುಕೊಂಡು ಹೋಗುವ ಸಲುವಾಗಿ ಬಂದಿದ್ದನು.

ಅಲ್ಲಿ ನೋಡು, ವೈದೇಹಿ! ವಿಚಿತ್ರವಾದ ಅರಣ್ಯಗಳ ಮಧ್ಯದಲ್ಲಿ ಹರಿಯುತ್ತಾ ಸುಶೋಭಿತವಾಗಿ ಕಾಣುತ್ತಿರುವುದೇ ಯಮುನಾನದಿ. ಆ ನದಿಯ ಪರಿಸರದಲ್ಲಿ ಕಾಣುತ್ತಿರುವುದೇ ಭರದ್ವಾಜರ ಆಶ್ರಮ.” ವಿಮಾನವು ಮುಂದೆ ಹೋಯಿತು. ಶ್ರೀರಾಮನು ಸೀತಾದೇವಿಗೆ ಹೇಳಿದನು : “ಅದೋ ಅಲ್ಲಿ ನೋಡು, ವೈದೇಹಿ! ಪುಣ್ಯತೀರ್ಥದಿಂದ ಸಂಪನ್ನವಾಗಿರುವ, ಮೂರು ಲೋಕಗಳಲ್ಲಿಯೂ ಪ್ರವಹಿಸುವ, ನಾನಾಪಕ್ಷಿಗಳ ಸಮೂಹಗಳಿಂದ ಸಮಾವೃತವಾಗಿರುವ, ಪುಷ್ಪಿತವಾದ ಅರಣ್ಯಗಳಿಂದ ಸಮಾಕುಲವಾಗಿ ಕಾಣುತ್ತಿರುವುದೇ ಗಂಗಾನದಿ. ಈಗ ಕಾಣುತ್ತಿರುವುದು ಶೃಂಗಬೇರಪುರ. ಇಲ್ಲಿಯೇ ನನ್ನ ಮಿತ್ರನಾದ ಗುಹನು ವಾಸಮಾಡುತ್ತಿದ್ದಾನೆ. ಈಗ ಕಾಣು

ತ್ತಿರುವುದು ಯೂಪಸ್ತಂಭಗಳ ಸಾಲುಗಳಿಂದಲೂ, ನಾನಾಪ್ರಕಾರವಾದ ವೃಕ್ಷಗಳಿಂದಲೂಮತ್ತು ಪುಷ್ಪಿತವಾದ ಅರಣ್ಯಗಳಿಂದಲೂ ಸಮಲಂಕೃತವಾಗಿರುವ ಸರಯೂನದಿ. ಇದರ ತೀರಪ್ರದೇಶದಲ್ಲಿ ಕಾಣುತ್ತಿರುವುದೇ ನನ್ನ ತಂದೆಯ ರಾಜಧಾನಿ. ವಿದೇಹನಂದಿನಿ! ನೀನು ವನವಾಸವನ್ನು ಮುಗಿಸಿ ಅಯೋಧ್ಯೆಗೆ ಹಿಂದಿರುಗುತ್ತಿರುವೆ. ಆದುದರಿಂದ ಈ ಪಟ್ಟಣಕ್ಕೆ ನಮಸ್ಕಾರ ಮಾಡು."

ಶ್ರೀರಾಮನು ಹೀಗೆ ಹೇಳಲು ವಿಮಾನದಲ್ಲಿದ್ದ ವಿಭೀಷಣಸಹಿತರಾದ ರಾಕ್ಷಸರೂ, ಸಮಸ್ತವಾನರರೂ ಪರಮಹೃಷ್ಟರಾಗಿ ಉತ್ಸಾಹದಿಂದ ಕುಪ್ಪಳಿಸುತ್ತಾ ಅಯೋಧ್ಯಾಪಟ್ಟಣವನ್ನು ವೀಕ್ಷಿಸಿದರು.

ಅನಂತರ ವಿಮಾನದಲ್ಲಿ ಕುಳಿತಿದ್ದ ವಾನರ-ರಾಕ್ಷಸರು ಬೆಳ್ಳಗೆ ಬೆಳಗುತ್ತಿರುವ ಉಪ್ಪರಿಗೆಮನೆಗಳ ಸಾಲುಗಳಿಂದ ಸುಶೋಭಿತವಾಗಿದ್ದ, ವಿಶಾಲವಾದ ಬೀದಿಗಳಿಂದ ಕೂಡಿದ್ದ, ಆನೆಗಳಿಂದಲೂ ಕುದುರೆಗಳಿಂದಲೂ ಸಮಾವೃತವಾಗಿದ್ದ, ಮಹೇಂದ್ರನ ಅಮರಾವತಿಯಂತೆಯೇ ಕಾಣುತ್ತಿದ್ದ ಅಯೋಧ್ಯಾಪಟ್ಟಣವನ್ನು ಕುತೂಹಲದಿಂದ ವೀಕ್ಷಿಸಿದರು.

೧೨೩ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೧೨೪ನೆಯ ಸರ್ಗ

ಶ್ರೀರಾಮನು ಭರದ್ವಾಜರ ಆಶ್ರಮದ ಸಮೀಪದಲ್ಲಿ ವಿಮಾನದಿಂದಿಳಿದು ಮಹರ್ಷಿಗಳನ್ನು ಸಂದರ್ಶಿಸಿ ಅವರಿಂದ ವರವನ್ನು ಪಡೆದುದು

ಪೂರ್ಣೇ ಚತುರ್ದಶೇ ವರ್ಷೇ ಪಞ್ಚಮ್ಯಾಂ ಲಕ್ಷ್ಮಣಾಗ್ರಜಃ ।
ಭರದ್ವಾಜಾಶ್ರಮಂ ಪ್ರಾಪ್ಯ ವವನ್ದೇ ನಿಯತೋ ಮುನಿಮ್ ॥೧॥

ನಿಯಮಾನುಷ್ಠಾನಪರನಾಗಿದ್ದ ಶ್ರೀರಾಮನು ಹದಿನಾಲ್ಕು ವರ್ಷಗಳು ಪೂರ್ಣವಾಗಿ ಮುಗಿದನಂತರ ಪಂಚಮೀತಿಥಿಯಲ್ಲಿ ಭರದ್ವಾಜರ ಆಶ್ರಮಕ್ಕೆ ಹೋಗಿ ಮಹರ್ಷಿಗಳಿಗೆ ನಮಸ್ಕರಿಸಿದನು.

ಅಭಿವಾದನಪೂರ್ವಕವಾಗಿ ನಮಸ್ಕರಿಸಿದನಂತರ ಪ್ರಶ್ನಿಸಿದನು :

"ಮಹರ್ಷಿಗಳೇ! ತಾವು ಅಯೋಧ್ಯಾಪಟ್ಟಣದ ವಿಷಯವಾಗಿ ಯಾವುದಾದರೂ ಸಮಾಚಾರವನ್ನು ಕೇಳಿರುವಿರಾ? ಅಯೋಧ್ಯಾಪಟ್ಟ

ಣವು ಸುಭಿಕ್ಷವಾಗಿಯೂ ರೋಗ-ರುಜಿನಾದಿಗಳಿಂದ ರಹಿತವಾಗಿಯೂ ಇರುವುದಲ್ಲವೇ? ಭರತನು ಪ್ರಜಾಪಾಲನೆಯಲ್ಲಿ ನಿರತನಾಗಿರುವನಲ್ಲವೇ? ನನ್ನ ತಾಯಂದಿರು ಜೀವಂತರಾಗಿರುವರಲ್ಲವೇ?"

ಶ್ರೀರಾಮನು ಹೀಗೆ ಪ್ರಶ್ನಿಸಲು ಭರದ್ವಾಜಮಹಾಮುನಿಗಳು ಪ್ರಹೃಷ್ಟರಾದವರಂತೆ ಮುಗುಳ್ನಗೆಯನ್ನು ಬೀರುತ್ತಾ ಶ್ರೀರಾಮನಿಗೆ ಉತ್ತರಿಸಿದರು :

"ರಾಘವ! ನಿನ್ನ ಆಜ್ಞೆಗೆ ಅಧೀನನಾಗಿರುವ ಭರತನು ಜಟೆಯನ್ನು ಧರಿಸಿ ನಿನ್ನನ್ನೇ ಎದುರುನೋಡುತ್ತಿದ್ದಾನೆ. ನಿನ್ನ ಪಾದುಕೆಗಳನ್ನೇ ಮುಂದಿಟ್ಟುಕೊಂಡು ರಾಜ್ಯದ ಸಮಸ್ತವ್ಯವಹಾರಗಳನ್ನೂ ನಡೆಸುತ್ತಿದ್ದಾನೆ. ನಿನ್ನ ಮನೆಯಲ್ಲಿ ಮತ್ತು ರಾಜಧಾನಿಯಲ್ಲಿ ಸರ್ವರೂ ಕುಶಲಿಗಳಾಗಿದ್ದಾರೆ.

ರಾಘವ! ಹದಿನಾಲ್ಕು ವರ್ಷಗಳ ಹಿಂದಿನ ಮಾತು. ಅಂದು ನೀನು ನಾರುಮಡಿಯನ್ನುಟ್ಟು ಮಹಾರಣ್ಯಕ್ಕೆ ಹೋಗುತ್ತಿದ್ದೆ. ಆ ಸಮಯದಲ್ಲಿ ನಿನ್ನ ಜೊತೆಯಲ್ಲಿ ನಿನ್ನ ತಮ್ಮನಿದ್ದನು. ಮೂರನೆಯವಳಾಗಿ ನಿನ್ನ ಪತ್ನಿಯಿದ್ದಳು. ಬೇರೆ ಯಾರೂ ಇರಲಿಲ್ಲ. ಆಗ ನೀನು ಯುವರಾಜಪಟ್ಟಾಭಿಷೇಕದಿಂದ ವಂಚಿತನಾಗಿದ್ದೆ. ನಡೆಯಬೇಕಾಗಿದ್ದ ಪಟ್ಟಾಭಿಷೇಕವು ಕಡೆಯ ಕ್ಷಣದಲ್ಲಿ ನಿಂತುಹೋಯಿತು. ಧರ್ಮಪಾಲನೆಯನ್ನೇ ಮುಖ್ಯವನ್ನಾಗಿಟ್ಟುಕೊಂಡು ಸಮಸ್ತವನ್ನೂ ತ್ಯಾಗಮಾಡಿ ತಂದೆಯ ಆಜ್ಞೆಯನ್ನು ಪಾಲಿಸಲು ಪದಾತಿಯಾಗಿಯೇ ಕಾಡಿಗೆ ಹೊರಟಿದ್ದೆ. ಸಮಸ್ತಭೋಗಗಳಿಂದಲೂ ವಂಚಿತನಾಗಿದ್ದ ನೀನು ಆ ಸಮಯದಲ್ಲಿ ಸ್ವರ್ಗದಿಂದ ಜಾರಿದ ದೇವತೆಯಂತೆಯೇ ಕಾಣುತ್ತಿದ್ದೆ. ಕೈಕೇಯಿಯ ಆದೇಶದಲ್ಲಿಯೇ ಬದ್ಧನಾಗಿದ್ದ ನೀನು ಅರಣ್ಯದಲ್ಲಿ ಸಿಕ್ಕುವ ಕಂದ-ಮೂಲಗಳನ್ನೇ ತಿಂದು ಜೀವನವನ್ನು ನಡೆಸುತ್ತಿದ್ದೆ. ಅಂತಹ ನಿನ್ನನ್ನು ಕಂಡು ನನ್ನ ಮನಸ್ಸಿನಲ್ಲಿ ಕರುಣೆಯುಂಟಾಗಿದ್ದಿತು.

ಆದರೆ ಈಗ ನಿನ್ನ ಸ್ಥಿತಿಯು ಪೂರ್ಣವಾಗಿ ಬದಲಾಗಿದೆ. ನೀನು ಅಜೇಯನಾದ ಶತ್ರುವನ್ನು ಜಯಿಸಿ ಸಫಲಮನೋರಥನಾಗಿರುವೆ. ಬಂಧು-ಮಿತ್ರರೊಡನೆ ಆಗಮಿಸುತ್ತಿರುವೆ. ಇಂತಹ ನಿನ್ನನ್ನು ನೋಡಿ ಈಗ

ನನ್ನ ಮನಸ್ಸಿನಲ್ಲಿ ಪ್ರಸನ್ನತೆಯುಂಟಾಗಿದೆ. ನೀನು ಜನಸ್ಥಾನದಲ್ಲಿದ್ದಾಗ ಅನುಭವಿಸಿದ ಸುಖ-ದುಃಖಗಳೆಲ್ಲವೂ ನನಗೆ ತಿಳಿದಿವೆ. ಅಲ್ಲಿ ನೀನು ಬ್ರಾಹ್ಮಣರ ರಕ್ಷಣೆಯ ಸಲುವಾಗಿ ನಿಯುಕ್ತನಾಗಿದ್ದೆ. ಅಂತೆಯೇ ನೀನು ಸಮಸ್ತ ತಪಸ್ವಿಗಳನ್ನೂ ರಕ್ಷಿಸುತ್ತಿದ್ದೆ. ಆ ಸಮಯದಲ್ಲಿ ರಾವಣನು ಅನಿಂದಿತೆಯಾದ ನಿನ್ನ ಈ ಭಾರ್ಯೆಯನ್ನು ಅಪಹರಿಸಿದನು. ಧರ್ಮವತ್ಸಲನೇ! ಮಾರೀಚನು ಚಿನ್ನದ ಜಿಂಕೆಯ ರೂಪದಲ್ಲಿ ಕಾಣಿಸಿಕೊಂಡನು. ಅದರ ಪರಿಣಾಮವಾಗಿ ಏಕಾಕಿನಿಯಾಗಿದ್ದ ಸೀತೆಯನ್ನು ರಾವಣನು ಅಪಹರಿಸಿದನು. ಸೀತೆಯನ್ನು ಹುಡುಕುವ ಸಮಯದಲ್ಲಿ ಕಬಂಧನ ದರ್ಶನವಾಯಿತು. ಅವನ ಬಾಹುಚ್ಛೇದನವೂ ಆಯಿತು. ಅನಂತರ ನೀನು ಪಂಪಾಸರೋವರದ ತೀರಕ್ಕೆ ಹೋದೆ. ಅಲ್ಲಿ ಸುಗ್ರೀವನ ಸಖ್ಯವಾಯಿತು. ಪರಿಣಾಮವಾಗಿ ವಾಲಿಯ ವಧೆಯೂ ಆಯಿತು. ಅನಂತರ ಸೀತಾನ್ವೇಷಣೆಯು ಪ್ರಾರಂಭವಾಯಿತು. ವಾಯುಪುತ್ರನು ಸೀತೆಯನ್ನು ಕಂಡುದಲ್ಲದೇ ಲಂಕಾದಹನವನ್ನೂ ಮಾಡಿ ಹಿಂದಿರುಗಿದನು. ಸೀತೆಯ ಸುಳಿವು ಸಿಕ್ಕನಂತರ ಸಮುದ್ರಕ್ಕೆ ನಲನ ಮೂಲಕವಾಗಿ ಸೇತುವೆಯನ್ನು ನಿರ್ಮಿಸಲಾಯಿತು. ಬಳಿಕ ವಾನರರು ಲಂಕಾಪಟ್ಟಣವನ್ನು ಆಕ್ರಮಿಸಿದರು. ವಾನರ-ರಾಕ್ಷಸರಿಗೆ ಘೋರವಾದ ಯುದ್ಧವು ನಡೆಯುತ್ತಿದ್ದಾಗಲೇ ಪ್ರಹೃಷ್ಟರಾದ ವಾನರದಳಪತಿಗಳು ಲಂಕಾಪಟ್ಟಣವನ್ನು ಪುನಃ ಸುಟ್ಟುಹಾಕಿದರು. ಬಲದರ್ಪಿತನಾಗಿದ್ದ ರಾವಣನು ಪುತ್ರ-ಬಾಂಧವ-ಅಮಾತ್ಯ-ಬಲ-ವಾಹನಸಮೇತನಾಗಿ ನಿನ್ನಿಂದ ಕೊಲ್ಲಲ್ಪಟ್ಟನು. ದೇವಕಂಟಕನಾದ ರಾವಣನ ಸಂಹಾರವಾದನಂತರ ದೇವತೆಗಳ ಸಮಾಗಮವಾಯಿತು. ನಿನಗೆ ಅವರು ಯಥೋಚಿತವಾದ ವರಗಳನ್ನು ಕೊಟ್ಟರು. ರಾಘವ! ಈ ಎಲ್ಲ ವಿಷಯಗಳೂ ನನಗೆ ತಪಸ್ಸಿನ ಪ್ರಭಾವ ದಿಂದ ತಿಳಿದುಬಂದಿದೆ. ವಾರ್ತಾವಾಹಕರು ಇಲ್ಲಿಂದ ಅಯೋಧ್ಯಾ ಪಟ್ಟಣಕ್ಕೆ ಹೋಗಿ-ಬರುತ್ತಲೇ ಇರುತ್ತಾರೆ. ಅವರ ಮೂಲಕ ನನಗೆ ಅಲ್ಲಿಯ ವೃತ್ತಾಂತಗಳೂ ತಿಳಿಯುತ್ತಲೇ ಇರುತ್ತವೆ. ಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದವನೇ! ಇಲ್ಲಿ ನಾನೂ ನಿನಗೊಂದು ವರವನ್ನು ಕೊಡುತ್ತೇನೆ. ಇಂದು ನೀನು ನಾನು ಕೊಡಲಿರುವ ಅರ್ಘ್ಯ-ಪಾದ್ಯಾದಿ ಸತ್ಕಾರಗಳನ್ನು ಪ್ರತಿ ಗ್ರಹಿಸು. ಅಯೋಧ್ಯೆಗೆ ನೀನು ನಾಳೆ ಹೋಗಬಹುದಾಗಿದೆ.”

ರಾಜಪುತ್ರನಾದ ಶ್ರೀರಾಮನು ಭರದ್ವಾಜರ ಆ ಮಾತನ್ನು ತಲೆ ಬಾಗಿ ಸ್ವೀಕರಿಸಿದನು. ಪರಮಹೃಷ್ಟನಾಗಿ 'ಬಾಢಂ' ಎಂದು ಹೇಳಿ ಈ ವರವನ್ನು ಶ್ರೀರಾಮನು ಭರದ್ವಾಜರಿಂದ ಪ್ರಾರ್ಥಿಸಿದನು :

ಅಕಾಲೇ ಫಲಿನೋ ವೃಕ್ಷಾಃ ಸರ್ವೇ ಚಾಪಿ ಮಧುಸ್ರವಾಃ ।
ಫಲಾನ್ಯಮೃತಕಲ್ಪಾನಿ ಬಹೂನಿ ವಿವಿಧಾನಿ ಚ ॥೧೯॥
ಭವನ್ತು ಮಾರ್ಗೇ ಭಗವನ್ನಯೋಧ್ಯಾಂ ಪ್ರತಿಗಚ್ಛತಃ ।

"ಪೂಜ್ಯರೇ! ನಾನು ಇಲ್ಲಿಂದ ಅಯೋಧ್ಯೆಗೆ ಪರಿವಾರಸಮೇತನಾಗಿ ಹೋಗುವಾಗ ಮಾರ್ಗದಲ್ಲಿರುವ ವೃಕ್ಷಗಳು, ಇದು ಕಾಲವಲ್ಲದಿದ್ದರೂ ಫಲ-ಪುಷ್ಪಭರಿತಗಳಾಗಿರಲಿ ; ಎಲ್ಲವೂ ಮಧುವನ್ನು ಸುರಿಸುತ್ತಿರಲಿ ; ವಿಧ-ವಿಧವಾದ, ಅಪಾರವಾದ, ಅಮೃತೋಪಮವಾದ ಮತ್ತು ಸುಗಂಧಯುಕ್ತವಾದ ಫಲಗಳನ್ನು ಆ ವೃಕ್ಷಗಳು ತುಂಬಿಕೊಂಡಿರಲಿ."

ಭರದ್ವಾಜರು–'**ತಥಾ ಭವತು** ಹಾಗೆಯೇ ಆಗಲಿ'–ಎಂದು ವಾಗ್ದಾನಮಾಡಿದೊಡನೆಯೇ ಮಾರ್ಗದಲ್ಲಿದ್ದ ಎಲ್ಲ ವೃಕ್ಷಗಳೂ ಸ್ವರ್ಗದ ಕಲ್ಪವೃಕ್ಷದಂತೆ ಆದುವು. ಅಯೋಧ್ಯೆಗೆ ಹೋಗುವ ಮಾರ್ಗದ ಮೂರು ಯೋಜನಗಳಷ್ಟು ವಿಸ್ತಾರದ ಭೂಪ್ರದೇಶದಲ್ಲಿ ಫಲವಿಲ್ಲದ ವೃಕ್ಷಗಳು ಫಲಗಳಿಂದ ತುಂಬಿದುವು. ಪುಷ್ಪವಿಲ್ಲದಿದ್ದ ವೃಕ್ಷಗಳಲ್ಲಿ ಪುಷ್ಪಗಳು ಪ್ರಾದುರ್ಭವಿಸಿದುವು. ಒಣಗಿಹೋಗಿದ್ದ ಮರಗಳು ಚಿಗುರಿ ಎಲೆಗಳಿಂದ ತುಂಬಿ ಹೋದುವು. ಎಲ್ಲ ವೃಕ್ಷಗಳೂ ಮಧುವನ್ನು ಸುರಿಸುತ್ತಿದ್ದುವು.

ಅಂತಹ ಸ್ವರ್ಗೀಯವೃಕ್ಷಗಳನ್ನು ನೋಡಿ ಪ್ರಹೃಷ್ಟರಾದ ವಾನರ ಶ್ರೇಷ್ಠರು ಸ್ವರ್ಗವನ್ನೇ ಜಯಿಸಿದವರಂತೆ ಅಥವಾ ಸ್ವರ್ಗದ ದೇವತೆಗಳಂತೆ ಪರಿಮಿತಿಯೇ ಇಲ್ಲದಿದ್ದ ಆ ದಿವ್ಯಫಲಗಳನ್ನು ಯಥೇಚ್ಛವಾಗಿ ಭಕ್ಷಿಸಿದರು.

೧೨೪ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೧೨೫ನೆಯ ಸರ್ಗ

ಹನುಮಂತನು ಗುಹನಿಗೂ ಮತ್ತು ಭರತನಿಗೂ ಶ್ರೀರಾಮನು ಅಯೋಧ್ಯೆಗೆ ಬರುತ್ತಿರುವ ಶುಭಸಮಾಚಾರವನ್ನು ತಿಳಿಸಿದುದು : ಪ್ರಸನ್ನನಾದ ಭರತನು ಹನುಮಂತನಿಗೆ ಪಾರಿತೋಷಿಕವನ್ನೀಯಲು ಘೋಷಿಸಿದುದು

ಅಯೋಧ್ಯಾಂ ತು ಸಮಾಲೋಕ್ಯ ಚಿನ್ತಯಾಮಾಸ ರಾಘವಃ ।
ಪ್ರಿಯಕಾಮಃ ಪ್ರಿಯಂ ರಾಮಸ್ತತಸ್ತ್ವರಿತವಿಕ್ರಮಃ ॥೧॥

(ಭರದ್ವಾಜರ ಆಶ್ರಮದಲ್ಲಿ ಇಳಿಯುವ ಮೊದಲೇ ವಿಮಾನದಲ್ಲಿದ್ದ) ಶೀಘ್ರಪರಾಕ್ರಮಿಯಾದ ಶ್ರೀರಾಮನು ವಿಮಾನದಿಂದಲೇ ಅಯೋಧ್ಯಾ ಪಟ್ಟಣವನ್ನು ನೋಡುತ್ತಾ ಸುಗ್ರೀವನೇ ಮೊದಲಾದ ಸುಹೃದರಿಗೆ ಪ್ರಿಯವನ್ನುಂಟುಮಾಡಲು ಆಲೋಚಿಸತೊಡಗಿದನು.

ಧೀಮಂತನಾದ ತೇಜಸ್ವಿಯಾದ ಶ್ರೀರಾಮನು ಸ್ವಲ್ಪ ಹೊತ್ತು ಚಿಂತಿಸುತ್ತಿದ್ದು ಅನಂತರ ವಾನರರ ಕಡೆಗೆ ನೋಡಿ ಕಪಿಶ್ರೇಷ್ಠನಾದ ಹನುಮಂತನಿಗೆ ಹೇಳಿದನು :

“ಕಪಿಶ್ರೇಷ್ಠನೇ! ಈಗಲೇ ನೀನು ಅಯೋಧ್ಯೆಗೆ ಶೀಘ್ರವಾಗಿ ಹೋಗಿ ರಾಜಭವನದಲ್ಲಿ ಎಲ್ಲರೂ ಕುಶಲಿಗಳಾಗಿರುವರೇ?–ಎಂಬುದನ್ನು ತಿಳಿದುಕೋ. ಅದಕ್ಕೆ ಮೊದಲು ಶೃಂಗಬೇರಪುರಕ್ಕೆ ಹೋಗಿ ವನಚರನಾದ ಗುಹನನ್ನು ಸಂಧಿಸಿ ನನ್ನ ಮಾತಿನಂತೆ ಅವನ ಕುಶಲವನ್ನೂ ವಿಚಾರಿಸು. ನಾನು ಕುಶಲಿಯಾಗಿರುವೆನೆಂಬುದನ್ನೂ, ನೀರೋಗನೂ, ನಿಶ್ಚಿಂತನೂ ಆಗಿರುವೆನೆಂಬುದನ್ನೂ ಕೇಳಿದ ಗುಹನು ಬಹಳ ಸಂತೋಷಪಡುತ್ತಾನೆ. ಗುಹನು ನನಗೆ ಆತ್ಮಸಮಃ ಸಖಾ–ಪ್ರಾಣಸಮಾನನಾದ ಸ್ನೇಹಿತನು.

ನಿಷಾದಾಧಿಪತಿಯಾದ ಗುಹನು ನನ್ನ ಆಗಮನದ ವಾರ್ತೆಯನ್ನು ಕೇಳಿ ಪ್ರಸನ್ನನಾಗಿ ನಿನಗೆ ಅಯೋಧ್ಯೆಗೆ ಹೋಗುವ ಮಾರ್ಗವನ್ನೂ ಮತ್ತು ಭರತನ ಸಮಾಚಾರವನ್ನೂ ಹೇಳುತ್ತಾನೆ. ಭರತನನ್ನು ಸಂದರ್ಶಿಸಿ ಅವನ ಕುಶಲವನ್ನು ನಾನು ಕೇಳಿದೆನೆಂದು ಹೇಳು. ಅನಂತರ ನೀನು ಅವನಿಗೆ ನಾನು ಸೀತಾ-ಲಕ್ಷ್ಮಣರೊಡನೆ ಸಫಲಮನೋರಥನಾಗಿ ಬಂದಿರುವ

ಸಮಾಚಾರವನ್ನೂ ಮತ್ತು ನನ್ನ ವನವಾಸಕಾಲದಲ್ಲಿ ನಡೆದ ವೃತ್ತಾಂತ ವನ್ನೂ ಭರತನಿಗೆ ಸಂಕ್ಷೇಪವಾಗಿ ತಿಳಿಸು.

ಬಲಿಷ್ಠನಾದ ರಾವಣನಿಂದ ಸೀತೆಯ ಹರಣ ; ಸುಗ್ರೀವನೊಡನೆ ಗೆಳೆತನ ; ವಾಲಿಯ ವಧೆ ; ಸೀತಾನ್ವೇಷಣೆ ; ಸಮುದ್ರವನ್ನು ಲಂಘಿಸಿದ ನಿನ್ನಿಂದ ಸೀತೆಯ ದರ್ಶನ ; ನಾನು ಸಸೈನ್ಯನಾಗಿ ಸಮುದ್ರದ ಬಳಿಗೆ ಹೋದುದು ; ಸಮುದ್ರರಾಜನ ದರ್ಶನ ; ನಲಸೇತುವೆಯನ್ನು ಸಮುದ್ರದಲ್ಲಿ ನಿರ್ಮಿಸಿದ್ದು ; ರಾವಣನ ವಧೆ ; ಮಹೇಂದ್ರ-ಬ್ರಹ್ಮ-ವರುಣರಿಂದ ವರದಾನ; ಮಹಾದೇವನ ಅನುಗ್ರಹದಿಂದ ತಂದೆಯಾದ ದಶರಥನೊಡನೆ ಸಮಾಗಮ–ಈ ಎಲ್ಲ ವಿಷಯಗಳನ್ನೂ ನೀನು ಭರತನಿಗೆ ತಿಳಿಸು. ನಾನು ಇಲ್ಲಿಗೆ ಬಂದಿರುವ ಸಮಾಚಾರವನ್ನೂ ನೀನು ಅವನಿಗೆ ಹೇಳು.

ಸಹ ರಾಕ್ಷಸರಾಜೇನ ಹರೀಣಾಂ ಪ್ರವರೇಣ ಚ ।
ಜಿತ್ವಾ ಶತ್ರುಗಣಾನ್ರಾಮಃ ಪ್ರಾಪ್ಯ ಚಾನುತ್ತಮಂ ಯಶಃ ।
ಉಪಯಾತಿ ಸಮೃದ್ಧಾರ್ಥಃ ಸಹಮಿತ್ರೈರ್ಮಹಾಬಲೈಃ ॥೧೩॥

ಶ್ರೀರಾಮನು ಶತ್ರುಗಳನ್ನು ಜಯಿಸಿ, ಶ್ರೇಷ್ಠವಾದ ಯಶಸ್ಸನ್ನು ಗಳಿಸಿ, ಸಫಲಮನೋರಥನಾಗಿ, ರಾಕ್ಷಸರಾಜನಾದ ವಿಭೀಷಣನೊಡನೆಯೂ ವಾನರರಾಜನಾದ ಸುಗ್ರೀವನೊಡನೆಯೂ ಮತ್ತು ಇತರ ಮಹಾಬಲಿಷ್ಠರಾದ ಮಿತ್ರರೊಡನೆಯೂ ಬರುತ್ತಿರುವನು–ಎಂದು ನೀನು ಅವನಿಗೆ ಹೇಳಬೇಕು.

ಅನಂತರ ಭರತನು ನಿನ್ನ ಮಾತನ್ನು ಕೇಳಿದೊಡನೆಯೇ ಅವನ ಮುಖದಲ್ಲಿ ಮೂಡುವ ಭಾವಗಳನ್ನೂ ಚೇಷ್ಟೆಗಳನ್ನೂ ಸೂಕ್ಷ್ಮವಾಗಿ ಗಮನಿಸಿ ನನಗೆ ಹೇಳಬೇಕು. ಅವನು ನನ್ನ ವಿಷಯದಲ್ಲಿ ಏನು ಹೇಳುತ್ತಾನೆ?–ಎಂಬುದೆಲ್ಲವನ್ನೂ ನನಗೆ ವಿವರಿಸಿ ಹೇಳಬೇಕು.

ಜ್ಞೇಯಾಶ್ಚ ಸರ್ವೇ ವೃತ್ತಾನ್ತಾ ಭರತಸ್ಯೇಙ್ಗಿತಾನಿ ಚ ।
ತತ್ತ್ವೇನ ಮುಖವರ್ಣೇನ ದೃಷ್ಟ್ಯಾ ವ್ಯಾಭಾಷಣೇನ ಚ ॥೧೪॥

ನಿನ್ನ ಮಾತನ್ನು ಕೇಳಿದನಂತರ ಅವನ ಮುಖದಲ್ಲಿ ಮೂಡುವ ಬಣ್ಣ ದಿಂದಲೂ, ದೃಷ್ಟಿಯಿಂದಲೂ, ಮಾತಿನ ಧೋರಣೆಯಿಂದಲೂ ಭರತನ

ಮನೋಗತವಾದ ಅಭಿಪ್ರಾಯವೇನೆಂಬುದನ್ನೂ ತಿಳಿಯಬೇಕು. ಅಲ್ಲಿ ನಡೆಯುವ ಸಮಸ್ತವೃತ್ತಾಂತಗಳನ್ನೂ ನೀನು ತಿಳಿದುಕೊಂಡು ಬರಬೇಕು.

ಸರ್ವಕಾಮಸಮೃದ್ಧಂ ಹಿ ಹಸ್ತ್ಯಶ್ವರಥಸಂಕುಲಮ್ ।
ಪಿತೃಪೈತಾಮಹಂ ರಾಜ್ಯಂ ಕಸ್ಯ ನಾವರ್ತಯೇನ್ಮನಃ ॥೧೬॥

ಮನೋವಾಂಛಿತವಾದ ಸಮಸ್ತಭೋಗಸಾಮಗ್ರಿಗಳಿಂದಲೂ, ಪರಿಪೂರ್ಣವಾಗಿ ಆನೆ, ಕುದುರೆ, ರಥಗಳ ಸಮೃದ್ಧಿಯಿಂದಲೂ ಕೂಡಿ ಹಕ್ಕಿನಿಂದಲೇ ಆಸ್ತಿಯಾಗಿ ಬಂದಿರುವ, ತಂದೆ-ತಾತಂದಿರ ರಾಜ್ಯವನ್ನು ಪಡೆದುಕೊಂಡನಂತರ ಯಾರ ಮನಸ್ಸು ತಾನೇ ಬದಲಾವಣೆ ಹೊಂದುವುದಿಲ್ಲ?

ಸಂಗತ್ಯಾ ಭರತಃ ಶ್ರೀಮನ್ರಾಜ್ಯಾರ್ಥೀ ಚೇತ್ಸ್ವಯಂ ಭವೇತ್ ।
ಪ್ರಶಾಸ್ತು ವಸುಧಾಂ ಕೃತ್ಸ್ನಾಮಖಿಲಾಂ ರಘುನನ್ದನಃ ॥೧೭॥

ಒಂದು ವೇಳೆ ಸಹವಾಸದ ಕಾರಣದಿಂದಲೋ ಅಥವಾ ಬಹುಕಾಲ ರಾಜ್ಯವನ್ನು ಉಪಭೋಗಿಸಿದ ಕಾರಣದಿಂದಲೋ ಶ್ರೀಮಂತನಾದ ಭರತನು ತಾನೇ ರಾಜ್ಯಾಧಿಕಾರವನ್ನು ಮುಂದುವರಿಸುವ ಅಭಿಪ್ರಾಯವುಳ್ಳವನಾಗಿದ್ದರೆ–ರಘುಕುಲಾನಂದವರ್ಧನನಾದ ಆತನೇ ಅಖಂಡವಾದ ಈ ಭೂಮಂಡಲವನ್ನೂ ಚಿರಕಾಲದವರೆಗೆ ಶಾಸನಮಾಡುತ್ತಿರಲಿ.

ವಾನರಶ್ರೇಷ್ಠನೇ! ಹನುಮಂತ! ಭರತನ ಮನಸ್ಸಿನ ಅಭಿಪ್ರಾಯ ವನ್ನೂ ಮತ್ತು ನಮ್ಮ ಆಗಮನದ ವಾರ್ತೆಯನ್ನೂ ಹೇಳಿದನಂತರ ಅವನ ಪ್ರತಿಕ್ರಿಯೆಯನ್ನು ತಿಳಿದುಕೊಂಡು–ನಾವು ಭರದ್ವಾಜರ ಆಶ್ರಮದಿಂದ ಅಯೋಧ್ಯೆಯ ಕಡೆಗೆ ಹೆಚ್ಚುದೂರ ಪ್ರಯಾಣಮಾಡುವ ಮೊದಲೇ–ನೀನು ನನಗೆ ಈ ಸಮಾಚಾರವನ್ನು ತಿಳಿಸಬೇಕು."

ಶ್ರೀರಾಮನು ಹೀಗೆ ಆದೇಶಿಸಿದನಂತರ ವಾಯುಪುತ್ರನಾದ ಹನುಮಂತನು ಮನುಷ್ಯನ ವೇಷವನ್ನು ಧರಿಸಿ ಅಯೋಧ್ಯೆಗೆ ತ್ವರೆಯಿಂದ ಹೋದನು. ಆಕಾಶದಲ್ಲಿ ಹಾರುತ್ತಿರುವ ಗರುಡನು ಭೂಮಿಯಲ್ಲಿ ಹರಿದು ಹೋಗುತ್ತಿರುವ ಸರ್ಪವನ್ನು ಹಿಡಿಯಲು ವೇಗವಾಗಿ ಭೂಮಿಗೆ ಇಳಿಯುವಂತೆ–ಹನುಮಂತನು ಬಹಳ ಬೇಗ ಅಯೋಧ್ಯಾಪಟ್ಟಣದ ಕಡೆಗೆ ಹಾರಿದನು. ತನ್ನ ತಂದೆಯ ಮಾರ್ಗವಾದ ಮತ್ತು ಗರುಡಪಕ್ಷಿಯ ಆಶ್ರಯಸ್ಥಾನ

ವಾದ ಆಕಾಶದಲ್ಲಿ ಹಾರುತ್ತಾ ಗಂಗಾ-ಯಮುನೆಯರ ಸಂಗಮಸ್ಥಾನವನ್ನೂ (ಪ್ರಯಾಗವನ್ನೂ) ಅತಿಕ್ರಮಿಸಿ ಮುಂದೆ ಶೃಂಗಬೇರಪುರಕ್ಕೆ ಹೋಗಿ ಅಲ್ಲಿ ಭೂಮಿಗಿಳಿದು ಪರಮಹೃಷ್ಟನಾಗಿ ಗುಹನಿಗೆ ಶುಭಕರವಾದ ಈ ಮಾತನ್ನು ಹೇಳಿದನು :

"ಗುಹನೇ! ಕಕುತ್ಸ್ಥಕುಲಾವತಂಸನಾದ, ಸತ್ಯಪರಾಕ್ರಮಿಯಾದ, ನಿನ್ನ ಸ್ನೇಹಿತನಾದ ಶ್ರೀರಾಮನು ಸೀತಾ-ಸೌಮಿತ್ರಿಯರೊಡನೆ ನಿನ್ನ ಕುಶಲವನ್ನು ಕೇಳಿದ್ದಾನೆ. ಶ್ರೀರಾಮನೀಗ ಭರದ್ವಾಜರ ಆಶ್ರಮದಲ್ಲಿದ್ದಾನೆ. ಭರದ್ವಾಜರ ಆಜ್ಞೆಯಂತೆ ಇಂದು ಪಂಚಮಿಯ ರಾತ್ರಿ ಅಲ್ಲಿ ತಂಗಿದ್ದು ಮರುದಿವಸವೇ ಅಲ್ಲಿಂದ ಹೊರಟು ಇಲ್ಲಿಗೆ ಬರುತ್ತಾನೆ. ಇಲ್ಲಿಯೇ ಅವನನ್ನು ನೀನು ಸಂದರ್ಶಿಸಬಹುದಾಗಿದೆ."

ಆನಂದಪುಲಕಿತನಾಗಿದ್ದ ಮಹಾತೇಜಸ್ವಿಯಾದ ಹನುಮಂತನು ಗುಹನಿಗೆ ಹೀಗೆ ಹೇಳಿ ಮುಂದೆ ಯಾವುದನ್ನೂ ಯೋಚಿಸಹೋಗದೇ ಅತ್ಯಂತ ವೇಗದಿಂದ ಮೇಲಕ್ಕೆ ಹಾರಿದನು. ಹಾಗೆ ಆಕಾಶದಲ್ಲಿ ಹಾರಿಕೊಂಡು ಅಯೋಧ್ಯೆಯ ಕಡೆಗೆ ಬರುತ್ತಿದ್ದಾಗ ಹನುಮಂತನು ಮಾರ್ಗದಲ್ಲಿ ಪರಶುರಾಮತೀರ್ಥವನ್ನೂ, ವಾಲುಕಿನೀನದಿಯನ್ನೂ, ಗೋಮತೀನದಿಯನ್ನೂ, ಭಯಂಕರವಾದ ಶಾಲವನವನ್ನೂ ನೋಡಿದನು. ಸಾವಿರಾರು ಪ್ರಜೆಗಳನ್ನೂ, ಸಂಪತ್ಸಮೃದ್ಧವಾದ ಗ್ರಾಮಗಳನ್ನೂ ನೋಡುತ್ತಾ ಕಪಿಶ್ರೇಷ್ಠನಾದ ಹನುಮಂತನು ತೀವ್ರಗತಿಯಿಂದ ಬಹುದೂರದ ಪ್ರಯಾಣವನ್ನು ಮುಗಿಸಿ ನಂದಿಗ್ರಾಮದ ಸಮೀಪದಲ್ಲಿದ್ದ ಹೂವರಳಿದ ವೃಕ್ಷಗಳ ತೋಪಿಗೆ ಬಂದನು. ಆ ವೃಕ್ಷಗಳು ದೇವರಾಜನಾದ ಇಂದ್ರನ ನಂದನವನದಲ್ಲಿದ್ದ ಮತ್ತು ಕುಬೇರನ ಚೈತ್ರರಥವನದಲ್ಲಿದ್ದ ವೃಕ್ಷಗಳಂತೆಯೇ ಸುಮನೋಹರವಾಗಿದ್ದುವು. ಆ ವೃಕ್ಷಗಳ ಸಮೀಪದಲ್ಲಿಯೇ ಇದ್ದ ಉದ್ಯಾನವನವು ಭಾರ್ಯೆಯರಿಂದಲೂ, ಪುತ್ರ-ಪೌತ್ರರಿಂದಲೂ ಕೂಡಿ ವಸ್ತ್ರಾಭರಣಗಳಿಂದ ಸಮಲಂಕೃತರಾಗಿದ್ದ ಸಾವಿರಾರು ಪುರುಷರಿಂದ ತುಂಬಿಹೋಗಿದ್ದಿತು.

ಅಯೋಧ್ಯೆಗೆ ಕ್ರೋಶ ಮಾತ್ರ (ಮೂರು ಮೈಲಿಗಳಷ್ಟು) ದೂರವಿದ್ದ ನಂದಿಗ್ರಾಮದಲ್ಲಿ ನಾರುಮಡಿಯನ್ನುಟ್ಟು ಕೃಷ್ಣಾಜಿನವನ್ನು ಹೊದೆದಿದ್ದ ದೀನನಾಗಿದ್ದ, ಆಶ್ರಮದಲ್ಲಿ ವಾಸಮಾಡುತ್ತಿದ್ದ ಭರತನನ್ನು ಹನುಮಂತನು

ನೋಡಿದನು. ಅವನು ಬಹಳ ಕೃಶನಾಗಿದ್ದನು. ಜಟೆಯನ್ನು ಬಿಟ್ಟು ಕೊಂಡಿದ್ದನು. ಅವನ ಅಂಗಾಂಗಗಳು ಧೂಳಿನಿಂದ ಮುಚ್ಚಿಹೋಗಿದ್ದುವು. ಶ್ರೀರಾಮನ ಅಗಲಿಕೆಯ ದುಃಖದಿಂದ ಪೀಡಿತನಾಗಿದ್ದನು. ಫಲ-ಮೂಲ ಗಳನ್ನೇ ತಿನ್ನುತ್ತಿದ್ದನು. ಜಿತೇಂದ್ರಿಯನಾಗಿ, ತಪಸ್ವಿಯಾಗಿ, ಧರ್ಮಾಚರಣೆ ಯಲ್ಲಿಯೇ ಆಸಕ್ತನಾಗಿದ್ದನು. ಜಟೆಯು ಪೊದೆಯಂತೆ ಬೆಳೆದಿದ್ದು ಅದೇ ಅವನಿಗೆ ಹೊರೆಯಾಗಿರುವಂತೆ ಕಾಣುತ್ತಿದ್ದಿತು. ಅವನು ನಾರುಮಡಿಯನ್ನೂ ಕೃಷ್ಣಾಜಿನವನ್ನೂ ಧರಿಸಿದ್ದನು. ನಿಯತವಾದ ವ್ರತಾನುಷ್ಠಾನವುಳ್ಳವ ನಾಗಿದ್ದನು. ಅವನ ಅಂತಃಕರಣವು ಬಹಳ ಪರಿಶುದ್ಧವಾಗಿದ್ದಿತು. ಬ್ರಹ್ಮರ್ಷಿಯ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಕಂಗೊಳಿಸುತ್ತಿದ್ದನು. ಶ್ರೀರಾಮನ ಪಾದುಕೆಗಳನ್ನೇ ಮುಂದೆಮಾಡಿಕೊಂಡು ರಾಜ್ಯವನ್ನಾಳುತ್ತಿದ್ದನು. ನಾಲ್ಕು ವರ್ಣದವರನ್ನೂ ಸಮಸ್ತವಾದ ಭಯದಿಂದಲೂ ರಕ್ಷಿಸುತ್ತಿದ್ದನು. ಅವನ ಬಳಿಯಲ್ಲಿದ್ದ ಅಮಾತ್ಯ-ಪುರೋಹಿತ-ಸೇನಾಪತಿಗಳೂ ಯೋಗಯುಕ್ತ ರಾಗಿದ್ದರು. ಕಾಷಾಯವಸ್ತ್ರಗಳನ್ನೇ ಧರಿಸಿದ್ದರು. ಭರತನು ಹೀಗೆ ನಾರು ಮಡಿಯನ್ನುಟ್ಟು ಕಂದ-ಮೂಲ-ಫಲಗಳಿಂದ ಜೀವಿಸುತ್ತಾ ತಪಸ್ವಿಯಂತೆ ಇರುತ್ತಿದ್ದಾಗ ಧರ್ಮವತ್ಸಲರಾದ ಅಯೋಧ್ಯೆಯ ಪ್ರಜೆಗಳು ಕೂಡ ಸುಖೋಪಭೋಗಗಳಲ್ಲಿ ಆಸಕ್ತರಾಗಿರಲಿಲ್ಲ.

ಮನುಷ್ಯನ ದೇಹವನ್ನು ಧರಿಸಿದ ಮತ್ತೊಬ್ಬ ಧರ್ಮಮೂರ್ತಿ ಯಂತೆಯೇ ಇದ್ದ, ಧರ್ಮಜ್ಞನಾದ ಭರತನ ಬಳಿಗೆ ಹೋಗಿ ಹನುಮಂತನು ಕೈಜೋಡಿಸಿಕೊಂಡು ಹೇಳಿದನು :

"ರಾಜಪುತ್ರ! ದಂಡಕಾರಣ್ಯದಲ್ಲಿ ನಾರುಮಡಿಯನ್ನುಟ್ಟು ಜಟಾ ಧಾರಿಯಾಗಿ ವಾಸಮಾಡುತ್ತಿದ್ದ ಯಾವ ಶ್ರೀರಾಮನ ವಿಷಯವಾಗಿ ನೀನು ಸರ್ವದಾ ಶೋಕಪಡುತ್ತಿರುವೆಯೋ ಆ ಶ್ರೀರಾಮನು ನಿನ್ನ ಕುಶಲವನ್ನು ಕೇಳಿದ್ದಾನೆ.

ಪ್ರಿಯಮಾಖ್ಯಾಮಿ ತೇ ದೇವ ಶೋಕಂ ತ್ಯಜ ಸುದಾರುಣಮ್ ।
ಅಸ್ಮಿನ್ಮುಹೂರ್ತೇ ಭ್ರಾತ್ರಾ ತ್ವಂ ರಾಮೇಣ ಸಹ ಸಂಗತಃ ॥೩೭॥

ದೇವ! ನಾನು ನಿನಗೀಗ ಅತ್ಯಂತಪ್ರಿಯವಾದ ವಾರ್ತೆಯನ್ನು ಹೇಳ

ಲಿದ್ದೇನೆ. ಶೋಕವನ್ನು ಪರಿತ್ಯಜಿಸು. ಇದೇ ಮುಹೂರ್ತದಲ್ಲಿಯೇ ನೀನು ನಿನ್ನ ಅಣ್ಣನಾದ ಶ್ರೀರಾಮನೊಡನೆ ಸೇರುವೆ.

ಶ್ರೀರಾಮನು ರಾವಣನನ್ನು ಸಂಹರಿಸಿ, ಸೀತಾದೇವಿಯನ್ನು ಪಡೆದುಕೊಂಡು, ಸಫಲಮನೋರಥನಾಗಿ ಮಹಾಬಲರಾದ ಮಿತ್ರರೊಡನೆ ಅಯೋಧ್ಯೆಗೆ ಬರುತ್ತಿದ್ದಾನೆ. ಮಹಾತೇಜಸ್ವಿಯಾದ ಲಕ್ಷ್ಮಣನೂ ಯಶೋವತಿಯಾದ ಸೀತಾದೇವಿಯೂ ಶ್ರೀರಾಮನೊಡನೆ ಬರುತ್ತಿದ್ದಾರೆ. ದೇವರಾಜನಾದ ಇಂದ್ರನೊಡನೆ ಶಚೀದೇವಿಯು ರಾರಾಜಿಸುವಂತೆ–ಶ್ರೀರಾಮನೊಡನೆ ಪೂರ್ಣಕಾಮಳಾದ ಸೀತಾದೇವಿಯು ಶೋಭಿಸುತ್ತಿದ್ದಾಳೆ."

ಏವಮುಕ್ತೋ ಹನುಮತಾ ಭರತೋ ಭ್ರಾತೃವತ್ಸಲಃ ।
ಪಪಾತ ಸಹಸಾ ಹೃಷ್ಟೋ ಹರ್ಷಾನ್ಮೋಹಂ ಜಗಾಮ ಹ ॥೪೦॥

ಹನುಮಂತನು ಹೀಗೆ ಹೇಳುತ್ತಲೇ ಅಣ್ಣನಲ್ಲಿ ಹೆಚ್ಚು ವಾತ್ಸಲ್ಯ ವಿರುವ ಭರತನು ಆನಂದಾಧಿಕ್ಯದಿಂದ ಕೆಳಗೆ ಬಿದ್ದುಬಿಟ್ಟನು. ಅತ್ಯಧಿಕವಾದ ಹರ್ಷದಿಂದಾಗಿ ಕ್ಷಣಕಾಲ ಮೂರ್ಛಿತನಾದನು.

ಮುಹೂರ್ತಕಾಲದನಂತರ ಎಚ್ಚರಗೊಂಡು ಸಮಾಧಾನವನ್ನು ಹೊಂದಿ ಮೇಲೆದ್ದು ಸಂಭ್ರಮದಿಂದ ಹನುಮಂತನನ್ನು ಆಲಿಂಗನಮಾಡಿಕೊಂಡು ಶೋಕಸಂಸರ್ಗದಿಂದ ಶೂನ್ಯವಾದ, ಪ್ರೀತಿಮಯವಾದ, ಆನಂದ ಬಾಷ್ಪಗಳ ಅಪಾರವಾದ ಹನಿಗಳಿಂದ ಪ್ರಿಯವಾದಿಯಾದ ಹನುಮಂತನನ್ನು ಅಭಿಷೇಚಿಸುತ್ತಾ ಹೇಳಿದನು :

ದೇವೋ ವಾ ಮಾನುಷೋ ವಾ ತ್ವಮನುಕ್ರೋಶಾದಿಹಾಗತಃ ।
ಪ್ರಿಯಾಖ್ಯಾನಸ್ಯ ತೇ ಸೌಮ್ಯ ದದಾಮಿ ಬ್ರುವತಃ ಪ್ರಿಯಮ್ ॥೪೩॥

"ನೀನೇನು ದೇವತೆಯೋ ; ಮನುಷ್ಯನೋ? ಯಾರೇ ಆಗಿರು ; ನನ್ನ ಮೇಲಿನ ಕೃಪೆಯಿಂದಾಗಿ ಇಂತಹ ಪ್ರಿಯವಾರ್ತೆಯನ್ನು ಹೇಳಲು ನೀನಿಲ್ಲಿಗೆ ಆಗಮಿಸಿರುವೆ. ಇಂತಹ ಅನುಪಮವಾದ ಪ್ರಿಯವಾರ್ತೆಯನ್ನು ನನಗೆ ಹೇಳಿದುದಕ್ಕಾಗಿ ನಾನು ನಿನಗೆ ಪ್ರಿಯವಾಗುವ ಯಾವ ವಸ್ತುವನ್ನು ಕೊಡಲಿ?

ಆದರೂ ಈ ಪ್ರಿಯವಾರ್ತೆಯನ್ನು ಹೇಳಿದುದಕ್ಕಾಗಿ ನಿನಗೆ ಒಂದು

ಲಕ್ಷ ಗೋವುಗಳನ್ನು ಕೊಡುತ್ತೇನೆ. ನೂರು ಗ್ರಾಮಗಳನ್ನು ಕೊಡುತ್ತೇನೆ. ಭಾರ್ಯೆಯರಾಗಲೂ ಯೋಗ್ಯರಾದ ಹದಿನಾರು ಮಂದಿ ಕನ್ಯೆಯರನ್ನು ಕೊಡುತ್ತೇನೆ. ಅವರು ಸುಂದರವಾದ ಕುಂಡಲಗಳಿಂದ ಸಮಲಂಕೃತ ರಾಗಿರುತ್ತಾರೆ. ಪರಿಶುದ್ಧವಾದ ಆಚಾರ-ವ್ಯವಹಾರವುಳ್ಳವರಾಗಿರುತ್ತಾರೆ. ಸುವರ್ಣವರ್ಣದವರಾಗಿದ್ದು ಸುಂದರವಾದ ಮೂಗುಗಳನ್ನೂ ತೊಡೆಗಳನ್ನೂ ಹೊಂದಿದ್ದು ಚಂದ್ರನಂತೆ ಸೌಮ್ಯವಾದ ಮುಖವುಳ್ಳವರಾಗಿರುತ್ತಾರೆ. ಸತ್ಕುಲಪ್ರಸೂತೆಯರಾಗಿದ್ದು ಸಮಸ್ತವಾದ ಆಭರಣಗಳಿಂದಲೂ ಸಮಲಂಕೃತರಾಗಿರುತ್ತಾರೆ."

ಕಪಿಶ್ರೇಷ್ಠನಾದ ಹನುಮಂತನು ಹೇಳಿದ ಅತ್ಯಾಶ್ಚರ್ಯಕರವಾದ ರಾಮಾಗಮನದ ವಾರ್ತೆಯನ್ನು ಕೇಳಿ ರಾಜಪುತ್ರನಾದ ಭರತನು ಶ್ರೀರಾಮ ನನ್ನು ನೋಡುವ ಆಕಾಂಕ್ಷೆಯಿಂದ ಪ್ರಹರ್ಷಿತನಾದನು. ಹರ್ಷಾತಿರೇಕದಿಂದ ಪುನಃ ಹನುಮಂತನಿಗೆ ಹೇಳಿದನು.

೧೨೫ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೧೨೬ನೆಯ ಸರ್ಗ

ಹನುಮಂತನು ಭರತನಿಗೆ ರಾಮ-ಲಕ್ಷ್ಮಣ-ಸೀತೆಯರ ವನವಾಸದ ವೃತ್ತಾಂತವನ್ನು ಸಮಗ್ರವಾಗಿ ಹೇಳಿದುದು

ಬಹೂನಿ ನಾಮ ವರ್ಷಾಣಿ ಗತಸ್ಯ ಸುಮಹದ್ವನಮ್ ।
ಶೃಣೋಮ್ಯಹಂ ಪ್ರೀತಿಕರಂ ಮಮ ನಾಥಸ್ಯ ಕೀರ್ತನಮ್ ॥೧॥

"ಮಹಾನುಭಾವನೇ! ನನ್ನ ಸ್ವಾಮಿಯು ಮಹಾರಣ್ಯಕ್ಕೆ ಹೋಗಿ ಅನೇಕ ವರ್ಷಗಳು ಕಳೆದುಹೋದುವು. ಇಷ್ಟು ವರ್ಷಗಳನಂತರ ಈಗ ನಾನು ಆನಂದದಾಯಕವಾದ ಅವನ ಆಗಮನದ ವಾರ್ತೆಯನ್ನು ಕೇಳುತ್ತಿದ್ದೇನೆ.

ಕಲ್ಯಾಣೀ ಬತ ಗಾಥೇಯಂ ಲೌಕಿಕೀ ಪ್ರತಿಭಾತಿ ಮೇ ।
ಏತಿ ಜೀವನ್ತಮಾನನ್ದೋ ನರಂ ವರ್ಷಶತಾದಪಿ ॥೨॥

"ಮನುಷ್ಯನು ಜೀವಂತನಾಗಿದ್ದರೆ ನೂರು ವರ್ಷಗಳು ಕಳೆದ

ಮೇಲಾದರೂ ಅವನಿಗೆ ಸಂತೋಷವು ಉಂಟಾಗಿಯೇ ಆಗುತ್ತದೆ–ಎಂಬ ಲೋಕಪ್ರಸಿದ್ಧವಾದ ಪ್ರವಾದವು ಯಥಾರ್ಥವೆಂದು ನನಗನಿಸುತ್ತದೆ.

ಸೌಮ್ಯನೇ! ರಾಘವನಿಗೂ-ವಾನರರಿಗೂ ಸಮಾಗಮವು ಹೇಗಾಯಿತು? ಎಲ್ಲಾಯಿತು? ಯಾವ ಕಾರಣದಿಂದಾಯಿತು?–ಈ ಎಲ್ಲ ವಿಷಯಗಳನ್ನೂ ನನಗೆ ಯಥಾವತ್ತಾಗಿ ಹೇಳು."

ರಾಜಕುಮಾರನಾದ ಭರತನು ಹನುಮಂತನನ್ನು ದರ್ಭಾಸನದಲ್ಲಿ ಕುಳ್ಳಿರಿಸಿ ಹೀಗೆ ಪ್ರಶ್ನಿಸಲು–ಹನುಮಂತನು ಅರಣ್ಯದಲ್ಲಿ ನಡೆದ ಶ್ರೀರಾಮನ ಸಂಬಂಧವಾದ ಚರಿತ್ರೆಯನ್ನು ಸಮಗ್ರವಾಗಿ ಹೇಳಲು ಉಪಕ್ರಮಿಸಿದನು.

"ಪ್ರಭುವೇ! ಮಹಾಬಾಹುವೇ! ಭರತಕುಮಾರನೇ! ದಶರಥನು ನಿನ್ನ ತಾಯಿಗೆ ಎರಡು ವರಗಳನ್ನು ಕೊಟ್ಟಿದ್ದು ; ಶ್ರೀರಾಮನನ್ನು ಅರಣ್ಯಕ್ಕೆ ಕಲುಹಿಸಿದ್ದು ; ಪುತ್ರಶೋಕದಿಂದ ದಶರಥರಾಜನು ಮರಣಹೊಂದಿದುದು ; ನಿನ್ನನ್ನು ರಾಜಭಟರು ಶೀಘ್ರವಾಗಿ ರಾಜಗೃಹದಿಂದ ಕರೆತಂದುದು ; ಅಯೋಧ್ಯೆಗೆ ಬಂದ ನೀನು ರಾಜ್ಯವನ್ನು ಪಡೆದುಕೊಳ್ಳಲು ಒಪ್ಪದೇ ಇದ್ದುದು ; ಸತ್ಪುರುಷರ ಧರ್ಮವನ್ನೇ ಆಚರಿಸುತ್ತಾ ರಾಜ್ಯವನ್ನು ಅಣ್ಣನಾದ ಶ್ರೀರಾಮನಿಗೇ ಹಿಂದಿರುಗಿಸಿಕೊಡಲು ನೀನು ಚಿತ್ರಕೂಟಕ್ಕೆ ಪ್ರಯಾಣ ಮಾಡಿದುದು ; ದಶರಥನ ಆಜ್ಞಾಪರಿಪಾಲನೆಯಲ್ಲಿಯೇ ದೃಢಪ್ರತಿಜ್ಞನಾದ ಶ್ರೀರಾಮನು ರಾಜ್ಯವನ್ನು ತ್ಯಾಗಮಾಡಿದುದು ; ನೀನು ಹಿರಿಯಣ್ಣನ ಪಾದುಕೆಗಳನ್ನೇ ತೆಗೆದುಕೊಂಡು ಹಿಂದಿರುಗಿದುದು–ಈ ಎಲ್ಲ ವಿಷಯ ಗಳೂ ನಿನಗೆ ಯಥಾವತ್ತಾಗಿ ತಿಳಿದಿವೆ. ಆ ಮುಂದೆ ನಡೆದ ವೃತ್ತಾಂತವನ್ನು ನಾನೀಗ ಹೇಳುತ್ತೇನೆ :

ನೀನು ಅಯೋಧ್ಯೆಗೆ ಹಿಂದಿರುಗಿದನಂತರ ಶ್ರೀರಾಮನು ವಾಸಿಸುತ್ತಿದ್ದ ಆ ವನವು ಬಹಳವಾಗಿ ಕ್ಷೀಣಿಸತೊಡಗಿತು. ಅಲ್ಲಿದ್ದ ಮೃಗ-ಪಕ್ಷಿಗಳು ಭಯಗೊಂಡು ಭ್ರಾಂತವಾಗಿದ್ದುವು. ಅಂತಹ ಸ್ಥಿತಿಯಲ್ಲಿದ್ದ ವನವನ್ನು ಶ್ರೀರಾಮನು ಪರಿತ್ಯಜಿಸಿ ದಂಡಕಾರಣ್ಯವನ್ನು ಪ್ರವೇಶಿಸಿದನು. ಅದು ಜನರಿಂದ ರಹಿತವಾಗಿದ್ದಿತು. ಭಯಂಕರವಾಗಿದ್ದಿತು. ಆನೆಗಳು ಆ ವನವನ್ನು ಧ್ವಂಸಮಾಡುತ್ತಿದ್ದುವು. ಸಿಂಹಗಳಿಂದಲೂ, ವ್ಯಾಘ್ರಗಳಿಂದಲೂ ದಂಡಕಾ

ರಣ್ಯವು ವ್ಯಾಪ್ತವಾಗಿದ್ದಿತು. ಅಂತಹ ಮಹಾಘೋರಾರಣ್ಯವನ್ನು ಶ್ರೀರಾಮನು ಸೀತಾ-ಲಕ್ಷ್ಮಣರೊಡನೆ ಪ್ರವೇಶಿಸಿದನು.

ಶ್ರೀರಾಮ-ಸೀತಾ-ಲಕ್ಷ್ಮಣರು ಅರಣ್ಯದಲ್ಲಿ ನಡೆದುಹೋಗುತ್ತಿದ್ದಾಗ ಅವರ ಮುಂದೆ ಗಟ್ಟಿಯಾಗಿ ಗರ್ಜನೆಮಾಡುತ್ತಾ ವಿರಾಧನೆಂಬೊಬ್ಬ ರಾಕ್ಷಸನು ಕಾಣಿಸಿಕೊಂಡನು. ಊರ್ಧ್ವಬಾಹುವೂ ಅಧೋಮುಖನೂ ಆಗಿದ್ದ, ಮದಿಸಿದ ಆನೆಯಂತೆ ಘೀಂಕರಿಸುತ್ತಿದ್ದ ಆ ರಾಕ್ಷಸನನ್ನು ಇಬ್ಬರೂ ಸೇರಿ ಸಂಹರಿಸಿ ಹೊಂಡವೊಂದರಲ್ಲಿ ಹಾಕಿಬಿಟ್ಟರು. ಅಂತಹ ಅತಿದುಷ್ಕರವಾದ ಕಾರ್ಯವನ್ನು ಮಾಡಿ ರಾಮ-ಲಕ್ಷ್ಮಣರು ಸೀತೆಯೊಡನೆ ಸಾಯಂಕಾಲ ರಮ್ಯವಾದ ಶರಭಂಗರ ಆಶ್ರಮಕ್ಕೆ ತೆರಳಿದರು. ಶರಭಂಗಮಹರ್ಷಿಗಳು ಶ್ರೀರಾಮನ ಸಮಕ್ಷದಲ್ಲಿಯೇ ಸ್ವರ್ಗಕ್ಕೆ ಹೋದರು. ಅನಂತರ ಸತ್ಯಪರಾಕ್ರಮನಾದ ಶ್ರೀರಾಮನು ಅಲ್ಲಿದ್ದ ಮಹರ್ಷಿಗಳಿಗೆ ಅಭಿವಾದನಪೂರ್ವಕವಾಗಿ ನಮಸ್ಕರಿಸಿ ಜನಸ್ಥಾನಕ್ಕೆ ಹೋದನು. ಅಲ್ಲಿ ಶೂರ್ಪಣಖಾ ಎಂಬ ಹೆಸರಿನ ರಾಕ್ಷಸಿಯು ಮನಸ್ಸಿನಲ್ಲಿ ಕಾಮಭಾವವನ್ನಿಟ್ಟುಕೊಂಡು ಶ್ರೀರಾಮನ ಬಳಿಗೆ ಬಂದಳು. ಶ್ರೀರಾಮನು ಅವಳನ್ನು ದಂಡಿಸಲು ಲಕ್ಷ್ಮಣನಿಗೆ ಆದೇಶವನ್ನಿತ್ತನು. ಒಡನೆಯೇ ಲಕ್ಷ್ಮಣನು ಮೇಲೆದ್ದು ಕತ್ತಿಯಿಂದ ಆ ರಾಕ್ಷಸಿಯ ಕಿವಿ-ಮೂಗುಗಳನ್ನು ಕತ್ತರಿಸಿದನು. ಮಹಾತ್ಮನಾದ ರಾಘವನು ಜನಸ್ಥಾನದಲ್ಲಿ ವಾಸಮಾಡುತ್ತಿದ್ದಾಗ ಭಯಂಕರವಾದ ಕರ್ಮಗಳುಳ್ಳವರಾದ ಹದಿನಾಲ್ಕು ಸಾವಿರ ರಾಕ್ಷಸರನ್ನು ಸಂಹರಿಸಿದನು. ರಣಾಂಗಣದಲ್ಲಿ ರಾಮನೊಬ್ಬನೇ ಯುದ್ಧಮಾಡುತ್ತಿದ್ದ ಸಮಸ್ತರಾಕ್ಷಸರನ್ನೂ ದಿವಸದ ನಾಲ್ಕನೆಯ ಒಂದು ಭಾಗದ ಸಮಯದಲ್ಲಿ (ಒಂದು ಯಾಮ ಅಥವಾ ಮೂರು ಘಂಟೆಗಳ ಕಾಲದಲ್ಲಿ) ನಿಃಶೇಷವಾಗಿ ಧ್ವಂಸಮಾಡಿದನು. ದಂಡಕಾರಣ್ಯದಲ್ಲಿ ವಾಸಮಾಡುತ್ತಿದ್ದ ಮಹಾಬಲರಾದ, ಮಹಾವೀರ್ಯರಾದ, ತಪಸ್ಸಿಗೆ ವಿಘ್ನವನ್ನುಂಟುಮಾಡುತ್ತಿದ್ದ ಎಲ್ಲ ರಾಕ್ಷಸರನ್ನೂ ಶ್ರೀರಾಮನು ಯುದ್ಧದಲ್ಲಿ ಸಂಹರಿಸಿದನು. ರಣಭೂಮಿಯಲ್ಲಿ ಹದಿನಾಲ್ಕು ಸಾವಿರ ರಾಕ್ಷಸರೂ ಭಗ್ನರಾಗಿ ಹೋದರು. ಅನಂತರ ಖರ-ದೂಷಣರೂ ಕಡೆಯಲ್ಲಿ ತ್ರಿಶಿರಸನೂ ಶ್ರೀರಾಮನ ಬಾಣಗಳಿಗೆ ಬಲಿಯಾದರು. ಲಕ್ಷ್ಮಣನಿಂದ ಕಿವಿ-ಮೂಗುಗಳನ್ನು ಕಳೆದುಕೊಂಡಿದ್ದ ಶೂರ್ಪಣಖೆಯು ಲಂಕೆಗೆ ಹೋಗಿ ರಾವಣನನ್ನು ಪ್ರಚೋದಿಸಿದಳು.

ರಾವಣನ ಅನುಚರನಾದ ಮಾರೀಚನೆಂಬ ರಾಕ್ಷಸನು ರತ್ನದ ಜಿಂಕೆಯ ರೂಪವನ್ನು ತಾಳಿ ಸೀತೆಯನ್ನು ಭ್ರಾಂತಿಗೊಳಿಸಿದನು. ವೈದೇಹಿಯು ರತ್ನ ಮೃಗವನ್ನು ನೋಡಿ ಶ್ರೀರಾಮನಿಗೆ–"ಆರ್ಯಪುತ್ರ! ಈ ರತ್ನಮೃಗವನ್ನು ತರುವುದರಿಂದ ನಮ್ಮ ಆಶ್ರಮವು ಮನೋಹರವೂ ಕಾಂತಿಯುಕ್ತವೂ ಆಗು ತ್ತದೆ. ಆದುದರಿಂದ ಅದನ್ನು ಹಿಡಿದು ತಾ"–ಎಂದು ಹೇಳಿದಳು.

ಪ್ರೇಯಸಿಯ ಮಾತನ್ನು ಕೇಳಿ ಶ್ರೀರಾಮನು ಧನುಷ್ಪಾಣಿಯಾಗಿ ಮೃಗ ವನ್ನು ಹಿಂಬಾಲಿಸಿದನು. ಎಷ್ಟು ದೂರ ಹೋದರೂ ಅದು ಜೀವಂತವಾಗಿ ಸಿಕ್ಕದಿರಲು ಓಡಿಹೋಗುತ್ತಿದ್ದ ಆ ಮೃಗವನ್ನು ನೇರವಾದ ಬಾಣದಿಂದ ಪ್ರಹ ರಿಸಿದನು. ಶ್ರೀರಾಮನು ಮೃಗವನ್ನು ಹಿಂಬಾಲಿಸಿ ಹೋದನಂತರ ಲಕ್ಷ್ಮಣನೂ ಶ್ರೀರಾಮನನ್ನು ಅರಸಿಕೊಂಡು ಆಶ್ರಮವನ್ನು ಬಿಟ್ಟು ಹೋದಾಗ ರಾವಣನು ಆಶ್ರಮವನ್ನು ಪ್ರವೇಶಿಸಿ–ಮಂಗಳಗ್ರಹವು ರೋಹಿಣಿಯನ್ನು ಆಕ್ರಮಿಸುವಂತೆ–ಏಕಾಕಿನಿಯಾಗಿದ್ದ ಸೀತೆಯನ್ನು ಹಿಡಿದುಕೊಂಡನು. ಆ ಸಮಯದಲ್ಲಿ ಸೀತೆಯನ್ನು ರಕ್ಷಿಸಲು ಮುಂದೆ ಬಂದ ಜಟಾಯುವನ್ನೂ ರಾವಣನು ಯುದ್ಧದಲ್ಲಿ ಸಂಹರಿಸಿ ಸೀತೆಯನ್ನೆತ್ತಿಕೊಂಡು ಅತಿಶೀಘ್ರವಾಗಿ ಆಕಾಶಮಾರ್ಗದಲ್ಲಿ ಧಾವಿಸಿದನು. ಅನಂತರ ಒಂದು ಪರ್ವತಶಿಖರದಲ್ಲಿ ವಾಸಿಸುತ್ತಿದ್ದ ಮತ್ತು ಪರ್ವತದಂತೆ ಅದ್ಭುತವಾದ ಆಕಾರವುಳ್ಳವರಾಗಿದ್ದ ವಾನರರು ರಾವಣನು ಸೀತೆಯನ್ನೆತ್ತಿಕೊಂಡು ಹೋಗುತ್ತಿದ್ದುದನ್ನು ಆಶ್ಚರ್ಯಚಕಿತರಾಗಿ ನೋಡಿದರು. ಮಹಾಬಲಿಷ್ಠನಾಗಿದ್ದ ರಾವಣರಾಕ್ಷಸನು ಅತ್ಯಂತಶೀಘ್ರವಾಗಿ ಮನೋವೇಗಗತಿಯುಳ್ಳ ಪುಷ್ಪಕವಿಮಾನವನ್ನೇರಿ ವೈದೇಹಿಯೊಡನೆ ಲಂಕೆಯನ್ನು ಪ್ರವೇಶಿಸಿದನು. ಸೀತಾದೇವಿಯನ್ನು ಬಂಗಾರದಿಂದ ಲೇಪಿಸಲ್ಪಟ್ಟ ಮತ್ತು ವಿಶಾಲವಾದ ರಾಜಭವನದಲ್ಲಿರಿಸಿ ನಯ-ವಿನಯಗಳ ಮಾತುಗಳಿಂದ ಸಾಂತ್ವನಗೊಳಿಸಲು ಪ್ರಯತ್ನಿಸಿದನು. ಅನಂತರ ಅಶೋಕವನವನ್ನು ಸೇರಿದ ವೈದೇಹಿಯು ರಾಕ್ಷಸಶ್ರೇಷ್ಠನನ್ನೂ ಮತ್ತು ಅವನ ಮಾತುಗಳನ್ನೂ ಸ್ವಲ್ಪವಾದರೂ ಲೆಕ್ಕಿಸದೇ ಹುಲ್ಲುಕಡ್ಡಿಗೆ ಸಮಾನವನ್ನಾಗಿ ಕಂಡಳು.

ಇತ್ತಲಾಗಿ ಶ್ರೀರಾಮನು ರತ್ನಮೃಗವನ್ನು ಕೊಂದು ಆಶ್ರಮಕ್ಕೆ ಹಿಂದಿರುಗಿದನು. ಹಿಂದಕ್ಕೆ ಬರುತ್ತಿದ್ದಾಗ ತನ್ನ ತಂದೆಗೆ ಪ್ರಿಯಕರನಾದ

ಜಟಾಯುವು ಹತನಾಗಿ ಬಿದ್ದಿರುವುದನ್ನು ಕಂಡು ಬಹಳವಾಗಿ ವ್ಯಥೆಪಟ್ಟನು. ಅನಂತರ ತನ್ನ ತಂದೆಯ ಪ್ರಿಯಸಖನಾದ ಜಟಾಯುವಿಗೆ ದಹನಸಂಸ್ಕಾರ ಮಾಡಿ ಲಕ್ಷ್ಮಣಸಮೇತನಾದ ಶ್ರೀರಾಮನು ಸೀತಾದೇವಿಯನ್ನು ಹುಡುಕುತ್ತಾ ಗೋದಾವರೀನದಿಯ ತೀರಪ್ರದೇಶಗಳಲ್ಲಿದ್ದ ಸುಪುಷ್ಪಿತವಾದ ಅರಣ್ಯ ಪ್ರದೇಶದಲ್ಲಿ ಸಂಚರಿಸಿದನು. ಹಾಗೆಯೇ ಸೀತೆಯನ್ನು ಹುಡುಕಿಕೊಂಡು ಸಂಚರಿಸುತ್ತಿದ್ದಾಗ ಆ ಮಹಾರಣ್ಯದಲ್ಲಿ ರಾಮ-ಲಕ್ಷ್ಮಣರು ಕಬಂಧನೆಂಬ ರಾಕ್ಷಸನ ಬಳಿಗೆ ಬಂದರು. ಸತ್ಯಪರಾಕ್ರಮಿಯಾದ ಶ್ರೀರಾಮನು ಕಬಂಧನ ಮಾತಿನಂತೆ ಋಶ್ಯಮೂಕಪರ್ವತಕ್ಕೆ ಹೋಗಿ ಸುಗ್ರೀವನೊಡನೆ ಸೇರಿದನು. ಒಬ್ಬರನ್ನೊಬ್ಬರು ನೋಡುವ ಮೊದಲೇ ಇಬ್ಬರಲ್ಲಿಯೂ ಹಾರ್ದಿಕವಾದ ಸ್ನೇಹವು ಉಂಟಾಯಿತು. ಆ ಹಿಂದೆ ಕ್ರುದ್ಧನಾದ ವಾಲಿಯು ಸುಗ್ರೀವನನ್ನು ರಾಜ್ಯದಿಂದ ಭ್ರಷ್ಟನನ್ನಾಗಿ ಮಾಡಿದ್ದನು. ಇಬ್ಬರೂ ಪರಸ್ಪರವಾಗಿ ಮಾತು-ಕತೆಗಳನ್ನು ನಡೆಸಿದನಂತರ ಅವರ ಸ್ನೇಹವು ಮತ್ತೂ ಗಾಢ ವಾಯಿತು. ಶ್ರೀರಾಮನು ಬಾಹುಬಲದಿಂದ ಸಮರಭೂಮಿಯಲ್ಲಿ ಮಹಾ ಕಾಯನಾದ, ಮಹಾಬಲನಾದ ವಾಲಿಯನ್ನು ಸಂಹರಿಸಿ ಸುಗ್ರೀವನಿಗೆ ಕಿಷ್ಕಿಂಧಾರಾಜ್ಯವನ್ನು ಕೊಡಿಸಿದನು. ಶ್ರೀರಾಮನು ಸಮಸ್ತವಾನರರಿಂದ ಸಹಿತನಾದ ಸುಗ್ರೀವನಿಗೆ ವಾನರರಾಜ್ಯದ ಪಟ್ಟಗಟ್ಟಿದನು. ಶ್ರೀರಾಮನು ಮಾಡಿದ ಉಪಕಾರಕ್ಕೆ ಪ್ರತಿಯಾಗಿ ಸುಗ್ರೀವನು ರಾಜಪುತ್ರಿಯಾದ ಸೀತಾದೇವಿಯನ್ನು ಹುಡುಕಿಕೊಡುವುದಾಗಿ ಪ್ರತಿಜ್ಞೆಮಾಡಿದ್ದನು. ಮಹಾತ್ಮನಾದ ಸುಗ್ರೀವನಿಂದ ಆಜ್ಞಪ್ತರಾದ ಹತ್ತುಕೋಟಿ ವಾನರರು ಸೀತೆ ಯನ್ನು ಹುಡುಕಲು ಎಲ್ಲ ದಿಕ್ಕುಗಳಿಗೂ ಹೊರಟರು. ಆ ವಾನರ ಸಮೂಹದಲ್ಲಿ ನಾವೂ ಇದ್ದೆವು. ಸೀತೆಯನ್ನು ಹುಡುಕಲು ವಿಂಧ್ಯಪರ್ವತದ ಗುಹೆಯಲ್ಲಿ ಪ್ರವೇಶಿಸಿದೆವಾದಕಾರಣ ಅಲ್ಲಿಯೇ ಬಹಳ ದಿವಸಗಳು ಕಳೆದು ನಿಗದಿತವಾದ ಸಮಯವೂ ಮೀರಿಹೋಯಿತು. ಅದಕ್ಕಾಗಿ ನಾವು ಶೋಕಿಸ ಬೇಕಾಯಿತು. ಸ್ವಲ್ಪ ಕಾಲವು ಕಳೆದನಂತರ ನಾವು ಹೊರಬಂದೆವು. ಸಂಪಾತಿಯೆಂಬ ಗೃಧ್ರರಾಜನು ಜಟಾಯುವಿನ ತಮ್ಮನು. ಅವನು ಮಹಾ ವೀರನಾಗಿದ್ದನು. ಅವನು ನಮಗೆ ಸೀತಾದೇವಿಯು ರಾವಣನ ಅರಮನೆ

ಯಲ್ಲಿರುವಳೆಂಬ ಸಮಾಚಾರವನ್ನು ಹೇಳಿದನು. ಆ ಸಮಯದಲ್ಲಿ ನಾನು ಪರಮದುಃಖಿಗಳಾಗಿದ್ದ ಜ್ಞಾತಿ-ಬಾಂಧವರ ದುಃಖವನ್ನು ಹೋಗಲಾಡಿಸುವ ಸಲುವಾಗಿ ಆತ್ಮಬಲವನ್ನೇ ಆಶ್ರಯಿಸಿ ನೂರು ಯೋಜನಗಳಷ್ಟು ವಿಸ್ತಾರ ವಾಗಿದ್ದ ಸಮುದ್ರವನ್ನು ದಾಟಿ ಲಂಕೆಯನ್ನು ಸೇರಿ ಅಲ್ಲಿ ಅಶೋಕವನದಲ್ಲಿದ್ದ ಸೀತೆಯನ್ನು ನೋಡಿದೆನು. ಆ ಸಮಯದಲ್ಲಿ ಸೀತಾದೇವಿಯು ಮಲಿನವಾದ ರೇಷ್ಮೆಯ ವಸ್ತ್ರವನ್ನುಟ್ಟಿದ್ದಳು. ಆನಂದರಹಿತಳಾಗಿದ್ದಳು. ದೃಢವ್ರತಳಾಗಿದ್ದಳು. ಆ ಸಮಯದಲ್ಲಿ ನಾನು ಅವಳಿಗೆ ಶ್ರೀರಾಮನ ಮುದ್ರೆಯಿಂದ ಅಂಕಿತವಾಗಿದ್ದ ಉಂಗುರವನ್ನು ನೆನಪಿಗಾಗಿ ಕೊಟ್ಟೆನು. ಅವಳಿಂದ ನೆನಪಿಗಾಗಿ ಚೂಡಾಮಣಿಯನ್ನು ತೆಗೆದುಕೊಂಡು ಸಫಲಮನೋರಥನಾಗಿ ಹಿಂದಿರುಗಿದೆನು. ಅನಾಯಾಸವಾಗಿ ಮಹಾಕಾರ್ಯಗಳನ್ನು ಮಾಡುವ ಶ್ರೀರಾಮನ ಬಳಿಗೆ ಬಂದು ಸೀತೆಯು ಕೊಟ್ಟಿದ್ದ, ಕಾಂತಿಯಿಂದ ಥಳ-ಥಳಿಸುತ್ತಿದ್ದ ಮಹಾಮಣಿಯನ್ನು ಶ್ರೀರಾಮನಿಗೆ ಕೊಟ್ಟೆನು.

ಶ್ರುತ್ವಾ ತು ಮೈಥಿಲೀಂ ಹೃಷ್ಟಸ್ತ್ವಾಶಶಂಸೇ ಚ ಜೀವಿತಮ್ ।
ಜೀವಿತಾನ್ತಮನುಪ್ರಾಪ್ತಃ ಪೀತ್ವಾಮೃತಮಿವಾತುರಃ ॥೪೭॥

ಮೃತ್ಯುಸನ್ನಿಹಿತನಾಗಿರುವ ರೋಗಿಯು ಅಮೃತವನ್ನು ಕುಡಿದು ಜೀವಿತನಾಗುವಂತೆ–ಸೀತೆಯ ವಿಯೋಗದಿಂದ ಮರಣಾಸನ್ನನಾಗಿದ್ದ ಶ್ರೀರಾಮನು ಸೀತೆಯ ಸಮಾಚಾರವನ್ನು ಕೇಳಿ ಪರಮಹೃಷ್ಟನಾಗಿ ಬದುಕಿ ನಲ್ಲಿ ಆಶೆಯನ್ನು ಹೊಂದಿದನು.

ಪ್ರಳಯಕಾಲದ ಸಂವರ್ತಕಾಗ್ನಿಯು ಸಮಸ್ತ ಲೋಕಗಳನ್ನೂ ಭಸ್ಮಮಾಡುವಂತೆ–ಶ್ರೀರಾಮನು ಯುದ್ಧಪ್ರಯತ್ನದಲ್ಲಿ ತೊಡಗಿ ಲಂಕಾ ಪಟ್ಟಣವನ್ನು ಧ್ವಂಸಮಾಡಲು ಮನಸ್ಸುಮಾಡಿದನು.

ಅನಂತರ ಶ್ರೀರಾಮನು ನಲನ ಮೂಲಕ ಸಮುದ್ರಕ್ಕೆ ಸೇತುವೆ ಯನ್ನು ಕಟ್ಟಿಸಿದನು. ಅದರ ಮೂಲಕ ಕಪಿವೀರರು ಸಮುದ್ರವನ್ನು ದಾಟಿದರು. ಲಂಕಾಪಟ್ಟಣದ ರಣರಂಗದಲ್ಲಿ ವಾನರರಿಗೂ ರಾಕ್ಷಸರಿಗೂ ಭಯಂಕರವಾದ ಯುದ್ಧವು ಪ್ರಾರಂಭವಾಯಿತು. ನಮ್ಮ ಕಡೆಯ ಕಪಿ ನಾಯಕನಾದ ನೀಲನು ಪ್ರಹಸ್ತನೆಂಬ ರಾಕ್ಷಸನನ್ನು ಸಂಹರಿಸಿದನು. ರಾಘವನು ಕುಂಭಕರ್ಣನನ್ನು ಸಂಹರಿಸಿದನು. ಲಕ್ಷ್ಮಣನು ರಾವಣನ

ಮಗನಾದ ಇಂದ್ರಜಿತುವನ್ನೂ, ಶ್ರೀರಾಮನು ರಾವಣನನ್ನೂ ಸಂಹರಿಸಿ ದರು. ಅನಂತರ ಇಂದ್ರ, ಯಮ, ವರುಣ, ಮಹಾದೇವ, ಬ್ರಹ್ಮ ಮತ್ತು ದಶರಥ–ಇವರೊಡನೆ ಶ್ರೀರಾಮನ ಸಮಾಗಮವಾಯಿತು. ಎಲ್ಲ ದೇವತೆ ಗಳಿಂದಲೂ ಋಷಿಗಳಿಂದಲೂ ಶ್ರೀರಾಮನು ವರಗಳನ್ನು ಪಡೆದನು. ಅದ ರಿಂದ ಪ್ರಸನ್ನಚಿತ್ತನಾಗಿದ್ದ ಶ್ರೀರಾಮನು ಸಮಸ್ತವಾನರನಾಯಕರೊಡನೆ ಪುಷ್ಪಕವಿಮಾನದಲ್ಲಿ ಕಿಷ್ಕಿಂಧಾಪಟ್ಟಣಕ್ಕೆ ಬಂದನು. ಅಲ್ಲಿಂದ ಗಂಗಾನದಿಯ ತೀರಕ್ಕೆ ಬಂದು ಭರದ್ವಾಜಮಹರ್ಷಿಗಳ ಸನ್ನಿಧಿಯಲ್ಲಿ ವಾಸಮಾಡುತ್ತಿರುವ ಶ್ರೀರಾಮನನ್ನು ಪುಷ್ಯನಕ್ಷತ್ರಯುಕ್ತವಾದ ನಾಳೆಯ ದಿನ ನಿರ್ವಿಘ್ನವಾಗಿ ನೀನು ಸಂದರ್ಶಿಸಬಹುದಾಗಿದೆ."

ಹನುಮಂತನ ಮಧುರವಾದ ವಾಕ್ಯಗಳಿಂದ ಶ್ರೀರಾಮನ ವನವಾಸದ ಚರಿತ್ರೆಯನ್ನು ಕೇಳಿದ ಭರತನು ಪರಮಹೃಷ್ಟನಾಗಿ ಕೈಮುಗಿದುಕೊಂಡು ಮನಸ್ಸಿಗೆ ಹರ್ಷದಾಯಕವಾದ ಮಾತನ್ನು ಹೇಳಿದನು :

ಚಿರಸ್ಯ ಪೂರ್ಣಃ ಖಲು ಮೇ ಮನೋರಥಃ ॥೫೫॥

"ಬಹಳ ಕಾಲದ ಮೇಲಾದರೂ ನನ್ನ ಮನೋರಥವು ಪೂರ್ಣ ವಾಯಿತಲ್ಲಾ!"

೧೨೬ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೧೨೭ನೆಯ ಸರ್ಗ

ಅಯೋಧ್ಯೆಯಲ್ಲಿ ಶ್ರೀರಾಮನ ಸ್ವಾಗತಕ್ಕಾಗಿ ಸಿದ್ಧತೆ : ಅಯೋಧ್ಯೆಯಿಂದ ಎಲ್ಲರೂ ನಂದಿಗ್ರಾಮಕ್ಕೆ ತೆರಳಿದುದು : ಶ್ರೀರಾಮನ ಆಗಮನ : ಭರತನೊಡನೆ ಸಮಾಗಮ : ಪುಷ್ಪಕವಿಮಾನವನ್ನು ಕುಬೇರನಿಗೆ ಹಿಂದಿರುಗಿಸಿದುದು

ಶ್ರುತ್ವಾ ತು ಪರಮಾನನ್ದಂ ಭರತಃ ಸತ್ಯವಿಕ್ರಮಃ ।
ಹೃಷ್ಟಮಾಜ್ಞಾಪಯಾಮಾಸ ಶತ್ರುಘ್ನಂ ಪರವೀರಹಾ ॥೧॥

ಪರಮಾನಂದಕರವಾದ ಶ್ರೀರಾಮನ ಆಗಮನದ ವಾರ್ತೆಯನ್ನು ಕೇಳಿ ಸತ್ಯಪರಾಕ್ರಮಿಯಾದ ಶತ್ರುವೀರಹಂತಕನಾದ ಭರತನು–ಅವನಂತೆಯೇ ಪರಮಹೃಷ್ಟನಾಗಿದ್ದ ಶತ್ರುಘ್ನನಿಗೆ ಆಜ್ಞಾಪಿಸಿದನು :

"ಪರಿಶುದ್ಧರಾಗಿರುವ ಪುರುಷರು ಸಮಸ್ತಕುಲದೇವತೆಗಳನ್ನೂ ಅಶ್ವತ್ಥವೃಕ್ಷಗಳನ್ನೂ ಸುಗಂಧಯುಕ್ತವಾದ ಮಾಲೆಗಳಿಂದ ಪೂಜಿಸಲಿ. ಪೂಜೆ ಗಳು ನಡೆಯುವಾಗ ಮಂಗಳವಾದ್ಯಗಳು ಮೊಳಗಲಿ.

ಸ್ತೋತ್ರಗಳನ್ನೂ ಮತ್ತು ಪುರಾಣಕಥೆಗಳನ್ನೂ ತಿಳಿದಿರುವ ಸೂತರೂ, ಸಮಸ್ತ ಸ್ತುತಿಪಾಠಕರೂ, ವಾದ್ಯಗಳನ್ನು ಬಾರಿಸುವುದರಲ್ಲಿ ಕುಶಲರಾದವರೂ, ವೇಶ್ಯೆಯರೂ, ರಾಜಭಾರ್ಯೆಯರೂ, ಅಮಾತ್ಯರೂ, ಸೈನಿಕರೂ, ಸೈನಿಕರ ಭಾರ್ಯೆಯರೂ, ಬ್ರಾಹ್ಮಣರೂ, ಕ್ಷತ್ರಿಯರೂ, ನಾನಾ ಜಾತಿಯ ಪ್ರಮುಖರೂ ಶ್ರೀರಾಮನ ಚಂದ್ರಸದೃಶವಾದ ಮುಖವನ್ನು ನೋಡಲು ನಗರದಮನೆಗಳಿಂದ ಹೊರಬರಲಿ."

ಭರತನ ಮಾತನ್ನು ಕೇಳಿ ಶತ್ರುವೀರಹಂತಕನಾದ ಶತ್ರುಘ್ನನು ಸಾವಿರಾರು ಮಂದಿ ಕೂಲಿಕಾರರನ್ನು ವಿಂಗಡಿಸಿ ಒಂದೊಂದು ತಂಡಕ್ಕೂ ಆಜ್ಞೆ ಮಾಡಿದನು :

"ನೀವೆಲ್ಲರೂ ಅಯೋಧ್ಯೆಯಿಂದ ನಂದಿಗ್ರಾಮದವರೆಗಿನ ಮಾರ್ಗ ದಲ್ಲಿರುವ ಹಳ್ಳ-ತಿಟ್ಟುಗಳನ್ನು ಸಮನೆಲಮಾಡಬೇಕು. ಒಂದು ಕ್ರೋಶದಷ್ಟು ದೂರದ ಮಾರ್ಗವನ್ನು ಸಮತಟ್ಟುಮಾಡಿದನಂತರ ಹಿಮದಂತೆ ಶೀತಲ ವಾಗಿರುವ ನೀರಿನಿಂದ ಸಿಂಪಡಿಸಬೇಕು. ಮತ್ತೆ ಕೆಲವು ಕೂಲಿಗಾರರು ಹಾಗೆ ಸಿಂಪಡಿಸಿದ ಆ ಹಾದಿಯನ್ನು ಭತ್ತದ ಅರಳಿನಿಂದಲೂ ಮತ್ತು ಹೂವುಗಳಿಂದಲೂ ಅಲಂಕರಿಸಬೇಕು. ಶ್ರೇಷ್ಠವಾದ ಈ ನಗರದ ಬೀದಿಗಳಲ್ಲಿ ಉದ್ದಕ್ಕೂ ಎತ್ತರವಾದ ಧ್ವಜಪಟಗಳನ್ನು ಹಾರಿಸಬೇಕು. ಸೂರ್ಯೋದಯವಾಗುವುದರೊಳಗಾಗಿ ಪುರಜನರು ತಮ್ಮ-ತಮ್ಮ ಮನೆ ಗಳನ್ನು ಹೂವಿನಮಾಲಿಕೆಗಳ ಸಾಲುಗಳಿಂದಲೂ, ಬಿಡಿ-ಬಿಡಿಯಾದ ಕಮಲ-ಕನ್ನೈದಿಲೆ-ಗುಲಾಬಿಹೂವುಗಳಿಂದಲೂ, ಸುಗಂಧಯುಕ್ತವಾದ ಐದು ಬಗೆಯ ರಂಗವಲ್ಲಿಗಳಿಂದಲೂ ಸಿಂಗರಿಸಲಿ. ರಾಜಮಾರ್ಗವು ಜನರ ಒತ್ತಡವಿಲ್ಲದೇ ಇರಲಿ. ಇದರ ವ್ಯವಸ್ಥೆಗಾಗಿ ನೂರಾರು ಜನರು ಎಲ್ಲ ಕಡೆ ಗಳಲ್ಲಿಯೂ ಸಜ್ಜಾಗಿ ನಿಲ್ಲಲಿ."

ಶತ್ರುಘ್ನನ ಆ ಆಜ್ಞೆಯನ್ನು ಕೇಳಿ ಆನಂದಭರಿತರಾದ ಕೆಲಸಗಾರರು

ಮತ್ತು ಪೌರರು ಶತ್ರುಘ್ನನ ಆಜ್ಞಾಪರಿಪಾಲನೆಯಲ್ಲಿ ನಿರತರಾದರು. ಧೃಷ್ಟಿ, ಜಯಂತ, ವಿಜಯ, ಸಿದ್ಧಾರ್ಥ, ಅರ್ಥಸಾಧಕ, ಅಶೋಕ, ಮಂತ್ರಪಾಲ ಮತ್ತು ಸುಮಂತ್ರ–ಈ ಎಂಟು ಮಂದಿ ಮಂತ್ರಿಗಳು ಧ್ವಜಗಳಿಂದಲೂ ಆಭರಣಗಳಿಂದಲೂ ಸಮಲಂಕೃತವಾಗಿದ್ದ ಮದಿಸಿದ ಸಾವಿರಾರು ಆನೆಗಳೊಡನೆ ಶ್ರೀರಾಮನನ್ನು ಸ್ವಾಗತಿಸಲು ಹೊರಟರು. ಇತರ ಅನೇಕ ವೀರರು ಸುವರ್ಣಮಯವಾದ ಹಗ್ಗಗಳಿಂದ ಬಿಗಿಯಲ್ಪಟ್ಟಿದ್ದ ಹೆಣ್ಣಾನೆಗಳ ಮೇಲೂ ಗಂಡಾನೆಗಳ ಮೇಲೂ ಕುಳಿತು ಹೊರಟರು. ಮತ್ತೆ ಕೆಲವರು ಕುದುರೆಗಳ ಮೇಲೂ ಮಹಾರಥಗಳಲ್ಲಿಯೂ ಕುಳಿತು ಶ್ರೀರಾಮನನ್ನು ಸ್ವಾಗತಿಸಲು ಹೊರಟರು. ಧ್ವಜ-ಪತಾಕೆಗಳಿಂದ ವಿಭೂಷಿತವಾದ ಸಾವಿರಾರು ಕುದುರೆಗಳ ಮೇಲೆ ಕುಳಿತು ಕುದುರೇಸವಾರರು ಶ್ರೀರಾಮನನ್ನು ಸ್ವಾಗತಿಸಲು ತೆರಳಿದರು. ಮುಖ್ಯರಿಂದಲೂ ಅತಿಮುಖ್ಯರಿಂದಲೂ ಸಮನ್ವಿತವಾಗಿದ್ದು ಶಕ್ತಿ-ಋಷ್ಟಿ-ಪಾಶ ಇವೇ ಮುಂತಾದ ಆಯುಧಗಳನ್ನು ಕೈಗಳಲ್ಲಿ ಹಿಡಿದಿದ್ದ, ಸಾವಿರಾರು ಪದಾತಿಸೈನಿಕರಿಂದ ಪರಿವೃತರಾದ ಕ್ಷತ್ರಿಯವೀರರು ಶ್ರೀರಾಮನನ್ನು ಸ್ವಾಗತಿಸುವ ಸಲುವಾಗಿ ತೆರಳಿದರು.

ದಶರಥನ ಸಮಸ್ತಪತ್ನಿಯರೂ ಕೌಸಲ್ಯೆಯನ್ನೂ ಸುಮಿತ್ರೆಯನ್ನೂ ಮುಂದೆಮಾಡಿಕೊಂಡು ಪಲ್ಲಕ್ಕಿಗಳಲ್ಲಿ ಕುಳಿತು ಶ್ರೀರಾಮನನ್ನು ನೋಡುವ ಸಲುವಾಗಿ ತೆರಳಿದರು. ಕೈಕೇಯೀಸಹಿತರಾಗಿ ಸಮಸ್ತಸ್ತ್ರೀಯರೂ ನಂದಿಗ್ರಾಮಕ್ಕೆ ಹೋದರು.

ಧರ್ಮಾತ್ಮನಾದ ಮತ್ತು ಧರ್ಮಜ್ಞನಾದ ಭರತನು ಮುಖ್ಯ-ಮುಖ್ಯರಾದ ಬ್ರಾಹ್ಮಣರೊಡನೆಯೂ, ಜಾತಿಮುಖ್ಯರೊಡನೆಯೂ, ವೈಶ್ಯರೊಡನೆಯೂ, ಮಾಲೆಗಳನ್ನೂ ಮೋದಕಗಳನ್ನೂ ಹಿಡಿದಿದ್ದ ಮಂತ್ರಿಗಳೊಡನೆಯೂ ಪರಿವೃತನಾಗಿ ಆರ್ಯನಾದ ಶ್ರೀರಾಮನ ದಿವ್ಯಪಾದುಕೆಗಳನ್ನು ತಲೆಯ ಮೇಲಿಟ್ಟುಕೊಂಡು ಶಂಖ-ಭೇರೀನಿನಾದಗಳೊಡನೆ ಹೋಗುತ್ತಿದ್ದನು. ಅವನನ್ನು ವಂದಿ-ಮಾಗಧರು ಸ್ತೋತ್ರಮಾಡುತ್ತಿದ್ದರು.

ಬಿಳಿಯ ಹೂವಿನ ಮಾಲೆಗಳಿಂದ ಸುಶೋಭಿತವಾದ ಬಿಳಿಯ ಶ್ವೇತಛತ್ರವನ್ನೂ, ರಾಜೋಚಿತವಾದ ಸುವರ್ಣಭೂಷಿತವಾದ ಚಾಮರಗಳನ್ನೂ

ಭರತನು ಶ್ರೀರಾಮನ ಸಲುವಾಗಿ ತೆಗೆಸಿಕೊಂಡು ಬರುತ್ತಿದ್ದನು. ಆ ಸಮಯದಲ್ಲಿ ಭರತನು ಉಪವಾಸಾದಿಗಳಿಂದ ಕೃಶನಾಗಿದ್ದನು. ದೀನ ನಾಗಿದ್ದನು. ಚೀರ-ಕೃಷ್ಣಾಜಿನಗಳೇ ಅವನ ಉಡುವ ವಸ್ತ್ರಗಳಾಗಿದ್ದುವು. ಅಣ್ಣನಾದ ಶ್ರೀರಾಮನು ಬರುವನೆಂಬ ಶುಭವಾರ್ತೆಯನ್ನು ಕೇಳಿ ಅದೇ ಮೊದಲ ಬಾರಿಗೆ ಹರ್ಷಗೊಂಡನು. (ಶ್ರೀರಾಮನು ವನವಾಸಕ್ಕೆ ಹೋದಾಗಿ ನಿಂದ ಭರತನು ಹರ್ಷವೆಂಬುದನ್ನೇ ಕಂಡಿರಲಿಲ್ಲ.)

ಶ್ರೀರಾಮನನ್ನು ಎದುರುಗೊಳ್ಳಲು ಭರತನು ಮಂತ್ರಿಗಳೊಡನೆ ಮುಂದೆ ಮುಂದೆ ಹೋಗುತ್ತಲೇ ಇದ್ದನು. ಕುದುರೆಗಳ ಗೊರಸುಗಳ ಶಬ್ದ ಗಳಿಂದಲೂ, ರಥಚಕ್ರಗಳ ಗಡ-ಗಡಾಶಬ್ದಗಳಿಂದಲೂ, ಶಂಖ-ದುಂದುಭಿ ಗಳ ಶಬ್ದಗಳಿಂದಲೂ, ಆನೆಗಳ ಘೀಳಿಡುವ ಶಬ್ದಗಳಿಂದಲೂ ಭೂಮಿಯೇ ನಡುಗುತ್ತಿರುವುದೋ ಎಂಬಂತೆ ಕಾಣುತ್ತಿದ್ದಿತು. ಸಮಗ್ರವಾದ ಅಯೋಧ್ಯಾ ಪಟ್ಟಣವೇ ನಂದಿಗ್ರಾಮದ ಕಡೆಗೆ ಧಾವಿಸುತ್ತಿರುವುದನ್ನು ನೋಡಿ ಭರತನು ಮಾರುತಿಗೆ ಹೇಳಿದನು :

ಕಚ್ಚಿನ್ನ ಖಲು ಕಾಪೇಯೀ ಸೇವ್ಯತೇ ಚಲಚಿತ್ತತಾ ।
ನ ಹಿ ಪಶ್ಯಾಮಿ ಕಾಕುತ್ಸ್ಥಂ ರಾಮಮಾರ್ಯಂ ಪರಂತಪಮ್ ।
ಕಚ್ಚಿನ್ನ ಖಲು ದೃಶ್ಯನ್ತೇ ವಾನರಾಃ ಕಾಮರೂಪಿಣಃ ॥೨೪॥

"ಹನುಮಂತ! ವಾನರರಿಗೆ ಚಪಲತೆಯು ಸ್ವಾಭಾವಿಕವಾಗಿಯೇ ಇರುತ್ತದೆ. ನೀನಾದರೋ ನಿನ್ನ ಸ್ವಾಭಾವಿಕಗುಣವಾದ ಚಾಂಚಲ್ಯಚಿತ್ತವನ್ನು ನನ್ನಲ್ಲಿ ಪ್ರದರ್ಶಿಸಿಲ್ಲ ತಾನೇ? ಏಕೆಂದರೆ : ಇದುವರೆಗೂ ನಾನು ಆರ್ಯನಾದ ಶತ್ರುತಾಪಕನಾದ ಕಾಕುತ್ಸ್ಥನನ್ನು ಕಾಣಲೇ ಇಲ್ಲ. ಮನಬಂದಂತೆ ಆಕಾರಗಳನ್ನು ಧರಿಸುವ ಕಪಿಗಳನ್ನೂ ಕಾಣಲಿಲ್ಲ."

ಭರತನು ಹೀಗೆ ಹೇಳಲು ಹನುಮಂತನು ವಿಳಂಬಕ್ಕೆ ಕಾರಣವನ್ನು ವಿಜ್ಞಾಪಿಸಿಕೊಳ್ಳಲು ಸತ್ಯಪರಾಕ್ರಮಿಯಾದ ಭರತನಿಗೆ ಹೇಳಿದನು :

"ರಾಜಕುಮಾರ! ಮುನಿಶ್ರೇಷ್ಠರಾದ ಭರದ್ವಾಜರ ಅನುಗ್ರಹದಿಂದ ಹಾದಿಯುದ್ದಕ್ಕೂ ಇರುವ ವೃಕ್ಷಗಳು ಸಮೃದ್ಧವಾದ ಫಲ-ಪುಷ್ಪಗಳಿಂದ ತುಂಬಿವೆ. ಮಧುವನ್ನೂ ಸುರಿಸುತ್ತಿವೆ. ಆದುದರಿಂದಲೇ ಆ ವೃಕ್ಷಗಳಲ್ಲಿ

ಮದಿಸಿದ ದುಂಬಿಗಳು ನಿನಾದಮಾಡುತ್ತಿವೆ. ಅವುಗಳನ್ನು ನೋಡಿದ ವಾನರರು ಹಣ್ಣುಗಳನ್ನು ತಿನ್ನುತ್ತಾ ಮಧುವನ್ನು ಪಾನಮಾಡುತ್ತಾ ತಮ್ಮ ಹಸಿವು-ಬಾಯಾರಿಕೆಗಳನ್ನು ತೀರಿಸಿಕೊಳ್ಳುತ್ತಿರಬಹುದು. ದೇವರಾಜನಾದ ಇಂದ್ರನೂ ಶ್ರೀರಾಮನಿಗೆ ಇದೇ ವಿಧವಾದ ವರವನ್ನು ಕೊಟ್ಟಿದ್ದಾನೆ. ಈ ಕಾರಣದಿಂದಲೇ ಭರದ್ವಾಜಮುನಿಗಳು ಸೇನಾಸಹಿತನಾದ ಶ್ರೀರಾಮನಿಗೆ ಸಮಸ್ತಗುಣಗಳಿಂದ ಸಂಪನ್ನವಾದ ಆತಿಥ್ಯವನ್ನು ನೀಡಿರುತ್ತಾರೆ. ಇದರಿಂದ ಪ್ರಹೃಷ್ಟರಾದ ವಾನರಸೈನಿಕರ ಭಯಂಕರವಾದ ನಿನಾದವು ಕೇಳಿಬರುತ್ತಿದೆ. ಈಗ ನಾನು ನಮ್ಮ ವಾನರಸೈನಿಕರು ಗೋಮತೀನದಿಯನ್ನು ದಾಟುತ್ತಿರಬಹುದೆಂದು ತಿಳಿಯುತ್ತೇನೆ. ಸಾಲವನದ ಸಮೀಪದಲ್ಲಿ ದೊಡ್ಡದಾಗಿ ಧೂಳು ಏಳುತ್ತಿರುವುದನ್ನು ಗಮನಿಸು, ಭರತ! ಇದರಿಂದ ವಾನರಸೈನಿಕರು ರಮ್ಯವಾದ ಸಾಲವನವನ್ನು ಅಲ್ಲೋಲ-ಕಲ್ಲೋಲಗೊಳಿಸು ತ್ತಿದ್ದಾರೆಂದು ನಾನು ಭಾವಿಸುತ್ತೇನೆ. ಅದೋ ಅಲ್ಲಿ ನೋಡು, ಭರತ! ಬಹಳ ದೂರದಲ್ಲಿ ಚಂದ್ರಸದೃಶವಾದ ವಿಮಾನವು ಕಾಣಿಸುತ್ತಿದೆ. ಆ ದಿವ್ಯವಾದ ಪುಷ್ಪಕವಿಮಾನವು ಬ್ರಹ್ಮನಿರ್ಮಿತವಾದುದು. ರಾವಣನನ್ನು ಬಾಂಧವರೊಡನೆ ಸಂಹರಿಸಿ ಅವನಲ್ಲಿದ್ದ ಈ ವಿಮಾನವನ್ನು ಮಹಾತ್ಮನಾದ ಶ್ರೀರಾಮನು ಪಡೆದುಕೊಂಡನು. ಶ್ರೀರಾಮನಿಗೆ ವಾಹನವಾಗಿರುವ ಆ ದಿವ್ಯವಿಮಾನವು ಪ್ರಾತಃಕಾಲದ ಸೂರ್ಯನಂತೆ ಪ್ರಕಾಶಮಾನವಾಗಿದೆ. ಅದರ ವೇಗವು ಮನಸ್ಸಿನ ವೇಗಕ್ಕೆ ಸಮಾನವಾಗಿದೆ. ಅದು ಬ್ರಹ್ಮನ ಅನುಗ್ರಹದಿಂದ ಕುಬೇರನಿಗೆ ಲಭ್ಯವಾಗಿದ್ದಿತು. (ಕುಬೇರನನ್ನು ಪರಾಜಯಗೊಳಿಸಿ ರಾವಣನು ಅದನ್ನು ಕುಬೇರನಿಂದ ಅಪಹರಿಸಿ ತಂದಿದ್ದನು.) ಆ ವಿಮಾನದಲ್ಲಿ ಸೀತಾದೇವಿಯೊಡನೆ ರಾಮ-ಲಕ್ಷ್ಮಣರೂ, ಮಹಾತೇಜಸ್ವಿಯಾದ ಸುಗ್ರೀವನೂ, ರಾಕ್ಷಸರಾಜನಾದ ವಿಭೀಷಣನೂ ಇದ್ದಾರೆ.”

ಹನುಮಂತನು ಹೀಗೆ ಹೇಳುತ್ತಲೇ ಅಲ್ಲಿ ಶ್ರೀರಾಮನ ಸಂದರ್ಶನ ಕ್ಕಾಗಿ ನೆರೆದಿದ್ದ ಸ್ತ್ರೀ-ಬಾಲ-ಯುವ-ವೃದ್ಧರು “ಶ್ರೀರಾಮನು ಆಗಮಿಸಿದನು ; ರಾಜಾರಾಮನು ಆಗಮಿಸಿದನು ; ಸೀತಾರಾಮನು ಆಗಮಿಸಿದನು ; **ರಾಮೋಽಯಮಾಗತಃ, ಸೀತಯಾ ಸಹ ರಾಮೋಽಯಮಾಗತಃ, ಲಕ್ಷ್ಮಣೇನ ಸಹ ರಾಮೋಽಯಮಾಗತಃ, ಜಯತು ಜಯತು ರಾಮ**

ಚಂದ್ರಃ! ಜಯತು ಜಯತು ಸೀತಾರಾಮಃ! ಜಯತು ಜಯತು ರಾಮಭದ್ರಃ !"–ಇವೇ ಮುಂತಾದ ಹರ್ಷಸಮುದ್ಭೂತವಾದ ಜಯಕಾರ ಶಬ್ದಗಳ ಧ್ವನಿಯು ಆಕಾಶದಲ್ಲಿಯೂ ಪ್ರತಿಧ್ವನಿಸಿತು. ಒಡನೆಯೇ ಆನೆ-ಕುದುರೆ-ರಥಗಳಲ್ಲಿ ಕುಳಿತಿದ್ದವರೆಲ್ಲರೂ ಕೆಳಗಿಳಿದು ಬಂದರು. ಆಕಾಶದಲ್ಲಿರುವ ಚಂದ್ರನನ್ನು ಆನಂದದಿಂದ ನೋಡುವಂತೆ–ವಿಮಾನದಲ್ಲಿದ್ದ ಶ್ರೀರಾಮ

ಚಂದ್ರನನ್ನು ಅಯೋಧ್ಯಾಪುರವಾಸಿಗಳು ನೋಡಿದರು. ಭರತನು ಶ್ರೀರಾಮನ ಕಡೆಗೆ ಮುಖಮಾಡಿಕೊಂಡು ಕೈಜೋಡಿಸಿಕೊಂಡು ನಿಂತನು. ಅವನ ಶರೀರವು ಹರ್ಷದಿಂದ ಪುಲಕಿತವಾಗಿದ್ದಿತು. ಯಥಾರ್ಥವಾದ ಸ್ವಾಗತದಿಂದ ಭರತನು ದೂರದಿಂದಲೇ ಶ್ರೀರಾಮನನ್ನು ಪೂಜಿಸಿದನು. ಬ್ರಹ್ಮನ ಮನಸ್ಸಿನಿಂದಲೇ ನಿರ್ಮಿಸಲ್ಪಟ್ಟಿದ್ದ ಪುಷ್ಪಕವಿಮಾನದಲ್ಲಿದ್ದ, ಭರತನ ಅಣ್ಣನಾದ,

ವಿಶಾಲನೇತ್ರನಾದ ಶ್ರೀರಾಮನು ಮತ್ತೊಬ್ಬ ದೇವೇಂದ್ರನಂತೆಯೇ ಪ್ರಕಾಶಿಸಿದನು. ವಿಮಾನದ ಮುಂಭಾಗದಲ್ಲಿ ಕುಳಿತಿದ್ದ, ಮೇರುಪರ್ವತದ ಮೇಲಿರುವ ಸೂರ್ಯನಂತೆಯೇ ಕಾಣುತ್ತಿದ್ದ ಶ್ರೀರಾಮನನ್ನು ಭರತನು ವಿನಯಭಾವದಿಂದ ನಮಸ್ಕರಿಸಿದನು. ಶ್ರೀರಾಮನಿಂದ ಅನುಜ್ಞೆಯನ್ನು ಪಡೆದು, ಹಂಸಗಳಿಂದ ಯುಕ್ತವಾಗಿದ್ದ, ಶ್ರೇಷ್ಠವಾದ ಮತ್ತು ಮಹಾವೇಗವುಳ್ಳ ಆ ಪುಷ್ಪಕವಿಮಾನವು ನೆಲಕ್ಕಿಳಿಯಿತು. ಶ್ರೀರಾಮನ ಸೂಚನೆಯಂತೆ ವಿಮಾನವನ್ನು ಹತ್ತಿದ ಸತ್ಯವಿಕ್ರಮನಾದ ಭರತನು ಪರಮಹರ್ಷಿತನಾಗಿ ಶ್ರೀರಾಮನ ಬಳಿಗೆ ಹೋಗಿ ಸಾಷ್ಟಾಂಗಪ್ರಣಾಮಮಾಡಿದನು. ಶ್ರೀರಾಮನು ಬಹಳ ಕಾಲಾನಂತರದಲ್ಲಿ ದೃಷ್ಟಿಗೆ ಗೋಚರನಾದ ಭರತನನ್ನು ಹಿಡಿದು ಮೇಲೆಬ್ಬಿಸಿ ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಗಾಢವಾಗಿ ಆಲಿಂಗಿಸಿಕೊಂಡನು.

ತತೋ ಲಕ್ಷ್ಮಣಮಾಸಾದ್ಯ ವೈದೇಹೀಂ ಚ ಪರಂತಪಃ ।
ಅಥಾಭ್ಯವಾದಯತ್ಪ್ರೀತೋ ಭರತೋ ನಾಮ ಚಾಬ್ರವೀತ್ ॥೪೨॥*

ಅನಂತರ ಭರತನು ಲಕ್ಷ್ಮಣನ ಬಳಿಗೂ ವೈದೇಹಿಯ ಬಳಿಗೂ ಹೋಗಿ '**ಭರತೋಽಹಮಭಿವಾದಯೇ**'–ಎಂದು ತನ್ನ ಪ್ರವರವನ್ನು ಹೇಳಿ ಕೊಂಡು ವಿಧಿಪೂರ್ವಕವಾಗಿ ಸೀತಾದೇವಿಗೆ ನಮಸ್ಕರಿಸಿದನು.

ಅನಂತರ ಭರತನು–ಸುಗ್ರೀವನನ್ನೂ, ಜಾಂಬವಂತನನ್ನೂ, ಅಂಗದನನ್ನೂ, ಮೈಂದ-ದ್ವಿವಿದರನ್ನೂ, ನೀಲನನ್ನೂ, ಋಷಭನನ್ನೂ, ಸುಷೇಣನನ್ನೂ, ನಲನನ್ನೂ, ಗವಾಕ್ಷ-ಗಂಧಮಾದನರನ್ನೂ, ಶರಭ-ಪನಸರನ್ನೂ ಯಥಾನುಕ್ರಮವಾಗಿ ಆಲಿಂಗಿಸಿಕೊಂಡು ಸಮ್ಮಾನಿಸಿದನು.

ಮನಬಂದಂತೆ ರೂಪಗಳನ್ನು ಧರಿಸುವ ಸಾಮರ್ಥ್ಯವನ್ನು ಹೊಂದಿದ್ದ ಆ ಎಲ್ಲ ವಾನರರೂ ಹರ್ಷದಿಂದ ಉಲ್ಲಾಸವನ್ನು ಹೊಂದಿದವರಾಗಿ ಮನುಷ್ಯರ ರೂಪಗಳನ್ನು ಧರಿಸಿ ಭರತನ ಯೋಗ-ಕ್ಷೇಮಗಳನ್ನು ವಿಚಾರಿಸಿದರು.

---

* ಈ ಶ್ಲೋಕದ ನೇರವಾದ ಅರ್ಥ ನಾವು ಮೇಲೆ ಕೊಟ್ಟಿರುವಂತೆಯೇ ಆಗುತ್ತದೆ. ಆದರೆ ಭರತನು ಲಕ್ಷ್ಮಣನಿಗೆ ಅಣ್ಣನಾದುದರಿಂದ ಲಕ್ಷ್ಮಣಮಾಸಾದ್ಯ (ವನ್ದಮಾನಂ ಲಕ್ಷ್ಮಣಂ ಪರಿಷ್ವಜ್ಯಾದಿನಾ ಸಮ್ಭಾವ್ಯ) ಲಕ್ಷ್ಮಣನ ಬಳಿಗೆ ಬಂದು ನಮಸ್ಕಾರಮಾಡಿದ ಲಕ್ಷ್ಮಣನನ್ನು ಹಿಡಿದೆತ್ತಿ ಆಲಿಂಗನೆ ಮಾಡಿಕೊಂಡು ನೆತ್ತಿಯನ್ನು

ಧರ್ಮಾತ್ಮರಲ್ಲಿ ಶ್ರೇಷ್ಠನಾದ, ಮಹಾತೇಜಸ್ವಿಯಾದ, ರಾಜಪುತ್ರನಾದ ಭರತನು ಸುಗ್ರೀವನನ್ನು ಬಾಚಿ ತಬ್ಬಿಕೊಂಡು ಹೇಳಿದನು :

ತ್ವಮಸ್ಮಾಕಂ ಚತುರ್ಣಾಂ ವೈ ಭ್ರಾತಾ ಸುಗ್ರೀವ ಪಞ್ಚಮಃ ।
ಸೌಹೃದಾಜ್ಜಾಯತೇ ಮಿತ್ರಮಪಕಾರೋಽರಿಲಕ್ಷಣಮ್ ॥೪೭॥

"ಸುಗ್ರೀವ! ನೀನು ನಮ್ಮ ನಾಲ್ವರಿಗೂ ಐದನೆಯ ಒಡಹುಟ್ಟಿದವ ನಾಗಿರುವೆ. ಏಕೆಂದರೆ : ಸ್ನೇಹಪೂರ್ವಕವಾಗಿ ಉಪಕಾರಮಾಡುವುದರಿಂದ ಒಬ್ಬನು ಮಿತ್ರನಾಗುತ್ತಾನೆ. ಅಂತಹ ಮಿತ್ರನೇ ಭ್ರಾತೃಸಮಾನನು. ಅಪ ರಾಧ ಮಾಡುವುದು ಶತ್ರುವಿನ ಲಕ್ಷಣವಾಗಿದೆ."

ಅನಂತರ ಭರತನು ವಿಭೀಷಣನ ಬಳಿಗೆ ಹೋಗಿ ಸಾಂತ್ವನದ ಮಾತುಗಳನ್ನು ಹೇಳಿದನು :

"ರಾಕ್ಷಸೇಶ್ವರನೇ! ಸೌಭಾಗ್ಯವಶದಿಂದ ನಿನ್ನ ಸಹಾಯವು ಸಿಕ್ಕಿದ ಕಾರಣ ನಮ್ಮಣ್ಣನಾದ ಶ್ರೀರಾಮನು ಅತ್ಯಂತದುಷ್ಕರವಾದ ಕಾರ್ಯವನ್ನು ಸಾಧಿಸಲು ಸಾಧ್ಯವಾಯಿತು."

ಅನಂತರ ಶತ್ರುಘ್ನನೂ ರಾಮ-ಲಕ್ಷ್ಮಣರಿಗೆ ನಮಸ್ಕಾರಮಾಡಿ ಬಳಿಕ ಸೀತೆಯ ಬಳಿಗೆ ಹೋಗಿ ಅವಳ ಚರಣಾರವಿಂದಗಳಿಗೂ ವಿನಯ ಪೂರ್ವಕವಾಗಿ ನಮಸ್ಕರಿಸಿದನು.

ಶ್ರೀರಾಮನು ತಾಯಿಯ ಬಳಿಗೆ ಬಂದು ಶೋಕಪೀಡಿತಳೂ ಕಾಂತಿ ಹೀನಳೂ ಆಗಿದ್ದ ಅವಳನ್ನು ಸಂತೋಷಗೊಳಿಸುತ್ತಾ ಅವಳೆರಡು ಪಾದ

ಆಘ್ರಾಣಿಸುವುದರ ಮೂಲಕವಾಗಿ ಸಮ್ಮಾನಿಸಿದನು–ಎಂದು ಅಧ್ಯಾಹಾರ ಮಾಡಿ–ಅನಂತರ ಸೀತೆಯ ಬಳಿಗೆ ಹೋಗಿ ಅವಳಿಗೆ ನಮಸ್ಕರಿಸಿದನೆಂದು ವ್ಯಾಖ್ಯಾನಕಾರರು ಅರ್ಥಮಾಡಿರುತ್ತಾರೆ. ಕೌಸಲ್ಯೆಯು ಕೊಟ್ಟ ಪಾಯಸಾರ್ಧದಲ್ಲಿ ಲಕ್ಷ್ಮಣನು ಹುಟ್ಟಿದ್ದ ರಿಂದ ಅವನೇ ಭರತನ ಅಣ್ಣನೆಂದು ಸಮರ್ಥಿಸುವವರಿದ್ದಾರೆ. ಆದರೆ ಭರತನು ಪುಷ್ಯನಕ್ಷತ್ರದಲ್ಲಿಯೂ ಲಕ್ಷ್ಮಣ-ಶತ್ರುಘ್ನರು ಆಶ್ಲೇಷಾನಕ್ಷತ್ರದಲ್ಲಿಯೂ ಹುಟ್ಟಿದ ರೆಂಬುದು ಮೂಲದಲ್ಲಿಯೇ ಸ್ಪಷ್ಟವಾಗಿದೆ. ಲಕ್ಷ್ಮಣನ ಬಳಿಗೆ ಬಂದನೇ ಹೊರತು ಭರತನು ಲಕ್ಷ್ಮಣನಿಗೂ ನಮಸ್ಕಾರ ಮಾಡಲಿಲ್ಲ; ಲಕ್ಷ್ಮಣನು ಭರತನಿಗೂ ನಮ ಸ್ಕಾರಮಾಡಲಿಲ್ಲ–ಎಂದೂ ಕೆಲವರು ಅರ್ಥಮಾಡುತ್ತಾರೆ. ಏಕೆಂದರೆ ಲಕ್ಷ್ಮಣನು ನಮಸ್ಕಾರಮಾಡಲು ಹೋದಾಗ ಭರತನು ತಡೆದನು. ಈ ಕಾರಣದಿಂದಲೇ ಈ

ಗಳನ್ನೂ ಹಿಡಿದು ತಲೆಬಾಗಿ ನಮಸ್ಕಾರಮಾಡಿದನು. ಅನಂತರ ಸುಮಿತ್ರೆಗೂ ಮತ್ತು ಕೈಕೇಯಿಗೂ ಉಳಿದೆಲ್ಲ ದಶರಥನ ಪತ್ನಿಯರಿಗೂ ನಮಸ್ಕರಿಸಿ ಪುರೋಹಿತರಾದ ವಸಿಷ್ಠರ ಬಳಿಗೆ ಹೋದನು. ಆ ಸಮಯ ದಲ್ಲಿ ಅಲ್ಲಿ ನೆರೆದಿದ್ದ ಅಯೋಧ್ಯಾವಾಸಿಗಳೆಲ್ಲರೂ ಒಕ್ಕೊರಳಿನಿಂದ ಕೈ ಮುಗಿದುಕೊಂಡು ಶ್ರೀರಾಮನಿಗೆ ಹೇಳಿದರು :

ಸ್ವಾಗತಂ ತೇ ಮಹಾಬಾಹೋ ಕೌಸಲ್ಯಾನನ್ದವರ್ಧನ ॥೫೨॥

"ಕೌಸಲ್ಯಾದೇವಿಯ ಆನಂದವನ್ನು ವೃದ್ಧಿಪಡಿಸುವವನೇ! ಮಹಾ ಬಾಹುವೇ! ರಾಘವ! ನಿನಗೆ ಸ್ವಾಗತವನ್ನು (ಸುಖದ ಆಗಮನವನ್ನು) ಬಯಸುತ್ತೇವೆ."

ಅರಳಿರುವ ತಾವರೆಗಳಂತಿದ್ದ ಪುರಜನರ ಸಾವಿರಾರು ಅಂಜಲಿಪುಟ ಗಳನ್ನು ಭರತಾಗ್ರಜನಾದ ಶ್ರೀರಾಮನು ಆ ಸಮಯದಲ್ಲಿ ನೋಡಿದನು.

ಧರ್ಮವೀರನಾದ ಭರತನು ತಲೆಯ ಮೇಲಿಟ್ಟುಕೊಂಡು ತಂದಿದ್ದ ಶ್ರೀರಾಮನ ದಿವ್ಯಪಾದುಕೆಗಳನ್ನು ನರೇಂದ್ರನಾದ ಶ್ರೀರಾಮನ ಪಾದಗಳಿಗೆ ತಾನೇ ತೊಡಿಸಿದನು. ಅನಂತರ ಕೈಜೋಡಿಸಿ ನಿಂತು ಶ್ರೀರಾಮನಿಗೆ ಹೇಳಿದನು:

ಏತತ್ತೇ ಸಕಲಂ ರಾಜ್ಯಂ ನ್ಯಾಸಂ ನಿರ್ಯಾತಿತಂ ಮಯಾ ॥೫೫॥

ಅದ್ಯ ಜನ್ಮ ಕೃತಾರ್ಥಂ ಮೇ ಸಂವೃತ್ತಶ್ಚ ಮನೋರಥಃ ।
ಯಸ್ತ್ವಾಂ ಪಶ್ಯಾಮಿ ರಾಜಾನಮಯೋಧ್ಯಾಂ ಪುನರಾಗತಮ್ ॥೫೬॥

ಪ್ರಕರಣದಲ್ಲಿ ಲಕ್ಷ್ಮಣಮಾಸಾದ್ಯ–ಇಷ್ಟು ಮಾತ್ರ ಇರುವುದೇ ಹೊರತು ಅವನು ಇವನಿಗೆ ನಮಸ್ಕಾರಮಾಡಿದನೆಂದಾಗಲೀ ಇವನು ಅವನಿಗೆ ನಮಸ್ಕಾರಮಾಡಿದನೆಂದಾ ಗಲೀ ವಾಕ್ಯವಿಲ್ಲ. ವೈದೇಹಿಂ ಚ ಎಂದು ಇಲ್ಲಿ ಹೇಳಿರುವ ಚಕಾರವು ರಾಮ ನಿಗೂ ಮತ್ತು ವೈದೇಹಿಗೂ ನಮಸ್ಕಾರಮಾಡಿದನು ಎಂಬುದನ್ನು ಸೂಚಿಸುತ್ತದೆ. ಈ ಚಕಾರವು ಲಕ್ಷ್ಮಣನಿಗೆ ಅನ್ವಯಿಸುವುದಿಲ್ಲ. ರಾಮನಿಗೆ ನಮಸ್ಕಾರಮಾಡಿದೊಡನೆಯೇ ಸೀತೆಗೆ ನಮಸ್ಕಾರಮಾಡಬೇಕಾಗಿತ್ತು. ಅಲ್ಲವೇ? ಹಾಗಲ್ಲ. ಸೀತಾದೇವಿಯು ತಾರೆಯೇ ಮುಂತಾದವರೊಡನೆ ಪ್ರತ್ಯೇಕವಾಗಿ ಕುಳಿತಿದ್ದಳು. ಆದುದರಿಂದ ಭರತನು ಶ್ರೀರಾಮನಿಗೆ ನಮಸ್ಕಾರಮಾಡಿ ಲಕ್ಷ್ಮಣನನ್ನು ಸಂಧಿಸಿದನು. ಬಳಿಕ ಅಭಿವಾದನ ಪೂರ್ವಕವಾಗಿ ಸೀತೆಗೆ ನಮಸ್ಕಾರಮಾಡಿದನು. ಇದು ಸರ್ವಸಮ್ಮತವಾದ, ಮೂಲಕ್ಕೆ ಯಥಾವತ್ತಾದ ಅರ್ಥವಾಗಬಹುದು.

“ಪ್ರಭುವೇ! ನೀನು ನನ್ನಲ್ಲಿ ನ್ಯಾಸವನ್ನಾಗಿಟ್ಟಿದ್ದ ಈ ಸಮಗ್ರರಾಜ್ಯ ವನ್ನೂ ನಿನ್ನ ಚರಣಾರವಿಂದಗಳಲ್ಲಿ ಸಮರ್ಪಿಸುತ್ತಿದ್ದೇನೆ. ಇಂದು ನನ್ನ ಜನ್ಮವು ಸಾರ್ಥಕವಾಯಿತು. ನೀನು ಅಯೋಧ್ಯೆಗೆ ಪುನಃ ಆಗಮಿಸಿರುವುದನ್ನು ಕಂಡು ನನ್ನ ಮನೋರಥವೂ ಈಡೇರಿತು.

ಅವೇಕ್ಷತಾಂ ಭವಾನ್ಕೋಶಂ ಕೋಷ್ಠಾಗಾರಂ ಪುರಂ ಬಲಮ್ ।
ಭವತಸ್ತೇಜಸಾ ಸರ್ವಂ ಕೃತಂ ದಶಗುಣಂ ಮಯಾ ॥೫೭॥

ಅಣ್ಣ! ನೀನು ರಾಜ್ಯದ ಬೊಕ್ಕಸವನ್ನೂ, ಧಾನ್ಯಗಳ ಕೋಠಿಗಳನ್ನೂ, ನಗರವನ್ನೂ, ಸೈನ್ಯವನ್ನೂ ಪರಿಶೀಲಿಸು. ನಿನ್ನ ಪ್ರಭಾವದಿಂದ ನಾನು ಎಲ್ಲವನ್ನೂ ಹತ್ತುಪಟ್ಟು ವೃದ್ಧಿಪಡಿಸಿದ್ದೇನೆ.”

ಭ್ರಾತೃಪ್ರೇಮಿಯಾದ ಭರತನು ಹೀಗೆ ಹೇಳುತ್ತಿರುವುದನ್ನು ಕೇಳಿ ಸಮಸ್ತವಾನರರೂ ರಾಕ್ಷಸರಾಜನಾದ ವಿಭೀಷಣನೂ ಆನಂದಬಾಷ್ಪಗಳನ್ನು ಸುರಿಸಿದರು. ಅನಂತರ ಶ್ರೀರಾಮನು ಅತ್ಯಂತಹರ್ಷದಿಂದ ಭರತನನ್ನು ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡು ವಿಮಾನದ ಮೂಲಕ ಸೈನ್ಯ ಸಮೇತನಾಗಿ ಭರತನ ಆಶ್ರಮಕ್ಕೆ ಹೋದನು. ಅಲ್ಲಿ ಶ್ರೀರಾಮನು ವಿಮಾನ ದಿಂದ ಕೆಳಗಿಳಿದು ನೆಲದ ಮೇಲೆ ನಿಂತುಕೊಂಡನು. ಬಳಿಕ ಶ್ರೇಷ್ಠವಾದ ಆ ವಿಮಾನವನ್ನು ಸಂಬೋಧಿಸಿ ಹೇಳಿದನು :

ವಹ ವೈಶ್ರವಣಂ ದೇವಮನುಜಾನಾಮಿ ಗಮ್ಯತಾಮ್ ॥೬೧॥

“ವಿಮಾನಾಧಿದೇವತೆಯೇ! ನೀನು ಇನ್ನು ಮುಂದೆ ಹಿಂದಿನಂತೆಯೇ ಕುಬೇರನ ಯಾನವಾಗು. ನನ್ನ ಅನುಮತಿಯಂತೆ ನೀನಿನ್ನು ಅಲ್ಲಿಗೆ ಹೋಗ ಬಹುದು.”

ಶ್ರೀರಾಮನ ಆಜ್ಞೆಯಂತೆ ಆ ಶ್ರೇಷ್ಠವಾದ ವಿಮಾನವು ಉತ್ತರದಿಕ್ಕಿ ನಲ್ಲಿದ್ದ ಕುಬೇರನ ಸ್ಥಾನಕ್ಕೆ ಹೊರಟುಹೋಯಿತು.

ರಾವಣರಾಕ್ಷಸನಿಂದ ಅಪಹರಿಸಲ್ಪಟ್ಟಿದ್ದ ದಿವ್ಯವಾದ ಆ ಪುಷ್ಪಕ ವಿಮಾನವು ಶ್ರೀರಾಮನ ವಾಕ್ಯದಿಂದ ಪ್ರಚೋದಿತವಾಗಿ ಬಹಳ ವೇಗದಿಂದ ಕುಬೇರನ ಬಳಿಗೆ ಹೊರಟುಹೋಯಿತು.

ಅನಂತರ ಶ್ರೀರಾಮನು-ದೇವರಾಜನಾದ ಇಂದ್ರನು ದೇವಗುರುವಾದ

ಬೃಹಸ್ಪತಿಯ ಚರಣಗಳಿಗೆ ನಮಸ್ಕರಿಸುವಂತೆ–ಕುಲಗುರುಗಳಾದ ಮತ್ತು ಆತ್ಮಸಖರಾದ ವಸಿಷ್ಠರ ಚರಣಾರವಿಂದಗಳಿಗೆ ನಮಸ್ಕರಿಸಿ, ಅವರನ್ನು ಪ್ರತ್ಯೇಕವಾದ ದಿವ್ಯಾಸನವೊಂದರಲ್ಲಿ ಕುಳ್ಳಿರಿಸಿ ತಾನೂ ಅವರ ಜೊತೆಯಲ್ಲಿಯೇ ಮತ್ತೊಂದು ಆಸನದಲ್ಲಿ ಕುಳಿತುಕೊಂಡನು.

೧೨೭ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೧೨೮ನೆಯ ಸರ್ಗ

ಭರತನು ಶ್ರೀರಾಮನಿಗೆ ರಾಜ್ಯವನ್ನು ವಹಿಸಿಕೊಟ್ಟುದು : ಶ್ರೀರಾಮನ ನಗರಯಾತ್ರೆ : ಶ್ರೀರಾಮನ ರಾಜ್ಯಾಭಿಷೇಕ : ವಾನರರ ಬೀಳ್ಕೊಡಿಗೆ : ರಾಮಾಯಣಗ್ರಂಥದ ಮಹಿಮೆ :

ಶಿರಸ್ಯಞ್ಜಲಿಮಾಧಾಯ ಕೈಕೇಯ್ಯಾನನ್ದವರ್ಧನಃ ।
ಬಭಾಷೇ ಭರತೋ ಜ್ಯೇಷ್ಠಂ ರಾಮಂ ಸತ್ಯಪರಾಕ್ರಮಮ್ ॥೧॥

ಕೈಕೇಯಿಗೆ ಆನಂದವರ್ಧನನಾದ ಭರತನು ಜೋಡಿಸಿದ ಕೈಗಳನ್ನು ತಲೆಯ ಮೇಲಿಟ್ಟುಕೊಂಡು ಸತ್ಯಪರಾಕ್ರಮಿಯಾದ ಅಣ್ಣನಾದ ಶ್ರೀರಾಮನಿಗೆ ಹೇಳಿದನು :

"ಅಣ್ಣ! ನೀನು ನನ್ನ ತಾಯಿಯ ಮಾತನ್ನು ಗೌರವಿಸಿ ಈ ರಾಜ್ಯವನ್ನು ನನಗೆ ಕೊಟ್ಟು ಹೋದೆ. ಇದನ್ನು ನೀನು ನನಗೆ ಹೇಗೆ ಕೊಟ್ಟಿದ್ದೆಯೋ ಹಾಗೆಯೇ ಹಿಂದಿರುಗಿ ಕೊಡುತ್ತಿದ್ದೇನೆ. ಅತ್ಯಂತ ಬಲಿಷ್ಠವಾದ ಎತ್ತು ಒಂಟಿಯಾಗಿಯೇ ಹೊರುವ ಭಾರವನ್ನು ಎಳೆಗರುವು ಹೊರಲಾರದು. ಅದೇ ರೀತಿಯಲ್ಲಿ ಗುರುತರವಾದ ಈ ರಾಜ್ಯಾಡಳಿತದ ಭಾರವನ್ನು ಹೊರಲು ನಾನು ಸಮರ್ಥನಾಗಿಲ್ಲ. ನೀರಿನ ವೇಗದಿಂದ ಕೊಚ್ಚಿಹೋದ ಸೇತುವೆಯನ್ನು ಪ್ರವಾಹದ ಸಮಯದಲ್ಲಿ ಸರಿಪಡಿಸಲಾಗುವುದಿಲ್ಲ. ಹಾಗೆಯೇ ಸರಿಪಡಿಸಲಾಗದ ರಾಜ್ಯದ ಹಲವಾರು ಕುಂದು-ಕೊರತೆಗಳನ್ನು ಸರಿಪಡಿಸಲು ನನ್ನಿಂದ ಸಾಧ್ಯವಾಗಲಾರದೆಂದೇ ನಾನು ಭಾವಿಸುತ್ತೇನೆ.

ಗತಿಂ ಖರ ಇವಾಶ್ವಸ್ಯ ಹಂಸಸ್ಯೇವ ಚ ವಾಯಸಃ ।
ನಾನ್ವೇತುಮುತ್ಸಹೇ ವೀರ ತವ ಮಾರ್ಗಮರಿಂದಮ ॥೫॥

ಕುದುರೆಯ ಗತಿಯನ್ನು ಕತ್ತೆಗೆ, ಹಂಸದ ಗತಿಯನ್ನು ಕಾಗೆಗೆ ಅನುಸರಿಸಲು ಸಾಧ್ಯವಾಗುವುದಿಲ್ಲ. ಅಂತೆಯೇ ನಿನ್ನ ಮಾರ್ಗವನ್ನು ಅನುಸರಿಸಲು ನಾನು ಸಮರ್ಥನಾಗಿಲ್ಲ.

ಯಥಾ ಚಾರೋಪಿತೋ ವೃಕ್ಷೋ ಜಾತಶ್ಚಾನ್ತರ್ನಿವೇಶನೇ ।
ಮಹಾಂಶ್ಚ ಸುದುರಾರೋಹೋ ಮಹಾಸ್ಕನ್ಧಃ ಪ್ರಶಾಖವಾನ್ ॥೬॥

ಶೀರ್ಯೇತ ಪುಷ್ಪಿತೋ ಭೂತ್ವಾ ನ ಫಲಾನಿ ಪ್ರದರ್ಶಯನ್ ।
ತಸ್ಯ ನಾನುಭವೇದರ್ಥಂ ಯಸ್ಯ ಹೇತೋಃ ಸ ರೋಪ್ಯತೇ ॥೭॥

ಏಷೋಪಮಾ ಮಹಾಬಾಹೋ ತ್ವಮರ್ಥಂ ವೇತ್ತುಮರ್ಹಸಿ ।
ಯದ್ಯಸ್ಮಾನ್ಮನುಜೇನ್ದ್ರ ತ್ವಂ ಭರ್ತಾ ಭೃತ್ಯಾನ್ನ ಶಾಧಿ ಹಿ ॥೮॥

ಮಹಾಬಾಹುವೇ! ನರೇಂದ್ರನೇ! ಮನೆಯ ನಿವೇಶನದಲ್ಲಿ ವೃಕ್ಷದ ಸಸಿಯೊಂದನ್ನು ನೆಡಲಾಯಿತು. ಅದು ಕಾಲಾನುಕ್ರಮವಾಗಿ ದೊಡ್ಡದಾಗಿ ಬೆಳೆಯಿತು. ಅದನ್ನು ಹತ್ತಲು ಯಾರಿಂದಲೂ ಸಾಧ್ಯವಾಗುತ್ತಿರಲಿಲ್ಲ. ಅದರ ಕಾಂಡವು ಬಹಳ ದೊಡ್ಡದಾಗಿದ್ದಿತು. ಅದಕ್ಕೆ ಹಲವು ರೆಂಬೆಗಳಿದ್ದುವು. ಆ ವೃಕ್ಷದಲ್ಲಿ ಹೂವು ಬಿಡುತ್ತಿದ್ದಿತು. ಆದರೆ ಹೂವು ಒಣಗಿಹೋಗುತ್ತಿದ್ದಿತು. ಹೂವು ಕಾಯಾಗುತ್ತಿರಲೇ ಇಲ್ಲ. ಯಾವುದಕ್ಕಾಗಿ ಅದನ್ನು ಹುಟ್ಟುಹಾಕಿದ್ದರೋ ಆ ಫಲವು ಅದರಲ್ಲಿ ಲಭಿಸುತ್ತಲೇ ಇರಲಿಲ್ಲ. ಮಹಾವೀರನೇ! ಈ ಉಪಮೆಯು ನಿನ್ನ ಸಲುವಾಗಿಯೇ ಇದೆ. ನೀನು ಪ್ರಜೆಗಳನ್ನು ರಕ್ಷಿಸುವೆಯೆಂದೇ ನಿನ್ನ ಪಾಲನೆ-ಪೋಷಣೆಗಳನ್ನು ಮಾಡಿ ನಿನ್ನನ್ನು ದೊಡ್ಡವನನ್ನಾಗಿ ಮಾಡಲಾಯಿತು. ರಕ್ಷಣೆಗೆ ಬೇಕಾದ ಸಮಸ್ತವಿದ್ಯೆಗಳನ್ನೂ ಕಲಿಸಲಾಯಿತು. ಆದರೆ ರಕ್ಷಣೆಮಾಡಬೇಕಾದ ಸಮಯವು ಸನ್ನಿಹಿತವಾದಾಗ ಕಾರಣಾಂತರದಿಂದ ಹೊಣೆಯನ್ನು ತಪ್ಪಿಸಿಕೊಂಡು ಅರಣ್ಯಕ್ಕೆ ಹೊರಟುಹೋದೆ. ನೀನು ಸ್ವಾಮಿಯಾಗಿಯೂ ಪ್ರಜೆಗಳ ಭರಣ-ಪೋಷಣೆಗಳನ್ನೂ ರಕ್ಷಣೆಯನ್ನೂ ಮಾಡದಿದ್ದರೆ ಕಾಯಿಬಿಡದ ವೃಕ್ಷಕ್ಕೇ ನೀನು ಸಮಾನನೆನಿಸುವೆ.

ರಾಘವ! ಮಧ್ಯಾಹ್ನಕಾಲದ ಸೂರ್ಯನಂತೆ ಶತ್ರುಗಳಿಗೆ ತಾಪವನ್ನುಂಟುಮಾಡುವ ಪ್ರದೀಪ್ತವಾದ ತೇಜಸ್ಸಿನಿಂದ ಕೂಡಿರುವ ನೀನು ಪಟ್ಟಾಭಿಷಿಕ್ತನಾಗುವುದನ್ನು ಸಮಸ್ತಲೋಕಗಳೂ ನೋಡಲಿ. ನೀನು

ವಿವಿಧ ವಾದ್ಯಗಳ ಮಧುರನಿನಾದಗಳಿಂದಲೂ, ನೃತ್ಯಗಾತಿಯರ ಒಡ್ಯಾಣ ಮತ್ತು ಕಾಲಂದಿಗೆಗಳ ಶಬ್ದಗಳಿಂದಲೂ, ಮಧುರವಾದ ಗೀತಶಬ್ದ ಗಳಿಂದಲೂ ಎಚ್ಚರಗೊಳ್ಳು. ಎಲ್ಲಿಯವರೆಗೆ ಈ ಕಾಲಚಕ್ರವು ತಿರುಗುತ್ತಿರು ವುದೋ–ಎಲ್ಲಿಯವರೆಗೆ ಈ ಭೂಮಂಡಲವಿರುವುದೋ–ಅಲ್ಲಿಯವರೆಗೂ ನೀನು ಈ ಭೂಮಂಡಲಕ್ಕೆ ಸ್ವಾಮಿಯಾಗಿರು."

ಭರತನ ಮಾತುಗಳನ್ನು ಕೇಳಿ ಶತ್ರುಗಳ ನಗರಗಳನ್ನು ಗೆದ್ದುಕೊಳ್ಳುವ ಸಾಮರ್ಥ್ಯವುಳ್ಳ ಶ್ರೀರಾಮನು **'ತಥಾಸ್ತು'** ಎಂದು ಹೇಳುತ್ತಾ ಭರತನ ಮಾತನ್ನು ಅಂಗೀಕರಿಸುತ್ತಾ ಶುಭಕರವಾದ ಆಸನದಲ್ಲಿ ಕುಳಿತುಕೊಂಡನು.

ಶತ್ರುಘ್ನನ ಆಜ್ಞೆಯಂತೆ ನಿಪುಣರಾದ ನಾಯಿಂದರು ಅಲ್ಲಿಗೆ ಆಗಮಿಸಿ ದರು. ಅವರೆಲ್ಲರೂ ಕೈಚಳಕವಿರುವವರೂ–ಶೀಘ್ರಕರ್ಮಿಗಳೂ ಆಗಿದ್ದರು. ಅತ್ಯಂತ ನೈಪುಣ್ಯದಿಂದ ಕ್ಷುರಕರ್ಮವನ್ನು ಮಾಡುತ್ತಿದ್ದರು. ಅವರೆಲ್ಲರೂ ರಾಘವನನ್ನು ಸುತ್ತುವರಿದು ನಿಂತರು. ಮೊದಲು ಭರತನೂ, ಅನಂತರ ಮಹಾಬಲನಾದ ಲಕ್ಷ್ಮಣನೂ, ವಾನರೇಂದ್ರನಾದ ಸುಗ್ರೀವನೂ, ರಾಕ್ಷ ಸೇಂದ್ರನಾದ ವಿಭೀಷಣನೂ ಅನುಕ್ರಮವಾಗಿ ಸ್ನಾನಮಾಡಿದರು. ಬಳಿಕ ಶ್ರೀರಾಮನು ನಾಯಿಂದರಿಂದ ಜಟೆಯನ್ನು ಶುದ್ಧೀಕರಿಸಿಕೊಂಡು ಸ್ನಾನ ಮಾಡಿ, ಚಿತ್ರಿತವಾದ ಮಾಲೆಗಳನ್ನು ಧರಿಸಿಕೊಂಡು, ಗಂಧವನ್ನು ಪೂಸಿ ಕೊಂಡು, ಬಹುಮೂಲ್ಯವಾದ ಪೀತಾಂಬರಗಳನ್ನುಟ್ಟು ಕಾಂತಿಯಿಂದ ಪ್ರಜ್ವಲಿಸುತ್ತಾ ವಿರಾಜಿಸಿದನು. ಇಕ್ವ್ವಾಕುಕುಲವರ್ಧನನಾದ, ಕಾಂತಿ ಯುಕ್ತನಾದ, ವೀರ್ಯವಂತನಾದ ಶತ್ರುಘ್ನನು ರಾಮ-ಲಕ್ಷ್ಮಣರಿಗೆ ಶೃಂಗಾರ ಮಾಡಿಸಿದನು. ದಶರಥರಾಜನ ಸಮಸ್ತ ರಾಣಿಯರೂ ತಾವೇ ಸೀತಾ ದೇವಿಯನ್ನು ಮನೋಹರವಾದ ರೀತಿಯಲ್ಲಿ ಸಿಂಗರಿಸಿದರು. ಪುತ್ರವತ್ಸಲೆ ಯಾದ ಕೌಸಲ್ಯಾದೇವಿಯು ಹರ್ಷೋತ್ಸಾಹಗಳಿಂದ ಕೂಡಿದವಳಾಗಿ ಸಮಸ್ತ ವಾನರಪತ್ನಿಯರನ್ನೂ ಪ್ರಯತ್ನಪೂರ್ವಕವಾಗಿ ಸಿಂಗರಿಸಿದಳು. ಅನಂತರ ಶತ್ರುಘ್ನನ ಆಜ್ಞೆಯಂತೆ ಸುಮಂತ್ರನೆಂಬ ಸಾರಥಿಯು ಸರ್ವಾಂಗಸುಂದರ ವಾದ ರಥವೊಂದನ್ನು ಕುದುರೆಗಳಿಂದ ಹೂಡಿಸಿಕೊಂಡು ಬಂದನು. ಸೂರ್ಯಾಗ್ನಿಗಳ ತೇಜಸ್ಸಿನಂತೆ ಅನುಪಮವಾದ ತೇಜಸ್ಸಿನಿಂದ ಕಂಗೊಳಿಸು ತ್ತಿದ್ದ ರಥವು ನಿಂತಿರುವುದನ್ನು ನೋಡಿ ಮಹಾಬಾಹುವಾದ ಶ್ರೀರಾಮನು

ಆ ರಥವನ್ನು ಹತ್ತಿದನು. ಮಹೇಂದ್ರನಂತೆ ಕಾಂತಿಯುಕ್ತರಾಗಿದ್ದ ಸುಗ್ರೀವ-ಹನುಮಂತರು ಸ್ನಾನಮಾಡಿ ದಿವ್ಯಕುಂಡಲಗಳಿಂದ ಭೂಷಿತರಾಗಿ ದಿವ್ಯಾಂಬರಗಳನ್ನುಟ್ಟು ನಗರದ ಕಡೆಗೆ ಧಾವಿಸಿದರು. ಸುಗ್ರೀವನ ಭಾರ್ಯೆಯರೂ ಸೀತಾದೇವಿಯೂ ಸಮಸ್ತವಾದ ಆಭರಣಗಳನ್ನೂ ತೊಟ್ಟುಕೊಂಡು ಶುಭಕುಂಡಲಗಳಿಂದ ಸಮಲಂಕೃತರಾಗಿ ಪಟ್ಟಣವನ್ನು ನೋಡುವ ಉತ್ಸುಕತೆಯಿಂದ ಹೊರಟರು.

ಅಯೋಧ್ಯೆಯಲ್ಲಿ ದಶರಥನ ಮಂತ್ರಿಗಳು ಪುರೋಹಿತರಾದ ವಸಿಷ್ಠರನ್ನು ಮುಂದೆಮಾಡಿಕೊಂಡು ಶ್ರೀರಾಮನ ಪಟ್ಟಾಭಿಷೇಕದ ವಿಷಯವಾಗಿ ಸಮಾಲೋಚಿಸತೊಡಗಿದರು.

ಅಶೋಕ, ವಿಜಯ, ಸಿದ್ಧಾರ್ಥರೆಂಬ ಮೂವರು ಮಂತ್ರಿಗಳೂ ಏಕಾಗ್ರಚಿತ್ತರಾಗಿ ಶ್ರೀರಾಮನ ಅಭ್ಯುದಯಕ್ಕಾಗಿಯೂ ನಗರದ ಸಮೃದ್ಧಿಗಾಗಿಯೂ ಪರಸ್ಪರವಾಗಿ ಸಮಾಲೋಚಿಸತೊಡಗಿದರು.

ಅನಂತರ ಅವರೆಲ್ಲರೂ ಸೇರಿ ಸೇವಕರಿಗೆ ಆಜ್ಞಾಪಿಸಿದರು :

"ಜಯಾರ್ಹನಾದ ಮಹಾತ್ಮನಾದ ಶ್ರೀರಾಮಚಂದ್ರನ ಪಟ್ಟಾಭಿಷೇಕಕ್ಕಾಗಿ ಯಾವ-ಯಾವ ವಸ್ತುಗಳು ಬೇಕಾಗಿರುವುದೋ ಮತ್ತು ಯಾವ ಕಾರ್ಯವನ್ನು ಮಾಡಬೇಕಾಗಿರುವುದೋ–ಅಂತಹ ವಸ್ತುಗಳ ಸಂಗ್ರಹವನ್ನೂ ಮತ್ತು ಆಯಾ ಕಾರ್ಯಗಳನ್ನೂ ಮಂಗಳಪೂರ್ವಕವಾಗಿ ಆರಂಭಿಸಿರಿ."

ಹೀಗೆ ಸೇವಕರಿಗೆ ಆಜ್ಞೆಯನ್ನಿತ್ತು ಸಮಸ್ತಮಂತ್ರಿಗಳೂ ಪುರೋಹಿತರಾದ ವಸಿಷ್ಠರೊಡನೆ ಶ್ರೀರಾಮನನ್ನು ನೋಡಬೇಕೆಂಬ ಮನಸ್ಸಿನಿಂದ ಅಯೋಧ್ಯಾಪಟ್ಟಣದ ಹೊರಭಾಗಕ್ಕೆ ಬಂದರು. ಸಾವಿರಗಣ್ಣನಾದ ಇಂದ್ರನು ಹಸಿರುಬಣ್ಣದ ಕುದುರೆಗಳಿಂದ ಯುಕ್ತವಾದ ರಥದಲ್ಲಿ ಕುಳಿತು ಹೋಗುವಂತೆ ಶ್ರೀರಾಮನು ಸರ್ವೋತ್ತಮವಾದ ರಥದಲ್ಲಿ ಕುಳಿತು ಶ್ರೇಷ್ಠವಾದ ಅಯೋಧ್ಯಾನಗರವನ್ನು ಸಂದರ್ಶಿಸಲು ಹೊರಟನು. ಭರತನೇ ಕುದುರೆಗಳ ಕಡಿವಾಣಗಳನ್ನು ಹಿಡಿದನು. ಶತ್ರುಘ್ನನು ಶ್ರೀರಾಮನ ತಲೆಯ ಮೇಲೆ ಶ್ವೇತಚ್ಛತ್ರವನ್ನು ಹಿಡಿದನು. ಲಕ್ಷ್ಮಣನು ಬಿಳಿಯದಾದ ಚಾಮರದಿಂದ ಶ್ರೀರಾಮನನ್ನು ಅವನ ತಲೆಯ ಮೇಲೆ ಸುತ್ತಲೂ ಬೀಸುತ್ತಿದ್ದನು. ಚಂದ್ರ

ಸದೃಶವಾದ ಮತ್ತೊಂದು ಚಾಮರವನ್ನು ಹಿಡಿದು ವಿಭೀಷಣನು ಬೀಸುತ್ತಿದ್ದನು. ಋಷಿಗಳೂ ಮರುದ್ಗಣಗಳಿಂದ ಕೂಡಿದ ದೇವತೆಗಳೂ ಆಕಾಶದಲ್ಲಿ ನಿಂತು ಮಾಡುತ್ತಿದ್ದ ಸ್ತೋತ್ರದ ಮಧುರನಿನಾದವು ಎಲ್ಲರಿಗೂ ಕೇಳಿಸುತ್ತಿದ್ದಿತು. ಅನಂತರ ಮಹಾತೇಜಸ್ವಿಯಾದ ಕಪಿಶ್ರೇಷ್ಠನಾದ ಸುಗ್ರೀವನು ಪರ್ವತೋಪಮವಾಗಿದ್ದ ಶತ್ರುಂಜಯವೆಂಬ ಹೆಸರಿನ ಆನೆಯ ಮೇಲೆ ಕುಳಿತನು. ವಾನರಸೈನಿಕರು ಮನುಷ್ಯರೂಪಗಳನ್ನು ಧರಿಸಿ ಸರ್ವಾಭರಣಭೂಷಿತರಾಗಿ ಒಂಬತ್ತು ಸಾವಿರ ಆನೆಗಳ ಮೇಲೆ ಕುಳಿತು ನಗರವೀಕ್ಷಣೆಗಾಗಿ ಹೊರಟರು. ಪುರುಷಸಿಂಹನಾದ ಶ್ರೀರಾಮನು ದುಂದುಭಿಗಳ ಗಂಭೀರನಿನಾದಗಳೊಡನೆಯೂ, ಶಂಖಧ್ವನಿಗಳೊಡನೆಯೂ ಪ್ರಾಸಾದಗಳ ಸಾಲುಗಳಿಂದ ಸಮಲಂಕೃತವಾಗಿದ್ದ ಅಯೋಧ್ಯಾಪಟ್ಟಣವನ್ನು ವೀಕ್ಷಿಸಲು ಹೊರಟನು. ದಿವ್ಯವಾದ ಶರೀರಕಾಂತಿಯಿಂದ ವಿರಾಜಮಾನನಾಗಿದ್ದ ಅತಿರಥನಾದ ಶ್ರೀರಾಮನು ಸೈನಿಕರನ್ನು ಮುಂದೆಮಾಡಿಕೊಂಡು ರಥದಲ್ಲಿ ಕುಳಿತು ಬರುತ್ತಿರುವುದನ್ನು ಅಯೋಧ್ಯಾವಾಸಿಗಳೆಲ್ಲರೂ ನೋಡಿದರು. ಅವರೆಲ್ಲರೂ ಮುಂದೆ ಬಂದು ಮಂಗಳಾಶಾಸನಪೂರ್ವಕವಾಗಿ ಆಶೀರ್ವದಿಸಿದರು. ಅದಕ್ಕೆ ಪ್ರತಿಯಾಗಿ ರಾಘವನು ಎಲ್ಲರನ್ನೂ ಅಭಿನಂದಿಸಿದನು. ಅನಂತರ ಅವರೆಲ್ಲರೂ ಅನುಜರಿಂದ ಪರಿವೃತನಾಗಿದ್ದ ಶ್ರೀರಾಮನ ರಥವನ್ನೇ ಹಿಂಬಾಲಿಸಿ ಹೊರಟರು. ಅಮಾತ್ಯರಿಂದಲೂ, ಬ್ರಾಹ್ಮಣರಿಂದಲೂ, ಪ್ರಜೆಗಳಿಂದಲೂ ಸುತ್ತುವರಿಯಲ್ಪಟ್ಟಿದ್ದ ಶ್ರೀರಾಮನು ನಕ್ಷತ್ರಗಳಿಂದ ಸುತ್ತುವರಿಯಲ್ಪಟ್ಟ ಚಂದ್ರನಂತೆ ಅನುಪಮವಾದ ಕಾಂತಿಯಿಂದ ಬೆಳಗುತ್ತಿದ್ದನು. ಕೆಲವರು ಮುಂಭಾಗದಲ್ಲಿ ಮಂಗಳವಾದ್ಯಗಳನ್ನು ನುಡಿಸುತ್ತಿದ್ದರು. ಕೆಲವರು ತಾಲವಾದ್ಯಗಳನ್ನು ಬಾರಿಸುತ್ತಿದ್ದರು. ಕೆಲವರು ಮಂಗಳವಸ್ತುಗಳನ್ನು ಹಿಡಿದಿದ್ದರು. ಕೆಲವರು ಮಂಗಳಗೀತೆಗಳನ್ನು ಹಾಡುತ್ತಿದ್ದರು. ಅವರೆಲ್ಲರಿಂದಲೂ ಪರಿವೃತನಾಗಿದ್ದ ಶ್ರೀರಾಮನು ನಗರದ ಕಡೆಗೆ ಹೋಗುತ್ತಿದ್ದನು. ಶ್ರೀರಾಮನ ರಥದ ಮುಂದೆ ಕೆಲವರು ಅಕ್ಷತೆಯ ಬಟ್ಟಲನ್ನೂ ಸುವರ್ಣಕಲಶವನ್ನೂ ಹಿಡಿದುಕೊಂಡು ಹೋಗುತ್ತಿದ್ದರು. ಗೋವುಗಳೂ, ಕನ್ಯೆಯರೂ, ಬ್ರಾಹ್ಮಣರೂ, ಮೋದಕಗಳ ತಟ್ಟೆಗಳನ್ನು ಕೈಗಳಲ್ಲಿ ಎತ್ತಿಕೊಂಡಿದ್ದ ಪುರುಷರೂ

ಹೋಗುತ್ತಿದ್ದರು. ಹಾಗೆ ಹೋಗುತ್ತಿದ್ದಾಗಲೇ ಶ್ರೀರಾಮನು ತನ್ನ ಮಂತ್ರಿಗಳಿಗೆ ಸುಗ್ರೀವನ ಸಖ್ಯ, ಹನುಮಂತನ ಪ್ರಭಾವ, ಇತರ ವಾನರರ ಪರಮಾದ್ಭುತದ ಕಾರ್ಯಗಳು ಇವೆಲ್ಲದರ ವಿಷಯವಾಗಿಯೂ ಹೇಳುತ್ತಿದ್ದನು. ವಾನರರ ಪೌರುಷವನ್ನೂ ರಾಕ್ಷಸರ ಬಲವನ್ನೂ ಶ್ರೀರಾಮನಿಂದ ಕೇಳಿದ ಅಯೋಧ್ಯಾಪುರವಾಸಿಗಳೂ ಮತ್ತು ಮಂತ್ರಿಗಳೂ ಆಶ್ಚರ್ಯಚಕಿತರಾದರು. ಅನಂತರ ಶ್ರೀರಾಮನು ವಿಭೀಷಣನೊಡನೆ ಸಮಾಗಮವು ಹೇಗಾಯಿತೆಂಬು ದನ್ನು ಮಂತ್ರಿಗಳಿಗೆ ವಿವರಿಸಿ ಹೇಳಿದನು. ವಾನರರಿಂದ ಸಮಾವೃತನಾಗಿದ್ದ ತೇಜಸ್ವಿಯಾದ ಶ್ರೀರಾಮನು ಹೀಗೆ ಹೇಳಿ ಹೃಷ್ಟರೂ ಪುಷ್ಟರೂ ಆದ ಪ್ರಜೆ ಗಳಿಂದ ಸಮೃದ್ಧವಾಗಿದ್ದ ಅಯೋಧ್ಯಾಪಟ್ಟಣವನ್ನು ಪ್ರವೇಶಿಸಿದನು. ಆ ಸಮಯದಲ್ಲಿ ಅಯೋಧ್ಯಾಪುರವಾಸಿಗಳೆಲ್ಲರೂ ತಮ್ಮ ಮನೆಗಳ ಮೇಲೆ ಎತ್ತರವಾದ ಬಾವುಟಗಳನ್ನು ಹಾರಿಸಿದ್ದರು. ಶ್ರೀರಾಮನು ಇಕ್ಷ್ವಾಕುವಂಶೀ ಯರು ವಾಸಮಾಡುತ್ತಿದ್ದ ರಮ್ಯವಾದ ದಶರಥನ ಅರಮನೆಯನ್ನು ಪ್ರವೇಶಿಸಿ ತಾಯಿಯಾದ ಕೌಸಲ್ಯಾದೇವಿಗೂ, ಕೈಕೇಯೀ-ಸುಮಿತ್ರೆಯರಿಗೂ ಅಭಿವಾದನಪೂರ್ವಕವಾಗಿ ನಮಸ್ಕರಿಸಿ ಧರ್ಮಾತ್ಮರಲ್ಲಿ ಶ್ರೇಷ್ಠನಾದ ಭರತ ನಿಗೆ ಮಾಧುರ್ಯದಿಂದ ಕೂಡಿದ್ದ ಅರ್ಥವತ್ತಾದ ಮಾತನ್ನು ಹೇಳಿದನು :

"ಸೋದರನೇ! ಅಶೋಕವೃಕ್ಷಗಳಿಂದ ಸುತ್ತುವರಿಯಲ್ಪಟ್ಟಿರುವ, ಮುತ್ತುಗಳಿಂದಲೂ, ವೈಡೂರ್ಯಗಳಿಂದಲೂ ಝುಟಿತವಾಗಿರುವ ಶ್ರೇಷ್ಠ ವಾದ ನನ್ನ ಅರಮನೆಯನ್ನು ಸುಗ್ರೀವನಿಗೆ ಬಿಟ್ಟುಕೊಡು."

ಶ್ರೀರಾಮನ ಮಾತನ್ನು ಕೇಳಿ ಸತ್ಯವಿಕ್ರಮನಾದ ಭರತನು ಸುಗ್ರೀವನ ಕೈಹಿಡಿದುಕೊಂಡು ಅವನನ್ನು ಶ್ರೀರಾಮನ ಅರಮನೆಯೊಳಕ್ಕೆ ಕರೆದುಕೊಂಡು ಹೋದನು. ಶತ್ರುಘ್ನನ ಆಜ್ಞೆಯಂತೆ ರಾಜಸೇವಕರು ಹಲವಾರು ಎಣ್ಣೆಯ ದೀಪಗಳನ್ನೂ ಮಂಚಗಳನ್ನೂ ತೆಗೆದುಕೊಂಡು ಶ್ರೀರಾಮನ ಭವನದಲ್ಲಿರಿಸಿದರು. ಬಳಿಕ ಮಹಾತೇಜಸ್ವಿಯಾದ ಭರತನು ಸುಗ್ರೀವನಿಗೆ ಹೇಳಿದನು :

ಅಭಿಷೇಕಾಯ ರಾಮಸ್ಯ ದೂತಾನಾಜ್ಞಾಪಯ ಪ್ರಭೋ ।

"ಪ್ರಭುವೇ! ಶ್ರೀರಾಮನ ಪಟ್ಟಾಭಿಷೇಕಕ್ಕಾಗಿ ಎಲ್ಲ ಕಡೆಗಳಿಂದಲೂ ತೀರ್ಥಗಳನ್ನು ತರಲು ದೂತರಿಗೆ ಆಜ್ಞಾಪಿಸು."

ಭರತನು ಹೀಗೆ ಹೇಳಿದೊಡನೆಯೇ ಸುಗ್ರೀವನು ಸಮಸ್ತರತ್ನ ಗಳಿಂದಲೂ ಖಚಿತವಾದ ನಾಲ್ಕು ಸುವರ್ಣದ ಕಲಶಗಳನ್ನು ನಾಲ್ವರು ಕಪಿಶ್ರೇಷ್ಠರಿಗೆ ಕೊಟ್ಟು ಹೇಳಿದನು :

"ವಾನರಶ್ರೇಷ್ಠರೇ! ನೀವು ನಾಳೆ ಬೆಳಗಾಗುವುದರೊಳಗಾಗಿ ನಾಲ್ಕು ಸಮುದ್ರಗಳಿಂದಲೂ ತೀರ್ಥವನ್ನು ತುಂಬಿಕೊಂಡು ಸುವರ್ಣಕಲಶಗಳೊಡನೆ ಇಲ್ಲಿ ಉಪಸ್ಥಿತರಾಗಿದ್ದು ಮುಂದಿನ ಆಜ್ಞೆಯನ್ನು ನಿರೀಕ್ಷಿಸುತ್ತಿರಬೇಕು."

ಸುಗ್ರೀವನು ಹೀಗೆ ಆಜ್ಞಾಪಿಸಿದೊಡನೆಯೇ ಆನೆಗಳಂತೆಯೇ ಇದ್ದ ಮಹಾತ್ಮರಾದ ನಾಲ್ವರು ವಾನರರೂ ಶೀಘ್ರವಾಗಿ ಹೋಗುವ ಗರುಡಪಕ್ಷಿ ಗಳಂತೆ ಆಕಾಶಕ್ಕೆ ಹಾರಿದರು. ಜಾಂಬವಂತ, ಹನುಮಂತ, ವೇಗದರ್ಶೀ (ಗವಯ) ಮತ್ತು ಋಷಭರೆಂಬ ನಾಲ್ವರೂ ನಾಲ್ಕು ಸಮುದ್ರಗಳಿಂದಲೂ ಮತ್ತು ಐದುನೂರು ನದಿಗಳಿಂದಲೂ ಶ್ರೀರಾಮನ ಪಟ್ಟಾಭಿಷೇಕಕ್ಕಾಗಿ ಸುವರ್ಣಮಯವಾದ ಕಲಶಗಳಲ್ಲಿ ನೀರನ್ನು ತಂದರು.

ಸತ್ತ್ವಸಂಪನ್ನನಾದ ಸುಷೇಣನು* (ಜಾಂಬವಂತನು) ಸರ್ವರತ್ನ ವಿಭೂಷಿತವಾದ ಕಲಶದಲ್ಲಿ ಪೂರ್ವಸಮುದ್ರದಿಂದ ನೀರನ್ನು ತಂದನು. ರಕ್ತಚಂದನದ ಚಿಗುರುಗಳಿಂದ ಸಮಲಂಕೃತವಾದ ಚಿನ್ನದ ಕಲಶದಲ್ಲಿ ಋಷ ಭನು ದಕ್ಷಿಣಸಮುದ್ರದಿಂದ ನೀರನ್ನು ತಂದನು. ವಾಯುವಿನಂತೆ ವೇಗವಂತ ನಾದ ಗವಯನು ದೊಡ್ಡದಾದ ರತ್ನಕುಂಭದಲ್ಲಿ ಶೀತಲವಾದ ನೀರನ್ನು ಪಶ್ಚಿಮಸಮುದ್ರದಿಂದ ತಂದನು. ಗರುಡ-ವಾಯುಗಳ ವೇಗಕ್ಕೆ ಸಮಾನ ವಾದ ವೇಗವುಳ್ಳ, ಧರ್ಮಾತ್ಮನಾದ, ಸಕಲಗುಣಪರಿಪೂರ್ಣನಾದ, ವಾಯು

---

* ಈ ಹಿಂದೆ ನಾಲ್ವರಲ್ಲಿ ಒಬ್ಬನು ಜಾಂಬವಂತನೆಂದು ಹೇಳಿರುವುದರಿಂದ ಸುಷೇಣನ ಹೆಸರು ನಾಲ್ವರಲ್ಲಿ ಸೇರದೆ ಇರುವುದರಿಂದ ಸುಷೇಣ ಎಂಬುದಕ್ಕೆ **ಶೋಭನ ಸೇನಾವಾನ್** ಎಂದು ವ್ಯುತ್ಪತ್ತಿಮಾಡಿ ಜಾಂಬವಂತನೆಂದೇ ಹೇಳಿದ್ದಾರೆ. ಹಾಗೆಯೇ ಮುಂದೆ ಗವಯ ಎಂಬ ಹೆಸರು ಬಂದಿರುವುದರಿಂದ ವೇಗದರ್ಶೀ ಎಂಬು ದಕ್ಕೆ **ವೇಗಂ ದರ್ಶಯತಿ ತಚ್ಛೀಲಃ ಗವಯಃ** ಎಂದು ಅರ್ಥಮಾಡಿದ್ದಾರೆ.

ಪುತ್ರನಾದ ಹನುಮಂತನು ಸುವರ್ಣಕಲಶದಲ್ಲಿ ಉತ್ತರಸಮುದ್ರದಿಂದ ನೀರನ್ನು ತಂದನು.

ವಾನರಶ್ರೇಷ್ಠರು ನಾಲ್ಕು ಸಮುದ್ರಗಳಿಂದಲೂ ಶ್ರೀರಾಮನ ಪಟ್ಟಾಭಿಷೇಕಕ್ಕಾಗಿ ಸುವರ್ಣಕಲಶಗಳಲ್ಲಿ ನೀರು ತಂದುದನ್ನು ನೋಡಿ ಮಂತ್ರಿಗಳೊಡನಿದ್ದ ಶತ್ರುಘ್ನನು ಪುರೋಹಿತಶ್ರೇಷ್ಠರಾದ ವಸಿಷ್ಠರಿಗೂ ಮತ್ತು ಸುಹೃದರಿಗೂ ಆ ವಾರ್ತೆಯನ್ನು ತಿಳಿಸಿದನು.

ಅನಂತರ ವೃದ್ಧರಾದ ಶುದ್ಧಾತ್ಮರಾದ ವಸಿಷ್ಠರು ಬ್ರಾಹ್ಮಣರೊಡನೆ ರತ್ನಮಯವಾದ ಪೀಠದಲ್ಲಿ ಸೀತಾಸಮೇತನಾದ ಶ್ರೀರಾಮನನ್ನು ಕುಳ್ಳಿರಿಸಿದರು.

ವಸಿಷ್ಠೋ ವಾಮದೇವಶ್ಚ ಜಾಬಾಲಿರಥ ಕಾಶ್ಯಪಃ ।
ಕಾತ್ಯಾಯನಃ ಸುಯಜ್ಞಶ್ಚ ಗೌತಮೋ ವಿಜಯಸ್ತಥಾ ॥೬೦॥

ಅಭ್ಯಷಿಞ್ಚನ್ನರವ್ಯಾಘ್ರಂ ಪ್ರಸನ್ನೇನ ಸುಗನ್ಧಿನಾ ।
ಸಲಿಲೇನ ಸಹಸ್ರಾಕ್ಷಂ ವಸವೋ ವಾಸವಂ ಯಥಾ ॥೬೧॥

ಅಷ್ಟವಸುಗಳು ದೇವರಾಜನಾದ ಇಂದ್ರನಿಗೆ ಅಭಿಷೇಕವನ್ನು ಮಾಡಿದಂತೆ–ವಸಿಷ್ಠ, ವಾಮದೇವ, ಜಾಬಾಲಿ, ಕಾಶ್ಯಪ, ಕಾತ್ಯಾಯನ, ಸುಯಜ್ಞ, ಗೌತಮ ಮತ್ತು ವಿಜಯರೆಂಬ ಎಂಟು ಮಂದಿ ಬ್ರಾಹ್ಮಣರು ಪರಿಶುದ್ಧವಾದ ಮತ್ತು ಸುಗಂಧಯುಕ್ತವಾದ ಜಲದಿಂದ ಸೀತಾಸಮೇತನಾದ ಪುರುಷಶ್ರೇಷ್ಠನಾದ ಶ್ರೀರಾಮಚಂದ್ರಸ್ವಾಮಿಗೆ ಅಭಿಷೇಕಮಾಡಿದರು.

ಮೊದಲು ಋತ್ವಿಜರಾದ ಬ್ರಾಹ್ಮಣರು ಸಮಸ್ತವಾದ ಓಷಧಿರಸಗಳಿಂದಲೂ, ನದೀ-ಸಮುದ್ರಗಳಿಂದ ತಂದಿದ್ದ ನೀರಿನಿಂದಲೂ ಸೀತಾ-ರಾಮರಿಗೆ ಅಭಿಷೇಕಮಾಡಿದರು. ಅನಂತರ ಅನುಕ್ರಮವಾಗಿ ಹದಿನಾರು ಕನ್ಯೆಯರೂ, ಎಂಟು ಮಂದಿ ಮಂತ್ರಿಗಳೂ, ಸೇನಾನಾಯಕರೂ, ವೈಶ್ಯರೂ, ನಾಗರಿಕಪ್ರಧಾನರೂ ಪರಮಹೃಷ್ಟರಾಗಿ ಸೀತಾ-ರಾಮರಿಗೆ ಅಭಿಷೇಕ ಮಾಡಿದರು. ಆ ಸಮಯದಲ್ಲಿ ಆಕಾಶದಲ್ಲಿ ಉಪಸ್ಥಿತರಾಗಿದ್ದ ದೇವತೆಗಳೂ ನಾಲ್ವರು ಲೋಕಪಾಲಕರೂ ಸೀತಾ-ರಾಮರಿಗೆ ಅಭಿಷೇಕಮಾಡಿದರು.

ಅನಂತರ ಮಹಾವೈಭವದಿಂದ ಶೋಭಾಯಮಾನವಾಗಿ ಕಾಣುತ್ತಿದ್ದ

ಸುವರ್ಣನಿರ್ಮಿತವಾದ ಸಭಾಭವನದಲ್ಲಿ ಪ್ರಕಾಶಮಾನವಾದ ನಾನಾ ವಿಧವಾದ ರತ್ನಗಳಿಂದ ಚಿತ್ರಿತವಾಗಿದ್ದ ರತ್ನಮಯವಾದ ಪೀಠದಲ್ಲಿ ಶ್ರೀರಾಮ-ಸೀತೆಯರನ್ನು ಕುಳ್ಳಿರಿಸಿ ಮಹಾತ್ಮರಾದ ವಸಿಷ್ಠರು ಋತ್ವಿಜರೊಡನೆ ಮನುವಿನಿಂದ ಹಿಡಿದು ದಶರಥನವರೆಗೆ ಅನುಕ್ರಮವಾಗಿ ಎಲ್ಲ ರಾಜರೂ

ಪಟ್ಟಾಭಿಷೇಕದ ಸಮಯದಲ್ಲಿ ಧರಿಸುತ್ತಿದ್ದ, ದೇದೀಪ್ಯಮಾನ ವಾದ, ಬ್ರಹ್ಮನಿರ್ಮಿತವಾಗಿದ್ದ, ರತ್ನಶೋಭಿತವಾದ ಕಿರೀಟವನ್ನು ಶ್ರೀರಾಮನ ಮುಡಿಯಲ್ಲಿರಿಸಿದರು. ಅದರೊಂದಿಗೆ ಹಾರ-ಕೇಯೂರಾದಿ ಆಭರಣಗಳಿಂದಲೂ ಶ್ರೀರಾಮನನ್ನು ಸಮಲಂಕರಿಸಿದರು.

ಅನಂತರ ಶತ್ರುಘ್ನನು ಶ್ರೀರಾಮನ ತಲೆಯ ಮೇಲೆ ಶುಭಪ್ರದವಾದ ಶ್ವೇತಛತ್ರವನ್ನು ಹಿಡಿದನು. ವಾನರೇಶ್ವರನಾದ ಸುಗ್ರೀವನು ಬಿಳಿಯ

ಚಾಮರದಿಂದ ಶ್ರೀರಾಮನಿಗೆ ಬೀಸತೊಡಗಿದನು. ಮತ್ತೊಂದು ಕಡೆಯಲ್ಲಿ ರಾಕ್ಷಸೇಂದ್ರನಾದ ವಿಭೀಷಣನು ಚಂದ್ರಸದೃಶವಾದ ಮತ್ತೊಂದು ಚಾಮರ ದಿಂದ ಶ್ರೀರಾಮನಿಗೆ ಬೀಸುತ್ತಿದ್ದನು. ಪಟ್ಟಾಭಿಷೇಕದ ಆ ಶುಭಸನ್ನಿವೇಶದಲ್ಲಿ ದೇವರಾಜನಾದ ಇಂದ್ರನ ಪ್ರೇರಣೆಯಂತೆ ವಾಯುದೇವನು ಸುವರ್ಣ ಮಯವಾದ ನೂರು ಕಮಲಗಳಿಂದ ಯುಕ್ತವಾಗಿದ್ದ, ದೇದೀಪ್ಯಮಾನ ವಾಗಿದ್ದ ದಿವ್ಯಮಾಲೆಯನ್ನೂ ಮತ್ತು ನಾನಾವಿಧವಾದ ರತ್ನಗಳಿಂದ ಖಚಿತ ವಾಗಿದ್ದ, ದಿವ್ಯಮಣಿಗಳಿಂದಲೂ ವಿಭೂಷಿತವಾಗಿದ್ದ ಮುಕ್ತಾಹಾರವನ್ನೂ ಶ್ರೀರಾಮನಿಗೆ ಸಮರ್ಪಿಸಿದನು. ಶ್ರೀರಾಮನ ಪಟ್ಟಾಭಿಷೇಕದ ಸಮಯದಲ್ಲಿ ದೇವ-ಗಂಧರ್ವರು ಗಾನಮಾಡುತ್ತಿದ್ದರು. ಅಪ್ಸರೆಯರು ನರ್ತನಮಾಡುತ್ತಿ ದ್ದರು. ಧೀಮಂತನಾದ ಶ್ರೀರಾಮನು ಇಂತಹ ಸಮ್ಮಾನಕ್ಕೆ ಸರ್ವಥಾ ಯೋಗ್ಯನಾಗಿದ್ದನು.

ಭೂಮಿಃ ಸಸ್ಯವತೀ ಚೈವ ಫಲವನ್ತಶ್ಚ ಪಾದಪಾಃ ।
ಗನ್ಧವನ್ತಿ ಚ ಪುಷ್ಪಾಣಿ ಬಭೂವೂ ರಾಘವೋತ್ಸವೇ ॥೭೨॥

ಶ್ರೀರಾಮನ ಪಟ್ಟಾಭಿಷೇಕದ ಸಮಯದಲ್ಲಿ ಭೂಮಿಯು ಸಸ್ಯ ಸಮೃದ್ಧವಾಗಿದ್ದಿತು. ವೃಕ್ಷಗಳು ಫಲಭರಿತವಾಗಿದ್ದುವು. ಪುಷ್ಪಗಳು ಸುಗಂಧ ಮಯವಾಗಿದ್ದುವು.

ಮಹಾರಾಜನಾದ ಶ್ರೀರಾಮನು ಪಟ್ಟಾಭಿಷೇಕಮಹೋತ್ಸವದ ಸಮಯದಲ್ಲಿ ಮೊದಲು ಬ್ರಾಹ್ಮಣರಿಗೆ ಒಂದು ಲಕ್ಷ ಕುದುರೆಗಳನ್ನೂ, ಹಾಲುಕರೆಯುವ ಒಂದು ಲಕ್ಷ ಗೋವುಗಳನ್ನೂ, ಒಂದು ನೂರು ಹೋರಿ ಗಳನ್ನೂ ದಾನವಾಗಿ ಕೊಟ್ಟನು. ಪುನಃ ಅವನು ಬ್ರಾಹ್ಮಣರಿಗೆ ಮೂವತ್ತು ಕೋಟಿ ಸುವರ್ಣನಾಣ್ಯಗಳನ್ನೂ, ನಾನಾವಿಧವಾದ ಆಭರಣಗಳನ್ನೂ, ಬಹು ಮೂಲ್ಯವಾದ ವಸ್ತ್ರಗಳನ್ನೂ ದಾನವಾಗಿ ಕೊಟ್ಟನು. ಅನಂತರ ಸಾರ್ವಭೌಮ ನಾದ ಶ್ರೀರಾಮನು ಸೂರ್ಯನ ಕಿರಣಗಳಂತೆ ಫಳ-ಫಳಿಸುತ್ತಿದ್ದ ಸುವರ್ಣ ಮಯವಾದ ಮಣಿಗಳಿಂದ ಮಂಡಿತವಾಗಿದ್ದ ದಿವ್ಯಮಾಲೆಯನ್ನು ಪ್ರಿಯಸಖ ನಾದ ಸುಗ್ರೀವನಿಗೆ ಪಟ್ಟಾಭಿಷೇಕದ ಪಾರಿತೋಷಿಕವಾಗಿ ಕೊಟ್ಟನು. ಬಳಿಕ ಶ್ರೀರಾಮನು ವೈಡೂರ್ಯಮಣಿಗಳಿಂದ ಚಿತ್ರಿತವಾಗಿದ್ದ, ಚಂದ್ರನ ಕಿರಣ

ಗಳಂತೆ ಸೌಮ್ಯವಾದ ಕಿರಣಗಳಿಂದ ರಾರಾಜಿಸುತ್ತಿದ್ದ ತೋಳ್ಬಳೆಗಳನ್ನು ವಾಲಿಯ ಮಗನಾದ ಅಂಗದನಿಗೆ ಪಾರಿತೋಷಿಕವಾಗಿ ಕೊಟ್ಟನು. ಶ್ರೇಷ್ಠ ವಾದ ಮಣಿಗಳಿಂದ ಯುಕ್ತವಾಗಿದ್ದ, ಚಂದ್ರನ ರಶ್ಮಿಗೆ ಸಮಾನವಾದ ಪ್ರಭೆ ಯಿಂದ ಕೂಡಿದ್ದ, ಶ್ರೇಷ್ಠವಾದ ಮುತ್ತಿನ ಹಾರವನ್ನೂ ಶುಭ್ರವಾದ ವಸ್ತ್ರ ಗಳನ್ನೂ, ದಿವ್ಯವಾದ ಮತ್ತು ಶುಭಕರವಾದ ಆಭರಣಗಳನ್ನೂ ಪ್ರೇಯಸಿ ಯಾದ ಸೀತಾದೇವಿಗೆ ಕೊಟ್ಟನು.

ಆ ಸಮಯದಲ್ಲಿ ವಿದೇಹರಾಜಪುತ್ರಿಯು ಶ್ರೀರಾಮನು ಕೊಟ್ಟ ಮುತ್ತಿನಹಾರವನ್ನು ಕುತ್ತಿಗೆಯಿಂದ ತೆಗೆದು ಅತ್ತಕಡೆ ಪತಿಯ ಮುಖವನ್ನೂ ಇತ್ತಕಡೆ ವಾನರರ ಮುಖವನ್ನೂ ನೋಡತೊಡಗಿದಳು. ಸೀತಾದೇವಿಯ ಮನಸ್ಸಿನ ಅಭಿಪ್ರಾಯವನ್ನು ತಿಳಿದ ಶ್ರೀರಾಮನು ಸೀತೆಯನ್ನು ನೋಡಿ ಹೇಳಿದನು :

ಪ್ರದೇಹಿ ಸುಭಗೇ ಹಾರಂ ಯಸ್ಯ ತುಷ್ಟಾಸಿ ಭಾಮಿನಿ ॥೮೦॥

"ಸೌಭಾಗ್ಯಶಾಲಿನಿಯೇ! ನೀನು ಯಾವನ ವಿಷಯದಲ್ಲಿ ಪರಿತುಷ್ಟ ಳಾಗಿರುವೆಯೋ ಅವನಿಗೆ ನೀನು ಕೈಯಲ್ಲಿ ಹಿಡಿದಿರುವ ಹಾರವನ್ನು ಕೊಡ ಬಹುದು."

ಯಾವನು ತೇಜಸ್ಸು, ಧೃತಿ, ಯಶಸ್ಸು, ಚತುರತೆ, ಶಕ್ತಿ, ವಿನಯ, ನೀತಿ, ಪುರುಷಾರ್ಥ, ಪರಾಕ್ರಮ, ಉತ್ತಮಬುದ್ಧಿ–ಈ ಎಲ್ಲ ಉತ್ತಮಗುಣ ಗಳಿಗೂ ಪರಮಾಶ್ರಯನಾಗಿದ್ದಾನೆಯೋ ಅಂತಹವನಿಗೆ ಇದನ್ನು ಕೊಡು ಎಂದನು. ಆಗ ಕೃಷ್ಣನೇತ್ರೆಯಾದ ಸೀತೆಯು ಹನುಮಂತನಿಗೆ ಆ ಮುತ್ತಿನ ಹಾರವನ್ನು ಅನುಗ್ರಹಿಸಿ ಕೊಟ್ಟಳು. ವಾನರಶ್ರೇಷ್ಠನಾದ ಹನುಮಂತನು ಆ ಮುಕ್ತಾಹಾರದಿಂದ ಚಂದ್ರನ ಕಿರಣಗಳ ಸಮೂಹಗಳಿಂದ ವ್ಯಾಪ್ತವಾದ ಬಿಳಿಯ ಮೇಘಗಳಿಂದ ಪರಿವೃತವಾದ ಪರ್ವತದಂತೆಯೇ ಕಾಣುತ್ತಿದ್ದನು. ಅಂತೆಯೇ ಪ್ರಧಾನಭೂತರಾದ ವೃದ್ಧರಾದ ವಾನರಶ್ರೇಷ್ಠರೂ ವಸ್ತ್ರಾಭರಣ ಗಳೇ ಮೊದಲಾದ ಯಥಾಯೋಗ್ಯವಾದ ಪಾರಿತೋಷಿಕಗಳಿಂದ ಸತ್ಕೃತ ರಾದರು.

ಅನಾಯಾಸವಾಗಿ ಅತಿಕ್ಲಿಷ್ಟವಾದ ಕಾರ್ಯಗಳನ್ನು ಮಾಡುವ ಶ್ರೀರಾಮನು ವಿಭೀಷಣ, ಸುಗ್ರೀವ, ಹನುಮಂತ, ಜಾಂಬವಂತ–ಇವರೇ ಮೊದಲಾದ ವಾನರ-ರಾಕ್ಷಸಮುಖ್ಯರನ್ನು ಮನೋವಾಂಛಿತವಾದ ವಸ್ತು

ಗಳಿಂದಲೂ ಪುಷ್ಕಲವಾದ ರತ್ನಗಳಿಂದಲೂ ಯಥಾಯೋಗ್ಯವಾಗಿ ಸತ್ಕರಿಸಿದ ನಂತರ ಶ್ರೀರಾಮನ ಆ ಸತ್ಕಾರದಿಂದ ವಿಭೀಷಣಾದಿಗಳು ಪರಮಸಂತುಷ್ಟರಾಗಿ ತಮ್ಮ-ತಮ್ಮ ಸ್ಥಾನಗಳಿಗೆ ತೆರಳಿದರು.

ಅನಂತರ ಶ್ರೀರಾಮನು ಮೈಂದ-ದ್ವಿವಿದ-ನೀಲರನ್ನು ನೋಡಿ ಆ ಮೂವರು ವಾನರಶ್ರೇಷ್ಠರಿಗೂ ಸಮಸ್ತವಾದ ಅಪೇಕ್ಷಿತಗುಣಗಳಿಂದಲೂ ಕೂಡಿದ್ದ ಧನ-ಕನಕವಸ್ತುಗಳನ್ನು ಪಾರಿತೋಷಿಕವಾಗಿ ಕೊಟ್ಟನು.

ಹೀಗೆ ಶ್ರೀರಾಮನ ಪಟ್ಟಾಭಿಷೇಕವನ್ನು ನೋಡಿ ಮಹಾತ್ಮರಾದ ಸಮಸ್ತವಾನರಶ್ರೇಷ್ಠರೂ ಸಾರ್ವಭೌಮನಾದ ಶ್ರೀರಾಮನಿಂದ ಸತ್ಕೃತರಾಗಿ ಕಿಷ್ಕಿಂಧೆಯನ್ನು ಸೇರಿದರು.

ವಾನರಶ್ರೇಷ್ಠನಾದ ಸುಗ್ರೀವನು ಶ್ರೀರಾಮನ ಪಟ್ಟಾಭಿಷೇಕಮಹೋತ್ಸವವನ್ನು ನೋಡಿ ಶ್ರೀರಾಮನಿಂದ ಸತ್ಕೃತನಾಗಿ ಕಿಷ್ಕಿಂಧೆಗೆ ತೆರಳಿದನು. ಅಂತೆಯೇ ಧರ್ಮಾತ್ಮನಾದ ವಿಭೀಷಣನೂ ತನ್ನ ಕುಲಧನವನ್ನು* ಪಡೆದುಕೊಂಡು ಸಂಗಡಿಗರಾದ ರಾಕ್ಷಸಶ್ರೇಷ್ಠರೊಡನೆ ಲಂಕೆಗೆ ತೆರಳಿದನು.

---

* ವಿಭೀಷಣನು ಶ್ರೀರಾಮನಿಂದ ಪಡೆದುಕೊಂಡ ಕುಲಧನವು ಯಾವುದೆಂದರೆ : ಲಂಕಾರಾಜ್ಯ. ಶ್ರೀರಾಮನು ಇಕ್ಷ್ವಾಕುರಾಜರಿಂದ ಪರಂಪರೆಯಿಂದ ಪೂಜಿಸಲ್ಪಡುತ್ತಿದ್ದ ಶ್ರೀರಂಗನಾಥಸ್ವಾಮಿಯ ವಿಗ್ರಹವನ್ನು ವಿಭೀಷಣನಿಗೆ ಪೂಜೆಗಾಗಿ ಅನುಗ್ರಹಿಸಿ ಕೊಟ್ಟನು. ಇದೇ ಇಲ್ಲಿ ಹೇಳಲ್ಪಟ್ಟಿರುವ ಕುಲಧನ ಎಂಬುದು ಕೆಲವರ ಮತ. “ತನ್ನ ಕುಲಕ್ರಮಾಗತವಾದ ' ಲಂಕಾರಾಜ್ಯವನ್ನು” ಎಂದು ಇಲ್ಲಿ ಅರ್ಥಮಾಡುವುದು ಉಚಿತ. ಅವತಾರಸಮಾಪ್ತಿಯ ಸಮಯದಲ್ಲಿ ಶ್ರೀರಾಮನು ಇಕ್ಷ್ವಾಕುಕುಲದೈವತವಾದ ಶ್ರೀ ಶೇಷಶಾಯಿ ಶ್ರೀರಂಗವಿಗ್ರಹವನ್ನು ವಿಭೀಷಣನಿಗೆ ಆರಾಧಿಸುತ್ತಿರುವಂತೆ ಹೇಳಿದನೆಂದು ಉತ್ತರರಾಮಾಯಣದಲ್ಲಿ ಹೇಳಿದೆ. **ಆರಾಧಯ ಜಗನ್ನಾಥಮಿಕ್ಷ್ವಾಕುಕುಲದೈವತಮ್ ।** ಪದ್ಮಪುರಾಣದಲ್ಲಿ ತನ್ನ ಅವತಾರದ ಪರಿಸಮಾಪ್ತಿಯ ಸಮಯದಲ್ಲಿ ಆ ವಿಗ್ರಹವನ್ನು ವಿಭೀಷಣನಿಗೆ ಅನುಗ್ರಹಿಸಿಕೊಟ್ಟನೆಂದು ಹೇಳಿದೆ. **ಇತ್ಯುಕ್ತ್ವಾ ಪ್ರದದೌ ತಸ್ಮೈ ಸ್ವವಿಶ್ಲೇಷಾಸಹಿಷ್ಣವೇ । ಶ್ರೀರಙ್ಗಶಾಯಿನಂ ಸ್ವಾರ್ಚ್ಯಮಿಕ್ಷ್ವಾಕುಕುಲದೈವತಮ್ ।** ಇಲ್ಲಿ ಕುಲಧನಶಬ್ದದಿಂದ ರಾಕ್ಷಸಕುಲಧನವಾದ ಲಂಕಾರಾಜ್ಯವೇ ಹೇಳಲ್ಪಟ್ಟಿದೆಯೆಂದು ಕೆಲವು ವ್ಯಾಖ್ಯಾನಕಾರರ ಅಭಿಪ್ರಾಯ. ಶ್ರೀರಂಗವಿಗ್ರಹವನ್ನು ಶ್ರೀರಾಮನು ಕೊಟ್ಟಿದ್ದು ಅವತಾರಸಮಾಪ್ತಿಯ ಕಾಲದಲ್ಲಿ. ಅದನ್ನು ಬಿಡದೆ ಆರಾಧಿಸುತ್ತಿರಲು ವಿಭೀಷಣನಿಗೆ ಹೇಳಿದನು. ಈ ಹಿಂದೆ ಕೊಟ್ಟ

ಮಹಾಯಶೋವಂತನಾದ ಶ್ರೀರಾಮನು ತನ್ನ ಎಲ್ಲ ಶತ್ರುಗಳನ್ನೂ ಧ್ವಂಸಮಾಡಿ ಅಮಿತಾನಂದದಿಂದ ಅಖಂಡಭೂಮಂಡಲವನ್ನೂ ಅನುಶಾಸನಮಾಡುತ್ತಾ ಧರ್ಮಜ್ಞನಾದ ಲಕ್ಷ್ಮಣನಿಗೆ ಹೇಳಿದನು :

"ಧರ್ಮಜ್ಞನೇ! ಲಕ್ಷ್ಮಣ! ಹಿಂದಿನ ರಾಜರು ಚತುರಂಗಸೇನಾಸಮೇತರಾಗಿ ಪರಿಪಾಲಿಸುತ್ತಿದ್ದ ಈ ಭೂಮಂಡಲವನ್ನು ನನ್ನೊಡನೆ ನೀನೂ ಶಾಸನಮಾಡು. ನಮ್ಮ ಪಿತೃ-ಪಿತಾಮಹ-ಪ್ರಪಿತಾಮಹರು ಈ ರಾಜ್ಯದ ಭಾರವನ್ನು ಧರಿಸಿದ್ದಂತೆ ನೀನೂ ಯುವರಾಜಪದವಿಯಲ್ಲಿ ವಿರಾಜಿತನಾಗಿ ನನ್ನೊಡನೆ ಈ ಸಾಮ್ರಾಜ್ಯದ ರಕ್ಷಣಾಭಾರವನ್ನು ವಹಿಸು."

ಪರಿ-ಪರಿಯಾಗಿ ಹೇಳಿದರೂ ಸೌಮಿತ್ರಿಯು ಯವರಾಜಪದವಿಯನ್ನು ಸರ್ವಾತ್ಮನಾ ಒಪ್ಪದಿದ್ದಾಗ ಮಹಾತ್ಮನಾದ ಶ್ರೀರಾಮನು ಭರತನನ್ನು ಯುವರಾಜಪದವಿಯಲ್ಲಿ ಪಟ್ಟಾಭಿಷೇಕಮಾಡಿದನು.

ಅನಂತರ ಮಹಾರಾಜನಾದ ಶ್ರೀರಾಮನು ಪೌಂಡರೀಕ-ಅಶ್ವಮೇಧಗಳೇ ಮುಂತಾದ ನಾನಾಪ್ರಕಾರವಾದ ಯಜ್ಞಗ್ಗಳನ್ನು ಹಲವಾರು ಬಾರಿ ಅನುಷ್ಠಾನಮಾಡಿದನು.

ರಾಜ್ಯಂ ದಶಸಹಸ್ರಾಣಿ ಪ್ರಾಪ್ಯ ವರ್ಷಾಣಿ ರಾಘವಃ ।
ಶತಾಶ್ವಮೇಧಾನಾಜಹ್ರೇ ಸದಶ್ವಾನ್ಭೂರಿದಕ್ಷಿಣಾನ್ ॥೯೫॥

ರಾಘವನು ರಾಜ್ಯವನ್ನು ಪಡೆದು ಹತ್ತು ಸಾವಿರ ವರ್ಷಗಳವರೆಗೆ ಆಳಿದನು. ಉತ್ತಮವಾದ ಕುದುರೆಗಳನ್ನೂ ಯಥೇಚ್ಛವಾದ ದಕ್ಷಿಣೆಗಳನ್ನೂ ಒಳಗೊಂಡಿದ್ದ ನೂರು ಅಶ್ವಮೇಧಯಾಗಗಳನ್ನು ಮಾಡಿದನು.

ಆಜಾನುಬಾಹುವಾದ,* ವಿಶಾಲಾಕ್ಷನಾದ, ಪ್ರತಾಪವಂತನಾದ

ದ್ದನ್ನೇ ಮತ್ತೊಮ್ಮೆ ತಾನು ಕೊಟ್ಟು ಅನುಗ್ರಹಪೂರ್ವಕವಾಗಿ ಅವತಾರಸಮಾಪ್ತಿಯ ಸಮಯದಲ್ಲಿ ಹೇಳಿದನು ಎಂದು ಅರ್ಥಮಾಡಿ ಇಲ್ಲಿ ಹೇಳಲ್ಪಟ್ಟಿರುವ ಕುಲಧನವು ಆ ರಂಗನಾಥಸ್ವಾಮಿಯೇ ಎಂದು ಕೆಲವರು ಪ್ರತಿಪಾದಿಸುತ್ತಾರೆ. ಹಿಂದೆ ಶ್ರೀರಂಗನನ್ನು ಕುಲಧನವಾಗಿ ಹೇಳಿಲ್ಲವಾದ್ದರಿಂದ ಪ್ರಕೃತದಲ್ಲಿ ಹೇಳಿರುವ ಕುಲಧನವು ಲಂಕಾರಾಜ್ಯ ಎಂದು ಅರ್ಥಮಾಡುವುದು ಉಚಿತವಾಗಿ ಕಾಣುತ್ತದೆ.

* ಆಜಾನುಬಾಹುಃ : ಮಂಡಿಯನ್ನು ಮುಟ್ಟುವಷ್ಟು ನೀಳವಾದ ತೋಳುಗಳುಳ್ಳವನು.

ಲಕ್ಷ್ಮಣನಿಂದ ಅನುಸರಿಸಲ್ಪಡುತ್ತಿದ್ದ ಶ್ರೀರಾಮನು ಬಹಳ ಕಾಲದವರೆಗೆ ಈ ಭೂಮಂಡಲವನ್ನು ಶಾಸನಮಾಡುತ್ತಿದ್ದನು.

ಧರ್ಮಾತ್ಮನಾದ ಶ್ರೀರಾಮನು ಶ್ರೇಷ್ಠವಾದ ರಾಜ್ಯವನ್ನು ಪಡೆದು ಕೊಂಡನಂತರ ತನ್ನ ಬಂಧು-ಬಾಂಧವರೊಡನೆ ಬಹುವಿಧವಾದ ಯಜ್ಞಗಳ ಮೂಲಕವಾಗಿ ದೇವತೆಗಳನ್ನು ಆರಾಧಿಸಿದನು.

ನ ಪರ್ಯದೇವನ್ವಿಧವಾ ನ ಚ ವ್ಯಾಲಕೃತಂ ಭಯಮ್ ।
ನ ವ್ಯಾಧಿಜಂ ಭಯಂ ಚಾಸೀದ್ರಾಮೇ ರಾಜ್ಯಂ ಪ್ರಶಾಸತಿ ॥೯೮॥

ಶ್ರೀರಾಮನು ರಾಜ್ಯವಾಳುತ್ತಿದ್ದಾಗ ವಿಧವೆಯರ ಗೋಳಾಟಗಳು ಕೇಳಿ ಬರುತ್ತಿರಲಿಲ್ಲ. ಸರ್ಪವೇ ಮೊದಲಾದ ವಿಷಜಂತುಗಳ ಭಯವಿರಲಿಲ್ಲ. ಆಧಿ-ವ್ಯಾಧಿಗಳ ಭಯವೂ ಇರಲಿಲ್ಲ.

ನಿರ್ದಸ್ಯುರಭವಲ್ಲೋಕೋ ನಾನರ್ಥಂ ಕಂಚಿದಸ್ಪೃಶತ್ ।
ನ ಚ ಸ್ಮ ವೃದ್ಧಾ ಬಾಲಾನಾಂ ಪ್ರೇತಕಾರ್ಯಾಣಿ ಕುರ್ವತೇ ॥೯೯॥

ಲೋಕದಲ್ಲಿ ಕಳ್ಳಕಾಕರರಾಗಲೀ ದರೋಡೆಕೋರರಾಗಲೀ ಇರಲಿಲ್ಲ. ಯಾವ ವಿಧವಾದ ಅನರ್ಥಗಳೂ ಯಾರಿಗೂ ಉಂಟಾಗುತ್ತಿರಲಿಲ್ಲ. ವೃದ್ಧರು ಬಾಲಕರಿಗೆ ಪ್ರೇತಕಾರ್ಯಗಳನ್ನು ಮಾಡುವ ಪರಿಸ್ಥಿತಿಯು ಉಂಟಾಗು ತ್ತಿರಲಿಲ್ಲ.

ಸರ್ವಂ ಮುದಿತಮೇವಾಸೀತ್ಸರ್ವೋ ಧರ್ಮಪರೋಽಭವತ್ ।
ರಾಮಮೇವಾನುಪಶ್ಯನ್ತೋ ನಾಭ್ಯಹಿಂಸನ್ಪರಸ್ಪರಮ್ ॥೧೦೦॥

ಸಮಸ್ತಲೋಕವೂ ಆನಂದಮಯವಾಗಿದ್ದಿತು. ಸಮಸ್ತರೂ ಧರ್ಮ ಪರಾಯಣರಾಗಿದ್ದರು. ಶ್ರೀರಾಮನನ್ನೇ ಸದಾ ಸಂದರ್ಶಿಸುತ್ತಿದ್ದ ಮತ್ತು ಅವನ ಆದರ್ಶವನ್ನೇ ಅನುಸರಿಸುತ್ತಿದ್ದ ಪ್ರಜೆಗಳು ಪರಸ್ಪರವಾಗಿ ಎಂದಿಗೂ ಜಗಳವಾಡುತ್ತಿರಲಿಲ್ಲ. ಒಬ್ಬರನ್ನು ಮತ್ತೊಬ್ಬರು ಹಿಂಸಿಸುತ್ತಿರಲಿಲ್ಲ.

ಶ್ರೀರಾಮನು ರಾಜ್ಯವಾಳುತ್ತಿದ್ದಾಗ ಪ್ರಜೆಗಳು ಸಾವಿರಾರು ಮಕ್ಕಳನ್ನೂ ಮೊಮ್ಮಕ್ಕಳನ್ನೂ ಪಡೆದುಕೊಂಡು ಸಾವಿರಾರು ವರ್ಷಗಳವರೆಗೂ ನೀರೋಗರಾಗಿಯೂ ಶೋಕರಹಿತರಾಗಿಯೂ ಬದುಕಿರುತ್ತಿದ್ದರು.

ರಾಮೋ ರಾಮೋ ರಾಮ ಇತಿ ಪ್ರಜಾನಾಮಭವನ್ಕಥಾಃ ।
ರಾಮಭೂತಂ ಜಗದಭೂದ್ರಾಮೇ ರಾಜ್ಯಂ ಪ್ರಶಾಸತಿ ॥೧೦೨॥

ಶ್ರೀರಾಮನು ರಾಜ್ಯಶಾಸನಮಾಡುತ್ತಿದ್ದಾಗ ಪ್ರಜೆಗಳು ರಾಮ! ರಾಮ! ರಾಮ! ಎಂದು ರಾಮಜಪವನ್ನೇ ಮಾಡಿಕೊಂಡು ರಾಮನ ಸಂಬಂಧವಾದ ಕಥೆಗಳನ್ನೇ ಹೇಳುತ್ತಲೂ ಕೇಳುತ್ತಲೂ ಇದ್ದರು. ಜಗತ್ತೇ ರಾಮಮಯವಾಯಿತು. ಎಲ್ಲೆಲ್ಲಿಯೂ ರಾಮನಾಮವೇ ಕೇಳಿಬರುತ್ತಿದ್ದಿತು.

ನಿತ್ಯಮೂಲಾ ನಿತ್ಯಫಲಾಸ್ತರವಸ್ತತ್ರ ಪುಷ್ಪಿತಾಃ ।
ಕಾಮವರ್ಷೀ ಚ ಪರ್ಜನ್ಯಃ ಸುಖಸ್ಪರ್ಶಶ್ಚ ಮಾರುತಃ ॥೧೦೩॥

ಶ್ರೀರಾಮನು ರಾಜ್ಯವಾಳುತ್ತಿದ್ದಾಗ ವೃಕ್ಷಗಳಿಗೆ ದೃಢವಾದ ಬೇರುಗಳಿರುತ್ತಿದ್ದುವು. ಎಲ್ಲ ಕಾಲಗಳಲ್ಲಿಯೂ ಫಲ-ಪುಷ್ಪಗಳಿಂದ ತುಂಬಿರುತ್ತಿದ್ದುವು. ಪರ್ಜನ್ಯನು ಪ್ರಜೆಗಳ ಇಚ್ಛೆಗೆ ಅನುಗುಣವಾಗಿ ಮಳೆಗರೆಯುತ್ತಿದ್ದನು. ವಾಯುವು ಸಮಸ್ತರಿಗೂ ಸುಖವಾಗುವಂತೆ ಮೆಲ್ಲನೆ ಬೀಸು ತ್ತಿದ್ದನು.

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಶೂದ್ರಾ ಲೋಭವಿವರ್ಜಿತಾಃ ।
ಸ್ವಕರ್ಮಸು ಪ್ರವರ್ತನ್ತೇ ತುಷ್ಟಾಃ ಸ್ವೈರೇವ ಕರ್ಮಭಿಃ ॥೧೦೪॥

ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-ಶೂದ್ರರು ಲೋಭವಿಲ್ಲದವರಾಗಿದ್ದರು. ಸ್ವಕರ್ಮನಿರತರಾಗಿದ್ದು ತಮ್ಮ-ತಮ್ಮ ವರ್ಣಾಶ್ರಮೋಚಿತವಾದ ಕರ್ಮಗಳನ್ನು ಮಾಡುವುದರಿಂದಲೇ ಸಂತುಷ್ಟರಾಗುತ್ತಿದ್ದರು.

ಆಸನ್ಪ್ರಜಾ ಧರ್ಮರತಾ ರಾಮೇ ಶಾಸತಿ ನಾನೃತಾಃ ।
ಸರ್ವೇ ಲಕ್ಷಣಸಂಪನ್ನಾಃ ಸರ್ವೇ ಧರ್ಮಪರಾಯಣಾಃ ॥೧೦೫॥

ಶ್ರೀರಾಮನು ರಾಜ್ಯವಾಳುತ್ತಿದ್ದಾಗ ಪ್ರಜೆಗಳೆಲ್ಲರೂ ಧರ್ಮಪರರಾಗಿದ್ದರು. ಯಾರೂ ಸುಳ್ಳುಹೇಳುತ್ತಿರಲಿಲ್ಲ. ಎಲ್ಲರೂ ಲಕ್ಷಣಸಂಪನ್ನರೂ ಧರ್ಮಪರಾಯಣರೂ ಆಗಿದ್ದರು.

ದಶ ವರ್ಷಸಹಸ್ರಾಣಿ ರಾಮೋ ರಾಜ್ಯಮಕಾರಯತ್ ॥೧೦೬॥

ಹೀಗೆ ಶ್ರೀರಾಮನು ಹತ್ತುಸಾವಿರ ವರ್ಷಗಳ ಕಾಲ ಭೂಮಂಡಲವನ್ನಾಳಿದನು.

ಧನ್ಯಂ ಯಶಸ್ಯಮಾಯುಷ್ಯಂ ರಾಜ್ಞಾಂ ಚ ವಿಜಯಾವಹಮ್ ।
ಆದಿಕಾವ್ಯಮಿದಂ ತ್ವಾರ್ಷಂ ಪುರಾ ವಾಲ್ಮೀಕಿನಾ ಕೃತಮ್ ॥೧೦೭॥

ಋಷಿಪ್ರೋಕ್ತವಾದ ಆದಿಕಾವ್ಯವಾದ ಈ ರಾಮಾಯಣವನ್ನು ಹಿಂದೆ ವಾಲ್ಮೀಕಿಗಳು ರಚಿಸಿದರು. ಇದರ ಪಾರಾಯಣವು ಧನ್ಯತೆ, ಯಶಸ್ಸು ಮತ್ತು ಆಯುಷ್ಯಗಳನ್ನು ವೃದ್ಧಿಗೊಳಿಸುತ್ತದೆ. ರಾಜರಿಗೆ ಇದು ವಿಜಯ ಪ್ರದಾಯಕ.

ಯಃ ಪಠೇಚ್ಛೃಣುಯಾಲ್ಲೋಕೇ ನರಃ ಪಾಪತ್ಪ್ರಮುಚ್ಯತೇ ।
ಪುತ್ರಕಾಮಶ್ಚ ಪುತ್ರಾನ್ವೈ ಧನಕಾಮೋ ಧನಾನಿ ಚ ॥೧೦೮॥
ಲಭತೇ ಮನುಜೋ ಲೋಕೇ ಶ್ರುತ್ವಾ ರಾಮಾಭಿಷೇಚನಮ್ ।
ಮಹೀಂ ವಿಜಯತೇ ರಾಜಾ ರಿಪೂಂಶ್ಚಾಪ್ಯಧಿತಿಷ್ಠತಿ ॥೧೦೯॥

ಪ್ರಪಂಚದಲ್ಲಿ ಯಾವನು ಯಾವಾಗಲೂ ಇದನ್ನು ಪಠಣಮಾಡುವನೋ ಮತ್ತು ಶ್ರವಣಮಾಡುವನೋ ಅವನು ಪಾಪದಿಂದ ಮುಕ್ತನಾಗುತ್ತಾನೆ. ಪುತ್ರಾಪೇಕ್ಷಿಯು ಮಕ್ಕಳನ್ನು ಪಡೆಯುತ್ತಾನೆ. ಧನಕಾಮನು ಐಶ್ವರ್ಯವನ್ನು ಪಡೆದುಕೊಳ್ಳುತ್ತಾನೆ. ರಾಜನು ಈ ಕಾವ್ಯವನ್ನು ಶ್ರವಣಮಾಡುವುದರಿಂದ ಜಗತ್ತನ್ನೇ ಗೆಲ್ಲುತ್ತಾನೆ. ಶತ್ರುಗಳನ್ನು ತನ್ನ ಅಧೀನದಲ್ಲಿಟ್ಟುಕೊಳ್ಳುತ್ತಾನೆ.

ರಾಘವೇಣ ಯಥಾ ಮಾತಾ ಸುಮಿತ್ರಾ ಲಕ್ಷ್ಮಣೇನ ಚ ।
ಭರತೇನ ಚ ಕೈಕೇಯೀ ಜೀವಪುತ್ರಾಸ್ತಥಾ ಸ್ತ್ರಿಯಃ ।
ಭವಿಷ್ಯನ್ತಿ ಸದಾನನ್ದಾಃ ಪುತ್ರಪೌತ್ರಸಮನ್ವಿತಾಃ ॥೧೧೦॥

ಶ್ರೀರಾಮನಿಂದ ಕೌಸಲ್ಯೆಯು ಹೇಗೆ ಜೀವತ್ಪುತ್ರಳೆನಿಸಿದಳೋ, ಲಕ್ಷ್ಮಣನಿಂದ ಸುಮಿತ್ರೆಯು ಹೇಗೆ ಜಿವತ್ಪುತ್ರಳೆನಿಸಿದಳೋ, ಭರತನಿಂದ ಕೈಕೇಯಿಯು ಹೇಗೆ ಜೀವತ್ಪುತ್ರಳೆನಿಸಿದಳೋ–ಹಾಗೆಯೇ ಈ ರಾಮಾಯಣ ಶ್ರವಣದಿಂದ ಸ್ತ್ರೀಯರು ಜೀವತ್ಪುತ್ರರಾಗುತ್ತಾರೆ. ಅವರು ಪುತ್ರ-ಪೌತ್ರರಿಂದ ಕೂಡಿಕೊಂಡು ಸರ್ವಕಾಲದಲ್ಲಿಯೂ ಆನಂದದಿಂದಿರುತ್ತಾರೆ.

ಶ್ರುತ್ವಾ ರಾಮಾಯಣಮಿದಂ ದೀರ್ಘಮಾಯುಶ್ಚ ವಿನ್ದತಿ ।
ರಾಮಸ್ಯ ವಿಜಯಂ ಚೈವಂ ಸರ್ವಮಕ್ಲಿಷ್ಟಕರ್ಮಣಃ ॥೧೧೧॥

ಯಾವುದೇ ಕಾರ್ಯವನ್ನಾದರೂ ಕ್ಲೇಶವಿಲ್ಲದೇ ಮಾಡುವ ಶ್ರೀರಾಮನ

ವಿಜಯಕಥಾರೂಪವಾದ ಸಂಪೂರ್ಣರಾಮಾಯಣವನ್ನು ಕೇಳಿದ ಮನುಷ್ಯನು ದೀರ್ಘಾಯುಷ್ಯವನ್ನು ಪಡೆಯುತ್ತಾನೆ.

ಶೃಣೋತಿ ಯ ಇದಂ ಕಾವ್ಯಂ ಪುರಾ ವಾಲ್ಮೀಕಿನಾ ಕೃತಮ್ ।
ಶ್ರದ್ದಧಾನೋ ಜಿತಕ್ರೋಧೋ ದುರ್ಗಾಣ್ಯತಿತರತ್ಯಸೌ ॥೧೧೨॥

ವಾಲ್ಮೀಕಿಮಹರ್ಷಿಗಳು ರಚಿಸಿದ ಈ ಕಾವ್ಯವನ್ನು ಯಾವನು ಕ್ರೋಧವನ್ನು ಜಯಿಸಿ ಶ್ರದ್ಧಾಪೂರ್ವಕವಾಗಿ ಶ್ರವಣಮಾಡುವನೋ– ಅವನು ದೊಡ್ಡ-ದೊಡ್ಡ ಸಂಕಟಗಳಿಂದಲೂ ಪಾರಾಗುತ್ತಾನೆ.

ಸಮಾಗಮಂ ಪ್ರವಾಸಾನ್ತೇ ರಮನ್ತೇ ಸಹಬಾನ್ಧವೈಃ ।
ಶೃಣ್ವನ್ತಿ ಯ ಇದಂ ಕಾವ್ಯಂ ಪುರಾ ವಾಲ್ಮೀಕಿನಾ ಕೃತಮ್ ॥೧೧೩॥
ತೇ ಪ್ರಾರ್ಥಿತಾನ್ವರಾನ್ಸರ್ವಾನ್ಪ್ರಾಪ್ನುವನ್ತೀಹ ರಾಘವಾತ್ ॥೧೧೪॥

ಪೂರ್ವಕಾಲದಲ್ಲಿ ವಾಲ್ಮೀಕಿಮಹರ್ಷಿಗಳಿಂದ ರಚಿತವಾದ ಈ ಮಹಾಕಾವ್ಯವನ್ನು ಯಾರು ಕೇಳುವರೋ ಅವರು ಪ್ರವಾಸವನ್ನು ಸುಖವಾಗಿ ಮುಗಿಸಿಕೊಂಡು ಬಂದು ತಮ್ಮ ಬಂಧು-ಬಾಂಧವರೊಡನೆ ಆನಂದವಾಗಿರುತ್ತಾರೆ. ಅವರು ಇಹಲೋಕದಲ್ಲಿ ರಾಘವನ ಕರುಣೆಯಿಂದ ಸಮಸ್ತವಾದ ಮನೋವಾಂಛಿತಗಳನ್ನೂ ಪಡೆಯುತ್ತಾರೆ.

ಶ್ರವಣೇನ ಸುರಾಃ ಸರ್ವೇ ಪ್ರೀಯನ್ತೇ ಸಂಪ್ರಶೃಣ್ವತಾಮ್ ।
ವಿನಾಯಕಾಶ್ಚ ಶಾಮ್ಯನ್ತಿ ಗೃಹೇ ತಿಷ್ಠನ್ತಿ ಯಸ್ಯ ವೈ ॥೧೧೫॥

ಇದನ್ನು ಕೇಳುವುದರಿಂದ ಸಮಸ್ತದೇವತೆಗಳೂ ಶ್ರವಣಮಾಡುವವರ ವಿಷಯದಲ್ಲಿ ಪ್ರಸನ್ನರಾಗುತ್ತಾರೆ. ಯಾರ ಮನೆಯಲ್ಲಿ ವಿಘ್ನಕಾರಿಗಳಾದ ಗ್ರಹಗಳಿರುತ್ತವೆಯೋ ಆ ಗ್ರಹಗಳೂ ಉಪಶಮನಹೊಂದುತ್ತವೆ.

ರಾಜನು ಭೂಮಿಯನ್ನು ಜಯಿಸುವನು. ಪ್ರವಾಸಿಯು ಕ್ಷೇಮದಿಂದ ಹಿಂದಿರುಗುವನು. ಸಂತಾನಾಪೇಕ್ಷಿಗಳಾದ ಸ್ತ್ರೀಯರು ಸುಪುತ್ರರನ್ನು ಪಡೆಯುವರು.

ಪೂಜಯಂಶ್ಚ ಪಠಂಶ್ಚೇಮಮಿತಿಹಾಸಂ ಪುರಾತನಮ್ ।
ಸರ್ವಪಾಪೈಃ ಪ್ರಮುಚ್ಯೇತ ದೀರ್ಘಮಾಯುರವಾಪ್ನುಯಾತ್ ॥೧೧೬॥

ಪುರಾತನವಾದ ಈ ಇತಿಹಾಸಗ್ರಂಥವನ್ನು ಪೂಜಿಸುವುದರಿಂದಲೂ

ಮತ್ತು ಶ್ರವಣಮಾಡುವುದರಿಂದಲೂ ಮನುಷ್ಯನು ಸಮಸ್ತಪಾಪಗಳಿಂದಲೂ ಮುಕ್ತನಾಗುತ್ತಾನೆ ಮತ್ತು ದೀರ್ಘಾಯುಷ್ಯವನ್ನೂ ಹೊಂದುತ್ತಾನೆ.

ಪ್ರಣಮ್ಯ ಶಿರಸಾ ನಿತ್ಯಂ ಶ್ರೋತವ್ಯಂ ಕ್ಷತ್ರಿಯೈರ್ದ್ವಿಜಾತ್ ।
ಐಶ್ವರ್ಯಂ ಪುತ್ರಲಾಭಶ್ಚ ಭವಿಷ್ಯತಿ ನ ಸಂಶಯಃ ॥೧೧೮॥

ಕ್ಷತ್ರಿಯನಾದವನು ಅನುದಿನವೂ ತಲೆಬಾಗಿ ನಮಸ್ಕರಿಸಿ ಬ್ರಾಹ್ಮಣನಿಂದ ರಾಮಾಯಣಕಥೆಯನ್ನು ಕೇಳಬೇಕು. ಇದರ ಶ್ರವಣದ ಫಲವಾಗಿ ಕ್ಷತ್ರಿಯನು ಐಶ್ವರ್ಯವನ್ನೂ ಮಕ್ಕಳನ್ನೂ ಪಡೆಯುತ್ತಾನೆ. ಇದರಲ್ಲಿ ಸಂಶಯವೇ ಇಲ್ಲ.

ರಾಮಾಯಣಮಿದಂ ಕೃತ್ಸ್ನಂ ಶೃಣ್ವತಃ ಪಠತಃ ಸದಾ ।
ಪ್ರೀಯತೇ ಸತತಂ ರಾಮಃ ಸ ಹಿ ವಿಷ್ಣುಃ ಸನಾತನಃ ॥೧೧೯॥

ಅನುದಿನವೂ ಈ ರಾಮಾಯಣವನ್ನು ಸಮಗ್ರವಾಗಿ ಕೇಳುವುದರಿಂದ ಮತ್ತು ಪಾರಾಯಣಮಾಡುವುದರಿಂದ ವಿಷ್ಣುಸ್ವರೂಪನಾದ ಭಗವಾನ್ ಶ್ರೀರಾಮನು ಸುಪ್ರೀತನಾಗುತ್ತಾನೆ.

ಆದಿದೇವೋ ಮಹಾಬಾಹುರ್ಹರಿರ್ನಾರಾಯಣಃ ಪ್ರಭುಃ ।
ಸಾಕ್ಷಾದ್ರಾಮೋ ರಘುಶ್ರೇಷ್ಠಃ ಶೇಷೋ ಲಕ್ಷ್ಮಣ ಉಚ್ಯತೇ ॥೧೨೦॥

ಆದಿದೇವನಾದ, ಮಹಾಬಾಹುವಾದ, ಹರಿಯಾದ, ಪ್ರಭುವಾದ, ನಾರಾಯಣನೇ ರಘುಶ್ರೇಷ್ಠನಾದ ಸಾಕ್ಷಾತ್ ಶ್ರೀರಾಮನು. ಲಕ್ಷ್ಮಣನನ್ನು ಆದಿಶೇಷನ ಅವತಾರವೆಂದು ಹೇಳುತ್ತಾರೆ.

ಏವಮೇತತ್ಪುರಾವೃತ್ತಮಾಖ್ಯಾನಂ ಭದ್ರಮಸ್ತು ವಃ ।
ಪ್ರವ್ಯಾಹರತ ವಿಸ್ರಬ್ಧಂ ಬಲಂ ವಿಷ್ಣೋಃ ಪ್ರವರ್ಧತಾಮ್ ॥೧೨೧॥

(ಲವ-ಕುಶರು ಹೇಳುತ್ತಾರೆ :) ಶ್ರೋತೃಗಳೇ! ನಿಮಗೆ ಕಲ್ಯಾಣವಾಗಲಿ. ಹಿಂದೆ ನಡೆದ ಈ ಆಖ್ಯಾನವೇ ರಾಮಾಯಣಕಾವ್ಯರೂಪದಿಂದ ವರ್ಣಿತವಾಗಿದೆ. ಸಂಪೂರ್ಣವಾದ ವಿಶ್ವಾಸದಿಂದ ಇದನ್ನು ನೀವೆಲ್ಲರೂ ಪಠಿಸಿರಿ. ಇದರಿಂದ ನಿಮ್ಮಲ್ಲಿರುವ ವೈಷ್ಣವಬಲವು ವೃದ್ಧಿಹೊಂದಲಿ.

ದೇವಾಶ್ಚ ಸರ್ವೇ ತುಷ್ಯನ್ತಿ ಗ್ರಹಣಾಚ್ಛ್ರವಣಾತ್ತಥಾ ।
ರಾಮಾಯಣಸ್ಯ ಶ್ರವಣಾತ್ತೃಪ್ಯನ್ತಿ ಪಿತರಸ್ತಥಾ ॥೧೨೨॥

ರಾಮಾಯಣವನ್ನು ಹೃದಯದಲ್ಲಿ ಧಾರಣೆಮಾಡುವುದರಿಂದಲೂ (ಹೃದ್ಗತಮಾಡಿಕೊಳ್ಳುವುದರಿಂದಲೂ) ಕೇಳುವುದರಿಂದಲೂ ದೇವತೆಗಳು ಸಂತುಷ್ಟರಾಗುತ್ತಾರೆ. ಇದನ್ನು ಕೇಳುವುದರಿಂದ ಪಿತೃದೇವತೆಗಳಿಗೂ ತೃಪ್ತಿಯುಂಟಾಗುತ್ತದೆ.

ಭಕ್ತ್ಯಾ ರಾಮಸ್ಯ ಯೇ ಚೇಮಾಂ ಸಂಹಿತಾಮೃಷಿಣಾ ಕೃತಾಮ್ ।
ಲೇಖಯನ್ತೀಹ ಚ ನರಾಸ್ತೇಷಾಂ ವಾಸಸ್ತ್ರಿವಿಷ್ಟಪೇ ॥೧೨೩॥

ವಾಲ್ಮೀಕಿಮಹರ್ಷಿಗಳಿಂದ ರಚಿತವಾದ ಈ ರಾಮಾಯಣಸಂಹಿತೆ ಯನ್ನು ಶ್ರೀರಾಮನಲ್ಲಿ ಭಕ್ತಿಯನ್ನಿಟ್ಟು ಯಾರು ಬರೆಯುವರೋ ಅವರಿಗೆ ಸ್ವರ್ಗವಾಸವು ಲಭಿಸುತ್ತದೆ.

ಕುಟುಮ್ಬವೃದ್ಧಿಂ ಧನಧಾನ್ಯವೃದ್ಧಿಂ
ಸ್ತ್ರಿಯಶ್ಚ ಮುಖ್ಯಾಃ ಸುಖಮುತ್ತಮಂ ಚ ।
ಶ್ರುತ್ವಾ ಶುಭಂ ಕಾವ್ಯಮಿದಂ ಮಹಾರ್ಥಂ
ಪ್ರಾಪ್ನೋತಿ ಸರ್ವಾಂ ಭುವಿ ಚಾರ್ಥಸಿದ್ಧಿಮ್ ॥೧೨೪॥

ಶುಭಕರವಾದ ಮತ್ತು ಗಂಭೀರಾರ್ಥದಿಂದ ಕೂಡಿರುವ ಈ ಕಾವ್ಯ ವನ್ನು ಕೇಳಿದ ಮನುಷ್ಯನಿಗೆ ಕುಟುಂಬದ ವೃದ್ಧಿಯಾಗುತ್ತದೆ. ಧನ-ಧಾನ್ಯಾದಿ ಗಳ ವೃದ್ಧಿಯಾಗುತ್ತದೆ. ಶ್ರೇಷ್ಠಗುಣವಿರುವ ಸುಂದರಸ್ತ್ರೀಯರು ಪತ್ನಿಯ ರಾಗುತ್ತಾರೆ. ಈ ಭೂಮಂಡಲದಲ್ಲವರು ತಮ್ಮ ಸಮಸ್ತವಾದ ಮನೋ ವಾಂಛಿತಗಳನ್ನೂ ಶ್ರೀರಾಮನ ಕೃಪೆಯಿಂದ ಪಡೆದುಕೊಳ್ಳುತ್ತಾರೆ.

ಆಯುಷ್ಯಮಾರೋಗ್ಯಕರಂ ಯಶಸ್ಯಂ
ಸೌಭ್ರಾತೃಕಂ ಬುದ್ಧಿಕರಂ ಶುಭಂ ಚ ।
ಶ್ರೋತವ್ಯಮೇತನ್ನಿಯಮೇನ ಸದ್ಭಿ-
ರಾಖ್ಯಾನಮೋಜಸ್ಕರಮೃದ್ಧಿಕಾಮೈಃ ॥೧೨೫॥

ಈ ಕಾವ್ಯದ ಪಠನವು ಆಯುಷ್ಯ, ಆರೋಗ್ಯ, ಯಶಸ್ಸು ಮತ್ತು ಭ್ರಾತೃಪ್ರೇಮಗಳನ್ನು ಹೆಚ್ಚಿಸುತ್ತದೆ. ಉತ್ತಮವಾದ ಬುದ್ಧಿಯನ್ನೂ

ಕೊಡುತ್ತದೆ. ಶುಭದಾಯಕವೂ ಆಗುತ್ತದೆ. ಆದುದರಿಂದ ಸಮಸ್ತವಾದ ವೃದ್ಧಿಯನ್ನು ಅಪೇಕ್ಷಿಸುವ ಸತ್ಪುರುಷರು ಉತ್ಸಾಹವರ್ಧಕವಾದ ಈ ಮಹಾಕಾವ್ಯವನ್ನು ನಿಯಮಪೂರ್ವಕವಾಗಿ ಶ್ರವಣಮಾಡಬೇಕು.

೧೨೮ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡವು ಮುಗಿಯಿತು.

ಒಂಬತ್ತನೆಯ ಸಂಪುಟವು ಮುಗಿಯಿತು.

ಸ್ವಸ್ತಿ ಪ್ರಜಾಭ್ಯಃ ಪರಿಪಾಲಯನ್ತಾಂ
ನ್ಯಾಯ್ಯೇನ ಮಾರ್ಗೇಣ ಮಹೀಂ ಮಹೀಶಾಃ ।
ಗೋಬ್ರಾಹ್ಮಣೇಭ್ಯಃ ಶುಭಮಸ್ತು ನಿತ್ಯಂ
ಲೋಕಾಃ ಸಮಸ್ತಾಃ ಸುಖಿನೋ ಭವನ್ತು ॥

ಕಾಲೇ ವರ್ಷತು ಪರ್ಜನ್ಯಃ ಪೃಥಿವೀ ಸಸ್ಯಶಾಲಿನೀ ।
ದೇಶೋಽಯಂ ಕ್ಷೋಭರಹಿತೋ ಬ್ರಾಹ್ಮಣಾಃ ಸನ್ತು ನಿರ್ಭಯಾಃ ॥

ಅಪುತ್ರಾಃ ಪುತ್ರಿಣಃ ಸನ್ತು ಪುತ್ರಿಣಃ ಸನ್ತು ಪೌತ್ರಿಣಃ ।
ಅಧನಾಃ ಸಧನಾಃ ಸನ್ತು ಜೀವನ್ತು ಶರದಾಂ ಶತಮ್ ॥

ಕಾಯೇನ ವಾಚಾ ಮನಸೇನ್ದ್ರಿಯೈರ್ವಾ
ಬುದ್ಧ್ಯಾತ್ಮನಾ ವಾ ಪ್ರಕೃತೇಃ ಸ್ವಭಾವಾತ್ ।
ಕರೋಮಿ ಯದ್ಯತ್ಸಕಲಂ ಪರಸ್ಮೈ
ನಾರಾಯಣಾಯೇತಿ ಸಮರ್ಪಯಾಮಿ ॥

ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ।
ತತ್ಸರ್ವಂ ಕ್ಷಮ್ಯತಾಂ ದೇವ ನಾರಾಯಣ ನಮೋಽಸ್ತು ತೇ ॥

ಹರಿಃ ಓಂ ಶ್ರೀಕೃಷ್ಣಾರ್ಪಣಮಸ್ತು ಶ್ರೀರಾಮಚಂದ್ರಾರ್ಪಣಮಸ್ತು
ಶ್ರೀಸದ್ಗುರುಚರಣಾರವಿನ್ದಾರ್ಪಣಮಸ್ತು ಓಂ ತತ್ಸತ್

License No. WPP-13 Licensed to Post without pre-payment of postage
Posted at Thayagaraja Nagar Post Office

Reg. No. K.R.N.U. 86, BHARATHA DARSHANA R.N. 13245/57



Edited by : "Viswamitra", Printed & Published by
K. S. Kowshik at Bharatha Darshana Press, Bangalore - 560 028.